ಶ್ರೀಮನ್ಮಹಾಭಾರತ

ಭಾರತ ದರ್ಶನ ಪ್ರಕಾಶನ



ಮೌಸಲ-ಮಹಾಪ್ರಸ್ಥಾನ-ಸ್ವರ್ಗಾರೋಹಣ ಪರ್ವ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಸಂಪುಟ ೩೨

ಭಾರತ ದರ್ಶನ ಪ್ರಕಾಶನ

ಶ್ರೀಮನ್ಮಹಾಭಾರತ

(ವ್ಯಾಸಭಾರತದ ಕನ್ನಡ ಸರಳಾನುವಾದ)

ಭಾತಿ ಸರ್ವೇಷು ವೇದೇಷು
ರತಿಃ ಸರ್ವೇಷು ಜನ್ತುಷು ।
ತರಣಂ ಸರ್ವತೀರ್ಥಾನಾಂ
ತೇನ ಭಾರತಮುಚ್ಯತೇ ॥

ಸಂಪುಟ 32

ಮುದ್ರಕರು:

ಭಾರತ ದರ್ಶನ ಮುದ್ರಣಾಲಯ

163, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು - 560 028
ದೂರವಾಣಿ: 080-26765381

ಪ್ರಥಮ ಇ-ಮುದ್ರಣ ಜನವರಿ ೨೦೧೪

॥ ಶ್ರೀರಂಗಸದ್ಗುರವೇ ನಮಃ ॥

ಮಂಗಲಾಶಾಸನ

ಶ್ರೀಮನ್ಮಹಾಭಾರತದ ಮೂವತ್ತೆರಡನೆಯ ಈ (ಅಂತಿಮ) ಸಂಪುಟಕ್ಕೆ ಪರಮಸಂತೋಷಪೂರ್ವಕವಾಗಿ ಮಂಗಲಾಶಾಸನರೂಪವಾದ ಮುನ್ನುಡಿಯನ್ನು ಬರೆಯುತ್ತಿದ್ದೇವೆ.

ಭಾರತ ದರ್ಶನ ಸಂಸ್ಥೆಯ ಹದಿಮೂರು ವರ್ಷಗಳ ಸಾರಸ್ವತತಪಸ್ಸಿನ ಪರಿಪಾಕಸಮಯದಲ್ಲಿ, ಸಂಸ್ಥೆಯು ಇಲ್ಲೀವರೆವಿಗೂ ಆಚರಿಸಿರುವ ಜ್ಞಾನ ಯಜ್ಞದ ಅವಭೃಥಸ್ನಾನಸಮಯದಲ್ಲಿ, ಸಹೃದಯಹೃದಯನಿವಾಸಿಯಾದ ಪರಮಮಂಗಲಮೂರ್ತಿ–ಪರವಾಸುದೇವನ ಪಾದಾರವಿಂದಗಳಲ್ಲಿ ಸಂಪುಟ ರತ್ನವು ಸಮರ್ಪಿತವಾಗುತ್ತಿದೆ. ಸಂಸ್ಕೃತ ವಾಙ್ಮಯವನ್ನು ಅಲಂಕರಿಸಿರುವ ವ್ಯಾಸಮಹಾಭಾರತವನ್ನು ಆವಶ್ಯಕವಾದ ಶ್ಲೋಕಗಳ ಉದ್ಧರಣಸಹಿತವಾಗಿ ಮೂವತ್ತೆರಡು ಸಂಪುಟಗಳಲ್ಲಿ ಕನ್ನಡಕ್ಕೆ ಅನುವಾದಮಾಡಿರುವ ಈ ಭಗೀರಥಕಾರ್ಯದಲ್ಲಿ ನಾನಾಸಮಸ್ಯೆಗಳು ಸಂಸ್ಥೆಯನ್ನು ಎದುರಾಯಿಸಿವೆ. ಆದರೆ ಸದ್ಗುರು ಪರಮಾತ್ಮನ ಅನುಗ್ರಹದಿಂದ ಆ ಎಲ್ಲ ವಿಘ್ನಗಳೂ ಲಯವಾಗಿ ಜ್ಞಾನಭಾಗೀರಥಿಯು ಶ್ರೀಸಾಮಾನ್ಯರ ಅವಗಾಹನೆಗಾಗಿ ಈ ಭಾರತ ಸಂಪುಟಗಳ ರೂಪದಲ್ಲಿ ಅವತಾರಮಾಡಿದೆ. ಅದರಲ್ಲಿ ಸ್ನಾನ ಮಾಡಿದ ಶುದ್ಧಾಂತಕರಣದಿಂದ ಶ್ರೀ ಗುರುಭಗವಂತರನ್ನು ಇಲ್ಲಿ ಅತ್ಯಂತ ಕೃತಜ್ಞತೆಯಿಂದ ಸ್ಮರಣೆಮಾಡಿಕೊಳ್ಳುತ್ತೇವೆ.

ಈ ಶುಭತಮವಾದ ಉದ್ಯಮಕ್ಕೆ ಅಂತರಂಗದ ಸ್ಫೂರ್ತಿಯನ್ನು ನೀಡಿ ಪ್ರಥಮಾಶೀರ್ವಾದವನ್ನು ಮಾಡಿ ನಿರ್ವಾಹಮಾಡಿದವರು ಅಷ್ಟಾಂಗಯೋಗ ವಿಜ್ಞಾನಮಂದಿರದ ಯೋಗಾಚಾರ್ಯ ಶ್ರೀರಂಗಮಹಾಗುರುಗಳು, ಪರಮ ಪೂಜ್ಯರಾದ ಶೃಂಗೇರಿ, ರಾಮಚಂದ್ರಾಪುರ, ಬ್ರಹ್ಮತಂತ್ರ ಪರಕಾಲ, ಪೇಜಾವರ, ಬೇಲೀ, ಫಲಿಮಾರು (ಭಂಡಾರಕೇರಿ), ಆಂಡವನ್ ಶ್ರೀಚರಣಸನ್ನಿಧಾನಂಗಳೇ ಮುಂತಾದವರೂ ಇದಕ್ಕೆ ಮಂಗಳವನ್ನು ಹಾರೈಸಿದ್ದಾರೆ. ಸುವರ್ಣಮಂತ್ರಾಕ್ಷತೆಗಳನ್ನು ಅನುಗ್ರಹಿಸಿದ್ದಾರೆ. ಇವರೆಲ್ಲರಿಗೂ ನಮ್ಮ ಭಕ್ತಿಪೂರ್ವಕವಾದ ನಮೋವಾಕ್‌ಗಳು.

ಪರಮಸಮ್ಮಾನ್ಯರಾದ ದಿವಂಗತ ಡಾ॥ ಡಿ. ವಿ. ಗುಂಡಪ್ಪ, ದಿವಂಗತ ಡಾ॥ ದ.ರಾ. ಬೇಂದ್ರೆ, ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು,

ಡಾ॥ ಗೊರೂರು ರಾಮಸ್ವಾಮಿಅಯ್ಯಂಗಾರ್ಯರು, ಡಾ॥ ಎನ್. ಎಸ್. ಅನನ್ತರಂಗಾಚಾರ್ಯರು, ಪ್ರಾ. ಎಸ್. ಕೆ. ರಾಮಚಂದ್ರರಾಯರು, ಡಾ॥ ಕೆ. ಕೃಷ್ಣಮೂರ್ತಿಗಳು–ಇವರೇ ಮುಂತಾದ ವಿದ್ವನ್ಮಣಿಗಳು ಸಂಪುಟಗಳಿಗೆ ಮುನ್ನುಡಿಯನ್ನು ಬರೆದುಕೊಟ್ಟು, ಸಲಹೆಗಳನ್ನು ನೀಡಿ ಸಾಧುವಾದಗಳನ್ನು ಹೇಳಿದ್ದಾರೆ. ಉಪರಾಷ್ಟ್ರಪತಿಗಳು, ರಾಜ್ಯಪಾಲರು, ಮುಖ್ಯಮಂತ್ರಿಗಳು, ನ್ಯಾಯಮೂರ್ತಿಗಳು, ಶಾಸಕರು, ಕಲಾವಿದರು, ಅಧಿಕಾರಿಗಳು, ಪತ್ರಿಕಾ ಸಂಪಾದಕರು–ಮುಂತಾದ ಮಹನೀಯರು ಆಯಾ ಸಮಾರಂಭಗಳಲ್ಲಿ ಸಂಪುಟಗಳನ್ನು ಬಿಡುಗಡೆಮಾಡಿ ಪ್ರೋತ್ಸಾಹ ನೀಡಿದ್ದಾರೆ. ಪತ್ರಿಕಾಸಂಪಾದ ಕರು ಪ್ರಕಟಣೆಯನ್ನು ನೀಡಿ ಉಪಕರಿಸಿದ್ದಾರೆ. ಗ್ರಂಥವಿತರಣೆಯಲ್ಲಿ ನಮ್ಮ ಗೌರವಪ್ರತಿನಿಧಿಗಳೂ ಸ್ವಾಗತಸ್ವೀಕಾರದಲ್ಲಿ ಸಹೃದಯವಾಚಕರೂ ಸಹಕರಿಸಿ ದ್ದಾರೆ. ಕಾಗದದ ಸರಬರಾಜು ಕ್ರಯ-ವಿಕ್ರಯಗಳಲ್ಲಿ ಉನ್ನತಮಟ್ಟದ ಸರ್ಕಾರೀ ಅಧಿಕಾರಿಗಳು ಸಹಾಯಮಾಡಿದ್ದಾರೆ. ದ್ವಾದಶದಿನಪರ್ಯಂತ ವಾದ ಉತ್ಸವಯಜ್ಞಕ್ಕೆ ನಾನಾವರ್ಗಗಳ ಜನರು ಧನ-ಧಾನ್ಯಗಳನ್ನು ನೀಡಿ ದ್ದಾರೆ. ಶ್ರಮದಾನಮಾಡಿದ್ದಾರೆ. ಸ್ವಯಂಸೇವಕರಾಗಿ ಶಿಸ್ತಿನಿಂದ ಕಾರ್ಯ ನಿರ್ವಾಹಮಾಡಿದ್ದಾರೆ. ವೇದಮೂರ್ತಿಗಳಾದ ಆಚಾರ್ಯರೂ ಋತ್ವಿಜರೂ ತತ್ಪರಾಯಣರಾಗಿ ಹೋಮ-ಹವನಾದಿಗಳನ್ನು ಮಾಡಿದ್ದಾರೆ. ಇವರೆಲ್ಲರಿಗೂ ಮಂಗಲಾತ್ಮಕ ಶ್ರೀ ಭಗವಂತನ ಸ್ಮರಣಸಹಿತ ಮಂಗಲಾಶಾಸನೆ ಮಾಡುತ್ತೇವೆ. "ಇಷ್ಟಂ ಧರ್ಮೇಣ ಯೋಜಯೇತ್" ಎಂಬಂತೆ ಇನ್ನೂ ಅನೇಕಧರ್ಮಕಾರ್ಯಗಳಲ್ಲಿ ಯಶಸ್ವಿಯಾಗಿ ಭಾಗಿಗಳಾಗಿ ನಮ್ಮ ಧರ್ಮ ಮತ್ತು ಸಂಸ್ಕೃತಿಗಳ ಸೇವೆಯನ್ನು ಸಲ್ಲಿಸುವ ಯೋಗ ಇವರಿಗೆ ಒದಗಲಿ ಎಂದು ಹಾರೈಸುತ್ತೇವೆ.

ಮಹಾಭಾರತವು ಮಹತ್ತ್ವದಲ್ಲೂ ಭಾರದಲ್ಲೂ ಎಣೆಯಿಲ್ಲದ ಗ್ರಂಥ. ಇದನ್ನು ಭಾಷಾಂತರಿಸುವುದು, ವಿಮರ್ಶಿಸುವುದು, ವ್ಯಾಖ್ಯಾನಿಸುವುದು, ಸಂಸ್ಕರಿಸುವುದು ಎಲ್ಲವೂ ಅತಿ ಕಷ್ಟಸಾಧ್ಯವಾದ ಕಾರ್ಯಗಳು. ಹತ್ತು ಹಲವು ಮಂದಿ ವಿದ್ವಾಂಸರು ವರ್ಷಾಂತರ ಪರ್ಯಂತ ದುಡಿದು ನೆರವೇರಿಸಲು ಸಾಧ್ಯವಾಗುವ ಕೆಲಸ. ಅವರ ದುಡಿಮೆಗೆ ತಕ್ಕ ಪಾರಿಶ್ರಮಿಕವೂ ದೊರೆಯಬೇಕು. ಪುಷ್ಕಳವಾದ ಸಾಧನ ಸಂಪತ್ತನ್ನೂ ಅವರಿಗೆ ಒದಗಿಸ

ಬೇಕು. ಆದರೆ ಸಂಪಾದಕಮಂಡಲಿಯ ವಿದ್ವಾಂಸರು ಯಾವ ಸಂಭಾವನೆ ಯನ್ನೂ ಅಪೇಕ್ಷಿಸದೆ ಕಾರ್ಯಸಿದ್ಧಿಯನ್ನೇ ಸಂಭಾವನೆಯೆಂದು ಭಾವಿಸಿ ತಮ್ಮ ಸೇವೆಯನ್ನು ಭಗವದರ್ಪಣ ಮಾಡಿದ್ದಾರೆ. ಈ ಬೃಹದ್ಯೋಜನೆಯಲ್ಲಿ ಬದ್ಧಪರಿಕರರಾಗಿ ಎಲ್ಲ ಹೊಣೆಗಾರಿಕೆಯನ್ನೂ ಹೊತ್ತು ನೌಕೆಯ ಕರ್ಣಧಾರಸ್ಥಾನವನ್ನು ನಿರ್ವಹಿಸಿದ್ದಾರೆ ಕೇಶವ ಸುಬ್ರಹ್ಮಣ್ಯ ಕೌಶಿಕರು. ಅವರ ಕುಟುಂಬ ಪರಿವಾರದವರೂ, ಬಂಧು-ಮಿತ್ರರೂ ಇದರಲ್ಲಿ ನಿಷ್ಠೆಯಿಂದ ಸಹಕರಿಸಿದ್ದಾರೆ. ಇವರೆಲ್ಲರಿಗೂ ನಾವು

ಮಾಂಗಲ್ಯಂ ಮಂಗಲಂ ವಿಷ್ಣುಂ ವರೇಣ್ಯಮನಘಂ ಶುಚಿಮ್ ।
ಪವಿತ್ರಾಣಾಂ ಪವಿತ್ರಂ ಯೋ ಮಂಗಲಾನಾಂ ಚ ಮಂಗಲಮ್ ।
ಶಿವಾಯ ವಿಷ್ಣುರೂಪಾಯ ವಿಷ್ಣವೇ ಶಿವರೂಪಿಣೇ ॥

ಎಂದು ಮೊದಲಾಗಿ ಮಹಾಭಾರತದಲ್ಲಿ ಸ್ತುತಿ-ಮಂಗಲಾಶಂಸನೆ ಗಳಿಗೆ ವಿಷಯವಾಗಿ ಮಂಗಳದೇವತೆಗೂ ಮಾಂಗಲ್ಯನಾಗಿರುವ ಪರಮ ಪುರುಷನ ಅನುಗ್ರಹಾಶೀರ್ವಾದಮಂಗಲವನ್ನು ಪ್ರಾರ್ಥಿಸುತ್ತೇವೆ.

ಮಹಾಮಂಗಲದ ಮಧುರಕ್ಷಣಗಳ ಸ್ಮೃತಿಗಾಗಿ ಹೊರತಂದ ಬರಹ ಗಳು ಮಹಾಭಾರತಕ್ಕೆ ಸಂಬಂಧಪಟ್ಟ ವಿವಿಧವಿಷಯಗಳನ್ನು ಅಧಿಕರಿಸಿವೆ. ಭಾರತತೀರ್ಥದ ವಿವಿಧ ಘಟ್ಟಗಳಲ್ಲಿ ಅವಗಾಹನಮಾಡಲು ಸಹಾಯ ಮಾಡಿವೆ. ಜಾಹಿರಾತುಗಳನ್ನು ಕೊಟ್ಟಿರುವ ಮಹನೀಯರು ತಮ್ಮ ಪ್ರಕಟಣೆ ಗಿಂತ ಹೆಚ್ಚಾಗಿ ಮಹಾಭಾರತದ ವಿಷಯಕವಾದ ಲೇಖನಗಳಿಗೆ ಎಡೆಮಾಡಿ ಕೊಟ್ಟಿದ್ದಾರೆ.

ಪವಿತ್ರವೂ ಮಂಗಲವೂ ಆದ ಈ ಕಾರ್ಯಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಅನೇಕಮಹನೀಯರು ಸಹಾಯಮಾಡಿದ್ದಾರೆ. ಅವರೆಲ್ಲರಿಗೂ ಶ್ರೀ ವೇದವ್ಯಾಸ ಗುರುದೇವರ ಅನುಗ್ರಹಮಂಗಲವನ್ನು ಆಶಿಸಿ ಅವರ ಮೂಲಕ ಇತೋಪ್ಯತಿಶಯವಾದ ಧರ್ಮ ಮತ್ತ ಸಂಸ್ಕೃತಿಗಳ ಸೇವೆ ಆಗ ಲೆಂದು ಹಾರೈಸುತ್ತೇವೆ.

"ಭದ್ರಂ ಶುಭಂ ಮಙ್ಗಲಂ"

–ಹೆಚ್. ಎಸ್. ವರದದೇಶಿಕಾಚಾರ್ಯರಂಗಪ್ರಿಯ

ವಿನಮ್ರವಚನಗಳು

ದಯಾಮಯನಾದ ಪರಮಾತ್ಮನ ದಿವ್ಯಾನುಗ್ರಹದಿಂದಲೂ ಗುರು ಭಗವಂತನ ದಿವ್ಯಾಶೀರ್ವಾದಗಳಿಂದಲೂ ಸಹೃದಯರ ಸಹಕಾರ-ಸದಾಶಯ ಗಳಿಂದಲೂ 32ನೆಯ ಹಾಗು ಕಡೆಯ ಮಹಾಭಾರತಕುಸುಮವನ್ನು ದೇವ ದೇವನ ದಿವ್ಯಪಾದಾರವಿಂದಗಳಲ್ಲರ್ಪಿಸಿ ಪ್ರಸಾದರೂಪವಾದ ಈ ದಿವ್ಯಕುಸುಮವನ್ನು ವಾಚಕರ ಅಂಜಲಿಪುಟದಲ್ಲಿಡುತ್ತಿದ್ದೇವೆ.

1972ನೇ ಆಗಸ್ಟ್ 11ರಂದು ಮಹಾಭಾರತದ ಮೊದಲನೆಯ ಸಂಪುಟವು ಹೊರಬಿದ್ದಿತು. ಹದಿಮೂರು ವರ್ಷಗಳಿಗೆ ಮೊದಲೇ ಮಹಾ ಭಾರತವು ಸಂಪೂರ್ಣವಾಗಿದೆ. ಇದು ಕೇವಲ ಪರಮಾತ್ಮನ ಪವಾಡ. ಇಷ್ಟು ಅಲ್ಪಕಾಲದಲ್ಲಿ ಇಂತಹ ಮಹಾಗ್ರಂಥವು ಮುಗಿದಿರುವ ನಿದರ್ಶನ ಅತಿ ವಿರಳ. ಒಂದು ತಲೆಮಾರಿನಲ್ಲಿ ಮುಗಿಯದೆಂದೇ ಪ್ರತೀತಿ. 'ಪ್ರಾರಂಭಿಸಿದವರು ಮುಗಿಸರು'–ಎಂದೂ ಹೇಳುತ್ತಾರೆ. ಆದರೆ ಇದು ಪರಮಾತ್ಮನ ದಿವ್ಯಸಂಕಲ್ಪದಿಂದಲೇ ಪ್ರಾರಂಭವಾಗಿ ಅವನ ಸಂಕಲ್ಪಮಾತ್ರದಿಂದಲೇ ಮುಗಿ ದಿದೆ. ಇಲ್ಲಿ ವ್ಯಕ್ತಿಪಾತ್ರವು ಕೇವಲ ಗೌಣ. ಅಥವಾ ನೆಪಮಾತ್ರ. **ಮೂಕಂ ಕರೋತಿ ವಾಚಾಲಂ** ಎಂಬುದನ್ನು ಈ ಮಹಾಗ್ರಂಥದ ಪ್ರಕಟಣೆಯಲ್ಲಿ ದೃಢೀಕರಿಸಿ ಪ್ರಪಂಚಕ್ಕೆ ತೋರಿಸಿದ್ದಾನೆ–ಆ ದಯಾಮಯನಾದ ಪರಮಾತ್ಮ. ವಿದ್ಯಾವಂತರಿಗೇ ಆಗಲೀ ಆಢ್ಯರಿಗೇ ಆಗಲೀ–ಊಹೆಗೂ ಸಿಲುಕದ ಮಹಾ ಕಾರ್ಯವಿದು. ಅದನ್ನಿಂದು ಪರಮಾತ್ಮನು ಸಾಮಾನ್ಯವ್ಯಕ್ತಿಯ ಮೂಲಕ ಕನ್ನಡ ಜನತೆಗೆ ಅನುಗ್ರಹಿಸಿಕೊಟ್ಟಿದ್ದಾನೆ. ಮಹಾಭಾರತವೆಂಬುದೊಂದು ಮಹಾನಿಧಿ. ಈ ಮಹಾನಿಧಿಯು ಇಂದು ಕನ್ನಡಿಗರ ಪಾಲಾಗಿದೆ. ಈ ದಿವ್ಯನಿಧಿಯನ್ನು ಉಪಭೋಗಿಸುವುದು, ಬಿಡುವುದು ಕನ್ನಡ ಮಹಾಜನರಿಗೆ ಸೇರಿದ್ದಾಗಿದೆ.

ಮಹಾಭಾರತದ ಪರಿಸಮಾಪ್ತಿಯ ಸಮಯದಲ್ಲಿಯೂ ಮತ್ತೊಂದು ಪವಾಡವು ನಡೆದುಹೋಯಿತು. ಮಹಾಭಾರತದ ಮಹಾಮಂಗಳವನ್ನು ಮಾಡಬೇಕೆಂಬ ಸತ್ಸಂಕಲ್ಪವೇನೋ ಇದ್ದಿತು. ಆದರೆ ಕಾರ್ಯಗತ ವಾಗುವುದೆಂತು?

ವಿದ್ಯಾವಂತನಾದ, ವಾಗ್ಮಿಯಾದ, ಚತುರನಾದ, ನಿಷ್ಠನಾದ, ಸದ್ಗುಣ ಸಂಪನ್ನನಾದ, ನಿಃಸ್ಪೃಹನಾದ ಯುವಕನೊಬ್ಬನು ನೆರವಿಗೆ ಬಂದನು ಅಥವಾ ಪರಮಾತ್ಮನೇ ಅವನನ್ನು ಈ ಮಹಾಕಾರ್ಯದ ಸಲುವಾಗಿ ಕಳುಹಿಸಿ ಕೊಟ್ಟಿರುವನು. ಅವನು ೩ ತಿಂಗಳಿಂದ ಹಗಲು ರಾತ್ರಿಗಳೆನ್ನದೆ ದುಡಿದುದರ ಫಲವೇ ಈ ಮಹಾಮಂಗಳಸಮಾರಂಭ ಅಥವಾ ಸ್ಮರಣಸಂಚಿಕೆಯ ಪ್ರಕಾಶನ. ಇದು ಪರಮಾತ್ಮನ ಪವಾಡವಲ್ಲವೇ? ಹೀಗೆ ಹೆಜ್ಜೆ-ಹೆಜ್ಜೆಗೂ ಸಹಾಯ ಸಂಪತ್ತುಗಳನ್ನೊದಗಿಸಿಕೊಟ್ಟು ದಯಾಮಯನಾದ ಪರಮಾತ್ಮನು ತನ್ನದೇ ಆದ ಈ ಮಹಾಕಾರ್ಯವನ್ನು ಆಗುಮಾಡಿಸಿದ್ದಾನೆ. ಅವನಿಗೆ ಅನಂತಕೋಟಿ ನಮಸ್ಕಾರಗಳು.

ನೆಯ ಸಂಪುಟದಲ್ಲಿರುವುದು ಮೂರು ಚಿಕ್ಕ ಪರ್ವಗಳು. ಚಿಕ್ಕವಾದರೂ ಮನೋಹರವಾಗಿವೆ. ಪಾಂಡವರು ಸ್ವರ್ಗಕ್ಕೆ ಹೋದರೂ ದುಃಖ ಪ್ರಸಂಗವಿಲ್ಲ. ಕಡೆಯಲ್ಲಿ ಎಲ್ಲರೂ ತಮ್ಮ ತಮ್ಮ ಮೂಲಸ್ವರೂಪದಲ್ಲಿ ಸೇರಿಹೋದರೆಂಬ ಶುಭವಾಕ್ಯವಿದೆ. ಹುಟ್ಟಿದವರೆಲ್ಲರೂ ಒಮ್ಮೆ ಮೂಲ ಸ್ವರೂಪಕ್ಕೆ ಸೇರಿಕೊಳ್ಳಬೇಕೆಂಬ ಸೂಚನೆಯೂ ಇದೆ. ಇಂತಹ ಮಂಗಳ ಮಯ ಸಂದೇಶದೊಡನೆ ಮಹಾಭಾರತವು ಮುಗಿದಿದೆ.

ಈ ಸಂಪುಟದಲ್ಲಿ ಉಮಾಮಹೇಶ್ವರಸಂವಾದವೆಂಬ ಪರಿಶಿಷ್ಟವೂ ಮುಗಿದಿದೆ. ಮಹಾಭಾರತದಲ್ಲಿನ ಕೆಲವು ಸಂದೇಹಗಳನ್ನು ನಿವಾರಿಸುವ ಲೇಖನಮಾಲೆಯನ್ನೂ ಅಳವಡಿಸಿದ್ದೇವೆ. ಇದು ತೆಲುಗು ಭಾಷೆಯ ಭಾಷಾಂತರ. ಭಾಷಾಂತರಿಸಿಕೊಟ್ಟವರು, ಉಭಯಭಾಷೆಗಳಲ್ಲಿ ಪಾಂಡಿತ್ಯವನ್ನು ಪಡೆದಿರುವ ವಿದ್ವಾನ್ ಜಾನಕಿರಾಮಯ್ಯನವರು. ಅವರಿಗೆ ನಮ್ಮ ಹೃತ್ಪೂರ್ವಕವಂದನೆಗಳು. ಸಮಗ್ರ ಮಹಾಭಾರತದ ವಿಷಯಾನುಕ್ರಮಣಿಕೆಯನ್ನು ಕೊಡಲಾಗಿದೆ. ಆದರೆ ಇದು ಪುನರುಕ್ತವಾಗಿರುವುದು ನಿಜ. ಆದರೆ ಇದರಿಂದ ಪ್ರಯೋಜನ ಬಹಳ. ಯಾವ ವಿಷಯವು ಯಾವ ಸಂಪುಟದಲ್ಲಿ, ಯಾವ ಅಧ್ಯಾಯದಲ್ಲಿ, ಯಾವ ಪರ್ವದಲ್ಲಿರುವುದೆಂಬುದನ್ನು ಬಹಳ ಬೇಗ ತಿಳಿಯಬಹುದು. ಅನೇಕರ ಅಭಿಪ್ರಾಯವನ್ನು ಸಂಗ್ರಹಿಸಿ ವಿಷಯಾನುಕ್ರಮಣಿಕೆಯನ್ನು ಅಳವಡಿಸಲಾಯಿತು.

ಇತ್ತೀಚೆಗೆ ಸಿಂಡಿಕೇಟ್ ಬ್ಯಾಂಕಿನವರು ಸಾಲದ ಸೌಲಭ್ಯವನ್ನು ನವೀಕರಿಸಿರುತ್ತಾರೆ. ಗ್ರಾಹಕರಾಗಲು ಅಪೇಕ್ಷಿಸುವವರು ಇದರ ಪ್ರಯೋಜನ ವನ್ನು ಪಡೆದುಕೊಳ್ಳಬಹುದು.

ನಮ್ಮ ಮುಂದಿನ ಹೆಜ್ಜೆ ಶ್ರೀಮದ್ವಾಲ್ಮೀಕಿರಾಮಾಯಣದ ಪ್ರಕಟಣೆ. ರಾಮಾಯಣಪ್ರಕಟಣೆಗಳು ಅನೇಕವಿವೆಯೆಂಬುದು ಕೆಲವರ ಅನಿಸಿಕೆ. ಅದು ನಿಜವೂ ಇರಬಹುದು. ಆದರೆ ಅದರ ನಿರೂಪಣೆಯಲ್ಲಿ ಒಂದಕ್ಕೊಂದಕ್ಕೆ ವ್ಯತ್ಯಾಸವಿರುತ್ತದೆ. ಮೇಲಾಗಿ ಇದನ್ನು ಹಿಂದೊಮ್ಮೆ ಪ್ರಾರಂಭಿಸಿ ಅಯೋಧ್ಯಾಕಾಂಡಕ್ಕೆ ನಿಂತುಹೋಯಿತು. ಅದನ್ನು ಪೂರ್ಣಗೊಳಿಸುವುದು ನಮ್ಮ ಕರ್ತವ್ಯವಾಗಿದೆ. ಎಲ್ಲಕ್ಕಿಂತಲೂ ವಿಶೇಷವಾಗಿ ಈ ಗ್ರಂಥಪ್ರಕಟಣೆಗೆ ಗುರುಭಗವಂತನ ದಿವ್ಯಾಶೀರ್ವಾದವು ಬಹಳ ಹಿಂದೆಯೇ ಲಭಿಸಿದೆ. ಈ ಕಾರಣಗಳಿಂದ ನಾವು ಶ್ರೀಮದ್ವಾಲ್ಮೀಕಿರಾಮಾಯಣದ ಪ್ರಕಟಣೆಯನ್ನು ಅಕ್ಷಯ ಚೈತ್ರ ಶ್ರೀರಾಮನವಮಿಯಿಂದ ಪ್ರಾರಂಭಿಸಲು ಇಚ್ಛಿಸಿದ್ದೇವೆ. ಮಹಾಭಾರತದ ಎಲ್ಲ ಗ್ರಾಹಕರೂ ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ. 640 ಪುಟಗಳ ಹತ್ತು ಸಂಪುಟಗಳಲ್ಲಿ ಪ್ರಕಟಿಸಲಾಗುವುದು. ಚಂದಾಹಣ ಸಾಧಾರಣ ಪ್ರತಿಗಳು 120/- ರೂ.ಗಳು. ಕ್ಯಾಲಿಕೋ ಪ್ರತಿಗಳು 150/- ರೂ.ಗಳು. ಪ್ರಕಾಶನದವರೆಗೆ ಚಂದಾಹಣವನ್ನು ಮೂರು ಕಂತುಗಳಲ್ಲಿ ಪಾವತಿಮಾಡಬಹುದು. ಈಗಾಗಲೇ ಅನೇಕರು ಗ್ರಾಹಕರಾಗಿದ್ದಾರೆ. ಉಳಿದವರೂ ತಡಮಾಡದೆ ಗ್ರಾಹಕರಾಗುವರೆಂಬ ಆಶಯದಿಂದಿರುತ್ತೇವೆ. ಈ ಪ್ರಕಾಶನದ ಜೊತೆಯಲ್ಲಿಯೇ 'ಮಹಾಭಾರತವು ಮನೆ ಮನೆಗೆ'– ಕಾರ್ಯವು ಅವ್ಯಾಹತವಾಗಿ ನಡೆಯುತ್ತದೆ. ಮಹಾಭಾರತದಲ್ಲಿರುವ ಶ್ಲೋಕಕ್ಕೆ ಅನುಗುಣವಾಗಿ ಹತ್ತು ವರ್ಷಗಳಲ್ಲಿ ಲಕ್ಷಗ್ರಾಹಕರನ್ನು ಸಂಗ್ರಹಿಸುವುದು ನಮ್ಮ ಸಂಕಲ್ಪ. ಪರಮಾತ್ಮನ ಅನುಗ್ರಹಬೇಕು. ಅವನು ಚೈತನ್ಯವನ್ನಿತ್ತು ಈ ಮಹಾಕಾರ್ಯವನ್ನು ಆಗುಮಾಡಿಸಿಕೊಡಬೇಕು.

ಹಿಂದಿನಂತೆಯೇ ಹಲವಾರು ಅಭಿಮಾನಿಗಳು ಈ ಸಂಪುಟಕ್ಕಾಗಿ ಸಹಾಯದ್ರವ್ಯವನ್ನು ಕಳುಹಿಸಿಕೊಟ್ಟಿರುತ್ತಾರೆ.

ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕವಂದನೆಗಳು.

ಶ್ರೀಮನ್ಮಹಾಭಾರತದ ಮೂವತ್ತೊಂದನೆಯ ಸಂಪುಟಕುಸುಮದ ಪ್ರಕಾಶನಮಹೋತ್ಸವವು ಜ್ಯೇಷ್ಠ ಶುದ್ಧ ಷಷ್ಠೀ ಶನಿವಾರ ಸಂಧ್ಯಾಕಾಲ ಶುಭ ಮುಹೂರ್ತದಲ್ಲಿ ಮಲ್ಲೇಶ್ವರದ ಶ್ರೀರಾಮಭಜನಸಭಾ ಭವ್ಯಸಭಾಂಗಣದಲ್ಲಿ ವೇದವಿದ್ವಾಂಸರ ವೇದಘೋಷದೊಂದಿಗೆ ಪ್ರಾರಂಭವಾಯಿತು. ವೇ|| ಬ್ರ|| ಶ್ರೀ ಹ. ವೆ. ನಾರಾಯಣಶಾಸ್ತ್ರಿಗಳವರು ರಚಿಸಿದ ಸಂಸ್ಕೃತಸ್ವಾಗತ ಪದ್ಯಮಾಲಿಕೆಯನ್ನು ಶ್ರೀಮತಿ ವಸಂತಾ-ಬಾಲಸುಬ್ರಹ್ಮಣ್ಯಂರವರು ಸುಶ್ರಾವ್ಯವಾಗಿ ಹಾಡಿದರು.

ಸಮಾರಂಭದ ಮುಖ್ಯ ಅತಿಥಿಗಳನ್ನೂ, ಅಧ್ಯಕ್ಷವರ್ಯರನ್ನೂ, ಹಾಗೂ ಸಭಾಸದರನ್ನೂ ವಿದ್ವಾನ್ ಹೆಚ್. ಎನ್. ರಂಗಸ್ವಾಮಿಯವರು ಸ್ವಾಗತಗೈದು ಮುಖ್ಯ ಅತಿಥಿಗಳ ಪರಿಚಯವನ್ನು ಮಾಡಿಕೊಟ್ಟರು. ಮಧುರವಾಗಿ ಮೊಳಗುತ್ತಿದ್ದ ಮಂಗಳವಾದ್ಯಗಳ ನಿನಾದದೊಂದಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಎ. ಎಸ್. ಮೇಲ್ಕೋಟೆಯವರು ಮಹಾಭಾರತಪುಣ್ಯವೃಕ್ಷದ ಪುಷ್ಪರೂಪವಾದ ಮೂವತ್ತೊಂದನೆಯ ಸಂಪುಟವನ್ನು ಪ್ರಕಾಶನಗೊಳಿಸಿದರು. ಪ್ರಕಾಶಿತ ಸಂಪುಟದಿಂದ ಆಯ್ದ ಕೆಲವು ಶ್ಲೋಕಗಳನ್ನು ಶ್ರೀಮತಿ ವಸಂತಾ-ಬಾಲಸುಬ್ರಹ್ಮಣ್ಯಂರವರು ವಾಚಿಸಿದ ನಂತರ ಭಾರತ ದರ್ಶನ ಪ್ರಕಾಶನದ ಅಧ್ಯಕ್ಷರಾದ ವೇ|| ಬ್ರ|| ಶ್ರೀ ಹೆಚ್. ಎಸ್. ವರದದೇಶಿಕಾಚಾರ್ಯರಂಗಪ್ರಿಯರು ಪ್ರಕಾಶಿತಸಂಪುಟವನ್ನು ಪರಿಚಯಿಸುತ್ತಾ–"ವಿಶ್ವಕೋಶ" ಎನಿಸಿರುವ ಮಹಾಭಾರತವು ವೈದಿಕಸಾಹಿತ್ಯದ ಪ್ರತಿರೂಪವೇ ಆಗಿದೆ. ಇತಿಹಾಸ-ಪುರಾಣಗಳ ದೃಷ್ಟಿಯಿಂದಲೂ ಈ ಗ್ರಂಥವು ಅಗ್ರಸ್ಥಾನದಲ್ಲಿದೆ. ಇದು ಕಾವ್ಯ ; ಪೂಜ್ಯಕಾವ್ಯ-ಆಕರಕಾವ್ಯವೆಂದೂ ಅಮರಕಾವ್ಯವೆಂದೂ ಗೌರವಿಸಲ್ಪಡುತ್ತದೆ. ಭಾರತದ ಸಿದ್ಧಿಯನ್ನು ತೋರಿಸುವ ದರ್ಪಣ ಈ ಮಹಾಭಾರತ"–ಎಂದು ವಿಶ್ಲೇಷಿಸಿ–"ಪ್ರಸ್ತುತ 31ನೆಯ ಸಂಪುಟ ಶ್ರೀಮನ್ಮಹಾ ಭಾರತವು–ವಿಶೇಷವಾಗಿ 'ಕಾವ್ಯಧರ್ಮ' ಎಂಬುದನ್ನೂ ಹಾಗೂ ಅನೇಕ ಗ್ರಂಥಗಳಿಗೆ, ಕಾವ್ಯಗಳಿಗೆ ಆಕರವಾಗಿ 'ಆಕರಕಾವ್ಯ' ಎನಿಸಿಕೊಂಡಿದೆ–ಎಂಬು ದನ್ನೂ ತೋರಿಸಿಕೊಡುತ್ತದೆ"–ಎಂದು ನುಡಿದರು. ಮುಂದುವರಿದ ಶ್ರೀಯುತರು ಈ ಸಂಪುಟದಲ್ಲಿ ಆಶ್ವಮೇಧಿಕಪರ್ವದ ಉತ್ತರಾರ್ಧ, ವೈಷ್ಣವ

ಧರ್ಮಪರ್ವದ ಸಂಪೂರ್ಣಭಾಗವು ಅಡಕವಾಗಿದೆ ಎಂದೂ ತಿಳಿಸಿ ಮುಖ್ಯ ಘಟನಾವಳಿಗಳನ್ನು ಹೃದ್ಯವಾಗಿ ವಿಶದೀಕರಿಸಿದರು.

ಅನಂತರ ಮುಖ್ಯ ಅತಿಥಿಗಳಾದ ಶ್ರೀ ಮೇಲ್ಕೋಟೆಯವರು ತಮ್ಮ ಹಿತನುಡಿಗಳನ್ನು ನೀಡುತ್ತಾ ಪುಣ್ಯಸ್ಥಳವಾದ ಮಲ್ಲೇಶ್ವರದ ಶ್ರೀರಾಮ ಮಂದಿರದಲ್ಲಿ ಕನ್ನಡ ಮಹಾಭಾರತ ಪ್ರಕಾಶನವೆಂಬ ಅನುಪಮಕಾರ್ಯ ಕ್ರಮವು ವ್ಯವಸ್ಥೆಗೊಂಡಿರುವುದರ ಬಗೆಗೆ ಸಂತೋಷಗೊಂಡರಲ್ಲದೇ, ಸರ್ಕಾರವು ಈ ಹಿಂದೆ ಮೂವತ್ತು ಸಂಪುಟಗಳನ್ನೂ ಕೊಂಡಂತೆ, ಉಳಿದ ಎರಡು ಸಂಪುಟಗಳನ್ನೂ ಸಹ ಪರಿಷ್ಕೃತಬೆಲೆಗೆ ಕೊಳ್ಳುವುದಾಗಿ ತಿಳಿಸಿದರು. ಕರ್ನಾಟಕ ರಾಜ್ಯದ ಉಳಿದ ಎರಡೂವರೆ ಸಾವಿರ ಪ್ರೌಢಶಾಲೆಗಳಿಗೂ ಮಹಾಭಾರತದ ಎಲ್ಲ ಪ್ರತಿಗಳನ್ನೂ ಒದಗಿಸುವ ಬಗೆಗೆ ತಾವು ರಾಜ್ಯ ಸರ್ಕಾರಕ್ಕೆ ಶಿಫಾರ್ಸು ಮಾಡುವುದಲ್ಲದೇ ಇದಕ್ಕಾಗಿಯೇ ನೂತನಯೋಜನೆ ಯೊಂದನ್ನು ಮಾಡಿಸಲು ಪ್ರಾಮಾಣಿಕಪ್ರಯತ್ನವನ್ನು ಮಾಡುವುದಾಗಿ ಆಶ್ವಾಸನೆಯನ್ನಿತ್ತರು.

ಕಾರ್ಯಕ್ರಮದ ಅಧ್ಯಕ್ಷರಾಗಿದ್ದ ಶ್ರೀಶೃಂಗೇರಿ ಶಿವಗಂಗಾಪೀಠಾಧಿಪತಿ ಗಳಾದ ಪೂಜ್ಯ ಶ್ರೀ ಶ್ರೀ ಸಚ್ಚಿದಾನಂದಭಾರತೀಸ್ವಾಮಿಗಳವರು ಭಾರತ ರಾಷ್ಟ್ರವು ಅತ್ಯುನ್ನತ ಮಟ್ಟದ ಸಂಸ್ಕೃತಿಯ ಬೆಳವಣಿಗೆಗೆ ಹೇಗೆ ಪೂರಕವಾದ ಪ್ರಯತ್ನಗಳನ್ನು ಮಾಡಿ ಸಿದ್ಧಿಯನ್ನು ಪಡೆಯಿತೆಂಬ ಬಗೆಗೆ ಮಹಾಭಾರತವು ದಿಗ್ದರ್ಶನವನ್ನು ಮಾಡುತ್ತದೆ. ಇಂತಹ ಅಮೂಲ್ಯಸಾಹಿತ್ಯ ಭಂಡಾರವನ್ನು ನಾವು ನಮ್ಮದಾಗಿಸಿಕೊಂಡು ಜೀವನದಲ್ಲಿ ಬೆಳಕನ್ನು ಕಾಣಬೇಕು. ಭಾರತ ಸಿಂಧುವಿನಲ್ಲಿ ಮತ್ತಷ್ಟು ಆಳವಾಗಿ ಮುಳುಗಲು ಇಡೀ ಭಾರತಜನತೆಗೆ ಉತ್ಸಾಹ-ಆಸಕ್ತಿಗಳು ಉಂಟಾಗಲೆಂದು ಅನುಗ್ರಹಿಸಿದರು.

ಪರಮಹಂಸಪರಿವ್ರಾಜಕಾಚಾರ್ಯ ಶ್ರೀ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಂದ್ರಭಾರತೀಸ್ವಾಮಿಗಳವರು ಶ್ರೀರಾಮಚಂದ್ರಾಪುರಮಠ ಇವರು ಆಶೀರ್ವಾದಪೂರ್ವಕವಾಗಿ ಕಳುಹಿಸಿದ್ದ ಸುವರ್ಣಮಂತ್ರಾಕ್ಷತೆಯನ್ನು ಪ್ರಕಾಶನ ಮಂಡಳಿಯ ವಿದ್ವತ್ಸದಸ್ಯರಿಗೆ ಪೂಜ್ಯ ಸ್ವಾಮೀಜಿಯವರು ಅನುಗ್ರಹಿಸಿದರು. ವಿದ್ವಾನ್ ಪಿ. ಎಸ್. ರಾಮೇಶ್ವರಾವಧಾನಿಗಳವರು ಧನ್ಯ

ವಾದಗಳನ್ನು ಅರ್ಪಿಸಿದರು. ಮಂಗಳಮಯವಾದ ಈ ಕಾರ್ಯಕ್ರಮವು ಸಾಮೂಹಿಕಶಾಂತಿಪಾಠದೊಂದಿಗೆ ಮುಕ್ತಾಯಗೊಂಡಿತು.

ಮಹಾಭಾರತದ ಸಂಪಾದಕಮಂಡಲಿಯ ವಿದ್ವಾಂಸರ ಸತತ ಶ್ರಮದ ಫಲವೇ ಈ ಮಹಾಭಾರತ. ಅವರ ಹದಿಮೂರು ವರ್ಷಗಳ ತಪಸ್ಸಿನಿಂದಾಗಿ ಈ ಮಹಾನಿಧಿಯು ಕನ್ನಡ ಜನತೆಗೆ ಸಿಕ್ಕಿದೆ. ಮಾಹೆಯಾನ ತಲಬು ಪಡೆಯುವವರೂ ಅವಿಚ್ಛಿನ್ನವಾಗಿ ಹದಿಮೂರು ವರ್ಷಗಳ ಕಾಲ ಒಟ್ಟಾಗಿ ಕೆಲಸಮಾಡಲಾರರು. ಯಾವ ವಿಧವಾದ ಪ್ರತಿಫಲಾಪೇಕ್ಷೆಯೂ ಇಲ್ಲದೇ ಈ ಮಹಾವಿದ್ವಾಂಸರು ಈ ಮಹಾಗ್ರಂಥವನ್ನು ಸಂಪಾದಿಸಿಕೊಟ್ಟಿದ್ದಾರೆ. ಈಗಿನ ಕಾಲದಲ್ಲಿ ಇದನ್ನು ಯಾರೂ ನಂಬಲಾರರು. ಆದರೆ ಇದು ಶತಾಂಶ ಸತ್ಯ. ಇವರೆಲ್ಲರಲ್ಲಿಯೂ ಸೌಮನಸ್ಯವನ್ನು ತುಂಬಿ ಈ ಮಹಾಕಾರ್ಯವನ್ನು ಆಗುಮಾಡಿಸಿಕೊಟ್ಟ ಪರಮಾತ್ಮನ ಪವಾಡಗಳಲ್ಲಿ ಇದೂ ಒಂದು. ಈ ವಿದ್ವನ್ಮಣಿಗಳೆಲ್ಲರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸು ತ್ತೇವೆ. ಮುಂದಿನ ಪ್ರಕಾಶನಗಳಿಗೂ ಇವರ ಬೆಂಬಲವು ಮುಂದುವರೆ ಯುವುದೆಂಬ ಪೂರ್ಣ ಭರವಸೆಯಿದೆ.

ತೆರೆಯ ಮರೆಯ ಪ್ರಚಾರಕರ ವಿಷಯವಾಗಿ ಎಷ್ಟು ಹೇಳಿದರೂ ಅಲ್ಪವೇ ಸರಿ. ಇವರಲ್ಲಿ ಕೆಲವರಂತೂ ಹದಿಮೂರು ವರ್ಷಗಳಿಂದ ಸತತ ವಾಗಿ ಪ್ರಚಾರಸೇವೆಯನ್ನು ನಿಃಸ್ಪೃಹತೆಯಿಂದ ಸಲ್ಲಿಸುತ್ತಿದ್ದಾರೆ. ಇವರಲ್ಲಿ ಮೊದಲಿಗರೆಂದರೆ ತುರುವೇಕೆರೆಯ ವಿದ್ವಾನ್ ಟಿ. ನಾರಾಯಣಶಾಸ್ತ್ರಿಗಳು. ಇವರು ಭದ್ರಾವತಿ, ತರೀಕೆರೆ, ತುರುವೇಕೆರೆ, ತಿಪಟೂರು, ಅಮ್ಮಸಂದ್ರ ಇತ್ಯಾದಿ ಕಡೆಗಳಲ್ಲಿ ಪ್ರಚಾರಕ್ಕಾಗಿ ಬಹಳ ಶ್ರಮಿಸಿದ್ದಾರೆ. ಇವರ ಸುಪುತ್ರ ಚಿ|| ಟಿ. ಎನ್. ಪ್ರಭಾಕರ್‌ರವರು (ಮಹಾಮಂಗಳಸಮಾರಂಭದ ಪ್ರಧಾನ ಕಾರ್ಯದರ್ಶಿಗಳು) ತಂದೆಯವರನ್ನು ಮೀರಿಸುವ ರೀತಿಯಲ್ಲಿ ಕೋಲಾರ ಜಿಲ್ಲೆಯಲ್ಲಿ ಮಹಾಭಾರತಪ್ರಚಾರವನ್ನು ಕಳೆದ ಹದಿಮೂರು ವರ್ಷಗಳಿಂದ ಮಾಡುತ್ತಿದ್ದಾರೆ. ಇವರ ಗೆಳೆಯ ಡಾ|| ವಿ. ಎಸ್. ಕೃಷ್ಣಮೂರ್ತಿಗಳು ಮತ್ತು ಇವರ ಪತ್ನಿ ಶ್ರೀಮತಿ ಸರೋಜ ಇವರು ಮನೆಮನೆಗೂ ಮಹಾಭಾರತ ಮಹಾನಿಧಿಯನ್ನು ಹಂಚಿದ್ದಾರೆ. ತೆಲುಗು ಮಾತನಾಡುವವರೇ ಹೆಚ್ಚಾಗಿರುವ ಕೋಲಾರದಲ್ಲಿ ಮಹಾಭಾರತಕ್ಕೆ ಗ್ರಾಹಕರು ಹತ್ತಕ್ಕಿಂತಲೂ

ಹೆಚ್ಚಾಗಲಾರರೆಂದು ಇವರೊಡನೆ ಒಬ್ಬರು ಪಂದ್ಯ ಕಟ್ಟಿದ್ದರಂತೆ. ಆದರೆ ಕೇವಲ ಹತ್ತು ದಿವಸಗಳ ಶ್ರಮದಲ್ಲಿ ಡಾ|| ಕೃಷ್ಣಮೂರ್ತಿಯವರು ಅವರ ಮಾತನ್ನು ಸುಳ್ಳುಮಾಡಿಬಿಟ್ಟರು. ಈಗ ಕೋಲಾರದಲ್ಲಿರುವ ಗ್ರಾಹಕರ ಸಂಖ್ಯೆ 300ನ್ನು ಮೀರಿದೆ. ಮಹಾಮಂಗಳಕಾರ್ಯಕ್ಕೂ ಇವರ ಸೇವೆ ಅಪಾರ. ಮಹಾಮಂಗಳಸಮಾರಂಭಕ್ಕೆ ಶಿಲಾಸ್ಥಾಪನೆಯನ್ನು ಮಾಡಿದವರೇ ಇವರು. ಇವರ ಜೊತೆಯಲ್ಲಿ ಪ್ರಚಾರಕ್ಕಾಗಿ ಶ್ರಮಿಸಿದವರು ಕೆನರಾಬ್ಯಾಂಕಿನ ಕೆ. ಎಸ್. ಶೇಷಾದ್ರಿಗಳು. ಬೆಮೆಲ್ ನಗರವನ್ನು ಮಹಾಭಾರತದಿಂದ ತುಂಬಿಸಿರುವವರು ಶ್ರೀ ಎಂ. ನಾಗರಾಜರಾವ್ ಅವರು. ಮಹಾಭಾರತದ ನಾಗರಾಜರಾವ್ ಎಂಬ ಹೆಸರನ್ನು ಗಳಿಸಿದ್ದಾರೆ. ಚಿಂತಾಮಣಿಯ ಪ್ರಚಾರಕರು ಶ್ರೀ ಆರ್. ವಿಶ್ವನಾಥ್‌ರವರು ಗ್ರಾಹಕಸಂಖ್ಯೆಯನ್ನು ಐದರಿಂದ ಐವತ್ತಕ್ಕೆ ಮುಟ್ಟಿಸಿದ್ದಾರೆ. ಚಿಕ್ಕಬಳ್ಳಾಪುರದಲ್ಲಿ ನಿಃಸ್ಪೃಹತೆಯಿಂದ ಪ್ರಚಾರ ವೆಸಗುತ್ತಿರುವವರು ಶ್ರೀ ಎನ್. ಆರ್. ಸುಬ್ಬಣ್ಣನವರು. ಸಂಸ್ಕೃತ ಉಪನ್ಯಾಸ ಕರು. ಬಾಗೇಪಲ್ಲಿಯ ಗೌರವ ಪ್ರತಿನಿಧಿಗಳು ಶ್ರೀ ಬಾ. ನಂಜುಂಡಭಟ್ಟರು. ಇವರು ಹೈಸ್ಕೂಲ್ ಅಧ್ಯಾಪಕರು. ಭದ್ರಾವತಿಯಲ್ಲಿ ಮತ್ತೊಬ್ಬ ಪ್ರಚಾರಕರು ಶ್ರೀ ದೇವರಾಜ್ ಅವರು. ಇವರು V.I.S.L. ನಲ್ಲಿ ಸಂಕ್ಷಿಪ್ತಲಿಪಿಗಾರರು. ಇವರೊಬ್ಬರ ಹೆಸರಿನಲ್ಲಿಯೇ ಸುಮಾರು ಐವತ್ತಕ್ಕೂ ಹೆಚ್ಚು ಗ್ರಾಹಕಸಂಖ್ಯೆ ಗಳಿವೆ. ಭದ್ರಾವತಿಯ ಶ್ರೀ ಐ.ಸಿ. ವಿಶ್ವನಾಥಯ್ಯನವರು, ಪಿ.ಕೆ. ಸೀತಾರಾಮ ಶಾಸ್ತ್ರಿಗಳು. ರಾಮಸ್ವಾಮಿಶಾಸ್ತ್ರಿಗಳು ಇವರೆಲ್ಲರೂ ಮಹಾಭಾರತಪ್ರಚಾರಕ್ಕಾಗಿ ಸಾಕಷ್ಟು ದುಡಿದಿರುತ್ತಾರೆ. ಮಂಜುನಾಥ ಹೆಗಡೆ ಉಳಿಗೆರೆ ಇವರು ಸಾಗರ ಪ್ರಾಂತ್ಯದ ಗೌರವಪ್ರಚಾರಕರು. ಒಂದೊಂದೇ ಮನೆಯಿರುವ ಮಲೆನಾಡಿನ ಹಳ್ಳಿಗಳಿಗೂ ತಲೆಯ ಮೇಲೆ ಭಾರತದ ಸಂಪುಟಗಳನ್ನು ಹೊತ್ತುಕೊಂಡು ಹೋಗಿ ಪ್ರಚಾರಮಾಡುತ್ತಿದ್ದಾರೆ. ಹಾಸನದ ಸಿ. ಎಸ್. ಕೃಷ್ಣಪ್ಪನವರು ಗತಿಸಿದನಂತರ ಮಹಾಭಾರತ ಪ್ರಚಾರಕಾರ್ಯವನ್ನು ಮುಂದುವರಿಸಿದವರು ಶ್ರೀ ಎಂ. ಎನ್. ಶ್ರೀಕಂಠಯ್ಯನವರು, ಮೈಸೂರಿನ ಸದ್ವೈದ್ಯ ಶಾಲೆಯ ಶ್ರೀನಿವಾಸಮೂರ್ತಿ, ಶ್ರೀ ಎನ್. ಎಸ್. ಮೂರ್ತಿ, ತೀರ್ಥಹಳ್ಳಿಯ ಶ್ರೀ ನಾಗೇಂದ್ರನಾಥ್, ಭದ್ರಾವತಿಯ ಶ್ರೀ ಟಿ. ಕೆ. ಲಕ್ಷ್ಮೀನಾರಾಯಣ ಶಾಸ್ತ್ರಿಗಳು, ಮಿಡಿಗೇಶಿಯ ಕೃಷ್ಣಮೂರ್ತಿಗಳು–ಇವರೆಲ್ಲರೂ ಮಹಾಭಾರತಪ್ರಚಾರಕ್ಕಾಗಿ

ಸಾಕಷ್ಟು ದುಡಿದಿರುತ್ತಾರೆ. ಬೆಂಗಳೂರಿನಲ್ಲಿ ಹೆಚ್. ಎ. ಎಲ್. ನ ಶ್ರೀ ಎನ್. ಎಸ್. ವಿ. ಪ್ರಸಾದ್‌ರವರು ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕನ್ನು ಮಹಾಭಾರತದ ಬ್ಯಾಂಕಾಗಿ ಪರಿವರ್ತಿಸಿದ್ದಾರೆ. ಶ್ರೀ ಕೆ. ಎಸ್. ಕೇಶವಮೂರ್ತಿಯವರು, ಐ.ಟಿ.ಐ. ನ ಶ್ರೀ ಎಂ. ಕೆ. ಕೃಷ್ಣಮೂರ್ತಿಗಳು, ಶ್ರೀ ಶೇಷಾದ್ರಿಗಳು, ಶ್ರೀ ಕೆ. ವಿ. ಶ್ರೀನಿವಾಸಮೂರ್ತಿಗಳು ಇವರೆಲ್ಲರೂ ನಿಃಸ್ಪೃಹತೆಯಿಂದ ಮಹಾಭಾರತ ಪ್ರಚಾರಕ್ಕಾಗಿ ಶ್ರಮಿಸಿರುತ್ತಾರೆ. ಇವರಲ್ಲದೆ ನೂರಾರುಮಂದಿ ಗ್ರಾಹಕರು, ತಮಗೆ ಸಾಧ್ಯವಿದ್ದಷ್ಟು ಗ್ರಾಹಕರನ್ನು ಮಾಡಿ ಕೊಟ್ಟಿರುತ್ತಾರೆ. ಕೆಲವರು ತೆರೆಯಮರೆಯಲ್ಲಿ ಮಾಡುವ ಪ್ರಚಾರಕಾರ್ಯವು ನಮಗೆ ತಿಳಿದೇ ಇರುವುದಿಲ್ಲ. ಆಕಸ್ಮಿಕವಾಗಿ ಅವರು ಹೇಳಿಕೊಂಡಾಗಲೇ ತಿಳಿಯುತ್ತದೆ. ಇಂತಹ ಪ್ರಚಾರಕರ ಸಂಪತ್ತಿಯು ನಮಗಿರುವುದರಿಂದ ಸದಸ್ಯರ ಸಂಖ್ಯೆ ಹತ್ತು ಸಾವಿರ ಮುಟ್ಟಲು ಸಾಧ್ಯವಾಗಿದೆ. ಇವರೆಲ್ಲರಿಗೂ ಪರಮಾತ್ಮನು ದೀರ್ಘಾಯುಷ್ಯವನ್ನೂ ಸಮಸ್ತಸನ್ಮಂಗಲಗಳನ್ನೂ ದಯ ಪಾಲಿಸಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ. ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ಕಡೆಯದಾಗಿ ನಮ್ಮ ಮುದ್ರಣಾಲಯದ ಕಾರ್ಯಕರ್ತರೂ ಸಂಪುಟ ಗಳನ್ನು ಅಚ್ಚುಕಟ್ಟಾಗಿ ಹೊರತಲು ಶ್ರದ್ಧೆಯಿಂದ ಕೆಲಸಮಾಡಿರುತ್ತಾರೆ. ಇವರಿಗೂ ಭಗವಂತನು ಮನೋಭೀಷ್ಟವನ್ನು ನೆರವೇರಿಸಿಕೊಡಲೆಂದು ಪ್ರಾರ್ಥಿಸುತ್ತೇವೆ.

ಮಹಾಭಾರತ ಮಹಾಮಂಗಳದಿಂದಾಗಿ ದೇಶದಲ್ಲಿ ಸುವೃಷ್ಟಿ ಯಾಗಲಿ; ದೇಶವು ನಿರುಪದ್ರವಿಯಾಗಲಿ.

ಸರ್ವೇ ಜನಾಃ ಸುಖಿನೋ ಭವನ್ತು ಸಮಸ್ತಸನ್ಮಙ್ಗಲಾನಿ ಭವನ್ತು

—ವ್ಯವಸ್ಥಾಪಕರು.

ದ್ವಿತೀಯ ಮುದ್ರಣದ ಪ್ರಸ್ತಾವನೆ

ದಯಾಮಯನಾದ ಪರಮಾತ್ಮನ ಕರುಣೆಯಿಂದಲೂ ಗುರುಭಗವಂತನ ಆಶೀರ್ವಾದದ ಬಲದಿಂದಲೂ ಮಹಾಭಾರತದ 32ನೆಯ ಸಂಪುಟದ ಪುನರ್ಮುದ್ರಣವನ್ನು ಮುಗಿಸುತ್ತಿದ್ದೇವೆ. ಈ ಸಂಪುಟವು ಸಿದ್ಧವಾಗುವ ವೇಳೆಗೆ ನಮ್ಮಲ್ಲಿ ದಾಸ್ತಾನಿದ್ದ 23 ಸಂಪುಟಗಳಲ್ಲಿ 20 ಸಂಪುಟಗಳು ಮಾತ್ರವೇ ಇರುತ್ತವೆ. ಇನ್ನೂ ಕೆಲವು ಇತ್ತೀಚೆಗೆ ಪುನರ್ಮುದ್ರಣವಾದ ಸಂಪುಟಗಳೂ ಮುಗಿದುಹೋಗುವುದರಲ್ಲಿದೆ. ಸಂಪುಟಗಳು ಮುಗಿಯುವುದಕ್ಕಿಂತ ಮೊದಲಾಗಿಯೇ ಪುನರ್ಮುದ್ರಣಗಳನ್ನು ಮಾಡಬೇಕೆನ್ನುವ ನಮ್ಮ ಪ್ರಯತ್ನ ಅಷ್ಟು ಫಲಕಾರಿಯಾಗಿಲ್ಲ. ಪ್ರಯತ್ನವು ಮುಂದುವರಿದಿದೆ. 1994ನೆಯ ವರ್ಷದಲ್ಲಿ ಕಡೆಯಪಕ್ಷ ಆರು ಸಂಪುಟಗಳನ್ನಾದರೂ ಪುನರ್ಮುದ್ರಣಮಾಡಲು ಸಂಕಲ್ಪಿಸಲಾಗಿದೆ. ನಮ್ಮ ಸತ್ಸಂಕಲ್ಪಕ್ಕೆ ಭಗವಂತನು 'ಅಸ್ತು' ಎಂದರೆ ನಡೆದುಹೋಗುತ್ತದೆ. ಪ್ರಯತ್ನ ನಮ್ಮದು ; ಫಲಕೊಡುವವನು ಅವನೇ. ಮಹಾಭಾರತದ ಮೊದಲಸಂಪುಟವೇ ಇಲ್ಲದಿರುವುದು ಗ್ರಾಹಕರಿಗೆ ನಿರಾಸೆಯಾಗಿದೆ. ಮುದ್ರಿಸಲಿರುವ ಆರು ಸಂಪುಟಗಳಲ್ಲಿ ಮೊದಲನೆಯ ಸಂಪುಟವೂ ಸೇರಿದೆ. ಆದುದರಿಂದ ಗ್ರಾಹಕರು ನಿರಾಶರಾಗುವ ಅಗತ್ಯವಿಲ್ಲ. ಸಾಧ್ಯವಾದಷ್ಟು ಬೇಗ ಮೊದಲನೆಯ ಸಂಪುಟವನ್ನು ಪುನರ್ಮುದ್ರಣ ಮಾಡಲಾಗುವುದು. ಸುಮಾರು 2-3 ತಿಂಗಳುಗಳಲ್ಲಿ 30-31ನೆಯ ಸಂಪುಟಗಳನ್ನು ಹೊರತರುವ ಪ್ರಯತ್ನ ನಡೆಯುತ್ತಿದೆ. ಎಲ್ಲದಕ್ಕೂ ಭಗವಂತನ ದಯೆ ಗ್ರಾಹಕರ ಸಹಕಾರ ಅವಶ್ಯವಾಗಿಬೇಕು.

ಈ ಸಂಪುಟದ ತಪ್ಪು-ಒಪ್ಪುಗಳನ್ನು ಸಂಪಾದಕಮಂಡಲಿಯ ವಿದ್ವಾಂಸರು ನೋಡಿಕೊಟ್ಟು ಉಪಕರಿಸಿರುತ್ತಾರೆ. ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

—ಪ್ರಕಾಶಕರು.

ತೃತೀಯ ಮುದ್ರಣ

ದಯಾಮಯನಾದ ಪರಮಾತ್ಮನ ಕರುಣೆಯಿಂದಲೂ ಗುರುಭಗವಂತನ ಆಶೀರ್ವಾದದಿಂದಲೂ ಸತ್ಪುರುಷರ ಸಹಕಾರ-ಸದಾಶಯಗಳಿಂದಲೂ ಪರ್ವತೋಪಮ ವಾದ ಶ್ರೀಮನ್ಮಹಾಭಾರತದ ಕಡೆಯದಾದ 32 ನೇ ಸಂಪುಟದ ಪುನರ್ಮುದ್ರಣವನ್ನು ಮುಗಿಸುತ್ತಿದ್ದೇವೆ. ಈ ವೇಳೆಗೆ ಪುನಃ ಭಾರತದ 9 ಮತ್ತು 4ನೇ ಸಂಪುಟಗಳನ್ನು ಪುನರ್ಮುದ್ರಿಸಬೇಕಾಗಿದೆ. ಈ 2 ಸಂಪುಟಗಳ ಪುನರ್ಮುದ್ರಣವಾಗುವ ವೇಳೆಗೆ ಇನ್ನೆಷ್ಟು ಸಂಪುಟಗಳು ಮುಗಿದಿರುತ್ತವೆಯೋ ಎಂದು ಹೇಳುವ ಹಾಗಿಲ್ಲ. 32 ಸಂಪುಟಗಳೂ ಒಟ್ಟಾಗಿ ಸಿಗುವಂತೆ ಆಗಲು ಪರಮಾತ್ಮನ ಕೃಪೆಯಿಂದ ಸಾಧ್ಯವಾದೀತು. ಅದು ಹೊರತಾಗಿ ಕೇವಲ ಮನುಷ್ಯ ಪ್ರಯತ್ನದಿಂದ ಸಾಧ್ಯವಾಗದು. ಆದುದರಿಂದ ನಾವೆಲ್ಲರೂ ಒಮ್ಮುಖದಿಂದ ದಿವಸಕ್ಕೆ ಒಂದು ಬಾರಿಯಾದರೂ ಈ ಪ್ರಕಾಶನದ ಕಾರ್ಯಗಳು ನಿರ್ವಿಘ್ನವಾಗಿ ನೆರವೇರುವಂತೆ ಅನುಗ್ರಹಿಸಬೇಕೆಂದು ದಯಾಮಯನಾದ ಪರಮಾತ್ಮನನ್ನು ಪ್ರಾರ್ಥಿಸೋಣ.

—ಪ್ರಕಾಶಕರು.

ಮಹಾಭಾರತ-ಮೌಸಲಪರ್ವ-ಮೂವತ್ತೆರಡನೆಯ ಸಂಪುಟದ ವಿಷಯಾನುಕ್ರಮಣಿಕೆ

ಶ್ರೀಮಹಾಗಣಪತಯೇ ನಮಃ ಶ್ರೀಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಶ್ರೀಮನ್ಮಹಾಭಾರತ-ಮೌಸಲಪರ್ವ
ಮೂವತ್ತೆರಡನೆಯ ಸಂಪುಟ

೧ನೆಯ ಅಧ್ಯಾಯ ಮೌಸಲಪರ್ವ

ಯುಧಿಷ್ಠಿರನು ಅಪಶಕುನಗಳನ್ನು ಕಂಡುದು : ಯಾದವರು ವಿನಾಶಹೊಂದಿದ ಸಮಾಚಾರವನ್ನು ಕೇಳಿದುದು : ದ್ವಾರಕೆಯಲ್ಲಿ ಋಷಿಗಳ ಶಾಪದಿಂದ ಸಾಂಬನ ಹೊಟ್ಟೆಯಲ್ಲಿ ಒನಕೆಯು ಹುಟ್ಟಿದುದು : ಮದ್ಯಪಾನವನ್ನು ನಿಷೇಧಿಸಿ ಕಠೋರವಾದ ಆಜ್ಞೆ

ವೈಶಂಪಾಯನರು ಪ್ರಣವೋಚ್ಚಾರಣಪೂರ್ವಕವಾಗಿ ಕಥೆಯನ್ನು ಮುಂದುವರಿಸಿ ಹೇಳತೊಡಗಿದರು :

ಷಟ್ತ್ರಿಂಶೇ ತ್ವಥ ಸಮ್ಪ್ರಾಪ್ತೇ ವರ್ಷೇ ಕೌರವನನ್ದನಃ ।
ದದರ್ಶ ವಿಪರೀತಾನಿ ನಿಮಿತ್ತಾನಿ ಯುಧಿಷ್ಠಿರಃ ॥೧॥

“ಜನಮೇಜಯ! ಮಹಾಭಾರತದ ಯುದ್ಧವು ಮುಗಿದು ಮೂವತ್ತೈದು ವರ್ಷಗಳು ಕಳೆದು ಮೂವತ್ತಾರನೆಯ ವರ್ಷವು ಪ್ರಾರಂಭವಾದಾಗ ಕೌರವನಂದನನಾದ ಯುಧಿಷ್ಠಿರಮಹಾರಾಜನು ಅನೇಕ ರೀತಿಯ ಅಪಶಕುನಗಳನ್ನು ನೋಡಿದನು.

ವವುರ್ವಾತಾಶ್ಚ ನಿರ್ಘಾತಾ ರೂಕ್ಷಾಃ ಶರ್ಕರವರ್ಷಿಣಃ ।
ಅಪಸವ್ಯಾನಿ ಶಕುನಾ ಮಣ್ಡಲಾನಿ ಪ್ರಚಕ್ರಿರೇ ॥೨॥

ಸಿಡಿಲಿನಂತೆ ಘೋರಶಬ್ದದೊಡನೆ ಕಠಿನವಾದ ನುರುಜುಗಲ್ಲುಗಳನ್ನು ಸುರಿಸುವ ಬಿರುಗಾಳಿಗಳು ಬೀಸತೊಡಗಿದುವು. ಪಕ್ಷಿಗಳು ಬಲಗಡೆಯಿಂದ ಎಡದ ಕಡೆಗೆ ಮಂಡಲಾಕಾರವಾಗಿ (ಅಪ್ರದಕ್ಷಿಣವಾಗಿ) ಹಾರಿಹೋಗುತ್ತಿದ್ದುವು.

ಪ್ರತ್ಯಗೂಹುರ್ಮಹಾನದ್ಯೋ ದಿಶೋ ನೀಹಾರಸಂವೃತಾಃ ।
ಉಲ್ಕಾಶ್ಚಾಙ್ಗಾರವರ್ಷಿಣ್ಯಃ ಪ್ರಾಪತನ್ಗಗನಾದ್ಭುವಿ ॥೩॥

ದೊಡ್ಡ-ದೊಡ್ಡ ನದಿಗಳು ಪಶ್ಚಿಮಾಭಿಮುಖವಾಗಿ ಹರಿಯತೊಡಗಿದುವು. ದಿಕ್ಕುಗಳೆಲ್ಲವೂ ಹಿಮದಿಂದ ಆಚ್ಛಾದಿತವಾದುವು. ಉಲ್ಕೆಗಳು ಬೆಂಕಿಯನ್ನು ಕಾರುತ್ತಾ ಆಕಾಶದಿಂದ ಭೂಮಿಗೆ ಬೀಳುತ್ತಿದ್ದುವು.

ಆದಿತ್ಯೋ ರಜಸಾ ರಾಜನ್ಸಮವಚ್ಛನ್ನಮಣ್ಡಲಃ ।
ವಿರಶ್ಮಿರುದಯೇ ನಿತ್ಯಂ ಕಬನ್ಧೈಃ ಸಮದೃಶ್ಯತ ॥೪॥

ಸೂರ್ಯಮಂಡಲವು ಧೂಳಿನಿಂದ ತುಂಬಿಹೋಗಿದ್ದಿತು. ಉದಯಕಾಲದಲ್ಲಿ ಸೂರ್ಯನು ಕಿರಣಗಳಿಲ್ಲದವನಂತೆಯೇ (ತೇಜೋಹೀನವಾಗಿ) ಕಾಣುತ್ತಿದ್ದನು. ನಿತ್ಯವೂ ಅವನ ಬಿಂಬದಲ್ಲಿ ಮುಂಡಗಳು (ತಲೆಯಿಲ್ಲದ ದೇಹಗಳು) ಕಾಣಬರುತ್ತಿದ್ದುವು.

ಪರಿವೇಷಾಶ್ಚ ದೃಶ್ಯನ್ತೇ ದಾರುಣಾಶ್ಚನ್ದ್ರಸೂರ್ಯಯೋಃ ।
ತ್ರಿವರ್ಣಾಃ ಶ್ಯಾಮರೂಕ್ಷಾನ್ತಾಸ್ತಥಾ ಭಸ್ಮಾರುಣಪ್ರಭಾಃ ॥೫॥

ಸೂರ್ಯ-ಚಂದ್ರರ ಸುತ್ತಲೂ ದಾರುಣವಾದ ವರ್ತುಲಾಕಾರದ ಪ್ರಭೆಗಳು (ಪರಿವೇಶಗಳು) ಕಾಣುತ್ತಿದ್ದುವು. ಅವುಗಳಲ್ಲಿ ಮೂರು ಬಣ್ಣಗಳಿದ್ದುವು. ಕೆಳಗಿನ ಭಾಗವು ಶ್ಯಾಮಲವರ್ಣದಿಂದ ಕೂಡಿ ಒರಟಾಗಿರುವಂತೆ ಕಾಣುತ್ತಿದ್ದಿತು. ಮಧ್ಯಭಾಗವು ಬೂದುಬಣ್ಣದಿಂದಲೂ, ಮೇಲಿನ ಭಾಗವು ಎಣ್ಣೆಗೆಂಪಿನಿಂದಲೂ ಕೂಡಿದ್ದಿತು.

ಜನಮೇಜಯ! ಇವೇ ಅಲ್ಲದೇ ಭಯಸೂಚಕವಾದ, ಮನಸ್ಸಿಗೆ ಉದ್ವೇಗವನ್ನುಂಟುಮಾಡುವ ಇನ್ನೂ ಅನೇಕ ಉತ್ಪಾತಗಳು ಹಸ್ತಿನಾಪಟ್ಟಣದಲ್ಲಿ ಕಾಣಿಸಿಕೊಂಡುವು. ಉತ್ಪಾತಗಳು ಕಾಣಿಸಿಕೊಂಡ ಅತ್ಯಲ್ಪಕಾಲದಲ್ಲಿಯೇ ಯುಧಿಷ್ಠಿರನು, ವೃಷ್ಣಿವಂಶದವರು ಪರಸ್ಪರವಾಗಿ ಒನಕೆಯಿಂದ

ಕಾದಾಡಿ ವಿನಾಶಹೊಂದಿದರೆಂಬ ಘೋರವಾರ್ತೆಯನ್ನೂ, ಬಲರಾಮ-ಕೃಷ್ಣರು ದೇಹತ್ಯಾಗಮಾಡಿದರೆಂಬ ವಾರ್ತೆಯನ್ನೂ ಕೇಳಿ ಒಡನೆಯೇ ತನ್ನ ತಮ್ಮಂದಿರನ್ನು ಕರೆಯಿಸಿ–"ಕಿಂ ಕರಿಷ್ಯಾಮಃ"–"ಈ ಸಮಯದಲ್ಲಿ ನಾವೇನು ಮಾಡೋಣ?"–ಎಂದು ಪ್ರಶ್ನಿಸಿದನು.

ಬ್ರಾಹ್ಮಣರ ಶಾಪದ ಬಲದಿಂದ ಅಸ್ವತಂತ್ರರಾಗಿ ತಮ್ಮ-ತಮ್ಮಲ್ಲಿಯೇ ಜಗಳವಾಡುತ್ತಾ ವೃಷ್ಣಿಗಳು ವಿನಾಶಹೊಂದಿದರೆಂಬುದನ್ನು ಕೇಳಿ ಪಾಂಡವರೆಲ್ಲರೂ ಬಹಳ ದುಃಖಿತರಾದರು. ಸಮುದ್ರದ ಇಂಗುವಿಕೆಯಂತೆ ವಾಸುದೇವನ ನಿಧನವೂ ಅಸಂಭವವೆಂದು ಪಾಂಡವರು ಬಗೆದರು. ಶಾರ್ಙ್ಗ ಧನುರ್ಧಾರಿಯಾದ ಶ್ರೀಕೃಷ್ಣನೂ ನಿಧನಹೊಂದಿದನೆಂಬ ವಾರ್ತೆಯಲ್ಲಿ ವೀರರಾದ ಪಾಂಡವರಿಗೆ ನಂಬಿಕೆಬರಲಿಲ್ಲ. ವೃಷ್ಣಿಗಳ ನಿಧನವಾರ್ತೆಯನ್ನು ಕೇಳಿ ದುಃಖ-ಶೋಕಗಳಿಂದ ಯುಕ್ತರಾಗಿದ್ದ, ವಿಷಣ್ಣರಾಗಿದ್ದ, ಹತಾಶರಾಗಿದ್ದ ಪಾಂಡವರು ಯಾದವನಾಶಕಾರಣವಾದ ಒನಕೆಯ ಸಂಬಂಧವಾದ ಮಾತುಗಳನ್ನೇ ಆಡುತ್ತಾ ಕುಳಿತುಕೊಂಡರು."

ಜನಮೇಜಯನು ಪ್ರಶ್ನಿಸುತ್ತಾನೆ :

"ಪೂಜ್ಯರೇ! ಶ್ರೀಕೃಷ್ಣನು ನೋಡುತ್ತಿರುವಾಗಲೇ (ಅವನ ಕಣ್ಣೆದುರಿನಲ್ಲೇ) ವೃಷ್ಣಿಗಳಿಂದ ಕೂಡಿದ ಅಂಧಕರೂ, ಮಹಾರಥರೆಂದು ಪ್ರಸಿದ್ಧರಾದ ಭೋಜರೂ ಹೇಗೆ ನಿಧನಹೊಂದಿದರು?"

ವೈಶಂಪಾಯನರು ಹೇಳುತ್ತಾರೆ :

"ಜನಮೇಜಯ! ಮಹಾಭಾರತವು ಮುಗಿದನಂತರ ಮೂವತ್ತಾರನೆಯ ವರ್ಷದಲ್ಲಿ ವೃಷ್ಣಿವಂಶೀಯರಲ್ಲಿ ಅವರ ನೀತಿಯಿಂದ (ತಪ್ಪಿನಿಂದ) ಕಲಹವುಂಟಾಯಿತು. ಕಾಲಚೋದಿತರಾದ ಅವರೆಲ್ಲರೂ ಪರಸ್ಪರವಾಗಿ ತಮ್ಮ ತಮ್ಮಲ್ಲಿಯೇ ಒನಕೆಗಳಿಂದ ಬಡಿದಾಡಿ ನಿಧನಹೊಂದಿದರು."

ಜನಮೇಜಯನು ಪ್ರಶ್ನಿಸುತ್ತಾನೆ :

"ಪೂಜ್ಯರೇ! ಬ್ರಾಹ್ಮಣಶ್ರೇಷ್ಠರೇ! ವೀರರಾದ ವೃಷ್ಣಿಗಳು, ಅಂಧಕರು ಮತ್ತು ಭೋಜರು ಯಾರ ಶಾಪಕ್ಕೆ ಗುರಿಯಾಗಿ ವಿನಾಶಹೊಂದಿದರು? ಈ ವಿಷಯವನ್ನು ನನಗೆ ವಿಸ್ತಾರವಾಗಿ ಹೇಳುವ ಕೃಪೆಮಾಡಿರಿ."

ವೈಶಂಪಾಯನರು ಹೇಳುತ್ತಾರೆ :

“ಜನಮೇಜಯ! ಒಮ್ಮೆ ವಿಶ್ವಾಮಿತ್ರ, ಕಣ್ವ, ತಪೋಧನರಾದ ನಾರದರು–ಇವರೆಲ್ಲರೂ ದ್ವಾರಕೆಗೆ ಬಂದಿದ್ದರು. ಸಾರಣನೇ ಮೊದಲಾದ ವೃಷ್ಣಿಪ್ರಮುಖರು ಆ ಸಮಯದಲ್ಲಿ ದೈವದಂಡದಿಂದ ಪೀಡಿತರಾಗಿ ಸಾಂಬ ನಿಗೆ ಹೆಣ್ಣಿನ ವೇಷವನ್ನು ಹಾಕಿ ಚೆನ್ನಾಗಿ ಅಲಂಕರಿಸಿ ಮಹರ್ಷಿಗಳ ಬಳಿಗೆ ಕರೆದುಕೊಂಡು ಹೋಗಿ ಹೇಳಿದರು :



ಇಯಂ ಸ್ತ್ರೀ ಪುತ್ರಕಾಮಸ್ಯ ಬಭ್ರೋರಮಿತತೇಜಸಃ ।
ಋಷಯಃ ಸಾಧು ಜಾನೀತ ಕಿಮಿಯಂ ಜನಯಿಷ್ಯತಿ ॥೧೭॥

“ಮಹರ್ಷಿಗಳೇ! ಈ ವನಿತೆಯು ಮಹಾತೇಜಸ್ವಿಯಾದ, ಪುತ್ರ

ಕಾಮನಾದ ಬಭ್ರುವಿನ ಪತ್ನಿಯಾಗಿದ್ದಾಳೆ. ನೀವೆಲ್ಲರೂ ಭೂತ-ಭವಿಷ್ಯ ದ್ವರ್ತಮಾನಗಳನ್ನು ತಿಳಿದಿರುವ ಋಷಿಗಳಾಗಿರುವಿರಿ. ಆದುದರಿಂದ ಚೆನ್ನಾಗಿ ವಿವೇಚಿಸಿ ಇವಳ ಗರ್ಭದಲ್ಲಿ ಎಂತಹ ಶಿಶುವು ಹುಟ್ಟುವುದೆಂಬುದನ್ನು ಹೇಳಿರಿ."

ಜನಮೇಜಯ! ಹೀಗೆ ವೃಷ್ಣ್ಯಂಧಕರು ಋಷಿಗಳಿಗೆ ವಂಚನೆಯನ್ನು ಮಾಡಿ ತಿರಸ್ಕಾರಪೂರ್ವಕವಾದ ಮಾತುಗಳನ್ನು ಹೇಳಲಾಗಿ, ಆ ಮೂರ್ಖರಿಗೆ ಮುನಿಗಳು ಯಾವ ರೀತಿಯಲ್ಲಿ ಉತ್ತರಿಸಿದರೆಂಬುದನ್ನು ಹೇಳುವೆನು ; ಕೇಳು :

ದುರ್ಬುದ್ಧಿಯಿಂದ ಕೂಡಿದ ಆ ಮೂರ್ಖರ ವಂಚನಾಪೂರ್ಣವಾದ ವ್ಯವಹಾರದಿಂದ ಎಲ್ಲ ಮಹರ್ಷಿಗಳೂ ಕುಪಿತರಾದರು. ಅವರ ಕಣ್ಣುಗಳು ಕೋಪದಿಂದ ಕೆಂಪಾದುವು. ಪರಸ್ಪರವಾಗಿ ಒಬ್ಬರು-ಮತ್ತೊಬ್ಬರನ್ನು ನೋಡುತ್ತಾ ಹೇಳಿದರು :

ವೃಷ್ಣ್ಯನ್ಧಕವಿನಾಶಾಯ ಮುಸಲಂ ಘೋರಮಾಯಸಮ್ ।
ವಾಸುದೇವಸ್ಯ ದಾಯಾದಃ ಸಾಮ್ಬೋಽಯಂ ಜನಯಿಷ್ಯತಿ ॥೧೯॥

ಯೇನ ಯೂಯಂ ಸುದುರ್ವೃತ್ತಾ ನೃಶಂಸಾ ಜಾತಮನ್ಯವಃ ।
ಉಚ್ಛೇತ್ತಾರಃ ಕುಲಂ ಕೃತ್ಸ್ನಮೃತೇ ರಾಮಜನಾರ್ದನೌ ॥೨೦॥

ಸಮುದ್ರಂ ಯಾಸ್ಯತಿ ಶ್ರೀಮಾಂಸ್ತ್ಯಕ್ತ್ವಾ ದೇಹಂ ಹಲಾಯುಧಃ ।
ಜರಾ ಕೃಷ್ಣಂ ಮಹಾತ್ಮಾನಂ ಶಯಾನಂ ಭುವಿ ಭೇತ್ಸ್ಯತಿ ॥೨೧॥

"ವೃಷ್ಣಿವೀರರೇ! ವಾಸುದೇವನ ಮಗನಾದ ಈ ಸಾಂಬನು ವೃಷ್ಣಿಗಳ ಮತ್ತು ಅಂಧಕರ ವಿನಾಶಕ್ಕಾಗಿ ಘೋರವಾದ ಮತ್ತು ಲೋಹಮಯವಾದ ಒನಕೆಯನ್ನು ಹಡೆಯುತ್ತಾನೆ. ದುರಾಚಾರಿಗಳಾದ, ಕ್ರೂರಿಗಳಾದ, ಕೋಪಿಷ್ಠರಾದ ನೀವು ಆ ಒನಕೆಯಿಂದಲೇ–ಕೃಷ್ಣ-ಬಲರಾಮರಿಬ್ಬರನ್ನು ಬಿಟ್ಟು ಸಮಗ್ರವಾದ ಕುಲವನ್ನೇ ನಾಶಮಾಡುವಿರಿ. ಶ್ರೀಮಂತನಾದ ಬಲರಾಮನು ದೇಹವನ್ನು ತ್ಯಜಿಸಿ ಸಮುದ್ರವನ್ನು ಸೇರುತ್ತಾನೆ. ನೆಲದ ಮೇಲೆ ಮಲಗಿರುವಾಗ ಮಹಾತ್ಮನಾದ ಶ್ರೀಕೃಷ್ಣನನ್ನು 'ಜರಾ' ಎಂಬ ವ್ಯಾಧನು ಬಾಣದಿಂದ ಭೇದಿಸುತ್ತಾನೆ."

ವಿಶ್ವಾಮಿತ್ರಾದಿ ಮುನಿಗಳು ಹೀಗೆ ಹೇಳಿ ಶ್ರೀಕೃಷ್ಣನ ಬಳಿಗೆ ಹೋಗಿ ಅವನಿಗೆ ಎಲ್ಲವನ್ನೂ ನಿವೇದಿಸಿದರು. ಋಷಿಗಳ ಮಾತನ್ನು ಕೇಳಿ ಎಲ್ಲರ ಅಂತ್ಯವೂ ಹೇಗಾಗುವುದೆಂಬುದನ್ನು ಮೊದಲೇ ತಿಳಿದಿದ್ದ, ಬುದ್ಧಿವಂತನಾದ ಮಧುಸೂದನನು ವೃಷ್ಣಿವೀರರಿಗೆ–'ಭವಿತವ್ಯಂ ತಥಾ' 'ಋಷಿಗಳು ಹೇಗೆ ಹೇಳಿರುವರೋ ಅದು ಹಾಗೆಯೇ ಮುಂದೆ ನಡೆಯುತ್ತದೆ'–ಎಂದು ಹೇಳಿ ನಗರವನ್ನು ಪ್ರವೇಶಿಸಿದನು. ಪೂಜ್ಯನಾದ ಶ್ರೀಕೃಷ್ಣನು ಜಗತ್ತಿಗೇ ಪ್ರಭುವಾಗಿದ್ದರೂ (ಅಘಟಿತಘಟನಾಸಾಮರ್ಥ್ಯವುಳ್ಳವನಾಗಿದ್ದರೂ) ಯದುವಂಶೀಯರ ಅವಸಾನವು ಅನ್ಯಮಾರ್ಗದಿಂದ ಆಗಲು ಬಯಸಲಿಲ್ಲ. ಮರುದಿನ ಬೆಳಗಾಗುವ ವೇಳೆಗೆ ಸರಿಯಾಗಿ ಋಷಿಗಳು ಹೇಳಿದ್ದಂತೆ ಸಾಂಬನು ಒನಕೆಗೆ ಜನ್ಮವನ್ನಿತ್ತನು. ಆ ಒನಕೆಯಿಂದಲೇ ವೃಷ್ಣ್ಯಂಧಕಕುಲಗಳ ಪುರುಷರು ಭಸ್ಮೀಭೂತರಾಗಿಹೋದರು. ವೃಷ್ಣ್ಯಂಧಕರ ವಿನಾಶಕ್ಕಾಗಿಯೇ ಹುಟ್ಟಿದ ಆ ಒನಕೆಯು ಯಮನ ಮಹಾದೂತನಂತೆಯೇ ಕಾಣುತ್ತಿದ್ದಿತು. ಸಾಂಬನು ಋಷಿಗಳ ಶಾಪದ ಪರಿಣಾಮವಾಗಿ ಘೋರವಾದ ಮುಸಲವನ್ನು ಹಡೆಯುತ್ತಲೇ ವೃಷ್ಣಿವೀರರು ಆ ವಿಷಯವನ್ನು ಉಗ್ರಸೇನರಾಜನಿಗೆ ತಿಳಿಸಿ ಆ ಮುಸಲವನ್ನು ಅವನಿಗೆ ಒಪ್ಪಿಸಿದರು. ಅದನ್ನು ನೋಡುತ್ತಲೇ ಅತ್ಯಂತ ವಿಷಣ್ಣನಾದ ರಾಜನು ಅದನ್ನು ನುಣ್ಣಗೆ ಪುಡಿಮಾಡಿಸಿದನು. ರಾಜನ ಆಜ್ಞೆಯಂತೆಯೇ ಒನಕೆಯ ಆ ಪುಡಿಯನ್ನು ರಾಜಪುರುಷರು ಸಮುದ್ರಕ್ಕೆ ಹಾಕಿದರು. ಉಗ್ರಸೇನ, ಜನಾರ್ದನ, ಬಲರಾಮ ಮತ್ತು ಮಹಾತ್ಮನಾದ ಬಭ್ರು–ಇವರ ಆದೇಶದಂತೆ ನಗರದಲ್ಲಿ ಘೋಷಣೆಯನ್ನು ಹೀಗೆ ಸಾರಿಹೇಳಲಾಯಿತು.

ಅದ್ಯಪ್ರಭೃತಿ ಸರ್ವೇಷು ವೃಷ್ಣ್ಯನ್ಧಕಕುಲೇಷ್ವಿಹ ।
ಸುರಾಸವೋ ನ ಕರ್ತವ್ಯಃ ಸರ್ವೈರ್ನಗರವಾಸಿಭಿಃ ॥೨೯॥

"ಇಂದಿನಿಂದ ಮೊದಲ್ಗೊಂಡು ವೃಷ್ಣಿ ಮತ್ತು ಅಂಧಕರ ಕುಲದವರ ಮನೆಗಳಲ್ಲಿ ಮದ್ಯ-ಆಸವಗಳನ್ನು ತಯಾರಿಸಬಾರದು. ನಗರವಾಸಿಗಳಾದ ಎಲ್ಲರೂ ಈ ಆಜ್ಞೆಯನ್ನು ಕಟ್ಟುನಿಟ್ಟಾಗಿ ಪರಿಪಾಲಿಸಬೇಕು.

ಯಶ್ಚ ನೋಽವಿದಿತಂ ಕುರ್ಯಾತ್ಪೇಯಂ ಕಶ್ಚಿನ್ನರಃ ಕ್ವಚಿತ್ ।
ಜೀವನ್ಸ ಶೂಲಮಾರೋಹೇತ್ಸ್ವಯಂ ಕೃತ್ವಾ ಸಬಾನ್ಧವಃ ॥೩೦॥

ಯಾವನೇ ಮನುಷ್ಯನಾಗಲೀ ನಮಗೆ ತಿಳಿಯದಂತೆ ಮತ್ತುಬರಿಸುವ ಪಾನೀಯವನ್ನು (ಮದ್ಯವನ್ನು) ತಯಾರಿಸಿದ್ದೇ ಆದರೆ–ಅಂತಹ ಅಪರಾಧಕ್ಕಾಗಿ ಅವನು ಜೀವಿಸಿರುವಾಗಲೇ ತನ್ನ ಪತ್ನೀ-ಪುತ್ರರೇ ಮೊದಲಾದ ಬಾಂಧವರೊಡನೆ ಶೂಲಕ್ಕೇರಬೇಕಾಗುತ್ತದೆ.”

ಕ್ಲಿಷ್ಟವಾದ ಕಾರ್ಯಗಳನ್ನೂ ಅನಾಯಾಸವಾಗಿ ಮಾಡುವ ಬಲರಾಮನ ಆಜ್ಞೆಯನ್ನು ತಿಳಿದು ರಾಜನ ಭಯದಿಂದ ಎಲ್ಲರೂ–“ಇಂದಿನಿಂದ ಮಧ್ಯವನ್ನು ಕುಡಿಯಲೂ ಬಾರದು ; ತಯಾರಿಸಲೂ ಬಾರದು”–ಎಂಬ ನಿಯಮವನ್ನು ಮಾಡಿಕೊಂಡರು.

೧ನೆಯ ಅಧ್ಯಾಯವು ಮುಗಿಯಿತು.

೨ನೆಯ ಅಧ್ಯಾಯ ಮೌಸಲಪರ್ವ (ಮುಂದುವರಿದಿದೆ.)

ದ್ವಾರಕೆಯಲ್ಲಿ ಸಂಭವಿಸಿದ ಭಯಂಕರವಾದ ಉತ್ಪಾತಗಳನ್ನು ಕಂಡು ತೀರ್ಥಯಾತ್ರೆಗೆ ಹೋಗಲು ಯದುವಂಶೀಯರಿಗೆ ಶ್ರೀಕೃಷ್ಣನ ಆದೇಶ

ವೈಶಂಪಾಯನರು ಹೇಳುತ್ತಾರೆ :

ಏವಂ ಪ್ರಯತಮಾನಾನಾಂ ವೃಷ್ಣೀನಾಮನ್ಧಕೈಃ ಸಹ ।
ಕಾಲೋ ಗೃಹಾಣಿ ಸರ್ವೇಷಾಂ ಪರಿಚಕ್ರಾಮ ನಿತ್ಯಶಃ ॥೧॥

ಜನಮೇಜಯ! ಹೀಗೆ ವೃಷ್ಣಿವೀರರು ಅಂಧಕವೀರರೊಡನೆ ತಮಗೆ ಸಂಭವಿಸಲಿರುವ ಸಂಕಟದ ನಿವಾರಣೆಗಾಗಿ ಸತತವಾಗಿ ಪ್ರಯತ್ನಿಸುತ್ತಿರಲಾಗಿ, ಕಾಲನು ಎಲ್ಲರ ಮನೆಗಳನ್ನೂ ಅನುದಿನವೂ ಸುತ್ತುತ್ತಲೇ ಇದ್ದನು.

ಕರಾಲೋ ವಿಕಟೋ ಮುಣ್ಡಃ ಪುರುಷಃ ಕೃಷ್ಣಪಿಙ್ಗಲಃ ।
ಗೃಹಾಣ್ಯಾವೇಕ್ಷ್ಯ ವೃಷ್ಣೀನಾಂ ನಾದೃಶ್ಯತ ಕ್ವಚಿತ್ಕ್ವಚಿತ್ ॥೨॥

ಕಾಲನ ಸ್ವರೂಪವು ಕರಾಳವಾಗಿದ್ದಿತು. ಅಂಗಹೀನನಾಗಿದ್ದ, ಭಯಂಕರವಾದ ವೇಷವನ್ನು ಧರಿಸಿದ್ದ, ತಲೆಯನ್ನು ಬೋಳಿಸಿಕೊಂಡಿದ್ದ,

ಕಪ್ಪು ಮತ್ತು ಕಂದುಬಣ್ಣಗಳಿಂದ ಯುಕ್ತನಾಗಿದ್ದ ಕಾಲಪುರುಷನು ವೃಷ್ಣಿಗಳ ಮನೆಗಳನ್ನು ಪ್ರವೇಶಿಸಿ ಎಲ್ಲವನ್ನೂ ನೋಡುತ್ತಿದ್ದನು. ಕೆಲವೊಮ್ಮೆ ಅದೃಶ್ಯನೂ ಆಗುತ್ತಿದ್ದನು.

ಕಾಲಪುರುಷನನ್ನು ನೋಡಿದೊಡನೆಯೇ ಮಹಾಧನುಷ್ಮಂತರಾದ ವೃಷ್ಣಿಯೋಧರು ಲಕ್ಷ-ಲಕ್ಷ ಬಾಣಗಳಿಂದ ಅವನನ್ನು ಪ್ರಹರಿಸುತ್ತಿದ್ದರು. ಆದರೆ ಸರ್ವಪ್ರಾಣಿಗಳ ವಿನಾಶಕನಾದ ಅವನನ್ನು ಗಾಯಗೊಳಿಸಲು ಅವರಾರು ಸಮರ್ಥರಾಗಲಿಲ್ಲ. ವೃಷ್ಣಿ ಮತ್ತು ಅಂಧಕವೀರರ ವಿನಾಶಸೂಚಕವಾದ, ರೋಮಾಂಚಕರವಾದ, ಭಯಂಕರವಾದ ಅನೇಕ ಸುಂಟರಗಾಳಿಗಳು ಪ್ರತಿನಿತ್ಯವೂ ಹಲವಾರು ಬಾರಿ ಹುಟ್ಟಿಕೊಳ್ಳುತ್ತಿದ್ದುವು.

ವಿವೃದ್ಧಮೂಷಿಕಾ ರಥ್ಯಾ ವಿಭಿನ್ನಮಣಿಕಾಸ್ತಥಾ ।
ಕೇಶಾ ನಖಾಶ್ಚ ಸುಪ್ತಾನಾಮದ್ಯನ್ತೇ ಮೂಷಿಕೈರ್ನಿಶಿ ॥೫॥

ದ್ವಾರಕಾಪಟ್ಟಣದ ಹಾದಿಗಳಲ್ಲಿ ಇಲಿಗಳು ತುಂಬಿಕೊಂಡುಬಿಟ್ಟಿದ್ದುವು. ಮಡಕೆಗಳು ಇದ್ದಕ್ಕಿದ್ದಂತೆಯೇ ಒಡೆದುಹೋಗುತ್ತಿದ್ದುವು. ಇಲಿಗಳು ರಾತ್ರಿಯಲ್ಲಿ ಮಲಗಿದ್ದವರ ಕೂದಲುಗಳನ್ನೂ ಉಗುರುಗಳನ್ನೂ ತಿಂದುಹಾಕುತ್ತಿದ್ದುವು.

ಚೀಚೀಕೂಚೀತಿ ವಾಶನ್ತಿ ಸಾರಿಕಾ ವೃಷ್ಣಿವೇಶ್ಮಸು ।
ನೋಪಶಾಮ್ಯತಿ ಶಬ್ದಶ್ಚ ಸ ದಿವಾರಾತ್ರಮೇವ ಹಿ ॥೬॥

ವೃಷ್ಣಿವೀರರ ಮನೆಗಳಲ್ಲಿ ಸಾರಸಪಕ್ಷಿಗಳು 'ಚೀ-ಚೀ' 'ಕೂ-ಚೀ' ಎಂದು ಹಗಲು-ರಾತ್ರಿ ಕೂಗುತ್ತಲೇ ಇದ್ದುವು. ಒಂದು ಕ್ಷಣವಾದರೂ ಆ ಹಕ್ಕಿಗಳ ಶಬ್ದವು ನಿಲ್ಲುತ್ತಲೇ ಇರಲಿಲ್ಲ.

ಅನ್ವಕುರ್ವನ್ನುಲೂಕಾನಾಂ ಸಾರಸಾ ವಿರುತಂ ತಥಾ ।
ಅಜಾಃ ಶಿವಾನಾಂ ವಿರುತಮನ್ವಕುರ್ವತ ಭಾರತ ॥೭॥

ಭಾರತನೇ! ಸಾರಸಪಕ್ಷಿಗಳು ಗೂಬೆಗಳು ಕೂಗುವಂತೆಯೇ ಕೂಗುತ್ತಿದ್ದುವು. ಆಡುಗಳು ಗುಳ್ಳೇನರಿಗಳಂತೆ ಕೂಗುತ್ತಿದ್ದುವು.

ಪಾಣ್ಡುರಾ ರಕ್ತಪಾದಾಶ್ಚ ವಿಹಗಾಃ ಕಾಲಚೋದಿತಾಃ ।
ವೃಷ್ಣ್ಯನ್ಧಕಾನಾಂ ಗೇಹೇಷು ಕಪೋತಾ ವ್ಯಚರಂಸ್ತದಾ ॥೮॥

ಕಾಲನ ಪ್ರೇರಣೆಯಿಂದಾಗಿ ವೃಷ್ಣ್ಯಂಧಕರ ಮನೆಗಳಲ್ಲಿ ಬಿಳುಪಾದ ರೆಕ್ಕೆಗಳುಳ್ಳ ಕೆಂಪಾದ ಕಾಲುಗಳುಳ್ಳ ಪಾರಿವಾಳಗಳು ಹಾರಾಡುತ್ತಿದ್ದುವು.

ವ್ಯಜಾಯನ್ತ ಖರಾ ಗೋಷು ಕರಭಾಶ್ವತರೀಷು ಚ ।
ಶುನೀಷ್ವಪಿ ಬಿಡಾಲಾಶ್ಚ ಮೂಷಿಕಾ ನಕುಲೀಷು ಚ ॥೯॥

ಆ ಸಮಯದಲ್ಲಿ ಹಸುಗಳ ಹೊಟ್ಟೆಯಲ್ಲಿ ಕತ್ತೆಗಳು ಹುಟ್ಟುತ್ತಿದ್ದುವು. ಹೇಸರಗತ್ತೆಗಳ ಹೊಟ್ಟೆಯಲ್ಲಿ ಆನೆಗಳು ಹುಟ್ಟುತ್ತಿದ್ದುವು. ನಾಯಿಗಳ ಹೊಟ್ಟೆಯಲ್ಲಿ ಬೆಕ್ಕುಗಳು ಹುಟ್ಟುತ್ತಿದ್ದುವು. ಮುಂಗುಸಿಗಳ ಹೊಟ್ಟೆಯಲ್ಲಿ ಇಲಿಗಳು ಹುಟ್ಟುತ್ತಿದ್ದುವು. (ಸಹಜವಾದ ಪ್ರಕೃತಿವ್ಯಾಪಾರವೇ ತಿರುಗು ಮುರುಗಾಯಿತು.)

ನಾಪತ್ರಪನ್ತ ಪಾಪಾನಿ ಕುರ್ವನ್ತೋ ವೃಷ್ಣಯಸ್ತದಾ ।
ಪ್ರದ್ವಿಷನ್ಬ್ರಾಹ್ಮಣಾಂಶ್ಚಾಪಿ ಪಿತೄನ್ದೇವಾಂಸ್ತಥೈವ ಚ ॥೧೦॥

ಆ ಸಮಯದಲ್ಲಿ ವೃಷ್ಣಿವಂಶೀಯರು ಪಾಪಕರ್ಮಗಳನ್ನು ಮಾಡಿಯೂ ನಾಚಿಕೊಳ್ಳುತ್ತಿರಲಿಲ್ಲ. ಬ್ರಾಹ್ಮಣರನ್ನೂ, ಪಿತೃಗಳನ್ನೂ ಮತ್ತು ದೇವತೆಗಳನ್ನೂ ದ್ವೇಷಿಸುತ್ತಿದ್ದರು.

ಗುರೂಂಶ್ಚಾಪ್ಯವಮನ್ಯನ್ತೇ ನ ತು ರಾಮಜನಾರ್ದನೌ ।
ಪತ್ನ್ಯಃ ಪತೀನುಚ್ಚರನ್ತ ಪತ್ನೀಶ್ಚ ಪತಯಸ್ತಥಾ ॥೧೧॥

ವೃಷ್ಣಿಗಳು ಆ ಸಮಯದಲ್ಲಿ ಗುರುಜನರನ್ನು ಅವಮಾನಿಸುತ್ತಿದ್ದರು. ಆದರೆ ಬಲರಾಮ-ಕೃಷ್ಣರನ್ನು ಮಾತ್ರ ಅವಮಾನಿಸುತ್ತಿರಲಿಲ್ಲ. ಪತ್ನಿಯರು ಪತಿಗಳನ್ನು ಅತಿಕ್ರಮಿಸಿ ನಡೆಯುತ್ತಿದ್ದರು. ಅದೇ ರೀತಿಯಲ್ಲಿ ಗಂಡಂದಿರು ಪತ್ನಿಯರನ್ನೂ ಅತಿಕ್ರಮಿಸಿ ನಡೆಯುತ್ತಿದ್ದರು. (ಪುರುಷರೂ ಸ್ತ್ರೀಯರೂ ವ್ಯಭಿಚಾರಿಗಳಾಗಿದ್ದರು.)

ವಿಭಾವಸುಃ ಪ್ರಜ್ವಲಿತೋ ವಾಮಂ ವಿಪರಿವರ್ತತೇ ।
ನೀಲಲೋಹಿತಮಞ್ಜಿಷ್ಠಾ ವಿಸೃಜನ್ನರ್ಚಿಷಃ ಪೃಥಕ್ ॥೧೨॥

ಅಗ್ನಿಯು ಪ್ರಜ್ವಲಿಸುತ್ತಿರುವಾಗ ಜ್ವಾಲೆಗಳು ಎಡಕ್ಕೆ (ಅಪ್ರದಕ್ಷಿಣವಾಗಿ) ಸುತ್ತುತ್ತಿದ್ದುವು. ಅಗ್ನಿಯು ಒಮ್ಮೆ ನೀಲಿಬಣ್ಣದ ಜ್ವಾಲೆಗಳನ್ನೂ, ಮತ್ತೊಮ್ಮೆ ಕೆಂಪುಬಣ್ಣದ ಜ್ವಾಲೆಗಳನ್ನೂ, ಪುನಃ ರಕ್ತವರ್ಣದ ಜ್ವಾಲೆಗಳನ್ನೂ ಪ್ರತ್ಯೇಕ-ಪ್ರತ್ಯೇಕವಾಗಿ ಹೊರಸೂಸುತ್ತಿದ್ದನು.

ಉದಯಾಸ್ತಮನೇ ನಿತ್ಯಂ ಪುರ್ಯಾಂ ತಸ್ಯಾಂ ದಿವಾಕರಃ ।
ವ್ಯದೃಶ್ಯತಾಸಕೃತ್ಪುಮ್ಭಿಃ ಕಬನ್ಧೈಃ ಪರಿವಾರಿತಃ ॥೧೩॥

ಆ ನಗರದಲ್ಲಿ ವಾಸಮಾಡುವ ಜನರಿಗೆ ಸೂರ್ಯನು ಉದಯಾಸ್ತಗಳೆರಡರಲ್ಲಿಯೂ ಮುಂಡಗಳಿಂದ ಪರಿವೃತನಾಗಿರುವಂತೆ ಹಲವು ಬಾರಿ ಕಾಣಿಸಿಕೊಳ್ಳುತ್ತಿದ್ದನು.

ಮಹಾನಸೇಷು ಸಿದ್ಧೇಷು ಸಂಸ್ಕೃತೇಽತೀವ ಭಾರತ ।
ಆಹಾರ್ಯಮಾಣೇ ಕೃಮಯೋ ವ್ಯದೃಶ್ಯನ್ತ ಸಹಸ್ರಶಃ ॥೧೪॥

ಅಡಿಗೆಮನೆಗಳಲ್ಲಿ ಬಹಳವಾದ ಪರಿಕರಗಳಿಂದ ಸಿದ್ಧವಾದ ಅನ್ನವನ್ನು ಬಡಿಸಲು ಹೋದಾಗ ಆ ಅನ್ನದಲ್ಲಿ ಸಾವಿರಾರು ಹುಳುಗಳು ಕಾಣಿಸಿಕೊಳ್ಳುತ್ತಿದ್ದುವು.

ಪುಣ್ಯಾಹೇ ವಾಚ್ಯಮಾನೇ ತು ಜಪತ್ಸು ಚ ಮಹಾತ್ಮಸು ।
ಅಭಿಧಾವನ್ತಃ ಶ್ರೂಯನ್ತೇ ನ ಚಾದೃಶ್ಯತ ಕಶ್ಚನ ॥೧೫॥

ಪುಣ್ಯಾಹವಾಚನವಾಗುತ್ತಿರುವಾಗ, ಮಹಾತ್ಮರು ಜಪಗಳನ್ನು ಮಾಡುತ್ತಿರುವಾಗ–ಯಾರೋ ಓಡಾಡುವ ಶಬ್ದವು ಮಾತ್ರವೇ ಕೇಳುತ್ತಿದ್ದಿತು. ಅಲ್ಲಿ ಯಾರೂ ಕಾಣಿಸಿಕೊಳ್ಳುತ್ತಿರಲಿಲ್ಲ.

ಪರಸ್ಪರಂ ಚ ನಕ್ಷತ್ರಂ ಹನ್ಯಮಾನಂ ಪುನಃ ಪುನಃ ।
ಗ್ರಹೈರಪಶ್ಯನ್ಸರ್ವೇ ತೇ ನಾತ್ಮನಸ್ತು ಕಥಂಚನ ॥೧೬॥

ನಕ್ಷತ್ರಗಳು ಪರಸ್ಪರವಾಗಿ ಮತ್ತು ಗ್ರಹಗಳೊಡನೆ ಕಾದಾಡುತ್ತಾ ಕೊಂದು-ಕೊಲ್ಲಲ್ಪಡುತ್ತಿರುವುದನ್ನು ನಗರವಾಸಿಗಳೆಲ್ಲರೂ, ಪುನಃ ಪುನಃ ನೋಡುತ್ತಿದ್ದರು. ಆದರೆ ಅವರು ತಮಗೆ ಸಂಬಂಧಿಸಿದ ನಕ್ಷತ್ರಗಳನ್ನು ಆ ನಕ್ಷತ್ರಗಳ ಸಮೂಹಗಳಲ್ಲಿ ಯಾವಾಗಲೂ ಕಾಣುತ್ತಿರಲಿಲ್ಲ.

ನದನ್ತಂ ಪಾಞ್ಚಜನ್ಯಂ ಚ ವೃಷ್ಣ್ಯನ್ಧಕನಿವೇಶನೇ ।
ಸಮನ್ತಾತ್ಪರ್ಯವಾಶನ್ತ ರಾಸಭಾ ದಾರುಣಸ್ವರಾಃ ॥೧೭॥

ಶ್ರೀಕೃಷ್ಣನು ಪಾಂಚಜನ್ಯವನ್ನು ಊದುತ್ತಿರುವಾಗ ಆ ಶಬ್ದವನ್ನು ಕೇಳಿದೊಡನೆಯೇ ವೃಷ್ಣ್ಯಂಧಕರ ಮನೆಗಳ ಸುತ್ತಲೂ ಕತ್ತೆಗಳು ಭಯಂಕರ ಶಬ್ದದೊಡನೆ ಕಿರುಚುತ್ತಿದ್ದುವು.

ಈ ರೀತಿಯ ಅಶುಭಸೂಚಕವಾದ ದೃಶ್ಯಗಳನ್ನು ನೋಡಿ, ಕಾಲದ ವೈಪರೀತ್ಯವು ಸನ್ನಿಹಿತವಾಗಿರುವುದನ್ನು ಗಮನಿಸಿ, ಭಗವಾನ್ ಶ್ರೀಕೃಷ್ಣನು ತ್ರಯೋದಶಿಯೊಡನೆ ಅಮಾವಾಸ್ಯೆಯ ಯೋಗವಿರುವ ದಿನ ವೃಷ್ಣಿವೀರರನ್ನು ಸಂಧಿಸಿ ಹೇಳಿದನು :

ಚತುರ್ದಶೀ ಪಞ್ಚದಶೀ ಕೃತೇಯಂ ರಾಹುಣಾ ಪುನಃ ।
ಪ್ರಾಪ್ತೇ ವೈ ಭಾರತೇ ಯುದ್ಧೇ ಪ್ರಾಪ್ತಾ ಚಾದ್ಯ ಕ್ಷಯಾಯ ನಃ ॥

"ವೀರರೇ! ಇಂದು ಚತುರ್ದಶಿಯ ಅಮಾವಾಸ್ಯೆಯಾಗಿದೆ. (ಚತುರ್ದಶಿಯು ಕ್ಷೀಣತಿಥಿಯಾಗಿದೆ.) ಇಂದು ರಾಹುಗ್ರಸ್ತ ಸೂರ್ಯಗ್ರಹಣವೂ ಇದೆ. ಭಾರತದ ಯುದ್ಧಕಾಲದಲ್ಲಿ ಇಂತಹುದೇ ಪರಿಸ್ಥಿತಿಯು ಉಂಟಾಗಿದ್ದಿತು. ಈಗ ನಮ್ಮ ವಿನಾಶಕ್ಕಾಗಿ ಅಂದಿನ ಪರಿಸ್ಥಿತಿಯೇ ಮರುಕಳಿಸಿದೆ."

ಹೀಗೆ ಜನಾರ್ದನನು ಕಾಲವನ್ನು ಪರಿಶೀಲಿಸುತ್ತಿರುವಾಗಲೇ ಯುದ್ಧವು ಮುಗಿದು ಮೂವತ್ತಾರು ವರ್ಷಗಳಾಯಿತೆಂಬುದನ್ನು ಮನಗಂಡು ಹೇಳಿದನು:

ಪುತ್ರಶೋಕಾಭಿಸಂತಪ್ತಾ ಗಾನ್ಧಾರೀ ಹತಬಾನ್ಧವಾ ।
ಯದನುವ್ಯಾಜಹಾರಾರ್ತಾ ತದಿದಂ ಸಮುಪಾಗಮತ್ ॥೨೧॥

"ಬಂಧು-ಬಾಂಧವರೆಲ್ಲರನ್ನೂ ಕಳೆದುಕೊಂಡಿದ್ದ, ಪುತ್ರವಿನಾಶ ಶೋಕದಿಂದ ಪರಿತಪಿಸುತ್ತಿದ್ದ, ದುಃಖಪೀಡಿತಳಾಗಿದ್ದ ಗಾಂಧಾರಿಯು ಅಂದು ಏನು ಹೇಳಿದ್ದಳೋ–ಅದೀಗ ಸನ್ನಿಹಿತವಾಗಿದೆ.

ಹಿಂದೆ ಕೌರವ-ಪಾಂಡವರ ಸೈನ್ಯಗಳು ಯುದ್ಧಕ್ಕೆ ಸಜ್ಜಾಗಿ ನಿಂತಿದ್ದಾಗ ಸುದಾರುಣವಾದ ಉತ್ಪಾತಗಳನ್ನು ನೋಡಿ ಯುಧಿಷ್ಠಿರನು ಯಾವ ಮಾತನ್ನು ಹೇಳಿದ್ದನೋ–ಅದೇ ಈಗ ಸನ್ನಿಹಿತವಾಗಿದೆ."

ಜನಮೇಜಯ! ವೃಷ್ಣಿವೀರರೊಡನೆ ವಾಸುದೇವನು ಹೀಗೆ ಹೇಳಿ ಗಾಂಧಾರಿಯ ಮಾತನ್ನು ಸತ್ಯಗೊಳಿಸುವ ಇಚ್ಛೆಯಿಂದ ಯಾದವರೆಲ್ಲರನ್ನೂ ತೀರ್ಥಯಾತ್ರೆಗೆ ಸಿದ್ಧರಾಗುವಂತೆ ಆಜ್ಞಾಪಿಸಿದನು. ಪೂಜ್ಯನಾದ ಶ್ರೀಕೃಷ್ಣನ ಆಜ್ಞಾನುಸಾರವಾಗಿ ರಾಜಪುರುಷರು–'ತೀರ್ಥಯಾತ್ರೆಯ ಸಲುವಾಗಿ ಸಮುದ್ರದ ಬಳಿಗೆ ಹೋಗುವುದು ನಿಮ್ಮೆಲ್ಲರ ಕರ್ತವ್ಯವೂ ಆಗಿದೆ'–ಎಂದು ಸಾರಿದರು.

೨ನೆಯ ಅಧ್ಯಾಯವು ಮುಗಿಯಿತು.

೩ನೆಯ ಅಧ್ಯಾಯ ಮೌಸಲಪರ್ವ (ಮುಂದುವರಿದಿದೆ)

ಕೃತವರ್ಮನೇ ಮೊದಲಾದ ಯಾದವರು ಪರಸ್ಪರವಾಗಿ ಕಾದಾಡಿ ಮೃತರಾದುದು

ವೈಶಂಪಾಯನರು ಹೇಳುತ್ತಾರೆ:

ಕಾಲೀ ಸ್ತ್ರೀ ಪಾಣ್ಡುರೈರ್ದನ್ತೈಃ ಪ್ರವಿಶ್ಯ ಹಸತೀ ನಿಶಿ ।
ಸ್ತ್ರಿಯಃ ಸ್ವಪ್ನೇಷು ಮುಷ್ಣನ್ತೀ ದ್ವಾರಕಾಂ ಪರಿಧಾವತಿ ॥೧॥

ಜನಮೇಜಯ! ಕಪ್ಪುಬಣ್ಣದ ಸ್ತ್ರೀಯೊಬ್ಬಳು ರಾತ್ರಿಯ ಕಾಲದಲ್ಲಿ ಮನೆಗಳನ್ನು ಪ್ರವೇಶಿಸಿ, ಬಿಳುಪಾದ ತನ್ನ ಹಲ್ಲುಗಳನ್ನು ತೋರಿಸಿಕೊಂಡು ಕಿಲಕಿಲನೆ ನಗುತ್ತಾ ಸ್ತ್ರೀಯರನ್ನು ಅಪಹರಿಸುತ್ತಿರುವುದನ್ನು ದ್ವಾರಕಾಪುರ ನಿವಾಸಿಗಳು ಕನಸಿನಲ್ಲಿ ಕಾಣುತ್ತಿದ್ದರು.

ಅಗ್ನಿಹೋತ್ರನಿಕೇತೇಷು ವಾಸ್ತುಮಧ್ಯೇಷು ವೇಶ್ಮಸು ।
ವೃಷ್ಣ್ಯನ್ಧಕಾನಖಾದನ್ತ ಸ್ವಪ್ನೇ ಗೃಧ್ರಾ ಭಯಾನಕಾಃ ॥೨॥

ಅಗ್ನಿಹೋತ್ರಗೃಹಗಳಲ್ಲಿಯೂ, ಮಧ್ಯದಲ್ಲಿ ವಾಸ್ತುಪುರುಷನಿರುವ ಗೃಹಗಳಲ್ಲಿಯೂ ಭಯಂಕರವಾದ ರಣಹದ್ದುಗಳು ವೃಷ್ಣ್ಯಂಧಕವೀರರನ್ನು ಕಿತ್ತುತಿನ್ನುತ್ತಿದ್ದುದನ್ನು ದ್ವಾರಕಾಪುರವಾಸಿಗಳು ಸ್ವಪ್ನದಲ್ಲಿ ಕಾಣುತ್ತಿದ್ದರು.

ಅಲಂಕಾರಾಶ್ಚ ಛತ್ರಂ ಚ ಧ್ವಜಾಶ್ಚ ಕವಚಾನಿ ಚ ।
ಹ್ರಿಯಮಾಣಾನ್ಯದೃಶ್ಯನ್ತ ರಕ್ಷೋಭಿಃ ಸುಭಯಾನಕೈಃ ॥೩॥

ಆಭರಣಾದಿ ಅಲಂಕಾರಗಳನ್ನೂ, ಛತ್ರ-ಧ್ವಜ-ಕವಚಗಳನ್ನೂ ಮಹಾ

ಭಯಂಕರರಾದ ರಾಕ್ಷಸರು ಅಪಹರಿಸಿಕೊಂಡು ಹೋಗುತ್ತಿದ್ದುದನ್ನು ದ್ವಾರಕಾಪುರನಿವಾಸಿಗಳು ಕನಸಿನಲ್ಲಿ ಕಾಣುತ್ತಿದ್ದರು.

ತಚ್ಚಾಗ್ನಿದತ್ತಂ ಕೃಷ್ಣಸ್ಯ ವಜ್ರನಾಭಮಯೋಮಯಮ್ ।
ದಿವಮಾಚಕ್ರಮೇ ಚಕ್ರಂ ವೃಷ್ಣೀನಾಂ ಪಶ್ಯತಾಂ ತದಾ ॥೪॥

ನಾಭಿಯಲ್ಲಿ (ಮಧ್ಯದಲ್ಲಿ) ವಜ್ರವುಳ್ಳ, ಅಯೋಮಯವಾದ, ಅಗ್ನಿಯಿಂದ ಕೊಡಲ್ಪಟ್ಟಿದ್ದ ಶ್ರೀಕೃಷ್ಣನ ಚಕ್ರವು ವೃಷ್ಣಿವೀರರು ನೋಡುತ್ತಿದ್ದಂತೆಯೇ ದೇವಲೋಕಕ್ಕೆ ಹೊರಟುಹೋಯಿತು.

ಯುಕ್ತಂ ರಥಂ ದಿವ್ಯಮಾದಿತ್ಯವರ್ಣಂ
ಹಯಾ ಹರನ್ಪಶ್ಯತೋ ದಾರುಕಸ್ಯ ।
ತೇ ಸಾಗರಸ್ಯೋಪರಿಷ್ಟಾದವರ್ತ-
ನ್ಮನೋಜವಾಶ್ಚತುರೋ ವಾಜಿಮುಖ್ಯಾಃ ॥೫॥

ಸಕಲಸಾಮಗ್ರಿಗಳಿಂದಲೂ ಪರಿಪೂರ್ಣವಾಗಿದ್ದ, ದಿವ್ಯವಾದ, ಸೂರ್ಯವರ್ಣದ ಶ್ರೀಕೃಷ್ಣನ ರಥವನ್ನು-ರಥಕ್ಕೆ ಕಟ್ಟಿದ್ದ ಕುದುರೆಗಳು ಸಾರಥಿಯಾದ ದಾರುಕನು ನೋಡುತ್ತಿದ್ದಂತೆಯೇ ಒಯ್ದುಬಿಟ್ಟುವು. ಮನೋವೇಗಕ್ಕೆ ಸಮಾನವಾದ ವೇಗದಿಂದ ಕೂಡಿದ್ದ, ಶ್ರೇಷ್ಠವಾದ ಶೈಬ್ಯ-ಸುಗ್ರೀವಾದಿ ನಾಲ್ಕು ಕುದುರೆಗಳೂ ಸಮುದ್ರದ ಮೇಲ್ಭಾಗದಲ್ಲಿ ಹಾರಿಕೊಂಡು ಹೋಗುತ್ತಿದ್ದುವು.

ತಾಲಃ ಸುಪರ್ಣಶ್ಚ ಮಹಾಧ್ವಜೌ ತೌ
ಸುಪೂಜಿತೌ ರಾಮಜನಾರ್ದನಾಭ್ಯಾಮ್ ।
ಉಚ್ಚೈರ್ಜಹ್ರುರಪ್ಸರಸೋ ದಿವಾನಿಶಂ
ವಾಚಶ್ಚೋಚುರ್ಗಮ್ಯತಾಂ ತೀರ್ಥಯಾತ್ರಾ ॥೬॥

ಬಲರಾಮನಿಂದಲೂ ಮತ್ತು ಶ್ರೀಕೃಷ್ಣನಿಂದಲೂ ಅನುದಿನವೂ ಚೆನ್ನಾಗಿ ಪೂಜಿಸಲ್ಪಡುತ್ತಿದ್ದ, ತಾಲ ಮತ್ತು ಗರುಡರ ಚಿಹ್ನೆಗಳಿದ್ದ ಮಹಾಧ್ವಜಗಳನ್ನು ಅಪ್ಸರೆಯರು ಮೇಲಕ್ಕೆ ಹಾರಿಸಿಕೊಂಡು ಹೋಗುತ್ತಾ–'ತೀರ್ಥಯಾತ್ರೆಗೆ ಹೋಗಿರಿ–ತೀರ್ಥಯಾತ್ರೆಗೆ ಈಗಲೇ ಪ್ರಯಾಣಮಾಡಿರಿ'–ಎಂಬ ಮಾತನ್ನು ಹಗಲು-ರಾತ್ರಿಗಳಲ್ಲಿ ಪದೇಪದೇ ಗಟ್ಟಿಯಾಗಿ ಹೇಳುತ್ತಿದ್ದರು.

ಜನಮೇಜಯ! ಬಳಿಕ ಪುರುಷಶ್ರೇಷ್ಠರಾದ ವೃಷ್ಣ್ಯಂಧಕಮಹಾ ರಥರು ತಮ್ಮ ಪತ್ನಿಯರೊಡನೆ ತೀರ್ಥಯಾತ್ರೆಗೆ ಹೋಗಲು ಮನಸ್ಸು ಮಾಡಿದರು. ಅಂಧಕ-ವೃಷ್ಣಿಗಳು ತೀರ್ಥಯಾತ್ರೆಗೆ ಅನುಕೂಲವಾಗುವಂತೆ ಭಕ್ಷ್ಯ-ಭೋಜ್ಯ-ಪೇಯಗಳನ್ನೂ, ನಾನಾವಿಧವಾದ ಮದ್ಯಗಳನ್ನೂ, ಅನೇಕ ಬಗೆಯ ಮಾಂಸಗಳನ್ನೂ ಸಿದ್ಧಪಡಿಸಿಕೊಂಡರು. ಅನಂತರ ಶೋಭಾಸಂಪನ್ನ ರಾಗಿದ್ದ, ಪ್ರಚಂಡವಾದ ತೇಜಸ್ಸಿನಿಂದ ಕೂಡಿದ್ದ ಸೈನಿಕರು ರಥ-ಆನೆ-ಕುದುರೆ–ಮುಂತಾದ ವಾಹನಗಳ ಮೂಲಕ ನಗರದಿಂದ ಹೊರಟರು. ಪತ್ನಿಯೊಡನಿದ್ದ ಸಮಸ್ತಯಾದವರೂ ಪ್ರಭಾಸಕ್ಷೇತ್ರಕ್ಕೆ ಹೋಗಿ ತಮಗೆ ಅನುಕೂಲವೆನಿಸಿದ ಮನೆಗಳಲ್ಲಿ ಇಳಿದುಕೊಂಡರು. ಅವರ ಬಳಿ ಅಪಾರವಾದ ಭಕ್ಷ್ಯಗಳೂ ಪಾನೀಯಗಳೂ ಇದ್ದುವು. ಪರಮಾರ್ಥ ಜ್ಞಾನದಲ್ಲಿ ಕುಶಲನಾದ, ಯೋಗವಿದನಾದ ಉದ್ಧವನು ಯಾದವರೆಲ್ಲರೂ ಸಮುದ್ರದ ತೀರದಲ್ಲಿ ಕುಳಿತಿರುವುದನ್ನು ನೋಡಿದನು. ಅವರೆಲ್ಲರಿಂದಲೂ ಅನುಮತಿಯನ್ನು ಪಡೆದುಕೊಂಡು ಉದ್ಧವನು ಅಲ್ಲಿಂದ ಹೊರಟು ಹೋದನು. ಕೈಜೋಡಿಸಿ ಅಭಿವಾದನಮಾಡಿ ಪ್ರಯಾಣಹೊರಟ ಮಹಾತ್ಮ ನಾದ ಉದ್ಧವನನ್ನು ಹೋಗದಂತೆ ತಡೆಯಲು ಶ್ರೀಕೃಷ್ಣನು ಇಷ್ಟಪಡಲಿಲ್ಲ. ಅತ್ಯಲ್ಪಸಮಯದಲ್ಲಿಯೇ ವೃಷ್ಣಿಗಳ ವಿನಾಶವಾಗುವುದೆಂಬುದು ಶ್ರೀಕೃಷ್ಣನಿಗೆ ತಿಳಿದಿದ್ದಿತು. ಮಹಾಕಾಲನಿಂದ ಆಕ್ರಮಿಸಲ್ಪಟ್ಟಿದ್ದ ವೃಷ್ಣ್ಯಂಧಕಮಹಾ ರಥರು ತನ್ನ ತೇಜಸ್ಸಿನಿಂದ ಭೂಮ್ಯಾಕಾಶಗಳನ್ನು ಪ್ರಕಾಶಗೊಳಿಸುತ್ತಾ ಪ್ರಯಾಣಮಾಡುತ್ತಿದ್ದ ಉದ್ಧವನನ್ನು ನೋಡುತ್ತಲೇ ಇದ್ದರು. ಮಹಾತ್ಮ ರಾದ ಆ ವೃಷ್ಣ್ಯಂಧಕಮಹಾರಥರ ಮನೆಗಳಲ್ಲಿ ಬ್ರಾಹ್ಮಣರ ಸಲುವಾಗಿ ಸಿದ್ಧಪಡಿಸಿದ್ದ ಅನ್ನವನ್ನು ಸುರೆಯೊಡನೆ ಬೆರೆಸಿ, ಮದ್ಯದ ವಾಸನೆಯಿಂದ ಕೂಡಿದ್ದ ಅದನ್ನು ಯದುವೀರರು ಕಪಿಗಳಿಗೆ ತಿನ್ನಿಸಿದರು. ಅನಂತರ ಪ್ರಭಾಸಕ್ಷೇತ್ರದಲ್ಲಿ ನೂರಾರು ಬಗೆಯ ಭೇರೀ-ಮೃದಂಗಾದಿಗಳು ಮೊಳಗ ತೊಡಗಿದುವು. ನಟ-ನರ್ತಕರು ನೃತ್ಯವಾಡತೊಡಗಿದರು. ಆ ಮಧ್ಯದಲ್ಲಿ ತೀಕ್ಷ್ಣವಾದ ತೇಜಸ್ಸಿನಿಂದ ಕೂಡಿದ್ದ ಯಾದವರು ಮಹಾಪಾನವನ್ನು ಪ್ರಾರಂಭಿಸಿದರು. (ಸ್ವೇಚ್ಛೆಯಿಂದ ಮದ್ಯಪಾನಮಾಡತೊಡಗಿದರು.) ಶ್ರೀಕೃಷ್ಣನ ಸಮೀಪದಲ್ಲಿಯೇ ಕೃತವರ್ಮನೊಡನೆ ಬಲರಾಮನೂ,

ಸಾತ್ಯಕಿಯೂ, ಗದನೂ, ಬಭ್ರುವೂ ಮದ್ಯಪಾನಮಾಡಿದರು. ಕುಡಿದು ಕುಡಿದು ಮತ್ತನಾಗಿದ್ದ ಸಾತ್ಯಕಿಯು ಯಾದವರ ಆ ಪಾನಸಭೆಯ ಮಧ್ಯದಲ್ಲಿ ಕೃತವರ್ಮನನ್ನು ಹಾಸ್ಯಮಾಡುತ್ತಾ ಮತ್ತು ಅವಮಾನಗೊಳಿಸುತ್ತಾ ಹೇಳಿದನು:

ಕಃ ಕ್ಷತ್ರಿಯೋಽಹನ್ಯಮಾನಃ ಸುಪ್ತಾನ್ಹನ್ಯಾನ್ಮೃತಾನಿವ ।
ತನ್ನ ಮೃಷ್ಯನ್ತಿ ಹಾರ್ದಿಕ್ಯ ಯಾದವಾ ಯತ್ತ್ವಯಾ ಕೃತಮ್ ॥೧೯॥

“ಹಾರ್ದಿಕ್ಯನೇ! ನೀನಲ್ಲದೇ ಬೇರೆ ಯಾವ ಕ್ಷತ್ರಿಯನು ತಾನೇ ತನಗೆ ಯಾವ ಆಘಾತವೂ ಆಗದಿರುವಾಗಲೂ–ಸತ್ತವರಂತೆ ಅಚೇತನರಾಗಿ ಮಲಗಿದ್ದವರನ್ನು ಕೊಲ್ಲುತ್ತಿದ್ದನು? ನೀನು ಮಾಡಿದ ಕುತ್ಸಿತಕರ್ಮವನ್ನು ಯಾದವರೆಂದಿಗೂ ಕ್ಷಮಿಸುವುದಿಲ್ಲ.”

ಜನಮೇಜಯ! ಸಾತ್ಯಕಿಯು ಹೀಗೆ ಹೇಳುತ್ತಲೇ–ರಥಿಶ್ರೇಷ್ಠನಾದ ಪ್ರದ್ಯುಮ್ನನೂ ಅವನ ಮಾತನ್ನು ಪುರಸ್ಕರಿಸುತ್ತಾ ಹಾರ್ದಿಕ್ಯನನ್ನು ಅವಮಾನ ಗೊಳಿಸಿದನು. ಅದರಿಂದ ಪರಮಕ್ರುದ್ಧನಾದ ಕೃತವರ್ಮನು ತಿರಸ್ಕಾರ ಪೂರ್ವಕವಾಗಿ ಎಡಗೈಯನ್ನು ಮೇಲೆತ್ತಿ ನಿರ್ದೇಶಿಸುತ್ತಾ ಸಾತ್ಯಕಿಗೆ ಹೇಳಿದನು:

ಭೂರಿಶ್ರವಾಶ್ಛಿನ್ನಬಾಹುರ್ಯುದ್ಧೇ ಪ್ರಾಯಗತಸ್ತ್ವಯಾ ।
ವಧೇನ ಸುನೃಶಂಸೇನ ಕಥಂ ವೀರೇಣ ಪಾತಿತಃ ॥೨೦॥

“ಎಲವೋ ಸಾತ್ಯಕಿ! ಬೇರೆಯವರನ್ನು ತೆಗಳುವ ಮೊದಲು ನೀನು ಮಾಡಿದುದನ್ನೇ ಸ್ಮರಿಸು. ಯುದ್ಧದಲ್ಲಿ ಭೂರಿಶ್ರವನ ಕೈಗಳು ಕತ್ತರಿಸ ಲ್ಪಟ್ಟಿದ್ದುವು. ಮೇಲಾಗಿ ಅವನು ಮರಣಾಂತವಾದ ಉಪವಾಸವನ್ನು ಸಂಕಲ್ಪಿಸಿ ಭೂಮಿಯ ಮೇಲೆ ಕುಳಿತಿದ್ದನು. ಅಂತಹ ಪರಿಸ್ಥಿತಿಯಲ್ಲಿ ವೀರನಾದ ಮಹಾಕ್ರೂರಿಯಾದ ನೀನು ಅವನನ್ನೇಕೆ ವಧಿಸಿ ಕೆಳಕ್ಕೆ ಕೆಡವಿದೆ? (ಇದು ವೀರಕ್ಷತ್ರಿಯನ ಕಾರ್ಯವೇ?)”

ಕೃತವರ್ಮನು ಹೇಳಿದ ಮಾತನ್ನು ಕೇಳಿ ಶತ್ರುವೀರಹಂತಕನಾದ ಕೇಶವನು ಕೋಪಾವಿಷ್ಟನಾಗಿ ರೋಷಯುಕ್ತವಾದ ವಕ್ರದೃಷ್ಟಿಯಿಂದ ಕೃತ ವರ್ಮನನ್ನು ನೋಡಿದನು.

ಕೃತವರ್ಮನು ಹೇಳಿದುದಕ್ಕೆ ಪ್ರತಿಯಾಗಿ ಸಾತ್ಯಕಿಯು–ಸ್ಯಮಂತಕ ಮಣಿಯು ಸತ್ರಾಜಿತನಲ್ಲಿದ್ದಾಗ ಕೃತವರ್ಮನು ಹೇಗೆ ಶತಧನ್ವನನ್ನು ಪುಸಲಾಯಿಸಿ ಸತ್ರಾಜಿತನ ಕೊಲೆಗೆ ಕಾರಣನಾದನೆಂಬ ಕಥೆಯನ್ನು ಶ್ರೀಕೃಷ್ಣನಿಗೆ ಜ್ಞಾಪಿಸಿದನು. ಅದನ್ನು ಕೇಳಿದೊಡನೆಯೇ ಸತ್ರಾಜಿತನ ಮಗಳಾದ ಶ್ರೀಕೃಷ್ಣನ ಭಾರ್ಯೆಯಾದ ಸತ್ಯಭಾಮೆಯು ಅತ್ಯಂತಕುಪಿತಳಾಗಿ ಗಟ್ಟಿಯಾಗಿ ಅಳುತ್ತಾ ಶ್ರೀಕೃಷ್ಣನನ್ನು ಕೋಪಗೊಳಿಸುತ್ತಾ ಅವನ ಸಮೀಪಕ್ಕೆ ಹೋದಳು. ಆ ಸಮಯದಲ್ಲಿ ಕ್ರುದ್ಧನಾಗಿದ್ದ ಸಾತ್ಯಕಿಯು ಕೂಡಲೇ ಮೇಲೆದ್ದು ಸತ್ಯಭಾಮೆಯನ್ನು ಕುರಿತು ಹೇಳಿದನು :


ಪಞ್ಚಾನಾಂ ದ್ರೌಪದೇಯಾನಾಂ ಧೃಷ್ಟದ್ಯುಮ್ನಶಿಖಣ್ಡಿನೋಃ ।
ಏಷ ಗಚ್ಛಾಮಿ ಪದವೀಂ ಸತ್ಯೇನ ಚ ತಥಾ ಶಪೇ ।
ಸೌಪ್ತಿಕೇ ಯೇ ಚ ನಿಹತಾಃ ಸುಪ್ತಾ ಯೇನ ದುರಾತ್ಮನಾ ॥೨೬॥

ದ್ರೋಣಪುತ್ರಸಹಾಯೇನ ಪಾಪೇನ ಕೃತವರ್ಮಣಾ ।
ಸಮಾಪ್ತಮಾಯುರಸ್ಯಾದ್ಯ ಯಶಶ್ಚೈವ ಸುಮಧ್ಯಮೇ ॥೨೭॥

"ಸುಂದರವಾದ ನಡುವುಳ್ಳವಳೇ! ರಾತ್ರಿಯಲ್ಲಿ ಮಲಗಿ ನಿದ್ರಿಸುತ್ತಿದ್ದಾಗ ಅಶ್ವತ್ಥಾಮಸಹಾಯಕನಾದ, ದುರಾತ್ಮನಾದ, ಪಾಪಿಷ್ಠನಾದ ಕೃತವರ್ಮನಿಂದ ಯಾರು ಕೊಲ್ಲಲ್ಪಟ್ಟರೋ–ಅಂತಹ ದ್ರೌಪದಿಯ ಮಕ್ಕಳ ಮತ್ತು ಧೃಷ್ಟದ್ಯುಮ್ನ ಶಿಖಂಡಿಗಳ ಮಾರ್ಗವನ್ನೇ ನಾನೂ ಅನುಸರಿಸುತ್ತೇನೆ (ಅವರನ್ನು ಕೊಂದುದಕ್ಕೆ ಪ್ರತೀಕಾರವನ್ನು ಮಾಡುತ್ತೇನೆ.) ಹಾಗೆಯೇ ನಾನು ಸತ್ಯದ ಮೇಲೆ ಆಣೆಯಿಟ್ಟು ಈ ಮಾತನ್ನು ಹೇಳುತ್ತೇನೆ. ದುರಾತ್ಮನಾದ ಕೃತವರ್ಮನ ಆಯುಷ್ಯವೂ ಮತ್ತು ಯಶಸ್ಸೂ ಇಂದಿಗೆ ಸಮಾಪ್ತವಾಗಲಿದೆ."

ಹೀಗೆ ಹೇಳುತ್ತಾ ಕುಪಿತನಾದ ಸಾತ್ಯಕಿಯು ಶ್ರೀಕೃಷ್ಣನ ಸಮೀಪದಿಂದ ಮುನ್ನುಗ್ಗಿಹೋಗಿ ಖಡ್ಗದಿಂದ ಕೃತವರ್ಮನ ತಲೆಯನ್ನು ಕತ್ತರಿಸಿದನು. ಮದ್ಯಪಾನದಿಂದ ಪ್ರಮತ್ತನಾಗಿದ್ದ ಸಾತ್ಯಕಿಯು ಸಂಹಾರಕ್ರಿಯೆಯನ್ನು ಅಷ್ಟಕ್ಕೆ ನಿಲ್ಲಿಸಲಿಲ್ಲ. ಸುತ್ತಲೂ ನಿಂತಿದ್ದವರನ್ನೆಲ್ಲಾ ಕತ್ತಿಯಿಂದ ಕತ್ತರಿಸುತ್ತಿದ್ದನು. ಅದನ್ನು ನೋಡಿ ಶ್ರೀಕೃಷ್ಣನು ಅವ್ಯಾಹತವಾದ ಆ

ಕೊಲೆಗಳನ್ನು ತಪ್ಪಿಸಲು ಮುಂದಕ್ಕೆ ಧಾವಿಸಿದನು. ಅಷ್ಟರಲ್ಲಿಯೇ ಕಾಲ ವ್ಯತ್ಯಯದಿಂದ ಪ್ರಚೋದಿತರಾದ ಭೋಜರೂ ಮತ್ತು ಅಂಧಕರೂ ಒಗ್ಗಟ್ಟಾಗಿ ಸಾತ್ಯಕಿಯನ್ನು ಸುತ್ತುವರಿದು ನಿಂತರು. ಅತ್ಯಂತಕ್ರುದ್ಧರಾಗಿ ಸಾತ್ಯಕಿಯ ಮೇಲೆ ಬೀಳಲು ಹೋಗುತ್ತಿದ್ದ ಭೋಜಾಂಧಕರನ್ನು ನೋಡಿಯೂ ಕಾಲದ



ವೈಪರೀತ್ಯವನ್ನು ತಿಳಿದಿದ್ದ ಕಾರಣ ಮಹಾತೇಜಸ್ವಿಯಾದ ಶ್ರೀಕೃಷ್ಣನು ಕೋಪಗೊಳ್ಳಲಿಲ್ಲ.

ಭೋಜಾಂಧಕರೆಲ್ಲರೂ ಮದ್ಯವನ್ನು ಅತಿಯಾಗಿ ಕುಡಿದು ಮತ್ತರಾಗಿ ದ್ದರು. ಕಾಲಧರ್ಮನಾದ ಮೃತ್ಯುವಿನಿಂದ ಅವರು ಪ್ರಚೋದಿತರಾಗು ತ್ತಿದ್ದರು. ಆದುದರಿಂದ ಅವರು ಎಂಜಲು ಪಾತ್ರೆಗಳಿಂದಲೇ ಸಾತ್ಯಕಿಯನ್ನು

ಪ್ರಹರಿಸಿದರು. ಹೀಗೆ ಶೈನೇಯನನ್ನು ಪ್ರಹರಿಸುತ್ತಿರುವಾಗ ರುಕ್ಮಿಣಿಯ ಮಗನಾದ ಪ್ರದ್ಯುಮ್ನನು ಕೋಪಗೊಂಡು ಶಿನಿಯ ಮಗನನ್ನು ಬಿಡಿಸುವ ಆಶಯದಿಂದ ಅವರ ಮಧ್ಯದಲ್ಲಿ ಪ್ರವೇಶಿಸಿದನು. ಪ್ರದ್ಯುಮ್ನನು ಭೋಜರನ್ನೂ, ಸಾತ್ಯಕಿಯು ಅಂಧಕರನ್ನೂ ಎದುರಿಸಿ ನಿಂತರು. ಬಾಹುಬಲ ಯುಕ್ತರಾಗಿದ್ದ ಆ ಇಬ್ಬರು ವೀರರೂ ಪರಿಶ್ರಮಪೂರ್ವಕವಾಗಿ ವಿರೋಧಿಗಳನ್ನು ಎದುರಿಸುತ್ತಿದ್ದರು. ಎದುರಾಳಿಗಳು ಬಹುಸಂಖ್ಯೆಯಲ್ಲಿ ಇದ್ದುದರಿಂದ ಹೆಚ್ಚು ಕಾಲ ಅವರಿಗೆ ಸೆಣೆಸಾಡಲು ಸಾಧ್ಯವಾಗಲಿಲ್ಲ. ಶ್ರೀಕೃಷ್ಣನ ಸಮಕ್ಷದಲ್ಲಿಯೇ ಶೈನೇಯ-ಪ್ರದ್ಯುಮ್ನರಿಬ್ಬರೂ ಹತರಾದರು. ಮಿತ್ರನಾದ ಸಾತ್ಯಕಿಯೂ ಪುತ್ರನಾದ ಪ್ರದ್ಯುಮ್ನನೂ ಹತರಾದುದನ್ನು ನೋಡಿ ಕೇಶವನು ಕೋಪದಿಂದ ಸಮುದ್ರತೀರದಲ್ಲಿ ಸೊಂಪಾಗಿ ಬೆಳೆದಿದ್ದ ಒಂದು ಮುಷ್ಟಿ ಜೊಂಡುಹುಲ್ಲನ್ನು ಕಿತ್ತುಕೊಂಡನು. ಆ ಜೊಂಡುಹುಲ್ಲು ಶ್ರೀಕೃಷ್ಣನ ಕೈಗೆ ಬಂದೊಡನೆಯೇ ಅದು ವಜ್ರಾಯುಧಸದೃಶವಾದ ಲೋಹಮಯವಾದ ಘೋರವಾದ ಮುಸಲವಾಗಿ ಪರಿಣಮಿಸಿತು. ತನ್ನೆದುರಾಗಿ ಬಂದವರೆಲ್ಲರನ್ನೂ ಶ್ರೀಕೃಷ್ಣನು ಅದರಿಂದಲೇ ಪ್ರಹರಿಸಿ ಸಂಹರಿಸಿದನು. ಕಾಲನಿಂದಲೇ ಪ್ರೇರಿತರಾದ ಅಂಧಕರೂ, ಭೋಜರೂ, ಶೈನೇಯರೂ, ವೃಷ್ಣಿಗಳೂ–ಆ ತುಮುಲದಲ್ಲಿ ಒಬ್ಬರು ಮತ್ತೊಬ್ಬರನ್ನು ಮುಸಲಗಳಿಂದ ಪ್ರಹರಿಸುತ್ತಿದ್ದರು. ಯಾವನಾದರೂ ಕುಪಿತನಾಗಿ ಬೇರೆ ಆಯುಧವು ಸಿಕ್ಕದೇ ಸಮುದ್ರತೀರದಲ್ಲಿ ಬೆಳೆದಿದ್ದ ಆ ಹುಲ್ಲನ್ನೇ ಕಿತ್ತನೆಂದರೆ ಅದು ಒಡನೆಯೇ ವಜ್ರಾಯುಧದಂತೆ ಆಗಿಬಿಡುತ್ತಿತ್ತು.

ತೃಣಂ ಚ ಮುಸಲೀಭೂತಮಪಿ ತತ್ರ ವ್ಯದೃಶ್ಯತ ।
ಬ್ರಹ್ಮದಣ್ಡಕೃತಂ ಸರ್ವಮಿತಿ ತದ್ವಿದ್ಧಿ ಪಾರ್ಥಿವ ॥೩೯॥

ಜನಮೇಜಯ! ಆ ಸಮಯದಲ್ಲಿ ಅಲ್ಲಿದ್ದ ತೃಣವೂ ಕೂಡ ಮುಸಲಾಯುಧವಾಗಿಬಿಡುತ್ತಿದ್ದಿತು. ಅವೆಲ್ಲವೂ ಬ್ರಾಹ್ಮಣರ ಶಾಪದ ಪ್ರಭಾವವೆಂದೇ ತಿಳಿ.

ಯಾವನಾದರೂ ಅಲ್ಲಿದ್ದ ಹುಲ್ಲಿನಿಂದ ಹೊಡೆಯಬಾರದವರನ್ನು ಹೊಡೆದಾಗ ಅದು ದೃಢವೂ ವಜ್ರಾಯುಧಸದೃಶವೂ ಆದ ಒನಕೆಯಾಗಿ ಅಭೇದ್ಯವಾದುದನ್ನೂ ಭೇದಿಸುತ್ತಿದ್ದಿತು.

ಅವಧೀತ್ಪಿತರಂ ಪುತ್ರಃ ಪಿತಾ ಪುತ್ರಂ ಚ ಭಾರತ ।
ಮತ್ತಾಃ ಪರಿಪತನ್ತಿ ಸ್ಮ ಯೋಧಯನ್ತಃ ಪರಸ್ಪರಮ್ ।
ಪತಙ್ಗಾ ಇವ ಚಾಗ್ನೌ ತೇ ನಿಪೇತುಃ ಕುಕುರಾನ್ಧಕಾಃ ॥೪೨॥

ಆ ಘೋರತುಮುಲದಲ್ಲಿ ಮಗನು ತಂದೆಯನ್ನು ಕೊಲ್ಲುತ್ತಿದ್ದನು. ತಂದೆಯು ಮಗನನ್ನು ಕೊಲ್ಲುತ್ತಿದ್ದನು. ಪಾನಮತ್ತರಾಗಿದ್ದ ಅವರೆಲ್ಲರೂ ಪರಸ್ಪರವಾಗಿ ಯುದ್ಧಮಾಡುತ್ತಾ ಪ್ರಾಣಗಳನ್ನು ಕಳೆದುಕೊಂಡು ತೊಪ-ತೊಪನೆ ಬೀಳುತ್ತಿದ್ದರು. ಅಗ್ನಿಯಲ್ಲಿ ಬಿದ್ದು ಸಾಯುವ ಪತಂಗದ ಹುಳುಗಳಂತೆ–ಮದ್ಯಪಾನದಿಂದ ಮತ್ತರಾಗಿ ಯುದ್ಧಮಾಡುತ್ತಾ ಕುಕುರರೂ ಮತ್ತು ಅಂಧಕರೂ ಪ್ರಭಾಸಕ್ಷೇತ್ರದಲ್ಲಿ ಪ್ರಾಣಗಳನ್ನು ತೊರೆದು ಕೆಳಗುರುಳುತ್ತಿದ್ದರು.

ಹೀಗೆ ಪರಸ್ಪರವಾಗಿ ಬಡಿದಾಡಿ ಪ್ರಾಣಗಳನ್ನು ಕಳೆದುಕೊಳ್ಳುತ್ತಿದ್ದರೂ ಯಾವ ಯದುವೀರನಿಗೂ ಪ್ರಾಣಗಳನ್ನುಳಿಸಿಕೊಳ್ಳಲು ಪಲಾಯನಮಾಡಬೇಕೆಂಬ ಬುದ್ಧಿಯೇ ಉಂಟಾಗಲಿಲ್ಲ. ಕಾಲಚಕ್ರದ ಪರಿವರ್ತನೆಯನ್ನು ತಿಳಿದಿದ್ದ ಶ್ರೀಕೃಷ್ಣನು ಮುಸಲವನ್ನು ಹಿಡಿದು ಸುಮ್ಮನೇ ನಿಂತಿದ್ದನು. ತನ್ನ ಮಕ್ಕಳಾದ ಸಾಂಬ, ಚಾರುದೇಷ್ಣ, ಪ್ರದ್ಯುಮ್ನರೂ ಮತ್ತು ಮೊಮ್ಮಗ ಅನಿರುದ್ಧನೂ ಆ ಹೋರಾಟದಲ್ಲಿ ಪ್ರಾಣತೊರೆದುದನ್ನು ನೋಡಿ ಶ್ರೀಕೃಷ್ಣನಿಗೆ ತಡೆಯಲಾಗದಷ್ಟು ಕೋಪವುಂಟಾಯಿತು. ತಮ್ಮನಾದ ಗದನೂ ಅಸುನೀಗಿ ರಣಾಂಗಣದಲ್ಲಿ ಮಲಗಿರುವುದನ್ನು ಕಂಡ ಶಾರ್ಙ್ಗ-ಚಕ್ರ-ಗದಾಧರನಾದ ಶ್ರೀಕೃಷ್ಣನು ಮತ್ತಷ್ಟು ಖತಿಗೊಂಡು ಉಳಿದಿದ್ದ ಯಾದವರ ಸಂಹಾರವನ್ನು ತಾನೇ ಮಾಡಿಬಿಟ್ಟನು. ಶತ್ರುಗಳ ಪುರವನ್ನು ಜಯಿಸುವ ಸಾಮರ್ಥ್ಯವುಳ್ಳ ಮಹಾತೇಜಸ್ವಿಯಾದ ಬಭ್ರುವೂ ಮತ್ತು ದಾರುಕನೂ ಯಾದವರೆಲ್ಲರನ್ನೂ ನಿಶ್ಶೇಷಗೊಳಿಸುತ್ತಿದ್ದ ಶ್ರೀಕೃಷ್ಣನೊಡನೆ ಏನು ಹೇಳಿದರೆಂಬುದನ್ನು ಕೇಳು ; ಜನಮೇಜಯ!

ಭಗವನ್ನಿಹತಾಃ ಸರ್ವೇ ತ್ವಯಾ ಭೂಯಿಷ್ಠಶೋ ನರಾಃ ।
ರಾಮಸ್ಯ ಪದಮನ್ವಿಚ್ಛ ತತ್ರ ಗಚ್ಛಾಮ ಯತ್ರ ಸಃ ॥೪೭॥

“ಪೂಜ್ಯನೇ! ಯಾದವರೆಲ್ಲರೂ ಸತ್ತುಹೋದರು, ಇವರಲ್ಲಿ ಹೆಚ್ಚು

ಮಂದಿಯನ್ನು ನೀನೇ ಸಂಹರಿಸಿರುವೆ. ಈಗ ಬಲರಾಮನೆಲ್ಲಿರುವನೆಂಬುದನ್ನು ತಿಳಿಯುವವನಾಗು. ನಾವು ಮೂವರೂ ಬಲರಾಮನಿರುವಲ್ಲಿಗೆ ಹೋಗೋಣ"–ಹೀಗೆ ಬಭ್ರು-ದಾರುಕರು ಶ್ರೀಕೃಷ್ಣನಿಗೆ ಹೇಳಿದರು."

ಳನೆಯ ಅಧ್ಯಾಯವು ಮುಗಿಯಿತು.

೪ನೆಯ ಅಧ್ಯಾಯ — ಮೌಸಲಪರ್ವ (ಮುಂದುವರಿದಿದೆ.)

ಅರ್ಜುನನಿಗೆ ವಿಷಯವನ್ನು ತಿಳಿಸಲು ಹಸ್ತಿನಾಪಟ್ಟಣಕ್ಕೆ ದಾರುಕನ ಪ್ರಯಾಣ : ಬಭ್ರುವಿನ ಮರಣ : ಬಲರಾಮ–ಶ್ರೀಕೃಷ್ಣರ ಪರಂಧಾಮಗಮನ

ವೈಶಂಪಾಯನರು ಹೇಳುತ್ತಾರೆ :

ತತೋ ಯಯುರ್ದಾರುಕಃ ಕೇಶವಶ್ಚ
ಬಭ್ರುಶ್ಚ ರಾಮಸ್ಯ ಪದಂ ಪತನ್ತಃ ।
ಅಥಾಪಶ್ಯನ್ರಾಮಮನನ್ತವೀರ್ಯಂ
ವೃಕ್ಷೇ ಸ್ಥಿತಂ ಚಿನ್ತಯಾನಂ ವಿವಿಕ್ತೇ ॥೧॥

ಜನಮೇಜಯ! ಬಳಿಕ ದಾರುಕ-ಬಭ್ರು-ಕೇಶವರು ಬಲರಾಮನ ಪಾದಚಿಹ್ನೆಗಳನ್ನೇ ಅನುಸರಿಸಿಹೋಗಿ ನಿರ್ಜನವಾದ ಪ್ರದೇಶದಲ್ಲಿ ವೃಕ್ಷದ ಬುಡದಲ್ಲಿ ಸಮಾಲೋಚಿಸುತ್ತಾ ಕುಳಿತಿದ್ದ ಮಹಾವೀರ್ಯನಾದ ಬಲರಾಮನನ್ನು ನೋಡಿದರು.

ಮಹಾನುಭಾವನಾದ ಬಲರಾಮನ ಸಮೀಪಕ್ಕೆ ಹೋದನಂತರ ಶ್ರೀಕೃಷ್ಣನು–ಕುರುಗಳ ರಾಜಧಾನಿಯಾದ ಹಸ್ತಿನಾಪಟ್ಟಣಕ್ಕೆ ಹೋಗಿ ಅರ್ಜುನನಿಗೆ ಯಾದವರ ಈ ಮಹಾಸಂಹಾರದ ವಾರ್ತೆಯನ್ನು ತಿಳಿಸಿಬರುವಂತೆ ದಾರುಕನಿಗೆ ಆಜ್ಞಾಪಿಸಿದನು. "ಬ್ರಾಹ್ಮಣರ ಶಾಪದಿಂದ ಯಾದವರೆಲ್ಲರೂ ಹತರಾದರೆಂಬ ವಾರ್ತೆಯನ್ನು ಕೇಳಿದೊಡನೆಯೇ ಅರ್ಜುನನು ಇಲ್ಲಿಗೆ ಆಗಮಿಸಲಿ"–ಎಂದೂ ಶ್ರೀಕೃಷ್ಣನು ದಾರುಕನಿಗೆ ಹೇಳಿದನು.

ಶ್ರೀಕೃಷ್ಣನು ಹೀಗೆ ಹೇಳಲು ಯಾದವರ ಸಂಪೂರ್ಣವಿನಾಶದಿಂದ

ಬುದ್ಧಿಗೆಟ್ಟಿದ್ದ ದಾರುಕನು ರಥದಲ್ಲಿ ಕುಳಿತು ಹಸ್ತಿನಾಪಟ್ಟಣಕ್ಕೆ ಪ್ರಯಾಣ ಮಾಡಿದನು.

ದಾರುಕನು ಹಸ್ತಿನಾಪಟ್ಟಣಕ್ಕೆ ಪ್ರಯಾಣಮಾಡಿದ ಬಳಿಕ ಕೇಶವನು ತನ್ನ ಸಮೀಪದಲ್ಲಿ ಕುಳಿತಿದ್ದ ಬಭ್ರುವಿಗೆ ಹೀಗೆ ಹೇಳಿದನು :

"ಬಭ್ರು! ಹೆಂಗಸರನ್ನು ಸಂರಕ್ಷಿಸಲು ಕೂಡಲೇ ನೀನು ದ್ವಾರಕೆಗೆ ಹೋಗು. ಐಶ್ವರ್ಯಲೋಭದಿಂದ ದರೋಡೆಕಾರರು ಹೆಂಗಸರನ್ನು ಹಿಂಸಿಸದಿರುವಂತಾಗಲಿ."

ಶ್ರೀಕೃಷ್ಣನಿಂದ ಆಜ್ಞಪ್ತನಾದ ಬಭ್ರುವು ಸ್ತ್ರೀಯರನ್ನು ರಕ್ಷಿಸುವ ಸಲುವಾಗಿ ಹೊರಡುವುದರಲ್ಲಿದ್ದನು. ಆದರೆ ಅವನಿನ್ನೂ ಮದ್ಯಕುಡಿದ ಅಮಲಿನಲ್ಲೇ ಇದ್ದನು. ಜ್ಞಾತಿಗಳ ವಧೆಯಿಂದ ಶೋಕಪೀಡಿತನೂ ಆಗಿದ್ದನು. ಆದುದರಿಂದ ಕೇಶವನ ಸಮೀಪದಲ್ಲಿಯೇ ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ಪಡೆಯಲು ಕುಳಿತಿದ್ದ ಬಭ್ರುವಿಗೆ ದುರಂತವೊಂದು ಸಂಭವಿಸಿತು. ಬ್ರಾಹ್ಮಣರ ಶಾಪಪ್ರಭಾವದಿಂದ ಹುಟ್ಟಿದ್ದ, ಬೇಡನೊಬ್ಬನ ಕಬ್ಬಿಣದ ಬಾಣಕ್ಕೆ ತಗುಲಿಕೊಂಡಿದ್ದ ಮುಸಲವು ಹಠಾತ್ತಾಗಿ ಬಂದು ಬಭ್ರುವನ್ನು ಸಂಹರಿಸಿತು. ಹೀಗೆ ಬಭ್ರುವೂ ಹತನಾದುದನ್ನು ನೋಡಿ ಉಗ್ರತೇಜಸ್ವಿಯಾದ ಶ್ರೀಕೃಷ್ಣನು ಅಣ್ಣನಾದ ಬಲರಾಮನಿಗೆ ಹೇಳಿದನು :

"ಅಣ್ಣ! ನಾನು ಸ್ತ್ರೀಯರನ್ನು ಕುಟುಂಬವರ್ಗದವರಿಗೆ ಒಪ್ಪಿಸಿ ಬರುವವರೆಗೂ ನೀನು ಇಲ್ಲಿಯೇ ಇದ್ದು ನನ್ನ ಆಗಮನವನ್ನು ಪ್ರತೀಕ್ಷಿಸುತ್ತಿರು."

ಶ್ರೀಕೃಷ್ಣನು ಅಣ್ಣನಿಗೆ ಹೀಗೆ ಹೇಳಿ ದ್ವಾರಕೆಗೆ ಹೋಗಿ ತಂದೆಯಾದ ವಸುದೇವನಿಗೆ ಈ ಮಾತನ್ನು ಹೇಳಿದನು :

"ತಂದೆಯೇ! ಅರ್ಜುನನು ಬರುವವರೆಗೂ ನೀನು ನಮ್ಮ ಎಲ್ಲ ಸ್ತ್ರೀಯರನ್ನೂ ಸಂರಕ್ಷಿಸುತ್ತಿರು. ಬಲರಾಮನು ಅರಣ್ಯದ ಮಧ್ಯದಲ್ಲಿ ನನ್ನ ಆಗಮನವನ್ನೇ ನಿರೀಕ್ಷಿಸುತ್ತಾ ಕುಳಿತಿದ್ದಾನೆ. ನಾನೀಗಲೇ ಅಲ್ಲಿಗೆ ಹೋಗಿ ಅವನೊಡನೆ ಸೇರಿಕೊಳ್ಳುವೆನು. ಅಪ್ಪ! ನಾನೀಗ ಯಾದವರ ಸಂಹಾರವನ್ನು

ನೋಡಿದೆನು. ಈ ಹಿಂದೆ ನಾನು ಕುರುಕುಲಶ್ರೇಷ್ಠರಾದ ರಾಜರ ನಿಧನವನ್ನೂ ನೋಡಿದ್ದೆನು. ಯದುಗಳಿಲ್ಲದ ಯಾದವರ ಈ ನಗರವನ್ನು ನೋಡಲು ಕೂಡ ನಾನು ಅಶಕ್ತನಾಗಿದ್ದೇನೆ. ನನ್ನ ಮಾತನ್ನು ಕೇಳು. ನಾನೀಗ ಅರಣ್ಯಕ್ಕೆ ಹೋಗಿ ಬಲರಾಮನೊಡನೆ ತಪಸ್ಸನ್ನು ಮಾಡುತ್ತೇನೆ."



ಜನಮೇಜಯ! ಶ್ರೀಕೃಷ್ಣನು ಹೀಗೆ ಹೇಳಿ ವಸುದೇವನ ಪಾದಗಳಿಗೆ ತಲೆಬಾಗಿ ನಮಸ್ಕರಿಸಿ ಅವಸರದಿಂದ ಅರಣ್ಯಕ್ಕೆ ಹೊರಟುಹೋದನು.

ಅಷ್ಟರಲ್ಲಿಯೇ ನಗರದಲ್ಲಿದ್ದ ಸ್ತ್ರೀಯರ ಮತ್ತು ಮಕ್ಕಳ ರೋದನದ ಮಹಾಶಬ್ದವು ಪ್ರಾರಂಭವಾಯಿತು. ಅದನ್ನು ಕೇಳಿದ ಕೇಶವನು ಪುನಃ ಹಿಂದಿರುಗಿ ಬಂದು ರೋದನಮಾಡುತ್ತಿದ್ದ ಸ್ತ್ರೀಯರಿಗೆ ಹೇಳಿದನು :

"ವರನಾರಿಯರೇ! ಸವ್ಯಸಾಚಿಯಾದ ಅರ್ಜುನನು ಇಷ್ಟರಲ್ಲಿಯೇ ಇಲ್ಲಿಗೆ ಬಂದುಬಿಡುತ್ತಾನೆ. ನರಶ್ರೇಷ್ಠನಾದ ಅವನು ನಿಮ್ಮೆಲ್ಲರನ್ನೂ ಸಂಕಟದಿಂದ ಪಾರುಮಾಡುತ್ತಾನೆ."

ಜನಮೇಜಯ! ಕೇಶವನು ಹೀಗೆ ಹೇಳಿ ಅವರನ್ನು ಸಮಾಧಾನಗೊಳಿಸಿ ಅರಣ್ಯಕ್ಕೆ ಹೋಗಿ ನಿರ್ಜನವಾದೊಂದು ಸ್ಥಳದಲ್ಲಿ ಏಕಾಕಿಯಾಗಿ ಯೋಗಯುಕ್ತನಾಗಿ ಕುಳಿತಿದ್ದ ಬಲರಾಮನನ್ನು ನೋಡಿದನು.

ಅಥಾಪಶ್ಯದ್ಯೋಗಯುಕ್ತಸ್ಯ ತಸ್ಯ
ನಾಗಂ ಮುಖಾನ್ನಿಶ್ಚರನ್ತಂ ಮಹಾನ್ತಮ್ ।
ಶ್ವೇತಂ ಯಯೌ ಸ ತತಃ ಪ್ರೇಕ್ಷ್ಯಮಾಣೋ
ಮಹಾರ್ಣವೋ ಯೇನ ಮಹಾನುಭಾವಃ ॥೧೩॥

ಯೋಗಯುಕ್ತನಾಗಿದ್ದ ಬಲರಾಮನ ಮುಖದಿಂದ ದೊಡ್ಡದಾದ ಬಿಳಿಯ ಬಣ್ಣದ ಸರ್ಪವೊಂದು ಹೊರಬರುತ್ತಿರುವುದನ್ನು ಶ್ರೀಕೃಷ್ಣನು ಕಂಡನು. ಅವನು ನೋಡುತ್ತಿದ್ದಂತೆಯೇ ಮಹಾಪ್ರಭಾವಶಾಲಿಯಾದ ಆ ಸರ್ಪವು ಮಹಾಸಾಗರದ ಕಡೆಗೆ ಹೊರಟುಹೋಯಿತು.

ಸಹಸ್ರಶೀರ್ಷಃ ಪರ್ವತಾಭೋಗವರ್ಷ್ಮಾ
ರಕ್ತಾನನಃ ಸ್ವಾಂ ತನುಂ ತಾಂ ವಿಮುಚ್ಯ ।
ಸಮ್ಯಕ್ಚ ತಂ ಸಾಗರಃ ಪ್ರತ್ಯಗೃಹ್ಣಾ-
ನ್ನಾಗಾ ದಿವ್ಯಾಃ ಸರಿತಶ್ಚೈವ ಪುಣ್ಯಾಃ ॥೧೪॥

ಆ ಸರ್ಪವು ತನ್ನ ಪೂರ್ವರೂಪವನ್ನು ಪರಿತ್ಯಜಿಸಿ ನಿಜರೂಪದಿಂದ ಪ್ರಕಟವಾಯಿತು. ಅದಕ್ಕೆ ಸಾವಿರ ಹೆಡೆಗಳಿದ್ದುವು. ಅದರ ವಿಶಾಲವಾದ ಶರೀರವು ಪರ್ವತದಷ್ಟು ವಿಸ್ತಾರವಾಗಿರುವಂತೆ ಕಾಣುತ್ತಿದ್ದಿತು. ಮುಖವು ಕೆಂಪಾಗಿದ್ದಿತು. ಸಮುದ್ರವೇ ಮೂರ್ತಿಮತ್ತಾಗಿ ಬಂದು ಅನಂತನಾಗನನ್ನು ಸ್ವಾಗತಿಸಿತು. ಅಂತೆಯೇ ಅನೇಕದಿವ್ಯನಾಗಗಳೂ, ಪವಿತ್ರನದಿಗಳೂ ಆ ಅನಂತನಾಗನನ್ನು ಸ್ವಾಗತಿಸಿದುವು.

ಕರ್ಕೋಟಕೋ ವಾಸುಕಿಸ್ತಕ್ಷಕಶ್ಚ
ಪೃಥುಶ್ರವಾ ಅರುಣಃ ಕುಞ್ಜರಶ್ಚ ।
ಮಿಶ್ರೀ ಶಙ್ಖಃ ಕುಮುದಃ ಪುಣ್ಡರೀಕ-
ಸ್ತಥಾ ನಾಗೋ ಧೃತರಾಷ್ಟ್ರೋ ಮಹಾತ್ಮಾ ॥೧೫॥



ಹ್ರಾದಃ ಕ್ರಾಥಃ ಶಿತಿಕಣ್ಠೋಗ್ರತೇಜಾ-
ಸ್ತಥಾ ನಾಗೌ ಚಕ್ರಮನ್ದಾತಿಷಣ್ಡೌ ।
ನಾಗಶ್ರೇಷ್ಠೋ ದುರ್ಮುಖಶ್ಚಾಮ್ಬರೀಷಃ
ಸ್ವಯಂ ರಾಜಾ ವರುಣಶ್ಚಾಪಿ ರಾಜನ್ ॥೧೬॥

ಕಾರ್ಕೋಟಕ, ವಾಸುಕಿ, ತಕ್ಷಕ, ಪೃಥುಶ್ರವಸ, ಅರುಣ, ಕುಂಜರ, ಮಿಶ್ರೀ, ಶಂಖ, ಕುಮುದ, ಪುಂಡರೀಕ, ಮಹಾಮನಸ್ವಿಯಾದ ಧೃತರಾಷ್ಟ್ರ,

ಹ್ರಾದ, ಕ್ರಾಥ, ಶಿತಿಕಂಠ, ಉಗ್ರತೇಜಸ, ಚಕ್ರಮಂದ, ಅತಿಷಂಡ, ನಾಗಶ್ರೇಷ್ಠನಾದ ದುರ್ಮುಖ, ಅಂಬರೀಷ–ಇವೆಲ್ಲ ನಾಗಗಳೂ ಅನಂತ ನಾಗನನ್ನು ಸ್ವಾಗತಿಸಿದುವು. ವರುಣನೇ ಸಾಕ್ಷಾತ್ತಾಗಿ ಆ ಶ್ವೇತಸರ್ಪವನ್ನು ಸ್ವಾಗತಿಸಲು ಬಂದಿದ್ದನು.

ಅವರೆಲ್ಲರೂ ಮುಂದೆ ಬಂದು ಅನಂತನಾಗನನ್ನು ಸ್ವಾಗತಿಸಿ ಅಭಿನಂದಿಸಿದರು. ಬಳಿಕ ಅರ್ಘ್ಯ-ಪಾದ್ಯಾದಿಗಳನ್ನಿತ್ತು ಯಥಾಯೋಗ್ಯವಾಗಿ ಸತ್ಕರಿಸಿದರು.

ತನ್ನ ಅಣ್ಣನಾದ ಬಲರಾಮನು ನಿಜರೂಪವನ್ನು ಧರಿಸಿ ಹೊರಟು ಹೋಗಲಾಗಿ ದಿವ್ಯದರ್ಶಿಯಾದ, ಎಲ್ಲ ಗತಿಗಳನ್ನೂ ತಿಳಿದವನಾಗಿದ್ದ, ಶ್ರೇಷ್ಠವಾದ ತೇಜಸ್ಸಿನಿಂದ ಕೂಡಿದ್ದ ವಾಸುದೇವನು ಜನಶೂನ್ಯವಾಗಿದ್ದ ಆ ಅರಣ್ಯದಲ್ಲಿ ಅತ್ತಲಿತ್ತ ತಿರುಗಾಡುತ್ತಾ ಮುಂದಿನ ಆಗು-ಹೋಗುಗಳನ್ನು ಚಿಂತಿಸುತ್ತಾ ಭೂಮಿಯ ಮೇಲೆ ಕುಳಿತುಕೊಂಡನು. ಶ್ರೀಕೃಷ್ಣನಿಗೆ ಎಲ್ಲವೂ ಮೊದಲೇ ತಿಳಿದಿದ್ದಿತು. ಹಿಂದೆ ಗಾಂಧಾರಿಯು ಯಾವ ಮಾತನ್ನು ಹೇಳಿದ್ದಳೋ, ಉಚ್ಛಿಷ್ಟವಾದ ಪಾಯಸವನ್ನು ಮೈಗೆಲ್ಲಾ ಬಳಿದುಕೊಂಡಾಗ ದುರ್ವಾಸರು ಏನು ಹೇಳಿದ್ದರೋ–ಅವೆಲ್ಲವನ್ನೂ ಶ್ರೀಕೃಷ್ಣನು ಸ್ಮರಿಸಿಕೊಂಡನು. ಪುನಃ ಮಹಾನುಭಾವನಾದ ಶ್ರೀಕೃಷ್ಣನು ಅಂಧಕ-ವೃಷ್ಣಿಗಳ ಮತ್ತು ಕುರುಕುಲದ ವಿನಾಶವನ್ನು ಕುರಿತು ಯೋಚಿಸತೊಡಗಿದನು. ದ್ವಾಪರ-ಕಲಿಗಳ ಪ್ರಯಾಣಕಾಲವು ಪ್ರಾಪ್ತವಾಗಿರುವುದೆಂಬುದನ್ನು ತಿಳಿದ ಶ್ರೀಕೃಷ್ಣನು ಮೂರು ಲೋಕಗಳ ರಕ್ಷಣಾರ್ಥವಾಗಿಯೂ, ದುರ್ವಾಸರ ಮಾತನ್ನು ಪರಿಪಾಲಿಸುವ ಸಲುವಾಗಿಯೂ ತನ್ನ ಇಂದ್ರಿಯವೃತ್ತಿಗಳನ್ನು ನಿರೋಧಿಸಿದನು.

ದೇವೋಽಪಿ ಸನ್ದೇಹವಿಮೋಕ್ಷಹೇತೋ-
ರ್ನಿಮಿತ್ತಮೈಚ್ಛತ್ಸಕಲಾರ್ಥತತ್ತ್ವವಿತ್ ।
ಸ ಸಂನಿರುದ್ಧೇನ್ದ್ರಿಯವಾಙ್ಮನಾಸ್ತು
ಶಿಶ್ಯೇ ಮಹಾಯೋಗಮುಪೇತ್ಯ ಕೃಷ್ಣಃ ॥೨೧॥

ಶ್ರೀಕೃಷ್ಣನು ಸಕಲತತ್ತ್ವಾರ್ಥಗಳನ್ನೂ ತಿಳಿದಿದ್ದ ದೇವನೇ ಆಗಿದ್ದರೂ

ದೇಹವನ್ನು ತ್ಯಾಗಮಾಡಲು ಒಂದು ನಿಮಿತ್ತವನ್ನು ಬಯಸಿದನು. ಆ ಕಾರಣದಿಂದಲೇ ಇಂದ್ರಿಯಗಳನ್ನೂ, ಮಾತನ್ನೂ, ಮನಸ್ಸನ್ನೂ, ನಿರೋಧಿಸಿ ಮಹಾಯೋಗವನ್ನು ಆಶ್ರಯಿಸಿ ಮಲಗಿದನು.

ಆ ಸಮಯದಲ್ಲಿ ಜರಾ ಎಂಬ ಹೆಸರಿನ ಭಯಂಕರನಾದ ವ್ಯಾಧನು ಮೃಗಗಳನ್ನು ಬೇಟೆಮಾಡುವ ಸಲುವಾಗಿ ಅಲ್ಲಿಗೆ ಆಗಮಿಸಿದನು.

ಸ ಕೇಶವಂ ಯೋಗಯುಕ್ತಂ ಶಯಾನಂ
ಮೃಗಾಸಕ್ತೋ ಲುಬ್ಧಕಃ ಸಾಯಕೇನ ।
ಜರಾವಿಧ್ಯತ್ಪಾದತಲೇ ತ್ವರಾವಾಂ-
ಸ್ತಂ ಚಾಭಿತಸ್ತಜ್ಜಿಘೃಕ್ಷುರ್ಜಗಾಮ ॥೨೨॥

ಅಥಾಪಶ್ಯತ್ಪುರುಷಂ ಯೋಗಯುಕ್ತಂ
ಪೀತಾಮ್ಬರಂ ಲುಬ್ಧಕೋಽನೇಕಬಾಹುಮ್ ॥೨೩॥

ಬೇಟೆಯಲ್ಲಿಯೇ ಆಸಕ್ತನಾಗಿದ್ದ ಆ ವ್ಯಾಧನು ಸ್ವಲ್ಪದೂರದಲ್ಲಿ ಯೋಗಯುಕ್ತನಾಗಿ ಮಲಗಿದ್ದ ಶ್ರೀಕೃಷ್ಣನನ್ನು ಒಂದು ಮೃಗವೆಂದೇ ಭಾವಿಸಿ ಅವಸರದಿಂದ ಬಾಣವನ್ನು ಬಿಲ್ಲಿನಲ್ಲಿ ಹೂಡಿ ಪ್ರಹರಿಸಿದನು. ಆ ಬಾಣವು ಮಲಗಿದ್ದ ಶ್ರೀಕೃಷ್ಣನ ಪಾದವನ್ನು ಹೊಕ್ಕಿತು. ತಾನು ಕೊಂದೆನೆಂದು ಭಾವಿಸಿದ ಮೃಗವನ್ನು ಹಿಡಿಯಲು ವ್ಯಾಧನು ಲಕ್ಷ್ಯದ ಹತ್ತಿರಕ್ಕೆ ಹೋದನು. ಅಲ್ಲಿ ವ್ಯಾಧನು ಪೀತಾಂಬರವನ್ನು ಧರಿಸಿದ್ದ ಚತುರ್ಭುಜಗಳುಳ್ಳ, ಯೋಗಯುಕ್ತನಾದ ಪುರುಷನನ್ನು ನೋಡಿದನು.

ಮತ್ವಾತ್ಮಾನಂ ತ್ವಪರಾದ್ಧಂ ಸ ತಸ್ಯ
ಪಾದೌ ಜರಾ ಜಗೃಹೇ ಶಂಕಿತಾತ್ಮಾ ।
ಆಶ್ವಾಸಯಂಸ್ತಂ ಮಹಾತ್ಮಾ ತದಾನೀಂ
ಗಚ್ಛನ್ನೂರ್ಧ್ವಂ ರೋದಸೀ ವ್ಯಾಪ್ಯ ಲಕ್ಷ್ಮ್ಯಾ ॥೨೪॥

ಆ ಯೋಗಮೂರ್ತಿಯನ್ನು ನೋಡುತ್ತಲೇ ವ್ಯಾಧನು ತಾನು ಮಹಾಪರಾಧವನ್ನು ಮಾಡಿದೆನೆಂದು ಭಾವಿಸಿಕೊಂಡು ಭಯಗೊಂಡನು. ಶ್ರೀಕೃಷ್ಣನ ಎರಡು ಕಾಲುಗಳನ್ನೂ ವ್ಯಾಧನು ಹಿಡಿದುಕೊಂಡು ಕ್ಷಮೆಯನ್ನು ಯಾಚಿಸಿದನು. ದಯಾಮಯನಾದ, ಮಹಾತ್ಮನಾದ ಶ್ರೀಕೃಷ್ಣನು ಅವನಿಗೆ

ಆಶ್ವಾಸನೆಯನ್ನಿತ್ತು ಭೂಮ್ಯಂತರಿಕ್ಷಗಳನ್ನೂ ತನ್ನ ದಿವ್ಯತೇಜಸ್ಸಿನಿಂದ ಪ್ರಕಾಶಗೊಳಿಸುತ್ತಾ ಊರ್ಧ್ವಲೋಕಕ್ಕೆ (ತನ್ನ ಪರಮಪದಕ್ಕೆ) ಹೊರಟು ಹೋದನು.

ದಿವಂ ಪ್ರಾಪ್ತಂ ವಾಸವೋಽಥಾಶ್ವಿನೌ ಚ
ರುದ್ರಾದಿತ್ಯಾ ವಸವಶ್ಚಾಥ ವಿಶ್ವೇ ।
ಪ್ರತ್ಯುದ್ಯಯುರ್ಮುನಯಶ್ಚಾಪಿ ಸಿದ್ಧಾ
ಗನ್ಧರ್ವಮುಖ್ಯಾಶ್ಚ ಸಹಾಪ್ಸರೋಭಿಃ ॥೨೫॥

ಹೀಗೆ ಶ್ರೀಕೃಷ್ಣನು ಊರ್ಧ್ವಲೋಕಕ್ಕೆ ಹೋಗಲಾಗಿ ಅಲ್ಲಿ ಇಂದ್ರ, ಅಶ್ವಿನೀದೇವತೆಗಳು, ರುದ್ರರು, ಆದಿತ್ಯರು, ವಸುಗಳು, ವಿಶ್ವೇದೇವತೆಗಳು, ಮುನಿಗಳು, ಸಿದ್ಧರು, ಅಪ್ಸರೆಯರಿಂದ ಕೂಡಿದ ಗಂಧರ್ವಮುಖ್ಯರು– ಇವರೆಲ್ಲರೂ ಮುಂದಾಗಿ ಬಂದು ಶ್ರೀಕೃಷ್ಣನನ್ನು ಸ್ವಾಗತಿಸಿದರು.

ತತೋ ರಾಜನ್ಭಗವಾನುಗ್ರತೇಜಾ
ನಾರಾಯಣಃ ಪ್ರಭವಶ್ಚಾವ್ಯಯಶ್ಚ ।
ಯೋಗಾಚಾರ್ಯೋ ರೋದಸೀ ವ್ಯಾಪ್ಯ ಲಕ್ಷ್ಮ್ಯಾ
ಸ್ಥಾನಂ ಪ್ರಾಪ ಸ್ವಂ ಮಹಾತ್ಮಾಪ್ರಮೇಯಮ್ ॥೨೬॥

ಜನಮೇಜಯ! ಬಳಿಕ ಜಗತ್ತಿನ ಉತ್ಪತ್ತಿ ಮತ್ತು ಲಯಗಳಿಗೆ ಕಾರಣನಾದ, ಉಗ್ರತೇಜಸ್ವಿಯಾದ, ಯೋಗಾಚಾರ್ಯನಾದ, ಮಹಾತ್ಮನಾದ ಭಗವಾನ್ ನಾರಾಯಣನು ತನ್ನ ದಿವ್ಯಕಾಂತಿಯಿಂದ ಭೂಮ್ಯಾಕಾಶಗಳನ್ನು ಪ್ರಕಾಶಗೊಳಿಸುತ್ತಾ ಅಪ್ರಮೇಯವಾದ ತನ್ನ ಸ್ಥಾನಕ್ಕೆ ಹೋಗಿ ಸೇರಿದನು.

ತತೋ ದೇವೈರ್ಋಷಿಭಿಶ್ಚಾಪಿ ಕೃಷ್ಣಃ
ಸಮಾಗತಶ್ಚಾರಣೈಶ್ಚೈವ ರಾಜನ್ ।
ಗನ್ಧರ್ವಾಗ್ರ್ಯೈರಪ್ಸರೋಭಿರ್ವರಾಭಿಃ
ಸಿದ್ಧೈಃ ಸಾಧ್ಯೈಶ್ಚಾನತೈಃ ಪೂಜ್ಯಮಾನಃ ॥೨೭॥

ನರೇಶ್ವರನೇ! ಬಳಿಕ ಭಗವಾನ್ ಶ್ರೀಕೃಷ್ಣನು ಶ್ರೇಷ್ಠರಾದ ಗಂಧರ್ವ ರಿಂದಲೂ, ಸುಂದರಿಯರಾದ ಅಪ್ಸರೆಯರಿಂದಲೂ, ಸಿದ್ಧರಿಂದಲೂ, ಸಾಧ್ಯ

ರಿಂದಲೂ ವಿನಯಪ್ರಭಾವದಿಂದ ಪೂಜಿಸಲ್ಪಟ್ಟವನಾಗಿ ದೇವತೆಗಳೊಡನೆಯೂ, ಋಷಿಗಳೊಡನೆಯೂ, ಚಾರಣರೊಡನೆಯೂ ಸೇರಿ ಆನಂದಿಸಿದನು.

ತಂ ವೈ ದೇವಾಃ ಪ್ರತ್ಯನನ್ದನ್ತ ರಾಜ-
ನ್ಮುನಿಶ್ರೇಷ್ಠಾ ಋಗ್ಭಿರಾನರ್ಚುರೀಶಮ್ ।
ತಂ ಗನ್ಧರ್ವಾಶ್ಚಾಪಿ ತಸ್ಥುಃ ಸ್ತುವನ್ತಃ
ಪ್ರೀತ್ಯಾ ಚೈನಂ ಪುರುಹೂತೋಽಭ್ಯನನ್ದತ್ ॥೨೮॥

ಜನಮೇಜಯ! ಶ್ರೀಕೃಷ್ಣನನ್ನು ಎಲ್ಲ ದೇವತೆಗಳೂ ಅಭಿನಂದಿಸಿದರು. ಮುನಿಶ್ರೇಷ್ಠರು ಋಕ್ಕುಗಳ ಮೂಲಕವಾಗಿ ಅವನನ್ನು ಪೂಜಿಸಿದರು. ಗಂಧರ್ವರು ಅವನ ಸಮೀಪದಲ್ಲಿ ನಿಂತು ಸ್ತೋತ್ರಮಾಡಿದರು. ಇಂದ್ರನೂ ಪರಮಪ್ರೀತಿಯಿಂದ ಶ್ರೀಕೃಷ್ಣನನ್ನು ಅಭಿನಂದಿಸಿದನು."

ಳನೆಯ ಅಧ್ಯಾಯವು ಮುಗಿಯಿತು.

೫ನೆಯ ಅಧ್ಯಾಯ ಮೌಸಲಪರ್ವ (ಮುಂದುವರಿದಿದೆ.)

ದ್ವಾರಕೆಗೆ ಅರ್ಜುನನ ಆಗಮನ : ಶ್ರೀಕೃಷ್ಣನ ಪತ್ನಿಯರ ದುಃಸ್ಥಿತಿಯನ್ನು ನೋಡಿ ಅರ್ಜುನನ ಪರಿತಾಪ

ವೈಶಂಪಾಯನರು ಹೇಳುತ್ತಾರೆ :

ದಾರುಕೋಽಪಿ ಕುರೂನ್ಗತ್ವಾ ದೃಷ್ಟ್ವಾ ಪಾರ್ಥಾನ್ಮಹಾರಥಾನ್ ।
ಆಚಷ್ಟ ಮೌಸಲೇ ವೃಷ್ಣೀನನ್ಯೋನ್ಯೇನೋಪಸಂಹೃತಾನ್ ॥೧॥

ಜನಮೇಜಯ! ಇತ್ತಲಾಗಿ ದಾರುಕನು ಕುರುಗಳ ರಾಜಧಾನಿಯಾದ ಹಸ್ತಿನಾಪಟ್ಟಣಕ್ಕೆ ಹೋಗಿ ಮಹಾರಥರಾದ ಪಾರ್ಥರನ್ನು ಸಂಧಿಸಿ ವೃಷ್ಣಿವಂಶೀಯರೆಲ್ಲರೂ ಮೌಸಲಯುದ್ಧದಲ್ಲಿ ಪರಸ್ಪರವಾಗಿ ಕಾದಾಡಿ ಮಡಿದರೆಂಬ ವಾರ್ತೆಯನ್ನು ಹೇಳಿದನು.

ವೃಷ್ಣಿ-ಭೋಜ-ಅಂಧಕ ಮತ್ತು ಕುಕುರವಂಶೀಯರೆಲ್ಲರೂ ವಿನಾಶ ಹೊಂದಿದುದನ್ನು ಕೇಳಿ ಪಾಂಡವರು ಶೋಕಸಂತಪ್ತರಾದರು. ಅವರ ಮನಸ್ಸಿಗೆ ತುಂಬಾ ತ್ರಾಸವುಂಟಾಯಿತು.

ಶ್ರೀಕೇಶವನ ಪ್ರಿಯಸಖನಾದ ಅರ್ಜುನನು ತನ್ನ ಸಹೋದರರ ಅನುಮತಿಯನ್ನು ಪಡೆದು ಸೋದರಮಾವನನ್ನು (ವಸುದೇವನನ್ನು) ನೋಡುವ ಸಲುವಾಗಿ ದ್ವಾರಕೆಗೆ ಪ್ರಯಾಣಮಾಡಿದನು. ಪ್ರಯಾಣಮಾಡುತ್ತಿದ್ದಾಗ ದಾರುಕನೊಡನೆ 'ನೇದಮಸ್ತಿ'–'ಸಮಸ್ತಯದುವಂಶೀಯರ ವಿನಾಶವು ಹೀಗೆ ಆಗಿರಲಾರದು ; ಇದು ಅಸಂಭವ' –ಎಂದೂ ಹೇಳಿದನು.

ಜನಮೇಜಯ! ವೀರನಾದ ಅರ್ಜುನನು ದಾರುಕನೊಡನೆ ವೃಷ್ಣಿಗಳ ನಿವಾಸಸ್ಥಾನಕ್ಕೆ ಹೋದನು. ಆ ಸಮಯದಲ್ಲಿ ದ್ವಾರಕೆಯು ವಿಧವೆಯಾದ ನಾರಿಯಂತೆಯೇ ಕಾಣುತ್ತಿದ್ದಿತು.

ಯಾಃ ಸ್ಮ ತಾ ಲೋಕನಾಥೇನ ನಾಥವತ್ಯಃ ಪುರಾಭವನ್ ।
ತಾಸ್ತ್ವನಾಥಾಸ್ತದಾ ನಾಥಂ ಪಾರ್ಥಂ ದೃಷ್ಟ್ವಾ ವಿಚುಕ್ರುಶುಃ ।
ಷೋಡಶಸ್ತ್ರೀಸಹಸ್ರಾಣಿ ವಾಸುದೇವಪರಿಗ್ರಹಃ ॥೫॥

ಯಾರು ಆ ಮೊದಲು ಲೋಕಕ್ಕೇ ನಾಥನಾಗಿದ್ದ ಶ್ರೀಕೃಷ್ಣನಿಂದ ಸನಾಥರಾಗಿದ್ದರೋ-ಅಂತಹ ಹದಿನಾರು ಸಾವಿರ ಮಂದಿ ಶ್ರೀಕೃಷ್ಣನ ಅನಾಥ ಸ್ತ್ರೀಯರು, ಅರ್ಜುನನು ನಾಥನಾಗಿ (ರಕ್ಷಕನಾಗಿ) ಬಂದುದನ್ನು ನೋಡಿ ಗಟ್ಟಿಯಾಗಿ ಆಕ್ರಂದನಮಾಡತೊಡಗಿದರು.

ಅರ್ಜುನನನ್ನು ನೋಡಿದೊಡನೆಯೇ ಅವರೆಲ್ಲರೂ ಗಟ್ಟಿಯಾಗಿ ಆರ್ತನಾದಗಳನ್ನು ಮಾಡಿದರು. ಅವರನ್ನು ನೋಡಿದೊಡನೆಯೇ ಅರ್ಜುನನ ಕಣ್ಣುಗಳಲ್ಲಿಯೂ ನೀರು ತುಂಬಿಕೊಂಡಿತು. ಶ್ರೀಕೃಷ್ಣನಿಂದಲೂ ಮಕ್ಕಳಿಂದಲೂ ವಿಹೀನರಾಗಿದ್ದ ಕೃಷ್ಣನ ಭಾರ್ಯೆಯರನ್ನು ಅರ್ಜುನನು ನೋಡಲೂ ಸಮರ್ಥನಾಗಲಿಲ್ಲ.

ಸ ತಾಂ ವೃಷ್ಣ್ಯನ್ಧಕಜಲಾಂ ಹಯಮೀನಾಂ ರಥೋಡುಪಾಮ್ ।
ವಾದಿತ್ರರಥಘೋಷೌಘಾಂ ವೇಶ್ಮತೀರ್ಥಮಹಾಹ್ರದಾಮ್ ॥೮॥

ರತ್ನಶೈವಲಸಂಘಾತಾಂ ವಜ್ರಪ್ರಾಕಾರಮಾಲಿನೀಮ್ ।
ರಥ್ಯಾಸ್ರೋತೋ ಜಲಾವರ್ತಾಂ ಚತ್ವರಸ್ತಿಮಿತಹ್ರದಾಮ್ ॥೯॥

ರಾಮಕೃಷ್ಣಮಹಾಗ್ರಾಹಾಂ ದ್ವಾರಕಾಂ ಸರಿತಂ ತದಾ ।
ಕಾಲಪಾಶಗ್ರಹಾಂ ಭೀಮಾಂ ನದೀಂ ವೈತರಣೀಮಿವ ॥೧೦॥

ದದರ್ಶ ವಾಸವಿರ್ಧೀಮಾನ್ವಿಹೀನಾಂ ವೃಷ್ಣಿಪುಙ್ಗವೈಃ ।
ಗತಶ್ರಿಯಂ ನಿರಾನನ್ದಾಂ ಪದ್ಮಿನೀಂ ಶಿಶಿರೇ ಯಥಾ ॥೧೧॥

ದ್ವಾರಕೆಯು ಒಂದು ನದಿಯಂತಿದ್ದಿತು. ವೃಷ್ಣಿ ಮತ್ತು ಅಂಧಕ ವಂಶೀಯರೇ ಅದರ ನೀರಿನ ರೂಪದಲ್ಲಿದ್ದರು. ನಗರದಲ್ಲಿದ್ದ ಕುದುರೆಗಳೇ ಮೀನುಗಳಂತಿದ್ದುವು. ರಥಗಳೇ ನಾವೆಗಳಂತಿದ್ದುವು. ವಾದ್ಯಘೋಷಗಳು ಮತ್ತು ರಥಚಕ್ರಗಳ ಗಡ-ಗಡಾ ಶಬ್ದಗಳೇ ಪ್ರವಾಹದ ಗರ್ಜನೆಯಂತಿದ್ದಿತು. ಅಲ್ಲಿಯ ದೊಡ್ಡ-ದೊಡ್ಡ ಸೌಧಗಳೇ ತೀರ್ಥಗಳಂತೆಯೂ ಜಲಾಶಯಗಳಂತೆಯೂ ಇದ್ದುವು. ರತ್ನರಾಶಿಗಳೇ ಪಾಚಿಯಂತಿದ್ದುವು. ವಜ್ರ ಖಚಿತವಾದ ಪ್ರಾಕಾರಗಳೇ ಆ ನದಿಯ ತೀರಗಳಂತಿದ್ದುವು. ಬೀದಿಗಳು ಮತ್ತು ಓಣಿಗಳು ನೀರಿನ ಸುಳಿಗಳಾಗಿದ್ದುವು. ಚೌಕಿಗಳೇ ಹರಿಯದಿರುವ ನೀರುಳ್ಳ ಮಡುಗಳಂತಿದ್ದುವು. ಬಲರಾಮ-ಕೃಷ್ಣರೇ ದ್ವಾರಕಾ–ಎಂಬ ಆ ನದಿಯಲ್ಲಿ ಮೊಸಳೆಗಳಂತಿದ್ದುವು. ಅಂತಹ ದಿವ್ಯನದಿಯು ಈಗ ವೃಷ್ಣಿಶ್ರೇಷ್ಠರಿಂದ ವಿಹೀನವಾಗಿ ಕಾಲಪಾಶವೆಂಬ ಮೊಸಳೆಗಳಿಂದ ಕೂಡಿದ ಭಯಂಕರವಾದ ವೈತರಣೀನದಿಯಂತೆ ಕಾಣುತ್ತಿದ್ದಿತು. ಶಿಶಿರರ್ತುವಿನಲ್ಲಿ ಉದುರಿ ಹೋದ ದಳಗಳುಳ್ಳ ಕಮಲಗಳ ಸಮೂಹದಂತೆ ಕಾಂತಿಹೀನವಾಗಿಯೂ, ಆನಂದರಹಿತವಾಗಿಯೂ ಇದ್ದ ದ್ವಾರಕೆಯನ್ನು ಅರ್ಜುನನು ನೋಡಿದನು.

ನಿರಾನಂದವಾಗಿದ್ದ ಮತ್ತು ನಿಸ್ತೇಜವಾಗಿದ್ದ ದ್ವಾರಕೆಯನ್ನೂ–ರೋದನಮಾಡುತ್ತಿದ್ದ ಶ್ರೀಕೃಷ್ಣನ ಪತ್ನಿಯರನ್ನೂ ಕಂಡು ಪಾರ್ಥನೂ ಬಿಕ್ಕಿ-ಬಿಕ್ಕಿ ಅಳುತ್ತಾ ಕೆಳಕ್ಕೆ ಬಿದ್ದುಬಿಟ್ಟನು. ಒಡನೆಯೇ ಸತ್ರಾಜಿತನ ಮಗಳಾದ ಸತ್ಯಭಾಮೆಯೂ, ರುಕ್ಮಿಣಿಯೂ ಮತ್ತು ಇತರ ಕೃಷ್ಣನ ರಾಣಿಯರೂ ಅರ್ಜುನನನ್ನು ಸುತ್ತುವರಿದು ಗಟ್ಟಿಯಾಗಿ ಅಳತೊಡಗಿದರು.

ಬಳಿಕ ಅವರೆಲ್ಲರೂ ಮಹಾತ್ಮನಾದ ಅರ್ಜುನನನ್ನು ಎಬ್ಬಿಸಿ ಸುವರ್ಣ ಮಯವಾದ ಪೀಠದಲ್ಲಿ ಕುಳ್ಳಿರಿಸಿ ಏನನ್ನೂ ಹೇಳಲಾರದೇ ಅವನ ಸುತ್ತಲೂ ಕುಳಿತುಕೊಂಡರು. ಅನಂತರ ಅರ್ಜುನನು ಶ್ರೀಕೃಷ್ಣನನ್ನು ಸ್ತುತಿಸುತ್ತಾ ಅವನ ಅನುಪಮವಾದ ಗುಣಗಳನ್ನು ವರ್ಣಿಸುತ್ತಾ ಶ್ರೀಕೃಷ್ಣನ

ಭಾರ್ಯೆಯರಿಗೆ ಆಶ್ವಾಸನೆ ನೀಡಿ ಸೋದರಮಾವನಾದ ವಸುದೇವನನ್ನು ಕಾಣಲು ಹೋದನು."

೫ನೆಯ ಅಧ್ಯಾಯವು ಮುಗಿಯಿತು.

೬ನೆಯ ಅಧ್ಯಾಯ ಮೌಸಲಪರ್ವ (ಮುಂದುವರಿದಿದೆ.)

ದ್ವಾರಕೆಯಲ್ಲಿ ಅರ್ಜುನ-ವಸುದೇವರ ಸಂಭಾಷಣೆ

ವೈಶಂಪಾಯನರು ಹೇಳುತ್ತಾರೆ :

ತಂ ಶಯಾನಂ ಮಹಾತ್ಮಾನಂ ವೀರಮಾನಕದುನ್ದುಭಿಮ್ ।
ಪುತ್ರಶೋಕೇನ ಸಂತಪ್ತಂ ದದರ್ಶ ಕುರುಪುಙ್ಗವಃ ॥೧॥

ಜನಮೇಜಯ! ಕುರುಶ್ರೇಷ್ಠನಾದ ಅರ್ಜುನನು ಸೋದರಮಾವನಾದ ವಸುದೇವನ ಮನೆಗೆ ಹೋಗಿ ಅಲ್ಲಿ ಪುತ್ರಶೋಕದಿಂದ ಪರಿತಪಿಸುತ್ತಾ ಮಲಗಿದ್ದ ಮಹಾತ್ಮನಾದ ವಸುದೇವನನ್ನು ನೋಡಿದನು.

ವಿಶಾಲವಾದ ವಕ್ಷಃಸ್ಥಳವುಳ್ಳ, ಮಹಾಭುಜನಾದ, ಆರ್ತನಾಗಿದ್ದ ಕುಂತಿಯ ಮಗನಾದ ಅರ್ಜುನನು ಕಂಬನಿದುಂಬಿದ ಕಣ್ಣುಗಳಿಂದ ಕೂಡಿದವನಾಗಿ ಅತಿದುಃಖಿಯಾಗಿದ್ದ ವಸುದೇವನ ಕಾಲುಗಳನ್ನು ಹಿಡಿದು ನಮಸ್ಕರಿಸಿದನು.

ಶತ್ರುಹಂತಕನೇ! ಜನಮೇಜಯ! ಮಹಾಬಾಹುವಾದ ಆನಕ ದುಂದುಭಿಯು (ವಸುದೇವನು) ತನ್ನ ಸೋದರಳಿಯನಾದ ಅರ್ಜುನನ ನೆತ್ತಿಯನ್ನು ಆಘ್ರಾಣಿಸಲು ಅಪೇಕ್ಷಿಸಿದನು. ಆದರೆ ಅಸಾಮರ್ಥ್ಯದಿಂದಾಗಿ ಅವನಿಗೆ ನೆತ್ತಿಯನ್ನು ಆಘ್ರಾಣಿಸಲು ಸಾಧ್ಯವಾಗಲೇ ಇಲ್ಲ. ಮಹಾಭುಜನಾದ ವೃದ್ಧನಾದ ವಸುದೇವನು ಅರ್ಜುನನನ್ನು ಎರಡು ತೋಳುಗಳಿಂದಲೂ ಗಾಢವಾಗಿ ಆಲಿಂಗಿಸಿಕೊಂಡು ತನ್ನ ಎಲ್ಲ ಮಕ್ಕಳನ್ನೂ, ಮೊಮ್ಮಕ್ಕಳನ್ನೂ, ಹೆಣ್ಣುಮಕ್ಕಳನ್ನೂ, ಸಹೋದರರನ್ನೂ, ಸ್ನೇಹಿತರನ್ನೂ ಸ್ಮರಿಸಿಕೊಂಡು ಗೋಳಾಡಿದನು.

ಯೈರ್ಜಿತಾ ಭೂಮಿಪಾಲಾಶ್ಚ ದೈತ್ಯಾಶ್ಚ ಶತಶೋಽರ್ಜುನ ।
ತಾನ್ದೃಷ್ಟ್ವಾ ನೇಹ ಪಶ್ಯಾಮಿ ಜೀವಾಮ್ಯರ್ಜುನ ದುರ್ಮರಃ ॥೫॥

"ಅರ್ಜುನ! ಯಾರು ನೂರಾರು ದೈತ್ಯರನ್ನೂ, ರಾಜರನ್ನೂ ಗೆದ್ದಿದ್ದರೋ–ಅಂತಹ ಸರ್ವಸಮರ್ಥರಾದ ಮಕ್ಕಳನ್ನು ನಾನೀಗ ಕಾಣುತ್ತಿಲ್ಲ.



ಅವರನ್ನು ಕಾಣದಿದ್ದರೂ ನಾನು ಮಾತ್ರ ಇನ್ನೂ ಜೀವಿಸಿಯೇ ಇದ್ದೇನೆ. ನನಗೆ ಮರಣವೆಂಬುದು ದುರ್ಲಭವೆಂದೇ ಭಾವಿಸಿದ್ದೇನೆ.

ಯೌ ತಾವರ್ಜುನ ಶಿಷ್ಯೌ ತೇ ಪ್ರಿಯೌ ಬಹುಮತೌ ಸದಾ ।
ತಯೋರಪನಯಾತ್ಪಾರ್ಥ ವೃಷ್ಣಯೋ ನಿಧನಂ ಗತಾಃ ॥೬॥

ಅರ್ಜುನ! ಯಾರು ನಿನಗೆ ಅತ್ಯಂತ ಪ್ರಿಯಶಿಷ್ಯರಾಗಿದ್ದರೋ ಮತ್ತು

ಯಾರನ್ನು ನೀನು ಯಾವಾಗಲೂ ಗೌರವಿಸುತ್ತಿದ್ದೆಯೋ ಆ ಇಬ್ಬರ (ಸಾತ್ಯಕಿ-ಪ್ರದ್ಯುಮ್ನರ) ಅನ್ಯಾಯದ ವ್ಯವಹಾರದಿಂದಲೇ ಎಲ್ಲ ವೃಷ್ಣಿವಂಶೀಯರೂ ನಿಧನಹೊಂದಿದರು.

ಯೌ ತೌ ವೃಷ್ಣಿಪ್ರವೀರಾಣಾಂ ದ್ವಾವೇವಾತಿರಥೌ ಮತೌ ।
ಪ್ರದ್ಯುಮ್ನೋ ಯುಯುಧಾನಶ್ಚ ಕಥಯನ್ಕತ್ಥಸೇ ಚ ಯೌ ॥೭॥

ತೌ ಸದಾ ಕುರುಶಾರ್ದೂಲ ಕೃಷ್ಣಸ್ಯ ಪ್ರಿಯಭಾಜನೌ ।
ತಾವುಭೌ ವೃಷ್ಣಿನಾಶಸ್ಯ ಮುಖಮಾಸ್ತಾಂ ಧನಂಜಯ ॥೮॥

ಕುರುಶ್ರೇಷ್ಠನೇ! ಧನಂಜಯ! ವೃಷ್ಣಿವೀರರಲ್ಲಿ ಯುಯುಧಾನ-ಪ್ರದ್ಯುಮ್ನರೇ ಅತಿರಥರೆಂದು ಮಾನ್ಯಮಾಡಲ್ಪಟ್ಟಿದ್ದರು. ನೀನು ಕೂಡ ವೀರರ ಪ್ರಸ್ತಾಪವು ಬಂದಾಗ ಅವರನ್ನು ಬಹಳವಾಗಿ ಪ್ರಶಂಸಿಸುತ್ತಿದ್ದೆ. ಅವರಿಬ್ಬರೂ ಕೃಷ್ಣನ ಪ್ರೀತಿಗೂ ಪಾತ್ರರಾಗಿದ್ದರು. ಆದರೆ ದೈವದುರ್ವಿಯೋಗದಿಂದ ಆ ಇಬ್ಬರೇ ಇಂದು ವೃಷ್ಣಿವಂಶದ ನಾಶಕ್ಕೆ ಮುಖ್ಯಕಾರಣರಾದರು.

ನ ತು ಗರ್ಹಾಮಿ ಶೈನೇಯಂ ಹಾರ್ದಿಕ್ಯಂ ಚಾಹಮರ್ಜುನ ।
ಅಕ್ರೂರಂ ರೌಕ್ಮಿಣೇಯಂ ಚ ಶಾಪೋ ಹ್ಯೇವಾತ್ರ ಕಾರಣಮ್ ॥೯॥

ಆದರೆ ನಾನು ಯಾದವರ ವಿನಾಶಕ್ಕೆ ಸಾತ್ಯಕಿಯನ್ನಾಗಲೀ, ಕೃತವರ್ಮನನ್ನಾಗಲೀ, ಅಕ್ರೂರನನ್ನಾಗಲೀ, ಪ್ರದ್ಯುಮ್ನನನ್ನಾಗಲೀ ನಿಂದಿಸುವುದಿಲ್ಲ. ವಾಸ್ತವವಾಗಿ ಋಷಿಗಳ ಶಾಪವೇ ಯಾದವರ ಈ ವಿನಾಶಕ್ಕೆ ಕಾರಣವಾಗಿದೆ.

ಕೇಶಿನಂ ಯಸ್ತು ಕಂಸಂ ಚ ವಿಕ್ರಮ್ಯ ಜಗತಃ ಪ್ರಭುಃ ।
ವಿದೇಹಾವಕರೋತ್ಪಾರ್ಥ ಚೈದ್ಯಂ ಚ ಬಲಗರ್ವಿತಮ್ ॥೧೦॥

ನೈಷಾದಿಮೇಕಲವ್ಯಂ ಚ ಚಕ್ರೇ ಕಾಲಿಙ್ಗಮಾಗಧಾನ್ ।
ಗಾನ್ಧಾರಾನ್ಕಾಶಿರಾಜಂ ಚ ಮರುಭೂಮೌ ಚ ಪಾರ್ಥಿವಾನ್ ॥೧೧॥

ಪ್ರಾಚ್ಯಾಂಶ್ಚ ದಾಕ್ಷಿಣಾತ್ಯಾಂಶ್ಚ ಪರ್ವತೀಯಾಂಸ್ತಥಾ ನೃಪಾನ್ ।
ಸೋಽಭ್ಯುಪೇಕ್ಷಿತವಾನೇತಮನಯಾನ್ಮಧುಸೂದನಃ ॥೧೨॥

ಜಗತ್ತಿಗೇ ಈಶ್ವರನಾದ ಯಾವ ಶ್ರೀಕೃಷ್ಣನು ತನ್ನ ಪರಾಕ್ರಮವನ್ನು ಪ್ರದರ್ಶಿಸುತ್ತಾ ಕೇಶಿ-ಕಂಸರನ್ನು ದೇಹಬಂಧನದಿಂದ ವಿಮುಕ್ತಿಗೊಳಿಸಿದನೋ (ಸಂಹರಿಸಿದನೋ), ಬಲಗರ್ವಿತನಾದ ಶಿಶುಪಾಲ, ನಿಷಾದಪುತ್ರನಾದ ಏಕಲವ್ಯ, ಕಲಿಂಗರಾಜ, ಮಾಗಧರು, ಗಾಂಧಾರರು, ಕಾಶಿರಾಜ ಮತ್ತು ಮರುಭೂಮಿಯ ರಾಜರು, ಪೌರ್ವಾತ್ಯರಾಜರು, ದಾಕ್ಷಿಣಾತ್ಯ ರಾಜರು, ಪರ್ವತಪ್ರದೇಶದ ರಾಜರು–ಇವರೆಲ್ಲರನ್ನೂ ಪರಾಜಯಗೊಳಿಸಿದನೋ–ಅಂತಹ ಮಧುಸೂದನನೇ ಯಾದವರ ಅನೀತಿಯ ಕಾರಣದಿಂದಾಗಿ ಉಂಟಾದ ಈ ಸಂಹಾರವನ್ನು ಉಪೇಕ್ಷಿಸಿಬಿಟ್ಟನು.

ತ್ವಂ ಹಿ ತಂ ನಾರದಶ್ಚೈವ ಮುನಯಶ್ಚ ಸನಾತನಮ್ ।
ಗೋವಿನ್ದಮನಘಂ ದೇವಮಭಿಜಾನೀಧ್ವಮಚ್ಯುತಮ್ ।
ಪ್ರತ್ಯಪಶ್ಯಚ್ಚ ಸ ವಿಭುರ್ಜ್ಞಾತಿಕ್ಷಯಮಧೋಕ್ಷಜಃ ॥೧೪॥

ಅರ್ಜುನ! ನೀನೂ, ದೇವರ್ಷಿಗಳಾದ ನಾರದರೂ ಮತ್ತು ಇತರ ಮಹರ್ಷಿಗಳೂ ಶ್ರೀಕೃಷ್ಣನನ್ನು ಪಾಪರಹಿತನೆಂದೂ, ಅಚ್ಯುತನೆಂದೂ, ಪರಮೇಶ್ವರನ ಸ್ವರೂಪವೇ ಎಂದೂ ತಿಳಿದಿರುವಿರಿ. ಆದರೆ ಸರ್ವವ್ಯಾಪಿಯಾದ ಆ ಅಧೋಕ್ಷಜನೇ ತನ್ನ ಕುಟುಂಬದವರ ಈ ಘೋರವಿನಾಶವನ್ನು ಸುಮ್ಮನೇ ನೋಡುತ್ತಿದ್ದನು.

ಸಮುಪೇಕ್ಷಿತವಾನ್ನಿತ್ಯಂ ಸ್ವಯಂ ಸ ಮಮ ಪುತ್ರಕಃ ।
ಗಾನ್ಧಾರ್ಯಾ ವಚನಂ ಯತ್ತದೃಷೀಣಾಂ ಚ ಪರಂತಪ ।
ತನ್ನೂನಮನ್ಯಥಾ ಕರ್ತುಂ ನೈಚ್ಛತ್ಸ ಜಗತಃ ಪ್ರಭುಃ ॥೧೫॥

ಪರಂತಪನೇ! ನನ್ನ ಮಗನ ರೂಪದಲ್ಲಿ ಅವತರಿಸಿದ್ದ, ಜಗತ್ತಿಗೇ ಪ್ರಭುವಾದ ಶ್ರೀಕೃಷ್ಣನು ಗಾಂಧಾರಿಯ ಮತ್ತು ಋಷಿಗಳ ಮಾತನ್ನು ವ್ಯರ್ಥಗೊಳಿಸಲು ಬಯಸಲಿಲ್ಲ. ಆದುದರಿಂದಲೇ ಅವನು ಈ ವಿಷಯದಲ್ಲಿ ಉಪೇಕ್ಷೆಯಿಂದ ಇದ್ದುಬಿಟ್ಟನು.

ಪ್ರತ್ಯಕ್ಷಂ ಭವತಶ್ಚಾಪಿ ತವ ಪೌತ್ರಃ ಪರಂತಪ ।
ಅಶ್ವತ್ಥಾಮ್ನಾ ಹತಶ್ಚಾಪಿ ಜೀವಿತಸ್ತಸ್ಯ ತೇಜಸಾ ॥೧೬॥

ಶ್ರೀಕೃಷ್ಣನ ಮಹಿಮೆಯೆಷ್ಟೆಂಬುದು ನಿನಗೂ ಪ್ರತ್ಯಕ್ಷವೇ ಆಗಿದೆ. ನಿನ್ನ

ಮೊಮ್ಮಗನಾದ ಪರೀಕ್ಷಿತನು ಗರ್ಭದಲ್ಲಿದ್ದಾಗಲೇ ಅಶ್ವತ್ಥಾಮನಿಂದ ಕೊಲ್ಲಲ್ಪಟ್ಟಿದ್ದರೂ ಶ್ರೀಕೃಷ್ಣನು ತನ್ನ ತೇಜಸ್ಸಿನಿಂದ ಅವನನ್ನು ಬದುಕಿಸಿದನು. ಆದರೆ ನಿನ್ನ ಸ್ನೇಹಿತನು ತನ್ನವರೇ ಆದ ಈ ಜ್ಞಾತಿಬಾಂಧವರನ್ನು ರಕ್ಷಿಸಲು ಇಷ್ಟಪಡಲಿಲ್ಲ. ಮಕ್ಕಳು, ಮೊಮ್ಮಕ್ಕಳು, ಸಹೋದರರು, ಮಿತ್ರರು– ಎಲ್ಲರೂ ನಿಧನಹೊಂದಿ ಭೂಮಿಯಲ್ಲಿ ಮಲಗಿರುವುದನ್ನು ನೋಡಿ–ನನ್ನ ಬಳಿಗೆ ಬಂದು ಹೀಗೆ ಹೇಳಿದನು : "ಪುರುಷಶ್ರೇಷ್ಠನೇ! ಈಗ ನಮ್ಮ ಕುಲದ ಅಂತ್ಯವು ಆಗಿಹೋಯಿತು. ಅರ್ಜುನನು ಈಗಲೇ ದ್ವಾರಕೆಗೆ ಆಗಮಿಸುತ್ತಾನೆ. ಅವನು ಬಂದನಂತರ ಅವನಿಗೆ ವೃಷ್ಣಿವಂಶದವರ ಈ ಮಹಾವಿನಾಶದ ವೃತ್ತಾಂತವನ್ನು ತಿಳಿಸು. ಪ್ರಭುವೇ! ಬೇಗನೆ ಬರುವಂತೆ ಅರ್ಜುನನಿಗೆ ಸಂದೇಶವನ್ನು ಈಗಾಗಲೇ ಕಳುಹಿಸಿದ್ದೇನೆ. ಮಹಾತೇಜಸ್ವಿಯಾದ ಅರ್ಜುನನು ಯದುವಂಶೀಯರ ವಿನಾಶದ ವಾರ್ತೆಯನ್ನು ಕೇಳಿದೊಡನೆಯೇ ಬಹಳ ಶೀಘ್ರವಾಗಿ ಇಲ್ಲಿಗೆ ಬಂದುಬಿಡುತ್ತಾನೆ. ಈ ವಿಷಯದಲ್ಲಿ ನಾನು ಚಿಂತಿಸಬೇಕಾಗಿಯೇ ಇಲ್ಲ.

ಯೋಽಹಂ ತಮರ್ಜುನಂ ವಿದ್ಧಿ ಯೋಽರ್ಜುನಃ ಸೋಽಹಮೇವ ತು ।
ಯದ್ಬ್ರೂಯಾತ್ತತ್ತಥಾ ಕಾರ್ಯಮಿತಿ ಬುಧ್ಯಸ್ವ ಮಾಧವ ॥೨೧॥

ನಾನು ಯಾರೋ ಅರ್ಜುನನೂ ಅವನೇ ಎಂದು ತಿಳಿ. ಯಾವನು ಅರ್ಜುನನೋ ಅವನೇ ನಾನೆಂದೂ ಭಾವಿಸು. (ನಾನೇ ಅರ್ಜುನನು ; ಅರ್ಜುನನೇ ನಾನು. ಕೃಷ್ಣಾರ್ಜುನರಲ್ಲಿ ಯಾವ ಭೇದವೂ ಇಲ್ಲ.) ಅರ್ಜುನನು ಏನು ಹೇಳುವನೋ ಅದರಂತೆ ನೀನು ಮಾಡಬೇಕು. ತಂದೆಯೇ! ಈ ವಿಷಯವನ್ನು ನೀನು ಚೆನ್ನಾಗಿ ಅವಧರಿಸು.

ಸ ಸ್ತ್ರೀಷು ಪ್ರಾಪ್ತಕಾಲಾಸು ಪಾಣ್ಡವೋ ಬಾಲಕೇಷು ಚ ।
ಪ್ರತಿಪತ್ಸ್ಯತಿ ಬೀಭತ್ಸುರ್ಭವತಶ್ಚೌರ್ಧ್ವದೈಹಿಕಮ್ ॥೨೨॥

ಪ್ರಸವಕಾಲವು ಸನ್ನಿಹಿತವಾಗಿರುವ ಸ್ತ್ರೀಯರ ವಿಷಯದಲ್ಲಿಯೂ ಬಾಲಕರ ರಕ್ಷಣೆಯ ವಿಷಯದಲ್ಲಿಯೂ ಅವನು ವಿಶೇಷವಾದ ಗಮನವನ್ನು ಕೊಡುತ್ತಾನೆ ಮತ್ತು ನಿನ್ನ ಔರ್ಧ್ವದೈಹಿಕಸಂಸ್ಕಾರವನ್ನೂ ಅವನೇ ಮಾಡುತ್ತಾನೆ.

ಇಮಾಂ ಚ ನಗರೀಂ ಸದ್ಯಃ ಪ್ರತಿಯಾತೇ ಧನಂಜಯೇ ।
ಪ್ರಾಕಾರಾಟ್ಟಾಲಕೋಪೇತಾಂ ಸಮುದ್ರಃ ಪ್ಲಾವಯಿಷ್ಯತಿ ॥೨೩॥

ಅರ್ಜುನನು ಎಲ್ಲರೊಡನೆ ಈ ದ್ವಾರಕಾನಗರವನ್ನು ಬಿಟ್ಟು ಹೊರಟೊಡನೆಯೇ ಪ್ರಾಕಾರಗಳಿಂದಲೂ ಉಪ್ಪರಿಗೆಮನೆಗಳಿಂದಲೂ ತುಂಬಿರುವ ಈ ಪಟ್ಟಣವನ್ನು ಸಮುದ್ರವು ಮುಳುಗಿಸಿಬಿಡುತ್ತದೆ.

ಅಹಂ ದೇಶೇ ತು ಕಸ್ಮಿಂಶ್ಚಿತ್ಪುಣ್ಯೇ ನಿಯಮಮಾಸ್ಥಿತಃ ।
ಕಾಲಂ ಕಾಂಕ್ಷೇ ಸದ್ಯ ಏವ ರಾಮೇಣ ಸಹ ಧೀಮತಾ ॥೨೪॥

ನಾನಾದರೋ ಯಾವುದೋ ಒಂದು ಪವಿತ್ರಸ್ಥಳದಲ್ಲಿ ನಿಯಮಾನುಷ್ಠಾನಪರನಾಗಿ ಬಲರಾಮನೊಡನೆ ಇರುತ್ತಾ ಕಾಲವನ್ನು ಬೇಗ ಪ್ರತೀಕ್ಷಿಸುತ್ತಿರುತ್ತೇನೆ."

ಅರ್ಜುನ! ಊಹಿಸಲೂ ಆಗದಷ್ಟು ಪರಾಕ್ರಮಶಾಲಿಯಾದ ಶ್ರೀಕೃಷ್ಣನು ನನ್ನೊಡನೆ ಹೀಗೆ ಹೇಳಿ ಬಾಲಕರೊಡನಿದ್ದ ನನ್ನನ್ನು ಇಲ್ಲಿಯೇ ಬಿಟ್ಟು ಯಾವುದೋ ದಿಕ್ಕಿನೆಡೆಗೆ ಹೊರಟುಹೋದನು.

ಅಂದಿನಿಂದಲೂ ನಾನು ಒಡಹುಟ್ಟಿದವರಾದ, ಮಹಾತ್ಮರಾದ ಬಲರಾಮ-ಕೃಷ್ಣರನ್ನೂ, ಭಯಂಕರವಾದ ಜ್ಞಾತಿವಧೆಯನ್ನೂ ಚಿಂತಿಸುತ್ತಾ ಶೋಕಪೀಡಿತನಾಗಿ ಊಟವನ್ನೇ ಮಾಡುತ್ತಿಲ್ಲ. ಮುಂದೆಯೂ ಮಾಡುವುದಿಲ್ಲ. ಜೀವಿಸಿರುವುದೂ ಇಲ್ಲ. ಸೌಭಾಗ್ಯವಶದಿಂದ ನೀನಿಲ್ಲಿಗೆ ಆಗಮಿಸಿರುವೆ.

ಯದುಕ್ತಂ ಪಾರ್ಥ ಕೃಷ್ಣೇನ ತತ್ಸರ್ವಮಖಿಲಂ ಕುರು ।
ಏತತ್ತೇ ಪಾರ್ಥ ರಾಜ್ಯಂ ಚ ಸ್ತ್ರಿಯೋ ರತ್ನಾನಿ ಚೈವ ಹಿ ।
ಇಷ್ಟಾನ್ಪ್ರಾಣಾನಹಂ ಹೀಮಾಂಸ್ತ್ಯಕ್ಷ್ಯಾಮಿಂ ರಿಪುಸೂದನ ॥೨೮॥

ಶ್ರೀಕೃಷ್ಣನು ಹೇಳಿರುವಂತೆಯೇ ಎಲ್ಲವನ್ನೂ ಮಾಡು. ಈ ರಾಜ್ಯ, ಸ್ತ್ರೀಯರು ಮತ್ತು ಇಲ್ಲಿರುವ ರತ್ನಗಳು ಎಲ್ಲವೂ ನಿನಗೇ ಸೇರಿವೆ. ನಾನೀಗ ನಿಶ್ಚಿಂತನಾಗಿ ಪ್ರಿಯವಾದ ಪ್ರಾಣಗಳನ್ನು ತ್ಯಜಿಸುತ್ತೇನೆ."

೬ನೆಯ ಅಧ್ಯಾಯವು ಮುಗಿಯಿತು.

ವಸುದೇವನಿಗೂ ಮೌಸಲಯುದ್ಧದಲ್ಲಿ ಮಡಿದವರಿಗೂ ಅಂತ್ಯೇಷ್ಟಿಯನ್ನು ಮಾಡಿ ಅರ್ಜುನನು ದ್ವಾರಕಾಪುರನಿವಾಸಿಗಳೊಡನೆ ಪ್ರಯಾಣಮಾಡಿದುದು : ನಗರದಿಂದ ಹೊರಬಂದೊಡನೆಯೇ ದ್ವಾರಕೆಯು ಸಮುದ್ರದಲ್ಲಿ ಮುಳುಗಿಹೋದುದು : ಮಾರ್ಗದಲ್ಲಿ ಕಳ್ಳರಿಂದ ಆಕ್ರಮಣ : ಅಳಿದುಳಿದ ಯಾದವರೊಡನೆ ಅರ್ಜುನನು ಹಸ್ತಿನಾಪಟ್ಟಣವನ್ನು ಸೇರಿದುದು

ವೈಶಂಪಾಯನರು ಹೇಳುತ್ತಾರೆ :

ಏವಮುಕ್ತಃ ಸ ಬೀಭತ್ಸುರ್ಮಾತುಲೇನ ಪರಂತಪ ।
ದುರ್ಮನಾ ದೀನವದನೋ ವಸುದೇವಮುವಾಚ ಹ ॥೧॥

ಜನಮೇಜಯ! ಸೋದರಮಾವನು ಹೀಗೆ ಹೇಳಲು, ದೀನವಾದ ಮುಖಭಾವದಿಂದ ಕೂಡಿದ್ದ ಅರ್ಜುನನು ಬಹುದುಃಖಿತನಾಗಿ ವಸುದೇವನಿಗೆ ಹೇಳಿದನು :

"ಮಾತುಲ! ವೃಷ್ಣಿವಂಶಪ್ರಮುಖನಾದ ಶ್ರೀಕೃಷ್ಣನಿಂದಲೂ ಮತ್ತು ಬಂಧುಗಳಿಂದಲೂ ವಿಹೀನವಾಗಿರುವ ಈ ಭೂಭಾಗವನ್ನು (ದ್ವಾರಕಾನಗರವನ್ನು) ಯಾವುದೇ ರೀತಿಯಲ್ಲಿಯೂ ನೋಡಲಾರೆನು.

ರಾಜಾ ಚ ಭೀಮಸೇನಶ್ಚ ಸಹದೇವಶ್ಚ ಪಾಣ್ಡವಃ ।
ನಕುಲೋ ಯಾಜ್ಞಸೇನೀ ಚ ಷಡೇಕಮನಸೋ ವಯಮ್ ॥೨॥

ರಾಜನಾದ ಯುಧಿಷ್ಠಿರ, ಭೀಮಸೇನ, ಸಹದೇವ, ನಕುಲ, ದ್ರೌಪದೀ ಮತ್ತು ನಾನೂ–ಈ ಆರು ಮಂದಿಗೂ ಒಂದೇ ಮನಸ್ಸು. (ಇವರಲ್ಲಿ ಯಾರೂ ಕೂಡ ಇಲ್ಲಿ ವಾಸಮಾಡಲು ಇಷ್ಟಪಡುವುದಿಲ್ಲ.)

ರಾಜ್ಞಃ ಸಂಕ್ರಮಣೇ ಚಾಪಿ ಕಾಲೋಽಯಂ ವರ್ತತೇ ಧ್ರುವಮ್ ।
ತಮಿಮಂ ವಿದ್ಧಿ ಸಮ್ಪ್ರಾಪ್ತಂ ಕಾಲಂ ಕಾಲವಿದಾಂ ವರ ॥೩॥

ಕಾಲವನ್ನು ತಿಳಿದವರಲ್ಲಿ ಶ್ರೇಷ್ಠನಾದವನೇ! ಮಾತುಲ! ಯುಧಿಷ್ಠಿರ

ರಾಜನಿಗೂ ಪರಲೋಕಗಮನದ ಸಮಯವು ನಿಶ್ಚಯವಾಗಿಯೂ ಸಮೀಪಿಸಿದೆ. ಅಂತಹ ಅವಸಾನಕಾಲವು ಈಗಾಗಲೇ ಸಮೀಪಿಸಿದೆಯೆಂಬುದನ್ನು ತಿಳಿ.

ಶತ್ರುಸೂದನನೇ! ನಾನೀಗ ವೃಷ್ಣಿವಂಶದ ಸ್ತ್ರೀಯರನ್ನೂ, ಬಾಲಕರನ್ನೂ, ವೃದ್ಧರನ್ನೂ ನನ್ನೊಡನೆ ಇಂದ್ರಪ್ರಸ್ಥಕ್ಕೆ ಕರೆದುಕೊಂಡುಹೋಗುತ್ತೇನೆ."

ಜನಮೇಜಯ! ಅರ್ಜುನನು ವಸುದೇವನಿಗೆ ಹೀಗೆ ಹೇಳಿದನಂತರ ದಾರುಕನಿಗೆ–'ವೃಷ್ಣಿವೀರರ ಅಮಾತ್ಯರನ್ನು ಈಗಲೇ ನೋಡಲು ನಾನು ಬಯಸುತ್ತೇನೆ'–ಎಂದು ಹೇಳಿದನು.

ಹೀಗೆ ದಾರುಕನಿಗೆ ಹೇಳಿ ಶೂರನಾದ ಅರ್ಜುನನು ನಿಧನಹೊಂದಿದ ಮಹಾರಥರ ಸಲುವಾಗಿ ಶೋಕಿಸುತ್ತಾ ಯಾದವರ ಸುಧರ್ಮಾ ಎಂಬ ಸಭಾಮಂದಿರವನ್ನು ಪ್ರವೇಶಿಸಿದನು. ಆ ಮಹಾಸಭೆಯಲ್ಲಿ ಆಸನವೊಂದರಲ್ಲಿ ಕುಳಿತ ಅರ್ಜುನನನ್ನು ಮಂತ್ರಿಯೇ ಮೊದಲಾದ ಪ್ರಕೃತಿವರ್ಗದವರೂ ವೇದವಿದವಾದ ಬ್ರಾಹ್ಮಣರೂ ಸುತ್ತುವರಿದು ಕುಳಿತರು. ದಿಕ್ಕುಗಾಣದೇ ವಿಮೂಢರಾಗಿದ್ದ, ದೀನವಾದ ಮನಸ್ಸಿನಿಂದ ಕೂಡಿದ್ದ, ಸರ್ವನಾಶದಿಂದ ಬುದ್ಧಿಗೆಟ್ಟಿದ್ದ ಎಲ್ಲ ಸಭಾಸದರನ್ನೂ ಉದ್ದೇಶಿಸಿ ಪಾರ್ಥನು ಅತ್ಯಂತದೀನನಾಗಿ ಸಮಯೋಚಿತವಾದ ಈ ಮಾತುಗಳನ್ನು ಹೇಳಿದನು :

ಶಕ್ರಪ್ರಸ್ಥಮಹಂ ನೇಷ್ಯೇ ವೃಷ್ಣ್ಯನ್ಧಕಜನಂ ಸ್ವಯಮ್ ।
ಇದಂ ತು ನಗರಂ ಸರ್ವಂ ಸಮುದ್ರಃ ಪ್ಲಾವಯಿಷ್ಯತಿ ॥೧೦॥

ಸಜ್ಜೀಕುರುತ ಯಾನಾನಿ ರತ್ನಾನಿ ವಿವಿಧಾನಿ ಚ ।
ವಜ್ರೋಽಯಂ ಭವತಾಂ ರಾಜಾ ಶಕ್ರಪ್ರಸ್ಥೇ ಭವಿಷ್ಯತಿ ॥೧೧॥

"ಮಹಾಶಯರೇ! ವೃಷ್ಣ್ಯಂಧಕವಂಶಗಳ ಸ್ತ್ರೀ-ವೃದ್ಧ-ಬಾಲಕರನ್ನು ನಾನೇ ಇಂದ್ರಪ್ರಸ್ಥಕ್ಕೆ ಕರೆದೊಯ್ಯುತ್ತೇನೆ. ನಾನು ಹೊರಟುಹೋದೊಡನೆಯೇ ಈ ದ್ವಾರಕೆಯು ಸಮುದ್ರದಲ್ಲಿ ಮುಳುಗಿಹೋಗುತ್ತದೆ. ಆದುದರಿಂದ ದ್ವಾರಕಾನಗರದಲ್ಲಿರುವವರೆಲ್ಲರೂ ಇಂದ್ರಪ್ರಸ್ಥಕ್ಕೆ ಹೊರಡಲು ಯಾನಗಳನ್ನು ಸಿದ್ಧಗೊಳಿಸಿರಿ. ಯಾನಗಳಲ್ಲಿ ನಿಮ್ಮಲ್ಲಿರುವ ವಿಧ-ವಿಧವಾದ ರತ್ನ

ಗಳನ್ನು ತುಂಬಿರಿ. ಇಂದ್ರಪ್ರಸ್ಥಕ್ಕೆ ಪ್ರಯಾಣಮಾಡಿದನಂತರ ಶ್ರೀಕೃಷ್ಣನ ಮೊಮ್ಮಗನಾದ ಈ ವಜ್ರನು ನಿಮಗೆ ರಾಜನಾಗುತ್ತಾನೆ.

ಸಪ್ತಮೇ ದಿವಸೇ ಚೈವ ರವೌ ವಿಮಲ ಉದ್ಗತೇ ।
ಬಹಿರ್ವತ್ಸ್ಯಾಮಹೇ ಸರ್ವೇ ಸಜ್ಜೀಭವತ ಮಾ ಚಿರಮ್ ॥೧೨॥

ಇಂದಿನಿಂದ ಏಳನೆಯ ದಿವಸ ನಿರ್ಮಲನಾದ ಸೂರ್ಯನು ಉದಯಿಸುವ ಹೊತ್ತಿಗೆ ಸರಿಯಾಗಿ ನಾವೆಲ್ಲರೂ ಈ ನಗರದಿಂದ ಹೊರಕ್ಕೆ ನಿರ್ಗಮಿಸಬೇಕು. ಆದುದರಿಂದ ನೀವೆಲ್ಲರೂ ಪ್ರಯಾಣಹೊರಡಲು ಸಿದ್ಧರಾಗಿರಿ ; ಸಾವಕಾಶ ಮಾಡಬೇಡಿರಿ."

ಕ್ಲಿಷ್ಟವಾದ ಕರ್ಮಗಳನ್ನೂ ಅನಾಯಾಸವಾಗಿ ಮಾಡುವ ಪಾರ್ಥನು ಹೀಗೆ ಆಜ್ಞೆಮಾಡಿದನಂತರ ಸಮಸ್ತಮಂತ್ರಿಗಳೂ ಅಭೀಷ್ಟಸಿದ್ಧಿಗಾಗಿ ಉತ್ಸಾಹದಿಂದ ಪ್ರಯಾಣದ ಸಿದ್ಧತೆಯನ್ನು ಮಾಡತೊಡಗಿದರು.

ಆ ರಾತ್ರಿ ಪಾರ್ಥನು ಶ್ರೀಕೃಷ್ಣನ ಅರಮನೆಯಲ್ಲಿಯೇ ಉಳಿದುಕೊಂಡನು. ಆದರೆ ಕೃಷ್ಣನಿಲ್ಲದ ಆ ಅರಮನೆಯನ್ನು ನೋಡುತ್ತಲೇ ಅವನು ಮಹತ್ತಾದ ಶೋಕ-ಮೋಹಗಳಲ್ಲಿ ಮುಳುಗಿಹೋದನು.

ಜನಮೇಜಯ! ಇತ್ತಲಾಗಿ ಬೆಳಗಾಗುತ್ತಲೇ ಶೂರವಂಶೀಯನಾದ, ಪ್ರತಾಪವಂತನಾದ, ಮಹಾತೇಜಸ್ವಿಯಾದ ವಸುದೇವನು ಮನಸ್ಸನ್ನು ಪರಮಾತ್ಮನಲ್ಲಿ ಲೀನಗೊಳಿಸಿ ಯೋಗಶಕ್ತಿಯಿಂದ ಶ್ರೇಷ್ಠವಾದ ಗತಿಯನ್ನು ಹೊಂದಿದನು (ನಿಧನನಾದನು). ಒಡನೆಯೇ ವಸುದೇವನ ಮನೆಯಲ್ಲಿ ದುಃಖದಿಂದ ಕಿರುಚಿಕೊಳ್ಳುತ್ತಿದ್ದ ಮತ್ತು ರೋದನಮಾಡುತ್ತಿದ್ದ ದಾರುಣವಾದ ಮಹಾಶಬ್ದವುಂಟಾಯಿತು. ಅಂತಃಪುರದ ನಾರಿಯರ ತಲೆಗೂದಲುಗಳು ಕೆದರಿದ್ದುವು. ಆಭರಣಗಳಿಂದಲೂ ಮಾಲೆಗಳಿಂದಲೂ ಅವರು ವಿಹೀನರಾಗಿದ್ದರು. ಎರಡು ಕೈಗಳಿಂದಲೂ ಎದೆಯನ್ನು ತಟ್ಟಿಕೊಳ್ಳುತ್ತಾ ಕರುಣಾಜನಕವಾದ ರೀತಿಯಲ್ಲಿ ರೋದನಮಾಡುತ್ತಿದ್ದರು. ನಾರಿಯರಲ್ಲಿ ಶ್ರೇಷ್ಠರಾದ ದೇವಕೀ, ಭದ್ರಾ, ರೋಹಿಣೀ ಮತ್ತು ಮದಿರೆಯರು ಪತಿಯೊಡನೆ ಚಿತೆಗೇರಲು ಸಿದ್ಧರಾದರು. ಅನಂತರ ಪಾರ್ಥನು ಮನುಷ್ಯರು ಹೊರುವ ಬಹುಮೂಲ್ಯವಾದ ಯಾನವನ್ನು (ಶವವಾಹನವನ್ನು) ಸಿದ್ಧ

ಗೊಳಿಸಿ ಅದರ ಮೂಲಕವಾಗಿ ವಸುದೇವನನ್ನು ನಗರದಿಂದ ಹೊರಕ್ಕೆ ಒಯ್ದನು. ದುಃಖ-ಶೋಕಗಳಿಂದ ಕೂಡಿದ್ದ, ಹಿತೈಷಿಗಳಾದ ದ್ವಾರಕಾಪುರ ವಾಸಿಗಳೂ ಮತ್ತು ದೇಶೀಯಜನರೂ ವಸುದೇವನ ಶವವನ್ನೇ ಅನುಸರಿಸಿ ಹೋದರು. ಆ ಯಾನದ ಮುಂಭಾಗದಲ್ಲಿ ರಾಜಭಟರು ಅವನ ಅಶ್ವಮೇಧ ಯಾಗದಲ್ಲಿ ಉಪಯೋಗಿಸಿದ್ದ ಛತ್ರವನ್ನು ಹಿಡಿದು ಹೋಗುತ್ತಿದ್ದರು. ಯಾಜಕಬ್ರಾಹ್ಮಣರು ಪ್ರಜ್ವಲಿಸುತ್ತಿದ್ದ ಅಗ್ನಿಹೋತ್ರಾಗ್ನಿಯನ್ನು ಎತ್ತಿಕೊಂಡು ಹೋಗುತ್ತಿದ್ದರು. ದೇವಕಿಯೇ ಮೊದಲಾದ ದೇವಿಯರು ಅಲಂಕಾರವನ್ನು ಮಾಡಿಕೊಂಡು ಸಾವಿರಾರು ಸ್ತ್ರೀಯರಿಂದಲೂ ಸೊಸೆಯರಿಂದಲೂ ಪರಿವೃತ ರಾಗಿ ವೀರನಾದ ವಸುದೇವನ ಯಾನವನ್ನು ಅನುಸರಿಸಿ ಹೋಗುತ್ತಿದ್ದರು. ಮಹಾತ್ಮನಾದ ವಸುದೇವನಿಗೆ ಅವನ ಜೀವಿತಕಾಲದಲ್ಲಿ ಯಾವ ಸ್ಥಳವು ಅತ್ಯಂತಪ್ರಿಯವಾಗಿದ್ದಿತೋ–ಅದೇ ಸ್ಥಳದಲ್ಲಿಯೇ ಅರ್ಜುನನೇ ಮೊದ ಲಾದವರು ವಸುದೇವನಿಗೆ ಪಿತೃಮೇಧವಿಧಿಯಿಂದ ದಹನಸಂಸ್ಕಾರವನ್ನು ಮಾಡಿದರು.

ತಂ ಚಿತಾಗ್ನಿಗತಂ ವೀರಂ ಶೂರಪುತ್ರಂ ವರಾಙ್ಗನಾಃ ।
ತತೋಽನ್ವಾರುರುಹುಃ ಪತ್ನ್ಯಶ್ಚತಸ್ರಃ ಪತಿಲೋಕಗಾಃ ॥೨೪॥

ದೇವಕಿಯೇ ಮೊದಲಾದ ನಾಲ್ವರು ಶ್ರೇಷ್ಠನಾರಿಯರು ಪ್ರಜ್ವಲಿಸುತ್ತಿದ್ದ ಚಿತಾಗ್ನಿಯಲ್ಲಿ ಪವಡಿಸಿದ್ದ ವೀರನಾದ ಶೂರಪುತ್ರನನ್ನೇ ಅನುಸರಿಸುತ್ತಾ ಒಬ್ಬೊಬ್ಬರಾಗಿ ಚಿತೆಯನ್ನು ಏರಿದರು. ವಸುದೇವನೊಡನೆಯೇ ಭಸ್ಮೀಭೂತರಾಗಿ ಪತಿಯು ಸೇರಿದ ಪುಣ್ಯಲೋಕಗಳಿಗೆ ಅವನ ಜೊತೆ ಯಲ್ಲಿಯೇ ತೆರಳಿದರು. ನಾಲ್ವರು ಪತ್ನಿಯರಿಂದ ಯುಕ್ತನಾಗಿದ್ದ ವಸುದೇವ ನನ್ನು ಅರ್ಜುನನು ಗಂಧದ ಕಟ್ಟಿಗೆಗಳಿಂದಲೂ ನಾನಾಪ್ರಕಾರವಾದ ಸುಗಂಧ ದ್ರವ್ಯಗಳಿಂದಲೂ ದಹನಮಾಡಿದನು. ಆ ಸಮಯದಲ್ಲಿ ಪ್ರಜ್ವಲಿಸುತ್ತಿದ್ದ ಅಗ್ನಿಯ ಛಟ-ಛಟಾ ಶಬ್ದವೂ, ಸಾಮಗಾನಮಾಡುವ ಬ್ರಾಹ್ಮಣರ ಗಂಭೀರ ವಾದ ವೇದಮಂತ್ರೋಚ್ಚಾರಣೆಯ ಶಬ್ದವೂ, ದುಃಖಪೀಡಿತರಾದ ಪೌರರ ರೋದನಶಬ್ದವೂ ಏಕಕಾಲದಲ್ಲಿ ಕೇಳಿಬರುತ್ತಿದ್ದಿತು.

ಬಳಿಕ ವಜ್ರನೇ ಮೊದಲಾದ ವೃಷ್ಣ್ಯಂಧಕಕುಮಾರರೂ, ಸ್ತ್ರೀಯರೂ ಮಹಾತ್ಮನಾದ ವಸುದೇವನಿಗೆ ಜಲತರ್ಪಣವನ್ನಿತ್ತರು. ಯಾವಾಗಲೂ

ಧರ್ಮಲೋಪವನ್ನು ಮಾಡದಿದ್ದ ಅರ್ಜುನನು ವಸುದೇವನ ಸಂಬಂಧವಾದ ಧರ್ಮಕೃತ್ಯವನ್ನು ಪೂರ್ಣಗೊಳಿಸಿ, ಯಾದವರೆಲ್ಲರೂ ಪರಸ್ಪರವಾಗಿ ಕಾದಾಡಿ ನಿಧನಹೊಂದಿದ ಸ್ಥಳಕ್ಕೆ ಹೋದನು. ಭಯಂಕರವಾದ ಯುದ್ಧದಲ್ಲಿ ನಿಧನಹೊಂದಿ ಅಸ್ತವ್ಯಸ್ತವಾಗಿ ಕೆಳಗೆ ಬಿದ್ದಿದ್ದ ಯಾದವರನ್ನು ನೋಡಿ ಅರ್ಜುನನು ಅತ್ಯಂತದುಃಖಿತನಾದನು. ಋಷಿಗಳ ಶಾಪದ ಕಾರಣದಿಂದ ಜೊಂಡಿನಿಂದ ಉತ್ಪನ್ನವಾದ ಮುಸಲಗಳಿಂದ ನಿಧನಹೊಂದಿದ್ದ ಎಲ್ಲರಿಗೂ ಜ್ಯೇಷ್ಠಾನುಕ್ರಮವಾಗಿ ಸಮಯೋಚಿತವಾದ ಅಂತ್ಯೇಷ್ಟಿಗಳನ್ನು ಮಾಡಿಸಿದನು. ಅನಂತರ ಅರ್ಜುನನು ಆಪ್ತಪುರುಷರ ಮೂಲಕವಾಗಿ ಬಲರಾಮ-ಕೃಷ್ಣರ ದೇಹಗಳನ್ನು ಹುಡುಕಿಸಿ ದಹನಸಂಸ್ಕಾರವನ್ನು ಮಾಡಿದನು. ಹೀಗೆ ಅರ್ಜುನನು ಎಲ್ಲರಿಗೂ ಪ್ರೇತಕರ್ಮಗಳನ್ನು ವಿಧಿವತ್ತಾಗಿಮಾಡಿ ಏಳನೆಯ ದಿವಸ ರಥಾರೂಢನಾಗಿ ಅವಸರದಿಂದ ದ್ವಾರಕೆಯನ್ನು ಬಿಟ್ಟುಹೊರಟನು. ಶೋಕಪೀಡಿತರಾಗಿದ್ದ, ಅಳುತ್ತಳುತ್ತಲೇ ಇದ್ದ ವೃಷ್ಣಿವೀರರ ವರಸ್ತ್ರೀಯರು– ಕುದುರೆ, ಎತ್ತು, ಕತ್ತೆ ಮತ್ತು ಒಂಟೆ ಇವುಗಳಿಂದ ಯುಕ್ತವಾದ ರಥಗಳಲ್ಲಿ ಕುಳಿತು ಮಹಾತ್ಮನಾದ ಪಾಂಡುವಿನ ಮಗನಾದ ಅರ್ಜುನನನ್ನು ಅನುಸರಿಸಿ ಹೊರಟರು.

ಅರ್ಜುನನ ಆಜ್ಞಾನುಸಾರವಾಗಿ ಅಂಧಕ-ವೃಷ್ಣಿಗಳ ಸೇವಕರೂ, ಕುದುರೆಸವಾರರೂ, ರಥಿಕರೂ, ನಗರ ಮತ್ತು ಪ್ರಾಂತಗಳ ಪ್ರಜೆಗಳೂ, ವೀರರಿಂದ ಹೀನರಾದ ವೃದ್ಧರ ಮತ್ತು ಬಾಲಕರ ಸಮೂಹದಿಂದ ಯುಕ್ತ ರಾದ ಯಾದವವಿಧವೆಯರನ್ನು ನಾಲ್ಕು ಕಡೆಗಳಿಂದಲೂ ಸುತ್ತುವರಿದು ಅರ್ಜುನನನ್ನು ಅನುಸರಿಸಿ ಪ್ರಯಾಣಹೊರಟರು. ಗಜಸೈನಿಕರು ಪರ್ವತ ಸದೃಶವಾದ ಆನೆಗಳ ಮೇಲೆ ಕುಳಿತು ಗುಪ್ತವಾದ ಶಸ್ತ್ರಾಸ್ತ್ರಗಳೊಡನೆ ಮತ್ತು ಪಾದರಕ್ಷಕ ಸೇನಾಸಮೇತರಾಗಿ ಪ್ರಯಾಣಹೊರಟರು.

ಅಂಧಕ-ವೃಷ್ಣಿಗಳ ಎಲ್ಲ ಮಕ್ಕಳೂ ಅರ್ಜುನನ ವಿಷಯದಲ್ಲಿ ವಿಶ್ವಾಸ ವುಳ್ಳವರಾಗಿದ್ದರು. ದ್ವಾರಕೆಯಲ್ಲಿದ್ದ ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ, ಮಹಾಧನವಂತರಾದ ಶೂದ್ರರೂ, ವಾಸುದೇವನ ಹದಿನಾರು ಸಾವಿರ ಮಂದಿ ಅಂತಃಪುರದ ಸ್ತ್ರೀಯರೂ, ಧೀಮಂತನಾದ ಶ್ರೀಕೃಷ್ಣನ ಮೊಮ್ಮಗನಾದ ವಜ್ರನನ್ನೇ ಮುಂದುಮಾಡಿಕೊಂಡು ಅರ್ಜುನನ ಜೊತೆಯಲ್ಲಿ

ಪ್ರಯಾಣಹೊರಟರು. ಭೋಜ, ವೃಷ್ಣಿ ಮತ್ತು ಅಂಧಕವಂಶದವರ ಅನಾಥ ಸ್ತ್ರೀಯರ ಸಂಖ್ಯೆಯು ಅನೇಕಸಹಸ್ರ-ಪ್ರಯುತ-ಅರ್ಬುದವನ್ನು ಮುಟ್ಟಿದ್ದಿತು. (ಅಪಾರವಾಗಿದ್ದಿತು.) ಅವರೆಲ್ಲರೂ ದ್ವಾರಕೆಯಿಂದ ನಿರ್ಗಮಿಸಿದರು. ಸಮೃದ್ಧಶಾಲಿಯಾಗಿದ್ದ ಆ ವೃಷ್ಣಿಮಂಡಲವು ಮಹಾಸಾಗರಕ್ಕೆ ಸಮಾನವಾಗಿ ಕಾಣುತ್ತಿದ್ದಿತು. ಶತ್ರುಪುರವಿಜಯಿಯಾದ, ರಥಿಗಳಲ್ಲಿ ಶ್ರೇಷ್ಠನಾದ ಅರ್ಜುನನು ಆ ವೃಷ್ಣಿಮಂಡಲವನ್ನು ತನ್ನೊಡನೆ ಕರೆದುಕೊಂಡು ಹೊರಟನು.

ನಿರ್ಯಾತೇ ತು ಜನೇ ತಸ್ಮಿನ್ಸಾಗರೋ ಮಕರಾಲಯಃ ।
ದ್ವಾರಕಾಂ ರತ್ನಸಮ್ಪೂರ್ಣಾಂ ಜಲೇನಾಪ್ಲಾವಯತ್ತದಾ ॥೪೧॥

ಆ ಜನಸಮುದಾಯವು ದ್ವಾರಕೆಯಿಂದ ನಿರ್ಗಮಿಸಿದನಂತರ ಮಕರಾಲಯವು (ಸಾಗರವು) ರತ್ನಭರಿತವಾಗಿದ್ದ ದ್ವಾರಕಾಪಟ್ಟಣವನ್ನು ನೀರಿನಿಂದ ತುಂಬಿಬಿಟ್ಟಿತು.

ಯದ್ಯದ್ಧಿ ಪುರುಷವ್ಯಾಘ್ರೋ ಭೂಮೇಸ್ತಸ್ಯಾ ವ್ಯಮುಞ್ಚತ ।
ತತ್ತತ್ಸಮ್ಪ್ಲಾವಯಾಮಾಸ ಸಲಿಲೇನ ಸ ಸಾಗರಃ ॥೪೨॥

ಪುರುಷಶ್ರೇಷ್ಠನಾದ ಅರ್ಜುನನು ಯಾವ ಯಾವ ಭೂಪ್ರದೇಶವನ್ನು ಬಿಟ್ಟು ಮುಂದೆ ಹೋಗುತ್ತಿದ್ದನೋ–ಆ ಎಲ್ಲ ಭೂಭಾಗಗಳನ್ನೂ ಸಾಗರನು ನೀರಿನಿಂದ ಮುಳುಗಿಸಿಬಿಡುತ್ತಿದ್ದನು.

ಅಂತಹ ಅದ್ಭುತದೃಶ್ಯವನ್ನು ನೋಡಿದ ದ್ವಾರಕಾಪುರವಾಸಿಗಳು– 'ಅಹೋ ದೈವಂ' 'ದೈವದ ಲೀಲೆಯು ವಿಚಿತ್ರವಾಗಿದೆ'–ಎಂದು ಹೇಳಿಕೊಳ್ಳುತ್ತಾ ಶೀಘ್ರಾತಿಶೀಘ್ರವಾಗಿ ಪ್ರಯಾಣಮಾಡುತ್ತಿದ್ದರು. ಅರ್ಜುನನು ರಮಣೀಯವಾದ ಅರಣ್ಯಪ್ರದೇಶಗಳಲ್ಲಿಯೂ, ಪರ್ವತದ ತಪ್ಪಲುಗಳಲ್ಲಿಯೂ, ನದಿಗಳ ತೀರಗಳಲ್ಲಿಯೂ ಬಿಡಾರಮಾಡುತ್ತಾ ವೃಷ್ಣಿಕುಲದ ಸ್ತ್ರೀಯರನ್ನು ಕರೆದುಕೊಂಡು ಹೋಗುತ್ತಿದ್ದನು.

ಹಾಗೆಯೇ ಪ್ರಯಾಣಮಾಡುತ್ತಾ ಧೀಮಂತನಾದ ಅರ್ಜುನನು ಸಮೃದ್ಧಿಶಾಲಿಯಾಗಿದ್ದ, ಗೋ-ಪಶು-ಧಾನ್ಯಗಳಿಂದ ಸಂಪನ್ನವಾಗಿದ್ದ ಪಂಚನದದೇಶಕ್ಕೆ ಹೋಗಿ ಅಲ್ಲಿ ಸ್ವಲ್ಪಕಾಲ ಪರಿವಾರದೊಡನೆ ತಂಗಿದನು. ಗಂಡಂದಿರನ್ನು ಕಳೆದುಕೊಂಡಿದ್ದ ಸಾವಿರಾರು ಸ್ತ್ರೀಜನರನ್ನು ಅರ್ಜುನನೊಬ್ಬನೇ ಸಂರಕ್ಷಿಸುತ್ತಾ ಇಂದ್ರಪ್ರಸ್ಥಕ್ಕೆ ಕರೆದುಕೊಂಡು ಹೋಗುತ್ತಿರುವು

ದನ್ನು ನೋಡಿ ಪಂಚನದಪ್ರದೇಶದಲ್ಲಿದ್ದ ದರೋಡೆಕೋರರಿಗೆ ಲೋಭವುಂಟಾಯಿತು. ಪಾಪಕರ್ಮಿಗಳಾದ, ಅಶುಭದರ್ಶಿಗಳಾದ ಆಭೀರರೆಂಬ ಆ ದರೋಡೆಕೋರರು ಲೋಭದಿಂದ ವಿವೇಕವನ್ನು ಕಳೆದುಕೊಂಡು ಪರಸ್ಪರವಾಗಿ ಸಮಾಲೋಚಿಸತೊಡಗಿದರು :

ಅಯಮೇಕೋಽರ್ಜುನೋ ಧನ್ವೀ ವೃದ್ಧಬಾಲಂ ಹತೇಶ್ವರಮ್ ।
ನಯತ್ಯಸ್ಮಾನತಿಕ್ರಮ್ಯ ಯೋಧಶ್ಚೇಮೇ ಹತೌಜಸಃ ॥೪೮॥

'ಧನುರ್ಧರನಾಗಿರುವ ಈ ಅರ್ಜುನನೊಬ್ಬನೇ ನಮ್ಮನ್ನು ಅತಿಕ್ರಮಿಸಿ ವೃದ್ಧರನ್ನೂ, ಬಾಲಕರನ್ನೂ ಮತ್ತು ಗಂಡಂದಿರನ್ನು ಕಳೆದುಕೊಂಡಿರುವ ಸಾವಿರಾರು ಮಹಿಳೆಯರನ್ನೂ ಕರೆದುಕೊಂಡು ಹೋಗುತ್ತಿದ್ದಾನೆ. ಇವನ ಜೊತೆಯಲ್ಲಿ ಹೋಗುತ್ತಿರುವ ಯದುಸೈನಿಕರು ಕೂಡ ನಾಯಕರನ್ನು ಕಳೆದುಕೊಂಡು ತೇಜೋಹೀನರಾಗಿದ್ದಾರೆ. (ಇವರಲ್ಲಿರುವ ಐಶ್ವರ್ಯವನ್ನು ಕೊಳ್ಳೆಹೊಡೆಯಲು ಇದು ಸರಿಯಾದ ಸಮಯವಾಗಿದೆ).' ಲೂಟಿಮಾಡುವುದಲ್ಲಿ ಪರಿಣತರಾದ ಆ ದರೋಡೆಕೋರರು ಹೀಗೆ ನಿಶ್ಚಯಿಸಿ ಸಾವಿರಾರು ಸಂಖ್ಯೆಯಲ್ಲಿ ದೊಣ್ಣೆಗಳನ್ನು ಹಿಡಿದುಕೊಂಡು ವೃಷ್ಣಿವಂಶದ ಜನಸಮುದಾಯವನ್ನು ಆಕ್ರಮಿಸಿದರು. ಕಾಲವೈಪರೀತ್ಯದಿಂದ ಪ್ರೇರಿತರಾದ ಆ ದಸ್ಯುಗಳು ವೃಷ್ಣಿಗಳೆಲ್ಲರನ್ನೂ ಸಂಹರಿಸುವ ಸಲುವಾಗಿ ಸಿಂಹನಾದಗಳನ್ನು ಮಾಡುತ್ತಾ ಸಾಧಾರಣಜನರನ್ನು ಭಯಪಡಿಸುತ್ತಾ ಆಕ್ರಮಣಮಾಡಿದರು. ದರೋಡೆಕೋರರು ಹಿಂಬದಿಯಿಂದ ವೃಷ್ಣಿಪರಿವಾರದ ಮೇಲೆ ದಾಳಿನಡೆಸುತ್ತಿರುವುದನ್ನು ನೋಡಿ ಮಹಾಬಾಹುವಾದ ಕುಂತಿಯ ಮಗನಾದ ಅರ್ಜುನನು ಒಡನೆಯೇ ತನ್ನ ಸೇವಕರೊಡನೆ ಹಿಂದಿರುಗಿ ನಗು-ನಗುತ್ತಲೇ ದಸ್ಯುಗಳನ್ನು ಕುರಿತು ಹೇಳಿದನು :

ನಿವರ್ತಧ್ವಮಧರ್ಮಜ್ಞಾ ಯದಿ ಜೀವಿತುಮಿಚ್ಛಥ ।
ಇದಾನೀಂ ಶರನಿರ್ಭಿನ್ನಾಃ ಶೋಚಧ್ವಂ ನಿಹತಾ ಮಯಾ ॥೫೨॥

"ಧರ್ಮವನ್ನು ತಿಳಿಯದ ಪಾಪಿಗಳೇ! ನಿಮಗೇನಾದರೂ ಜೀವಿಸಿರಲು ಅಪೇಕ್ಷೆಯಿದ್ದರೆ ಈ ಕೂಡಲೇ ಆಕ್ರಮಣವನ್ನು ನಿಲ್ಲಿಸಿ ಹಿಂದಿರುಗಿರಿ. ಹಾಗೇನಾದರೂ ಹಿಂದಿರುಗದಿದ್ದರೆ ಈಗಲೇ ನನ್ನ ಬಾಣಪ್ರಹಾರಗಳಿಂದ ಛಿನ್ನ-ಭಿನ್ನರಾಗಿ ಅಸುವನ್ನು ತೊರೆಯುತ್ತಾ ಶೋಕಪಡುವಿರಿ."

ಜನಮೇಜಯ! ವೀರನಾದ ಅರ್ಜುನನು ಹೀಗೆ ಹೇಳುತ್ತಾ ಅವರು ಮುಂದೆ ಬರುವುದನ್ನು ಪುನಃ ಪುನಃ ತಡೆಯುತ್ತಿದ್ದರೂ ಮೂಢರಾದ ಆ ಆಭೀರರು ಅರ್ಜುನನ ಮಾತನ್ನು ತುಚ್ಛೀಕರಿಸಿ ವೃಷ್ಣಿವಂಶದ ಮೇಲೆ ಆಕ್ರಮಣವನ್ನು ಮುಂದುವರಿಸಿದರು.

ಬಳಿಕ ಅರ್ಜುನನು ಜೀರ್ಣವಾಗದಿದ್ದ, ದಿವ್ಯವಾದ, ವಿಶಾಲವಾದ ಗಾಂಡೀವಧನುಸ್ಸಿಗೆ ಹೆದೆಯೇರಿಸಲು ಉಪಕ್ರಮಿಸಿದನು. ಆದರೆ ಮೊದಲಿನಂತೆ ಸುಲಭವಾಗಿ ಹೆದೆಯೇರಿಸಲು (ಶಿಂಜಿನಿಯನ್ನು ಸೆಳೆದುಕಟ್ಟಲು) ಅರ್ಜುನನಿಗೆ ಸಾಧ್ಯವಾಗಲಿಲ್ಲ. ಸ್ವಲ್ಪ ಕಷ್ಟಪಡಬೇಕಾಯಿತು. ಭಯಂಕರವಾದ ದೊಂಬಿಯಾಗುತ್ತಿದ್ದಾಗ ಅರ್ಜುನನು ಬಹಳ ಕಷ್ಟದಿಂದಲೇ ಧನುಸ್ಸನ್ನು ಸಜ್ಜುಗೊಳಿಸಿದನು. ಎಷ್ಟೇ ಚಿಂತಿಸಿದರೂ ಯಾವುದೊಂದು ಅಸ್ತ್ರವೂ ಅವನ ಸ್ಮರಣೆಗೆ ಬರಲೇ ಇಲ್ಲ. ಯುದ್ಧದ ಸಮಯದಲ್ಲಿ ತನ್ನ ಬಾಹುಬಲದಲ್ಲಿ ಆದ ಮಹಾವಿಕಾರವನ್ನು ಗಮನಿಸಿದ ಅರ್ಜುನನು ದಿವ್ಯವಾದ ಮಹಾಸ್ತ್ರಗಳು ಸ್ಮರಣೆಗೆ ಬಾರದಿದ್ದುಕ್ಕಾಗಿ (ವಿನಾಶಹೊಂದಿದುಕ್ಕಾಗಿ) ನಾಚಿದನು. ಗಜಾಶ್ವರಥಯೋಧಿಗಳಾದ ವೃಷ್ಣಿಸೈನಿಕರೂ ದಸ್ಯುಗಳಿಂದ ಅಪಹರಿಸಲ್ಪಡುತ್ತಿದ್ದ ತಮ್ಮ ಜನರನ್ನು ಬಿಡಿಸಿಕೊಳ್ಳಲು ಸಮರ್ಥರಾಗಲಿಲ್ಲ. ವೃಷ್ಣಿಸಮುದಾಯದಲ್ಲಿ ಸ್ತ್ರೀಯರೇ ಬಹುಸಂಖ್ಯೆಯಲ್ಲಿದ್ದರು. ಆದುದರಿಂದ ದರೋಡೆಕೋರರು ಅಲ್ಲಿಯೇ ದಾಳಿಮಾಡುತ್ತಿದ್ದರು. ಅರ್ಜುನನು ಅವರನ್ನು ರಕ್ಷಿಸಲು ಸಾಧ್ಯವಾದಷ್ಟು ರೀತಿಯಲ್ಲಿ ಪ್ರಯತ್ನಿಸುತ್ತಿದ್ದನು.

ಮಿಷತಾಂ ಸರ್ವಯೋಧಾನಾಂ ತತಸ್ತಾಃ ಪ್ರಮದೋತ್ತಮಾಃ ।
ಸಮನ್ತತೋಽವಕೃಷ್ಯನ್ತ ಕಾಮಾಚ್ಚಾನ್ಯಾಃ ಪ್ರವವ್ರಜುಃ ॥೫೯॥

ವೃಷ್ಣಿಯೋಧರು ನೋಡುತ್ತಿದ್ದಂತೆಯೇ ದರೋಡೆಕೋರರು ಸುಂದರಿಯರಾದ ಸ್ತ್ರೀಯರನ್ನು ಎಲ್ಲ ಕಡೆಗಳಿಂದಲೂ ಆಕ್ರಮಿಸಿ ಸೆಳೆದೊಯ್ಯುತ್ತಿದ್ದರು. ಮತ್ತೆ ಕೆಲವರು ಸ್ತ್ರೀಯರು ಸ್ವೇಚ್ಛೆಯಿಂದಲೇ ದರೋಡೆಕೋರರ ಹಿಂದೆ ಹೊರಟುಹೋದರು. ಅದನ್ನು ನೋಡಿ ಉದ್ವಿಗ್ನನಾದ ಅರ್ಜುನನು ವೃಷ್ಣಿಸೈನಿಕರೊಡನೆ ಗಾಂಡೀವಧನುಸ್ಸಿನಿಂದ ಬಿಡಲ್ಪಟ್ಟ ಬಾಣಗಳಿಂದ ಸಾವಿರಾರು ಸಂಖ್ಯೆಯಲ್ಲಿ ದಸ್ಯುಗಳನ್ನು ಸಂಹರಿಸಿದನು.

ಕ್ಷಣೇನ ತಸ್ಯ ತೇ ರಾಜನ್ ಕ್ಷಯಂ ಜಗ್ಮುರಜಿಹ್ಮಗಾಃ ।
ಅಕ್ಷಯಾ ಹಿ ಪುರಾ ಭೂತ್ವಾ ಕ್ಷೀಣಾಃ ಕ್ಷತಜಭೋಜನಾಃ ॥೬೧॥

ಜನಮೇಜಯ! ಅಚ್ಚರಿಯ ವಿಷಯವೆಂದರೆ–ಅರ್ಜುನನ ಬತ್ತಳಿಕೆಯಲ್ಲಿದ್ದ ನೇರವಾಗಿ ಹೋಗುವ ಬಾಣಗಳು ಕ್ಷಣಮಾತ್ರದಲ್ಲಿ ಬರಿದಾದುವು. ಹಿಂದೆ ಅಕ್ಷಯತೂಣೀರದಲ್ಲಿದ್ದ ಬಾಣಗಳು ಬರಿದಾಗುತ್ತಲೇ ಇರಲಿಲ್ಲ. ಕಾಲದ ವಿಪರ್ಯಾಸದಿಂದಾಗಿ ಹಿಂದೆ ಅಕ್ಷಯವಾಗುತ್ತಿದ್ದ ರಕ್ತಭೋಜಿಗಳಾದ ಬಾಣಗಳು ಕ್ಷಯಿಸಿದುವು (ಮುಗಿದುಹೋದುವು). ಇದರಿಂದ ಅರ್ಜುನನಿಗೆ ತಡೆಯಲಾಗದಷ್ಟು ಶೋಕವುಂಟಾಯಿತು. ಆದರೂ ಧೃತಿಗೆಡದೇ ಅವನು ಬಿಲ್ಲಿನ ತುದಿಯಿಂದಲೇ ಸಾವಿರಾರು ದಸ್ಯುಗಳನ್ನು ಸಂಹರಿಸಿದನು. ಆದರೆ ಅದರಿಂದ ದುಷ್ಪರಿಣಾಮವನ್ನು ತಪ್ಪಿಸಲು ಅರ್ಜುನನಿಗೆ ಸಾಧ್ಯವಾಗಲಿಲ್ಲ.

ಪ್ರೇಕ್ಷತಸ್ತ್ವೇವ ಪಾರ್ಥಸ್ಯ ವೃಷ್ಣ್ಯನ್ಧಕವರಸ್ತ್ರಿಯಃ ।
ಜಗ್ಮುರಾದಾಯ ತೇ ಮ್ಲೇಚ್ಛಾಃ ಸಮನ್ತಾಜ್ಜನಮೇಜಯ ॥೬೨॥

ಅರ್ಜುನನು ನೋಡುತ್ತಿದ್ದಂತೆಯೇ ಮ್ಲೇಚ್ಛರು ವೃಷ್ಣ್ಯಂಧಕರ ಸುಂದರಿಯರಾದ ಸ್ತ್ರೀಯರನ್ನು ಎಲ್ಲ ಕಡೆಗಳಿಂದಲೂ ಸೆಳೆದುಕೊಂಡು ಹೋಗುತ್ತಿದ್ದರು. ಪ್ರಭಾವಶಾಲಿಯಾದ ಧನಂಜಯನಾದರೋ ಇದು ದೈವದ ನಿಶ್ಚಯವೆಂದೇ ಭಾವಿಸಿದನು. ದುಃಖ-ಶೋಕಗಳಿಂದ ಪೀಡಿತನಾಗಿದ್ದ ಅವನು ಬಾರಿಬಾರಿಗೂ ದೀರ್ಘವಾಗಿ ನಿಟ್ಟುಸಿರುಬಿಡುತ್ತಿದ್ದನು.

ಅಸ್ತ್ರಾಣಾಂ ಚ ಪ್ರಣಾಶೇನ ಬಾಹುರ್ವೀರ್ಯಸ್ಯ ಸಂಕ್ಷಯಾತ್ ।
ಧನುಷಶ್ಚಾವಿಧೇಯತ್ವಾಚ್ಛರಾಣಾಂ ಸಂಕ್ಷಯೇಣ ಚ ।
ಬಭೂವ ವಿಮನಾಃ ಪಾರ್ಥೋ ದೈವಮಿತ್ಯನುಚಿನ್ತಯನ್ ॥೬೩॥

ಅಸ್ತ್ರಗಳ ವಿಸ್ಮರಣೆಯಿಂದಲೂ, ಬಾಹುಗಳಲ್ಲಿ ವೀರ್ಯವು ಉಡುಗಿ ಹೋಗಿದ್ದುದರಿಂದಲೂ, ಧನುಸ್ಸನ್ನು ಬಗ್ಗಿಸಲು ಕಷ್ಟಸಾಧ್ಯವಾಗಿದ್ದುದರಿಂದಲೂ, ಅಕ್ಷಯತೂಣೀರದಲ್ಲಿದ್ದ ಬಾಣಗಳು ಬರಿದಾದುದರಿಂದಲೂ ಅರ್ಜುನನು ಉತ್ಸಾಹಹೀನನಾದನು. ಎಲ್ಲವೂ ದೈವದ ನಿಶ್ಚಯವೆಂದೇ ಭಾವಿಸಿದನು.

ಬಳಿಕ ಅರ್ಜುನನು ಯುದ್ಧದಿಂದ ಹಿಂದಿರುಗುತ್ತಾ–'ನೇದಮಸ್ತಿ' 'ಅಸ್ತ್ರಜ್ಞಾನವಾಗಲೀ ಬಾಹುಬಲವಾಗಲೀ ಯಾವುದೂ ಶಾಶ್ವತವಾಗಿ ಉಳಿಯುವುದಿಲ್ಲ'–ಎಂದು ಉದ್ಗರಿಸಿದನು.

ಮ್ಲೇಚ್ಛರು ಅಪಹರಿಸಿಕೊಂಡುಹೋಗಿ ಉಳಿದ ಸ್ತ್ರೀಯರೊಡನೆ ಮತ್ತು ರತ್ನಗಳೊಡನೆ ಮಹಾಮತಿಯಾದ ಪಾರ್ಥನು ಕುರುಕ್ಷೇತ್ರಕ್ಕೆ ಬಂದನು. ಹೀಗೆ ಅಪಹೃತರಾಗದೇ ಉಳಿದ ವೃಷ್ಣಿವಂಶದ ಸ್ತ್ರೀಯರನ್ನು ಕರೆದುಕೊಂಡು ಬರುವಾಗ ಅಲ್ಲಲ್ಲಿ ವಿಶ್ರಮಿಸಿಕೊಂಡು ಪ್ರಯಾಣಮಾಡುತ್ತಿದ್ದನು. ನರಶ್ರೇಷ್ಠನಾದ ಅರ್ಜುನನು ಹಾರ್ದಿಕ್ಯನ (ಕೃತವರ್ಮನ) ಮಗನನ್ನೂ ಮತ್ತು ಅಪಹೃತರಾಗದೇ ಉಳಿದಿದ್ದ ಭೋಜರಾಜನ ಪತ್ನಿಯರನ್ನೂ ಮಾರ್ತಿಕಾವತ ಎಂಬ ನಗರದಲ್ಲಿ ಇರುವಂತೆ ವ್ಯವಸ್ಥೆಮಾಡಿದನು. ಅನಂತರ ಅರ್ಜುನನು ವೀರರಿಂದ ವಿಹೀನರಾಗಿದ್ದ ಉಳಿದ ವೃದ್ಧರನ್ನೂ ಬಾಲಕರನ್ನೂ ಹೆಂಗಸರನ್ನೂ ಕರೆದುಕೊಂಡು ಇಂದ್ರಪ್ರಸ್ಥಕ್ಕೆ ಹೋಗಿ ಅಲ್ಲಿ ಅವರ ವಾಸಕ್ಕೆ ವ್ಯವಸ್ಥೆಮಾಡಿದನು. ಧರ್ಮಾತ್ಮನಾದ ಅರ್ಜುನನು ವೃದ್ಧರಿಂದಲೂ ಬಾಲಕರಿಂದಲೂ ಪುರಸ್ಕೃತನಾದ, ಸಾತ್ಯಕಿಯ ಪ್ರಿಯಪುತ್ರನಾದ ಯೌಯುಧಾನಿಯನ್ನು ಸರಸ್ವತೀನದಿಯ ತೀರದಲ್ಲಿದ್ದ ದೇಶಗಳಿಗೆ ರಾಜನನ್ನಾಗಿ ಮಾಡಿದನು.

ಪರವೀರಹಂತಕನಾದ ಅರ್ಜುನನು ಶ್ರೀಕೃಷ್ಣನ ಮೊಮ್ಮಗನಾದ ವಜ್ರನಿಗೆ ಇಂದ್ರಪ್ರಸ್ಥರಾಜ್ಯವನ್ನು ವಹಿಸಿಕೊಟ್ಟನು. ವಜ್ರನು ಅಕ್ರೂರನ ಪತ್ನಿಯರನ್ನು ಬಹಳವಾಗಿ ತಡೆದರೂ ಅವರು ಅವನ ಮಾತನ್ನು ಪುರಸ್ಕರಿಸದೇ ಅರಣ್ಯಕ್ಕೆ ಹೊರಟುಹೋದರು. ಅನಂತರ ಶ್ರೀಕೃಷ್ಣನ ಭಾರ್ಯೆಯರಾದ ರುಕ್ಮಿಣೀ, ಗಾಂಧಾರೀ, ಶೈಬ್ಯಾ, ಹೈಮವತಿ, ಜಾಂಬವತೀದೇವಿಯರು ಅಗ್ನಿಪ್ರವೇಶಮಾಡಿದರು. ಶ್ರೀಕೃಷ್ಣನಿಗೆ ಪ್ರಿಯರಾದ ಸತ್ಯಭಾಮೆಯೇ ಮೊದಲಾದ ಇತರ ದೇವಿಯರು ತಪಸ್ಸುಮಾಡಲು ನಿಶ್ಚಯಿಸಿ ಅರಣ್ಯಕ್ಕೆ ಹೋದರು. ದ್ವಾರಕೆಯಿಂದ ಅರ್ಜುನನ ಜೊತೆಯಲ್ಲಿ ಬಂದಿದ್ದವರನ್ನು ಅರ್ಹತೆಗೆ ತಕ್ಕಂತೆ ವಿಭಾಗಿಸಿ ಪಾರ್ಥನು ವಜ್ರನಿಗೆ ಒಪ್ಪಿಸಿದನು.

ಹೀಗೆ ಅರ್ಜುನನು ಸಮಯೋಚಿತವಾಗಿ ಎಲ್ಲದರ ವ್ಯವಸ್ಥೆಯನ್ನೂ

ಮಾಡಿ ಕಂಬನಿದುಂಬಿದ ಕಣ್ಣುಗಳಿಂದ ಕೂಡಿದವನಾಗಿ ಆಶ್ರಮದಲ್ಲಿ ಕುಳಿತಿದ್ದ ಕೃಷ್ಣದ್ವೈಪಾಯನವ್ಯಾಸರನ್ನು ಸಂದರ್ಶಿಸಿದನು.”

ಽನೆಯ ಅಧ್ಯಾಯವು ಮುಗಿಯಿತು.

೮ನೆಯ ಅಧ್ಯಾಯ ಮೌಸಲಪರ್ವ (ಮುಂದುವರಿದಿದೆ.)

ವ್ಯಾಸಾರ್ಜುನರ ಸಂಭಾಷಣೆ

ವೈಶಂಪಾಯನರು ಹೇಳುತ್ತಾರೆ :

ಪ್ರವಿಶನ್ನರ್ಜುನೋ ರಾಜನ್ನಾಶ್ರಮಂ ಸತ್ಯವಾದಿನಃ ।
ದದರ್ಶಾಸೀನಮೇಕಾನ್ತೇ ಮುನಿಂ ಸತ್ಯವತೀಸುತಮ್ ॥೧॥

ಜನಮೇಜಯ! ಅರ್ಜುನನು ಸತ್ಯವಾದಿಗಳಾದ ವ್ಯಾಸರ ಆಶ್ರಮವನ್ನು ಪ್ರವೇಶಿಸಿ ಅಲ್ಲಿ ಏಕಾಂತದಲ್ಲಿ ಕುಳಿತಿದ್ದ ಸತ್ಯವತಿಯ ಮಕ್ಕಳಾದ ವ್ಯಾಸರನ್ನು ನೋಡಿದನು.

ಅರ್ಜುನನು ಮಹಾವ್ರತನಿಷ್ಠರಾದ, ಧರ್ಮಜ್ಞರಾದ ವ್ಯಾಸರ ಬಳಿಗೆ ಹೋಗಿ–‘ಅರ್ಜುನೋಽಸ್ಮಿ’–ಎಂದು ಹೇಳಿ ಅವರಿಗೆ ತನ್ನ ನಾಮಧೇಯವನ್ನು ಹೇಳಿಕೊಂಡು ಅಭಿವಾದನಪೂರ್ವಕವಾಗಿ ನಮಸ್ಕರಿಸಿದನು. ಸತ್ಯವತಿಯ ಮಕ್ಕಳಾದ ಮಹಾಮುನಿಗಳಾದ ವ್ಯಾಸರು ಅರ್ಜುನನನ್ನು ಕಂಡು ಪ್ರಸನ್ನಾತ್ಮರಾಗಿ–‘ಸ್ವಾಗತಂ ತೇ’–‘ನಿನಗೆ ಸ್ವಾಗತವು’ ‘ಆಸ್ಯತಾಂ’ ‘ಕುಳಿತುಕೊ’ ಎಂದು ಹೇಳಿದರು. ಅಪ್ರಸನ್ನವಾದ ಮನಸ್ಸಿನಿಂದ ಕೂಡಿದ್ದ ಬಾರಿ-ಬಾರಿಗೂ ದೀರ್ಘವಾಗಿ ನಿಟ್ಟುಸಿರುಬಿಡುತ್ತಿದ್ದ, ನಿರ್ವಿಣ್ಣನಾಗಿದ್ದ ಅರ್ಜುನನನ್ನು ನೋಡಿ ವ್ಯಾಸರು ಹೇಳಿದರು :

ನಖಕೇಶದಶಾಕುಮ್ಭವಾರಿಣಾ ಕಿಂ ಸಮುಕ್ಷಿತಃ ।
ಆವೀರಜಾನುಗಮನಂ ಬ್ರಾಹ್ಮಣೋ ವಾ ಹತಸ್ತ್ವಯಾ ॥೫॥

“ಅರ್ಜುನ! ನೀನು ನಖೋದಕದಿಂದಾಗಲೀ, ಕೇಶೋದಕದಿಂದಾಗಲೀ, ವಸ್ತ್ರಾಂತದ ನೀರಿನಿಂದಾಗಲೀ, ಕುಂಭದಲ್ಲಿದ್ದ ನೀರಿನಿಂದಾಗಲೀ ಸ್ನಾನ ಮಾಡಿದೆಯಾ? ರಜಸ್ವಲೆಯಾಗಿರುವ ಸ್ತ್ರೀಯೊಡನೆ ಸಮಾಗಮಮಾಡಿದೆಯಾ? ಬ್ರಾಹ್ಮಣನನ್ನೇನಾದರೂ ವಧಿಸಿದೆಯಾ? ಏಕೆಂದರೆ ; ನೀನು

ಇಂದು ಕಾಂತಿಯಿಂದ ಹೀನನಾಗಿರುವೆ. ಯುದ್ಧದಲ್ಲೇನಾದರೂ ಪರಾಜಯ ಹೊಂದಿದೆಯಾ? ನೀನು ಕಾಂತಿಹೀನನಾಗಿರುವುದರಿಂದ ಯುದ್ಧದಲ್ಲಿ ಪರಾಜಯಗೊಂಡಂತೆ ಕಾಣುತ್ತಿದೆ. ಭರತವರ್ಷಭನೇ! ನೀನು ಯಾವಾಗ



ಲಾದರೂ ಪರಾಜಿತನಾಗಿದ್ದೆಯಾ? ನನಗಂತೂ ಆ ವಿಷಯವು ತಿಳಿಯದು. ನಾನು ತಿಳಿದುಕೊಳ್ಳಬಹುದಾಗಿದ್ದರೆ ನಿನ್ನ ದೈನ್ಯಕ್ಕೆ ಕಾರಣವನ್ನು ಬೇಗ ಹೇಳು."

ಅರ್ಜುನನು ಹೇಳುತ್ತಾನೆ :

"ಪೂಜ್ಯರೇ! ಮೇಘಶ್ಯಾಮನಾದ, ಸುಂದರಾಂಗನಾದ, ಕಮಲದಂತೆ ವಿಶಾಲನೇತ್ರನಾದ ಶ್ರೀಕೃಷ್ಣನು ಬಲರಾಮನೊಡನೆ ದೇಹವನ್ನು ತ್ಯಜಿಸಿ ಪರಂಧಾಮಕ್ಕೆ ಹೊರಟುಹೋದನು. ಬ್ರಾಹ್ಮಣರ ಶಾಪದಿಂದ ಉಂಟಾದ

ಮೌಸಲಯುದ್ಧದಲ್ಲಿ ವೃಷ್ಣಿವೀರರೆಲ್ಲರೂ ವಿನಾಶಹೊಂದಿದರು. ಪ್ರಭಾಸ ಕ್ಷೇತ್ರದಲ್ಲಿ ಸಾವಿರಾರು ವೀರರನ್ನು ಅಂತ್ಯಗೊಳಿಸಿದ ರೋಮಾಂಚಕರವಾದ ಮೌಸಲಮಹಾಯುದ್ಧವು ನಡೆಯಿತು. ಶೂರರಾದ, ಮಹಾತ್ಮರಾದ, ಸಿಂಹ ದರ್ಪರಾದ, ಮಹಾಬಲರಾದ ಭೋಜರೂ, ವೃಷ್ಣಿಗಳೂ ಮತ್ತು ಅಂಧಕರೂ ಪರಸ್ಪರವಾಗಿ ಬಡಿದಾಡಿಯೇ ಅಸುಗಳನ್ನು ತೊರೆದರು. ಗದೆ, ಪರಿಘ ಮತ್ತು ಶಕ್ತ್ಯಾಯುಧಗಳ ಪ್ರಹಾರಗಳನ್ನು ಸಹಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದ್ದ, ಪರಿಘಾಯುಧದಂತಹ ಬಾಹುಗಳನ್ನು ಹೊಂದಿದ್ದ ಅವರೆಲ್ಲರೂ ಸಮುದ್ರದ ತೀರದಲ್ಲಿ ಬೆಳೆದಿದ್ದ ಜೊಂಡುಹುಲ್ಲಿನ ಪ್ರಹಾರಗಳಿಂದಲೇ ಹತರಾದರು.

ಪೂಜ್ಯರೇ! ಕಾಲವೈಪರೀತ್ಯವನ್ನಾದರೂ ನೋಡಿರಿ. ಸುಂದರವಾದ ಮತ್ತು ಬಲಿಷ್ಠವಾದ ಬಾಹುಗಳನ್ನು ಹೊಂದಿದ್ದ ಐದು ಲಕ್ಷ ಯೋಧರು ತಮ್ಮ-ತಮ್ಮಲ್ಲಿಯೇ ಜಗಳವಾಡಿಕೊಂಡು ನಿಧನಹೊಂದಿದರು. ಮಹಾ ತೇಜಸ್ವಿಗಳಾದ ಯಾದವರ ಮತ್ತು ಯಶೋವಂತನಾದ ಶ್ರೀಕೃಷ್ಣನ ವಿನಾಶ ವನ್ನು ಪದೇ-ಪದೇ ಚಿಂತಿಸುತ್ತಿರುವ ನನಗೆ ಈ ದುಃಖವನ್ನು ಸಹಿಸಿಕೊಳ್ಳಲು ಸಾಧ್ಯವೇ ಆಗುತ್ತಿಲ್ಲ.

ಶೋಷಣಂ ಸಾಗರಸ್ಯೇವ ಪರ್ವತಸ್ಯೇವ ಚಾಲನಮ್ ।
ನಭಸಃ ಪತನಂ ಚೈವ ಶೈತ್ಯಮಗ್ನೇಸ್ತಥೈವ ಚ ।
ಅಶ್ರದ್ಧೇಯಮಹಂ ಮನ್ಯೇ ವಿನಾಶಂ ಶಾರ್ಙ್ಗಧನ್ವನಃ ॥೧೪॥

ಸಾಗರವು ಬತ್ತಿಹೋಯಿತೆಂಬಂತೆ–ಪರ್ವತವು ಚಲಿಸಿತೆಂಬಂತೆ– ಆಕಾಶವು ಕಳಚಿಬಿದ್ದಿತೆಂಬಂತೆ–ಅಗ್ನಿಯು ಶೀತಲವಾಯಿತೆಂಬಂತೆ–ಶಾರ್ಙ್ಗ ಧನ್ವನಾದ ಶ್ರೀಕೃಷ್ಣನ ಮರಣವು ನಂಬಲು ಸಾಧ್ಯವಿಲ್ಲವಾಗಿದೆ. (ಶ್ರೀಕೃಷ್ಣನು ಮರಣಹೊಂದಿದನೆಂಬುದನ್ನು ನಂಬಲು ಸಾಧ್ಯವೇ ಇಲ್ಲ.) ಇದು ಸಾಗರವು ಬತ್ತಿಹೋಯಿತು ; ಪರ್ವತವು ಚಲಿಸಿತು ; ಆಕಾಶವು ಕಳಚಿಬಿದ್ದಿತು ; ಅಗ್ನಿಯು ತಣ್ಣಗಾಯಿತು ಎಂಬಂತಿದೆ.)

ಪೂಜ್ಯರೇ! ಶ್ರೀಕೃಷ್ಣನಿಂದ ವಿಹೀನನಾಗಿರುವ ಈ ಲೋಕದಲ್ಲಿರಲು

ಬಯಸುವುದಿಲ್ಲ. ಇದಕ್ಕಿಂತಲೂ ಮನಸ್ಸಿಗೆ ಹೆಚ್ಚು ಕಷ್ಟವನ್ನುಂಟುಮಾಡಿರುವ ಪ್ರಸಂಗವನ್ನು ಹೇಳುವೆನು ; ಕೇಳಿರಿ. ಈ ವಿಷಯವನ್ನೇ ಬಾರಿ-ಬಾರಿಗೂ ಚಿಂತಿಸುತ್ತಿರುವ ನನ್ನ ಹೃದಯವು ಸೀಳಿಹೋಗುತ್ತಿರುವುದೋ ಎಂಬಂತೆ ಕಾಣುತ್ತಿದೆ. ಪಂಚನದಪ್ರದೇಶದ ನಿವಾಸಿಗಳಾದ ಆಭೀರರು ನನ್ನೊಡನೆ ಯುದ್ಧಮಾಡಲು ಬಂದು ನನ್ನನ್ನು ಪರಾಭವಗೊಳಿಸಿ ನಾನು ನೋಡುತ್ತಿದ್ದಂತೆಯೇ ವೃಷ್ಣಿವೀರರ ಸಾವಿರಾರು ಮಡದಿಯರನ್ನು ಅಪಹರಿಸಿ ಕೊಂಡು ಹೋದರು. ಆ ಸಮಯದಲ್ಲಿ ಧನುಸ್ಸನ್ನೆತ್ತಿಕೊಂಡು ಹೆದೆಯೇರಿಸಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಹಿಂದಿದ್ದಂತೆ ಈಗ ನನ್ನ ಭುಜಗಳಲ್ಲಿ ಬಲವಿಲ್ಲ. ಮಹಾಮುನಿಗಳೇ! ವಿಧ-ವಿಧವಾದ ಮಹಾಸ್ತ್ರಗಳೂ ಮರೆತುಹೋದುವು. ಬತ್ತಳಿಕೆಗಳಲ್ಲಿದ್ದ ಬಾಣಗಳೂ ಕ್ಷಣಮಾತ್ರದಲ್ಲಿ ಬರಿದಾದುವು.

ಪುರುಷಶ್ಚಾಪ್ರಮೇಯಾತ್ಮಾ ಶಙ್ಖಚಕ್ರಗದಾಧರಃ ।
ಚತುರ್ಭುಜಃ ಪೀತವಾಸಾಃ ಶ್ಯಾಮಃ ಪದ್ಮದಲೇಕ್ಷಣಃ ॥೧೯॥

ಯಶ್ಚ ಯಾತಿ ಪುರಸ್ತಾನ್ಮೇ ರಥಸ್ಯ ಸುಮಹಾದ್ಯುತಿಃ ।
ಪ್ರದಹನ್ರಿಪುಸೈನ್ಯಾನಿ ನ ಪಶ್ಯಾಮ್ಯಹಮಚ್ಯುತಮ್ ॥೨೦॥

ಮಹಾಕಾಂತಿಯಿಂದ ಯುಕ್ತನಾದ ಯಾವ ಶ್ರೀಕೃಷ್ಣನು ಶತ್ರುಸೈನಿಕರನ್ನು ಭಸ್ಮಮಾಡುತ್ತಾ ನನ್ನ ರಥದ ಮುಂಭಾಗದಲ್ಲಿ ಕುಳಿತು ಹೋಗುತ್ತಿದ್ದನೋ ಅಂತಹ ಅಪ್ರಮೇಯಾತ್ಮನಾದ, ಶಂಖ-ಚಕ್ರ-ಗದಾಧರನಾದ, ಚತುರ್ಭುಜನಾದ, ಪೀತಾಂಬರನಾದ, ಶ್ಯಾಮಲವರ್ಣನಾದ, ಪದ್ಮದಳಾ ಯತಾಕ್ಷನಾದ ಅಚ್ಯುತನನ್ನು ನಾನೀಗ ಕಾಣುತ್ತಿಲ್ಲ. (ಇದೇ ನನ್ನ ಪರಾಭವಕ್ಕೆ ಕಾರಣವಿರಬಹುದೇ?)

ಯೇನ ಪೂರ್ವಂ ಪ್ರದಗ್ಧಾನಿ ಶತ್ರುಸೈನ್ಯಾನಿ ತೇಜಸಾ ।
ಶರೈರ್ಗಾಣ್ಡೀವನಿರ್ಮುಕ್ತೈರಹಂ ಪಶ್ಚಾಚ್ಚ ನಾಶಯಮ್ ।
ತಮಪಶ್ಯನ್ವಿಷೀದಾಮಿ ಘೂರ್ಣಾಮೀವ ಚ ಸತ್ತಮ ॥೨೧॥

ಯಾವ ಸೈನ್ಯವನ್ನು ಶ್ರೀಕೃಷ್ಣನು ಮೊದಲು ತನ್ನ ಪ್ರಖರವಾದ ತೇಜಸ್ಸಿನಿಂದ ದಹಿಸುತ್ತಿದ್ದನೋ–ಆ ಸೈನ್ಯವನ್ನೇ ನಾನು ಅನಂತರ ಗಾಂಡೀವ

ಧನುಸ್ಸಿನಿಂದ ಯುಕ್ತವಾದ ಬಾಣಗಳಿಂದ ನಾಶಗೊಳಿಸುತ್ತಿದ್ದನು. ಅಂತಹ ಮಹಾನುಭಾವನನ್ನು ನಾನೀಗ ನೋಡಲಾಗದೆ ವಿಷಾದಿಸುತ್ತಿದ್ದೇನೆ. ನನ್ನ ತಲೆಯೂ ಸುತ್ತುತ್ತಿರುವಂತಿದೆ. ಮನಸ್ಸಿಗೆ ಜುಗುಪ್ಸೆಯುಂಟಾಗಿದೆ. ಶಾಂತಿ ಯೆಂಬುದೇ ಇಲ್ಲವಾಗಿದೆ. ಜನಾರ್ದನನಿಲ್ಲದೇ ನಾನು ಜೀವಿಸಲು ಇಷ್ಟಪಡು ವುದಿಲ್ಲ. ಸರ್ವವ್ಯಾಪಿಯಾದ ಮಹಾವಿಷ್ಣುವು ಪರಂಧಾಮವನ್ನೈದಿದ ನೆಂದು ತಿಳಿದೊಡನೆಯೇ ನನಗೆ ದಿಕ್ಕುಗಳೇ ಕಾಣದಾಗಿವೆ. ನನ್ನ ಜ್ಞಾತಿ-ಬಾಂಧವರೆಲ್ಲರೂ ನಾಶವಾಗಿ ಹೋಗಿರುವರು. ನನ್ನ ಪರಾಕ್ರಮವೂ ನಷ್ಟವಾಗಿದೆ. ನಾನೀಗ ಬುದ್ಧಿಶೂನ್ಯನಾಗಿ ಅಲ್ಲಿಂದಿಲ್ಲಿಗೂ ಇಲ್ಲಿಂದಲ್ಲಿಗೂ ತಿರುಗಾಡುತ್ತಿದ್ದೇನೆ. ಸತ್ಪುರುಷಶ್ರೇಷ್ಠರೇ! ಈ ಸಮಯದಲ್ಲಿ ನನಗೆ ಶ್ರೇಯಸ್ಸು ಲಭಿಸುವಂತೆ ಉಪದೇಶಿಸುವ ಕೃಪೆಮಾಡಿರಿ."

ವ್ಯಾಸರು ಹೇಳುತ್ತಾರೆ :

"ಅರ್ಜುನ! ವೃಷ್ಣ್ಯಂಧಕಮಹಾರಥರು ಬ್ರಾಹ್ಮಣರ ಶಾಪದಿಂದ ದಗ್ಧರಾಗಿ ವಿನಾಶಹೊಂದಿದರು. ಅವರನ್ನು ಕುರಿತು ನೀನು ಶೋಕಿಸುವ ಕಾರಣವಿಲ್ಲ. ವೃಷ್ಣಿವಂಶದ ಆ ಮಹಾತ್ಮರ ಅವಸಾನವು ಹೀಗೆಯೇ ಆಗ ಬೇಕಾಗಿದ್ದಿತು. ದೈವದ ನಿಶ್ಚಯವೇ ಹೀಗಿದ್ದಿತು. ಶ್ರೀಕೃಷ್ಣನು ವೃಷ್ಣಿಗಳನ್ನು ಈ ಸಂಕಟದಿಂದ ಪಾರುಮಾಡಲು ಸಮರ್ಥನಾಗಿದ್ದರೂ ಭವಿತವ್ಯತೆಯನ್ನು ತಿಳಿದೇ ಉಪೇಕ್ಷಿಸಿದನು.

ತ್ರೈಲೋಕ್ಯಮಪಿ ಗೋವಿನ್ದಃ ಕೃತ್ಸ್ನಂ ಸ್ಥಾವರಜಙ್ಗಮಮ್ ।
ಪ್ರಸಹೇದನ್ಯಥಾ ಕರ್ತುಂ ಕುತಃ ಶಾಪಂ ಮಹಾತ್ಮನಾಮ್ ॥೨೭॥

ಗೋವಿಂದನು ಮೂರು ಲೋಕಗಳನ್ನೂ ಸಮಸ್ತವಾದ ಸ್ಥಾವರ-ಜಂಗಮಗಳನ್ನೂ ಬದಲಾಯಿಸಲು ಕೂಡ ಸಮರ್ಥನಾಗಿರುವಾಗ ಬ್ರಾಹ್ಮಣರ ಶಾಪದ ವಿಷಯವಾಗಿ ಹೇಳುವುದೇನಿದೆ? (ಅವನು ಇಚ್ಛೆಪಟ್ಟಿದ್ದರೆ ಬ್ರಾಹ್ಮಣಶಾಪವು ಕಾರ್ಯರೂಪಕ್ಕೆ ಬರದಂತೆ ಮಾಡುವ ಸಾಮರ್ಥ್ಯವೂ ಅವನಿಗಿದ್ದಿತು.)

ರಥಸ್ಯ ಪುರತೋ ಯಾತಿ ಯಃ ಸ ಚಕ್ರಗದಾಧರಃ ।
ತವ ಸ್ನೇಹಾತ್ಪುರಾಣರ್ಷಿರ್ವಾಸುದೇವಶ್ಚತುರ್ಭುಜಃ ॥೨೮॥

ಯಾವನು ಸ್ನೇಹದ ಕಾರಣದಿಂದ ಸಾರಥ್ಯವನ್ನು ವಹಿಸಿ ನಿನ್ನ ರಥದ ಮುಂಭಾಗದಲ್ಲಿರುತ್ತಿದ್ದನೋ–ಆ ವಾಸುದೇವನು ಸಾಮಾನ್ಯನಲ್ಲ. ಶಂಖ-ಚಕ್ರ-ಗದಾಧರನಾದ, ಚತುರ್ಭುಜನಾದ, ಪುರಾಣರ್ಷಿಯಾದ ನಾರಾಯಣನೇ ಅವನು. ವಿಶಾಲನೇತ್ರನಾದ ಶ್ರೀಕೃಷ್ಣನು ದುಷ್ಟರನ್ನು ವಿನಾಶಮಾಡಿ ಭೂಮಿಯ ಭಾರವನ್ನಿಳಿಸಿ ಶರೀರವನ್ನು ಬಿಟ್ಟು ಪರಮಶ್ರೇಷ್ಠವಾದ ಸ್ವಸ್ಥಾನಕ್ಕೆ ಹೋಗಿ ಸೇರಿದನು. ನೀನೂ ಕೂಡ ಭೀಮ-ನಕುಲ-ಸಹದೇವರ ಸಹಾಯದಿಂದ ದೇವತೆಗಳಿಗೆ ಮಹಾಕಾರ್ಯವನ್ನೇ ಮಾಡಿಕೊಟ್ಟಿರುವೆ. ನೀವೆಲ್ಲರೂ ಕೃತಕೃತ್ಯರಾಗಿರುವಿರಿ. ನೀವು ಆರಂಭಿಸಿದ ಕಾರ್ಯಗಳಲ್ಲಿ ಸಿದ್ಧಿಯನ್ನೂ ಪಡೆದಿರುವಿರಿ. ನಿಮಗೂ ಪರಲೋಕಕ್ಕೆ ಹೋಗುವ ಕಾಲವು ಸನ್ನಿಹಿತವಾಗಿದೆ. ಇದೇ ನಿಮಗೆ ಶ್ರೇಯಸ್ಕರವೂ ಆಗಿದೆ.

ಭರತನಂದನನೇ! ಅಭ್ಯುದಯದ ಸಮಯದಲ್ಲಿ ಮನುಷ್ಯನ ಬುದ್ಧಿ, ತೇಜಸ್ಸು ಮತ್ತು ಕರ್ತವ್ಯತಾಜ್ಞಾನಗಳು ವಿಕಾಸಹೊಂದುತ್ತವೆ. ವಿಪತ್ತಿನ ಸಮಯದಲ್ಲಿ ಅವೆಲ್ಲವೂ ವಿನಾಶಹೊಂದುತ್ತವೆ.

ಕಾಲಮೂಲಮಿದಂ ಸರ್ವಂ ಜಗದ್ಬೀಜಂ ಧನಂಜಯ ।
ಕಾಲ ಏವ ಸಮಾದತ್ತೇ ಪುನರೇವ ಯದೃಚ್ಛಯಾ ॥೩೩॥

ಕಾಲವೇ ಇವೆಲ್ಲಕ್ಕೂ ಮೂಲಕಾರಣವಾಗಿದೆ. ಸಂಸಾರದ ಉತ್ಪತ್ತಿಗೆ ಕಾಲವೇ ಬೀಜಸ್ವರೂಪವಾಗಿದೆ. ಪುನಃ ಆ ಕಾಲವೇ ಆಕಸ್ಮಿಕವಾಗಿ ವಿಶ್ವದ ಸಂಹಾರವನ್ನೂ ಮಾಡಿಬಿಡುತ್ತದೆ.

ಸ ಏವ ಬಲವಾನ್ಭೂತ್ವಾ ಪುನರ್ಭವತಿ ದುರ್ಬಲಃ ।
ಸ ಏವೇಶಶ್ಚ ಭೂತ್ವೇಹ ಪರೈರಾಜ್ಞಾಪ್ಯತೇ ಪುನಃ ॥೩೪॥

ಇಂದು ಬಲಿಷ್ಠನಾಗಿದ್ದವನು ಕಾಲಾನಂತರದಲ್ಲಿ ದುರ್ಬಲನೂ ಆಗುತ್ತಾನೆ. ಇಂದು ಶಾಸಕನಾಗಿದ್ದವನು ಕಾಲಾನಂತರದಲ್ಲಿ ಇತರರ ಆಜ್ಞಾಪಾಲಕನೂ ಆಗುತ್ತಾನೆ. (ಇವೆಲ್ಲವೂ ಕಾಲದ ಪ್ರಭಾವದಿಂದಲೇ ಆಗುತ್ತವೆ.)

ಕೃತಕೃತ್ಯಾನಿ ಚಾಸ್ತ್ರಾಣಿ ಗತಾನ್ಯದ್ಯ ಯಥಾಗತಮ್ ।
ಪುನರೇಷ್ಯನ್ತಿ ತೇ ಹಸ್ತೇ ಯದಾ ಕಾಲೋ ಭವಿಷ್ಯತಿ ॥೩೫॥

ನಿನ್ನಲ್ಲಿದ್ದ ಅಸ್ತ್ರಗಳು ಸಾವಿರಾರು ಯೋಧರನ್ನು ಸಂಹರಿಸಿ ಕೃತಾರ್ಥವಾಗಿವೆ. ಅವು ಹೇಗೆ ಬಂದುವೋ ಹಾಗೆಯೇ ನಿರ್ಗಮಿಸಿವೆ. ಪುನಃ ಕಾಲವು ಸನ್ನಿಹಿತವಾದಾಗ ಅದೇ ಅಸ್ತ್ರಗಳು ನಿನ್ನ ಕೈಗಳನ್ನು ಸೇರುತ್ತವೆ.

ಕಾಲೋ ಗನ್ತುಂ ಗತಿಂ ಮುಖ್ಯಾಂ ಭವತಾಮಪಿ ಭಾರತ ।
ಏತಚ್ಛ್ರೇಯೋ ಹಿ ವೋ ಮನ್ಯೇ ಪರಮಂ ಪುರುಷರ್ಷಭ ॥೩೬॥

ಭರತಶ್ರೇಷ್ಠನೇ! ಉತ್ತಮಗತಿಯನ್ನು ಹೊಂದುವ ಸಮಯವು ಈಗ ನಿಮಗೆ ಸನ್ನಿಹಿತವಾಗಿದೆ. ಈಗ ನಿಮಗೆ ಅದೇ ಪರಮಶ್ರೇಯಸ್ಕರವೆಂದೂ ಭಾವಿಸುತ್ತೇನೆ.”

ವೈಶಂಪಾಯನರು ಹೇಳುತ್ತಾರೆ :

ಜನಮೇಜಯ! ಮಹಾತೇಜಸ್ವಿಗಳಾದ ವ್ಯಾಸರ ಆ ಮಾತನ್ನು ಕೇಳಿ ಅರ್ಜುನನು ಅವರ ಅನುಮತಿಯನ್ನು ಪಡೆದು ಹಸ್ತಿನಾಪಟ್ಟಣಕ್ಕೆ ಪ್ರಯಾಣ ಮಾಡಿದನು. ವೀರನಾದ ಅರ್ಜುನನು ನಗರವನ್ನು ಪ್ರವೇಶಿಸಿ ಯುಧಿಷ್ಠಿರನ ಬಳಿಗೆ ಹೋಗಿ ವೃಷ್ಣ್ಯಂಧಕಕುಲದವರ ವೃತ್ತಾಂತವನ್ನು ಯಥಾವತ್ತಾಗಿ ತಿಳಿಯಪಡಿಸಿದನು.”

ಒನೆಯ ಅಧ್ಯಾಯವು ಮುಗಿಯಿತು.

ಮೌಸಲಪರ್ವವು ಮುಗಿಯಿತು.

❖

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು ॥

ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ ॥

ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ ।
ಅಧನಾಃ ಸಧನಾಃ ಸನ್ತು ಜೀವನ್ತು ಶರದಾಂ ಶತಮ್ ॥

ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥

ಹರಿಃ ಓಂ ತತ್ಸತ್

ಶ್ರೀಕೃಷ್ಣಾರ್ಪಣಮಸ್ತು

ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು

ಮೌಸಲಪರ್ವ (ಸಂಕ್ಷೇಪದಲ್ಲಿ)

ಅತಃ ಪರಂ ನಿಬೋಧೇದಂ ಮೌಸಲಂ ಪರ್ವ ದಾರುಣಮ್ ।
ಯತ್ರ ತೇ ಪುರುಷವ್ಯಾಘ್ರಾಃ ಶಸ್ತ್ರಸ್ಪರ್ಶಹತಾ ಯುಧಿ ।
ಬ್ರಹ್ಮದಣ್ಡವಿನಿಷ್ಪಿಷ್ಟಾಃ ಸಮೀಪೇ ಲವಣಾಮ್ಭಸಃ ॥೧೫೪॥

ಅಪಾನೇ ಪಾನಕಲಿಕಾ ದೈವೇನಾಭಿಪ್ರಚೋದಿತಾಃ ।
ಏರಕಾರೂಪಿಭಿರ್ವಜ್ರೈರ್ನಿಜಘ್ನುರಿತರೇತರಮ್ ॥೧೫೫॥

ಯತ್ರ ಸರ್ವಕ್ಷಯಂ ಕೃತ್ವಾ ತಾವುಭೌ ರಾಮಕೇಶವೌ ।
ನಾತಿಚಕ್ರಮತುಃ ಕಾಲಂ ಪ್ರಾಪ್ತಂ ಸರ್ವಹರಂ ಮಹತ್ ॥೩೫೬॥

ಯತ್ರಾರ್ಜುನೋ ದ್ವಾರವತೀಮೇತ್ಯ ವೃಷ್ಣಿವಿನಾಕೃತಾಮ್ ।
ದೃಷ್ಟ್ವಾ ವಿಷಾದಮಗಮತ್ಪರಾಂ ಚಾರ್ತಿಂ ನರರ್ಷಭಃ ॥೩೫೭॥

ಸ ಸಂಸ್ಕೃತ್ಯ ನರಶ್ರೇಷ್ಠಂ ಮಾತುಲಂ ಶೌರಿಮಾತ್ಮನಃ ।
ದದರ್ಶ ಯದುವೀರಾಣಾಮಾಪಾನೇ ವೈಶಸಂ ಮಹತ್ ॥೩೫೮॥

ಶರೀರಂ ವಾಸುದೇವಸ್ಯ ರಾಮಸ್ಯ ಚ ಮಹಾತ್ಮನಃ ।
ಸಂಸ್ಕಾರಂ ಲಮ್ಭಯಾಮಾಸ ವೃಷ್ಣೀನಾಂ ಚ ಪ್ರಧಾನತಃ ॥೩೫೯॥

ಸ ವೃದ್ಧಬಾಲಮಾದಾಯ ದ್ವಾರವತ್ಯಾಸ್ತತೋ ಜನಮ್ ।
ದದರ್ಶಾಪದಿ ಕಷ್ಟಾಯಾಂ ಗಾಣ್ಡೀವಸ್ಯ ಪರಾಭವಮ್ ॥೩೬೦॥

ಸರ್ವೇಷಾಂ ಚೈವ ದಿವ್ಯಾನಾಮಸ್ತ್ರಾಣಾಮಪ್ರಸನ್ನತಾಮ್ ।
ನಾಶಂ ವೃಷ್ಣಿಕಲತ್ರಾಣಾಂ ಪ್ರಭಾವಾಣಾಮನಿತ್ಯತಾಮ್ ॥೩೬೧॥

ದೃಷ್ಟ್ವಾ ನಿರ್ವೇದಮಾಪನ್ನೋ ವ್ಯಾಸವಾಕ್ಯಪ್ರಚೋದಿತಃ ।
ಧರ್ಮರಾಜಂ ಸಮಾಸಾದ್ಯ ಸಂನ್ಯಾಸಂ ಸಮರೋಚಯತ್ ॥೩೬೨॥

ಇತ್ಯೇತನ್ಮೌಸಲಂ ಪರ್ವ ಷೋಡಶಂ ಪರಿಕೀರ್ತಿತಮ್ ।
ಅಧ್ಯಾಯಾಷ್ಟೌ ಸಮಾಖ್ಯಾತಾಃ ಶ್ಲೋಕಾನಾಂ ಚ ಶತತ್ರಯಮ್ ।
ಶ್ಲೋಕಾನಾಂ ವಿಂಶತಿಶ್ಚೈವ ಸಂಖ್ಯಾತಾಸ್ತತ್ತ್ವದರ್ಶಿನಾ ॥೩೬೩॥

ಇಲ್ಲಿ ಹೇಳಿರುವಂತೆ ಮೌಸಲಪರ್ವದಲ್ಲಿ ಇರುವ ಅಧ್ಯಾಯಗಳು ೮, ಶ್ಲೋಕಗಳು ೩೨೦.

ನಾವು ಅನುವಾದಿಸಿರುವ ಪುಸ್ತಕದಲ್ಲಿ ಅಧ್ಯಾಯಗಳು ೮, ಶ್ಲೋಕಗಳು ೩೦೧.

ಭಂಡಾರ್ಕರ್ ರಿಸರ್ಚ ಇನ್‌ಸ್ಟಿಟ್ಯೂಟ್–ಇವರು ಪ್ರಕಟಿಸಿರುವ ಪುಸ್ತಕದಲ್ಲಿ ಅಧ್ಯಾಯಗಳು ೯. ಶ್ಲೋಕಗಳು ೨೩೩.

❄

ಶ್ರೀಮಹಾಗಣಪತಯೇ ನಮಃ   ಶ್ರೀಸರಸ್ವತ್ಯೈ ನಮಃ   ಶ್ರೀಸದ್ಗುರವೇ ನಮಃ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಶ್ರೀಮನ್ಮಹಾಭಾರತ-ಮಹಾಪ್ರಸ್ಥಾನಿಕಪರ್ವ

ಯುಧಿಷ್ಠಿರನು ವೃಷ್ಣಿವಂಶೀಯರ ಶ್ರಾದ್ಧವನ್ನು ಮಾಡಿದುದು : ದ್ರೌಪದಿಯೊಡನೆ ಪಾಂಡವರ ಮಹಾಪ್ರಸ್ಥಾನ

ಜನಮೇಜಯನು ಪ್ರಶ್ನಿಸುತ್ತಾನೆ :

ಏವಂ ವೃಷ್ಣ್ಯನ್ಧಕಕುಲೇ ಶ್ರುತ್ವಾ ಮೌಸಲಮಾಹವಮ್ ।
ಪಾಣ್ಡವಾಃ ಕಿಮಕುರ್ವನ್ತ ತಥಾ ಕೃಷ್ಣೇ ದಿವಂ ಗತೇ ॥೧॥

"ವಿಪ್ರಶ್ರೇಷ್ಠರೇ! ಹೀಗೆ ವೃಷ್ಣ್ಯಂಧಕವಂಶೀಯರಲ್ಲಿ ಪರಸ್ಪರವಾಗಿ ಮೌಸಲಯುದ್ಧವು ನಡೆದುದನ್ನೂ ಶ್ರೀಕೃಷ್ಣನು ಪರಂಧಾಮಕ್ಕೆ ಹೋದ ಸಮಾಚಾರವನ್ನೂ ಕೇಳಿ ಪಾಂಡವರೇನು ಮಾಡಿದರು?"

ವೈಶಂಪಾಯನರು ಹೇಳುತ್ತಾರೆ :

"ಜನಮೇಜಯ! ಯುಧಿಷ್ಠಿರರಾಜನು ಅರ್ಜುನನಿಂದ ವೃಷ್ಣಿಗಳ ಮಹಾಸಂಹಾರವನ್ನು ಕೇಳುತ್ತಲೇ ಮಹಾಪ್ರಸ್ಥಾನಮಾಡಬೇಕೆಂಬುದನ್ನು ನಿಶ್ಚಯಿಸಿ ಅರ್ಜುನನೊಡನೆ ಹೀಗೆ ಹೇಳಿದನು :

ಕಾಲಃ ಪಚತಿ ಭೂತಾನಿ ಸರ್ವಾಣ್ಯೇವ ಮಹಾಮತೇ ।
ಕಾಲಪಾಶಮಹಂ ಮನ್ಯೇ ತ್ವಮಪಿ ದ್ರಷ್ಟುಮರ್ಹಸಿ ॥೨॥

"ಮಹಾಮತಿವಂತನೇ! ಅರ್ಜುನ! ಕಾಲವು ಸಮಸ್ತಪ್ರಾಣಿಗಳನ್ನೂ ತನ್ನ ಉಡಿಯಲ್ಲಿಟ್ಟುಕೊಂಡು ಬೇಯಿಸುತ್ತದೆ. ನಾನು ಈ ಕಾಲಪಾಶವೆಂದರೇ

ನೆಂಬುದನ್ನು ತಿಳಿದಿರುತ್ತೇನೆ. ನೀನು ಕೂಡ ಕಾಲಪಾಶದ ಸ್ವರೂಪವನ್ನು ಮನಗಾಣುವುದು ಯೋಗ್ಯವಾಗಿದೆ.”

ಯುಧಿಷ್ಠಿರನು ಹೀಗೆ ಹೇಳಿದನಂತರ ಅರ್ಜುನನು–‘ಕಾಲನೇ ಕಾಲವು; ಕಾಲವೇ ಕಾಲನು–ನಾವೆಲ್ಲರೂ ಅದರ ಅಧೀನರಾಗಿದ್ದೇವೆ’– ಎಂದು ಹೇಳುತ್ತಾ ಧೀಮಂತನಾದ ಹಿರಿಯಣ್ಣನು ಹೇಳಿದ ಮಾತನ್ನು ಅನುಮೋದಿಸಿದನು. ಅರ್ಜುನನ ಅಭಿಪ್ರಾಯವನ್ನು ತಿಳಿದು ಭೀಮ-ನಕುಲ-ಸಹದೇವರೂ ಸವ್ಯಸಾಚಿಯು ಹೇಳಿದ ಮಾತನ್ನೇ ಅನುಮೋದಿಸಿದರು. ಧರ್ಮದ ಕಾಮನೆಯಿಂದ ವಿರಕ್ತನಾಗಿ ಮಹಾಪ್ರಸ್ಥಾನಕ್ಕೆ ಹೊರಡಲು ನಿಶ್ಚಯಿಸಿದ ಯುಧಿಷ್ಠಿರನು ವೈಶ್ಯಾಪುತ್ರನಾದ ಯುಯುತ್ಸುವನ್ನು ಕರೆತಂದು ಸಮಸ್ತರಾಜ್ಯವನ್ನೂ ಅವನಿಗೆ ಒಪ್ಪಿಸಿದನು. ಪಾಂಡವರ ಅಗ್ರಜನಾದ ಯುಧಿಷ್ಠಿರನು ತನ್ನ ರಾಜ್ಯದಲ್ಲಿ ಪರಿಕ್ಷಿತನಿಗೆ ಪಟ್ಟಗಟ್ಟಿ ದುಃಖಪೀಡಿತನಾಗಿ ಸುಭದ್ರೆಗೆ ಹೇಳಿದನು :

ಏಷ ಪುತ್ರಸ್ಯ ಪುತ್ರಸ್ತೇ ಕುರುರಾಜೋ ಭವಿಷ್ಯತಿ ।
ಯದೂನಾಂ ಪರಿಶೇಷಶ್ಚ ವಜ್ರೋ ರಾಜಾ ಕೃತಶ್ಚ ಹ ॥೮॥

“ಸುಭದ್ರೇ! ನಿನ್ನ ಮಗನ ಮಗನಾದ ಈ ಪರಿಕ್ಷಿತನು ಕುರುದೇಶಕ್ಕೂ ಮತ್ತು ಕೌರವರಿಗೂ ರಾಜನಾಗುತ್ತಾನೆ. ಯದುವಂಶೀಯರಲ್ಲಿ ಹತಶೇಷನಾಗಿ ಉಳಿದುಕೊಂಡಿರುವ ಶ್ರೀಕೃಷ್ಣನ ಮೊಮ್ಮಗನಾದ ವಜ್ರನು ಈಗಾಗಲೇ ಯದುಗಳಿಗೆ ರಾಜನಾಗಿ ಅಭಿಷಿಕ್ತನಾಗಿದ್ದಾನೆ.

ಪರಿಕ್ಷಿತನು ಹಸ್ತಿನಾಪುರದಲ್ಲಿಯೂ ವಜ್ರನು ಇಂದ್ರಪ್ರಸ್ಥದಲ್ಲಿಯೂ ಇದ್ದು ರಾಜ್ಯಭಾರಮಾಡುತ್ತಾರೆ. ನೀನು ಅವರನ್ನು ರಕ್ಷಿಸಬೇಕು. ಅಧರ್ಮದ ಕಡೆಗೆ ಎಂದಿಗೂ ಮನಗೊಡಬೇಡ.”

ಧರ್ಮಾತ್ಮನಾದ ಯುಧಿಷ್ಠಿರನು ಹೀಗೆ ಹೇಳಿ ಆಲಸ್ಯವನ್ನು ತೊರೆದು ಧೀಮಂತನಾದ ವಾಸುದೇವನಿಗೂ, ವೃದ್ಧನಾದ ಮತ್ತು ಮಾತುಲನಾದ ವಸುದೇವನಿಗೂ, ಬಲರಾಮನೇ ಮೊದಲಾದವರಿಗೂ ಸಹೋದರರೊಡನೆ ಜಲಾಂಜಲಿಯನ್ನಿತ್ತು ಅವರನ್ನುದ್ದೇಶಿಸಿ ಎಲ್ಲರಿಗೂ ವಿಧಿವತ್ತಾಗಿ ಶ್ರಾದ್ಧವನ್ನು ಮಾಡಿದನು. ಪ್ರಯತ್ನಶೀಲನಾದ ಯುಧಿಷ್ಠಿರನು ಶ್ರೀಹರಿಯನ್ನು ಉದ್ದೇಶಿಸಿ

ದ್ವೈಪಾಯನವ್ಯಾಸರಿಗೂ, ನಾರದರಿಗೂ, ತಪೋಧನರಾದ ಮಾರ್ಕಂಡೇಯರಿಗೂ, ಭಾರದ್ವಾಜರಿಗೂ, ಯಾಜ್ಞ್ಯವಲ್ಕ್ಯರಿಗೂ ರುಚಿಕರವಾದ ಭೋಜನವನ್ನು ಮಾಡಿಸಿದನು. ಪೂಜ್ಯನಾದ ಶ್ರೀಕೃಷ್ಣನ ನಾಮಸಂಕೀರ್ತನಮಾಡುತ್ತಾ ಬ್ರಾಹ್ಮಣಪ್ರಮುಖರಿಗೆ ರತ್ನಗಳನ್ನೂ, ವಸ್ತ್ರಗಳನ್ನೂ, ಗ್ರಾಮಗಳನ್ನೂ, ಕುದುರೆಗಳನ್ನೂ, ರಥಗಳನ್ನೂ, ಸ್ತ್ರೀಯರನ್ನೂ ನೂರಾರು-ಸಾವಿರಾರು ಸಂಖ್ಯೆಯಲ್ಲಿ ದಾನಮಾಡಿದನು.

ಅನಂತರ ಗುರುಗಳಾದ ಕೃಪಾಚಾರ್ಯರಿಗೆ ಯಥಾವಿಧಿಯಾಗಿ ಪೂಜೆಯನ್ನು ಸಲ್ಲಿಸಿ ಪರಿಕ್ಷಿತನನ್ನು ಪೌರರೊಡನೆ ಶಿಷ್ಯರೂಪದಲ್ಲಿ ಅವರಿಗೆ ಒಪ್ಪಿಸಿಕೊಟ್ಟನು. ಅನಂತರ ರಾಜರ್ಷಿಯಾದ ಯುಧಿಷ್ಠಿರನು ಎಲ್ಲ ಪ್ರಕೃತಿಗಳನ್ನು (ಅಮಾತ್ಯರೇ ಮೊದಲಾದವರನ್ನು) ಕರೆಯಿಸಿ ತಾನು ಮುಂದೆ ಮಾಡಬೇಕೆಂದಿರುವ ಎಲ್ಲ ವಿಷಯಗಳನ್ನೂ ಅವರೊಡನೆ ಹೇಳಿದನು. ಪೌರರೂ ಮತ್ತು ದೇಶೀಯಜನರೂ ಯುಧಿಷ್ಠಿರನ ಮಾತನ್ನು ಕೇಳಿದೊಡನೆಯೇ ಕಳವಳಗೊಂಡವರಾಗಿ ರಾಜನು ಹೇಳಿದುದನ್ನು ಮಾನ್ಯಮಾಡಲಿಲ್ಲ. 'ನೈವಂ ಕರ್ತವ್ಯಂ'–'ಹೀಗೆ ಮಾಡುವುದು ಖಂಡಿತವಾಗಿಯೂ ನಿನ್ನ ಕರ್ತವ್ಯವಲ್ಲ (ನೀನು ಹೀಗೆ ಮಾಡಬಾರದು)'–ಎಂದು ರಾಜನಿಗೆ ಹೇಳಿದರು. ಆದರೆ ಕಾಲದ ವಿಪರ್ಯಾಸಧರ್ಮವನ್ನು ತಿಳಿದಿದ್ದ ಯುಧಿಷ್ಠಿರನು ಪ್ರಜೆಗಳು ಹೇಳಿದಂತೆ ನಡೆದುಕೊಳ್ಳಲಿಲ್ಲ. ಧರ್ಮಾತ್ಮನಾದ ಯುಧಿಷ್ಠಿರನು ನಯ-ವಿನಯಗಳ ಮಾತುಗಳಿಂದ ನಗರವಾಸಿಗಳನ್ನೂ ಮತ್ತು ದೇಶೀಯಜನರನ್ನೂ ಸಮಾಧಾನಗೊಳಿಸಿ ಅವರ ಅನುಮತಿಯನ್ನು ಪಡೆದನು. ಅವನೂ ಮತ್ತು ಅವನ ಸಹೋದರರೂ ಸರ್ವಸ್ವವನ್ನೂ ತ್ಯಾಗಮಾಡಿ ಮಹಾಪ್ರಸ್ಥಾನಮಾಡಲು ನಿಶ್ಚಯಿಸಿದರು.

ಅನಂತರ ಕುರುಕುಲೋತ್ಪನ್ನನಾದ, ಧರ್ಮಪುತ್ರನಾದ ಯುಧಿಷ್ಠಿರನು ಅಂಗದ-ಕೇಯೂರಾದಿ ಆಭರಣಗಳೆಲ್ಲವನ್ನೂ ತೆಗೆದಿಟ್ಟು ನಾರುಮಡಿಯನ್ನು ಧರಿಸಿದನು. ರಾಜನನ್ನೇ ಅನುಸರಿಸಿ ಭೀಮಾರ್ಜುನ-ನಕುಲ-ಸಹದೇವರೂ ಯಶಸ್ವಿನಿಯಾದ ದ್ರೌಪದಿಯೂ ಆಭರಣಗಳನ್ನು ತೆಗೆದಿರಿಸಿ ವಲ್ಕಲಗಳನ್ನು ಧರಿಸಿದರು. ಅನಂತರ ನರಶ್ರೇಷ್ಠರಾದ ಪಾಂಡವರು ಅಂತಿಮವಾದ ಇಷ್ಟಿಯನ್ನು ಬ್ರಾಹ್ಮಣರಿಂದ ವಿಧಿವತ್ತಾಗಿ ಮಾಡಿಸಿ ಅಗ್ನಿಗಳನ್ನು ನೀರಿ

ನಲ್ಲಿ ವಿಸರ್ಜಿಸಿ ಮಹಾಯಾತ್ರೆಗಾಗಿ ಹೊರಟರು. ಹಿಂದೆ ಜೂಜಿನಲ್ಲಿ ಪರಾಜಿತರಾದಾಗ ದ್ರೌಪದೀಸಹಿತರಾಗಿ ಅರಣ್ಯಕ್ಕೆ ಹೊರಟಂತೆ ಆ ಸಮಯದಲ್ಲಿಯೂ ವಲ್ಕಲಗಳನ್ನು ಧರಿಸಿ ದ್ರೌಪದಿಯೊಡನೆ ಹೊರಟಿದ್ದ ಪಾಂಡವರನ್ನು ನೋಡಿ ಪಟ್ಟಣದ ಸ್ತ್ರೀಯರು ಗಟ್ಟಿಯಾಗಿ ಅಳತೊಡಗಿದರು. ಆದರೆ ವನವಾಸದ ಸಮಯದಲ್ಲಿ ಪಾಂಡವರು ಶೋಕಮಗ್ನರಾಗಿದ್ದರು. ಮಹಾಪ್ರಸ್ಥಾನದಲ್ಲಿ ಐವರು ಪಾಂಡವರಿಗೂ ಆನಂದವಿದ್ದಿತು. ಎಲ್ಲರೂ ಸಂತೋಷಭರಿತರಾಗಿಯೇ ಪ್ರಯಾಣಹೊರಟಿದ್ದರು. ಯುಧಿಷ್ಠಿರನ ಅಭಿಮತವನ್ನು ತಿಳಿದು, ವೃಷ್ಣಿವೀರರ ವಿನಾಶವನ್ನು ಸ್ಮರಿಸಿ, ಐವರು ಸಹೋದರರೂ ಆರನೆಯವಳಾಗಿ ದ್ರೌಪದಿಯೂ ಏಳನೆಯದಾಗಿ ಒಂದು ನಾಯಿಯೂ ಒಟ್ಟಿಗೆ ಪ್ರಯಾಣಹೊರಟರು. ತಾನೂ ಸೇರಿ ಏಳನೆಯವನಾಗಿ ಯುಧಿಷ್ಠಿರರಾಜನು ಹಸ್ತಿನಾಪಟ್ಟಣದಿಂದ ಹೊರಟನು. ಎಲ್ಲ ಅಂತಃಪುರಸ್ತ್ರೀಯರೂ ಮತ್ತು ಪಟ್ಟಣಿಗರೂ ಸ್ವಲ್ಪದೂರದವರೆಗೆ ಯುಧಿಷ್ಠಿರನನ್ನು ಹಿಂಬಾಲಿಸಿದರು. ಆದರೆ ಯುಧಿಷ್ಠಿರನನ್ನು ಪಟ್ಟಣಕ್ಕೆ ಹಿಂದಿರುಗುವಂತೆ ಹೇಳಲು ಯಾರೂ ಸಮರ್ಥರಾಗಲಿಲ್ಲ. ಪಾಂಡವರ ಜೊತೆಯಲ್ಲಿ ಸ್ವಲ್ಪದೂರದವರೆಗೆ ಪ್ರಯಾಣಮಾಡಿದ ಬಳಿಕ ನಗರವಾಸಿಗಳಾದ ಎಲ್ಲ ಪ್ರಜೆಗಳೂ, ಕೃಪರೇ ಮೊದಲಾದವರೂ ಯುಯುತ್ಸುವನ್ನು ಸುತ್ತುವರಿದುಕೊಂಡು ನಗರಕ್ಕೆ ಹಿಂದಿರುಗಿದರು. ನಾಗರಾಜಕನ್ಯೆಯಾದ ಉಲೂಪಿಯು ಗಂಗಾನದಿಯನ್ನು ಪ್ರವೇಶಿಸಿದಳು. ಚಿತ್ರಾಂಗದೆಯು ಮಣಿಪುರಕ್ಕೆ ಹೋದಳು. ಉಳಿದ ಮಾತೆಯರು ಪರಿಕ್ಷಿತನೊಡನೆ ಉಳಿದುಕೊಂಡರು.

ಮಹಾತ್ಮರಾದ ಪಾಂಡವರೂ, ಯಶಸ್ವಿನಿಯಾದ ದ್ರೌಪದಿಯೂ ಉಪವಾಸವ್ರತವನ್ನು ಕೈಗೊಂಡು ಪೂರ್ವದಿಕ್ಕಿಗೆ ಅಭಿಮುಖವಾಗಿ ಪ್ರಯಾಣ ಮಾಡಿದರು.

ಯೋಗಯುಕ್ತಾ ಮಹಾತ್ಮಾನಸ್ತ್ಯಾಗಧರ್ಮಮುಪೇಯುಷಃ ।
ಅಭಿಜಗ್ಮುರ್ಬಹೂನ್ದೇಶಾನ್ಸರಿತಃ ಸಾಗರಾಂಸ್ತಥಾ ॥೩೦॥

ಮಹಾತ್ಮರಾದ ಪಾಂಡವರು ಯೋಗಯುಕ್ತರಾಗಿದ್ದರೂ ತ್ಯಾಗಧರ್ಮ

ವನ್ನು ಪರಿಪಾಲಿಸುವವರಾದರು. ಅವರು ಅನೇಕದೇಶಗಳನ್ನೂ, ನದಿಗಳನ್ನೂ ಸಾಗರಗಳನ್ನೂ ದಾಟಿ ಮುಂದೆ ಹೋಗುತ್ತಿದ್ದರು.

ಯುಧಿಷ್ಠಿರೋ ಯಯಾವಗ್ರೇ ಭೀಮಸ್ತು ತದನನ್ತರಮ್ ।
ಅರ್ಜುನಸ್ತಸ್ಯ ಚಾನ್ವೇವ ಯಮೌ ಚಾಪಿ ಯಥಾಕ್ರಮಮ್ ॥೩೧॥

ಪೃಷ್ಠತಸ್ತು ವರಾರೋಹಾ ಶ್ಯಾಮಾ ಪದ್ಮದಲೇಕ್ಷಣಾ ।
ದ್ರೌಪದೀ ಯೋಷಿತಾಂ ಶ್ರೇಷ್ಠಾ ಯಯೌ ಭರತಸತ್ತಮ ॥೩೨॥

ಶ್ವಾ ಚೈವಾನುಯಯಾವೇಕಃ ಪ್ರಸ್ಥಿತಾನ್ಪಾಣ್ಡವಾನ್ವನಮ್ ।

ಯುಧಿಷ್ಠಿರನು ಮುಂದುಗಡೆಯಲ್ಲಿ ಹೋಗುತ್ತಿದ್ದನು. ಅವನಾದ ಬಳಿಕ ಭೀಮನು ಹೋಗುತ್ತಿದ್ದನು. ಅರ್ಜುನನು ಭೀಮಸೇನನ ಹಿಂದೆ ಹೋಗುತ್ತಿದ್ದನು. ನಕುಲ-ಸಹದೇವರು ಅನುಕ್ರಮವಾಗಿ ಅರ್ಜುನನ ಹಿಂದೆ ಹೋಗುತ್ತಿದ್ದರು. ಆರನೆಯವಳಾಗಿ ಸುಂದರಾಂಗಿಯಾದ, ಶ್ಯಾಮಲವರ್ಣದವಳಾದ, ಪದ್ಮದಳದಂತೆ ಈಕ್ಷಣವುಳ್ಳ, ನಾರಿಯರಲ್ಲಿ ಶ್ರೇಷ್ಠಳಾದ ದ್ರೌಪದಿಯು ಹೋಗುತ್ತಿದ್ದಳು. ಅರಣ್ಯಕ್ಕೆ ಹೋಗುತ್ತಿದ್ದ ಪಾಂಡವರ ಹಿಂದೆ ಒಂದು ನಾಯಿಯೂ ಹೋಗುತ್ತಿದ್ದಿತು. ಹೀಗೆ ಕ್ರಮವಾಗಿ ದೇಶಗಳನ್ನೂ, ನದಿಗಳನ್ನೂ, ಸಾಗರಗಳನ್ನೂ ದಾಟಿ ಪಾಂಡವರು ಕೆಂಪುಸಮುದ್ರದ ತೀರಕ್ಕೆ ಹೋದರು. ರತ್ನಪ್ರಾಯವಾದ ಧನುಸ್ಸಿನ ಲೋಭದಿಂದ ಅರ್ಜುನನು ತನ್ನ ಗಾಂಡೀವಧನುಸ್ಸನ್ನಾಗಲೀ–ಅಕ್ಷಯವಾದ ಬತ್ತಳಿಕೆಗಳನ್ನಾಗಲೀ, ತ್ಯಾಗಮಾಡಿಯೇ ಇರಲಿಲ್ಲ. ಕೆಂಪುಸಮುದ್ರದ ಬಳಿಗೆ ಹೋಗುತ್ತಿದ್ದಾಗ ಪಾಂಡವರು ಹಾದಿಯಲ್ಲಿ ಮಾರ್ಗವನ್ನೇ ಆವರಿಸಿಕೊಂಡು ಪರ್ವತದಂತೆಯೇ ಸ್ಥಿರವಾಗಿ ನಿಂತಿದ್ದ ಸಾಕ್ಷಾತ್ತಾಗಿ ಪುರುಷಾಕೃತಿಯನ್ನೇ ಹೊಂದಿದ್ದ ಅಗ್ನಿಯನ್ನು ನೋಡಿದರು. ಸಪ್ತಜ್ವಾಲೆಗಳುಳ್ಳ ಅಗ್ನಿದೇವನು ಪಾಂಡವರನ್ನು ಕುರಿತು ಹೇಳಿದನು : "ಭೋ ಭೋ! ಪಾಂಡುವಿನ ಮಕ್ಕಳೇ! ವೀರರೇ! ನನ್ನನ್ನು ಅಗ್ನಿಯೆಂದು ತಿಳಿಯಿರಿ. ಮಹಾಬಾಹುವಾದ ಯುಧಿಷ್ಠಿರನೇ! ಶತ್ರುತಾಪಕನಾದ ಭೀಮಸೇನನೇ! ಅರ್ಜುನನೇ! ಅಶ್ವಿನೀದೇವತೆಗಳ ಮಕ್ಕಳಾದ ವೀರರಾದ ನಕುಲ-ಸಹದೇವರೇ! ನನ್ನ ಮಾತನ್ನು ಕೇಳಿರಿ.

ಕುರುಶ್ರೇಷ್ಠರೇ! ನಾನೇ ಅಗ್ನಿದೇವನು. ನಾನು ಅರ್ಜುನನ ಮತ್ತು ನಾರಾಯಣಸ್ವರೂಪನಾದ ಶ್ರೀಕೃಷ್ಣನ ಪ್ರಭಾವದಿಂದ ಖಾಂಡವವನವನ್ನು ಭಸ್ಮಮಾಡಿದೆನು. ಆಗ ನಾನು ಅರ್ಜುನನಿಗೆ ಗಾಂಡೀವ ಧನುಸ್ಸನ್ನೂ, ಅಕ್ಷಯವಾದ ಬತ್ತಳಿಕೆಗಳನ್ನೂ ಅನುಗ್ರಹಿಸಿದ್ದೆನು. ಈಗ ನಿಮ್ಮ ಸಹೋದರನಾದ ಅರ್ಜುನನು ಶ್ರೇಷ್ಠವಾದ ಆಯುಧವಾಗಿರುವ ಗಾಂಡೀವ



ಧನುಸ್ಸನ್ನು ತ್ಯಜಿಸಿ ಅರಣ್ಯಕ್ಕೆ ಹೋಗಲಿ. ಈಗ ಅರ್ಜುನನಿಗೆ ಈ ಗಾಂಡೀವ ಧನುಸ್ಸಿನಿಂದ ಯಾವ ಪ್ರಯೋಜನವೂ ಇಲ್ಲ. ಹಿಂದೆ ಯಾವ ಚಕ್ರರತ್ನವು ಮಹಾತ್ಮನಾದ ಶ್ರೀಕೃಷ್ಣನಲ್ಲಿದ್ದಿತೋ–ಅದೂ ಕೂಡ ಸ್ವಸ್ಥಾನಕ್ಕೆ ಹೊರಟು ಹೋಗಿದೆ. ಸಮಯವು ಬಂದಾಗ ಪುನಃ ಆ ಚಕ್ರವು ಅವನ ಕೈಸೇರುತ್ತದೆ. ಪಾರ್ಥನಿಗೋಸ್ಕರವೇ ನಾನು ಈ ಧನುಸ್ಸನ್ನು ವರುಣನಿಂದ ತಂದಿದ್ದೆನು.

ಈಗ ನೀವು ಶ್ರೇಷ್ಠವಾದ ಈ ಗಾಂಡೀವಧನುಸ್ಸನ್ನು ವರುಣನಿಗೇ ಕೊಟ್ಟುಬಿಡಿರಿ.”

ಜನಮೇಜಯ! ಅಗ್ನಿದೇವನು ಹೀಗೆ ಹೇಳಿದನಂತರ ಯುಧಿಷ್ಠಿರನೇ ಮೊದಲಾದ ಸಹೋದರರು ಅರ್ಜುನನಿಗೆ ಧನುಸ್ಸನ್ನು ತ್ಯಾಗಮಾಡುವಂತೆ ಒತ್ತಾಯಿಸಿದರು. ಅವರೆಲ್ಲರ ಮಾತಿನಂತೆ ಅರ್ಜುನನು ಗಾಂಡೀವ ಧನುಸ್ಸನ್ನೂ ಅಕ್ಷಯವಾದ ಬತ್ತಳಿಕೆಗಳನ್ನೂ ವರುಣನ ಸಾನ್ನಿಧ್ಯವಿರುವ ನೀರಿನಲ್ಲಿ ಹಾಕಿಬಿಟ್ಟನು. ಬಳಿಕ ಅಗ್ನಿಯು ಅಲ್ಲಿಯೇ ಮಾಯವಾದನು. ಮುಂದೆ ಪಾಂಡವರು ದಕ್ಷಿಣಾಭಿಮುಖವಾಗಿ ಪ್ರಯಾಣಹೊರಟರು. ಬಳಿಕ ಅವರು ಲವಣಸಮುದ್ರದ ಉತ್ತರತೀರದಿಂದಲೇ ದಕ್ಷಿಣ-ಪಶ್ಚಿಮಾಭಿ ಮುಖವಾಗಿ (ನೈಋತ್ಯದಿಕ್ಕಿಗೆ ಅಭಿಮುಖವಾಗಿ) ಪ್ರಯಾಣಮಾಡಿದರು. ಸ್ವಲ್ಪದೂರದವರೆಗೆ ಆ ದಿಕ್ಕಿನಲ್ಲಿ ಪ್ರಯಾಣಮಾಡಿದನಂತರ ಪಶ್ಚಿಮದಿಕ್ಕಿನ ಕಡೆಗೆ ನೇರವಾಗಿ ಹೋದರು. ಸಮುದ್ರದಲ್ಲಿ ಮುಳುಗಿಹೋಗಿದ್ದ ದ್ವಾರಕೆ ಯನ್ನು ಅವರು ಅಲ್ಲಿ ನೋಡಿದರು. ಬಳಿಕ ಭರತಶ್ರೇಷ್ಠರಾದ ಯೋಗ ಧರ್ಮಿಗಳಾದ ಪಾಂಡವರು ಭೂಮಿಯನ್ನು ಪ್ರದಕ್ಷಿಣಮಾಡಬೇಕೆಂಬ ಅಭಿಲಾಷೆಯಿಂದ ಪಶ್ಚಿಮದಿಕ್ಕಿನ ಕಡೆಯಿಂದ ಉತ್ತರದಿಕ್ಕಿನ ಕಡೆಗೆ ತಿರುಗಿ ಯಾತ್ರೆಯನ್ನು ಮುಂದುವರಿಸಿದರು.

೧ನೆಯ ಅಧ್ಯಾಯವು ಮುಗಿಯಿತು.

೨ನೆಯ ಅಧ್ಯಾಯ ಮಹಾಪ್ರಸ್ಥಾನಿಕಪರ್ವ (ಮುಂದುವರಿದಿದೆ.)

ಮಾರ್ಗದಲ್ಲಿ ದ್ರೌಪದೀ, ಸಹದೇವ, ನಕುಲ, ಅರ್ಜುನ ಮತ್ತು ಭೀಮಸೇನರು ಅನುಕ್ರಮವಾಗಿ ಕೆಳಕ್ಕೆ ಬಿದ್ದುದು : ಧರ್ಮರಾಜನು ಕಾರಣವನ್ನು ತಿಳಿಸಿದುದು


ವೈಶಂಪಾಯನರು ಹೇಳುತ್ತಾರೆ :

ತತಸ್ತೇ ನಿಯತಾತ್ಮಾನ ಉದೀಚೀಂ ದಿಶಮಾಸ್ಥಿತಾಃ ।
ದದೃಶುರ್ಯೋಗಯುಕ್ತಾಶ್ಚ ಹಿಮವನ್ತಂ ಮಹಾಗಿರಿಮ್ ॥೧॥

ಜನಮೇಜಯ! ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು ಉತ್ತರಾಭಿ ಮುಖವಾಗಿ ಪ್ರಯಾಣಮಾಡುತ್ತಿದ್ದ ಯೋಗಯುಕ್ತರಾದ ಪಾಂಡವರು

ದೊಡ್ಡದಾದ ಹಿಮವತ್ಪರ್ವತವನ್ನು ನೋಡಿದರು. ಅದನ್ನೂ ಅತಿಕ್ರಮಿಸಿ ಮುಂದೆ ಪ್ರಯಾಣಮಾಡಿದ ಪಾಂಡವರು ವಾಲುಕಾ ಎಂಬ ಸಮುದ್ರವನ್ನು ಸಂದರ್ಶಿಸಿದರು. ಬಳಿಕ ಅವರು ಪರ್ವತಗಳಲ್ಲಿ ಶ್ರೇಷ್ಠವಾದ ಮಹಾಗಿರಿಯಾದ ಮೇರುಪರ್ವತವನ್ನು ನೋಡಿದರು.

ಯೋಗಧರ್ಮವನ್ನು ಆಶ್ರಯಿಸಿದ್ದ ಪಾಂಡವರೆಲ್ಲರೂ ಶೀಘ್ರವಾಗಿ ಮುನ್ನಡೆಯುತ್ತಿರಲಾಗಿ ದ್ರೌಪದಿಯು ಯೋಗಭ್ರಷ್ಟಳಾಗಿ ನೆಲದ ಮೇಲೆ



ಬಿದ್ದುಬಿಟ್ಟಳು. ಅವಳು ಬಿದ್ದುದನ್ನು ನೋಡಿ ಮಹಾಬಲನಾದ ಭೀಮಸೇನನು ಧರ್ಮರಾಜನಿಗೆ ಹೇಳಿದನು :

ನಾಧರ್ಮಶ್ಚರಿತಃ ಕಶ್ಚಿದ್ರಾಜಪುತ್ರ್ಯಾ ಪರಂತಪ ।
ಕಾರಣಂ ಕಿಂ ನು ತದ್ಬ್ರೂಹಿ ಯತ್ಕೃಷ್ಣಾ ಪತಿತಾ ಭುವಿ ॥೫॥

"ಪರಂತಪನೇ! ರಾಜಪುತ್ರಿಯಾದ ಈ ದ್ರೌಪದಿಯು ಯಾವುದೇ ಅಧರ್ಮವನ್ನೂ ಮಾಡಿರುವುದಿಲ್ಲ. ಆದರೂ ಇವಳು ಯೋಗಭ್ರಷ್ಟಳಾಗಿ ಬಿದ್ದುಬಿಟ್ಟಳು. ಇವಳು ಹೀಗೆ ಬೀಳಲು ಕಾರಣವೇನೆಂಬುದನ್ನು ಹೇಳು."

ಯುಧಿಷ್ಠಿರನು ಹೇಳುತ್ತಾನೆ :

ಪಕ್ಷಪಾತೋ ಮಹಾನಸ್ಯಾ ವಿಶೇಷೇಣ ಧನಂಜಯೇ ।
ತಸ್ಯೈತತ್ಫಲಮದ್ಯೈಷಾ ಭುಙ್ಕ್ತೇ ಪುರುಷಸತ್ತಮ ॥೬॥

"ಪುರುಷಶ್ರೇಷ್ಠನೇ! ಅರ್ಜುನನ ವಿಷಯದಲ್ಲಿ ಇವಳಿಗೆ ವಿಶೇಷವಾದ ಪಕ್ಷಪಾತವಿದ್ದಿತು. ಅದರ ಫಲವನ್ನೇ ಈಗ ಇವಳು ಅನುಭವಿಸುತ್ತಿದ್ದಾಳೆ."

ವೈಶಂಪಾಯನರು ಹೇಳುತ್ತಾರೆ :

ಜನಮೇಜಯ! ಧೀಮಂತನಾದ, ಧರ್ಮಾತ್ಮನಾದ, ಪುರುಷಶ್ರೇಷ್ಠನಾದ, ಯುಧಿಷ್ಠಿರನು ಭೀಮನಿಗೆ ಹೀಗೆಂದು ಹೇಳಿ ಮನಸ್ಸನ್ನು ಸ್ಥಿರಪಡಿಸಿಕೊಂಡು ದ್ರೌಪದಿಯ ಕಡೆಗೆ ಪುನಃ ತಿರುಗದೆಯೇ ಮುಂದೆ ಪ್ರಯಾಣ ಮಾಡಿದನು. ಸ್ವಲ್ಪದೂರ ಹೋಗುವುದರೊಳಗಾಗಿ ವಿದ್ವಾಂಸನಾದ ಸಹದೇವನು ನೆಲದ ಮೇಲೆ ಬಿದ್ದಿನು. ಅವನು ಕೆಳಕ್ಕೆ ಬಿದ್ದುದನ್ನು ನೋಡಿ ಭೀಮನು ಪುನಃ ರಾಜನನ್ನು ಪ್ರಶ್ನಿಸಿದನು :

ಯೋಽಯಮಸ್ಮಾಸು ಸರ್ವೇಷು ಶುಶ್ರೂಷುರನಹಂಕೃತಃ ।
ಸೋಽಯಂ ಮಾದ್ರವತೀಪುತ್ರಃ ಕಸ್ಮಾನ್ನಿಪತಿತೋ ಭುವಿ ॥೭॥

"ಅಣ್ಣ! ಈ ಸಹದೇವನು ಯಾವಾಗಲೂ ನಮ್ಮ ಶುಶ್ರೂಷೆಯಲ್ಲಿಯೇ ನಿರತನಾಗಿರುತ್ತಿದ್ದನು. ಮೇಲಾಗಿ ಇವನು ನಿರಹಂಕಾರಿಯಾಗಿದ್ದನು. ಇಂತಹ ಧರ್ಮಾತ್ಮನಾದ ಮಾದ್ರಿಯ ಮಗನಾದ ಸಹದೇವನು ಯಾವ ದೋಷದಿಂದ ಕೆಳಕ್ಕೆ ಬಿದ್ದನು?"

ಧರ್ಮಜನು ಹೇಳುತ್ತಾನೆ :

ಆತ್ಮನಃ ಸದೃಶಂ ಪ್ರಾಜ್ಞಂ ನೈಷೋಽಮನ್ಯತ ಕಂಚನ ।
ತೇನ ದೋಷೇಣ ಪತಿತಸ್ತಸ್ಮಾದೇಷ ನೃಪಾತ್ಮಜಃ ॥೧೦॥

"ಭೀಮಸೇನ! ರಾಜಕುಮಾರನಾದ ಈ ಸಹದೇವನು ಬುದ್ಧಿಯಲ್ಲಿ ಅಥವಾ ಜ್ಞಾನದಲ್ಲಿ ತನಗೆ ಸಮಾನರಾದವರು ಯಾರೂ ಇಲ್ಲವೆಂದೇ ಭಾವಿಸಿದ್ದನು. ಈ ಒಂದು ದೋಷದಿಂದಾಗಿ ಇವನ ಪತನವಾಯಿತು."

ವೈಶಂಪಾಯನರು ಹೇಳುತ್ತಾರೆ :

ಜನಮೇಜಯ! ಭೀಮಸೇನನ ಪ್ರಶ್ನೆಗೆ ಧರ್ಮರಾಜನು ಹೀಗೆ ಉತ್ತರವನ್ನಿತ್ತು ಸಹದೇವನನ್ನು ಅಲ್ಲಿಯೇ ಪರಿತ್ಯಜಿಸಿ ಉಳಿದ ಅನುಜ ರೊಡನೆಯೂ ನಾಯಿಯೊಡನೆಯೂ ಮುಂದೆ ಪ್ರಯಾಣಮಾಡಿದನು. ದ್ರೌಪದಿಯೂ ಮತ್ತು ಸಹದೇವನೂ ಕೆಳಕ್ಕೆ ಬಿದ್ದುದನ್ನು ನೋಡಿ ಬಂಧು ಪ್ರಿಯನಾದ ಮತ್ತು ಶೂರನಾದ ನಕುಲನೂ ಆರ್ತನಾಗಿ ಕೆಳಕ್ಕೆ ಬಿದ್ದನು. ಕಡುಚೆಲುವನಾಗಿ ಕಾಣುತ್ತಿದ್ದ ನಕುಲನೂ ಬೀಳಲಾಗಿ ಪುನಃ ಭೀಮಸೇನನು ರಾಜನನ್ನು ಪ್ರಶ್ನಿಸಿದನು :

ಯೋಽಯಮಕ್ಷತಧರ್ಮಾತ್ಮಾ ಭ್ರಾತಾ ವಚನಕಾರಕಃ ।
ರೂಪೇಣಾಪ್ರತಿಮೋ ಲೋಕೇ ನಕುಲಃ ಪತಿತೋ ಭುವಿ ॥೧೪॥

"ಅಣ್ಣ! ಯಾವನು ಸ್ವಲ್ಪವೂ ಲೋಪವಿಲ್ಲದಂತೆ ಧರ್ಮವನ್ನು ಪರಿ ಪಾಲಿಸುತ್ತಿದ್ದನೋ, ನಾವು ಹೇಳಿದಂತೆ ಕೇಳುತ್ತಿದ್ದನೋ, ಲೋಕದಲ್ಲಿಯೇ ಎಣೆಯಿಲ್ಲದ ರೂಪವುಳ್ಳವನೋ–ಅಂತಹ ನಕುಲನೂ ಯಾವ ಕಾರಣದಿಂದ ಹೀಗೆ ಬಿದ್ದುಹೋದನಣ್ಣಾ?"

ಭೀಮಸೇನನು ಹೀಗೆ ಪ್ರಶ್ನಿಸಲು ಧರ್ಮಾತ್ಮನಾದ, ಬುದ್ಧಿವಂತರಲ್ಲಿ ಶ್ರೇಷ್ಠನಾದ ಯುಧಿಷ್ಠಿರನು ನಕುಲನ ವಿಷಯವಾಗಿ ಹೇಳಿದನು :

ರೂಪೇಣ ಮತ್ಸಮೋ ನಾಸ್ತಿ ಕಶ್ಚಿದಿತ್ಯಸ್ಯ ದರ್ಶನಮ್ ।
ಅಧಿಕಶ್ಚಾಹಮೇವೈಕ ಇತ್ಯಸ್ಯ ಮನಸಿ ಸ್ಥಿತಮ್ ॥೧೬॥

ನಕುಲ ಪತಿತಸ್ತಸ್ಮಾದಾಗಚ್ಛ ತ್ವಂ ವೃಕೋದರ ।
ಯಸ್ಯ ಯದ್ವಿಹಿತಂ ವೀರ ಸೋಽವಶ್ಯಂ ತದುಪಾಶ್ನತೇ ॥೧೭॥

“ಭೀಮಸೇನ! ನಕುಲನಿಗೆ ರೂಪದಲ್ಲಿ ತನಗೆ ಸಮಾನರಾದವರು ಯಾರೂ ಇಲ್ಲವೆಂಬ ಭಾವನೆಯಿದ್ದಿತು. ‘ನಾನೊಬ್ಬನೇ ರೂಪದಲ್ಲಿ ಎಲ್ಲರಿಗಿಂತಲೂ ಅಧಿಕನಾಗಿರುವೆನು’–ಎಂದೂ ಅವನು ಮನಸ್ಸಿನಲ್ಲಿ ಭಾವಿಸಿದ್ದನು. ಈ ಕಾರಣದಿಂದಲೇ ನಕುಲನು ಯೋಗಭ್ರಷ್ಟನಾಗಿ ಬಿದ್ದುಹೋದನು. ವೃಕೋದರ! ಹೋಗೋಣ, ನಡೆ. ಯಾವನು ಯಾವ ಕಾರ್ಯವನ್ನು ಮಾಡಿರುವನೋ–ಅದಕ್ಕೆ ಅನುಗುಣವಾದ ಫಲವನ್ನು ಅವನು ಅವಶ್ಯವಾಗಿ ಪಡೆದೇ ತೀರುತ್ತಾನೆ.”

ದ್ರೌಪದೀ-ನಕುಲ-ಸಹದೇವರು ಬಿದ್ದುದನ್ನು ನೋಡಿ ಶತ್ರುವೀರಹಂತಕನಾದ ಶ್ವೇತವಾಹನನಾದ ಅರ್ಜುನನೂ ಶೋಕಸಂತಪ್ತನಾಗಿ ಕೆಳಕ್ಕೆ ಬಿದ್ದನು. ಇಂದ್ರನಿಗೆ ಸಮಾನವಾದ ತೇಜಸ್ಸನ್ನು ಹೊಂದಿದ್ದ, ಪುರುಷಸಿಂಹನಾದ, ಎದುರಿಸಲು ಅಸಾಧ್ಯನಾಗಿದ್ದ ಅರ್ಜುನನು ಕೂಡ ಮರಣಹೊಂದಲಾಗಿ ಭೀಮನು ಪುನಃ ಯುಧಿಷ್ಠಿರನನ್ನು ಪ್ರಶ್ನಿಸಿದನು :

ಅನೃತಂ ನ ಸ್ಮರಾಮ್ಯಸ್ಯ ಸ್ವೈರೇಷ್ವಪಿ ಮಹಾತ್ಮನಃ ।
ಅಥ ಕಸ್ಯ ವಿಕಾರೋಽಯಂ ಯೇನಾಯಂ ಪತಿತೋ ಭುವಿ ॥೨೦॥

“ಅಣ್ಣ! ನಮ್ಮ ಸಹೋದರನಾದ ಈ ಅರ್ಜುನನು ಪರಿಹಾಸಕ್ಕಾಗಿಯೇ ಆದರೂ ಒಮ್ಮೆಯಾದರೂ ಸುಳ್ಳುಹೇಳಿರುವುದು ನನ್ನ ಸ್ಮರಣೆಯಲ್ಲಿಲ್ಲ. ಹೀಗಿರುವಾಗ ಯಾವ ಕರ್ಮದ ಫಲವಾಗಿ ಇವನು ಕೆಳಕ್ಕೆ ಬಿದ್ದುಬಿಟ್ಟನು?”

ಯುಧಿಷ್ಠಿರನು ಹೇಳುತ್ತಾನೆ :

ಏಕಾಹ್ನಾ ನಿರ್ದಹೇಯಂ ವೈ ಶತ್ರೂನಿತ್ಯರ್ಜುನೋಽಬ್ರವೀತ್ ।
ನ ಚ ತತ್ಕೃತವಾನೇಷ ಶೂರಮಾನೀ ತತೋಽಪತತ್ ॥೨೧॥

“ಅರ್ಜುನನಿಗೆ ತನ್ನ ಪರಾಕ್ರಮದ ವಿಷಯದಲ್ಲಿ ಮಿತಿಮೀರಿದ ಅಭಿಮಾನವಿದ್ದಿತು. ಒಂದೇ ದಿವಸದಲ್ಲಿ ಶತ್ರುಗಳೆಲ್ಲರನ್ನೂ ದಹಿಸಿಬಿಡುವುದಾಗಿ ಅವನು ಹೇಳಿದ್ದನು. ಆದರೆ ಅವನು ಹಾಗೆ ಮಾಡಲಿಲ್ಲ. (ಅವನು

ಮಿಥ್ಯಾವಾದಿಯಾದಂತಾಯಿತು) ಈ ಕಾರಣದಿಂದ ಅವನು ಧರಾಶಾಯಿಯಾಗಬೇಕಾಯಿತು.

ಅವಮೇನೇ ಧನುರ್ಗ್ರಾಹಾನೇಷ ಸರ್ವಾಂಶ್ಚ ಫಾಲ್ಗುನಃ ।
ತಥಾ ಚೈತನ್ನ ತು ತಥಾ ಕರ್ತವ್ಯಂ ಭೂತಿಮಿಚ್ಛತಾ ॥೨೨॥

ಅರ್ಜುನನು ಸಕಲಧನುರ್ಧಾರಿಗಳನ್ನೂ ಅವಮಾನಗೊಳಿಸುತ್ತಿದ್ದನು. ಆದುದರಿಂದ ಈ ಪತನವು ಸಂಭವಿಸಿತು. ತನ್ನ ಕಲ್ಯಾಣವನ್ನು ಬಯಸುವವನು ಹೀಗೆ ಯಾವಾಗಲೂ ಮಾಡಬಾರದು."

ಜನಮೇಜಯ! ಹೀಗೆ ಹೇಳಿ ಯುಧಿಷ್ಠಿರನು ಮುನ್ನಡೆದನು. ಸ್ವಲ್ಪದೂರ ಹೋಗುವುದರೊಳಗಾಗಿಯೇ ಭೀಮನೂ ಕೆಳಗೆ ಬಿದ್ದನು. ಆದರೆ ಅವನು ಒಡನೆಯೇ ಪ್ರಜ್ಞೆಯನ್ನು ಕಳೆದುಕೊಳ್ಳಲಿಲ್ಲ. ನೆಲದ ಮೇಲೆ ಬಿದ್ದಿರುವಂತೆಯೇ ಯುಧಿಷ್ಠಿರನನ್ನು ಪ್ರಶ್ನಿಸಿದನು :

ಭೋ ಭೋ ರಾಜನ್ನವೇಕ್ಷಸ್ವ ಪತಿತೋಽಹಂ ಪ್ರಿಯಸ್ತವ ।
ಕಿಂ ನಿಮಿತ್ತಂ ಚ ಪತನಂ ಬ್ರೂಹಿ ಮೇ ಯದಿ ವೇತ್ಥ ಹ ॥೨೩॥

"ಅಯ್ಯೋ ಮಹಾರಾಜ! ಇದೋ ಇಲ್ಲಿ ನೋಡು. ನಿನ್ನ ಪ್ರೀತಿಪಾತ್ರನಾದ ನಾನೂ ಬಿದ್ದುಬಿಟ್ಟೆನು. ನಿನಗೇನಾದರೂ ತಿಳಿದಿದ್ದರೆ ನನ್ನ ಪತನಕ್ಕೆ ಕಾರಣವನ್ನು ಹೇಳು."

ಯುಧಿಷ್ಠಿರನು ಉತ್ತರಿಸುತ್ತಾನೆ :

ಅತಿಭುಕ್ತಂ ಚ ಭವತಾ ಪ್ರಾಣೇನ ಚ ವಿಕತ್ಥಸೇ ।
ಅನವೇಕ್ಷ್ಯ ಪರಂ ಪಾರ್ಥ ತೇನಾಸಿ ಪತಿತಃ ಕ್ಷಿತೌ ॥೨೪॥

"ಭೀಮಸೇನ! ನೀನು ಬಹಳವಾಗಿ ತಿನ್ನುತ್ತಿದ್ದೆ. ಇತರರ ಬಲವೆಷ್ಟಿರುವುದೆಂಬುದನ್ನು ಪರಿಗಣಿಸದೆಯೇ ನಿನ್ನ ಬಲದ ವಿಷಯವಾಗಿ ಜಂಬಕೊಚ್ಚುತ್ತಿದ್ದೆ. ಈ ಕಾರಣದಿಂದ ನೀನೂ ಕೂಡ ಗುರಿಯನ್ನು ಮುಟ್ಟುವ ಮೊದಲೇ ಭೂಮಿಯಲ್ಲಿ ಬಿದ್ದುಹೋಗಿರುವೆ."

ಜನಮೇಜಯ! ಯುಧಿಷ್ಠಿರನು ಹೀಗೆ ಹೇಳಿ ಭೀಮಸೇನನನ್ನು ಪುನಃ ಹಿಂದಿರುಗಿಯೂ ನೋಡದೇ ಮುನ್ನಡೆದನು. ನಾನು ಹಿಂದೆ ಹಲವುಬಾರಿ

ಹೇಳಿದ್ದಂತೆ ನಾಯಿಯೊಂದೇ ಆ ಸಮಯದಲ್ಲಿ ಅವನನ್ನು ಹಿಂಬಾಲಿಸುತ್ತಿದ್ದಿತು.

೨ನೆಯ ಅಧ್ಯಾಯವು ಮುಗಿಯಿತು.

೩ನೆಯ ಅಧ್ಯಾಯ ಮಹಾಪ್ರಸ್ಥಾನಿಕಪರ್ವ (ಮುಂದುವರಿದಿದೆ.)

ಇಂದ್ರ-ಧರ್ಮಾದಿಗಳೊಡನೆ ಯುಧಿಷ್ಠಿರನ ಸಂಭಾಷಣೆ : ಧರ್ಮದಲ್ಲಿ ಅವನ ದೃಢತೆ : ಸಶರೀರನಾಗಿ ಸ್ವರ್ಗಕ್ಕೆ ಪ್ರಯಾಣ

ವೈಶಂಪಾಯನರು ಹೇಳುತ್ತಾರೆ :

ತತಃ ಸನ್ನಾದಯಞ್ಶಕ್ರೋ ದಿವಂ ಭೂಮಿಂ ಚ ಸರ್ವಶಃ ।
ರಥೇನೋಪಯಯೌ ಪಾರ್ಥಮಾರೋಹೇತ್ಯಬ್ರವೀಚ್ಚ ತಮ್ ॥೧॥

ಜನಮೇಜಯ! ಬಳಿಕ ಇಂದ್ರನು ರಥಶಬ್ದದಿಂದ ಆಕಾಶ-ಭೂಮಿಗಳೆರಡರಲ್ಲಿಯೂ ಸರ್ವತ್ರ ಪ್ರತಿಧ್ವನಿಯನ್ನುಂಟುಮಾಡುತ್ತಾ ಯುಧಿಷ್ಠಿರನ ಬಳಿಗೆ ಬಂದು–'ರಥವನ್ನು ಹತ್ತು, ಯುಧಿಷ್ಠಿರ!' –ಎಂದು ಹೇಳಿದನು. ಆ ವೇಳೆಗೆ ತನ್ನ ಸಹೋದರರೆಲ್ಲರೂ ಬಿದ್ದುಹೋಗಿದ್ದುದರಿಂದ ಶೋಕ ಸಂತಪ್ತನಾಗಿದ್ದ ಯುಧಿಷ್ಠಿರನು ಸಹಸ್ರಾಕ್ಷನಿಗೆ ಹೀಗೆ ಹೇಳಿದನು :

ಭ್ರಾತರಃ ಪತಿತಾ ಮೇಽತ್ರ ಗಚ್ಛೇಯುಸ್ತೇ ಮಯಾ ಸಹ ।
ನ ವಿನಾ ಭ್ರಾತೃಭಿಃ ಸ್ವರ್ಗಮಿಚ್ಛೇ ಗನ್ತುಂ ಸುರೇಶ್ವರ ॥೨॥

"ಸುರೇಶ್ವರನೇ! ನನ್ನ ಅನುಜರೆಲ್ಲರೂ ದಾರಿಯಲ್ಲಿ ಬಿದ್ದುಬಿಟ್ಟಿದ್ದಾರೆ. ಅವರೂ ನನ್ನ ಜೊತೆಯಲ್ಲಿ ಸ್ವರ್ಗಕ್ಕೆ ಬರುವಂತೆ ಮಾಡು. ಅವರಿಲ್ಲದೆ ನಾನು ಸ್ವರ್ಗಕ್ಕೆ ಹೋಗಲು ಬಯಸುವುದಿಲ್ಲ.

ಸುಕುಮಾರೀ ಸುಖಾರ್ಹಾ ಚ ರಾಜಪುತ್ರೀ ಪುರಂದರ ।
ಸಾಸ್ಮಾಭಿಃ ಸಹ ಗಚ್ಛೇತ ತದ್ಭವಾನನುಮನ್ಯತಾಮ್ ॥೩॥

ಸುಕುಮಾರಿಯೂ, ಸುಖಾರ್ಹಳೂ, ರಾಜಪುತ್ರಿಯೂ ಆಗಿರುವ

ದ್ರೌಪದಿಯೂ ನಮ್ಮ ಜೊತೆಯಲ್ಲಿಯೇ ಸ್ವರ್ಗಕ್ಕೆ ಬರುವಂತಾಗಲಿ. ಇದಕ್ಕೆ ನೀನು ಅನುಮತಿಸಬೇಕು."

ಶಕ್ರನು ಹೇಳುತ್ತಾನೆ :

ಭ್ರಾತೄಂದ್ರಕ್ಷ್ಯಸಿ ಸ್ವರ್ಗೇ ತ್ವಮಗ್ರತಸ್ತ್ರಿದಿವಂ ಗತಾನ್ ।
ಕೃಷ್ಣಯಾ ಸಹಿತಾನ್ಸರ್ವಾನ್ಮಾ ಶುಚೋ ಭರತರ್ಷಭ ॥೫॥

"ಯುಧಿಷ್ಠಿರ! ನಿನಗಿಂತಲೂ ಮುಂದಾಗಿಯೇ ದ್ರೌಪದಿಯ ಜೊತೆಯಲ್ಲಿ ಸ್ವರ್ಗಕ್ಕೆ ಹೋಗಿರುವ ನಿನ್ನ ಸಹೋದರರನ್ನು ನೀನು ಸ್ವರ್ಗದಲ್ಲಿ ಕಾಣಲಿರುವೆ. ಆದುದರಿಂದ ಅವರಿಗಾಗಿ ನೀನು ದುಃಖಿಸುವ ಕಾರಣವಿಲ್ಲ.

ನಿಕ್ಷಿಪ್ಯ ಮಾನುಷಂ ದೇಹಂ ಗತಾಸ್ತೇ ಭರತರ್ಷಭ ।
ಅನೇನ ತ್ವಂ ಶರೀರೇಣ ಸ್ವರ್ಗೇ ಗನ್ತಾ ನ ಸಂಶಯಃ ॥೬॥

ಭರತಶ್ರೇಷ್ಠನೇ! ಅವರೆಲ್ಲರೂ ಪಾರ್ಥಿವಶರೀರವನ್ನು ತೊರೆದು ಸ್ವರ್ಗಕ್ಕೆ ಹೋಗಿದ್ದಾರೆ. ನೀನಾದರೋ ಇದೇ ಶರೀರದಿಂದಲೇ ಸ್ವರ್ಗಕ್ಕೆ ಹೋಗುವೆ. ಇದರಲ್ಲಿ ಸಂಶಯವೇ ಇಲ್ಲ."

ಯುಧಿಷ್ಠಿರನು ಹೇಳುತ್ತಾನೆ :

"ಭೂತಭವ್ಯೇಶನೇ! ದೇವೇಂದ್ರನೇ! ಈ ನಾಯಿಯು ನನ್ನಲ್ಲಿ ಭಕ್ತಿಭಾವವನ್ನು ಹೊಂದಿದೆ. ನಿತ್ಯವೂ ನನ್ನನ್ನೇ ಅನುಸರಿಸಿ ಬರುತ್ತಿದೆ. ಆದುದರಿಂದ ಇದೂ ನನ್ನ ಜೊತೆಯಲ್ಲಿಯೇ ಸ್ವರ್ಗಕ್ಕೆ ಬರಲು ಅನುಮತಿಸು. ಏಕೆಂದರೆ : ನನ್ನ ಬುದ್ಧಿಯು ಯಾವಾಗಲೂ ದಯಾಪರವಾದುದು."

ಇಂದ್ರನು ಹೇಳುತ್ತಾನೆ :

ಅಮರ್ತ್ಯತ್ವಂ ಮತ್ಸಮತ್ವಂ ಚ ರಾಜ-
ಞ್ಶ್ರಿಯಂ ಕೃತ್ಸ್ನಾಂ ಮಹತೀಂ ಚೈವ ಸಿದ್ಧಿಮ್ ।
ಸಂಪ್ರಾಪ್ತೋಽದ್ಯ ಸ್ವರ್ಗಸುಖಾನಿ ಚ ತ್ವಂ
ತ್ಯಜ ಶ್ವಾನಂ ನಾತ್ರ ನೃಶಂಸಮಸ್ತಿ ॥೭॥

"ಯುಧಿಷ್ಠಿರ! ಈಗ ನೀನು ಅಮರತ್ವವನ್ನು ಹೊಂದಿರುವೆ. ನನಗೆ

ಸಮಾನನಾಗಿರುವೆ. ಸಮಗ್ರವಾದ ಸ್ವರ್ಗಸಂಪತ್ತನ್ನೂ ಮಹಾಸಿದ್ಧಿಯನ್ನೂ ಪಡೆದಿರುವೆ. ಈಗ ನೀನು ಸಮಸ್ತವಾದ ಸ್ವರ್ಗಸುಖಗಳನ್ನೂ ಪಡೆದಿರುವೆ. ಆದುದರಿಂದ ಈ ನಾಯಿಯನ್ನು ಇಲ್ಲಿಯೇ ಬಿಟ್ಟುಬಿಡು. ಇದರಲ್ಲಿ ಯಾವ ಕಠೋರತೆಯೂ ಇಲ್ಲ."

ಯುಧಿಷ್ಠಿರ :

ಅನಾರ್ಯಮಾರ್ಯೇಣ ಸಹಸ್ರನೇತ್ರ
ಶಕ್ಯಂ ಕರ್ತುಂ ದುಷ್ಕರಮೇತದಾರ್ಯ ।
ಮಾ ಮೇ ಶ್ರಿಯಾ ಸಙ್ಗಮನಂ ತಯಾಸ್ತು
ಯಸ್ಯಾಃ ಕೃತೇ ಭಕ್ತಜನಂ ತ್ಯಜೇಯಮ್ ॥೯॥

"ಸಾವಿರ ಕಣ್ಣುಗಳುಳ್ಳವನೇ! ಆರ್ಯನೇ! ಆರ್ಯನಾದವನು ನೀಚಕರ್ಮವನ್ನು ಮಾಡುವುದು ಅತ್ಯಂತದುಷ್ಕರವೇ ಸರಿ. ಯಾವುದರ ಸಲುವಾಗಿ ನಾನು ಭಕ್ತಜನರನ್ನು ಪರಿತ್ಯಜಿಸಬೇಕಾಗುವುದೋ ಅಂತಹ ಸ್ವರ್ಗಸಂಪತ್ತಿನ ಗೊಡವೆಯೇ ನನಗೆ ಬೇಡ."

ಇಂದ್ರ :

ಸ್ವರ್ಗಲೋಕೇ ಶ್ವವತಾಂ ನಾಸ್ತಿ ಧಿಷ್ಣ್ಯ-
ಮಿಷ್ಟಾಪೂರ್ತಂ ಕ್ರೋಧವಶಾ ಹರನ್ತಿ ।
ತತೋ ವಿಚಾರ್ಯ ಕ್ರಿಯತಾಂ ಧರ್ಮರಾಜ
ತ್ಯಜ ಶ್ವಾನಂ ನಾತ್ರ ನೃಶಂಸಮಸ್ತಿ ॥೧೦॥

"ಧರ್ಮರಾಜ! ನಾಯಿಯನ್ನು ಇಟ್ಟುಕೊಂಡವರಿಗೆ ಸ್ವರ್ಗಲೋಕದಲ್ಲಿ ವಾಸಿಸಲು ಅವಕಾಶವಿಲ್ಲ. ನಾಯಿಯ ಜೊತೆಯಲ್ಲಿರುವವರು ಮಾಡಿರುವ ಯಜ್ಞದ ಮತ್ತು ಕೆರೆ-ಕಟ್ಟೆಗಳನ್ನು ಕಟ್ಟಿಸಿದ ಪುಣ್ಯಫಲಗಳನ್ನು ಕ್ರೋಧವಶರೆಂಬ ರಾಕ್ಷಸರು ಅಪಹರಿಸುತ್ತಾರೆ. ಆದುದರಿಂದ ವಿಚಾರ ಮಾಡಿ ಕಾರ್ಯವನ್ನು ಮಾಡು. ಈ ನಾಯಿಯನ್ನು ಬಿಟ್ಟುಬಿಡು. ಇದರಲ್ಲಿ ಯಾವ ನಿರ್ದಯತೆಯೂ ಇರುವುದಿಲ್ಲ."

ಯುಧಿಷ್ಠಿರ :

ಭಕ್ತತ್ಯಾಗಂ ಪ್ರಾಹುರತ್ಯನ್ತಪಾಪಂ
ತುಲ್ಯಂ ಲೋಕೇ ಬ್ರಹ್ಮವಧ್ಯಾಕೃತೇನ ।
ತಸ್ಮಾನ್ನಾಹಂ ಜಾತು ಕಥಂಚನಾದ್ಯ
ತ್ಯಕ್ಷ್ಯಾಮ್ಯೇನಂ ಸ್ವಸುಖಾರ್ಥಂ ಮಹೇನ್ದ್ರ ॥೧೧॥

"ಮಹೇಂದ್ರನೇ! ಭಕ್ತನನ್ನು ತ್ಯಾಗಮಾಡುವುದು ಅತ್ಯಂತಪಾಪಕರವೆಂದು ವಿದ್ವಾಂಸರು ಹೇಳುತ್ತಾರೆ. ಆ ಪಾಪವು ಬ್ರಹ್ಮಹತ್ಯಾಪಾಪಕ್ಕೆ ಸಮಾನವಾದುದು. ಆದುದರಿಂದ ಸ್ವರ್ಗಸುಖವನ್ನು ಬಯಸಿ ನಾನು ಯಾವಾಗಲೂ ಯಾವುದೇ ಕಾರಣದಿಂದಲೂ ಈ ನಾಯಿಯನ್ನು ತ್ಯಜಿಸುವುದಿಲ್ಲ.

ಭೀತಂ ಭಕ್ತಂ ನಾನ್ಯದಸ್ತೀತಿ ಚಾರ್ತಂ
ಪ್ರಾಪ್ತಂ ಕ್ಷೀಣಂ ರಕ್ಷಣೇ ಪ್ರಾಣಲಿಪ್ಸುಮ್ ।
ಪ್ರಾಣತ್ಯಾಗಾದಪ್ಯಹಂ ನೈವ ಮೋಕ್ತುಂ
ಯತೇಯಂ ವೈ ನಿತ್ಯಮೇತದ್ವ್ರತಂ ಮೇ ॥೧೨॥

ಭಯಗೊಂಡಿರುವವರನ್ನೂ, ಭಕ್ತನನ್ನೂ, ನನಗೆ ಬೇರೆ ಯಾರೂ ಗತಿಯೇ ಇಲ್ಲ–ಎಂದು ಹೇಳಿಕೊಂಡು ಬರುವ ಆರ್ತನನ್ನೂ, ಆತ್ಮರಕ್ಷಣೆಯನ್ನು ಮಾಡಿಕೊಳ್ಳಲು ಅಸಮರ್ಥನಾದವನನ್ನೂ, ಪ್ರಾಣವನ್ನುಳಿಸಿಕೊಳ್ಳಲು ಪ್ರಯತ್ನಿಸುತ್ತಿರುವವನನ್ನೂ–ಪ್ರಾಣವನ್ನೇ ತೆರುವ ಸಂದರ್ಭವು ಒದಗಿಬಂದರೂ ಕೈಬಿಡಬಾರದೆಂಬುದು ನನ್ನ ನಿತ್ಯವ್ರತವಾಗಿದೆ. ಈ ವ್ರತದ ಪರಿಪಾಲನೆಗಾಗಿ ನಾನು ಸರ್ವದಾ ಪ್ರಯತ್ನಿಸುತ್ತೇನೆ."

ಇಂದ್ರ :

ಶುನಾ ದೃಷ್ಟಂ ಕೋಪವಶಾ ಹರನ್ತಿ
ಯದ್ದತ್ತಮಿಷ್ಟಂ ವಿವೃತಮಥೋ ಹುತಂ ಚ ।
ತಸ್ಮಾಚ್ಛುನಸ್ತ್ಯಾಗಮಿಮಂ ಕುರುಷ್ವ
ಶುನಸ್ತ್ಯಾಗಾತ್ಪ್ರಾಪ್ಸ್ಯಸೇ ದೇವಲೋಕಮ್ ॥೧೩॥

"ಧರ್ಮರಾಜ! ಮನುಷ್ಯನು ಮಾಡುವ ದಾನ, ಯಜ್ಞ, ಅಧ್ಯಯನ,

ಹವನ–ಇವೇ ಮೊದಲಾದ ಪುಣ್ಯಕರ್ಮಗಳ ಮೇಲೆ ನಾಯಿಯ ದೃಷ್ಟಿಯೇನಾದರೂ ಬಿದ್ದರೆ–ಅವೆಲ್ಲದರ ಫಲಗಳನ್ನೂ ಕ್ರೋಧವಶರೆಂಬ ರಾಕ್ಷಸರು ಅಪಹರಿಸುತ್ತಾರೆ. ಆದುದರಿಂದ ಈ ಶ್ವಾನವನ್ನು ಬಿಟ್ಟುಬಿಡು. ಶ್ವಾನತ್ಯಾಗದಿಂದ ದೇವಲೋಕಕ್ಕೆ ಹೋಗುವೆ.

ತ್ಯಕ್ತ್ವಾ ಭ್ರಾತೄನ್ದಯಿತಾಂ ಚಾಪಿ ಕೃಷ್ಣಾಂ
ಪ್ರಾಪ್ತೋ ಲೋಕಃ ಕರ್ಮಣಾ ಸ್ವೇನ ವೀರ ।
ಶ್ವಾನಂ ಚೈನಂ ನ ತ್ಯಜಸೇ ಕಥಂ ನು
ತ್ಯಾಗಂ ಕೃತ್ಸ್ನಂ ಚಾಸ್ಥಿತೋ ಮುಹ್ಯಸೇಽದ್ಯ ॥೧೪॥

ವೀರನೇ! ನೀನು ತಮ್ಮಂದಿರನ್ನೂ ಪ್ರಿಯಭಾರ್ಯೆಯಾದ ದ್ರೌಪದಿಯನ್ನೂ ಪರಿತ್ಯಜಿಸಿ ನೀನು ಮಾಡಿರುವ ಪುಣ್ಯಕರ್ಮಗಳಿಂದ ದೇವಲೋಕವನ್ನು ಪಡೆದುಕೊಂಡಿರುವೆ. ಪ್ರಿಯಭಾರ್ಯೆಯನ್ನೇ ತ್ಯಜಿಸಿ ಬಂದಿರುವ ನೀನು ಈ ನಾಯಿಯನ್ನೇಕೆ ತ್ಯಜಿಸುತ್ತಿಲ್ಲ? ಎಲ್ಲವನ್ನೂ ತ್ಯಾಗಮಾಡಿರುವ ನೀನು ಈ ನಾಯಿಯ ಮೇಲೆ ವ್ಯಾಮೋಹವನ್ನು ಹೊಂದಿರುವೆ. (ನೀನು ಈಗ ಅಜ್ಞಾನವಶನಾಗಿರುವೆ.)

ಯುಧಿಷ್ಠಿರ :

ನ ವಿದ್ಯತೇ ಸಂಧಿರಥಾಪಿ ವಿಗ್ರಹೋ
ಮೃತೈರ್ಮರ್ತ್ಯೈರಿತಿ ಲೋಕೇಷು ನಿಷ್ಠಾ ।
ನ ತೇ ಮಯಾ ಜೀವಯಿತುಂ ಹಿ ಶಕ್ಯಾ
ಸ್ತಸ್ಮಾತ್ತ್ಯಾಗಸ್ತೇಷು ಕೃತೋ ನ ಜೀವತಾಮ್ ॥೧೫॥

“ಸತ್ತಮನುಷ್ಯರೊಡನೆ ಸಂಧಿಯಾಗಲೀ ವಿಗ್ರಹವಾಗಲೀ ಸಾಧ್ಯವಿಲ್ಲವೆಂಬುದು ಎಲ್ಲ ಲೋಕಗಳಲ್ಲಿಯೂ ನಿಶ್ಚಿತವಾಗಿಬಿಟ್ಟಿದೆ. ನನ್ನ ಸಹೋದರರನ್ನಾಗಲೀ ದ್ರೌಪದಿಯನ್ನಾಗಲೀ ಬದುಕಿಸಲು ನನಗೆ ಸಾಧ್ಯವಿರಲಿಲ್ಲ. ಆದುದರಿಂದ ಸತ್ತುಹೋದವರನ್ನು ತ್ಯಾಗಮಾಡುವುದು ಅನಿವಾರ್ಯವಾಗಿದ್ದಿತು. ಅವರು ಜೀವಿಸಿದ್ದಾಗ ನಾನೆಂದಿಗೂ ಅವರನ್ನು ತ್ಯಾಗಮಾಡಲಿಲ್ಲ.

ಭೀತಿಪ್ರದಾನಂ ಶರಣಾಗತಸ್ಯ
ಸ್ತ್ರಿಯಾ ವಧೋ ಬ್ರಾಹ್ಮಣಸ್ವಾಪಹಾರಃ ।

ಮಿತ್ರದ್ರೋಹಸ್ತಾನಿ ಚತ್ವಾರಿ ಶಕ್ರ
ಭಕ್ತತ್ಯಾಗಶ್ಚೈವ ಸಮೋ ಮತೋ ಮೇ ॥೧೬॥

ಶರಣಾಗತನಾಗಿ ಬಂದವನಿಗೆ ಭಯವನ್ನುಂಟುಮಾಡುವುದು ; ಹೆಂಗಸರನ್ನು ಕೊಲ್ಲುವುದು ; ಬ್ರಾಹ್ಮಣರ ಸ್ವತ್ತನ್ನು ಅಪಹರಿಸುವುದು ; ಮಿತ್ರನಿಗೆ ದ್ರೋಹವನ್ನೆಸಗುವುದು–ಈ ನಾಲ್ಕರ ಪಾಪವನ್ನೂ ಮತ್ತು ಭಕ್ತನ ತ್ಯಾಗದ ಪಾಪವನ್ನೂ ಹೋಲಿಸಿದರೆ ಎರಡೂ ಸಮಾನವೆಂದೇ ನನ್ನ ಅಭಿಮತವಾಗಿದೆ.”

ವೈಶಂಪಾಯನರು ಹೇಳುತ್ತಾರೆ :

ಜನಮೇಜಯ! ಧರ್ಮರಾಜನ ಮಾತುಗಳನ್ನು ಕೇಳಿ ನಾಯಿಯ ರೂಪವನ್ನು ಧರಿಸಿಬಂದಿದ್ದ, ಪೂಜ್ಯನಾದ, ಧರ್ಮದ ಸ್ವರೂಪವೇ ಆಗಿರುವ ಯಮಧರ್ಮನು ಅತ್ಯಂತಪ್ರೀತಿಯುಕ್ತನಾಗಿ ಪ್ರಶಂಸೆಗಳಿಂದ ಕೂಡಿರುವ ಸುಮಧುರವಾದ ವಾಕ್ಯಗಳಿಂದ ಧರ್ಮರಾಜನಿಗೆ ಹೇಳಿದನು :

ಅಭಿಜಾತೋಽಸಿ ರಾಜೇನ್ದ್ರ ಪಿತುರ್ವೃತ್ತೇನ ಮೇಧಯಾ ।
ಅನುಕ್ರೋಶೇನ ಚಾನೇನ ಸರ್ವಭೂತೇಷು ಭಾರತ ॥೧೮॥

“ರಾಜೇಂದ್ರನೇ! ನೀನು ಸದಾಚಾರದಿಂದಲೂ, ಬುದ್ಧಿಯಿಂದಲೂ, ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಇಟ್ಟಿರುವ ದಯಾಭಾವದಿಂದಲೂ–ಸುಯೋಗ್ಯನಾದ ತಂದೆಗೆ ಉತ್ತಮವಾದ ಕುಲದಲ್ಲಿ ಹುಟ್ಟಿರುವೆಯೆಂಬುದು ಸ್ಪಷ್ಟವಾಗುತ್ತದೆ.

ಮಗು! ಹಿಂದೊಮ್ಮೆ ನೀನು ದ್ವೈತವನದಲ್ಲಿದ್ದಾಗ ನಾನು ನಿನ್ನನ್ನು ಪರೀಕ್ಷಿಸಿದ್ದೆನು. ಆ ಸಮಯದಲ್ಲಿ ನಿನ್ನ ಎಲ್ಲ ಅನುಜರೂ ನನ್ನ ಮಾತನ್ನು ಮೀರಿ ನೀರನ್ನು ಕುಡಿಯಲು ಸರೋವರಕ್ಕೆ ಬಂದು ಸಾವನ್ನಪ್ಪಿದರು.

ಭೀಮಾರ್ಜುನೌ ಪರಿತ್ಯಜ್ಯ ಯತ್ರ ತ್ವಂ ಭ್ರಾತರಾವುಭೌ ।
ಮಾತ್ರೋಃ ಸಾಮ್ಯಮಭೀಪ್ಸನ್ವೈ ನಕುಲಂ ಜೀವಮಿಚ್ಛಸಿ ॥೨೦॥

ಆ ಸಮಯದಲ್ಲಿ ನೀನು–ನಿನ್ನ ಒಡಹುಟ್ಟಿದ ಭೀಮಾರ್ಜುನರನ್ನು

ಪರಿತ್ಯಜಿಸಿ, ತಾಯಿಯರಿಬ್ಬರೂ ಜೀವಂತಪುತ್ರರಾಗಬೇಕೆಂಬ ಅಭಿಲಾಷೆಯಿಂದ ನಕುಲನನ್ನು ಬದುಕಿಸಿಕೊಳ್ಳಲು ಬಯಸಿದೆ.

ಅಯಂ ಶ್ವಾ ಭಕ್ತ ಇತ್ಯೇವಂ ತ್ಯಕ್ತೋ ದೇವರಥಸ್ತ್ವಯಾ ।
ತಸ್ಮಾತ್ಸ್ವರ್ಗೇ ನ ತೇ ತುಲ್ಯಃ ಕಶ್ಚಿದಸ್ತಿ ನರಾಧಿಪಃ ॥೨೧॥

ಈ ಸಮಯದಲ್ಲಿಯೂ ಈ ನಾಯಿಯು ನಿನ್ನ ಭಕ್ತನೆಂದೇ ಭಾವಿಸಿ, ಸ್ವರ್ಗಲೋಕಕ್ಕೊಯ್ಯಲು ನಿನಗಾಗಿ ಬಂದಿದ್ದ ದೇವರಥವನ್ನೇ ಪರಿತ್ಯಜಿಸಿದೆ. ಆದುದರಿಂದ ಸ್ವರ್ಗಲೋಕದಲ್ಲಿಯೂ ನಿನಗೆ ಸಮಾನರಾದ ರಾಜರ್ಷಿಗಳು ಬೇರೆ ಯಾರೂ ಇರುವುದಿಲ್ಲ.

ಅತಸ್ತವಾಕ್ಷಯಾ ಲೋಕಾಃ ಸ್ವಶರೀರೇಣ ಭಾರತ ।
ಪ್ರಾಪ್ತೋಽಸಿ ಭರತಶ್ರೇಷ್ಠ ದಿವ್ಯಾಂ ಗತಿಮನುತ್ತಮಾಮ್ ॥೨೨॥

ಭಾರತನೇ! ಈ ಕಾರಣದಿಂದ ನಿನಗೆ ಅಕ್ಷಯವಾದ ಲೋಕಗಳು ಪ್ರಾಪ್ತವಾಗಿವೆ. ನಿನ್ನ ಈ ಶರೀರದಿಂದಲೇ ನೀನು ಆ ಲೋಕಗಳಿಗೆ ಹೋಗಲಿರುವೆ. ನೀನು ಪರಮಶ್ರೇಷ್ಠವಾದ ಗತಿಯನ್ನು ಹೊಂದಿರುವೆ."

ವೈಶಂಪಾಯನರು ಹೇಳುತ್ತಾರೆ :

ಜನಮೇಜಯ! ಯಮಧರ್ಮನು ಹೀಗೆ ಹೇಳಿದನಂತರ ಧರ್ಮ, ಇಂದ್ರ, ಮರುದ್ಗಣಗಳು, ಅಶ್ವಿನೀದೇವತೆಗಳು, ದೇವತೆಗಳು ಮತ್ತು ದೇವರ್ಷಿಗಳು–ಇವರೆಲ್ಲರೂ ಯುಧಿಷ್ಠಿರನನ್ನು ರಥದಲ್ಲಿ ಕುಳ್ಳಿರಿಸಿ ತಮ್ಮ ತಮ್ಮ ವಿಮಾನಗಳ ಮೂಲಕವಾಗಿ ಸ್ವರ್ಗಕ್ಕೆ ಪ್ರಯಾಣಮಾಡಿದರು. ಅವರೆಲ್ಲರೂ ಇಚ್ಛಾನುಸಾರವಾಗಿ ಹೋಗಲು ಸಮರ್ಥರಾಗಿದ್ದರು. ಪಾಪಶೂನ್ಯರಾಗಿದ್ದರು. ಪುಣ್ಯಾತ್ಮರಾಗಿದ್ದರು. ಪವಿತ್ರವಾದ ಮಾತು, ಬುದ್ಧಿ ಮತ್ತು ಕರ್ಮಗಳುಳ್ಳವರಾಗಿದ್ದರು ಮತ್ತು ಸಿದ್ಧರಾಗಿದ್ದರು.

ಕುರುಕುಲತಿಲಕನಾದ ಯುಧಿಷ್ಠಿರನು ಆ ರಥದಲ್ಲಿ ಕುಳಿತು, ತನ್ನ ತೇಜಸ್ಸಿನಿಂದ ಭೂಮ್ಯಾಕಾಶಗಳನ್ನು ಬೆಳಗುತ್ತಾ ತೀವ್ರಗತಿಯಿಂದ ಊರ್ಧ್ವಮುಖವಾಗಿ ಪ್ರಯಾಣಮಾಡಿದನು. ಆ ಸಮಯದಲ್ಲಿ ಎಲ್ಲ ಲೋಕಗಳ ವೃತ್ತಾಂತಗಳನ್ನೂ ತಿಳಿದಿದ್ದ, ಗಟ್ಟಿಯಾಗಿ ಮಾತನಾಡುವ, ಮಹಾತಪಸ್ವಿ

ಗಳಾದ, ದೇವಲೋಕದಲ್ಲಿಯೇ ಇದ್ದ ನಾರದರು ಗಟ್ಟಿಯಾಗಿ ಹೀಗೆ ಹೇಳಿದರು :

ಯೇಽಪಿ ರಾಜರ್ಷಯಃ ಸರ್ವೇ ತೇ ಚಾಪಿ ಸಮುಪಸ್ಥಿತಾಃ ।
ಕೀರ್ತಿಂ ಪ್ರಚ್ಛಾದ್ಯ ತೇಷಾಂ ವೈ ಕುರುರಾಜೋಽಧಿತಿಷ್ಠತಿ ॥೨೭॥

"ಎಷ್ಟು ಮಂದಿ ರಾಜರ್ಷಿಗಳು ಸ್ವರ್ಗಕ್ಕೆ ಆಗಮಿಸಿರುವರೋ–ಅವರೆಲ್ಲರೂ ಇಲ್ಲಿ ಉಪಸ್ಥಿತರಾಗಿದ್ದಾರೆ. ಕುರುರಾಜನಾದ ಯುಧಿಷ್ಠಿರನು ಅವರೆಲ್ಲರ ಕೀರ್ತಿಯನ್ನೂ ಮಸುಕುಗೊಳಿಸಿ ವಿರಾಜಿಸುತ್ತಿದ್ದಾನೆ.

ಲೋಕಾನಾವೃತ್ಯ ಯಶಸಾ ತೇಜಸಾ ವೃತ್ತಸಮ್ಪದಾ ।
ಸ್ವಶರೀರೇಣ ಸಮ್ಪ್ರಾಪ್ತಂ ನಾನ್ಯಂ ಶುಶ್ರುಮ ಪಾಣ್ಡವಾತ್ ॥೨೮॥

ಯಶಸ್ಸು, ತೇಜಸ್ಸು ಮತ್ತು ಸದಾಚಾರರೂಪವಾದ ಸಂಪತ್ತುಗಳಿಂದ ಲೋಕಗಳೆಲ್ಲವನ್ನೂ ಆವರಿಸಿಕೊಂಡು ಭೌತಿಕಶರೀರದಿಂದಲೇ ಸ್ವರ್ಗ ಲೋಕಕ್ಕೆ ಬರುವ ಸೌಭಾಗ್ಯವು ಯುಧಿಷ್ಠಿರನ ಹೊರತಾಗಿ ಬೇರೆ ಯಾವನಿಗೂ ಇದ್ದುದನ್ನು ನಾವು ಕೇಳಿಲ್ಲ.

ತೇಜಾಂಸಿ ಯಾನಿ ದೃಷ್ಟಾನಿ ಭೂಮಿಷ್ಠೇನ ತ್ವಯಾ ವಿಭೋ ।
ವೇಶ್ಮಾನಿ ಭುವಿ ದೇವಾನಾಂ ಪಶ್ಯಾಮೂನಿ ಸಹಸ್ರಶಃ ॥೨೯॥

ಪ್ರಭುವೇ! ಯುಧಿಷ್ಠಿರ! ನೀನು ಭೂಮಿಯ ಮೇಲಿದ್ದಾಗ ಆಕಾಶದಲ್ಲಿ ನಕ್ಷತ್ರ-ತಾರೆಗಳ ರೂಪದಲ್ಲಿ ಎಷ್ಟು ತೇಜಸ್ಸುಗಳನ್ನು ನೋಡಿದ್ದೆಯೋ ಅವೆಲ್ಲವೂ ದೇವತೆಗಳ ಮನೆಗಳೇ (ಲೋಕಗಳೇ) ಆಗಿವೆ. ಸಾವಿರಾರು ಸಂಖ್ಯೆಯಲ್ಲಿರುವ ಆ ಲೋಕಗಳನ್ನು ನೋಡು."

ಜನಮೇಜಯ! ಧರ್ಮಾತ್ಮನಾದ ಯುಧಿಷ್ಠಿರನು ನಾರದರ ಆ ಮಾತನ್ನು ಕೇಳಿ ದೇವತೆಗಳ ಮತ್ತು ತನ್ನ ಪಕ್ಷದ ರಾಜರ ಅನುಮತಿಯನ್ನು ಪಡೆದು ಹೇಳಿದನು :

ಶುಭಂ ವಾ ಯದಿ ವಾ ಪಾಪಂ ಭ್ರಾತೄಣಾಂ ಸ್ಥಾನಮದ್ಯ ಮೇ ।
ತದೇವ ಪ್ರಾಪ್ತುಮಿಚ್ಛಾಮಿ ಲೋಕಾನನ್ಯಾನ್ನ ಕಾಮಯೇ ॥೩೦॥

"ದೇವೇಶ್ವರನೇ! ನನ್ನ ಸಹೋದರರಿಗೆ ಪುಣ್ಯಲೋಕಗಳೇ ಲಭಿಸಿರಲಿ;

ನರಕಲೋಕಗಳೇ ಲಭಿಸಿರಲಿ–ಅವರಿರುವ ಸ್ಥಾನವನ್ನೇ ನಾನೂ ಪಡೆಯಲು ಇಚ್ಛಿಸುತ್ತೇನೆ. ಅವರಿಲ್ಲದ ಬೇರೆ ಯಾವ ಲೋಕಗಳಿಗೂ ಹೋಗಲು ನನಗೆ ಇಚ್ಛೆಯಿಲ್ಲ."

ಜನಮೇಜಯ! ಧರ್ಮರಾಜನ ಮಾತನ್ನು ಕೇಳಿ ದೇವರಾಜನಾದ ಇಂದ್ರನು ಮೃದುತ್ವದಿಂದ ಕೂಡಿದ ಈ ಮಾತನ್ನು ಹೇಳಿದನು :

ಸ್ಥಾನೇಽಸ್ಮಿನ್ವಸ ರಾಜೇನ್ದ್ರ ಕರ್ಮಭಿರ್ನಿರ್ಜಿತೇ ಶುಭೈಃ ।
ಕಿಂ ತ್ವಂ ಮಾನುಷ್ಯಕಂ ಸ್ನೇಹಮದ್ಯಾಪಿ ಪರಿಕರ್ಷಸಿ ॥೩೩॥

"ಮಹಾರಾಜ! ನೀನು ನಿನ್ನ ಶುಭಕರ್ಮಗಳ ಮೂಲಕವಾಗಿ ಜಯಿಸಿರುವ ಈ ಸ್ವರ್ಗಲೋಕದಲ್ಲಿ ವಾಸಮಾಡು. ಮನುಷ್ಯಸಂಬಂಧವಾದ ಸ್ನೇಹಪಾಶವನ್ನು ಈಗಲೂ ಇಲ್ಲಿಗೂ ಸೆಳೆಯುವೆಯೇಕೆ?

ಸಿದ್ಧಿಂ ಪ್ರಾಪ್ತೋಽಸಿ ಪರಮಾಂ ಯಥಾ ನಾನ್ಯಃ ಪುಮಾನ್ಕ್ವಚಿತ್ ।
ನೈವ ತೇ ಭ್ರಾತರಃ ಸ್ಥಾನಂ ಸಮ್ಪ್ರಾಪ್ತಾಃ ಕುರುನನ್ದನ ॥೩೪॥

ಕುರುನಂದನನೇ! ಬೇರೆ ಯಾವ ಮನುಷ್ಯನೂ ಯಾವಾಗಲೂ ಪಡೆಯದೇ ಇರುವ ಸಶರೀರಸ್ವರ್ಗವೆಂಬ ಶ್ರೇಷ್ಠವಾದ ಸಿದ್ಧಿಯನ್ನು ನೀನು ಪಡೆದುಕೊಂಡಿರುವೆ. ಇಂತಹ ಸ್ಥಾನವನ್ನು ನಿನ್ನ ಸಹೋದರರು ಪಡೆದಿರುವುದಿಲ್ಲ.

ಅದ್ಯಾಪಿ ಮಾನುಷೋ ಭಾವಃ ಸ್ಪೃಶತೇ ತ್ವಾಂ ನರಾಧಿಪ ।
ಸ್ವರ್ಗೋಽಯಂ ಪಶ್ಯ ದೇವರ್ಷೀನ್ಸಿದ್ಧಾಂಶ್ಚ ತ್ರಿದಿವಾಲಯಾನ್ ॥೩೫॥

ನರೇಶ್ವರನೇ! ಈಗಲೂ ನಿನಗೆ ಮನುಷ್ಯಸ್ವಭಾವವೇ ಅಂಟಿಕೊಂಡಿರುವಂತಿದೆ. ಮಹಾರಾಜ! ಇದು ಮನುಷ್ಯಲೋಕವಲ್ಲ. ಸ್ವರ್ಗಲೋಕವಾಗಿದೆ. ಇಲ್ಲಿ ವಾಸಮಾಡುತ್ತಿರುವ ದೇವರ್ಷಿಗಳನ್ನೂ ಸಿದ್ಧರನ್ನೂ ಸಂದರ್ಶಿಸು."

ಜನಮೇಜಯ! ಹೀಗೆ ಹೇಳುತ್ತಿದ್ದ ದೇವೇಶ್ವರನಾದ ದೇವೇಂದ್ರನಿಗೆ ಧೀಮಂತನಾದ ಯುಧಿಷ್ಠಿರನು ಪುನಃ ಹೇಳಿದನು :

ತೈರ್ವಿನಾ ನೋತ್ಸಹೇ ವಸ್ತುಮಿಹ ದೈತ್ಯನಿಬರ್ಹಣ ।
ಗನ್ತುಮಿಚ್ಛಾಮಿ ತತ್ರಾಹಂ ಯತ್ರ ತೇ ಭ್ರಾತರೋ ಗತಾಃ ॥೩೬॥

ಯತ್ರ ಸಾ ಬೃಹತೀ ಶ್ಯಾಮಾ ಬುದ್ಧಿಸತ್ತ್ವಗುಣಾನ್ವಿತಾ ।
ದ್ರೌಪದೀ ಯೋಷಿತಾಂ ಶ್ರೇಷ್ಠಾ ಯತ್ರ ಚೈವ ಗತಾ ಮಮ ॥೩೮॥

"ದೈತ್ಯಸೂದನನೇ! ನನ್ನ ಅನುಜರನ್ನು ಬಿಟ್ಟು ಇಲ್ಲಿ ವಾಸಮಾಡುವ ಉತ್ಸಾಹವು ನನಗಿಲ್ಲ. (ನಾನು ಇಲ್ಲಿ ವಾಸಮಾಡಲಾರೆನು.) ನನ್ನ ಅನುಜರು ಹೋಗಿರುವ ಸ್ಥಳಕ್ಕೇ ನಾನೂ ಹೋಗಲು ಇಷ್ಟಪಡುತ್ತೇನೆ. ಬುದ್ಧಿಮತಿಯಾದ, ಸತ್ತ್ವಗುಣಸಂಪನ್ನಳಾದ, ಶ್ಯಾಮಲವರ್ಣಳಾದ, ಎತ್ತರ ವಾದ ಶರೀರವುಳ್ಳ, ನಾರಿಯರಲ್ಲಿ ಶ್ರೇಷ್ಠಳಾದ ದ್ರೌಪದಿಯು ಎಲ್ಲಿಗೆ ಹೋಗಿರುವಳೋ ಅಲ್ಲಿಗೇ ನಾನೂ ಹೋಗುತ್ತೇನೆ."

ಇನೆಯ ಅಧ್ಯಾಯವು ಮುಗಿಯಿತು.

ಮಹಾಪ್ರಸ್ಥಾನಿಕಪರ್ವವು ಮುಗಿಯಿತು.

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು ॥

ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ ॥

ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ ।
ಅಧನಾಃ ಸಧನಾಃ ಸನ್ತು ಜೀವನ್ತು ಶರದಾಂ ಶತಮ್ ॥

ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥

ಹರಿಃ ಓಂ

ಶ್ರೀಕೃಷ್ಣಾರ್ಪಣಮಸ್ತು

ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು

ಓಂ ತತ್ಸತ್

❖ ❖ ❖

ಮಹಾಪ್ರಸ್ಥಾನಿಕಪರ್ವ (ಸಂಕ್ಷೇಪದಲ್ಲಿ)

ಮಹಾಪ್ರಸ್ಥಾನಿಕಂ ತಸ್ಮಾದೂರ್ಧ್ವಂ ಸಪ್ತದಶಂ ಸ್ಮೃತಮ್ ।
ಯತ್ರ ರಾಜ್ಯಂ ಪರಿತ್ಯಜ್ಯ ಪಾಣ್ಡವಾಃ ಪುರುಷರ್ಷಭಾಃ ।
ದ್ರೌಪದ್ಯಾ ಸಹಿತಾ ದೇವ್ಯಾ ಮಹಾಪ್ರಸ್ಥಾನಮಾಸ್ಥಿತಾಃ ।
ಯತ್ರ ತೇಽಗ್ನಿಂ ದದೃಶಿರೇ ಲೌಹಿತ್ಯಂ ಪ್ರಾಪ್ಯ ಸಾಗರಮ್ ॥೩೬೬॥

ಯತ್ರಾಗ್ನಿನಾ ಚೋದಿತಶ್ಚ ಪಾರ್ಥಸ್ತಸ್ಮೈ ಮಹಾತ್ಮನೇ ।
ದದೌ ಸಮ್ಪೂಜ್ಯ ತದ್ದಿವ್ಯಂ ಗಾಣ್ಡೀವಂ ಧನುರುತ್ತಮಮ್ ॥೩೬೭॥

ಯತ್ರ ಭ್ರಾತೄನ್ನಿಪತಿತಾನ್ದ್ರೌಪದೀಂ ಚ ಯುಧಿಷ್ಠಿರಃ ।
ದೃಷ್ಟ್ವಾ ಹಿತ್ವಾ ಜಗಾಮೈವ ಸರ್ವಾನನವಲೋಕಯನ್ ॥೩೬೮॥

ಏತತ್ಸಪ್ತದಶಂ ಪರ್ವ ಮಹಾಪ್ರಸ್ಥಾನಿಕಂ ಸ್ಮೃತಮ್ ।
ಯತ್ರಾಧ್ಯಾಯಾಸ್ತ್ರಯಃ ಪ್ರೋಕ್ತಾಃ ಶ್ಲೋಕಾನಾಂ ಚ ಶತತ್ರಯಮ್ ।
ವಿಂಶತಿಶ್ಚ ತಥಾ ಶ್ಲೋಕಾಃ ಸಂಖ್ಯಾತಾಸ್ತತ್ತ್ವದರ್ಶಿನಾ ॥೩೬೯॥

ಈ ಪರ್ವದಲ್ಲಿರುವ ಅಧ್ಯಾಯಗಳು ೩. ಶ್ಲೋಕಗಳು ೧೨೩. ನಾವು ಅನುವಾದಿಸಿರುವ ಪುಸ್ತಕದಲ್ಲಿ ಅಧ್ಯಾಯಗಳು ೩. ಶ್ಲೋಕಗಳು ೧೧೪. ಭಂಡಾರ್‌ಕರ್ ರಿಸರ್ಚ ಇನ್‌ಸ್ಟಿಟ್ಯೂಟ್‌ನವರ ಪುಸ್ತಕದಲ್ಲಿ ಅಧ್ಯಾಯಗಳು ೩. ಶ್ಲೋಕಗಳು ೧೦೬.

ಶ್ರೀಮಹಾಗಣಪತಯೇ ನಮಃ ಶ್ರೀಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಶ್ರೀಮನ್ಮಹಾಭಾರತ-ಸ್ವರ್ಗಾರೋಹಣಪರ್ವ

೧ನೆಯ ಅಧ್ಯಾಯ ಸ್ವರ್ಗಾರೋಹಣಪರ್ವ

ಸ್ವರ್ಗದಲ್ಲಿ ನಾರದ ಮತ್ತು ಯುಧಿಷ್ಠಿರರ ಸಂಭಾಷಣೆ

ಜನಮೇಜಯನು ಪ್ರಶ್ನಿಸುತ್ತಾನೆ :

ಸ್ವರ್ಗಂ ತ್ರಿವಿಷ್ಟಪಂ ಪ್ರಾಪ್ಯ ಮಮ ಪೂರ್ವಪಿತಾಮಹಾಃ ।
ಪಾಣ್ಡವಾ ಧಾರ್ತರಾಷ್ಟ್ರಾಶ್ಚ ಕಾನಿ ಸ್ಥಾನಾನಿ ಭೇಜಿರೇ ॥೧॥

"ಮಹಾಮುನಿಗಳೇ! ನನ್ನ ಪೂರ್ವಪಿತಾಮಹರಾದ ಪಾಂಡವರೂ ಧೃತರಾಷ್ಟ್ರನ ಮಕ್ಕಳೂ ಸ್ವರ್ಗಲೋಕಕ್ಕೆ ಹೋಗಿ ಅಲ್ಲಿ ಯಾವ ಯಾವ ಸ್ಥಾನಗಳನ್ನು ಪಡೆದುಕೊಂಡರು?

ನಾನು ಈ ವಿಷಯವನ್ನು ನಿಮ್ಮಿಂದ ಕೇಳಬಯಸಿದ್ದೇನೆ. ಅದ್ಭುತ ಕರ್ಮರಾದ, ಪ್ರವಚನಮಾಡಲು ಮಹರ್ಷಿಗಳಾದ ವ್ಯಾಸರಿಂದ ಅನುಜ್ಞೆಯನ್ನು ಪಡೆದುಕೊಂಡಿರುವ ನಿಮ್ಮನ್ನು ಸರ್ವಜ್ಞರೆಂದೇ ನಾನು ಭಾವಿಸಿ ದ್ದೇನೆ."

ವೈಶಂಪಾಯನರು ಹೇಳುತ್ತಾರೆ :

"ಜನಮೇಜಯ! ನಿನ್ನ ಪೂರ್ವಪಿತಾಮಹರಾದ ಯುಧಿಷ್ಠಿರನೇ ಮೊದಲಾದವರು ಮೂರು ಲೋಕಗಳ ಅಂತರ್ಭಾವವಿರುವ ಸ್ವರ್ಗಕ್ಕೆ ಹೋಗಿ ಅಲ್ಲಿ ಏನು ಮಾಡಿದರೆಂಬುದನ್ನು ಹೇಳುವೆನು ; ಕೇಳು.

ಸ್ವರ್ಗಲೋಕಕ್ಕೆ ಹೋದನಂತರ ಯುಧಿಷ್ಠಿರನು-ದುರ್ಯೋಧನನು ಸ್ವರ್ಗೀಯಶೋಭೆಯಿಂದ ಸಂಪನ್ನನಾಗಿರುವುದನ್ನೂ, ತೇಜಸ್ವಿಗಳಾದ

ದೇವತೆಗಳೊಡನೆಯೂ, ಪುಣ್ಯಕರ್ಮಿಗಳಾದ ಸಾಧ್ಯರೊಡನೆಯೂ ದಿವ್ಯ ಸಿಂಹಾಸನದಲ್ಲಿ ಕುಳಿತಿರುವುದನ್ನೂ, ಸೂರ್ಯನಂತೆ ಪ್ರಕಾಶಮಾನನಾಗಿರುವುದನ್ನೂ, ವೀರೋಚಿತವಾದ ಕಾಂತಿಯಿಂದ ಬೆಳಗುತ್ತಿರುವುದನ್ನೂ ನೋಡಿದನು. ದುರ್ಯೋಧನನನ್ನು ನೋಡಿ ಆ ಸಮಯದಲ್ಲಿ ಸುಯೋಧನನಲ್ಲಿದ್ದ ಅಪೂರ್ವಶೋಭೆಯನ್ನೂ ಗಮನಿಸಿ ಸಹಿಸದವನಾಗಿ ಒಡನೆಯೇ ಅವನ ಕಡೆಯಿಂದ ದೃಷ್ಟಿಯನ್ನು ಹೊರಚೆಲ್ಲಿ ಉಚ್ಚಸ್ವರದಿಂದ ದೇವತೆಗಳಿಗೆ ಹೇಳಿದನು:

.... ನಾಹಂ ದುರ್ಯೋಧನೇನ ವೈ ।
ಸಹಿತಃ ಕಾಮಯೇ ಲೋಕಾಂಲ್ಲುಬ್ಧೇನಾದೀರ್ಘದರ್ಶಿನಾ ॥೭॥

ಯತ್ಕೃತೇ ಪೃಥಿವೀ ಸರ್ವಾ ಸುಹೃದೋ ಬಾನ್ಧವಾಸ್ತಥಾ ।
ಹತಾಸ್ಮಾಭಿಃ ಪ್ರಸಹ್ಯಾಜೌ ಕ್ಲಿಷ್ಟೈಃ ಪೂರ್ವಂ ಮಹಾವನೇ ॥೮॥

ದ್ರೌಪದೀ ಚ ಸಭಾಮಧ್ಯೇ ಪಾಞ್ಚಾಲೀ ಧರ್ಮಚಾರಿಣೀ ।
ಪರ್ಯಾಕೃಷ್ಟಾನವದ್ಯಾಙ್ಗೀ ಪತ್ನೀ ನೋ ಗುರುಸಂನಿಧೌ ॥೯॥

"ದೇವತೆಗಳೇ! ನಾವು ಯಾವನ ಕಾರಣದಿಂದ ಸಮಸ್ತಸುಹೃದರನ್ನೂ ಬಂಧುಗಳನ್ನೂ ಬಲಾತ್ಕಾರಪೂರ್ವಕವಾಗಿ ಸಂಹರಿಸಿದೆವೋ, ಆ ನಮ್ಮ ಕದನದಿಂದಾಗಿ ಸಮಸ್ತಭೂಮಂಡಲವೂ ವಿಧ್ವಸ್ತವಾಯಿತೋ, ಯಾವನಿಂದ ನಾವು ಹಿಂದೆ ಅರಣ್ಯದಲ್ಲಿ ನಾನಾವಿಧವಾದ ಕ್ಲೇಶಗಳನ್ನು ಅನುಭವಿಸಿದೆವೋ, ಯಾವನ ಪ್ರಚೋದನೆಯಿಂದ ಧರ್ಮಚಾರಿಣಿಯಾದ, ದೋಷರಹಿತವಾದ ಅಂಗಗಳುಳ್ಳ ಪಾಂಚಾಲರಾಜಕುಮಾರಿಯಾದ ದ್ರೌಪದಿಯು ಸಭಾಮಧ್ಯದಲ್ಲಿ ಗುರುಜನರ ಸನ್ನಿಧಿಯಲ್ಲಿ ಸೆಳೆಯಲ್ಪಟ್ಟಳೋ–ಅಂತಹ ದೂರದೃಷ್ಟಿಯಿಲ್ಲದ ದುರ್ಯೋಧನನೊಡನೆ ನಾನು ಈ ಪುಣ್ಯಲೋಕಗಳನ್ನು ಉಪಭೋಗಿಸಲು ಇಷ್ಟಪಡುವುದಿಲ್ಲ.

ಅಸ್ತಿ ದೇವಾ ನ ಮೇ ಕಾಮಃ ಸುಯೋಧನಮುದೀಕ್ಷಿತುಮ್ ।
ತತ್ರಾಹಂ ಗನ್ತುಮಿಚ್ಛಾಮಿ ಯತ್ರ ತೇ ಭ್ರಾತರೋ ಮಮ ॥೧೦॥

ದೇವತೆಗಳೇ! ನಾನು ದುರ್ಯೋಧನನನ್ನು ನೋಡಲು ಕೂಡ ಇಷ್ಟ

ಪಡುವುದಿಲ್ಲ. ನನ್ನ ಒಡಹುಟ್ಟಿದವರು ಇರುವ ಸ್ಥಳಕ್ಕೇ ಹೋಗಲು ನಾನು ಬಯಸುತ್ತೇನೆ."

ಯುಧಿಷ್ಠಿರನ ಮಾತನ್ನು ಕೇಳಿ ದೇವರ್ಷಿಗಳಾದ ನಾರದರು ನಗುತ್ತಾ ಹೇಳಿದರು : 'ನೈವಂ' 'ಇದು ಹೀಗಲ್ಲ.'

ಸ್ವರ್ಗೇ ನಿವಾಸೇ ರಾಜೇನ್ದ್ರ ವಿರುದ್ಧಂ ಚಾಪಿ ನಶ್ಯತಿ ॥೧೧॥

"ರಾಜೇಂದ್ರನೇ! ಸ್ವರ್ಗದಲ್ಲಿ ವಾಸಮಾಡುವುದರಿಂದ ಹಿಂದಿನ ವೈರವೂ ಶಾಂತವಾಗಿ ಬಿಡುತ್ತದೆ.

ಯುಧಿಷ್ಠಿರ ಮಹಾಬಾಹೋ ಮೈವಂ ವೋಚಃ ಕಥಂಚನ ।
ದುರ್ಯೋಧನಂ ಪ್ರತಿ ನೃಪಂ ಶೃಣು ಚೇದಂ ವಚೋ ಮಮ ॥೧೨॥

ಮಹಾಬಾಹುವೇ! ಯುಧಿಷ್ಠಿರ! ದುರ್ಯೋಧನಮಹಾರಾಜನ ಸಂಬಂಧವಾಗಿ ಹೀಗೆ ಹೇಳಬೇಡ. ಈ ವಿಷಯದಲ್ಲಿ ನಾನು ಹೇಳುವ ಮಾತನ್ನು ಕೇಳು.

ಏಷ ದುರ್ಯೋಧನೋ ರಾಜಾ ಪೂಜ್ಯತೇ ತ್ರಿದಶೈಃ ಸಹ ।
ಸದ್ಭಿಶ್ಚ ರಾಜಪ್ರವರೈರ್ಯ ಇಮೇ ಸ್ವರ್ಗವಾಸಿನಃ ॥೧೩॥

ಈ ದುರ್ಯೋಧನರಾಜನು ದೇವತೆಗಳೊಡನಿರುವ ಶ್ರೇಷ್ಠರಾದ ರಾಜರಿಂದಲೂ ಸತ್ಪುರುಷರಿಂದಲೂ ಪೂಜಿಸಲ್ಪಡುತ್ತಿದ್ದಾನೆ. ಈ ರಾಜ ಶ್ರೇಷ್ಠರು ಬಹಳ ಕಾಲದಿಂದಲೂ ಸ್ವರ್ಗದಲ್ಲಿಯೇ ವಾಸಮಾಡುತ್ತಿದ್ದಾರೆ.

ವೀರಲೋಕಗತಿಃ ಪ್ರಾಪ್ತಾ ಯುದ್ಧೇ ಹುತ್ವಾತ್ಮನಸ್ತನುಮ್ ।
ಯೂಯಂ ಸರ್ವೇ ಸುರಸಮಾ ಯೇನ ಯುದ್ಧೇ ಸಮಾಸಿತಾಃ ॥೧೪॥

ಸ ಏಷ ಕ್ಷತ್ರಧರ್ಮೇಣ ಸ್ಥಾನಮೇತದವಾಪ್ತವಾನ್ ।
ಭಯೇ ಮಹತಿ ಯೋಽಭೀತೋ ಬಭೂವ ಪೃಥಿವೀಪತಿಃ ॥೧೫॥

ಈ ದುರ್ಯೋಧನನು ಯುದ್ಧದಲ್ಲಿ ತನ್ನ ಶರೀರವನ್ನು ಆಹುತಿಯಾಗಿ ಕೊಟ್ಟು ವೀರರ ಗತಿಯನ್ನು ಹೊಂದಿದ್ದಾನೆ. ದೇವೋಪಮರಾದ ನೀವೆಲ್ಲರೂ ಯುದ್ಧದಲ್ಲಿ ಇವನೊಡನೆ ಕಾದಾಡಿರುವಿರಿ. ಇವನು ಕ್ಷತ್ರಧರ್ಮದಿಂದ

ಕಡೆಯವರೆಗೂ ಯುದ್ಧಮಾಡಿ ಪ್ರಾಣವನ್ನು ನೀಗಿ ಈ ದಿವ್ಯಸ್ಥಾನವನ್ನು ಪಡೆದುಕೊಂಡಿದ್ದಾನೆ. ಪೃಥಿವೀಪತಿಯಾಗಿದ್ದ ಇವನು ಮಹಾಭಯದ ಸಮಯದಲ್ಲಿಯೂ ನಿರ್ಭಯನಾಗಿದ್ದನು. ಆದುದರಿಂದಲೇ ಇವನು ಈ ಸ್ಥಾನವನ್ನು ಪಡೆದನು.

ನ ತನ್ಮನಸಿ ಕರ್ತವ್ಯಂ ಪುತ್ರ ಯದ್ದ್ಯೂತಕಾರಿತಮ್ ।
ದ್ರೌಪದ್ಯಾಶ್ಚ ಪರಿಕ್ಲೇಶಂ ನ ಚಿನ್ತಯಿತುಮರ್ಹಸಿ ॥೧೬॥

ದುರ್ಯೋಧನನ ದೆಸೆಯಿಂದ ದ್ಯೂತದ ಮೂಲಕವಾಗಿ ಆದ ಅಪರಾಧವನ್ನು ನೀನು ಮನಸ್ಸಿನಲ್ಲಿ ಇಟ್ಟುಕೊಳ್ಳಬಾರದು. ಅದಾದ ನಂತರ ದ್ರೌಪದಿಯು ಅನುಭವಿಸಿದ ಕ್ಲೇಶಗಳನ್ನು ಕೂಡ ನೀನು ಜ್ಞಾಪಿಸಿಕೊಳ್ಳ ಬಾರದು.

ಯೇ ಚಾನ್ಯೇಽಪಿ ಪರಿಕ್ಲೇಶಾ ಯುಷ್ಮಾಕಂ ಜ್ಞಾತಿಕಾರಿತಾಃ ।
ಸಂಗ್ರಾಮೇಷ್ವಥ ವಾನ್ಯತ್ರ ನ ತಾನ್ಸಂಸ್ಮರ್ತುಮರ್ಹಸಿ ॥೧೭॥

ಯುದ್ಧಸಮಯದಲ್ಲೇ ಆಗಲೀ ಇತರ ಯಾವುದೇ ಸಂದರ್ಭದಲ್ಲಾಗಲೀ ನಿನಗೆ ನಿಮ್ಮ ಜ್ಞಾತಿಗಳು (ಕೌರವರು) ಉಂಟುಮಾಡಿರುವ ಪರಿಕ್ಲೇಶಗಳನ್ನೂ ಸ್ಮರಿಸುವುದು ಉಚಿತವಲ್ಲ.

ಸಮಾಗಚ್ಛ ಯಥಾನ್ಯಾಯಂ ರಾಜ್ಞಾ ದುರ್ಯೋಧನೇನ ವೈ ।
ಸ್ವರ್ಗೋಽಯಂ ನೇಹ ವೈರಾಣಿ ಭವನ್ತಿ ಮನುಜಾಧಿಪ ॥೧೮॥

ಈಗ ನೀನು ದುರ್ಯೋಧನನೊಡನೆ ನ್ಯಾಯೋಚಿತವಾದ ರೀತಿಯಲ್ಲಿ ವ್ಯವಹರಿಸು. ನರೇಶ್ವರನೇ! ಇದು ಸ್ವರ್ಗಲೋಕವಾಗಿದೆ. ಇಲ್ಲಿ ವೈರ-ದ್ವೇಷಗಳಿಗೆ ಎಡೆಯಿಲ್ಲ."

ಜನಮೇಜಯ! ನಾರದರು ಹೀಗೆ ಹೇಳಿದನಂತರ ಮೇಧಾವಿಯಾದ ಯುಧಿಷ್ಠಿರನು ತನ್ನ ಒಡಹುಟ್ಟಿದವರ ಬಗೆಗೆ ಪುನಃ ಪ್ರಶ್ನಿಸಿದನು :

ಯದಿ ದುರ್ಯೋಧನಸ್ಯೈತೇ ವೀರಲೋಕಾಃ ಸನಾತನಾಃ ।
ಅಧರ್ಮಜ್ಞಸ್ಯ ಪಾಪಸ್ಯ ಪೃಥಿವೀಸುಹೃದಾಂ ದ್ರುಹಃ ॥೨೦॥

ಯತ್ಕೃತೇ ಪೃಥಿವೀ ನಷ್ಟಾ ಸಹಯಾ ಸನರದ್ವಿಪಾ ।
ವಯಂ ಚ ಮನ್ಯುನಾ ದಗ್ಧಾ ವೈರಂ ಪ್ರತಿಚಿಕೀರ್ಷವಃ ॥೨೧॥

ಯೇ ತೇ ವೀರಾ ಮಹಾತ್ಮಾನೋ ಭ್ರಾತರೋ ಮೇ ಮಹಾವ್ರತಾಃ ।
ಸತ್ಯಪ್ರತಿಜ್ಞಾ ಲೋಕಸ್ಯ ಶೂರಾ ವೈ ಸತ್ಯವಾದಿನಃ ॥೨೨॥

ತೇಷಾಮಿದಾನೀಂ ಕೇ ಲೋಕಾ ದ್ರಷ್ಟುಮಿಚ್ಛಾಮಿ ತಾನಹಮ್ ।
ಕರ್ಣಂ ಚೈವ ಮಹಾತ್ಮಾನಂ ಕೌಂತೇಯಂ ಸತ್ಯಸಂಗರಮ್ ॥೨೩॥

"ನಾರದರೇ! ಯಾವನ ಸಲುವಾಗಿ ಭೂಲೋಕದ ಕುದುರೆಗಳೂ ಕಾಲಾಳುಗಳೂ ಆನೆಗಳೂ ಅಪಾರಸಂಖ್ಯೆಯಲ್ಲಿ ನಾಶವಾಗಿ ಹೋದುವೋ–ವೈರಕ್ಕೆ ಪ್ರತಿವೈರವನ್ನು ಮಾಡಲು ಹೋದ ನಾವೂ ಕೂಡ ಕೋಪವೆಂಬ ಅಗ್ನಿಯಿಂದ ಸುಡಲ್ಪಟ್ಟೆವೋ–ಯಾವನು ಧರ್ಮವೆಂದರೇನೆಂಬುದನ್ನೇ ತಿಳಿದಿರಲಿಲ್ಲವೋ–ಭೂಮಂಡಲದಲ್ಲಿದ್ದ ಸಮಸ್ತಸುಹೃದರಿಗೂ ದ್ರೋಹವನ್ನೆಸಗಿದ್ದನೋ ಅಂತಹ ದುರ್ಯೋಧನನಿಗೂ ಇಂತಹ ಸನಾತನವಾದ ವೀರಲೋಕಗಳು ಲಭಿಸಿರುವುದಾದರೆ–ವೀರರಾದ, ಮಹಾತ್ಮರಾದ, ಮಹಾವ್ರತರಾದ, ಸತ್ಯಪ್ರತಿಜ್ಞರಾದ, ಲೋಕೈಕಶೂರರಾದ, ಸತ್ಯವಾದಿಗಳಾದ ನನ್ನ ತಮ್ಮಂದಿರಿಗೆ ಈಗ ಯಾವ ಲೋಕಗಳು ಲಭಿಸಿವೆ? ಅವರನ್ನು ನೋಡಲು ಬಯಸುತ್ತೇನೆ. ಸತ್ಯಪ್ರತಿಜ್ಞನಾದ, ಮಹಾತ್ಮನಾದ, ಕುಂತಿಯ ಮಗನಾದ ಕರ್ಣನನ್ನೂ ನೋಡಲು ಇಚ್ಛಿಸುತ್ತೇನೆ.

ಧೃಷ್ಟದ್ಯುಮ್ನನನ್ನೂ, ಸಾತ್ಯಕಿಯನ್ನೂ, ಧೃಷ್ಟದ್ಯುಮ್ನನ ಮಗನನ್ನೂ ನೋಡುವ ಅಪೇಕ್ಷೆಯಿದೆ. ಕ್ಷತ್ರಧರ್ಮದಲ್ಲಿಯೇ ನಿಷ್ಠರಾಗಿದ್ದ ಯಾವ ರಾಜರು ಶಸ್ತ್ರಗಳಿಂದಲೇ ಸಾವನ್ನಪ್ಪಿದರೋ ಅವರೆಲ್ಲರೂ ಯಾವ ಲೋಕದಲ್ಲಿದ್ದಾರೆ? ಅವರಾರನ್ನೂ ನಾನಿಲ್ಲಿ ಕಾಣುತ್ತಲೇ ಇಲ್ಲ. ವಿರಾಟ-ದ್ರುಪದರನ್ನೂ, ಧೃಷ್ಟಕೇತುವೇ ಮುಂತಾದವರನ್ನೂ, ಪಾಂಚಾಲರಾಜಕುಮಾರನಾದ ಶಿಖಂಡಿಯನ್ನೂ, ದ್ರೌಪದಿಯ ಎಲ್ಲ ಮಕ್ಕಳನ್ನೂ, ವೀರನಾದ ಅಭಿಮನ್ಯುವನ್ನೂ ಕಾಣಬೇಕೆಂದಿದ್ದೇನೆ."

೧ನೆಯ ಅಧ್ಯಾಯವು ಮುಗಿಯಿತು.

ದೇವದೂತನಿಂದ ಯುಧಿಷ್ಠಿರನಿಗೆ ನರಕದರ್ಶನ : ಅಲ್ಲಿ ರೋದನಮಾಡುತ್ತಿದ್ದ ತನ್ನ ಒಡಹುಟ್ಟಿದವರೊಡನೆಯೇ ಇರಲು ಯುಧಿಷ್ಠಿರನ ನಿಶ್ಚಯ

ಯುಧಿಷ್ಠಿರನು ದೇವತೆಗಳಿಗೆ ಹೇಳುತ್ತಾನೆ :

ನೇಹ ಪಶ್ಯಾಮಿ ವಿಬುಧಾ ರಾಧೇಯಮಮಿತೌಜಸಮ್ ।
ಭ್ರಾತರೌ ಚ ಮಹಾತ್ಮಾನೌ ಯುಧಾಮನ್ಯೂತ್ತಮೌಜಸೌ ॥೧॥

"ದೇವತೆಗಳೇ! ಮಹಾತೇಜಸ್ವಿಯಾದ ರಾಧೇಯನನ್ನು ನಾನಿಲ್ಲಿ ಕಾಣುತ್ತಿಲ್ಲ. ಮಹಾತ್ಮರಾದ ಮತ್ತು ಸಹೋದರರಾದ ಯುಧಾಮನ್ಯು ಮತ್ತು ಉತ್ತಮೌಜಸರನ್ನೂ ಕಾಣುತ್ತಿಲ್ಲ.

ಮಹಾರಥರಾದ ಯಾವ ರಾಜರೂ ಮತ್ತು ರಾಜಪುತ್ರರೂ ನನ್ನ ಸಲುವಾಗಿ ರಣಾಗ್ನಿಯಲ್ಲಿ ತಮ್ಮ ಶರೀರಗಳನ್ನು ಹೋಮ ಮಾಡಿ ಹತರಾದರೋ ಅವರೀಗ ಎಲ್ಲಿದ್ದಾರೆ? ಅವರೆಲ್ಲರೂ ಮಹಾರಥರೂ ಸಿಂಹದ ಪರಾಕ್ರಮಕ್ಕೆ ಸಮಾನವಾದ ಪರಾಕ್ರಮವುಳ್ಳವರೂ ಆಗಿದ್ದರು. ಅಂತಹ ಪುರುಷಶ್ರೇಷ್ಠರಿಂದ ಈ ವೀರಲೋಕಗಳು ಜಯಿಸಲ್ಪಟ್ಟಿವೆಯೇ? ಆ ಎಲ್ಲ ಮಹಾರಥರಿಗೂ ಈ ಪುಣ್ಯಲೋಕಗಳು ಲಭಿಸಿದ್ದರೆ ಆ ಮಹಾತ್ಮರೊಡನೆಯೇ ನಾನು ಇರುವೆನೆಂದು ತಿಳಿಯಿರಿ. ಆದರೆ ಆ ರಾಜರೇನಾದರೂ ಶುಭವೂ ಅಕ್ಷಯವೂ ಆಗಿರುವ ಈ ಲೋಕಗಳನ್ನು ಹೊಂದಿರದಿದ್ದರೆ ನನ್ನ ತಮ್ಮಂದಿರನ್ನೂ ಮತ್ತು ಬಂಧುಗಳನ್ನೂ ಬಿಟ್ಟು ನಾನಿಲ್ಲಿ ಇರುವುದಿಲ್ಲ. ನಾವೆಲ್ಲರೂ ಗತಿಸಿಹೋಗಿದ್ದವರಿಗೆ ಜಲತರ್ಪಣವನ್ನು ಕೊಡುತ್ತಿದ್ದಾಗ ನಮ್ಮ ತಾಯಿಯು **'ಕರ್ಣಸ್ಯ ಕ್ರಿಯತಾಂ ತೋಯಂ**–ಕರ್ಣನಿಗೂ ತರ್ಪಣವನ್ನು ಕೊಡಿರಿ'–ಎಂಬ ಮಾತನ್ನು ಸ್ಮರಿಸಿ ಈಗಲೂ ಪರಿತಪಿಸುತ್ತಿದ್ದೇನೆ. (ಅವಳು ಹಾಗೆ ಹೇಳಿದನಂತರವೇ ಕರ್ಣನು ನನ್ನ ಸಹೋದರನೆಂಬುದನ್ನು ನಾನು ಅರಿತುಕೊಂಡೆನು.)

ಇದಂ ಚ ಪರಿತಪ್ಯಾಮಿ ಪುನಃ ಪುನರಹಂ ಸುರಾಃ ।
ಯನ್ಮಾತುಃ ಸದೃಶೌ ಪಾದೌ ತಸ್ಯಾಹಮಮಿತಾತ್ಮನಃ ॥೨॥

ದೃಷ್ಟ್ವೈವ ತೌ ನಾನುಗತಃ ಕರ್ಣಂ ಪರಬಲಾರ್ದನಮ್ ।
ನ ಹ್ಯಸ್ಮಾನ್ಕರ್ಣಸಹಿತಾಞ್ಜಯೇಚ್ಛಕ್ರೋಽಪಿ ಸಂಯುಗೇ ॥೮॥

ಮಹಾತೇಜಸ್ವಿಯಾದ ಕರ್ಣನ ಪಾದಗಳು ನನ್ನ ತಾಯಿಯ ಪಾದಗಳಂತೆಯೇ ಇದ್ದುವು. ಅಂತಹ ಪಾದಗಳನ್ನು ಪದೇ ಪದೇ ನೋಡುತ್ತಿದ್ದರೂ ನಾನು ಶತ್ರುಬಲಸಂಹಾರಕನಾದ ಕರ್ಣನನ್ನು ಅನುಸರಿಸಿ ಹೋಗಲಿಲ್ಲ. ಅದಕ್ಕಾಗಿ ಪುನಃ ಪುನಃ ಪರಿತಪಿಸುತ್ತಿದ್ದೇನೆ. ಕರ್ಣನು ನಮ್ಮೊಡನೆಯೇ ಇದ್ದಿದ್ದರೆ ಯುದ್ಧದಲ್ಲಿ ಇಂದ್ರನು ಕೂಡ ನಮ್ಮನ್ನು ಜಯಿಸಲು ಸಾಧ್ಯವಾಗುತ್ತಿರಲಿಲ್ಲ.

ತಮಹಂ ಯತ್ರ ತತ್ರಸ್ಥಂ ದ್ರಷ್ಟುಮಿಚ್ಛಾಮಿ ಸೂರ್ಯಜಮ್ ।
ಅವಿಜ್ಞಾತೋ ಮಯಾ ಯೋಽಸೌ ಘಾತಿತಃ ಸವ್ಯಸಾಚಿನಾ ॥೯॥

ಸೂರ್ಯಪುತ್ರನಾದ ಕರ್ಣನು ಎಲ್ಲಿಯೇ ಇದ್ದರೂ ಅವನನ್ನು ನೋಡಲು ಇಚ್ಛಿಸುತ್ತೇನೆ. ಅವನಾರೆಂಬುದನ್ನು ತಿಳಿಯದೇ ಸವ್ಯಸಾಚಿಯ ಮೂಲಕ ಅವನ ಸಂಹಾರಕ್ಕೆ ನಾನೇ ಕಾರಣನಾದೆನು.

ಭೀಮಂ ಚ ಭೀಮವಿಕ್ರಾನ್ತಂ ಪ್ರಾಣೇಭ್ಯೋಽಪಿ ಪ್ರಿಯಂ ಮಮ ।
ಅರ್ಜುನಂ ಚೇನ್ದ್ರಸಂಕಾಶಂ ಯಮೌ ಚೈವ ಯಮೋಪಮೌ ॥೧೦॥

ದ್ರಷ್ಟುಮಿಚ್ಛಾಮಿ ತಾಂ ಚಾಹಂ ಪಾಞ್ಚಾಲೀಂ ಧರ್ಮಚಾರಿಣೀಮ್ ।
ನ ಚೇಹ ಸ್ಥಾತುಮಿಚ್ಛಾಮಿ ಸತ್ಯಮೇವಂ ಬ್ರವೀಮಿ ವಃ ॥೧೧॥

ಭಯಂಕರಪರಾಕ್ರಮನಾದ, ಪ್ರಾಣಗಳಿಗಿಂತಲೂ ನನಗೆ ಅತ್ಯಂತ ಪ್ರಿಯನಾದ ಭೀಮಸೇನನನ್ನೂ, ಇಂದ್ರಸದೃಶನಾದ ಅರ್ಜುನನನ್ನೂ, ಯಮಳರಾದ ಅಶ್ವಿನೀದೇವತೆಗಳಿಗೆ ಸಮಾನರಾದ ನಕುಲ-ಸಹದೇವರನ್ನೂ, ಧರ್ಮಚಾರಿಣಿಯಾದ ಪಾಂಚಾಲಿಯನ್ನೂ ನೋಡಲು ಇಚ್ಛಿಸುತ್ತೇನೆ. ಇಲ್ಲಿ ಮಾತ್ರ ನಾನಿರಲು ಇಷ್ಟಪಡುವುದಿಲ್ಲ. ಸತ್ಯವಾದ ಮಾತನ್ನು ನಿಮಗೆ ಹೇಳುತ್ತಿದ್ದೇನೆ.

ಕಿಂ ಮೇ ಭ್ರಾತೃವಿಹೀನಸ್ಯ ಸ್ವರ್ಗೇಣ ಸುರಸತ್ತಮಾಃ ।
ಯತ್ರ ತೇ ಮಮ ಸ ಸ್ವರ್ಗೋ ನಾಯಂ ಸ್ವರ್ಗೋ ಮತೋ ಮಮ ॥೧೨॥

ದೇವಶ್ರೇಷ್ಠರೇ! ನನ್ನ ಒಡಹುಟ್ಟಿದವರು ಇಲ್ಲದ ಈ ಸ್ವರ್ಗದಿಂದ ನನಗೇನಾಗಬೇಕಾಗಿದೆ? ಅವರೆಲ್ಲಿರುವರೋ ಅದೇ ನನಗೆ ಸ್ವರ್ಗ. ಇದು ನನ್ನ ಭಾಗಕ್ಕೆ ಖಂಡಿತವಾಗಿಯೂ ಸ್ವರ್ಗವಲ್ಲ. ಇದು ನನ್ನ ಅಭಿಪ್ರಾಯವಾಗಿದೆ."

ದೇವತೆಗಳು ಹೇಳುತ್ತಾರೆ :

ಯದಿ ವೈ ತತ್ರ ತೇ ಶ್ರದ್ಧಾ ಗಮ್ಯತಾಂ ಪುತ್ರ ಮಾ ಚಿರಮ್ ।
ಪ್ರಿಯೇ ಹಿ ತವ ವರ್ತಾಮೋ ದೇವರಾಜಸ್ಯ ಶಾಸನಾತ್ ॥೧೩॥

"ಮಗು! ನಿನ್ನ ಒಡಹುಟ್ಟಿದವರು ಇರುವ ಲೋಕಗಳಲ್ಲಿಯೇ ನಿನಗೆ ಶ್ರದ್ಧೆಯಿರುವುದಾದರೆ ಅಲ್ಲಿಗೇ ನೀನು ಹೋಗಬಹುದು. ನಿನಗೆ ಪ್ರಿಯವಾಗುವ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ದೇವರಾಜನಾದ ಇಂದ್ರನ ಆಜ್ಞೆಯಾಗಿದೆ. ಅದರಂತೆ ನಾವು ನಡೆದುಕೊಳ್ಳುತ್ತೇವೆ."

ವೈಶಂಪಾಯನರು ಹೇಳುತ್ತಾರೆ :

ಜನಮೇಜಯ! ದೇವತೆಗಳು ಯುಧಿಷ್ಠಿರನಿಗೆ ಹೀಗೆ ಹೇಳಿ ದೇವದೂತನನ್ನು ಕರೆದು ಯುಧಿಷ್ಠಿರನಿಗೆ ಅವನ ಸುಹೃದರನ್ನು ತೋರಿಸುವಂತೆ ಆಜ್ಞಾಪಿಸಿದರು.

ಬಳಿಕ ಕುಂತಿಯ ಮಗನಾದ ಯುಧಿಷ್ಠಿರರಾಜನೂ–ದೇವದೂತನೂ ಜೊತೆಯಲ್ಲಿಯೇ ಪುರುಷಶ್ರೇಷ್ಠರಾದ ಭೀಮಸೇನನೇ ಮೊದಲಾದವರು ಇದ್ದಲ್ಲಿಗೆ ತೆರಳಿದರು. ಮುಂದೆ ದೇವದೂತನು ಹೋಗುತ್ತಿದ್ದನು. ಅವನ ಹಿಂದೆ ಯುಧಿಷ್ಠಿರನು ಹೋಗುತ್ತಿದ್ದನು. ಆ ಮಾರ್ಗವು ಅತ್ಯಂತ ದುರ್ಗಮವೂ ಅಶುಭವೂ ಆಗಿದ್ದಿತು. ಪಾಪಿಷ್ಠರಾದವರಿಂದ ಮಾತ್ರವೇ ಸೇವಿಸಲ್ಪಡುವುದಾಗಿದ್ದಿತು.

ತಮಸಾ ಸಂವೃತಂ ಘೋರಂ ಕೇಶಶೈವಲಶಾದ್ವಲಮ್ ।
ಯುಕ್ತಂ ಪಾಪಕೃತಾಂ ಗನ್ಧೈರ್ಮಾಂಸಶೋಣಿತಕರ್ದಮಮ್ ॥೧೮॥

ಆ ಮಾರ್ಗವು ಕತ್ತಲೆಯಿಂದ ಕವಿದಿದ್ದಿತು. ಅತಿಭಯಂಕರವಾಗಿದ್ದಿತು. ಕೂದಲುಗಳೂ, ಪಾಚಿಗಳೂ, ಹುಲ್ಲುಗಳೂ ಆ ಮಾರ್ಗದಲ್ಲಿ ತುಂಬಿದ್ದುವು. ಪಾಪಮಾಡಿದವರ ದುರ್ಗಂಧದಿಂದ ಅದು ಕೂಡಿದ್ದಿತು. ಮಾಂಸ-ರಕ್ತಮಿಶ್ರವಾದ ಕೆಸರು ಎಲ್ಲಕಡೆಗಳಲ್ಲಿಯೂ ಆವರಿಸಿದ್ದಿತು.

ದಂಶೋತ್ಪಾತಕಭಲ್ಲೂಕಮಕ್ಷಿಕಾಮಶಕಾವೃತಮ್ ।
ಇತಶ್ಚೇತಶ್ಚ ಕುಣಪೈಃ ಸಮನ್ತಾತ್ಪರಿವಾರಿತಮ್ ॥೧೮॥

ಆ ಮಾರ್ಗವು ತೊಣಚಿಗಳಿಂದಲೂ, (ಕಾಡುನೊಣಗಳಿಂದಲೂ), ಕಪ್ಪೆಗಳಿಂದಲೂ, ಕರಡಿಗಳಿಂದಲೂ, ನೊಣಗಳಿಂದಲೂ ಸೊಳ್ಳೆ ಗಳಿಂದಲೂ, ಆವೃತವಾಗಿದ್ದಿತು. ಇತ್ತ-ಅತ್ತ ಮತ್ತು ಎಲ್ಲ ಕಡೆಗಳಲ್ಲಿಯೂ ಹೆಣಗಳಿಂದ ತುಂಬಿದ್ದಿತು.



ಅಸ್ಥಿಕೇಶಸಮಾಕೀರ್ಣಂ ಕೃಮಿಕೀಟಸಮಾಕುಲಮ್ ।
ಜ್ವಲನೇನ ಪ್ರದೀಪ್ತೇನ ಸಮಾನ್ತಾತ್ಪರಿವೇಷ್ಟಿತಮ್ ॥೧೯॥

ಆ ಮಾರ್ಗವು ಮೂಳೆಗಳಿಂದಲೂ ಕೂದಲುಗಳಿಂದಲೂ ತುಂಬಿ

ಹೋಗಿದ್ದಿತು. ಕ್ರಿಮಿ-ಕೀಟಗಳಿಂದ ತುಂಬಿದ್ದಿತು. ಎಲ್ಲ ಕಡೆಗಳಲ್ಲಿಯೂ ಪ್ರಜ್ವಲಿಸುತ್ತಿದ್ದ ಅಗ್ನಿಯಿಂದ ಸಮಾವೃತವಾಗಿದ್ದಿತು.

ಅಯೋಮುಖೈಶ್ಚ ಕಾಕೌಘೈರ್ಗೃಧ್ರೈಶ್ಚ ಸಮಭಿದ್ರುತಮ್ ।
ಸೂಚೀಮುಖೈಸ್ತಥಾ ಪ್ರೇತೈರ್ವಿನ್ಧ್ಯಶೈಲೋಪಮೈರ್ವೃತಮ್ ॥೧೯॥

ಲೋಹದ ಮುಖಗಳನ್ನು ಹೊಂದಿದ್ದ ಕಾಗೆ-ರಣಹದ್ದು–ಮುಂತಾದ ಪಕ್ಷಿಗಳು ಆ ಮಾರ್ಗದಲ್ಲಿ ಹಾರಾಡುತ್ತಿದ್ದುವು. ಸೂಜಿಯಂತೆ ಚೂಪಾದ ಮುಖವುಳ್ಳವರಿಂದಲೂ ವಿಂಧ್ಯಪರ್ವತದಷ್ಟು ವಿಶಾಲವಾದ ದೇಹವುಳ್ಳ ಪ್ರೇತಗಳಿಂದಲೂ ಆ ಮಾರ್ಗವು ಆವೃತವಾಗಿದ್ದಿತು.

ಮೇದೋರುಧಿರಯುಕ್ತೈಶ್ಚ ಛಿನ್ನಬಾಹೂರುಪಾಣಿಭಿಃ ।
ನಿಕೃತ್ತೋದರಪಾದೈಶ್ಚ ತತ್ರ ತತ್ರ ಪ್ರವೇರಿತೈಃ ॥೨೦॥

ಮಾರ್ಗದುದ್ದಕ್ಕೂ ಹಲವಾರು ಹೆಣಗಳು ಬಿದ್ದಿದ್ದುವು. ಅವುಗಳಲ್ಲಿ ಕೆಲವು ಮೇದಸ್ಸಿನಿಂದಲೂ ರಕ್ತದಿಂದಲೂ ಕೂಡಿದ್ದುವು. ಕೆಲವಕ್ಕೆ ತೋಳುಗಳೂ ಕೈಗಳೂ ಕತ್ತರಿಸಿಹೋಗಿದ್ದುವು. ಕೆಲವಕ್ಕೆ ಹೊಟ್ಟೆ ಮತ್ತು ಕಾಲುಗಳು ಕತ್ತರಿಸಲ್ಪಟ್ಟಿದ್ದುವು.

ಸ ತತ್ಕುಣಪದುರ್ಗನ್ಧಮಶಿವಂ ಲೋಮಹರ್ಷಣಮ್ ।
ಜಗಾಮ ರಾಜಾ ಧರ್ಮಾತ್ಮಾ ಮಧ್ಯೇ ಬಹು ವಿಚಿನ್ತಯನ್ ॥೨೧॥

ಧರ್ಮಾತ್ಮನಾದ ಯುಧಿಷ್ಠಿರನು ಮನಸ್ಸಿನಲ್ಲಿಯೇ ಬಹಳವಾಗಿ ಚಿಂತಿಸುತ್ತಾ ಹೆಣಗಳ ದುರ್ಗಂಧದಿಂದಲೂ ಯುಕ್ತವಾಗಿದ್ದ, ಅಶುಭವಾದ, ರೋಮಾಂಚಕರವಾದ ಮಾರ್ಗದ ಮಧ್ಯದಲ್ಲಿ ದೇವದೂತನನ್ನು ಅನುಸರಿಸಿ ಹೋಗುತ್ತಿದ್ದನು.

ದದರ್ಶೋಷ್ಣೋದಕೈಃ ಪೂರ್ಣಾಂ ನದೀಂ ಚಾಪಿ ಸುದುರ್ಗಮಾಮ್ ।
ಅಸಿಪತ್ರವನಂ ಚೈವ ನಿಶಿತಂ ಕ್ಷುರಸಂವೃತಮ್ ॥೨೩॥

ಹಾಗೆಯೇ ಹೋಗುತ್ತಿದ್ದಾಗ ಯುಧಿಷ್ಠಿರನು ಬಿಸಿನೀರಿನಿಂದ ಯುಕ್ತವಾದ ಅತಿದುರ್ಗಮವಾದ ನದಿಯನ್ನೂ–ಕತ್ತಿಗಳಂತೆ ಹರಿತವಾದ ಎಲೆಗಳುಳ್ಳ ಅಸಿಪತ್ರವೆಂಬ ಅರಣ್ಯವನ್ನೂ ನೋಡಿದನು.

ಕರಮ್ಭವಾಲುಕಾಸ್ತಪ್ತಾ ಆಯಸೀಶ್ಚ ಶಿಲಾಃ ಪೃಥಕ್ ।
ಲೋಹಕುಮ್ಭೀಶ್ಚ ತೈಲಸ್ಯ ಕ್ವಾಥ್ಯಮಾನಾಃ ಸಮನ್ತತಃ ॥೨೪॥

ಕೊಪ್ಪರಿಗೆಗಳಲ್ಲಿ ಹುರಿಯಲ್ಪಟ್ಟ ಕಾದಮರಳು ಅಲ್ಲಲ್ಲಿ ಹರಡಿದ್ದಿತು. ಲೋಹಮಯವಾದ ಬಂಡೆಗಳಿದ್ದುವು. ಮಾರ್ಗದ ಸುತ್ತಲೂ ಕೊತ- ಕೊತನೆ ಕುದಿಯುತ್ತಿದ್ದ ಎಣ್ಣೆಯ ಕಡಾಯಿಗಳಿದ್ದುವು.

ಕೂಟಶಾಲ್ಮಲಿಕಂ ಚಾಪಿ ದುಃಸ್ಪರ್ಶಂ ತೀಕ್ಷ್ಣಕಣ್ಟಕಮ್ ।
ದದರ್ಶ ಚಾಪಿ ಕೌನ್ತೇಯೋ ಯಾತನಾಃ ಪಾಪಕರ್ಮಿಣಾಮ್ ॥೨೫॥

ತೀಕ್ಷ್ಣವಾದ ಮುಳ್ಳುಗಳಿಂದ ಕೂಡಿದ್ದ, ಮುಟ್ಟಲು ಅಸಾಧ್ಯವಾಗಿದ್ದ ಬೂರುಗದ ಮರಗಳಿದ್ದುವು. ಕುಂತಿಯ ಮಗನಾದ ಯುಧಿಷ್ಠಿರನು ಅಲ್ಲಿ ಪಾಪಕರ್ಮಿಗಳು ಅನುಭವಿಸುತ್ತಿದ್ದ ಯಾತನೆಗಳನ್ನು ನೋಡುತ್ತಾ ಹೋದನು. ದಾರಿಯುದ್ದಕ್ಕೂ ದುರ್ಗಂಧವೇ ಇದ್ದುದನ್ನು ಕಂಡು ದೇವದೂತನನ್ನು ಪ್ರಶ್ನಿಸಿದನು :

ಕಿಯದಧ್ವಾನಮಸ್ಮಾಭಿರ್ಗನ್ತವ್ಯಮಿಮಮೀದೃಶಮ್ ।
ಕ್ವ ಚ ತೇ ಭ್ರಾತರೋ ಮಹ್ಯಂ ತನ್ಮಮಾಖ್ಯಾತುಮರ್ಹಸಿ ।
ದೇಶೋಽಯಂ ಕಶ್ಚ ದೇವಾನಾಮೇತದಿಚ್ಛಾಮಿ ವೇದಿತುಮ್ ॥೨೬॥

“ದೇವದೂತನೇ! ಇಂತಹ ಹಾದಿಯಲ್ಲಿಯೇ ನಾವು ಇನ್ನೂ ಎಷ್ಟು ದೂರದವರೆಗೆ ಹೋಗಬೇಕು? ನನ್ನ ಒಡಹುಟ್ಟಿದವರೆಲ್ಲಿರುವರೆಂಬುದನ್ನು ನನಗೆ ಹೇಳುವ ಕೃಪೆಮಾಡು. ದೇವತೆಗಳ ಯಾವ ದೇಶಕ್ಕೆ ಇದು ಸೇರಿದೆ? ಈ ವಿಷಯವನ್ನು ನಾನು ತಿಳಿಯಬೇಕೆಂದಿರುವೆನು.”

ಜನಮೇಜಯ! ಧರ್ಮರಾಜನ ಆ ಮಾತನ್ನು ಕೇಳಿದೊಡನೆಯೇ ದೇವದೂತನು ಹಿಂದಿರುಗಿ–‘ಈ ಮಾರ್ಗದಲ್ಲಿ ಇಷ್ಟು ದೂರ ಮಾತ್ರ ನೀನು ಹೋಗಬೇಕಾಗಿದ್ದಿತು’–ಎಂದು ಹೇಳಿದನು.

“ಮಹಾರಾಜ! ‘ಯುಧಿಷ್ಠಿರನು ಆಯಾಸಗೊಂಡೊಡನೆಯೇ ಅವನನ್ನು ನೀನು ಹಿಂದಕ್ಕೆ ಕರೆತರಬೇಕು’–ಎಂದೂ ದೇವತೆಗಳ ಆದೇಶವಾಗಿದೆ. ಆದುದರಿಂದ ನಿನಗೆ ಆಯಾಸವಾಗಿದ್ದರೆ ನನ್ನೊಡನೆ ಹಿಂದಿರುಗುವುದು ಉಚಿತವಾಗಿದೆ.”

ನಿಶ್ಚಯವಾಗಿಯೂ ಆ ಸಮಯದಲ್ಲಿ ಯುಧಿಷ್ಠಿರನು ಸಹಿಸಲಾಗದ ಆ ದುರ್ಗಂಧದಿಂದ ನಿರ್ವಿಣ್ಣನಾಗಿದ್ದನು. ಅವನಿಗೆ ಮೂರ್ಛೆಬಂದಂತೆಯೇ ಆಗಿದ್ದಿತು. ಆದುದರಿಂದ ದೇವದೂತನ ಮಾತಿನಂತೆ ಹಿಂದಿರುಗಬೇಕೆಂದು ನಿಶ್ಚಯಿಸಿದವನಾಗಿ ಅವನೊಡನೆ ಹಿಂದಕ್ಕೆ ತಿರುಗಿದನು. ಒಡಹುಟ್ಟಿದವರನ್ನು ನೋಡಲಾಗದ ಕಾರಣ ದುಃಖ-ಶೋಕಗಳಿಂದ ಪೀಡಿತನಾಗಿದ್ದ ಧರ್ಮಾತ್ಮನಾದ ಯುಧಿಷ್ಠಿರನು ಎಲ್ಲ ಕಡೆಗಳಿಂದಲೂ ಕೇಳಿಬರುತ್ತಿದ್ದ ಮನುಷ್ಯರ ಆರ್ತನಾದಗಳನ್ನು ಆಲಿಸಿ ಕೇಳಿದನು.

ಭೋ ಭೋ ಧರ್ಮಜ ರಾಜರ್ಷೇ ಪುಣ್ಯಾಭಿಜನ ಪಾಣ್ಡವ ।
ಅನುಗ್ರಹಾರ್ಥಮಸ್ಮಾಕಂ ತಿಷ್ಠ ತಾವನ್ಮುಹೂರ್ತಕಮ್ ॥೩೨॥

"ಭೋ ಭೋ ಧರ್ಮನಂದನನೇ! ರಾಜರ್ಷಿಯೇ! ಪವಿತ್ರವಾದ ಕುಲದಲ್ಲಿ ಹುಟ್ಟಿರುವವನೇ! ಪಾಂಡವನೇ! ನಮ್ಮೆಲ್ಲರನ್ನೂ ಅನುಗ್ರಹಿಸುವ ಸಲುವಾಗಿ (ನಮ್ಮ ಈ ನರಕಯಾತನೆಯನ್ನು ತಪ್ಪಿಸುವ ಸಲುವಾಗಿ) ಮುಹೂರ್ತಕಾಲ ನೀನು ಇಲ್ಲಿಯೇ ಇರು.

ಆಯಾತಿ ತ್ವಯಿ ದುರ್ಧರ್ಷೇ ವಾತಿ ಪುಣ್ಯಃ ಸಮೀರಣಃ ।
ತವ ಗನ್ಧಾನುಗಸ್ತಾತ ಯೇನಾಸ್ಮಾನ್ಸುಖಮಾಗಮತ್ ॥೩೩॥

ದುರ್ಧರ್ಷನಾದ ನೀನು ಇಲ್ಲಿ ಬರುತ್ತಿದ್ದಂತೆಯೇ ಪವಿತ್ರಗಂಧವನ್ನು ಹೊತ್ತ ಗಾಳಿಯು ಇಲ್ಲಿ ಬೀಸತೊಡಗಿದೆ. ನಿನ್ನ ಶರೀರದ ಗಂಧವನ್ನು ಅನುಸರಿಸಿ ಬಂದ ವಾಯುವು ನಮ್ಮ ಮೇಲೆ ಬೀಸಿ ನಮಗೆ ಸುಖವನ್ನುಂಟು ಮಾಡುತ್ತಿದೆ.

ತೇ ವಯಂ ಪಾರ್ಥ ದೀರ್ಘಸ್ಯ ಕಾಲಸ್ಯ ಪುರುಷರ್ಷಭ ।
ಸುಖಮಾಸಾದಯಿಷ್ಯಾಮಸ್ತ್ವಾಂ ದೃಷ್ಟ್ವಾ ರಾಜಸತ್ತಮ ॥೩೪॥

ಪುರುಷಶ್ರೇಷ್ಠನೇ! ರಾಜಶ್ರೇಷ್ಠನೇ! ನಾವು ನಿನ್ನನ್ನು ಸಂದರ್ಶಿಸಿ ಬಹಳ ಕಾಲದ ಬಳಿಕ ಸುಖವನ್ನು ಅನುಭವಿಸುತ್ತಿದ್ದೇವೆ.

ಸಂತಿಷ್ಠಸ್ವ ಮಹಾಬಾಹೋ ಮುಹೂರ್ತಮಪಿ ಭಾರತ ।
ತ್ವಯಿ ತಿಷ್ಠತಿ ಕೌರವ್ಯ ಯಾತನಾಸ್ಮಾನ್ನ ಬಾಧತೇ ॥೩೫॥

ಮಹಾಬಾಹುವೇ! ಮುಹೂರ್ತಕಾಲವಾದರೂ ನೀನು ಇಲ್ಲಿಯೇ ಇರು. ನೀನು ಇಲ್ಲಿದ್ದರೆ ಈ ನರಕಯಾತನೆಯು ನಮ್ಮನ್ನು ಬಾಧಿಸುವುದಿಲ್ಲ."

ಜನಮೇಜಯ! ಹೀಗೆ ನರಕವೇದನೆಯನ್ನು ಅನುಭವಿಸುತ್ತಿದ್ದ ದೀನರ ಅನೇಕವಿಧವಾದ ದೈನ್ಯದ ಮಾತುಗಳನ್ನು ಯುಧಿಷ್ಠಿರನು ಎಲ್ಲ ಕಡೆಗಳಿಂದಲೂ ಕೇಳಿದನು. ದೈನ್ಯದಿಂದ ಮಾತನಾಡುತ್ತಿದ್ದ ಅವರ ಮಾತುಗಳನ್ನು ಕೇಳಿ ದಯಾವಂತನಾದ ಯುಧಿಷ್ಠಿರನು 'ಅಹೋ ಕೃಚ್ಛ್ರಂ' 'ಅಯ್ಯೋ ಕಷ್ಟ ಕಷ್ಟ! ಇವರು ಬಹಳ ಕಷ್ಟಪಡುತ್ತಿದ್ದಾರೆ'–ಎಂದು ಹೇಳುತ್ತಾ ಅಲ್ಲಿಯೇ ನಿಂತುಕೊಂಡನು. ಹಾಗೆ ಹೇಳುತ್ತಿದ್ದವರ ಮಾತು (ಧ್ವನಿಯು) ರಾಜನಿಗೆ ಚಿರಪರಿಚಿತವಾಗಿದ್ದಿತು. ಮಹಾಕಷ್ಟದಲ್ಲಿ ಸಿಕ್ಕಿರುವ ಮತ್ತು ದುಃಖಿತರಾದ ಅವರ ಚಿರಪರಿಚಿತವಾದ ಆರ್ತನಾದಗಳನ್ನು ರಾಜನು ಪುನಃ ಪುನಃ ಕೇಳುತ್ತಲೇ ಇದ್ದನು. ಆದರೆ ಆ ಧ್ವನಿಗಳು ಯಾರದೆಂಬುದು ಮಾತ್ರ ತಿಳಿಯುತ್ತಿರಲಿಲ್ಲ. ಧರ್ಮಾತ್ಮನಾದ ಯುಧಿಷ್ಠಿರನು ದೈನ್ಯದಿಂದ ಯುಕ್ತವಾದ ಆ ಮಾತುಗಳನ್ನು ಯಾರು ಆಡುತ್ತಿರುವರೆಂಬುದನ್ನು ತಿಳಿದವನಾಗಿ ಅವರನ್ನೇ ಪ್ರಶ್ನಿಸಿದನು :

'ನೀವು ಯಾರು? ಇಲ್ಲಿ ಏಕಿದ್ದೀರಿ?'

ಯುಧಿಷ್ಠಿರನು ಹೀಗೆ ಪ್ರಶ್ನಿಸಲು ಎಲ್ಲ ಕಡೆಗಳಿಂದಲೂ ಅವರ ಮಾತು ಕೇಳಿಬಂದಿತು.

ಕರ್ಣೋಽಹಂ ಭೀಮಸೇನೋಽಹಮರ್ಜುನೋಽಹಮಿತಿ ಪ್ರಭೋ ।
ನಕುಲಃ ಸಹದೇವೋಽಹಂ ಧೃಷ್ಟದ್ಯುಮ್ನೋಽಹಮಿತ್ಯುತ ।
ದ್ರೌಪದೀ ದ್ರೌಪದೇಯಾಶ್ಚ ಇತ್ಯೇವಂ ತೇ ಪ್ರಚಕ್ರುಶುಃ ॥೪೧॥

ಒಂದು ಕಡೆಯಿಂದ–'ಪ್ರಭುವೇ! ನಾನು ಕರ್ಣನು'–ಎಂಬ ಧ್ವನಿಯು ಬಂದಿತು. ಬೇರೆ ಕಡೆಗಳಿಂದ–'ನಾನು ಭೀಮನು' 'ನಾನು ಅರ್ಜುನನು' 'ನಾನು ನಕುಲನು' 'ನಾನು ಸಹದೇವನು' 'ನಾನು ಧೃಷ್ಟದ್ಯುಮ್ನನು' 'ನಾನು ದ್ರೌಪದಿಯು' 'ನಾವು ದ್ರೌಪದಿಯ ಮಕ್ಕಳು'– ಹೀಗೆ ಎಲ್ಲ ಕಡೆಗಳಿಂದಲೂ ತಮ್ಮ ನಾಮಧೇಯಗಳನ್ನು ಹೇಳುತ್ತಾ ಕಿರುಚಿಕೊಂಡರು.

ಜನಮೇಜಯ! ಆ ಪ್ರದೇಶಕ್ಕೆ ಅನುಗುಣವಾದ ದೈನ್ಯತರವಾದ

ಅವರ ಮಾತುಗಳನ್ನು ಎಲ್ಲ ಕಡೆಗಳಿಂದಲೂ ಕೇಳಿ–'**ಕಿಂ ನ್ವಿದಂ ದೈವಕಾರಿತಮ್**'–'ದೈವದ ಈ ವಿಧಾನವು ಯಾವುದು? (ಏನಿದು ದೈವದ ವಿಚಿತ್ರ ಲೀಲೆ!)' ಎಂದು ಮನಸ್ಸಿನಲ್ಲಿಯೇ ವಿಮರ್ಶಿಸತೊಡಗಿದನು.

ಕಿಂ ತು ತತ್ಕಲುಷಂ ಕರ್ಮ ಕೃತಮೇಭಿರ್ಮಹಾತ್ಮಭಿಃ ।
ಕರ್ಣೇನ ದ್ರೌಪದೇಯೈರ್ವಾ ಪಾಞ್ಚಾಲ್ಯಾ ವಾ ಸುಮಧ್ಯಮಾ ॥೪೩॥

"ಇಂತಹ ದಾರುಣವಾದ ಕಷ್ಟವನ್ನು ಅನುಭವಿಸಲು ಕರ್ಣನಾಗಲೀ, ದ್ರೌಪದಿಯ ಮಕ್ಕಳಾಗಲೀ, ಸುಂದರವಾದ ನಡುವುಳ್ಳ ದ್ರೌಪದಿಯಾಗಲೀ, ಮಹಾತ್ಮರಾದ ಭೀಮಾರ್ಜುನ-ನಕುಲ-ಸಹದೇವರೇ ಆಗಲೀ ಯಾವ ಪಾಪ ಕರ್ಮಗಳನ್ನು ಮಾಡಿದ್ದಾರೆ?

ಯ ಇಮೇ ಪಾಪಗನ್ಧೇಽಸ್ಮಿನ್ದೇಶೇ ಸನ್ತಿ ಸುದಾರುಣೇ ।
ನಾಹಂ ಜಾನಾಮಿ ಸರ್ವೇಷಾಂ ದುಷ್ಕೃತಂ ಪುಣ್ಯಕರ್ಮಣಾಮ್ ॥೪೪॥

ಇವರೆಲ್ಲರೂ ಈಗ ಸುದಾರುಣವಾದ ದುರ್ಗಂಧದಿಂದ ತುಂಬಿರುವ ಈ ಪ್ರದೇಶದಲ್ಲಿದ್ದಾರೆ. ಸಹಿಸಲು ಸಾಧ್ಯವಾಗದಂತಹ ಇಂತಹ ಪ್ರದೇಶದಲ್ಲಿರಲು ವಸ್ತುತಃ ಪುಣ್ಯಕರ್ಮಿಗಳಾದ ಇವರು ಯಾವ ಪಾಪಕರ್ಮವನ್ನು ಮಾಡಿದ್ದರೆಂಬುದನ್ನು ನಾನು ಅರಿಯೆನು.

ಕಿಂ ಕೃತ್ವಾ ಧೃತರಾಷ್ಟ್ರಸ್ಯ ಪುತ್ರೋ ರಾಜಾ ಸುಯೋಧನಃ ।
ತಥಾ ಶ್ರಿಯಾ ಯುತಃ ಪಾಪೈಃ ಸಹ ಸರ್ವೈಃ ಪದಾನುಗೈಃ ॥೪೫॥

ಧೃತರಾಷ್ಟ್ರನ ಮಗನಾದ ದುರ್ಯೋಧನನು ಯಾವ ಪುಣ್ಯಕಾರ್ಯವನ್ನು ಮಾಡಿ ಪಾಪಿಷ್ಠರಾದ ಸಮಸ್ತ ಅನುಯಾಯಿಗಳಿಂದಲೂ ಕೂಡಿದವನಾಗಿ ಅಂತಹ ಅದ್ಭುತವಾದ ಕಾಂತಿಯಿಂದ ಪ್ರಕಾಶಿಸುತ್ತಿದ್ದಾನೆ?

ಮಹೇನ್ದ್ರ ಇವ ಲಕ್ಷ್ಮೀವಾನಾಸ್ತೇ ಪರಮಪೂಜಿತಃ ।
ಕಸ್ಯೇದಾನೀಂ ವಿಕಾರೋಽಯಂ ಯ ಇಮೇ ನರಕಂ ಗತಾಃ ॥೪೬॥

ದುರ್ಯೋಧನನಾದರೋ ಮಹೇಂದ್ರನಂತೆಯೇ ದಿವ್ಯವಾದ ಕಾಂತಿಯಿಂದ ಯುಕ್ತನಾಗಿ ಪರಮಪೂಜಿತನಾಗಿದ್ದಾನೆ. ಧರ್ಮಾತ್ಮರಾದ ಈ ನನ್ನ

ಅನುಯಾಯಿಗಳೆಲ್ಲರೂ ನರಕಕ್ಕೆ ಹೋಗಿದ್ದಾರೆ. ಇದು ಯಾವ ಕರ್ಮದ ಫಲವಾಗಿದೆ?

ಸರ್ವಧರ್ಮವಿದಃ ಶೂರಾಃ ಸತ್ಯಾಗಮಪರಾಯಣಾಃ ।
ಕ್ಷತ್ರಧರ್ಮರತಾಃ ಸನ್ತೋ ಯಜ್ವಾನೋ ಭೂರಿದಕ್ಷಿಣಾಃ ॥೪೭॥

ನನ್ನ ಒಡಹುಟ್ಟಿದವರೂ ಮತ್ತು ಅನುಯಾಯಿಗಳೂ–ಸಮಸ್ತ ಧರ್ಮಗಳನ್ನು ತಿಳಿದವರೂ, ಶೂರರೂ, ಸತ್ಯವಾದಿಗಳೂ, ವೇದವನ್ನೇ ಆಶ್ರಯವನ್ನಾಗಿ ಪಡೆದವರೂ, ಕ್ಷತ್ರಧರ್ಮದಲ್ಲಿ ನಿರತರೂ, ಸತ್ಪುರುಷರೂ, ಯಾಗಶೀಲರೂ, ಬಹುದಕ್ಷಿಣೆಗಳನ್ನು ಬ್ರಾಹ್ಮಣರಿಗೆ ಕೊಡುವವರೂ ಆಗಿದ್ದರು. (ಆದರೂ ಇವರಿಗೆ ಇಂತಹ ದುರ್ಗತಿಯು ಲಭಿಸಿದೆ.)

ಕಿಂ ನ ಸುಪ್ತೋಽಸ್ಮಿ ಜಾಗರ್ಮಿ ಚೇತಯಾಮಿ ನ ಚೇತಯೇ ।
ಅಹೋ ಚಿತ್ತವಿಕಾರೋಽಯಂ ಸ್ಯಾದ್ವಾ ಮೇ ಚಿತ್ತವಿಭ್ರಮಃ ॥೪೮॥

ನಾನೀಗ ಮಲಗಿರುವೆನೇ? ಎಚ್ಚರಗೊಂಡಿರುವೆನೇ? ನನಗೀಗ ಚೇತನವಿರುವುದೋ ಇಲ್ಲವೋ? ಇದು ನನ್ನ ಮನಸ್ಸಿನ ವಿಕಾರವಾದರೂ ಇದ್ದೀತು. ಅಥವಾ ನನ್ನ ಬುದ್ಧಿಯಾದರೂ ಭ್ರಮಿಸಿದ್ದೀತು.”

ಜನಮೇಜಯ! ಹೀಗೆ ದುಃಖ-ಶೋಕಗಳಿಂದ ಸಮಾವಿಷ್ಟನಾಗಿ, ಚಿಂತೆಯಿಂದ ವ್ಯಾಕುಲಗೊಂಡ ಇಂದ್ರಿಯಗಳುಳ್ಳವನಾಗಿದ್ದ ಯುಧಿಷ್ಠಿರನು ನಾನಾಪ್ರಕಾರವಾಗಿ ವಿಚಾರಮಾಡಿದನು.

ಕ್ರೋಧಮಾಹಾರಯಚ್ಚೈವ ತೀವ್ರಂ ಧರ್ಮಸುತೋ ನೃಪಃ ।
ದೇವಾಂಶ್ಚ ಗರ್ಹಯಾಮಾಸ ಧರ್ಮಂ ಚೈವ ಯುಧಿಷ್ಠಿರಃ ॥೫೦॥

ಆ ಸಮಯದಲ್ಲಿ ಯುಧಿಷ್ಠಿರನಿಗೆ ತೀವ್ರವಾದ ಕೋಪವೇ ಬಂದಿತು. ದೇವತೆಗಳನ್ನೂ ಧರ್ಮವನ್ನೂ ನಿಂದಿಸತೊಡಗಿದನು. ತೀವ್ರವಾದ ದುರ್ಗಂಧದಿಂದ ಸಂತಪ್ತನಾಗಿದ್ದ ಯುಧಿಷ್ಠಿರನು ದೇವದೂತನಿಗೆ ಹೇಳಿದನು:

ಗಮ್ಯತಾಂ ತತ್ರ ಯೇಷಾಂ ತ್ವಂ ದೂತಸ್ತೇಷಾಮುಪಾನ್ತಿಕಮ್ ।
ನ ಹ್ಯಹಂ ತತ್ರ ಯಾಸ್ಯಾಮಿ ಸ್ಥಿತೋಽಸ್ಮೀತಿ ನಿವೇದ್ಯತಾಮ್ ।
ಮತ್ಸಂಶ್ರಯಾದಿಮೇ ದೂತಃ ಸುಖಿನೋ ಭ್ರಾತರೋ ಹಿ ಮೇ ॥೫೨॥

“ದೂತನೇ! ನೀನು ಯಾರಿಗೆ ದೂತನೋ ಅವರ ಬಳಿಗೇ ಹೊರಟು

ಹೋಗು. ನಾನಲ್ಲಿಗೆ ಬರುವುದಿಲ್ಲ. ನಾನಿಲ್ಲಿಯೇ ಇರುತ್ತೇನೆಂಬುದನ್ನು ಆ ದೇವತೆಗಳಿಗೆ ತಿಳಿಸು. ನನ್ನ ಸಂಬಂಧದಿಂದ ನನ್ನ ಒಡಹುಟ್ಟಿದವರಾದರೂ ಸುಖವಾಗಿರುತ್ತಾರೆ."

ಧೀಮಂತನಾದ ಪಾಂಡುವಿನ ಮಗನಾದ ಯುಧಿಷ್ಠಿರನು ಹೀಗೆ ಹೇಳಲು ದೂತನು ದೇವರಾಜನಾದ ಇಂದ್ರನಿದ್ದೆಡೆಗೆ ಹೊರಟುಹೋದನು. ಆ ದೂತನು ಧರ್ಮರಾಜನ ಅಪೇಕ್ಷೆಯನ್ನೂ ಮತ್ತು ಅವನು ಹೇಳಿದ ವಿಷಯಗಳನ್ನೂ ದೇವರಾಜನಿಗೆ ನಿವೇದಿಸಿದನು.

೨ನೆಯ ಅಧ್ಯಾಯವು ಮುಗಿಯಿತು.

೩ನೆಯ ಅಧ್ಯಾಯ ಸ್ವರ್ಗಾರೋಹಣಪರ್ವ (ಮುಂದುವರಿದಿದೆ.)

ಯಮಧರ್ಮನೂ ಮತ್ತು ಇಂದ್ರನೂ ಯುಧಿಷ್ಠಿರನನ್ನು ಸಂತೈಸಿದುದು : ಯುಧಿಷ್ಠಿರನು ಶರೀರವನ್ನು ತ್ಯಜಿಸಿ ದಿವ್ಯಲೋಕಕ್ಕೆ ಹೋದುದು

ವೈಶಂಪಾಯನರು ಹೇಳುತ್ತಾರೆ :

ಸ್ಥಿತೇ ಮುಹೂರ್ತೇ ಪಾರ್ಥೇ ತು ಧರ್ಮರಾಜೇ ಯುಧಿಷ್ಠಿರೇ ।
ಆಜಗ್ಮುಸ್ತತ್ರ ಕೌರವ್ಯ ದೇವಾಃ ಶಕ್ರಪುರೋಗಮಾಃ ॥೧॥

ಜನಮೇಜಯ! ಕುಂತಿಯ ಮಗನಾದ, ಧರ್ಮರಾಜನಾದ ಯುಧಿಷ್ಠಿರನು ಮುಹೂರ್ತಕಾಲ ಅಲ್ಲಿಯೇ ನಿಂತಿರಲು ಇಂದ್ರನೇ ಮೊದಲಾದ ದೇವತೆಗಳು ಅಲ್ಲಿಗೆ ಆಗಮಿಸಿದರು.

ಯಮಧರ್ಮನೂ ಶರೀರವನ್ನು ಧರಿಸಿ ಕುರುರಾಜನಾದ ಯುಧಿಷ್ಠಿರನಿದ್ದೆಡೆಗೆ ಬಂದನು. ಪವಿತ್ರಕುಲಜರೂ, ಪುಣ್ಯಕರ್ಮರೂ, ದೇದೀಪ್ಯಮಾನವಾದ ದೇಹಕಾಂತಿಯುಳ್ಳವರೂ ಆದ ದೇವತೆಗಳು ಅಲ್ಲಿಗೆ ಆಗಮಿಸಲು, ಅಲ್ಲಿದ್ದ ಕತ್ತಲೆಯು ದೂರವಾಯಿತು. ಆಗ ಅಲ್ಲಿ ಪಾಪಕರ್ಮಿಗಳ ಯಾತನೆಗಳೂ ಕಂಡುಬರಲಿಲ್ಲ ; ಭಯಂಕರವಾದ ವೈತರಣೀನದಿಯೂ ಇರಲಿಲ್ಲ. ಕೂಟಶಾಲ್ಮಲಿಯಾಗಲೀ, ಲೋಹದ ಕಂಬಗಳಾಗಲೀ, ಕಾದ ಕಲ್ಲುಗಳಾಗಲೀ, ಅಲ್ಲಿ ಕಾಣಲಿಲ್ಲ. ಯಾವ ವಿಕಾರವಾದ ಶರೀರಗಳನ್ನು ಕುರು

ರಾಜನು ಆ ಹಿಂದೆ ತನ್ನ ಸುತ್ತಲೂ ನೋಡಿದ್ದನೋ–ಅಂತಹ ವಿಕೃತವಾದ ಶರೀರಗಳು ಯಾವುವೂ ಅಲ್ಲಿ ಕಾಣುತ್ತಿರಲಿಲ್ಲ. ಆ ಸಮಯದಲ್ಲಿ ವಾಯುವು ಸುಖಸ್ಪರ್ಶಿಯಾಗಿದ್ದಿತು. ಪುಣ್ಯಗಂಧವನ್ನು ಹೊತ್ತು ಬೀಸುತ್ತಿದ್ದಿತು. ಪವಿತ್ರವಾಗಿದ್ದಿತು. ದೇವತೆಗಳ ಸಮೀಪದಿಂದ ಬೀಸುತ್ತಿದ್ದ ಆ ವಾಯುವು ಅತಿಶೀತಲವಾಗಿದ್ದಿತು. ಯುಧಿಷ್ಠಿರನಿದ್ದೆಡೆಗೆ ಇಂದ್ರನೊಡನೆ ಮರುತರೂ, ವಸುಗಳೂ, ಅಶ್ವಿನೀದೇವತೆಗಳೂ, ಸಾಧ್ಯರೂ, ರುದ್ರರೂ, ಆದಿತ್ಯರೂ, ಇತರ ಎಲ್ಲ ದೇವತೆಗಳೂ, ಸಿದ್ಧರೂ, ಮಹರ್ಷಿಗಳೂ ಆಗಮಿಸಿದರು.

ಬಳಿಕ ಪರಮೋತ್ಕೃಷ್ಟವಾದ ಕಾಂತಿಯಿಂದ ಸಂಪನ್ನನಾಗಿದ್ದ ದೇವ ರಾಜನಾದ ಇಂದ್ರನು ಯುಧಿಷ್ಠಿರನನ್ನು ಸಮಾಧಾನಗೊಳಿಸುತ್ತಾ ಹೇಳಿದನು:

“ಮಹಾಬಾಹುವೇ! ಪುರುಷಸಿಂಹನೇ! ಯುಧಿಷ್ಠಿರ! ಇತ್ತ ಬಾ. ಇದಕ್ಕಿಂತಲೂ ಹೆಚ್ಚು ಕಷ್ಟವನ್ನು ನೀನು ಅನುಭವಿಸಬೇಕಾಗಿಲ್ಲ; ಇಷ್ಟು ಮಾತ್ರವೇ ಸಾಕಾಗಿದೆ. ನಿನಗೆ ಅಕ್ಷಯವಾದ ಪುಣ್ಯಲೋಕಗಳು ಲಭಿಸಿವೆ. ನೀನು ಸಿದ್ಧಿಯನ್ನೂ ಪಡೆದಿರುವೆ. ಕೋಪಗೊಳ್ಳಬೇಡ. ನನ್ನ ಮಾತನ್ನು ಕೇಳು. ಎಲ್ಲ ರಾಜರೂ ಅವಶ್ಯವಾಗಿ ನರಕವನ್ನು ನೋಡಲೇಬೇಕಾಗುವುದು.

ಶುಭಾನಾಮಶುಭಾನಾಂ ಚ ದ್ವೌ ರಾಶೀ ಪುರುಷರ್ಷಭ ।
ಯಃ ಪೂರ್ವಂ ಸುಕೃತಂ ಭುಙ್ಕ್ತೇ ಪಶ್ಚಾನ್ನಿರಯಮೇವ ಸಃ ॥೧೩॥

ಪುರುಷಶ್ರೇಷ್ಠನೇ! ಶುಭಕರ್ಮಗಳ ರಾಶಿ (ಪುಣ್ಯರಾಶಿ), ಅಶುಭ ಕರ್ಮಗಳ ರಾಶಿ (ಪಾಪರಾಶಿ)–ಎಂಬ ಎರಡು ರಾಶಿಗಳು ಮನುಷ್ಯನಲ್ಲಿರುತ್ತವೆ. ಯಾವನು ಮೊದಲು ಸುಕೃತರಾಶಿಯ ಫಲವನ್ನು ಅನುಭವಿಸುವನೋ ಅವನು ಅನಂತರ ನರಕಕ್ಕೆ ಹೋಗಬೇಕಾಗುತ್ತದೆ.

ಪೂರ್ವಂ ನರಕಭಾಗ್ಯಸ್ತು ಪಶ್ಚಾತ್ಸ್ವರ್ಗಮುಪೈತಿ ಸಃ ।
ಭೂಯಿಷ್ಠಂ ಪಾಪಕರ್ಮಾ ಯಃ ಸ ಪೂರ್ವಂ ಸ್ವರ್ಗಮಶ್ನುತೇ ॥೧೪॥

ಮೊದಲು ನರಕಯಾತನೆಯನ್ನು ಯಾವನು ಅನುಭವಿಸುವನೋ ಅವನು ಅನಂತರ ಸ್ವರ್ಗಕ್ಕೆ ಹೋಗುತ್ತಾನೆ. ಅತ್ಯಂತಪಾಪಮಾಡಿದವನು ಮೊದಲು ಸ್ವರ್ಗಸುಖವನ್ನು ಅನುಭವಿಸುತ್ತಾನೆ.

ತೇನ ತ್ವಮೇವಂ ಗಮಿತೋ ಮಯಾ ಶ್ರೇಯೋಽರ್ಥಿನಾ ನೃಪಃ ।
ವ್ಯಾಜೇನ ಹಿ ತ್ವಯಾ ದ್ರೋಣ ಉಪಚೀರ್ಣಃ ಸುತಂ ಪ್ರತಿ ।
ವ್ಯಾಜೇನೈವ ತತೋ ರಾಜನ್ದರ್ಶಿತೋ ನರಕಸ್ತವ ॥೧೫॥

ನರೇಶ್ವರನೇ! ನಿನಗೆ ಮಂಗಳವನ್ನು ಉಂಟುಮಾಡುವ ಇಚ್ಛೆಯಿಂದಲೇ ನಾನು ಮೊದಲೇ ನರಕವನ್ನು ನೋಡಲು ನಿನ್ನನ್ನು ಕಳುಹಿಸಿಕೊಟ್ಟೆನು. ನೀನು ಆನೆಯನ್ನೇ ವ್ಯಾಜವನ್ನಾಗಿ ಮಾಡಿಕೊಂಡು ದ್ರೋಣರ ಮಗನು ಸತ್ತುಹೋದನೆಂದು ನಂಬುವಂತೆ ಮಾಡಿದೆ. (ಶತ್ರುಗಳ ಅಭೀಷ್ಟವು ನೆರವೇರದಂತೆ ಮಾಡಿದೆ.) ಅದೇ ರೀತಿಯಲ್ಲಿ ನಿನ್ನ ಅಪೇಕ್ಷೆಯಂತೆಯೇ ನಿನ್ನ ಒಡಹುಟ್ಟಿದವರನ್ನೂ ಬಂಧುಗಳನ್ನೂ ತೋರಿಸುವ ನೆಪದಲ್ಲಿ ನಿನಗೆ ನರಕವನ್ನು ತೋರಿಸಿದ್ದಾಯಿತು. ನಿನ್ನಂತೆಯೇ ಭೀಮಾರ್ಜುನ-ನಕುಲ- ಸಹದೇವರೂ ದ್ರೌಪದಿಯೂ ನೆಪಮಾತ್ರಕ್ಕೆ ನರಕಕ್ಕೆ ಹೋಗಿರುತ್ತಾರೆ.

ಪುರುಷಸಿಂಹನೇ! ಇತ್ತಲಾಗಿ ಬಾ. ನಿನ್ನ ಸಹೋದರರೂ, ದ್ರೌಪದಿಯೂ, ಇತರ ಬಂಧುಗಳೂ ಪಾಪದಿಂದ ಮುಕ್ತರಾಗಿದ್ದಾರೆ. ನಿನ್ನ ಪಕ್ಷಕ್ಕೆ ಸೇರಿ ಯಾವ ಯಾವ ರಾಜರು ಯುದ್ಧದಲ್ಲಿ ಮೃತರಾಗಿದ್ದರೋ ಅವರೆಲ್ಲರೂ ಸ್ವರ್ಗಲೋಕಕ್ಕೆ ಬಂದಿರುತ್ತಾರೆ. ಅವರೆಲ್ಲರನ್ನೂ ಈಗ ನೀನು ನೋಡಬಹುದಾಗಿದೆ. ನೀನು ಯಾರ ಸಲುವಾಗಿ ಪರಿತಪಿಸುತ್ತಿರುವೆಯೋ– ಎಲ್ಲ ಶಸ್ತ್ರಧಾರಿಗಳಲ್ಲಿಯೂ ಶ್ರೇಷ್ಠನಾದ, ಮಹಾಧನುಷ್ಮಂತನಾದ ಆ ಕರ್ಣನೂ ಪರಮಸಿದ್ಧಿಯನ್ನು ಪಡೆದಿರುತ್ತಾನೆ. ಪುರುಷವ್ಯಾಘ್ರನಾದ, ಸೂರ್ಯನ ಮಗನಾದ ಕರ್ಣನು ಸ್ವಸ್ಥಾನದಲ್ಲಿರುವುದನ್ನು ನೋಡು. ಇನ್ನಾದರೂ ಶೋಕವನ್ನು ದೂರೀಕರಿಸು. ಅವರವರಿಗೆ ಯೋಗ್ಯವಾದ ಸ್ಥಾನಗಳನ್ನು ಅಲಂಕರಿಸಿರುವ ನಿನ್ನ ಒಡಹುಟ್ಟಿದವರನ್ನೂ, ನಿನ್ನ ಪಕ್ಷಕ್ಕೆ ಸೇರಿದ್ದ ರಾಜರನ್ನೂ ನೋಡು. ನಿನ್ನ ಮನಸ್ಸಿನ ಆತಂಕವು ದೂರವಾಗಲಿ. ಮೊದಲು ನರಕಸಂಬಂಧವಾದ ಕಷ್ಟವನ್ನು ಅನುಭವಿಸಿರುವೆ. ಮುಂದೆ ನೀನು ಶೋಕ-ವ್ಯಾಧಿರಹಿತನಾಗಿ ನನ್ನೊಡನೆಯೇ ವಿಹರಿಸುತ್ತಿರು. ಮಹಾಬಾಹುವೇ! ನೀನು ಮಾಡಿರುವ ಪುಣ್ಯಕರ್ಮಗಳ, ತಪಸ್ಸಿನಿಂದ ಜಯಿಸಿರುವ ಪುಣ್ಯಲೋಕಗಳ ಮತ್ತು ದಾನಗಳ ಫಲಗಳೆಲ್ಲವನ್ನೂ ಪಡೆದುಕೊಳ್ಳುವೆ. ದೇವತೆ

ಗಳೂ, ಗಂಧರ್ವರೂ, ಕಲ್ಯಾಣಸ್ವರೂಪಿಣಿಯರಾದ ದಿವ್ಯರಾದ ಅಪ್ಸರೆಯರೂ ಸ್ವಚ್ಛವಾದ, ವಸ್ತ್ರಾಭರಣಗಳನ್ನು ಧರಿಸಿ ಈಗ ನಿನ್ನ ಸೇವೆಯನ್ನು ಮಾಡಲಿ. ಈಗ ನೀನು ರಾಜಸೂಯಯಾಗದ ಮೂಲಕ ಗೆದ್ದುಕೊಂಡಿರುವ ಪುಣ್ಯ ಲೋಕಗಳನ್ನೂ, ಅಶ್ವಮೇಧದ ಮೂಲಕ ಅಭಿವೃದ್ಧಿಹೊಂದಿರುವ ಪುಣ್ಯ ಲೋಕಗಳನ್ನೂ ಹೊಂದುವೆ. ನೀನು ಮಾಡಿರುವ ತಪಸ್ಸಿನ ಮಹಾಫಲವನ್ನೂ ಪಡೆಯುವೆ. ಯುಧಿಷ್ಠಿರ! ನಿನಗೆ ಲಭಿಸಿರುವ ಲೋಕಗಳೆಲ್ಲವೂ ಹರಿಶ್ಚಂದ್ರರಾಜನಿಗೆ ಲಭಿಸಿರುವ ಲೋಕಗಳಂತೆ ಎಲ್ಲ ರಾಜರ ಲೋಕಗಳಿಗಿಂತಲೂ ಮೇಲ್ಭಾಗದಲ್ಲಿವೆ. ಅಲ್ಲಿ ನೀನು ಸ್ವಚ್ಛಂದವಾಗಿ ವಿಹರಿಸುವೆ. ರಾಜರ್ಷಿಯಾದ ಮಾಂಧಾತ, ಭಗೀರಥ, ದುಷ್ಯಂತನ ಮಗನಾದ ಭರತ– ಇವರೆಲ್ಲರೂ ಯಾವ ಪುಣ್ಯಲೋಕಗಳಲ್ಲಿರುವರೋ ಅಂತಹ ಪುಣ್ಯಲೋಕಗಳಲ್ಲಿಯೇ ನೀನು ವಿಹರಿಸುವೆ. ಪಾರ್ಥ! ಇದು ಮೂರು ಲೋಕಗಳನ್ನೂ ಪಾವನಗೊಳಿಸುವ ದೇವನದಿಯಾದ ಪುಣ್ಯತಮವಾದ ಆಕಾಶಗಂಗೆಯಾಗಿದೆ. ನೀನು ಈ ಪುಣ್ಯನದಿಯಲ್ಲಿ ಸ್ನಾನಮಾಡಿ ಪುಣ್ಯಲೋಕಗಳಿಗೆ ಹೋಗುವೆ.

ಅತ್ರ ಸ್ನಾತಸ್ಯ ಭಾವಸ್ತೇ ಮಾನುಷೋ ವಿಗಮಿಷ್ಯತಿ ।
ಗತಶೋಕೋ ನಿರಾಯಾಸೋ ಮುಕ್ತವೈರೋ ಭವಿಷ್ಯಸಿ ॥೨೯॥

ಈ ದೇವನದಿಯಲ್ಲಿ ಸ್ನಾನಮಾಡಿದೊಡನೆಯೇ ನಿನ್ನಲ್ಲಿರುವ ಮಾನುಷ ಸ್ವಭಾವವು ಹೋಗಿಬಿಡುತ್ತದೆ. ಶೋಕರಹಿತನೂ, ಆಯಾಸರಹಿತನೂ, ದ್ವೇಷರಹಿತನೂ ಆಗುವೆ."

ಜನಮೇಜಯ! ಇಂದ್ರನು ಯುಧಿಷ್ಠಿರನಿಗೆ ಹೀಗೆ ಹೇಳುತ್ತಿರುವಾಗಲೇ ಧರ್ಮನು ಮೂರ್ತಿಮತ್ತಾಗಿ ಬಂದು ಮಗನಾದ ಕೌರವೇಂದ್ರನಾದ ಯುಧಿಷ್ಠಿರನಿಗೆ ಹೀಗೆ ಹೇಳಿದನು :

"ಭೋ ಭೋ! ಮಹಾಪ್ರಾಜ್ಞನೇ! ನನ್ನ ಪ್ರಿಯಪುತ್ರನೇ! ನನ್ನಲ್ಲಿರುವ (ಧರ್ಮದಲ್ಲಿರುವ) ನಿನ್ನ ಭಕ್ತಿಯಿಂದಲೂ, ನಿನ್ನ ಸತ್ಯವಾದ ಮಾತುಗಳಿಂದಲೂ, ನಿನ್ನಲ್ಲಿರುವ ಕ್ಷಮಾಗುಣದಿಂದಲೂ ಮತ್ತು ಇಂದ್ರಿಯ ಸಂಯಮದಿಂದಲೂ ನಾನು ಪ್ರೀತನಾಗಿದ್ದೇನೆ.

ಯುಧಿಷ್ಠಿರ! ಮೂರನೆಯ ಬಾರಿಗೆ ನಾನು ನಿನ್ನನ್ನು ಪರೀಕ್ಷಿಸಿದೆನು. ಯಾವುದೇ ಉಪಾಯದಿಂದಲೂ ನಿನ್ನ ಸ್ವಭಾವಗುಣದಿಂದ ನಿನ್ನನ್ನು ವಿಚಲಿತನನ್ನಾಗಿ ಮಾಡಲು ಶಕ್ಯವಾಗಲಿಲ್ಲ. ಮೊದಲು ದ್ವೈತವನದಲ್ಲಿ ಅರಣೀ ಕಾಷ್ಠದ ಅಪಹರಣದ ಸಮಯದಲ್ಲಿ ಯಕ್ಷನ ರೂಪದಲ್ಲಿ ಬಂದು ನಿನ್ನನ್ನು ಪ್ರಶ್ನಿಸಿದೆನು. ಆಗ ನೀನು ಉತ್ತೀರ್ಣನಾದೆ. ದ್ರೌಪದೀಸಮೇತರಾಗಿ ನಿನ್ನ ಅನುಜರೆಲ್ಲರೂ ಮರಣಹೊಂದಿದ ಸಮಯದಲ್ಲಿ ನಾಯಿಯ ರೂಪವನ್ನು ಧರಿಸಿ ಎರಡನೆಯ ಬಾರಿಗೆ ನಿನ್ನನ್ನು ಪರೀಕ್ಷಿಸಿದೆನು. ಆಗಲೂ ನೀನು ಉತ್ತೀರ್ಣನಾದೆ. ಮೂರನೆಯ ಬಾರಿಗೆ ನಿನ್ನ ಪರೀಕ್ಷೆಯು ಈಗ ತಾನೇ ನಡೆಯಿತು. ನಿನ್ನ ಸಹೋದರರ ಸಲುವಾಗಿ ನೀನು ನರಕದಲ್ಲಿ ಇರಲೂ ಇಚ್ಛಿಸಿದೆ. ಮಹಾಭಾಗನೇ! ನೀನು ಶುದ್ಧನಾಗಿರುವೆ. ಪಾಪರಹಿತನಾಗಿರುವೆ. ಮುಂದೆ ನೀನು ಸುಖವಾಗಿರು. ನೀನು ಭಾವಿಸಿರುವಂತೆಯೇ ನಿನ್ನ ಸಹೋದರರು ನರಕದಲ್ಲಿರಲು ಖಂಡಿತವಾಗಿಯೂ ಅರ್ಹರಲ್ಲ. ದೇವರಾಜ ನಾದ ಮಹೇಂದ್ರನು ನಿನ್ನನ್ನು ಪರೀಕ್ಷಿಸುವ ಸಲುವಾಗಿ ಈ ಮಾಯೆಯನ್ನು (ದೃಶ್ಯವನ್ನು) ಕಲ್ಪಿಸಿದನು.

ಅವಶ್ಯಂ ನರಕಾಸ್ತಾತ ದ್ರಷ್ಟವ್ಯಾಃ ಸರ್ವರಾಜಭಿಃ ।
ತತಸ್ತ್ವಯಾ ಪ್ರಾಪ್ತಮಿದಂ ಮುಹೂರ್ತಂ ದುಃಖಮುತ್ತಮಮ್ ॥

ಮಗು! ಎಲ್ಲ ರಾಜರೂ ಅವಶ್ಯವಾಗಿ ನರಕಗಳನ್ನು ನೋಡಲೇಬೇಕು. ಆದುದರಿಂದ ನಿನಗೂ ಮುಹೂರ್ತಕಾಲ ನರಕದ ಈ ಮಹಾದುಃಖವು ಸಂಭವಿಸಿತು.

ನರೇಶ್ವರನೇ! ಸವ್ಯಸಾಚಿಯಾದ ಅರ್ಜುನನಾಗಲೀ, ಭೀಮಸೇನ ನಾಗಲೀ, ಪುರುಷಶ್ರೇಷ್ಠರಾದ ನಕುಲ-ಸಹದೇವರಾಗಲೀ, ಸತ್ಯವಾದಿಯಾದ ಮತ್ತು ಶೂರನಾದ ಕರ್ಣನಾಗಲೀ ಬಹಳ ಕಾಲದವರೆಗೆ ನರಕದಲ್ಲಿರುವು ದಿಲ್ಲ. ರಾಜಪುತ್ರಿಯಾದ ದ್ರೌಪದಿಯೂ ಯಾವುದೇ ಕಾರಣದಿಂದಲೂ ನರಕದಲ್ಲಿರುವುದಿಲ್ಲ. ಬಾ ಮಗು! ತ್ರಿಲೋಕಗಾಮಿನಿಯಾದ ಈ ಗಂಗಾನದಿ ಯನ್ನು ಸಂದರ್ಶಿಸು."

ಜನಮೇಜಯ! ಧರ್ಮಮೂರ್ತಿಯು ಹೀಗೆ ಹೇಳಿದನಂತರ ನಿನ್ನ

ಪೂರ್ವಪಿತಾಮಹನಾದ, ರಾಜರ್ಷಿಯಾದ ಯುಧಿಷ್ಠಿರನು ಧರ್ಮನೊಡನೆಯೂ–ಸ್ವರ್ಗನಿವಾಸಿಗಳಾದ ಸಮಸ್ತದೇವತೆಗಳೊಡನೆಯೂ ಋಷಿಗಳಿಂದ ಸಂಸ್ತುತಳಾದ, ಪವಿತ್ರಳಾದ, ದೇವನದಿಯಾದ ಆಕಾಶಗಂಗೆಯ ಬಳಿಗೆ ಹೋಗಿ ಪವಿತ್ರಗಂಗೆಯಲ್ಲಿ ಸ್ನಾನಮಾಡಿ ತನ್ನ ಮಾನುಷಶರೀರವನ್ನು ತ್ಯಾಗಮಾಡಿದನು. ಒಡನೆಯೇ ಯುಧಿಷ್ಠಿರನು ದಿವ್ಯಶರೀರವನ್ನು ಧರಿಸಿ ವೈರಭಾವದಿಂದ ರಹಿತನಾದನು. ಆಕಾಶಗಂಗೆಯ ಶೀತಲಜಲದಲ್ಲಿ ಸ್ನಾನ ಮಾಡಿದೊಡನೆಯೇ ಅವನ ಸಂತಾಪಗಳೆಲ್ಲವೂ ದೂರವಾದುವು.

ಅನಂತರ ಧೀಮಂತನಾದ ಯುಧಿಷ್ಠಿರನು ದೇವತೆಗಳಿಂದ ಸಮಾವೃತನಾಗಿ ಮಹರ್ಷಿಗಳಿಂದ ಸ್ತೋತ್ರಮಾಡಲ್ಪಡುತ್ತಾ ತಂದೆಯಾದ ಯಮಧರ್ಮನೊಡನೆ–ಪುರುಷಶ್ರೇಷ್ಠರಾದ, ಶೂರರಾದ ಪಾಂಡವ-ಕೌರವರು ಕ್ರೋಧರಹಿತರಾಗಿ ಆನಂದದಿಂದ ಯಾವ ಯಾವ ತಮ್ಮ ತಮ್ಮ ಸ್ಥಾನಗಳಲ್ಲಿದ್ದರೋ–ಆ ಸ್ಥಳಕ್ಕೆ ಹೋದನು.”

ಇನೆಯ ಅಧ್ಯಾಯವು ಮುಗಿಯಿತು.

ಳನೆಯ ಅಧ್ಯಾಯ ಸ್ವರ್ಗಾರೋಹಣಪರ್ವ (ಮುಂದುವರಿದಿದೆ.)

ಯುಧಿಷ್ಠಿರನು ದಿವ್ಯಲೋಕದಲ್ಲಿ ಕೃಷ್ಣಾರ್ಜುನಾದಿಗಳನ್ನು ಸಂದರ್ಶಿಸಿದುದು

ವೈಶಂಪಾಯನರು ಹೇಳುತ್ತಾರೆ :

ತತೋ ಯುಧಿಷ್ಠಿರೋ ರಾಜಾ ದೇವೈಃ ಸರ್ಷಿಮರುದ್ಗಣೈಃ ।
ಸ್ತೂಯಮಾನೋ ಯಯೌ ತತ್ರ ಯತ್ರ ತೇ ಕುರುಪುಙ್ಗವಾಃ ॥೧॥

ಜನಮೇಜಯ! ಯುಧಿಷ್ಠಿರರಾಜನು ದೇವತೆಗಳಿಂದಲೂ, ಋಷಿಗಳಿಂದಲೂ, ಮರುದ್ಗಣಗಳಿಂದಲೂ ಸ್ತೋತ್ರಮಾಡಲ್ಪಡುತ್ತಾ ಭೀಮಸೇನನೇ ಮೊದಲಾದ ಕುರುಶ್ರೇಷ್ಠರಿದ್ದೆಡೆಗೆ ತೆರಳಿದನು.

ಅಲ್ಲಿ ಯುಧಿಷ್ಠಿರನು ಬ್ರಾಹ್ಮಶರೀರದಿಂದ ಸಂಪನ್ನನಾಗಿದ್ದ ಶ್ರೀಕೃಷ್ಣನನ್ನು ನೋಡಿದನು. ಹಿಂದೆ ನೋಡಿದ್ದ ಸಾದೃಶ್ಯದಿಂದಲೇ ಶ್ರೀಕೃಷ್ಣನನ್ನು ಗುರುತಿಸಿದನು. ಆ ಸಮಯದಲ್ಲಿ ಶ್ರೀಕೃಷ್ಣನು ದೇದೀಪ್ಯಮಾನವಾದ ಶರೀರದಿಂದ ಬೆಳಗುತ್ತಿದ್ದನು. ಚಕ್ರವೇ ಮೊದಲಾದ ಭಯಂಕರವಾದ ದಿವ್ಯಾಸ್ತ್ರ

ಗಳೂ ಮತ್ತು ಶಸ್ತ್ರಗಳೂ ಪುರುಷಶರೀರಗಳನ್ನು ಧರಿಸಿ ಅವನ ಸೇವೆಯಲ್ಲಿ ನಿರತವಾಗಿದ್ದುವು. ಮಹಾತೇಜಸ್ವಿಯಾದ ಅರ್ಜುನನು ಶ್ರೀಕೃಷ್ಣನನ್ನು ಉಪಾಸನೆಮಾಡುತ್ತಿದ್ದನು. ಕುಂತಿಯ ಮಗನಾದ ಯುಧಿಷ್ಠಿರನು ಅಂತಹ ದಿವ್ಯಸ್ವರೂಪದಲ್ಲಿದ್ದ ಮಧುಸೂದನನನ್ನು ಸಂದರ್ಶಿಸಿದನು. ದೇವತೆಗಳಿಂದ ಪೂಜಿಸಲ್ಪಡುತ್ತಿದ್ದ ಕೃಷ್ಣಾರ್ಜುನರು ಯುಧಿಷ್ಠಿರನನ್ನು ನೋಡಿದೊಡನೆಯೇ ಯಥಾವತ್ತಾಗಿ ಅವನನ್ನು ಸಮ್ಮಾನಿಸಿದರು.

ಅಪರಸ್ಮಿನ್ನಥೋದ್ದೇಶೇ ಕರ್ಣಂ ಶಸ್ತ್ರಭೃತಾಂ ವರಮ್ ।
ದ್ವಾದಶಾದಿತ್ಯಸಹಿತಂ ದದರ್ಶ ಕುರುನನ್ದನಃ ॥೬॥

ಮತ್ತೊಂದು ಕಡೆಯಲ್ಲಿ ಕುರುವಂಶಜನಾದ ಯುಧಿಷ್ಠಿರನು ಹನ್ನೆರಡು ಮಂದಿ ಆದಿತ್ಯರೊಡನಿದ್ದ, ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಕರ್ಣನನ್ನು ನೋಡಿದನು.

ಅಥಾಪರಸ್ಮಿನ್ನುದ್ದೇಶೇ ಮರುದ್ಗಣವೃತಂ ವಿಭುಮ್ ।
ಭೀಮಸೇನಮಥಾಪಶ್ಯತ್ತೇನೈವ ವಪುಷಾನ್ವಿತಮ್ ॥೭॥

ವಾಯೋರ್ಮೂರ್ತಿಮತಃ ಪಾರ್ಶ್ವೇ ದಿವ್ಯಮೂರ್ತಿಸಮನ್ವಿತಮ್ ।
ಶ್ರಿಯಾ ಪರಮಯಾ ಯುಕ್ತಂ ಸಿದ್ಧಿಂ ಪರಮಿಕಾಂ ಗತಮ್ ॥೮॥

ಮತ್ತೊಂದು ಸ್ಥಾನದಲ್ಲಿ ಮರುದ್ಗಣಗಳಿಂದ ಸಮಾವೃತನಾಗಿ, ಹಿಂದಿನ (ಮರುದ್ಗಣಗಳ) ಶರೀರದಿಂದಲೇ ವಿರಾಜಿಸುತ್ತಾ, ಮೂರ್ತಿಮತ್ತಾಗಿ ಕುಳಿತಿದ್ದ, ವಾಯುದೇವನ ಪಾರ್ಶ್ವದಲ್ಲಿ ಉಪಸ್ಥಿತನಾಗಿದ್ದ ದಿವ್ಯವಾದ ಶರೀರದಿಂದ ಕಂಗೊಳಿಸುತ್ತಿದ್ದ, ಅಪಾರವಾದ ಕಾಂತಿಯಿಂದ ಯುಕ್ತನಾಗಿದ್ದ, ಪರಮೋತ್ಕೃಷ್ಟವಾದ ಸಿದ್ಧಿಯನ್ನು ಹೊಂದಿದ್ದ ಭೀಮಸೇನನನ್ನು ನೋಡಿದನು.

ಅಶ್ವಿನೋಸ್ತು ತಥಾ ಸ್ಥಾನೇ ದೀಪ್ಯಮಾನೌ ಸ್ವತೇಜಸಾ ।
ನಕುಲಂ ಸಹದೇವಂ ಚ ದದರ್ಶ ಕುರುನನ್ದನಃ ॥೯॥

ಬಳಿಕ ಕುರುನಂದನನಾದ ಯುಧಿಷ್ಠಿರನು ಅಶ್ವಿನೀದೇವತೆಗಳ ಸ್ಥಾನದಲ್ಲಿ ಕುಳಿತಿದ್ದ ತಮ್ಮ ತೇಜಸ್ಸಿನಿಂದ ದೇದೀಪ್ಯಮಾನರಾಗಿ ಬೆಳಗುತ್ತಿದ್ದ ನಕುಲ-ಸಹದೇವರನ್ನು ನೋಡಿದನು.

ತಥಾ ದದರ್ಶ ಪಾಞ್ಚಾಲೀಂ ಕಮಲೋತ್ಪಲಮಾಲಿನೀಮ್ ।
ವಪುಷಾ ಸ್ವರ್ಗಮಾಕ್ರಮ್ಯ ತಿಷ್ಠನ್ತೀಮರ್ಕವರ್ಚಸಮ್ ॥೧೦॥

ಅದೇ ರೀತಿಯಲ್ಲಿ ಯುಧಿಷ್ಠಿರನು ಕಮಲೋತ್ಪಲಗಳ ಮಾಲೆಯಿಂದ ಅಲಂಕೃತಳಾಗಿದ್ದ, ತನ್ನ ಶರೀರದ ಕಾಂತಿಯಿಂದ ಸ್ವರ್ಗವನ್ನೇ ಆಕ್ರಮಿಸಿದ್ದ, ಸೂರ್ಯದೇವನಂತೆ ಕಾಂತಿಯುಕ್ತಳಾಗಿದ್ದ ದ್ರೌಪದಿಯನ್ನು ನೋಡಿದನು.

ಆ ಸಮಯದಲ್ಲಿ ಯುಧಿಷ್ಠಿರನು ಅವರೆಲ್ಲರ ವಿಷಯವಾಗಿಯೂ ಪ್ರಶ್ನಿಸಲು ಬಯಸಿದನು. ಅವನ ಇಂಗಿತವನ್ನರಿತ ದೇವರಾಜನಾದ ಇಂದ್ರನು ತಾನಾಗಿಯೇ ಯುಧಿಷ್ಠಿರನ ಮನಸ್ಸಿನಲ್ಲಿದ್ದ ಎಲ್ಲ ಪ್ರಶ್ನೆಗಳಿಗೂ ಉತ್ತರವನ್ನು ಹೇಳಿದನು :

ಶ್ರೀರೇಷಾ ದ್ರೌಪದೀರೂಪಾ ತ್ವದರ್ಥೇ ಮಾನುಷಂ ಗತಾ ।
ಅಯೋನಿಜಾ ಲೋಕಕಾನ್ತಾ ಪುಣ್ಯಗನ್ಧಾ ಯುಧಿಷ್ಠಿರ ॥೧೨॥

"ಯುಧಿಷ್ಠಿರ! ಲೋಕದಲ್ಲಿಯೇ ಕಮನೀಯರೂಪಳಾದ, ಪುಣ್ಯ ಗಂಧವನ್ನು ಹೊರಸೂಸುತ್ತಿರುವ, ದ್ರೌಪದಿಯ ರೂಪದಲ್ಲಿರುವ ಇವಳು ಸಾಕ್ಷಾತ್ ಸ್ವರ್ಗಲಕ್ಷ್ಮಿಯೇ ಆಗಿದ್ದಾಳೆ. ನಿನ್ನ ಸಲುವಾಗಿ ಇವಳು ಭೂಮಿಯಲ್ಲಿ ಅಯೋನಿಜೆಯಾಗಿ ಅಗ್ನಿಯಲ್ಲಿ ಹುಟ್ಟಿದ್ದಳು.

ರತ್ಯರ್ಥಂ ಭವತಾಂ ಹ್ಯೇಷಾ ನಿರ್ಮಿತಾ ಶೂಲಪಾಣಿನಾ ।
ದ್ರುಪದಸ್ಯ ಕುಲೇ ಜಾತಾ ಭವದ್ಭಿಶ್ಚೋಪಜೀವಿತಾ ॥೧೩॥

ನಿಮ್ಮೆಲ್ಲರ ಸಂತೋಷಾರ್ಥವಾಗಿ ಇವಳನ್ನು ಶೂಲಪಾಣಿಯಾದ ಶಂಕರನೇ ನಿರ್ಮಿಸಿದ್ದನು. ದ್ರುಪದನ ಕುಲದಲ್ಲಿ ಹುಟ್ಟಿದ ಇವಳು ನಿಮ್ಮೈವ ರಿಂದಲೂ ಆಶ್ರಯಿಸಲ್ಪಟ್ಟಳು.

ಏತೇ ಪಞ್ಚ ಮಹಾಭಾಗಾ ಗನ್ಧರ್ವಾಃ ಪಾವಕಪ್ರಭಾಃ ।
ದ್ರೌಪದ್ಯಾಸ್ತನಯಾ ರಾಜನ್ಯುಷ್ಮಾಕಮಮಿತೌಜಸಃ ॥೧೪॥

ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿರುವ ಮಹಾ ಭಾಗ್ಯಶಾಲಿಗಳಾದ ಈ ಐವರು ಗಂಧರ್ವರೇ ದ್ರೌಪದಿಯ ಮತ್ತು ನಿಮ್ಮ ಮಹಾತೇಜಸ್ವಿಗಳಾದ ಮಕ್ಕಳಾಗಿ ಹುಟ್ಟಿದ್ದರು.

ಪಶ್ಯ ಗನ್ಧರ್ವರಾಜಾನಂ ಧೃತರಾಷ್ಟ್ರಂ ಮನೀಷಿಣಮ್ ।
ಏನಂ ಚ ತ್ವಂ ವಿಜಾನೀಹಿ ಭ್ರಾತರಂ ಪೂರ್ವಜಂ ಪಿತುಃ ॥೧೫॥

ವಿದ್ವಾಂಸನಾದ ಗಂಧರ್ವರಾಜನಾದ ಈ ಧೃತರಾಷ್ಟ್ರನನ್ನು ನೋಡು. ಇವನೇ ನಿನ್ನ ತಂದೆಯ ಅಣ್ಣನಾದ ಧೃತರಾಷ್ಟ್ರನಾಗಿ ಭೂಮಿಯಲ್ಲಿ ಅವತರಿಸಿದ್ದನೆಂದು ತಿಳಿ.

ಅಯಂ ತೇ ಪೂರ್ವಜೋ ಭ್ರಾತಾ ಕೌನ್ತೇಯಃ ಪಾವಕದ್ಯುತಿಃ ।
ಸೂತಪುತ್ರಾಗ್ರಜಃ ಶ್ರೇಷ್ಠೋ ರಾಧೇಯ ಇತಿ ವಿಶ್ರುತಃ ।
ಆದಿತ್ಯಸಹಿತೋ ಯಾತಿ ಪಶ್ಯೈನಂ ಪುರುಷರ್ಷಭಮ್ ॥೧೬॥

ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಬೆಳಗುತ್ತಿರುವ ಕುಂತಿಯ ಮಗನಾದ ಇವನು ನಿನಗಿಂತಲೂ ಮೊದಲು ಹುಟ್ಟಿದ ನಿನ್ನ ಅಣ್ಣನು. ಸೂತನ ಮಕ್ಕಳಲ್ಲಿಯೂ ಇವನೇ ಅಗ್ರಜನು. ಶ್ರೇಷ್ಠನಾದ ಈ ಕರ್ಣನು ರಾಧೇಯ ಎಂಬ ಹೆಸರಿನಿಂದಲೂ ಪ್ರಸಿದ್ಧನಾಗಿದ್ದನು. ಇವನೀಗ ಆದಿತ್ಯರೊಡನೆ ಹೋಗುತ್ತಿದ್ದಾನೆ. ಯುಧಿಷ್ಠಿರ! ಪುರುಷಶ್ರೇಷ್ಠನಾದ ಇವನನ್ನು ನೋಡು.

ಸಾಧ್ಯಾನಾಮಥ ದೇವಾನಾಂ ವಿಶ್ವೇಷಾಂ ಮರುತಾಮಪಿ ॥೧೭॥
ಗಣೇಷು ಪಶ್ಯ ರಾಜೇನ್ದ್ರ ವೃಷ್ಣ್ಯನ್ಧಕಮಹಾರಥಾನ್ ।
ಸಾತ್ಯಕಿಪ್ರಮುಖಾನ್ವೀರಾನ್ಭೋಜಾಂಶ್ಚೈವ ಮಹಾಬಲಾನ್ ॥೧೮॥

ರಾಜೇಂದ್ರನೇ! ಅತ್ತಕಡೆ ಇರುವ ವೃಷ್ಣ್ಯಂಧಕಕುಲಗಳ ಸಾತ್ಯಕಿಯೇ ಮೊದಲಾದ ಮಹಾರಥಿಗಳನ್ನೂ, ಮಹಾಬಲಶಾಲಿಗಳಾದ ಭೋಜರನ್ನೂ ನೋಡು. ಅವರೆಲ್ಲರೂ ಸಾಧ್ಯರಲ್ಲಿಯೂ, ವಿಶ್ವೇದೇವತೆಗಳಲ್ಲಿಯೂ ಮರುದ್ಗಣಗಳಲ್ಲಿಯೂ ವಿರಾಜಮಾನರಾಗಿದ್ದಾರೆ.

ಸೋಮೇನ ಸಹಿತಂ ಪಶ್ಯ ಸೌಭದ್ರಮಪರಾಜಿತಮ್ ।
ಅಭಿಮನ್ಯುಂ ಮಹೇಷ್ವಾಸಂ ನಿಶಾಕರಸಮದ್ಯುತಿಮ್ ॥೧೯॥

ಅಪರಿಚಿತನಾದ, ಮಹಾಧನುಷ್ಮಂತನಾದ, ಚಂದ್ರನ ಕಾಂತಿಗೆ ಸಮಾನವಾದ ಕಾಂತಿಯಿಂದ ಬೆಳಗುತ್ತಿರುವ ಚಂದ್ರನೊಡನಿರುವ ಸುಭದ್ರಾದೇವಿಯ ಮಗನಾದ ಅಭಿಮನ್ಯುವನ್ನು ನೋಡು.

ಏಷ ಪಾಣ್ಡುರ್ಮಹೇಷ್ವಾಸಃ ಕುನ್ತ್ಯಾ ಮಾದ್ರ್ಯಾ ಚ ಸಂಗತಃ ।
ವಿಮಾನೇನ ಸತಾಭ್ಯೇತಿ ಪಿತಾ ತವ ಮಮಾನ್ತಿಕಮ್ ॥೨೦॥

ಮಹಾಧನುಷ್ಮಂತನಾದ ಪಾಂಡುವು ಈಗ ಕುಂತೀ ಮತ್ತು ಮಾದ್ರೀ ಈ ಇಬ್ಬರು ಪತ್ನಿಯರೊಡನೆ ಸೇರಿದ್ದಾನೆ. ಇವನು ಯಾವಾಗಲೂ ವಿಮಾನದಲ್ಲಿ ಕುಳಿತು ನನ್ನ ಸಮೀಪಕ್ಕೆ ಬರುತ್ತಿರುತ್ತಾನೆ.

ವಸುಭಿಃ ಸಹಿತಂ ಪಶ್ಯ ಭೀಷ್ಮಂ ಶಾನ್ತನವಂ ನೃಪಮ್ ।
ದ್ರೋಣಂ ಬೃಹಸ್ಪತೇಃ ಪಾರ್ಶ್ವೇ ಗುರುಮೇನಂ ನಿಶಾಮಯ ॥೨೧॥

ಯುಧಿಷ್ಠಿರ! ಶಂತನುವಿನ ಪುತ್ರನಾದ ಭೀಷ್ಮರಾಜನು ವಸುಗಳೊಡನಿರುವುದನ್ನು ನೋಡು. ನಿನ್ನ ಗುರುಗಳಾದ ದ್ರೋಣರು ಬೃಹಸ್ಪತಿಯ ಪಕ್ಕದಲ್ಲಿ ಕುಳಿತಿರುವುದನ್ನು ನೋಡು.

ಪಾಂಡವ! ಇವರೂ ಮತ್ತು ಇತರ ರಾಜರೂ, ನಿನ್ನ ಕಡೆಯ ಯೋಧರೂ ಗಂಧರ್ವರೊಡನೆಯೂ ಯಕ್ಷರೊಡನೆಯೂ ಪುಣ್ಯಜನರೊಡನೆಯೂ ಹೋಗುತ್ತಿದ್ದಾರೆ. ಕೆಲವು ರಾಜರು ಗುಹ್ಯಕರ ಪದವಿಯನ್ನು ಹೊಂದಿದ್ದಾರೆ. ಇವರೆಲ್ಲರೂ ಪವಿತ್ರವಾದ ವಾಣಿಯಿಂದಲೂ, ಬುದ್ಧಿಯಿಂದಲೂ, ಕರ್ಮಗಳಿಂದಲೂ ಸ್ವರ್ಗವನ್ನು ಜಯಿಸಿ ಯುದ್ಧದಲ್ಲಿ ಶರೀರಗಳನ್ನು ತ್ಯಾಗಮಾಡಿ ಪುಣ್ಯಲೋಕಗಳನ್ನು ಹೊಂದಿರುತ್ತಾರೆ."

ಳನೆಯ ಅಧ್ಯಾಯವು ಮುಗಿಯಿತು.

ಜನೆಯ ಅಧ್ಯಾಯ ಸ್ವರ್ಗಾರೋಹಣಪರ್ವ (ಮುಂದುವರಿದಿದೆ.)

ಭೀಷ್ಮಾದಿಗಳು ತಮ್ಮ-ತಮ್ಮ ಮೂಲಸ್ವರೂಪದಲ್ಲಿ ಐಕ್ಯರಾದುದು : ಮಹಾಭಾರತದ ಉಪಸಂಹಾರ ಮತ್ತು ಮಹಿಮೆ

ಜನಮೇಜಯನು ಹೇಳುತ್ತಾನೆ :

ಭೀಷ್ಮದ್ರೋಣೌ ಮಹಾತ್ಮಾನೌ ಧೃತರಾಷ್ಟ್ರಶ್ಚ ಪಾರ್ಥಿವಃ ।
ವಿರಾಟದ್ರುಪದೌ ಚೋಭೌ ಶಙ್ಖಶ್ಚೈವೋತ್ತರಸ್ತಥಾ ॥೧॥

ಧೃಷ್ಟಕೇತುರ್ಜಯತ್ಸೇನೋ ರಾಜಾ ಚೈವ ಚ ಸತ್ಯಜಿತ್ ।
ದುರ್ಯೋಧನಸುತಾಶ್ಚೈವ ಶಕುನಿಶ್ಚೈವ ಸೌಬಲಃ ॥೨॥

ಕರ್ಣಪುತ್ರಾಶ್ಚ ವಿಕ್ರಾನ್ತಾ ರಾಜಾ ಚೈವ ಜಯದ್ರಥಃ ।
ಘಟೋತ್ಕಚಾದಯಶ್ಚೈವ ಯೇ ಚಾನ್ಯೇ ನಾನುಕೀರ್ತಿತಾಃ ॥೩॥

ಯೇ ಚಾನ್ಯೇ ಕೀರ್ತಿತಾ ವೀರಾ ರಾಜಾನೋ ದೀಪ್ತಮೂರ್ತಯಃ ।
ಸ್ವರ್ಗೇ ಕಾಲಂ ಕಿಯನ್ತಂ ತೇ ತಸ್ಥುಸ್ತದಪಿ ಶಂಸ ಮೇ ॥೪॥

"ವೈಶಂಪಾಯನರೇ! ಮಹಾತ್ಮರಾದ ಭೀಷ್ಮ-ದ್ರೋಣರು, ಧೃತ ರಾಷ್ಟ್ರರಾಜ, ವಿರಾಟ, ದ್ರುಪದ, ಶಂಖ, ಉತ್ತರ, ಧೃಷ್ಟಕೇತು, ಜಯತ್ಸೇನ, ಸತ್ಯಜಿದ್ರಾಜ, ದುರ್ಯೋಧನನ ಮಕ್ಕಳು, ಸುಬಲನ ಮಗನಾದ ಶಕುನಿ, ಕರ್ಣನ ಮಹಾಪರಾಕ್ರಮಿಗಳಾದ ಮಕ್ಕಳು, ಜಯದ್ರಥರಾಜ, ಘಟೋ ತ್ಕಚನೇ ಮೊದಲಾದವರು, ಹಾಗೂ ಇಲ್ಲಿ ಹೇಳದಿರುವ ಮತ್ತು ಹೇಳಿರುವ ದೀಪ್ತಿಮಂತರಾದ ಮತ್ತು ವೀರರಾದ ಇತರ ರಾಜರು ಎಷ್ಟು ಕಾಲದವರೆಗೆ ಸ್ವರ್ಗದಲ್ಲಿದ್ದರು? ಈ ವಿಷಯವನ್ನೂ ನನಗೆ ದಯಮಾಡಿ ಹೇಳಿರಿ.

ದ್ವಿಜಸತ್ತಮರೇ! ಅವರಿಗೇನಾದರೂ ಸ್ವರ್ಗದಲ್ಲಿ ಶಾಶ್ವತವಾದ ಸ್ಥಾನ ವಿದ್ದಿತೇ? ಪೂರ್ಣಫಲವು ಮುಗಿಯುವವರೆಗೂ ಅವರು ಅಲ್ಲಿದ್ದು ಅನಂತರ ಅಲ್ಲಿಂದ ಚ್ಯುತರಾದರೇ? ಮುಂದೆ ಅವರು ಯಾವ ಗತಿಯನ್ನು ಹೊಂದಿದರು? ನಾನು ನಿಮ್ಮಿಂದ ಈ ವಿಷಯವನ್ನು ಕೇಳಿ ತಿಳಿಯಬೇಕೆಂದಿರುವೆನು. ಉಜ್ಜ್ವಲವಾದ ತಪಶ್ಚರಣೆಯಿಂದ ತಾವು ಎಲ್ಲವನ್ನೂ ನೋಡಲು ಸಮರ್ಥರಾಗಿರುವಿರಿ."

ಸೌತಿಗಳು ಹೇಳುತ್ತಾರೆ :

ಶೌನಕರೇ! ಜನಮೇಜಯನು ಹೀಗೆ ಪ್ರಶ್ನಿಸಲು ವೈಶಂಪಾಯನರು ಮಹಾತ್ಮರಾದ ವ್ಯಾಸರ ಅನುಮತಿಯನ್ನು ಪಡೆದು ರಾಜನಿಗೆ ವಿಷಯವನ್ನು ಹೇಳಲು ಉಪಕ್ರಮಿಸಿದರು.

ನ ಶಕ್ಯಂ ಕರ್ಮಣಾಮನ್ತೇ ಸರ್ವೇಣ ಮನುಜಾಧಿಪ ।
ಪ್ರಕೃತಿಂ ಕಿಂ ನು ಸಮ್ಯಕ್ತೇ ಪೃಚ್ಛೈಷಾ ಸಮ್ಪ್ರಯೋಜಿತಾ ॥೮॥

"ಮನುಜಾಧಿಪನೇ! ಜನಮೇಜಯ! ಕರ್ಮಗಳ ಉಪಭೋಗವು ಮುಗಿದನಂತರ ಎಲ್ಲರೂ ಮೂಲಸ್ವರೂಪವನ್ನು ಸೇರಲು ಸಾಧ್ಯವಿಲ್ಲ.

ಆದರೆ ನಿನ್ನ ಪ್ರಶ್ನೆಯು ಅಸಂಗತವೇ? ಎಂದರೆ–ಖಂಡಿತವಾಗಿಯೂ ಅಸಂಗತವಲ್ಲ. ನೀನು ಕೇಳಿರುವ ಪ್ರಶ್ನೆಯು ಸಮೀಚೀನವಾಗಿಯೇ ಇದೆ.

ಭರತರ್ಷಭನೇ! ಇದು ದೇವರಹಸ್ಯವಾಗಿದೆ. ಈ ವಿಷಯದಲ್ಲಿ ದಿವ್ಯಚಕ್ಷುಗಳಾದ, ಪ್ರತಾಪವಂತರಾದ, ಮಹಾತೇಜಸ್ವಿಗಳಾದ ವ್ಯಾಸರು ಏನು ಹೇಳಿದರೆಂಬುದನ್ನು ಕೇಳು.

ಮುನಿಗಳಾದ, ಪುರಾಣಪುರುಷರಾದ, ಪರಾಶರರ ಮಕ್ಕಳಾದ, ಮಹಾವ್ರತರಾದ, ಮಹಾಬುದ್ಧಿಶಾಲಿಗಳಾದ, ಸರ್ವಜ್ಞರಾದ, ಸರ್ವಕರ್ಮಗಳ ಗತಿಗಳನ್ನೂ ತಿಳಿದಿರುವ ವ್ಯಾಸರು–ಕರ್ಮಭೋಗದ ಕಡೆಯಲ್ಲಿ ಅವರೆಲ್ಲರೂ ತಮ್ಮ ಮೂಲಸ್ವರೂಪವನ್ನೇ ಸೇರುವರೆಂದು ತಿಳಿಸಿದರು. ಅದರಂತೆ ಮಹಾತೇಜಸ್ವಿಯಾದ, ಮಹಾದ್ಯುತಿಯಾದ ಭೀಷ್ಮನು ವಸುಗಳಲ್ಲಿ ಸೇರಿಹೋದನು. ವಸುಗಳು ಎಂಟು ಮಂದಿಯೇ ಕಂಡುಬರುತ್ತಾರೆ. ಹಾಗೆಯೇ ದ್ರೋಣರು ಅಂಗಿರಸರಲ್ಲಿ ಶ್ರೇಷ್ಠನಾದ ಬೃಹಸ್ಪತಿಯಲ್ಲಿ ಸೇರಿಕೊಂಡರು. ಹಾರ್ದಿಕ್ಯನಾದ ಕೃತವರ್ಮನು ಮರುದ್ಗಣಗಳಲ್ಲಿ ಸೇರಿಹೋದನು. ಪ್ರದ್ಯುಮ್ನನು ಸನತ್ಕುಮಾರನಲ್ಲಿ ಸೇರಿಹೋದನು. ಧೃತರಾಷ್ಟ್ರನು ಧನಾಧ್ಯಕ್ಷನಾದ ಕುಬೇರನ ದುರ್ಲಭವಾದ ಲೋಕಗಳನ್ನು ಪಡೆದುಕೊಂಡನು. ಧೃತರಾಷ್ಟ್ರನೊಡನೆ ಗಾಂಧಾರಿಯೂ ಕುಬೇರನ ಉತ್ತಮಲೋಕಗಳನ್ನು ಪಡೆದುಕೊಂಡಳು. ಪತ್ನಿಯರಿಂದ ಒಡಗೂಡಿದ ಪಾಂಡುವು ಮಹೇಂದ್ರನ ಅರಮನೆಗೆ ಹೋದನು. ವಿರಾಟ, ದ್ರುಪದ, ರಾಜನಾದ ಧೃಷ್ಟಕೇತು, ನಿಶಠ, ಅಕ್ರೂರ, ಸಾಂಬ, ಭಾನು, ಕಂಪ, ವಿದೂರಥ, ಭೂರಿಶ್ರವಸ, ಶಲ, ಪೃಥಿವೀಪತಿಯಾದ ಭೂರಿ, ಕಂಸ, ಉಗ್ರಸೇನ, ವಸುದೇವ, ಅಣ್ಣನಾದ ಶಂಖನಿಂದ ಕೂಡಿದ ಉತ್ತರ–ಈ ಎಲ್ಲ ನರಶ್ರೇಷ್ಠರೂ ವಿಶ್ವೇದೇವತೆಗಳಲ್ಲಿ ಸೇರಿಕೊಂಡರು.

ಸೋಮನಿಗೆ (ಚಂದ್ರನಿಗೆ) ಪ್ರತಾಪವಂತನೂ ಮಹಾತೇಜಸ್ವಿಯೂ ಆದ ವರ್ಚಸನೆಂಬ ಮಗನಿದ್ದನು. ಅವನೇ ನರಶ್ರೇಷ್ಠನಾದ ಅರ್ಜುನನಿಗೆ ಅಭಿಮನ್ಯುವೆಂಬ ಹೆಸರಿನಿಂದ ಮಗನಾಗಿ ಹುಟ್ಟಿದ್ದನು. ಅವನು ಬೇರೆ ಯಾವನೊಬ್ಬ ವೀರನೂ ಯುದ್ಧಮಾಡಲೂ ಸಾದ್ಯವಾಗದ ರೀತಿಯಲ್ಲಿ ಅಮೋಘವಾಗಿ, ಅನುಪಮವಾಗಿ, ಕ್ಷತ್ರಧರ್ಮಾನುಸಾರವಾಗಿ ಯುದ್ಧ

ಮಾಡುತ್ತಾ ಹತನಾಗಿ ಸ್ವರ್ಗಕ್ಕೆ ಹೋದನು. ಧರ್ಮಾತ್ಮನಾದ ಮತ್ತು ಮಹಾರಥನಾದ ಅಭಿಮನ್ಯುವು ಇಲ್ಲಿ ತನ್ನ ಕಾರ್ಯವನ್ನು ಮುಗಿಸಿ ಸೋಮನಲ್ಲಿ ವಿಲೀನನಾದನು. ಪುರುಷಶ್ರೇಷ್ಠನಾದ ಕರ್ಣನು ಅರ್ಜುನನಿಂದ ಹತನಾಗಿ ರವಿಯಲ್ಲಿ ಸೇರಿಹೋದನು. ಶಕುನಿಯು ದ್ವಾಪರನಲ್ಲಿಯೂ ಧೃಷ್ಟದ್ಯುಮ್ನನು ಅಗ್ನಿಯಲ್ಲಿಯೂ ಸೇರಿಹೋದರು. ಧೃತರಾಷ್ಟ್ರನ ಎಲ್ಲ ಮಕ್ಕಳೂ ಮೊದಲು ಬಲೋನ್ಮತ್ತರಾದ ರಾಕ್ಷಸರಾಗಿದ್ದರು. ಸಮೃದ್ಧಶಾಲಿಗಳಾದ ಮಹಾತ್ಮರಾದ ಅವರೆಲ್ಲರೂ ಧೃತರಾಷ್ಟ್ರನ ಮಕ್ಕಳಾಗಿ ಹುಟ್ಟಿ ಶಸ್ತ್ರಗಳ ಆಘಾತದಿಂದ ಪವಿತ್ರರಾಗಿ (ಶಸ್ತ್ರಗಳ ಮೂಲಕವಾಗಿ ಪ್ರಾಣಗಳನ್ನು ತೊರೆದು) ಸ್ವರ್ಗಕ್ಕೆ ಹೋದರು. ವಿದುರನೂ ಮತ್ತು ಯುಧಿಷ್ಠಿರನೂ ಯಮಧರ್ಮನಲ್ಲಿಯೇ ಐಕ್ಯವಾದರು. ಪೂಜ್ಯನಾದ ಅನಂತನು ಬಲರಾಮನಾಗಿ ಅವತರಿಸಿದ್ದನು. ತನ್ನ ಕಾರ್ಯವು ಮುಗಿದನಂತರ ರಸಾತಲವನ್ನು ಪ್ರವೇಶಿಸಿದನು. ಅಲ್ಲಿ ಪಿತಾಮಹನ ಆದೇಶದಂತೆ ಭೂಮಿಯನ್ನು ತನ್ನ ತಲೆಯಲ್ಲಿ ಧರಿಸಿಕೊಂಡಿರುವನು. ದೇವದೇವನಾದ, ಸನಾತನನಾದ ಶ್ರೀಮನ್ನಾರಾಯಣನ ಆದೇಶದಿಂದಲೇ ಶ್ರೀಕೃಷ್ಣನು ಜನಿಸಿದ್ದನು. ಅವತಾರದ ಕಾರ್ಯವು ಪೂರ್ಣವಾದನಂತರ ಅವನು ನಾರಾಯಣನಲ್ಲಿಯೇ ಪ್ರವೇಶಿಸಿದನು. ವಾಸುದೇವನ ಪತ್ನಿಯರಾದ ಹದಿನಾರು ಸಾವಿರ ಸ್ತ್ರೀಯರೂ ಕಾಲವು ಸನ್ನಿಹಿತವಾದೊಡನೆಯೇ ಸರಸ್ವತೀನದಿಯಲ್ಲಿ ಮುಳುಗಿ ದೇಹಗಳನ್ನು ತ್ಯಜಿಸಿ ಪುನಃ ಸ್ವರ್ಗಲೋಕಕ್ಕೆ ಹೋದರು. ಅಲ್ಲವರು ಅಪ್ಸರೆಯರಾಗಿ ಜನ್ಮವನ್ನು ತಾಳಿ ಶ್ರೀಕೃಷ್ಣನ ಸೇವೆಯಲ್ಲಿಯೇ ಉಪಸ್ಥಿತರಾಗಿರುವರು. ಮಹಾಯುದ್ಧದಲ್ಲಿ ಹತರಾದ, ವೀರರಾದ, ಮಹಾರಥರಾದ ಘಟೋತ್ಕಚಾದಿಗಳು ದೇವತೆಗಳ ಮತ್ತು ಯಕ್ಷರ ಲೋಕಗಳಿಗೆ ಹೋದರು. ದುರ್ಯೋಧನನ ಸಹಾಯಕರೆಲ್ಲರೂ ಸಾಮಾನ್ಯವಾಗಿ ರಾಕ್ಷಸರೇ ಆಗಿದ್ದರು. ಅವರೆಲ್ಲರೂ ಉತ್ತಮವಾದ ಲೋಕಗಳನ್ನೇ ಸೇರಿದರು. ಪುರುಷಶ್ರೇಷ್ಠರಾದ ಅವರೆಲ್ಲರೂ ಅನುಕ್ರಮವಾಗಿ ಮಹೇಂದ್ರ, ಧೀಮಂತನಾದ ಕುಬೇರ, ವರುಣ–ಇವರ ಲೋಕಗಳಿಗೆ ಹೋದರು.

ಜನಮೇಜಯ! ಮಹಾದ್ಯುತಿಮಂತನೇ! ಹೀಗೆ ನಾನು ನಿನಗೆ ಕೌರ

ವರ ಮತ್ತು ಪಾಂಡವರ ಚರಿತ್ರೆಯನ್ನು ಸಮಗ್ರವಾಗಿ ವಿಸ್ತಾರವಾಗಿ ಹೇಳಿರುವೆನು."

ಸೌತಿಗಳು ಹೇಳುತ್ತಾರೆ :

ಜನಮೇಜಯರಾಜನೂ ಮತ್ತು ಅಲ್ಲಿದ್ದ ದ್ವಿಜಶ್ರೇಷ್ಠರೂ ಕೌರವ-ಪಾಂಡವರ ಅದ್ಭುತವಾದ ಈ ಚರಿತ್ರೆಯನ್ನು ಯಜ್ಞಕರ್ಮದ ಬಿಡುವಿನ ಸಮಯಗಳಲ್ಲಿ ಕೇಳಿ ವಿಸ್ಮಿತರಾದರು. ಅನಂತರ ಯಾಜಕರು (ಪುರೋಹಿತರು) ಸರ್ಪಯಾಗವನ್ನು ಪರಿಸಮಾಪ್ತಿಗೊಳಿಸಿದರು. ಆಸ್ತೀಕಮಹಾಮುನಿಯೂ ಸರ್ಪಗಳ ಪ್ರಾಣಸಂಕಟವನ್ನು ತಪ್ಪಿಸಿ ಪರಮಪ್ರೀತನಾದನು. ಜನಮೇಜಯರಾಜನು ಯಜ್ಞಕರ್ಮಕ್ಕಾಗಿ ಆಗಮಿಸಿದ್ದ ಎಲ್ಲ ಬ್ರಾಹ್ಮಣರನ್ನೂ ಪರ್ಯಾಪ್ತವಾದ ದಕ್ಷಿಣೆಗಳಿಂದ ಸಂತೋಷಗೊಳಿಸಿದನು. ರಾಜನಿಂದ ಯಥೋಚಿತವಾದ ಸಮ್ಮಾನಗಳನ್ನು ಪಡೆದು ಬ್ರಾಹ್ಮಣರೆಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಜನಮೇಜಯನು ಹೀಗೆ ಬ್ರಾಹ್ಮಣರೆಲ್ಲರನ್ನೂ ಅವರವರ ಗ್ರಾಮಗಳಿಗೆ ಕಳುಹಿಸಿಕೊಟ್ಟು ತಕ್ಷಶಿಲೆಯಿಂದ ಹಸ್ತಿನಾಪುರಕ್ಕೆ ಹಿಂದಿರುಗಿದನು.

ಶೌನಕರೇ! ಹೀಗೆ ನಾನು ನಿಮಗೆ ಜನಮೇಜಯನ ಸರ್ಪಯಾಗದ ಸಮಯದಲ್ಲಿ ವ್ಯಾಸರ ಅನುಮತಿಯನ್ನು ಪಡೆದು ವೈಶಂಪಾಯನರು ಜನಮೇಜಯನಿಗೆ ಹೇಳಿದ ಸಮಗ್ರವಾದ ಇತಿಹಾಸವನ್ನು ಹೇಳಿರುವೆನು.

ಪುಣ್ಯೋಽಯಮಿತಿಹಾಸಾಖ್ಯಃ ಪವಿತ್ರಂ ಚೇದಮುತ್ತಮಮ್ ।
ಕೃಷ್ಣೇನ ಮುನಿನಾ ವಿಪ್ರ ನಿರ್ಮಿತಂ ಸತ್ಯವಾದಿನಾ ॥೩೬॥

ಸತ್ಯವಾದಿಗಳಾದ ವ್ಯಾಸಮಹರ್ಷಿಗಳಿಂದ ಪ್ರಣೀತವಾದ ಪುಣ್ಯಮಯವಾದ ಈ ಇತಿಹಾಸವು ಪರಮಪವಿತ್ರವೂ ಶ್ರೇಷ್ಠವೂ ಆಗಿದೆ.

ಸರ್ವಜ್ಞೇನ ವಿಧಿಜ್ಞೇನ ಧರ್ಮಜ್ಞಾನವತಾ ಸತಾ ।
ಅತೀನ್ದ್ರಿಯೇಣ ಶುಚಿನಾ ತಪಸಾ ಭಾವಿತಾತ್ಮನಾ ॥೩೭॥

ಐಶ್ವರ್ಯೇ ವರ್ತತಾ ಚೈವ ಸಾಂಖ್ಯಯೋಗವತಾ ತಥಾ ।
ನೈಕತನ್ತ್ರವಿಬುದ್ಧೇನ ದೃಷ್ಟ್ವಾ ದಿವ್ಯೇನ ಚಕ್ಷುಷಾ ॥೩೮॥

ಕೀರ್ತಿಂ ಪ್ರಥಯತಾ ಲೋಕೇ ಪಾಣ್ಡವಾನಾಂ ಮಹಾತ್ಮನಾಮ್ ।
ಅನ್ಯೇಷಾಂ ಕ್ಷತ್ರಿಯಾಣಾಂ ಚ ಭೂರಿದ್ರವಿಣತೇಜಸಾಮ್ ॥೬೯॥

ಸರ್ವಜ್ಞರಾದ, ವಿಧಿ-ವಿಧಾನಗಳನ್ನು ತಿಳಿದಿರುವ, ಧರ್ಮಜ್ಞರಾದ, ಸತ್ಪುರುಷರಾದ, ಇಂದ್ರಿಯಾತೀತವಾದ ಜ್ಞಾನದಿಂದ ಸಂಪನ್ನರಾದ, ಶುದ್ಧ ವಾದ ತಪಸ್ಸಿನಿಂದ ಪವಿತ್ರವಾದ ಅಂತಃಕರಣವನ್ನು ಹೊಂದಿರುವ, ಐಶ್ವರ್ಯ ಸಂಪನ್ನರಾದ, ಸಾಂಖ್ಯ ಮತ್ತು ಯೋಗಗಳ ವಿದ್ವಾಂಸರಾದ, ಅನೇಕ ಶಾಸ್ತ್ರ ಗಳ ಪಾರದರ್ಶಿಗಳಾದ ಮುನಿಶ್ರೇಷ್ಠರಾದ ವ್ಯಾಸರು–ದಿವ್ಯದೃಷ್ಟಿಯಿಂದ ಸಮಸ್ತವನ್ನೂ ಯಥಾವತ್ತಾಗಿ ತಿಳಿದುಕೊಂಡು–ಮಹಾತ್ಮರಾದ ಪಾಂಡವರ ಮತ್ತು ಪ್ರಚುರಧನಸಂಪನ್ನರಾದ ಮಹಾತೇಜಸ್ವಿಗಳಾದ ಇತರ ಕ್ಷತ್ರಿಯ ರಾಜರ ಕೀರ್ತಿಯನ್ನು ಈ ಲೋಕದಲ್ಲಿ ಪ್ರಚುರಗೊಳಿಸುವ ಸಲುವಾಗಿ ಈ ಇತಿಹಾಸವನ್ನು ರಚಿಸಿದರು.

ಯಶ್ಚೇದಂ ಶ್ರಾವಯೇದ್ವಿದ್ವಾನ್ಸದಾ ಪರ್ವಣಿ ಪರ್ವಣಿ ।
ಧೂತಪಾಪ್ಮಾ ಜಿತಸ್ವರ್ಗೋ ಬ್ರಹ್ಮಭೂಯಾಯ ಕಲ್ಪತೇ ॥೭೦॥

ಯಾವಾತನು ಪ್ರತಿಯೊಂದು ಪರ್ವಸಮಯದಲ್ಲಿಯೂ ಇತರರಿಗೆ ಈ ಇತಿಹಾಸವನ್ನು ಪ್ರವಚನಮಾಡುವನೋ–ಅಂತಹ ವಿದ್ವಾಂಸನು ಪಾಪ ಗಳನ್ನು ಕಳೆದುಕೊಂಡು, ಸ್ವರ್ಗವನ್ನು ಜಯಿಸಿ ಬ್ರಹ್ಮಭಾವವನ್ನು ಹೊಂದಲು ಸಮರ್ಥನಾಗುತ್ತಾನೆ.

ಕಾರ್ಷ್ಣಂ ವೇದಮಿಮಂ ಸರ್ವಂ ಶೃಣುಯಾದ್ಯಃ ಸಮಾಹಿತಃ ।
ಬ್ರಹ್ಮಹತ್ಯಾದಿಪಾಪಾನಾಂ ಕೋಟಿಸ್ತಸ್ಯ ವಿನಶ್ಯತಿ ॥೭೧॥

ಯಾವನು ಏಕಾಗ್ರಚಿತ್ತನಾಗಿ ಸಮಗ್ರವಾದ ಈ ಕಾರ್ಷ್ಣವೇದವನ್ನು (ಕೃಷ್ಣದ್ವೈಪಾಯನಕೃತ ಮಹಾಭಾರತವನ್ನು) ಕೇಳುವನೋ–ಅಂತಹವನು ಮಾಡಿದ ಬ್ರಹ್ಮಹತ್ಯಾದಿ ಕೋಟಿಪಾಪಗಳೂ ವಿನಾಶಹೊಂದುತ್ತವೆ.

ಯಶ್ಚೇದಂ ಶ್ರಾವಯೇಚ್ಛ್ರಾದ್ಧೇ ಬ್ರಾಹ್ಮಣಾನ್ಪಾದಮನ್ತತಃ ।
ಅಕ್ಷಯ್ಯಮನ್ನಪಾನಂ ವೈ ಪಿತೄಂಸ್ತಸ್ಯೋಪತಿಷ್ಠತೇ ॥೭೨॥

ಯಾವನು ಶ್ರಾದ್ಧಕಾಲದಲ್ಲಿ ಬ್ರಾಹ್ಮಣರ ಬಳಿಯಲ್ಲಿ ಕುಳಿತು ಮಹಾ

ಭಾರತದ ಒಂದು ಸಣ್ಣಭಾಗವನ್ನಾದರೂ ಬ್ರಾಹ್ಮಣರಿಗೆ ಕೇಳಿಸುವಂತೆ ಪಾರಾಯಣಮಾಡುವನೋ–ಅಂತಹವನು ಕೊಡುವ ಅನ್ನ-ಪಾನಗಳು ಅಕ್ಷಯವಾಗಿ ಅವನ ಪಿತೃಗಳನ್ನು ಸೇರುತ್ತವೆ.

ಅಹ್ನಾ ಯದೇನಃ ಕುರುತೇ ಇನ್ದ್ರಿಯೈರ್ಮನಸಾಪಿ ವಾ ।
ಮಹಾಭಾರತಮಾಖ್ಯಾಯ ಪಶ್ಚಾತ್ಸನ್ಧ್ಯಾಂ ಪ್ರಮುಚ್ಯತೇ ॥೪೩॥

ಮನುಷ್ಯನು ತನ್ನ ಇಂದ್ರಿಯಗಳಿಂದಲೂ ಮತ್ತು ಮನಸ್ಸಿನಿಂದಲೂ ಹಗಲಿನಲ್ಲಿ ಮಾಡುವ ಪಾಪವು ಸಾಯಂಕಾಲದಲ್ಲಿ ಮಹಾಭಾರತವನ್ನು ಪಾರಾಯಣಮಾಡುವುದರಿಂದ ನಿರಸ್ತವಾಗುತ್ತದೆ.

ಯದ್ರಾತ್ರೌ ಕುರುತೇ ಪಾಪಂ ಬ್ರಾಹ್ಮಣಃ ಸ್ತ್ರೀಗಣೈರ್ವೃತಃ ।
ಮಹಾಭಾರತಮಾಖ್ಯಾಯ ಪೂರ್ವಾಂ ಸನ್ಧ್ಯಾಂ ಪ್ರಮುಚ್ಯತೇ ॥೪೪॥

ಬ್ರಾಹ್ಮಣನು ರಾತ್ರಿಯ ವೇಳೆಯಲ್ಲಿ ಸ್ತ್ರೀಯರ ಸಮೂಹಗಳಿಂದ ಪರಿವೃತನಾಗಿ ಮಾಡುವ ಪಾಪಗಳೆಲ್ಲವೂ ಪ್ರಾತಃಕಾಲದ ಸಂಧ್ಯಾಸಮಯದಲ್ಲಿ ಮಹಾಭಾರತವನ್ನು ಪಠಿಸುವುದರಿಂದ ಹೋಗಿಬಿಡುತ್ತವೆ.

ಭರತಾನಾಂ ಮಹಜ್ಜನ್ಮ ತಸ್ಮಾದ್ಭಾರತಮುಚ್ಯತೇ ।
ಮಹತ್ತ್ವಾದ್ಭಾರವತ್ತ್ವಾಚ್ಚ ಮಹಾಭಾರತಮುಚ್ಯತೇ ।
ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ ॥೪೫॥

ಈ ಗ್ರಂಥದಲ್ಲಿ ಭರತವಂಶೀಯರ ಮಹತ್ತಾದ ಜನ್ಮ-ಕರ್ಮಗಳನ್ನು ಹೇಳಿರುವುದರಿಂದ ಇದಕ್ಕೆ ಭಾರತವೆಂದು ಹೆಸರಾಗಿದೆ. ಮಹತ್ತಾಗಿರುವುದರಿಂದಲೂ ಭಾರವಾಗಿರುವುದರಿಂದಲೂ ಇದು ಮಹಾಭಾರತವೆಂದು ಕರೆಯಲ್ಪಟ್ಟಿದೆ. ಭಾರತ ಮತ್ತು ಮಹಾಭಾರತದ ಈ ನಿರುಕ್ತವನ್ನು (ವ್ಯುತ್ಪತ್ತಿಯನ್ನು) ಯಾವನು ತಿಳಿದಿರುವನೋ–ಅವನು ಸಕಲಪಾಪಗಳಿಂದಲೂ ಮುಕ್ತನಾಗುತ್ತಾನೆ.

ಅಷ್ಟಾದಶಪುರಾಣಾನಿ ಧರ್ಮಶಾಸ್ತ್ರಾಣಿ ಸರ್ವಶಃ ।
ವೇದಾಃ ಸಾಙ್ಗಾಸ್ತಥೈಕತ್ರ ಭಾರತಂ ಚೈಕತಃ ಸ್ಥಿತಮ್ ॥೪೬॥

ಶ್ರೂಯತಾಂ ಸಿಂಹನಾದೋಽಯಮೃಷೇಸ್ತಸ್ಯ ಮಹಾತ್ಮನಃ ।
ಅಷ್ಟಾದಶಪುರಾಣಾನಾಂ ಕರ್ತುರ್ವೇದಮಹೋದಧೇಃ ॥೪೭॥

ಹದಿನೆಂಟು ಪುರಾಣಗಳನ್ನು ರಚಿಸಿರುವ, ವೇದಗಳಿಗೆ ಮಹಾಸಮುದ್ರ ಪ್ರಾಯವಾಗಿರುವ, ಮಹಾತ್ಮರಾದ ವ್ಯಾಸಮುನಿಗಳ ಈ ಸಿಂಹನಾದವನ್ನು ಕೇಳಿರಿ–'ಅಷ್ಟಾದಶ ಪುರಾಣಗಳೂ, ಸಂಪೂರ್ಣ ಧರ್ಮಶಾಸ್ತ್ರಗಳೂ, ಆರು ಅಂಗಗಳಿಂದ ಕೂಡಿರುವ ವೇದಗಳೂ ಒಂದು ತೂಕ. ಮಹಾಭಾರತವೊಂದೇ ಒಂದು ತೂಕ–ಈ ಎರಡೂ ಸಮಾನವಾಗಿರುತ್ತವೆ. (ಮಹಾಭಾರತವೊಂದೇ ಅಷ್ಟಾದಶಪುರಾಣಗಳಿಗೂ, ಧರ್ಮಶಾಸ್ತ್ರಗಳಿಗೂ, ಷಡಂಗ ಯುಕ್ತವಾದ ನಾಲ್ಕು ವೇದಗಳಿಗೂ ಸಮಾನವಾಗಿದೆ.)'

ತ್ರಿಭಿರ್ವರ್ಷೈರಿದಂ ಪೂರ್ಣಂ ಕೃಷ್ಣದ್ವೈಪಾಯನಃ ಪ್ರಭುಃ ।
ಅಖಿಲಂ ಭಾರತಂ ಚೇದಂ ಚಕಾರ ಭಗವಾನ್ಮುನಿಃ ॥೪೮॥

ಮುನಿಶ್ರೇಷ್ಠರಾದ, ಪೂಜ್ಯರಾದ ಕೃಷ್ಣದ್ವೈಪಾಯನವ್ಯಾಸರು ಇಡೀ ಮಹಾಭಾರತವನ್ನು ಮೂರು ವರ್ಷಗಳಲ್ಲಿ ಪೂರ್ಣಗೊಳಿಸಿದರು.

ಆಕರ್ಣ್ಯ ಭಕ್ತ್ಯಾ ಸತತಂ ಜಯಾಖ್ಯಂ ಭಾರತಂ ಮಹತ್ ।
ಶ್ರೀಶ್ಚ ಕೀರ್ತಿಸ್ತಥಾ ವಿದ್ಯಾ ಭವನ್ತಿ ಸಹಿತಾಃ ಸದಾ ॥೪೯॥

ಯಾವನು 'ಜಯ' ಎಂಬ ಹೆಸರಿನ ಈ ಮಹಾಭಾರತವನ್ನು ಭಕ್ತಿಪೂರ್ವಕವಾಗಿ ಯಾವಾಗಲೂ ಕೇಳುವನೋ–ಅವನ ಮನೆಯಲ್ಲಿ ಸಂಪತ್ತು, ಕೀರ್ತಿ ಮತ್ತು ವಿದ್ಯೆ ಇವು ಮೂರೂ ಜೊತೆ-ಜೊತೆಯಲ್ಲಿಯೇ ಇರುತ್ತವೆ.

ಧರ್ಮೇ ಚಾರ್ಥೇ ಚ ಕಾಮೇ ಚ ಮೋಕ್ಷೇ ಚ ಭರತರ್ಷಭ ।
ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ಕುತ್ರಚಿತ್ ॥೫೦॥

* ಭರತಶ್ರೇಷ್ಠನೇ! ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳ ವಿಷಯದಲ್ಲಿ ಇಲ್ಲಿ ಯಾವುದು ಹೇಳಲ್ಪಟ್ಟಿರುವುದೋ–ಅದು ಇತರ ಕಡೆಗಳಲ್ಲಿಯೂ ಉಲ್ಲೇಖಿಸಲ್ಪಟ್ಟಿದೆ. ಆದರೆ ಯಾವುದು ಇಲ್ಲಿ ಇಲ್ಲವೋ–ಅದು ಇನ್ನೆಲ್ಲಿಯೂ ಇರುವುದಿಲ್ಲ.

ಜಯೋ ನಾಮೇತಿಹಾಸೋಽಯಂ ಶ್ರೋತವ್ಯೋ ಮೋಕ್ಷಮಿಚ್ಛತಾ ।
ಬ್ರಾಹ್ಮಣೇನ ಚ ರಾಜ್ಞಾ ಚ ಗರ್ಭಿಣ್ಯಾ ಚೈವ ಯೋಷಿತಾ ॥೫೧॥

ಮೋಕ್ಷವನ್ನು ಬಯಸುವ ಬ್ರಾಹ್ಮಣನೂ, ರಾಜ್ಯವನ್ನು ಬಯಸುವ

* ಇಲ್ಲಿ ಸೌತಿಗಳು ಶೌನಕರಿಗೆ ಹೇಳುತ್ತಿದ್ದಾರೆ. ಭರತಶ್ರೇಷ್ಠನಿಗೆ ಹೇಳುವ ಸಂದರ್ಭವು

ಕ್ಷತ್ರಿಯನೂ, ಸತ್ಸಂತಾನವನ್ನು ಬಯಸುವ ಗರ್ಭಿಣಿಯೂ 'ಜಯ' ಎಂಬ ಹೆಸರಿನ ಈ ಇತಿಹಾಸವನ್ನು ಕೇಳಲೇಬೇಕು.

ಸ್ವರ್ಗಕಾಮೋ ಲಭೇತ್ಸ್ವರ್ಗಂ ಜಯಕಾಮೋ ಲಭೇಜ್ಜಯಮ್ ।
ಗರ್ಭಿಣೀ ಲಭತೇ ಪುತ್ರಂ ಕನ್ಯಾಂ ವಾ ಬಹುಭಾಗಿನೀಮ್ ॥೫೨॥

ಮಹಾಭಾರತವನ್ನು ಶ್ರವಣಮಾಡುವ ಅಥವಾ ಪಠನಮಾಡುವ ಮನುಷ್ಯನು ಸ್ವರ್ಗಕಾಮನಾಗಿದ್ದರೆ ಸ್ವರ್ಗವನ್ನು ಪಡೆಯುತ್ತಾನೆ. ಯುದ್ಧದಲ್ಲಿ ವಿಜಯಕಾಮನಾಗಿದ್ದರೆ ವಿಜಯವನ್ನು ಪಡೆಯುತ್ತಾನೆ. ಗರ್ಭಿಣೀಸ್ತ್ರೀಯು ಸುಯೋಗ್ಯನಾದ ಪುತ್ರನನ್ನು ಅಥವಾ ಸೌಭಾಗ್ಯಶಾಲಿನಿಯಾದ ಕನ್ಯೆಯನ್ನು ಹಡೆಯುತ್ತಾಳೆ.

ಅನಾಗತಶ್ಚ ಮೋಕ್ಷಶ್ಚ ಕೃಷ್ಣದ್ವೈಪಾಯನಃ ಪ್ರಭುಃ ।
ಸಂದರ್ಭಂ ಭಾರತಾಖ್ಯಸ್ಯ ಕೃತವಾನ್ಧರ್ಮಕಾಮ್ಯಯಾ ॥೫೩॥

ನಿತ್ಯಸಿದ್ಧಮೋಕ್ಷಸ್ವರೂಪರಾದ ಪೂಜ್ಯರಾದ ಕೃಷ್ಣದ್ವೈಪಾಯನರು ಧರ್ಮಕಾಮನೆಯಿಂದ ಮಹಾಭಾರತದ ಸಂದರ್ಭವನ್ನು ರಚಿಸಿದರು.

ಷಷ್ಟಿಂ ಶತಸಹಸ್ರಾಣಿ ಚಕಾರಾನ್ಯಾಂ ಸ ಸಂಹಿತಾಮ್ ।
ತ್ರಿಂಶಚ್ಛತಸಹಸ್ರಾಣಿ ದೇವಲೋಕೇ ಪ್ರತಿಷ್ಠಿತಮ್ ॥೫೪॥

ಪಿತ್ರ್ಯೇ ಪಞ್ಚದಶಂ ಜ್ಞೇಯಂ ಯಕ್ಷಲೋಕೇ ಚತುರ್ದಶ ।
ಏಕಂ ಶತಸಹಸ್ರಂ ತು ಮಾನುಷೇಷು ಪ್ರಭಾಷಿತಮ್ ॥೫೫॥

ವ್ಯಾಸರು ಅರುವತ್ತು ಲಕ್ಷ ಶ್ಲೋಕಗಳ ಮಹಾಭಾರತವನ್ನು ರಚಿಸಿ ದರು. ಅದರಲ್ಲಿ ಮೂವತ್ತು ಲಕ್ಷ ಶ್ಲೋಕಗಳ ಮಹಾಭಾರತವು ದೇವಲೋಕ ದಲ್ಲಿ ಪ್ರಚುರವಾಯಿತು. ಹದಿನೈದು ಲಕ್ಷ ಶ್ಲೋಕಗಳುಳ್ಳ ಮಹಾಭಾರತವು ಪಿತೃಲೋಕದಲ್ಲಿಯೂ, ಹದಿನಾಲ್ಕು ಲಕ್ಷ ಶ್ಲೋಕಗಳುಳ್ಳ ಮಹಾಭಾರತವು ಯಕ್ಷಲೋಕದಲ್ಲಿಯೂ, ಒಂದು ಲಕ್ಷ ಶ್ಲೋಕಗಳುಳ್ಳ ಮಹಾಭಾರತವು ಮನುಷ್ಯಲೋಕದಲ್ಲಿಯೂ ಪ್ರಚಾರಕ್ಕೆ ಬಂದಿತು.

ಇಲ್ಲಿರುವುದಿಲ್ಲ. ಪ್ರಸಿದ್ಧವಾದ ಶ್ಲೋಕವು ಇಲ್ಲಿ ಸೇರಿರಬಹುದೆಂದು ಭಾವಿಸಬಹುದಾಗಿದೆ. ಭಂ. ರಿ. ಇನ್‌ಸ್ಟಿಟ್ಯೂಟ್‌ನವರ ಪುಸ್ತಕದಲ್ಲಿಯೂ ಈ ಶ್ಲೋಕವಿದೆ.

ನಾರದೋಽಶ್ರಾವಯದ್ದೇವಾನಸಿತೋ ದೇವಲಃ ಪಿತೄನ್ ।
ರಕ್ಷೋಯಕ್ಷಾಞ್ಶುಕೋ ಮರ್ತ್ಯಾನ್ವೈಶಂಪಾಯನ ಏವ ತು ॥೫೭॥

ಮಹಾಭಾರತಸಂಹಿತೆಯನ್ನು ದೇವಲೋಕದಲ್ಲಿ ನಾರದರು ದೇವತೆಗಳಿಗೂ, ಪಿತೃಲೋಕದಲ್ಲಿ ಅಸಿತದೇವಲರು ಪಿತೃಗಳಿಗೂ, ಯಕ್ಷ-ರಾಕ್ಷಸರಲೋಕದಲ್ಲಿ ಶುಕರು ಯಕ್ಷ-ರಾಕ್ಷಸರಿಗೂ, ಮನುಷ್ಯಲೋಕದಲ್ಲಿ ವೈಶಂಪಾಯನರು ಮನುಷ್ಯರಿಗೂ ಉಪದೇಶಮಾಡಿದರು.

ಇತಿಹಾಸಮಿಮಂ ಪುಣ್ಯಂ ಮಹಾರ್ಥಂ ವೇದಸಮ್ಮಿತಮ್ ।
ವ್ಯಾಸೋಕ್ತಂ ಶ್ರೂಯತೇ ಯೇನ ಕೃತ್ವಾ ಬ್ರಾಹ್ಮಣಮಗ್ರತಃ ॥೫೮॥

ಸ ನರಃ ಸರ್ವಕಾಮಾಂಶ್ಚ ಕೀರ್ತಿಂ ಪ್ರಾಪ್ಯೇಹ ಶೌನಕ ।
ಗಚ್ಛೇತ್ಪರಮಿಕಾಂ ಸಿದ್ಧಿಮತ್ರ ಮೇ ನಾಸ್ತಿ ಸಂಶಯಃ ॥೫೯॥

ಶೌನಕರೇ! ಯಾವ ಮನುಷ್ಯನು ಬ್ರಾಹ್ಮಣನನ್ನು ಮುಂದೆ ಮಾಡಿಕೊಂಡು ಗಂಭೀರವಾದ ಅರ್ಥದಿಂದ ಕೂಡಿರುವ, ವೇದಕ್ಕೆ ಸಮಾನವಾದ ವ್ಯಾಸರಿಂದ ಹೇಳಲ್ಪಟ್ಟ ಈ ಇತಿಹಾಸವನ್ನು ಕೇಳುವನೋ–ಅಂತಹ ಮನುಷ್ಯನು ಇಲ್ಲಿ ಸರ್ವಕಾಮನೆಗಳನ್ನೂ ಕೀರ್ತಿಯನ್ನೂ ಹೊಂದಿ ಪರಮ ಸಿದ್ಧಿಯನ್ನೂ ಪಡೆಯುತ್ತಾನೆ. ಈ ವಿಷಯದಲ್ಲಿ ನನಗೆ ಸಂಶಯವೇ ಇಲ್ಲ.

ಭಾರತಾಧ್ಯಯನಾತ್ಪುಣ್ಯಾದಪಿ ಪಾದಮಧೀಯತಃ ।
ಶ್ರದ್ಧಯಾ ಪರಯಾ ಭಕ್ತ್ಯಾ ಶ್ರಾವ್ಯತೇ ಚಾಪಿ ಯೇನ ತು ॥೬೦॥

ಯಾವನು ಅತ್ಯಂತಶ್ರದ್ಧೆ ಮತ್ತು ಭಕ್ತಿಗಳಿಂದ ಕೂಡಿದವನಾಗಿ ಮಹಾಭಾರತದ ಒಂದು ಭಾಗವನ್ನು ಪಠಿಸುವನೋ ಅಥವಾ ಕೇಳುವನೋ ಮತ್ತು ಯಾವನು ಇತರರಿಗೆ ಹೇಳುವನೋ ಅಂತಹವನು ಕೂಡ ಸಂಪೂರ್ಣ ಮಹಾಭಾರತವನ್ನು ಪಠಿಸಿದ ಅಥವಾ ಕೇಳಿದ ಪುಣ್ಯಕ್ಕೆ ಭಾಗಿಯಾಗುತ್ತಾನೆ. ಅದರ ಫಲವಾಗಿ ಕೀರ್ತಿಯನ್ನೂ ಉತ್ತಮವಾದ ಸಿದ್ಧಿಯನ್ನೂ ಪಡೆಯುತ್ತಾನೆ.

ಯ ಇಮಾಂ ಸಂಹಿತಾಂ ಪುಣ್ಯಾಂ ಪುತ್ರಮಧ್ಯಾಪಯಚ್ಛುಕಮ್ ।

ವ್ಯಾಸರು ಈ ಮಹಾಭಾರತಸಂಹಿತೆಯನ್ನು ತಮ್ಮ ಮಗನಾದ ಶುಕನಿಗೆ ಅಧ್ಯಯನಮಾಡಿಸಿದರು.

ಮಹಾಭಾರತದ ಸಾರಭೂತವಾದ ಸಂದೇಶವು ಸಂಕ್ಷೇಪದಲ್ಲಿ ಹೀಗಿದೆ :

ಮಾತಾಪಿತೃಸಹಸ್ರಾಣಿ ಪುತ್ರದಾರಶತಾನಿ ಚ ।
ಸಂಸಾರೇಷ್ವನುಭೂತಾನಿ ಯಾನ್ತಿ ಯಾಸ್ಯನ್ತಿ ಚಾಪರೇ ॥೬೦॥

ಮನುಷ್ಯನು ಈ ಸಂಸಾರದಲ್ಲಿ ಅನೇಕಾನೇಕ ಜನ್ಮಗಳನ್ನು ಹೊಂದುತ್ತಾ ಸಾವಿರಾರು ತಾಯಿ-ತಂದೆಗಳನ್ನೂ, ನೂರಾರು ಮಕ್ಕಳನ್ನೂ, ನೂರಾರು ಪತ್ನಿಯರನ್ನೂ ಸೇರುತ್ತಲೂ ಇರುತ್ತಾನೆ ; ಬಿಡುತ್ತಲೂ ಇರುತ್ತಾನೆ. ಇದು ಹೀಗೆಯೇ ನಡೆದಿದೆ. ನಡೆಯುತ್ತಾ ಹೋಗುತ್ತಿರುತ್ತದೆ.

ಹರ್ಷಸ್ಥಾನಸಹಸ್ರಾಣಿ ಭಯಸ್ಥಾನಶತಾನಿ ಚ ।
ದಿವಸೇ ದಿವಸೇ ಮೂಢಮಾವಿಶನ್ತಿ ನ ಪಣ್ಡಿತಮ್ ॥೬೧॥

ಮೂಢನಾದವನಿಗೆ ಅನುದಿನವೂ ಸಂತೋಷಪಡುವ ಸಾವಿರಾರು ಸನ್ನಿವೇಶಗಳೂ–ಭಯಪಡುವ ನೂರಾರು ಸನ್ನಿವೇಶಗಳೂ ಸಂಭವಿಸುತ್ತಲೇ ಇರುತ್ತವೆ. ಆದರೆ ಪಂಡಿತನ ಮನಸ್ಸಿನ ಮೇಲೆ ಹರ್ಷದ ಸನ್ನಿವೇಶಗಳೇ ಆಗಲೀ–ಭಯದ ಸನ್ನಿವೇಶಗಳೇ ಆಗಲೀ ಯಾವ ವಿಧವಾದ ಪರಿಣಾಮವನ್ನೂ ಉಂಟುಮಾಡುವುದಿಲ್ಲ.

ಊರ್ಧ್ವಬಾಹುರ್ವಿರೌಮ್ಯೇಷ ನ ಚ ಕಶ್ಚಿಚ್ಛೃಣೋತಿ ಮೇ ।
ಧರ್ಮಾದರ್ಥಶ್ಚ ಕಾಮಶ್ಚ ಸ ಕಿಮರ್ಥಂ ನ ಸೇವ್ಯತೇ ॥೬೨॥

ನಾನು ಎರಡು ತೋಳುಗಳನ್ನೂ ಮೇಲೆತ್ತಿ ಕೂಗಿಕೊಳ್ಳುತ್ತಲೇ ಇದ್ದೇನೆ–'ಮಾನವರೇ! ಧರ್ಮದಿಂದಲೇ (ಮೋಕ್ಷಸಿದ್ಧಿಯಾಗುವುದಲ್ಲದೇ) ಅರ್ಥಸಿದ್ಧಿಯೂ ಆಗುತ್ತದೆ ; ಕಾಮಸಿದ್ಧಿಯೂ ಆಗುತ್ತದೆ. ಹೀಗಿದ್ದರೂ ಅಂತಹ ಶ್ರೇಷ್ಠವಾದ ಧರ್ಮವನ್ನು ನೀವೇಕೆ ಆಶ್ರಯಿಸುವುದಿಲ್ಲ?'–ಹೀಗೆ ಕೂಗಿ ಹೇಳಿದರೂ ಯಾವನೊಬ್ಬನೂ ನನ್ನ ಮಾತನ್ನು ಕೇಳುತ್ತಿಲ್ಲ.

ನ ಜಾತು ಕಾಮಾನ್ನ ಭಯಾನ್ನ ಲೋಭಾ-
ದ್ಧರ್ಮಂ ತ್ಯಜೇಜ್ಜೀವಿತಸ್ಯಾಪಿ ಹೇತೋಃ ।
ನಿತ್ಯೋ ಧರ್ಮಃ ಸುಖದುಃಖೇ ತ್ವನಿತ್ಯೇ
ಜೀವೋ ನಿತ್ಯೋ ಹೇತುರಸ್ಯ ತ್ವನಿತ್ಯಃ ॥೬೩॥

ಯಾವ ಮನುಷ್ಯನೂ ಕಾಮದಿಂದಾಗಲೀ, ಭಯದಿಂದಾಗಲೀ,

ಲೋಭದಿಂದಾಗಲೀ, ಜೀವಿತದ ಕಾರಣಕ್ಕಾಗಿಯೇ ಆಗಲೀ–ಧರ್ಮವನ್ನು ಪರಿತ್ಯಾಗಮಾಡಬಾರದು. ಧರ್ಮವು ನಿತ್ಯವಾದುದು. ಸುಖ-ದುಃಖಗಳು ಅನಿತ್ಯವಾದುವುಗಳು. ಶಾಶ್ವತವಾದುವುಗಳಲ್ಲ. ಜೀವನು ನಿತ್ಯನು. ಅವನ ಬಂಧನಕ್ಕೆ ಕಾರಣಭೂತವಾದ ಶರೀರವು ನಿತ್ಯವಲ್ಲ.

ಸಾರಭೂತವಾದ ಉಪದೇಶವಿರುವ 'ಭಾರತಸಾವಿತ್ರೀ' ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಮಹಾಭಾರತದ ಈ ಶ್ಲೋಕಗಳನ್ನು ಯಾವನು ಮುಂಜಾನೆ ಎದ್ದೊಡನೆಯೇ ಪಠಿಸುವನೋ–ಅವನು ಸಮಗ್ರಮಹಾಭಾರತವನ್ನೇ ಅಧ್ಯಯನಮಾಡಿದ ಫಲವನ್ನು ಹೊಂದಿ ಪರಬ್ರಹ್ಮಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ಯಾವ ರೀತಿಯಲ್ಲಿ ಐಶ್ವರ್ಯದಿಂದಲೂ ಗುಣಗಳಿಂದಲೂ ಸಂಪನ್ನವಾದ ಸಮುದ್ರವೂ ಮತ್ತು ಹಿಮವತ್ಪರ್ವತವೂ ರತ್ನನಿಧಿಗಳೆಂದು ಪ್ರಸಿದ್ಧವಾಗಿವೆಯೋ–ಅದೇ ರೀತಿಯಲ್ಲಿ ಮಹಾಭಾರತವೂ ತತ್ತ್ವಗಳೆಂಬ ರತ್ನಗಳ ನಿಧಿಯೆಂದು ಹೇಳಲ್ಪಟ್ಟಿದೆ.

ಯಾವ ವಿದ್ವಾಂಸನು ಕೃಷ್ಣದ್ವೈಪಾಯನರಿಂದ ರಚಿಸಲ್ಪಟ್ಟಿರುವ ಮಹಾಭಾರತರೂಪವಾದ ಐದನೆಯ ವೇದವನ್ನು ಮತ್ತೊಬ್ಬರಿಗೆ ಹೇಳುವನೋ–ಅಂತಹ ವಿದ್ವಾಂಸನು ಅರ್ಥವನ್ನು (ಐಶ್ವರ್ಯವನ್ನು) ಹೊಂದುತ್ತಾನೆ. ಯಾವನು ಭಾರತದ ಆಖ್ಯಾನವನ್ನು ಏಕಾಗ್ರಚಿತ್ತನಾಗಿ ಪಠಿಸುವನೋ–ಅವನು ಪರಮಸಿದ್ಧಿಯನ್ನು ಪಡೆದು ಶ್ರೇಷ್ಠವಾದ ಗತಿಯನ್ನು ಹೊಂದುತ್ತಾನೆ. ಇದರಲ್ಲಿ ನನಗೆ ಸಂಶಯವೇ ಇಲ್ಲ.

ಯಾವನು ಕೃಷ್ಣದ್ವೈಪಾಯನರ ತುಟಿಗಳಿಂದ ಹೊರಬಿದ್ದಿರುವ, ಅಪ್ರಮೇಯವಾದ, ಪುಣ್ಯವಾದ, ಪವಿತ್ರವಾದ, ಪಾಪಹರವಾದ, ಮಂಗಳಕರವಾದ ಮಹಾಭಾರತವನ್ನು ಇತರರಿಂದ ಕೇಳಿ ತಿಳಿಯುವನೋ (ವಿದ್ವಾಂಸರ ಪ್ರವಚನಗಳನ್ನು ಕೇಳಿ ಹೃದ್ಗತಮಾಡಿಕೊಳ್ಳುವನೋ)–ಅಂತಹವನು ಪುಷ್ಕರತೀರ್ಥಗಳಲ್ಲಿ ಸ್ನಾನಮಾಡಬೇಕಾದ ಅಗತ್ಯವೇನಿದೆ?

ಯೋ ಗೋಶತಂ ಕನಕಶೃಙ್ಗಮಯಂ ದದಾತಿ
ವಿಪ್ರಾಯ ವೇದವಿದುಷೇ ಸುಬಹುಶ್ರುತಾಯ ।

ಪುಣ್ಯಾಂ ಚ ಭಾರತಕಥಾಂ ಸತತಂ ಶೃಣೋತಿ
ತುಲ್ಯಂ ಫಲಂ ಭವತಿ ತಸ್ಯ ಚ ತಸ್ಯ ಚೈವ ॥೬೮॥

ಕೊಂಬುಗಳಿಗೆ ಚಿನ್ನದ ತಗಡನ್ನು ಹೊದಿಸಿದ ನೂರು ಗೋವುಗಳನ್ನು–ವೇದಗಳನ್ನು ಅಧ್ಯಯನಮಾಡಿರುವ ಮತ್ತು ಅನೇಕಶಾಸ್ತ್ರಗಳಲ್ಲಿ ಪಾಂಡಿತ್ಯವಿರುವ ಬ್ರಾಹ್ಮಣನಿಗೆ ದಾನಮಾಡುವವನಿಗೆ ಪ್ರಾಪ್ತವಾಗುವ ಪುಣ್ಯವೂ–ಮಹಾಭಾರತದ ಕಥೆಯನ್ನು ಸತತವಾಗಿ ಕೇಳುವವನಿಗೆ ಪ್ರಾಪ್ತವಾಗುವ ಪುಣ್ಯವೂ ಸಮಾನವಾಗಿರುತ್ತದೆ.

೫ನೆಯ ಅಧ್ಯಾಯವು ಮುಗಿಯಿತು.

ಸ್ವರ್ಗಾರೋಹಣಪರ್ವವು ಮುಗಿಯಿತು.
ಶ್ರೀಮನ್ಮಹಾಭಾರತವು ಸಂಪೂರ್ಣವಾಯಿತು.

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು ॥

ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ ॥

ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ ।
ಅಧನಾಃ ಸಧನಾಃ ಸನ್ತು ಜೀವನ್ತು ಶರದಾಂ ಶತಮ್ ॥

ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥

ಹರಿಃ ಓಂ
ಶ್ರೀಕೃಷ್ಣಾರ್ಪಣಮಸ್ತು, ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು
ಓಂ ತತ್ಸತ್

ಸ್ವರ್ಗಾರೋಹಣಪರ್ವ (ಸಂಕ್ಷೇಪದಲ್ಲಿ)

ಸ್ವರ್ಗಪರ್ವ ತತೋ ಜ್ಞೇಯಂ ದಿವ್ಯಂ ಯತ್ತದಮಾನುಷಮ್ ।
ಪ್ರಾಪ್ತಂ ದೈವರಥಂ ಸ್ವರ್ಗಾನ್ನೇಷ್ಟವಾನ್ಯತ್ರ ಧರ್ಮರಾಟ್ ॥೩೭೦॥

ಆರೋಢುಂ ಸುಮಹಾಪ್ರಾಜ್ಞ ಆನೃಶಂಸ್ಯಾಚ್ಛುನಾ ವಿನಾ ।
ತಾಮಸ್ಯಾವಿಚಲಾಂ ಜ್ಞಾತ್ವಾ ಸ್ಥಿತಿಂ ಧರ್ಮೇ ಮಹಾತ್ಮನಃ ॥೩೭೧॥

ಶ್ವರೂಪಂ ಯತ್ರ ತತ್ತ್ಯಕ್ತ್ವಾ ಧರ್ಮೇಣಾಸೌ ಸಮನ್ವಿತಃ ।
ಸ್ವರ್ಗಂ ಪ್ರಾಪ್ತಃ ಸ ಚ ತಥಾ ಯಾತನಾ ವಿಪುಲಾ ಭೃಶಮ್ ॥೩೭೨॥

ದೇವದೂತೇನ ನರಕಂ ಯತ್ರ ವ್ಯಾಜೇನ ದರ್ಶಿತಮ್ ।
ಶುಶ್ರಾವ ಯತ್ರ ಧರ್ಮಾತ್ಮಾ ಭ್ರಾತೄಣಾಂ ಕರುಣಾ ಗಿರಃ ॥೩೭೩॥

ನಿದೇಶೇ ವರ್ತಮಾನಾನಾಂ ದೇಶೇ ತತ್ರೈವ ವರ್ತತಾಮ್ ।
ಅನುದರ್ಶಿತಶ್ಚ ಧರ್ಮೇಣ ದೇವರಾಜೇನ ಪಾಣ್ಡವಃ ॥೩೭೪॥

ಆಪ್ಲುತ್ಯಾಕಾಶಗಙ್ಗಾಯಾಂ ದೇಹಂ ತ್ಯಕ್ತ್ವಾ ಸ ಮಾನುಷಮ್ ।
ಸ್ವಧರ್ಮನಿರ್ಜಿತಂ ಸ್ಥಾನಂ ಸ್ವರ್ಗೇ ಪ್ರಾಪ್ಯ ಸ ಧರ್ಮರಾಟ್ ॥೩೭೫॥

ಮುಮುದೇ ಪೂಜಿತಃ ಸರ್ವೈಃ ಸೇನ್ದ್ರೈಃ ಸುರಗಣೈಃ ಸಹ ।
ಏತದಷ್ಟಾದಶಂ ಪರ್ವ ಪ್ರೋಕ್ತಂ ವ್ಯಾಸೇನ ಧೀಮತಾ ॥೩೭೬॥

ಅಧ್ಯಾಯಾ ಪಞ್ಚ ಸಂಖ್ಯಾತಾಃ ಪರ್ವಣ್ಯಸ್ಮಿನ್ಮಹಾತ್ಮನಾ ।
ಶ್ಲೋಕಾನಾಂ ದ್ವೇ ಶತೇ ಚೈವ ಪ್ರಸಂಖ್ಯಾತೇ ತಪೋಧನಾಃ ।
ನವ ಶ್ಲೋಕಾಸ್ತಥೈವಾನ್ಯೇ ಸಂಖ್ಯಾತಾಃ ಪರಮರ್ಷಿಣಾ ॥೩೭೭॥

ಪರ್ವಸಂಗ್ರಹಪರ್ವ-ಅಧ್ಯಾಯ ೨

ಈ ಪರ್ವದಲ್ಲಿರುವ ಅಧ್ಯಾಯಗಳು ೫, ಶ್ಲೋಕಗಳು ೨೦೯. ನಾವು ಅನುವಾದಿಸಿರುವ ಪುಸ್ತಕದಲ್ಲಿರುವಂತೆ ಅಧ್ಯಾಯಗಳು ೫, ಶ್ಲೋಕಗಳು ೨೧೮.

ಭಂಡಾರ್‌ಕರ್ ರಿಸರ್ಚ ಇನ್‌ಸ್ಟಿಟ್ಯೂಟ್‌ನವರು ಪ್ರಕಟಿಸಿರುವ ಪುಸ್ತಕದಂತೆ ಅಧ್ಯಾಯಗಳು ೫, ಶ್ಲೋಕಗಳು ೧೯೪.

ಮಹಾಭಾರತಶ್ರವಣವಿಧಿಃ

ಮಹಿಮೆ : ಕಥೆಯನ್ನು ಕೇಳುವಾಗ ಅನುಸರಿಸಬೇಕಾದ ವಿಧಿ-ನಿಯಮಗಳು ಮತ್ತು ಹಾಗೆ ಕೇಳುವುದರಿಂದ ಪ್ರಾಪ್ತವಾಗುವ ಫಲ

ಜನಮೇಜಯನು ಪ್ರಶ್ನಿಸುತ್ತಾನೆ :

ಭಗವನ್ಕೇನ ವಿಧಿನಾ ಶ್ರೋತವ್ಯಂ ಭಾರತಂ ಬುಧೈಃ ।
ಫಲಂ ಕಿಂ ಕೇ ಚ ದೇವಾಶ್ಚ ಪೂಜ್ಯಾ ವೈ ಪಾರಣೇಷ್ವಿಹ ॥೧॥

ದೇಯಂ ಸಮಾಪ್ತೇ ಭಗವನ್ಕಿಂ ಚ ಪರ್ವಣಿ ಪರ್ವಣಿ ।
ವಾಚಕಃ ಕೀದೃಶಶ್ಚಾತ್ರ ಏಷ್ಟವ್ಯಸ್ತದ್ವದಸ್ವ ಮೇ ॥೨॥

“ಪೂಜ್ಯರೇ! ವಿದ್ವಾಂಸರು ಯಾವ ವಿಧಿಯನ್ನು ಅನುಸರಿಸಿ ಮಹಾಭಾರತಕಥಾಶ್ರವಣವನ್ನು ಮಾಡಬೇಕು. ವಿಧಿ-ನಿಯಮಪೂರ್ವಕವಾಗಿ ಮಹಾಭಾರತವನ್ನು ಕೇಳುವುದರಿಂದ ಯಾವ ಫಲವು ಲಭಿಸುತ್ತದೆ? ಪರ್ವಗಳ ಕೊನೆಯಲ್ಲಿ ಯಾವ ಯಾವ ದೇವತೆಗಳನ್ನು ಪೂಜಿಸಬೇಕು? ಒಂದೊಂದು ಪರ್ವವೂ ಮುಗಿದಾಗ ಯಾವ ದಾನವನ್ನು ಕೊಡಬೇಕು? ಮಹಾಭಾರತದ ಕಥೆಯನ್ನು ಓದುವವನು ಎಂತಹವನಾಗಿರಬೇಕು? ಈ ನನ್ನ ಪ್ರಶ್ನೆಗಳಿಗೆ ಉತ್ತರಿಸುವ ಕೃಪೆಮಾಡಿರಿ.”

ವೈಶಂಪಾಯನರು ಹೇಳುತ್ತಾರೆ :

“ಜನಮೇಜಯ! ನೀನು ಪ್ರಶ್ನಿಸಿರುವಂತೆ ಮಹಾಭಾರತವನ್ನು ಕೇಳಲು ಯಾವ ವಿಧಿಯನ್ನು ಅನುಸರಿಸಬೇಕು? ವಿಧಿಪೂರ್ವಕವಾಗಿ ಈ ಆಖ್ಯಾನವನ್ನು ಕೇಳುವುದರಿಂದ ಎಂತಹ ಫಲವು ಲಭಿಸುತ್ತದೆ?–ಈ ಎಲ್ಲ ವಿಷಯಗಳನ್ನೂ ವಿಶದವಾಗಿ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು. ಮಹೀಪಾಲನೇ! ಸ್ವರ್ಗದಲ್ಲಿರುವ ದೇವತೆಗಳು ಭಗವಂತನ ಲೀಲಾಕಾರ್ಯ ಗಳಿಗೆ ಸಹಾಯಮಾಡುವ ಸಲುವಾಗಿ ಧರೆಗೆ ಬಂದರು. ಆ ಕಾರ್ಯವು ಮುಗಿದ ಬಳಿಕ ಅವರೆಲ್ಲರೂ ಸ್ವರ್ಗಕ್ಕೆ ಹೊರಟುಹೋದರು. ನಾನೀಗ ಭೂಲೋಕದಲ್ಲಿ ಋಷಿಗಳ ಮತ್ತು ದೇವತೆಗಳ ಪ್ರಾದುರ್ಭಾವವನ್ನು ಹೇಳು

ತ್ತೇನೆ. ಏಕಾಗ್ರಚಿತ್ತನಾಗಿ ಕೇಳು. ಈ ಮಹಾಭಾರತದಲ್ಲಿ ರುದ್ರರು, ಸಾಧ್ಯರು, ಸನಾತನರಾದ ವಿಶ್ವದೇವತೆಗಳು, ಸೂರ್ಯ, ಅಶ್ವಿನೀಕುಮಾರರು, ಲೋಕಪಾಲರು, ಮಹರ್ಷಿಗಳು, ಗುಹ್ಯಕರು, ಗಂಧರ್ವರು, ನಾಗರು, ವಿದ್ಯಾಧರರು, ಸಿದ್ಧರು, ಧರ್ಮ, ಸ್ವಾಯಂಭುವಬ್ರಹ್ಮ, ಮುನಿಶ್ರೇಷ್ಠನಾದ ಕಾತ್ಯಾಯನ, ಪರ್ವತ, ಸಮುದ್ರಗಳು, ನದಿಗಳು, ಅಪ್ಸರೆಯರು, ಗ್ರಹಗಳು, ಸಂವತ್ಸರಗಳು, ಅಯನಗಳು, ಋತುಗಳು, ಸಮಗ್ರವಾದ ಚರಾಚರ ಜಗತ್ತು, ದೇವತೆಗಳು, ಅಸುರರು–ಇವರೆಲ್ಲರೂ ಒಂದೇ ಕಡೆಯಲ್ಲಿರುವಂತೆ ಕಂಡುಬರುತ್ತದೆ.

ಮನುಷ್ಯರು ಘೋರವಾದ ಪಾಪಗಳನ್ನೇ ಮಾಡಿದ್ದರೂ–ರುದ್ರಾದಿಗಳ ವಾಸಸ್ಥಾನವನ್ನು ಕೇಳಿ ಅವರ ನಾಮಧೇಯಗಳು ಮತ್ತು ಅವರು ಮಾಡಿದ ಕರ್ಮಗಳು–ಇವುಗಳನ್ನು ಸಂಕೀರ್ತನಮಾಡುವುದರಿಂದ ಒಡನೆಯೇ ಆ ಘೋರಪಾಪಗಳಿಂದಲೂ ಮುಕ್ತರಾಗುತ್ತಾರೆ.

ಇತಿಹಾಸಮಿಮಂ ಶ್ರುತ್ವಾ ಯಥಾವದನುಪೂರ್ವಶಃ ।
ಸಂಯತಾತ್ಮಾ ಶುಚಿರ್ಭೂತ್ವಾ ಪಾರಂ ಗತ್ವಾ ಚ ಭಾರತೇ ॥೧೧॥

ತೇಷಾಂ ಶ್ರಾದ್ಧಾನಿ ದೇಯಾನಿ ಶ್ರುತ್ವಾ ಭಾರತ ಭಾರತಮ್ ।
ಬ್ರಾಹ್ಮಣೇಭ್ಯೋ ಯಥಾಶಕ್ತ್ಯಾ ಭಕ್ತ್ಯಾ ಚ ಭರತರ್ಷಭ ॥೧೨॥

ಮಹಾದಾನಾನಿ ದೇಯಾನಿ ರತ್ನಾನಿ ವಿವಿಧಾನಿ ಚ ।

ಮನುಷ್ಯನು ತನ್ನ ಮನಸ್ಸನ್ನು ಸಂಯಮದಲ್ಲಿಟ್ಟುಕೊಂಡು ಶುಚಿಯಾಗಿ ಆನುಪೂರ್ವಿಯಾಗಿ (ಮೊದಲಿನಿಂದಲೂ ಅನುಕ್ರಮವಾಗಿ) ಭಾರತವೆಂಬ ಈ ಇತಿಹಾಸವನ್ನು ಕೇಳಿ ಸಮಾಪ್ತವಾದ ಬಳಿಕ ಭಾರತಯುದ್ಧದಲ್ಲಿ ಸತ್ತಿರುವ ಮುಖ್ಯರಾದ ವೀರರಿಗೆ ಶ್ರಾದ್ಧವನ್ನು ಮಾಡಬೇಕು. ಬ್ರಾಹ್ಮಣರಿಗೆ ತನ್ನ ಶಕ್ತಿಗೆ ಅನುಸಾರವಾಗಿ ಭಕ್ತಿಪೂರ್ವಕವಾಗಿ ಮಹಾದಾನಗಳನ್ನೂ ಮತ್ತು ವಿಧ-ವಿಧವಾದ ರತ್ನಗಳನ್ನೂ ದಾನಮಾಡಬೇಕು.

ಗಾವಃ ಕಾಂಸ್ಯೋಪದೋಹಾಶ್ಚ ಕನ್ಯಾಶ್ಚೈವ ಸ್ವಲಂಕೃತಾಃ ।
ಸರ್ವಕಾಮಗುಣೋಪೇತಾ ಯಾನಾನಿ ವಿವಿಧಾನಿ ಚ ।
ಭವನಾನಿ ವಿಚಿತ್ರಾಣಿ ಭೂಮಿರ್ವಾಸಾಂಸಿ ಕಾಞ್ಚನಮ್ ॥೧೪॥

ವಾಹನಾನಿ ಚ ದೇಯಾನಿ ಹಯಾ ಮತ್ತಾಶ್ಚ ವಾರಣಾಃ ।
ಶಯನಂ ಶಿಬಿಕಾಶ್ಚೈವ ಸ್ಯನ್ದನಾಶ್ಚ ಸ್ವಲಂಕೃತಾಃ ॥೧೫॥

ಯದ್ಯದ್ಗೃಹೇ ವರಂ ಕಿಂಚಿದ್ಯದ್ಯದಸ್ತಿ ಮಹದ್ವಸು ।
ತತ್ತದ್ದೇಯಂ ದ್ವಿಜಾತಿಭ್ಯ ಆತ್ಮಾ ದಾರಾಶ್ಚ ಸೂನವಃ ॥೧೬॥

ಗೋವುಗಳು, ಕರೆಯುವ ಕಂಚಿನ ಪಾತ್ರೆಗಳು, ಅಲಂಕೃತರಾದ ಮತ್ತು ಮನೋವಾಂಛಿತವಾದ ಗುಣಗಳಿಂದ ಯುಕ್ತರಾದ ಕನ್ಯೆಯರು, ವಿಧ-ವಿಧವಾದ ಯಾನಗಳು, ವಿಚಿತ್ರವಾದ ಭವನಗಳು, ಭೂಮಿ, ವಸ್ತ್ರಗಳು, ಸುವರ್ಣ, ವಾಹನಗಳು, ಕುದುರೆಗಳು, ಮದಿಸಿದ ಆನೆಗಳು, ಹಾಸಿಗೆ, ಪಲ್ಲಕ್ಕಿಗಳು, ಸಿಂಗರಿಸಿದ ರಥಗಳು, ಮನೆಯಲ್ಲಿರುವ ಶ್ರೇಷ್ಠವಾದ ವಸ್ತುಗಳು, ಮಹೈಶ್ವರ್ಯ—ಈ ಎಲ್ಲವನ್ನೂ ಬ್ರಾಹ್ಮಣರಿಗೆ ದಾನಮಾಡಬೇಕು. ಪತ್ನೀ-ಪುತ್ರರಸಮೇತನಾಗಿ ತನ್ನನ್ನೂ ಅವರ ಸೇವೆಗಾಗಿ ಅರ್ಪಿಸಿಕೊಳ್ಳಬೇಕು.

ಶ್ರದ್ಧಯಾ ಪರಯಾ ಯುಕ್ತಃ ಕ್ರಮಶಸ್ತಸ್ಯ ಪಾರಗಃ ।
ಶಕ್ತಿತಃ ಸುಮನಾ ಹೃಷ್ಟಃ ಶುಶ್ರೂಷುರವಿಕಲ್ಪಕಃ ॥೧೭॥

ಪೂರ್ಣಶ್ರದ್ಧೆಯಿಂದ ಯುಕ್ತನಾಗಿ ಕಡೆಯವರೆಗೂ ಕ್ರಮವಾಗಿ ಮಹಾಭಾರತದ ಕಥೆಯನ್ನು ಕೇಳಬೇಕು. ಕಥೆಯನ್ನು ಕೇಳುವಾಗ ಸಾಧ್ಯವಾದ ಮಟ್ಟಿಗೂ ಒಳ್ಳೆಯ ಮನಸ್ಸಿನಿಂದ ಕೂಡಿರಬೇಕು. ಹೃಷ್ಟನಾಗಿರಬೇಕು. ಮನಸ್ಸಿನಲ್ಲಿ ಸಂಶಯಗೊಳ್ಳಬಾರದು. ತರ್ಕ-ವಿತರ್ಕಗಳನ್ನು ಮಾಡ ಬಾರದು.

ಸತ್ಯಾರ್ಜವರತೋ ದಾನ್ತಃ ಶುಚಿಃ ಶೌಚಸಮನ್ವಿತಃ ।
ಶ್ರದ್ಧಧಾನೋ ಜಿತಕ್ರೋಧೋ ಯಥಾ ಸಿಧ್ಯತಿ ತಚ್ಛೃಣು ॥೧೮॥

ಸತ್ಯ ಮತ್ತು ಸರಳತೆಗಳಲ್ಲಿ ನಿರತನಾಗಿರಬೇಕು. ಜಿತೇಂದ್ರಿಯನಾಗಿರ ಬೇಕು. ಶುದ್ಧನಾಗಿರಬೇಕು. ಶೌಚಾಚಾರಸಂಪನ್ನನಾಗಿರಬೇಕು. ಶ್ರದ್ಧಾಳು ವಾಗಿರಬೇಕು. ಕ್ರೋಧವನ್ನು ಜಯಿಸಿರಬೇಕು. ಶ್ರೋತೃವು ಹೀಗಿದ್ದರೆ ಎಂತಹ ಸಿದ್ಧಿಯಾಗುವುದೆಂಬುದನ್ನು ಹೇಳುವೆನು ; ಕೇಳು.

ಶುಚಿಃ ಶೀಲಾನ್ವಿತಾಚಾರಾಃ ಶುಕ್ಲವಾಸಾ ಜಿತೇನ್ದ್ರಿಯಃ।
ಸಂಸ್ಕೃತಃ ಸರ್ವಶಾಸ್ತ್ರಜ್ಞಃ ಶ್ರದ್ಧಧಾನೋಽನಸೂಯಕಃ ॥೧೯॥

ರೂಪವಾನ್ಸುಭಗೋ ದಾನ್ತಃ ಸತ್ಯವಾದೀ ಜಿತೇನ್ದ್ರಿಯಃ ।
ದಾನಮಾನಗೃಹೀತಶ್ಚ ಕಾರ್ಯೋ ಭವತಿ ವಾಚಕಃ ॥೨೦॥

ಮಹಾಭಾರತವನ್ನು ವಾಚನಮಾಡುವವರು ಶುಚಿಯಾಗಿರಬೇಕು. ಶೀಲಸಂಪನ್ನರಾಗಿರಬೇಕು. ಬಿಳಿಯ ಬಟ್ಟೆಯನ್ನು ಧರಿಸಿರಬೇಕು. ಜಿತೇಂದ್ರಿಯನೂ, ಸಂಸ್ಕಾರಸಂಪನ್ನನೂ, ಎಲ್ಲ ಶಾಸ್ತ್ರಗಳನ್ನೂ ತಿಳಿದವನೂ, ಶ್ರದ್ಧಾಳುವೂ, ಅಸೂಯಾರಹಿತನೂ ಆಗಿರಬೇಕು. ರೂಪ-ಸೌಭಾಗ್ಯಸಂಪನ್ನನಾಗಿರಬೇಕು. ಇಂದ್ರಿಯಗಳನ್ನು ದಮನಮಾಡಿರಬೇಕು. ಸತ್ಯವಾದಿಯಾಗಿ ಜಿತೇಂದ್ರಿಯನಾಗಿರಬೇಕು. ದಾನಗಳಿಂದಲೂ ಸಂಭಾವನೆಗಳಿಂದಲೂ ಗೌರವಿಸಲ್ಪಟ್ಟಿರಬೇಕು.

ಅವಿಲಮ್ಬನಾಯಸ್ತಮದ್ರುತಂ ಧೀರಮೂರ್ಜಿತಮ್ ।
ಅಸಂಸಕ್ತಾಕ್ಷರಪದಂ ಸ್ವರಭಾವಸಮನ್ವಿತಮ್ ॥೨೧॥

ಮಹಾಭಾರತದ ಕಥೆಯನ್ನು ವಾಚನಮಾಡುವಾಗ ಸಾವಕಾಶವಾಗಿಯೂ ಹೇಳಬಾರದು ; ಅವಸರದಿಂದಲೂ ಹೇಳಬಾರದು. ಆರಾಮವಾಗಿ (ಆಯಾಸವಿಲ್ಲದಂತೆ) ಧೀರಗತಿಯಿಂದ ಅಕ್ಷರಗಳನ್ನೂ ಪದಗಳನ್ನೂ ಸ್ಪಷ್ಟವಾಗಿ ಉಚ್ಚರಿಸುತ್ತಾ ಉಚ್ಚಸ್ವರದಲ್ಲಿ ವಾಚನಮಾಡಬೇಕು. ಮಧುರವಾದ ಸ್ವರದಿಂದ ಭಾವಾರ್ಥವನ್ನು ತಿಳಿದುಕೊಂಡು ಕಥೆಯನ್ನು ವಿವರಿಸಿ ಹೇಳಬೇಕು.

ತ್ರಿಷಷ್ಟಿವರ್ಣಸಂಯುಕ್ತಮಷ್ಟಸ್ಥಾನಸಮೀರಿತಮ್ ।
ವಾಚಯೇದ್ವಾಚಕಃ ಸ್ವಸ್ಥಃ ಸ್ವಾಸೀನಃ ಸುಸಮಾಹಿತಃ ॥೨೨॥

ಅರವತ್ತು ಮೂರು ಅಕ್ಷರಗಳನ್ನೂ–ಅವುಗಳನ್ನು ಉಚ್ಚರಿಸುವ ಎಂಟು ಸ್ಥಾನಗಳಲ್ಲಿ–ಸರಿಯಾಗಿ ಸ್ಪಷ್ಟವಾಗಿ ಉಚ್ಚರಿಸಬೇಕು. ಕಥೆಯನ್ನು ವಾಚನಮಾಡುವಾಗ ವಾಚಕನು ಸ್ವಸ್ಥಚಿತ್ತನಾಗಿರಬೇಕು. ಏಕಾಗ್ರಚಿತ್ತನಾಗಿರಬೇಕು. ಒಳ್ಳೆಯ ಆಸನದಲ್ಲಿ ಸುಖವಾಗಿ ಕುಳಿತು ವಾಚನಮಾಡಬೇಕು.

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್ ॥೨೩॥

ನಾರಾಯಣನನ್ನೂ, ನರಶ್ರೇಷ್ಠನಾದ ನರನನ್ನೂ (ನರ-ನಾರಾಯಣರನ್ನೂ) ಸರಸ್ವತೀದೇವಿಯನ್ನೂ, ವ್ಯಾಸರನ್ನೂ ನಮಸ್ಕರಿಸಿ ಅನಂತರ ಜಯವನ್ನು (ಮಹಾಭಾರತವನ್ನು) ಪ್ರವಚನಮಾಡಬೇಕು.

ಈದೃಶಾದ್ವಾಚಕಾದ್ರಾಜಞ್ಛ್ರುತ್ವಾ ಭಾರತ ಭಾರತಮ್ ।
ನಿಯಮಸ್ಥಃ ಶುಚಿಃ ಶ್ರೋತಾ ಶೃಣ್ವನ್ಸ ಫಲಮಶ್ನುತೇ ॥೨೪॥

ಭಾರತನೇ! ಇಂತಹ ವಾಚಕನಿಂದ (ಪ್ರವಕ್ತಾರನಿಂದ) ಶ್ರೋತೃವು ನಿಯಮಪರಾಯಣನಾಗಿ ಶುಚಿಯಾಗಿ ಕೇಳಿದರೆ ಸಂಪೂರ್ಣಫಲವನ್ನು ಪಡೆದುಕೊಳ್ಳುತ್ತಾನೆ.

ಪಾರಣಂ ಪ್ರಥಮಂ ಪ್ರಾಪ್ಯ ದ್ವಿಜಾನ್ಕಾಮೈಶ್ಚ ತರ್ಪಯನ್ ।
ಅಗ್ನಿಷ್ಟೋಮಸ್ಯ ಯಜ್ಞಸ್ಯ ಫಲಂ ವೈ ಲಭತೇ ನರಃ ॥೨೫॥

ಅಪ್ಸರೋಗಣಸಂಕೀರ್ಣಂ ವಿಮಾನಂ ಲಭತೇ ಮಹತ್ ।
ಪ್ರಹೃಷ್ಟಃ ಸ ತು ದೇವೈಶ್ಚ ದಿವಂ ಯಾತಿ ಸಮಾಹಿತಃ ॥೨೬॥

ಮೊದಲನೆಯ ಪಾರಣೆಯ* ಸಮಯದಲ್ಲಿ ಶ್ರೋತೃವು ಬ್ರಾಹ್ಮಣರನ್ನು ಅವರಿಗೆ ಅಭೀಷ್ಟವಾದ ವಸ್ತುಗಳಿಂದ ತೃಪ್ತಿಪಡಿಸಿದರೆ-ಅಗ್ನಿಷ್ಟೋಮಯಾಗದ ಫಲವನ್ನು ಹೊಂದುತ್ತಾನೆ. ಅಪ್ಸರೆಯರಿಂದ ತುಂಬಿರುವ ಮಹಾವಿಮಾನವನ್ನು ಹೊಂದುತ್ತಾನೆ. ಪ್ರಹೃಷ್ಟಚಿತ್ತನಾಗಿ ಏಕಾಗ್ರವಾದ ಮನಸ್ಸಿನಿಂದ ಕೂಡಿದವನಾಗಿ ದೇವತೆಗಳೊಡನೆ ಸ್ವರ್ಗಕ್ಕೆ ಹೋಗುತ್ತಾನೆ.

ದ್ವಿತೀಯಂ ಪಾರಣಂ ಪ್ರಾಪ್ಯ ಸೋಽತಿರಾತ್ರಫಲಂ ಲಭೇತ್ ।
ಸರ್ವರತ್ನಮಯಂ ದಿವ್ಯಂ ವಿಮಾನಮಧಿರೋಹತಿ ॥೨೭॥

ಯಾವನು ವ್ರತನಿಷ್ಠನಾಗಿ ಮಹಾಭಾರತವನ್ನು ಎರಡನೆಯ ಬಾರಿಗೆ ಕೇಳಿ ಪಾರಣೆಯನ್ನು ಮಾಡುವನೋ–ಅವನು ಅತಿರಾತ್ರಯಾಗವನ್ನು

---

* ವ್ರತವು ಮುಗಿದನಂತರ ಮಾಡುವ ಭೋಜನಕ್ಕೆ ಪಾರಣವೆಂದು ಹೆಸರು. ಇಲ್ಲಿ ಮಹಾಭಾರತವನ್ನು ಆಮೂಲಾಗ್ರವಾಗಿ ಕೇಳಿದ ಬಳಿಕ ವ್ರತವು ಮುಗಿದಂತಾಗಿ ಅನಂತರ ಮಾಡುವ ಭೋಜನಕ್ಕೆ ಮೊದಲನೆಯ ಪಾರಣವೆಂದು ಕರೆದಿರುತ್ತಾರೆ. ಮಹಾಭಾರತವನ್ನು ಮೊದಲನೆಯ ಬಾರಿಗೆ ಮುಗಿಸುವುದು ಎಂದರ್ಥ. ಮುಂದೆ ಬರುವ ದ್ವಿತೀಯ ಪಾರಣ-ತೃತೀಯಪಾರಣಗಳಿಗೂ ಇದೇ ಅರ್ಥವನ್ನು ಇಟ್ಟುಕೊಳ್ಳಬೇಕು.

ಮಾಡಿದ ಫಲವನ್ನು ಹೊಂದುತ್ತಾನೆ. ಸರ್ವರತ್ನಮಯವಾದ, ದಿವ್ಯವಾದ ವಿಮಾನವನ್ನು ಆರೋಹಣಮಾಡುತ್ತಾನೆ.

ದಿವ್ಯಮಾಲ್ಯಾಮ್ಬರಧರೋ ದಿವ್ಯಗನ್ಧವಿಭೂಷಿತಃ ।
ದಿವ್ಯಾಙ್ಗದಧರೋ ನಿತ್ಯಂ ದೇವಲೋಕೇ ಮಹೀಯತೇ ॥೨೮॥

ದಿವ್ಯವಸ್ತ್ರವಿಭೂಷಿತನಾಗಿ, ದಿವ್ಯಗಂಧದಿಂದ ವಿಭೂಷಿತನಾಗಿ, ದಿವ್ಯವಾದ ತೋಳ್ಬಳೆಗಳನ್ನು ಧರಿಸಿ ನಿತ್ಯವೂ ದೇವಲೋಕದಲ್ಲಿ ಸಮ್ಮಾನಿತನಾಗುತ್ತಾನೆ.

ತೃತೀಯಂ ಪಾರಣಂ ಪ್ರಾಪ್ಯ ದ್ವಾದಶಾಹಫಲಂ ಲಭೇತ್ ।
ವಸತ್ಯಮರಸಂಕಾಶೋ ವರ್ಷಾಣ್ಯಯುತಶೋ ದಿವಿ ॥೨೯॥

ಮಹಾಭಾರತವನ್ನು ಮೂರನೆಯ ಬಾರಿಗೆ ವ್ರತನಿಷ್ಠನಾಗಿ ಕೇಳಿ ಮುಗಿಸಿ ವ್ರತಾಂಗಪಾರಣೆಯನ್ನು ಮಾಡುವವನು ದ್ವಾದಶಾಹಯಜ್ಞದ ಫಲವನ್ನು ಹೊಂದುತ್ತಾನೆ. ದೇವತೆಗಳಂತೆ ತೇಜಸ್ವಿಯಾಗಿ ಹತ್ತುಸಾವಿರ ವರ್ಷಗಳವರೆಗೆ ಸ್ವರ್ಗದಲ್ಲಿ ವಾಸಮಾಡುತ್ತಾನೆ.

ಚತುರ್ಥೇ ವಾಜಪೇಯಸ್ಯ ಪಞ್ಚಮೇ ದ್ವಿಗುಣಂ ಫಲಮ್ ।
ಉದಿತಾದಿತ್ಯಸಂಕಾಶಂ ಜ್ವಲನ್ತಮನಲೋಪಮಮ್ ॥೩೦॥
ವಿಮಾನಂ ವಿಬುಧೈಃ ಸಾರ್ಧಮಾರುಹ್ಯ ದಿವಿ ಗಚ್ಛತಿ ।
ವರ್ಷಾಯುತಾನಿ ಭವನೇ ಶಕ್ರಸ್ಯ ದಿವಿ ಮೋದತೇ ॥೩೧॥

ವ್ರತಾನುಷ್ಠಾನಪರನಾಗಿದ್ದು ಮಹಾಭಾರತಶ್ರವಣವನ್ನು ನಾಲ್ಕನೆಯ ಬಾರಿಗೆ ಮುಗಿಸಿ ವ್ರತಾಂಗವಾದ ನಾಲ್ಕನೆಯ ಪಾರಣೆಯನ್ನು ಮಾಡಿದರೆ ವಾಜಪೇಯಯಾಗಮಾಡಿದ ಫಲವನ್ನು ಹೊಂದುತ್ತಾನೆ. ಐದನೆಯ ಪಾರಣೆಯಿಂದ ಎರಡರಷ್ಟು ಹೆಚ್ಚಿನ ಫಲವನ್ನೂ ಹೊಂದುತ್ತಾನೆ. ಉದಯಿಸುವ ಸೂರ್ಯನಿಗೆ ಸದೃಶವಾದ, ಪ್ರಜ್ವಲಿಸುವ ಯಜ್ಞೇಶ್ವರನಂತೆಯೇ ಇರುವ ವಿಮಾನದಲ್ಲಿ ದೇವತೆಗಳೊಡನೆ ಕುಳಿತು ಸ್ವರ್ಗಕ್ಕೆ ಹೋಗುತ್ತಾನೆ. ಹತ್ತು ಸಾವಿರ ವರ್ಷಗಳ ಕಾಲ ಇಂದ್ರನ ಮನೆಯಲ್ಲಿ ಸಂತೋಷಭರಿತನಾಗಿರುತ್ತಾನೆ.

ಷಷ್ಠೇ ದ್ವಿಗುಣಮಸ್ತೀತಿ ಸಪ್ತಮೇ ತ್ರಿಗುಣಂ ಫಲಮ್ ।
ಕೈಲಾಸಶಿಖರಾಕಾರಂ ವೈದೂರ್ಯಮಣಿವೇದಿಕಮ್ ॥೩೨॥

ಪರಿಕ್ಷಿಪ್ತಂ ಚ ಬಹುಧಾ ಮಣಿವಿದ್ರುಮಭೂಷಿತಮ್ ।
ವಿಮಾನಂ ಸಮಧಿಷ್ಠಾಯ ಕಾಮಗಂ ಸಾಪ್ಸರೋಗಣಮ್ ॥೩೩॥

ಸರ್ವಾಲ್ಲೋಕಾನ್ವಿಚರತೇ ದ್ವಿತೀಯ ಇವ ಭಾಸ್ಕರಃ ।

ಆರನೆಯ ಬಾರಿಗೆ ವ್ರತನಿಷ್ಠನಾಗಿ ಮಹಾಭಾರತವನ್ನು ಸಮಗ್ರವಾಗಿ ಕೇಳಿ ವ್ರತಾಂಗವಾದ ಪಾರಣೆಯನ್ನು ಮಾಡಿದರೆ ಐದನೆಯ ಪಾರಣೆಯ ಎರಡರಷ್ಟು ಫಲವು ಲಭಿಸುತ್ತದೆ. ಏಳನೆಯ ಬಾರಿಗೆ ಮಹಾಭಾರತಕಥಾ ಶ್ರವಣವನ್ನು ಮುಗಿಸಿ ಪಾರಣೆಯನ್ನು ಮಾಡಿದರೆ ಮೂರುಪಟ್ಟು ಫಲವು ಲಭಿಸುತ್ತದೆ. ಹಾಗೆ ಏಳನೆಯ ಬಾರಿಗೆ ಮಹಾಭಾರತಶ್ರವಣವನ್ನು ಪಾರಣೆ ಮಾಡುವ ಮನುಷ್ಯನು ಕೈಲಾಸಶಿಖರದಂತೆಯೇ ಇರುವ, ವೈಡೂರ್ಯಮಣಿ ಗಳಿಂದ ನಿರ್ಮಿತವಾದ ವೇದಿಕೆಯಿಂದ ಕೂಡಿರುವ, ನಾನಾಪ್ರಕಾರವಾಗಿ ಸುಸಜ್ಜಿತವಾಗಿರುವ, ಮಣಿ-ಹವಳಗಳಿಂದ ವಿಭೂಷಿತವಾದ, ಸ್ವೇಚ್ಛೆಯಿಂದ ಸಂಚರಿಸುವ, ಅಪ್ಸರೆಯರಿಂದ ಯುಕ್ತವಾದ ವಿಮಾನದಲ್ಲಿ ಕುಳಿತು ಎರಡ ನೆಯ ಸೂರ್ಯನಂತೆಯೇ ಎಲ್ಲ ಲೋಕಗಳಲ್ಲಿಯೂ ಸಂಚರಿಸುತ್ತಾನೆ.

ಅಷ್ಟಮೇ ರಾಜಸೂಯಸ್ಯ ಪಾರಣೇ ಲಭತೇ ಫಲಮ್ ।
ಚನ್ದ್ರೋದಯನಿಭಂ ರಮ್ಯಂ ವಿಮಾನಮಧಿರೋಹತಿ ।
ಚನ್ದ್ರರಶ್ಮಿಪ್ರತೀಕಾಶೈರ್ಹಯೈರ್ಯುಕ್ತಂ ಮನೋಜವೈಃ ॥೩೪॥

ವ್ರತನಿಷ್ಠನಾಗಿ ಮಹಾಭಾರತವನ್ನು ಎಂಟನೆಯ ಬಾರಿಗೆ ಶ್ರವಣ ಮಾಡಿ ಪಾರಣೆಮಾಡುವವನು ರಾಜಸೂಯಯಾಗದ ಫಲವನ್ನು ಪಡೆಯು ತ್ತಾನೆ. ಚಂದ್ರನ ಕಿರಣಗಳಂತೆ ಪ್ರಕಾಶಮಾನವಾಗಿರುವ, ಮನೋವೇಗವುಳ್ಳ ಕುದುರೆಗಳಿಂದ ಯುಕ್ತವಾದ, ಚಂದ್ರೋದಯಸದೃಶವಾದ, ರಮ್ಯವಾದ ವಿಮಾನವನ್ನು ಆರೋಹಣಮಾಡುತ್ತಾನೆ.

ಸೇವ್ಯಮಾನೋ ವರಸ್ತ್ರೀಣಾಂ ಚನ್ದ್ರಾತ್ಕಾನ್ತತರೈರ್ಮುಖೈಃ ।
ಮೇಖಲಾನಾಂ ನಿನಾದೇನ ನೂಪುರಾಣಾಂ ಚ ನಿಃಸ್ವನೈಃ ।
ಅಙ್ಕೇ ಪರಮನಾರೀಣಾಂ ಸುಖಸುಪ್ತೋ ವಿಬುಧ್ಯತೇ ॥೩೬॥

ಚಂದ್ರನಿಗಿಂತಲೂ ಅಧಿಕವಾದ ಕಾಂತಿಯುಳ್ಳ ಮುಖಗಳಿಂದ ಕೂಡಿ ರುವ ಸುಂದರಸ್ತ್ರೀಯರು ಅವನ ಸೇವೆಯನ್ನು ಮಾಡುತ್ತಿರುತ್ತಾರೆ. ಶ್ರೇಷ್ಠ

ರಾದ ಆ ನಾರಿಯರ ತೊಡೆಯ ಮೇಲೆ ಸುಖವಾಗಿ ಮಲಗಿರುವ ಅವನು ವರಸ್ತ್ರೀಯರು ತೊಟ್ಟಿರುವ ಒಡ್ಯಾಣಗಳ ಶಬ್ದಗಳಿಂದಲೂ ಕಾಲಂದಿಗೆಗಳ ಶಬ್ದಗಳಿಂದಲೂ ಎಚ್ಚರಗೊಳ್ಳುತ್ತಾನೆ.

ನವಮೇ ಕ್ರತುರಾಜಸ್ಯ ವಾಜಿಮೇಧಸ್ಯ ಭಾರತ ॥೩೭॥

ಕಾಞ್ಚನಸ್ತಮ್ಭನಿರ್ಯೂಹವೈದೂರ್ಯಕೃತವೇದಿಕಮ್ ।
ಜಾಮ್ಬೂನದಮಯೈರ್ದಿವ್ಯೈರ್ಗವಾಕ್ಷೈಃ ಸರ್ವತೋ ವೃತಮ್ ॥೩೮॥

ಸೇವಿತಂ ಚಾಪ್ಸರಃಸಙ್ಘೈರ್ಗನ್ಧರ್ವೈರ್ದಿವಿಚಾರಿಭಿಃ ।
ವಿಮಾನಂ ಸಮಧಿಷ್ಠಾಯ ಶ್ರಿಯಾ ಪರಮಯಾ ಜ್ವಲನ್ ॥೩೯॥

ದಿವ್ಯಮಾಲ್ಯಾಮ್ಬರಧರೋ ದಿವ್ಯಚನ್ದನರೂಷಿತಃ ।
ಮೋದತೇ ದೈವತೈಃ ಸಾರ್ಧಂ ದಿವಿ ದೇವ ಇವಾಪರಃ ॥೪೦॥

ಒಂಬತ್ತನೆಯ ಪಾರಣೆಯನ್ನು ಮಾಡಿದವನು ಯಜ್ಞಗಳಿಗೆ ರಾಜಪ್ರಾಯದಂತಿರುವ ಅಶ್ವಮೇಧಯಾಗವನ್ನು ಮಾಡಿದ ಫಲವನ್ನು ಹೊಂದುತ್ತಾನೆ. ಚಿನ್ನದ ಕಂಭಗಳಿಂದಲೂ ಬಾಗಿಲುಗಳಿಂದಲೂ ಕೂಡಿರುವ, ವೈಡೂರ್ಯಮಯವಾದ ವೇದಿಕೆಯಿಂದ ಕೂಡಿರುವ, ಎಲ್ಲ ಕಡೆಗಳಲ್ಲಿಯೂ ಸುವರ್ಣಮಯವಾದ ಮತ್ತು ದಿವ್ಯವಾದ ಗವಾಕ್ಷಿಗಳಿಂದ ಸಮಲಂಕೃತವಾಗಿರುವ, ಸ್ವರ್ಗವಾಸಿಗಳಾದ ಅಪ್ಸರೆಯರಿಂದಲೂ ಗಂಧರ್ವರಿಂದಲೂ ಸೇವಿಸಲ್ಪಡುತ್ತಿರುವ ವಿಮಾನದಲ್ಲಿ ಕುಳಿತು, ಪರಮಶ್ರೇಷ್ಠವಾದ ಕಾಂತಿಯಿಂದ ಪ್ರಜ್ವಲಿಸುತ್ತಾ, ದಿವ್ಯವಾದ ಮಾಲೆಗಳನ್ನೂ ವಸ್ತ್ರಗಳನ್ನೂ ಧರಿಸಿ, ದಿವ್ಯಚಂದನದಿಂದ ಲೇಪಿತನಾಗಿ, ಸ್ವರ್ಗದಲ್ಲಿ ಮತ್ತೊಬ್ಬ ದೇವತೆಯಂತೆಯೇ ದೇವತೆಗಳೊಡನೆ ಆನಂದಪಡುತ್ತಿರುತ್ತಾನೆ.

ದಶಮಂ ಪಾರಣಂ ಪ್ರಾಪ್ಯ ದ್ವಿಜಾತೀನಭಿವನ್ದ್ಯ ಚ ।
ಕಿಂಕಿಣೀಜಾಲನಿರ್ಘೋಷಂ ಪತಾಕಾಧ್ವಜಶೋಭಿತಮ್ ॥೪೧॥

ರತ್ನವೇದಿಕಸಮ್ಬಾಧಂ ವೈದೂರ್ಯಮಣಿತೋರಣಮ್ ।
ಹೇಮಜಾಲಪರಿಕ್ಷಿಪ್ತಂ ಪ್ರವಾಲವಲಭೀಮುಖಮ್ ॥೪೨॥

ಗನ್ಧರ್ವೈರ್ಗೀತಕುಶಲೈರಪ್ಸರೋಭಿಶ್ಚ ಶೋಭಿತಮ್ ।
ವಿಮಾನಂ ಸುಕೃತಾವಾಸಂ ಸುಖೇನೈವೋಪಪದ್ಯತೇ ॥೪೩॥

ಹತ್ತನೆಯ ಪಾರಣೆಯನ್ನುಮಾಡಿ ಬ್ರಾಹ್ಮಣರನ್ನು ನಮಸ್ಕರಿಸಿದವನಿಗೆ ಅವಸಾನಾನಂತರದಲ್ಲಿ ಸಣ್ಣ-ಸಣ್ಣ ಗಂಟೆಗಳ ಸಮೂಹದಿಂದ ಉಂಟಾಗುವ ಧ್ವನಿಯುಳ್ಳ, ಪತಾಕೆ-ಧ್ವಜಗಳಿಂದ ಸುಶೋಭಿತವಾದ, ರತ್ನಮಯವಾದ ವೇದಿಕೆಯಿಂದ ಕೂಡಿರುವ, ವೈಡೂರ್ಯಮಯವಾದ ಬಹಿರ್ದ್ವಾರದಿಂದ (ತೋರಣಗಳಿಂದ) ಕೂಡಿರುವ, ಸುವರ್ಣಮಯವಾದ ಬಲೆಗಳಿಂದ ಆಚ್ಛಾದಿತವಾಗಿರುವ, ಮುಂಭಾಗದಲ್ಲಿ ಹವಳದ ಪಟ್ಟಿಯಿಂದ ಕೂಡಿರುವ, ಗಾಯನಕುಶಲರಾದ ಗಂಧರ್ವರಿಂದಲೂ ಅಪ್ಸರೆಯರಿಂದಲೂ ಶೋಭಾಯ ಮಾನವಾಗಿರುವ, ಸುಕೃತಿಗಳು ವಾಸಮಾಡಲು ಯೋಗ್ಯವಾದ ವಿಮಾನವು ಅನಾಯಾಸವಾಗಿ ಸಿಕ್ಕುತ್ತದೆ.

ಮುಕುಟೇನಾಗ್ನಿವರ್ಣೇನ ಜಾಮ್ಬೂನದವಿಭೂಷಿಣಾ ।
ದಿವ್ಯಚನ್ದನದಿಗ್ಧಾಙ್ಗೋ ದಿವ್ಯಮಾಲ್ಯವಿಭೂಷಿತಃ ॥೪೪॥

ದಿವ್ಯಾಲ್ಲೋಕಾನ್ವಿಚರತಿ ದಿವ್ಯೈರ್ಭೋಗೈಃ ಸಮನ್ವಿತಃ ।
ವಿಬುಧಾನಾಂ ಪ್ರಸಾದೇನ ಶ್ರಿಯಾ ಪರಮಯಾ ಯುತಃ ॥೪೫॥

ಅವನು ಆ ವಿಮಾನದಲ್ಲಿ ಅಗ್ನಿಯಂತೆ ಪ್ರದೀಪ್ತವಾದ ಕಿರೀಟವನ್ನು ಧರಿಸಿ, ಸುವರ್ಣಮಯವಾದ ಆಭರಣಗಳಿಂದ ಭೂಷಿತನಾಗಿ, ದಿವ್ಯಚಂದನ ದಿಂದ ಲೇಪಿತವಾದ ಶರೀರವುಳ್ಳವನಾಗಿ, ದಿವ್ಯವಾದ ಮಾಲೆಗಳಿಂದ ವಿಭೂಷಿತನಾಗಿ, ದಿವ್ಯಭೋಗಗಳಿಂದ ಯುಕ್ತನಾಗಿ, ಪರಮಶ್ರೇಷ್ಠವಾದ ಕಾಂತಿಯಿಂದ ಕೂಡಿದವನಾಗಿ–ದೇವತೆಗಳ ಕೃಪೆಯಿಂದ ದಿವ್ಯವಾದ ಲೋಕ ಗಳಲ್ಲಿ ಸಂಚರಿಸುತ್ತಿರುತ್ತಾನೆ.

ಅಥ ವರ್ಷಗಣಾನೇವಂ ಸ್ವರ್ಗಲೋಕೇ ಮಹೀಯತೇ ।
ತತೋ ಗನ್ಧರ್ವಸಹಿತಃ ಸಹಸ್ರಾಣ್ಯೇಕವಿಂಶತಿಮ್ ।
ಪುರನ್ದರಪುರೇ ರಮ್ಯೇ ಶಕ್ರೇಣ ಸಹ ಮೋದತೇ ॥೪೬॥

ಹೀಗೆ ಅನೇಕ ವರ್ಷಗಳವರೆಗೆ ಅವನು ಸ್ವರ್ಗದಲ್ಲಿ ಸಮ್ಮಾನಿತನಾಗು ತ್ತಾನೆ. ಬಳಿಕ ಇಪ್ಪತ್ತೊಂದು ಸಾವಿರ ವರ್ಷಗಳವರೆಗೆ ಗಂಧರ್ವರ ಜೊತೆಯಲ್ಲಿ ರಮ್ಯವಾದ ಪುರಂದರನ ಪುರದಲ್ಲಿ (ಅಮರಾವತಿಯಲ್ಲಿ) ಇಂದ್ರನೊಡನೆ ಆನಂದಪಡುತ್ತಿರುತ್ತಾನೆ.

ದಿವ್ಯಯಾನವಿಮಾನೇಷು ಲೋಕೇಷು ವಿವಿಧೇಷು ಚ ।
ದಿವ್ಯನಾರೀಗಣಾಕೀರ್ಣೋ ನಿವಸತ್ಯಮರೋ ಯಥಾ ॥೪೭॥

ದಿವ್ಯವಾದ ರಥಗಳಲ್ಲಿಯೂ ವಿಮಾನಗಳಲ್ಲಿಯೂ ಕುಳಿತು ವಿಧ-ವಿಧವಾದ ಲೋಕಗಳಲ್ಲಿ ದಿವ್ಯರಾದ ನಾರಿಯರ ಸಮೂಹಗಳಿಂದ ಸುತ್ತುವರಿಯಲ್ಪಟ್ಟವನಾಗಿ ದೇವತೆಗಳಂತೆಯೇ ವಾಸಿಸುತ್ತಿರುತ್ತಾನೆ.

ತತಃ ಸೂರ್ಯಸ್ಯ ಭವನೇ ಚನ್ದ್ರಸ್ಯ ಭವನೇ ತಥಾ ।
ಶಿವಸ್ಯ ಭವನೇ ರಾಜನ್ವಿಷ್ಣೋರ್ಯಾತಿ ಸಲೋಕತಾಮ್ ॥೪೮॥

ಅನಂತರ ಅವನು ಸೂರ್ಯ-ಚಂದ್ರರ ಮತ್ತು ಹರಿ-ಹರರ ಲೋಕಗಳಿಗೂ ಹೋಗುತ್ತಾನೆ.

ಜನಮೇಜಯ! ಮಹಾಭಾರತದ ಶ್ರವಣವು ಇಂತಹ ಅಮೋಘ ಫಲವನ್ನೇ ಕೊಡುತ್ತದೆ. ಇದನ್ನು ಪುನಃ ವಿಚಾರಮಾಡಬೇಕಾಗಿಯೇ ಇಲ್ಲ. ಮಹಾಭಾರತದ ಮಹಿಮೆಯ ವಿಷಯವಾಗಿಯೂ ಮತ್ತು ಅದರ ಶ್ರವಣದಿಂದ ಲಭಿಸುವ ಫಲದ ವಿಷಯದಲ್ಲಿಯೂ ಮನುಷ್ಯನು ಶ್ರದ್ಧಾಳುವಾಗಿರಬೇಕು. ಹೀಗೆ ನನ್ನ ಗುರುಗಳಾದ ವ್ಯಾಸರೇ ಹೇಳಿದ್ದಾರೆ.

ಮಹಾಭಾರತದ ವಾಚಕನಿಗೆ ಅವನು ಅಪೇಕ್ಷಿಸುವುದೆಲ್ಲವನ್ನೂ ಕೊಡಬೇಕು. ಅದರಲ್ಲಿಯೂ ವಿಶೇಷವಾಗಿ ಆನೆ, ಕುದುರೆ, ರಥ–ಇವೇ ಮುಂತಾದ ವಾಹನಗಳನ್ನು ಕೊಡಬೇಕು.

ಕಟಕೇ ಕುಣ್ಡಲೇ ಚೈವ ಬ್ರಹ್ಮಸೂತ್ರಂ ತಥಾ ಪರಮ್ ।
ವಸ್ತ್ರಂ ಚೈವ ವಿಚಿತ್ರಂ ಚ ಗನ್ಧಂ ಚೈವ ವಿಶೇಷತಃ ।
ದೇವವತ್ಪೂಜಯೇತ್ತಂ ತು ವಿಷ್ಣುಲೋಕಮವಾಪ್ನುಯಾತ್ ॥೫೨॥

ತೋಡಾಗಳನ್ನೂ, ಕುಂಡಲಗಳನ್ನೂ, ಬ್ರಹ್ಮಸೂತ್ರವನ್ನೂ, ವಿಚಿತ್ರವಾದ ವಸ್ತ್ರವನ್ನೂ, ವಿಶೇಷವಾಗಿ ಗಂಧವನ್ನೂ ಅರ್ಪಿಸಿ ದೇವತೆಯನ್ನು ಪೂಜಿಸುವಂತೆಯೇ ವಾಚಕನನ್ನು ಪೂಜಿಸಬೇಕು. ಹಾಗೆ ಮಾಡುವ ಶ್ರೋತೃವು ವಿಷ್ಣುಲೋಕವನ್ನು ಹೊಂದುತ್ತಾನೆ.

ಜನಮೇಜಯ! ಬ್ರಾಹ್ಮಣನಿಂದ ಮಹಾಭಾರತದ ಕಥಾಪ್ರವಚನವು

ಪ್ರಾರಂಭವಾಗಿ ಒಂದೊಂದು ಪರ್ವವು ಮುಗಿದನಂತರ ಕ್ಷತ್ರಿಯರು ಜಾತಿ, ದೇಶ, ಸತ್ಯನಿಷ್ಠೆ, ಮಹಿಮೆ, ಧರ್ಮ ಮತ್ತು ವೃತ್ತಿ–ಇವುಗಳನ್ನು ತಿಳಿದು ಬ್ರಾಹ್ಮಣರಿಗೆ ಯಾವ ಯಾವ ವಸ್ತುಗಳನ್ನು ಅರ್ಪಿಸಬೇಕೆಂಬುದರ ಬಗೆಗೆ ವಿವರಿಸಿ ಹೇಳುತ್ತೇನೆ.

ಸ್ವಸ್ತಿ ವಾಚ್ಯ ದ್ವಿಜಾನಾದೌ ತತಃ ಕಾರ್ಯೇ ಪ್ರವರ್ತಿತೇ ।
ಸಮಾಪ್ತೇ ಪರ್ವಣಿ ತತಃ ಸ್ವಶಕ್ತ್ಯಾ ಪೂಜಯೇದ್ದ್ವಿಜಾನ್ ॥೫೫॥

ಮೊದಲು ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿ ಮಹಾಭಾರತ ಕಥಾವಾಚನವನ್ನು ಪ್ರಾರಂಭಿಸಬೇಕು. ಒಂದು ಪರ್ವವು ಮುಗಿದನಂತರ ತನ್ನ ಶಕ್ತಿಗೆ ಅನುಸಾರವಾಗಿ ಬ್ರಾಹ್ಮಣರನ್ನು ಸತ್ಕರಿಸಬೇಕು.

ಆದೌ ತು ವಾಚಕಂ ಚೈವ ವಸ್ತ್ರಗನ್ಧಸಮನ್ವಿತಮ್ ।
ವಿಧಿವದ್ಭೋಜಯೇದ್ರಾಜನ್ಮಧುಪಾಯಸಮುತ್ತಮಮ್ ॥೫೬॥

ಆದಿಪರ್ವದ ಕಥೆಯನ್ನು ಹೇಳುವಾಗ ವಾಚಕನಿಗೆ ನೂತನವಸ್ತ್ರವನ್ನು ಹೊದ್ದಿಸಿ ಗಂಧವನ್ನು ಲೇಪಿಸಿ ಸತ್ಕರಿಸಬೇಕು. ಅನಂತರ ಅವನಿಗೆ ವಿಧಿವತ್ತಾಗಿ ಮಧುರವಾಗಿರುವ ಪಾಯಸದ ಭೋಜನವನ್ನು ಮಾಡಿಸಬೇಕು.

ತತೋ ಮೂಲಫಲಪ್ರಾಯಂ ಪಾಯಸಂ ಮಧುಸರ್ಪಿಷಾ ।
ಆಸ್ತೀಕೇ ಭೋಜಯೇದ್ರಾಜನ್ದದ್ಯಾಚ್ಚೈವ ಗುಡೌದನಮ್ ॥೫೭॥

ಅನಂತರ ಆಸ್ತೀಕಪರ್ವದ ಕಥಾಪ್ರವಚನವು ಮುಗಿದಾಗ ಬ್ರಾಹ್ಮಣರಿಗೆ ಮಧುವಿನಿಂದಲೂ ತುಪ್ಪದಿಂದಲೂ ಮಿಶ್ರವಾದ ಪಾಯಸವನ್ನು ಭೋಜನಮಾಡಿಸಬೇಕು. ಭೋಜನದಲ್ಲಿ ಮೂಲ-ಫಲಗಳು ಹೆಚ್ಚಾಗಿರಬೇಕು. ಬೆಲ್ಲದ ಅನ್ನವನ್ನು ಬಡಿಸಬೇಕು.

ಅಪೂಪೈಶ್ಚೈವ ಪೂಪೈಶ್ಚ ಮೋದಕೈಶ್ಚ ಸಮನ್ವಿತಮ್ ।
ಸಭಾಪರ್ವಣಿ ರಾಜೇನ್ದ್ರ ಹವಿಷ್ಯಂ ಭೋಜಯೇದ್ದ್ವಿಜಾನ್ ॥೫೮॥

ಸಭಾಪರ್ವಪ್ರವಚನವು ಮುಗಿದಾಗ ಬ್ರಾಹ್ಮಣರಿಗೆ ಅಪೂಪ

ಗಳಿಂದಲೂ ಪೂಪಗಳಿಂದಲೂ ಮೋದಕಗಳಿಂದಲೂ ಕೂಡಿದ ಹವಿಷ್ಯವನ್ನು ಭೋಜನಮಾಡಿಸಬೇಕು.

ಆರಣ್ಯಕೇ ಮೂಲಫಲೈಸ್ತರ್ಪಯೇತ್ತು ದ್ವಿಜೋತ್ತಮಾನ್ ।
ಅರಣೀಪರ್ವ ಚಾಸಾದ್ಯ ಜಲಕುಮ್ಭಾನ್ಪ್ರದಾಪಯೇತ್ ॥೫೯॥

ವನಪರ್ವದ ಪ್ರವಚನವು ಮುಗಿದಾಗ, ಬ್ರಾಹ್ಮಣರನ್ನು ಫಲ-ಮೂಲ ಗಳಿಂದ ತೃಪ್ತಿಗೊಳಿಸಬೇಕು. ಅರಣೀಪರ್ವವನ್ನು ಪ್ರವಚನಮಾಡುವಾಗ ಜಲಕುಂಭಗಳನ್ನು ದಾನಕೊಡಬೇಕು.

ತರ್ಪಣಾನಿ ಚ ಮುಖ್ಯಾನಿ ವನ್ಯಮೂಲಫಲಾನಿ ಚ ।
ಸರ್ವಕಾಮಗುಣೋಪೇತಂ ವಿಪ್ರೇಭ್ಯೋಽನ್ನಂ ಪ್ರದಾಪಯೇತ್ ॥೬೦॥

ಯಾವುದನ್ನು ಭಕ್ಷಿಸುವುದರಿಂದ ತೃಪ್ತಿಯುಂಟಾಗುವುದೋ–ಅಂತಹ ಕಾಡಿನಲ್ಲಿ ಸಿಕ್ಕುವ, ಮುಖ್ಯ-ಮುಖ್ಯವಾದ, ಅಭೀಷ್ಟವಾದ ಗುಣಗಳಿಂದ ಕೂಡಿದ, ಫಲಮೂಲಯುಕ್ತವಾದ ಅನ್ನವನ್ನು ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು.

ವಿರಾಟಪರ್ವಣಿ ತಥಾ ವಾಸಾಂಸಿ ವಿವಿಧಾನಿ ಚ ।
ಉದ್ಯೋಗೇ ಭರತಶ್ರೇಷ್ಠ ಸರ್ವಕಾಮಗುಣಾನ್ವಿತಮ್ ।
ಭೋಜನಂ ಭೋಜಯೇದ್ವಿಪ್ರಾನ್ಗನ್ಧಮಾಲ್ಯೈರಲಂಕೃತಾನ್ ॥೬೧॥

ವಿರಾಟಪರ್ವವನ್ನು ಮುಗಿಸಿದಾಗ ವಿಧ-ವಿಧವಾದ ವಸ್ತ್ರಗಳನ್ನು ವಾಚಕನಿಗೆ ಕೊಡಬೇಕು. ಉದ್ಯೋಗಪರ್ವದ ಪ್ರವಚನವು ಪ್ರಾರಂಭ ವಾದಾಗ ಅಭೀಷ್ಟವಾದ ಗುಣಗಳಿಂದ ಯುಕ್ತವಾದ ಅನ್ನವನ್ನು ಗಂಧ ಮತ್ತು ಪುಷ್ಪಮಾಲಿಕೆಗಳಿಂದ ಅಲಂಕೃತರಾದ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು.

ಭೀಷ್ಮಪರ್ವಣಿ ರಾಜೇನ್ದ್ರ ದತ್ತ್ವಾ ಯಾನಮನುತ್ತಮಮ್ ।
ತತಃ ಸರ್ವಗುಣೋಪೇತಮನ್ನಂ ದದ್ಯಾತ್ಸುಸಂಸ್ಕೃತಮ್ ॥೬೨॥

ಭೀಷ್ಮಪರ್ವದ ವಾಚನವು ಮುಗಿದಾಗ ವಾಚಕನಿಗೆ ಶ್ರೇಷ್ಠವಾದ ಸವಾರೀ ಗಾಡಿಯನ್ನು ದಾನವಾಗಿಕೊಟ್ಟು ಸಮಸ್ತಗುಣಗಳಿಂದ ಕೂಡಿದ ಸಂಸ್ಕರಿಸಲ್ಪಟ್ಟ ಅನ್ನವನ್ನು ಭೋಜನಮಾಡಿಸಬೇಕು.

ದ್ರೋಣಪರ್ವಣಿ ವಿಪ್ರೇಭ್ಯೋ ಭೋಜನಂ ಪರಮಾರ್ಚಿತಮ್ ।
ಶರಾಶ್ಚ ದೇಯಾ ರಾಜೇನ್ದ್ರ ಚಾಪಾನ್ಯಸಿವರಾಸ್ತಥಾ ॥೬೩॥

ರಾಜೇಂದ್ರನೇ! ದ್ರೋಣಪರ್ವವನ್ನು ವಾಚನಮಾಡುವಾಗ ಬ್ರಾಹ್ಮಣರಿಗೆ ಪರಮೋತ್ಕೃಷ್ಟವಾದ ಭೋಜನವನ್ನು ಮಾಡಿಸಬೇಕು. ಮತ್ತು ಅವರಿಗೆ ಬಾಣಗಳನ್ನೂ, ಧನುಸ್ಸುಗಳನ್ನೂ ಮತ್ತು ಖಡ್ಗಗಳನ್ನೂ ದಾನ ಮಾಡಬೇಕು.

ಕರ್ಣಪರ್ವಣ್ಯಪಿ ತಥಾ ಭೋಜನಂ ಸಾರ್ವಕಾಮಿಕಮ್ ।
ವಿಪ್ರೇಭ್ಯೋ ಸಂಸ್ಕೃತಂ ಸಮ್ಯಗ್ದದ್ಯಾತ್ಸಂಯತಮಾನಸಃ ॥೬೪॥

ಕರ್ಣಪರ್ವವನ್ನು ವಾಚನಮಾಡುವಾಗಲೂ ಶ್ರೋತೃವು ತನ್ನ ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು ಸರ್ವರಿಗೂ ರುಚಿಕರವಾಗುವಂತೆ ಸಂಸ್ಕೃತವಾದ ಅನ್ನವನ್ನು ಬ್ರಾಹ್ಮಣರಿಗೆ ಚೆನ್ನಾಗಿ ಭೋಜನಮಾಡಿಸಬೇಕು.

ಶಲ್ಯಪರ್ವಣಿ ರಾಜೇನ್ದ್ರ ಮೋದಕೈಃ ಸುಗುಡೌದನೈಃ ।
ಅಪೂಪೈಸ್ತರ್ಪಣೈಶ್ಚೈವ ಸರ್ವಮನ್ನಂ ಪ್ರದಾಪಯೇತ್ ॥೬೫॥

ಜನಮೇಜಯ! ಶಲ್ಯಪರ್ವವನ್ನು ವಾಚನಮಾಡುವಾಗ ಕಡುಬುಗಳಿಂದಲೂ, ಬೆಲ್ಲದ ಅನ್ನದಿಂದಲೂ, ಅಪೂಪಗಳಿಂದಲೂ ಮತ್ತು ತೃಪ್ತಿಯನ್ನುಂಟುಮಾಡುವ ಫಲವೇ ಮೊದಲಾದುವುಗಳಿಂದಲೂ ಕೂಡಿರುವ ಅನ್ನವನ್ನು ಬ್ರಾಹ್ಮಣರಿಗೆ ಭೋಜನಮಾಡಿಸಬೇಕು.

ಗದಾಪರ್ವಣ್ಯಪಿ ತಥಾ ಮುದ್ಗಮಿಶ್ರಂ ಪ್ರದಾಪಯೇತ್ ।
ಸ್ತ್ರೀಪರ್ವಣಿ ತಥಾ ರತ್ನೈಸ್ತರ್ಪಯೇತ್ತು ದ್ವಿಜೋತ್ತಮಾನ್ ॥೬೬॥

ಗದಾಪರ್ವವನ್ನು ವಾಚನಮಾಡುವಾಗ ಹೆಸರುಕಾಳಿನಿಂದ ಮಿಶ್ರವಾದ ಅನ್ನವನ್ನು (ಪೊಂಗಲ್) ಭೋಜನಮಾಡಿಸಬೇಕು. ಸ್ತ್ರೀಪರ್ವವನ್ನು ವಾಚನಮಾಡುವಾಗ ನಾನಾವಿಧವಾದ ರತ್ನಗಳ ಪ್ರದಾನದಿಂದ ಬ್ರಾಹ್ಮಣರನ್ನು ತೃಪ್ತಿಗೊಳಿಸಬೇಕು.

ಘೃತೌದನಂ ಪುರಸ್ತಾಚ್ಚ ಐಷೀಕೇ ದಾಪಯೇತ್ಪುನಃ ।
ತತಃ ಸರ್ವಗುಣೋಪೇತಮನ್ನಂ ದದ್ಯಾತ್ಸುಸಂಸ್ಕೃತಮ್ ॥೬೭॥

ಐಷೀಕಪರ್ವವನ್ನು ವಾಚನಮಾಡುವ ಮೊದಲು ತುಪ್ಪದ ಅನ್ನವನ್ನು ಭೋಜನಮಾಡಿಸಬೇಕು. ಪರ್ವವು ಮುಗಿದ ಮೇಲೆ ಚೆನ್ನಾಗಿ ಸಂಸ್ಕರಿಸಿದ ಸರ್ವಗುಣಸಂಪನ್ನವಾದ ಅನ್ನವನ್ನು ಬ್ರಾಹ್ಮಣಶ್ರೇಷ್ಠರಿಗೆ ಭೋಜನ ಮಾಡಿಸಬೇಕು.

ಶಾನ್ತಿಪರ್ವಣ್ಯಪಿ ತಥಾ ಹವಿಷ್ಯಂ ಭೋಜಯೇದ್ದ್ವಿಜಾನ್ ।
ಆಶ್ವಮೇಧಿಕಮಾಸಾದ್ಯ ಭೋಜನಂ ಸಾರ್ವಕಾಮಿಕಮ್ ॥೬೮॥

ಶಾಂತಿಪರ್ವವನ್ನು ವಾಚನಮಾಡುವಾಗ ಬ್ರಾಹ್ಮಣರಿಗೆ ಹವಿಷ್ಯಾನ್ನವನ್ನು ಭೋಜನಮಾಡಿಸಬೇಕು. ಅಶ್ವಮೇಧಪರ್ವವು ಪ್ರವಚನವಾಗುವಾಗ ಸರ್ವಾಭೀಷ್ಟವಾದ ಅನ್ನವನ್ನು ಭೋಜನಮಾಡಿಸಬೇಕು.

ತಥಾಶ್ರಮನಿವಾಸೇ ತು ಹವಿಷ್ಯಂ ಭೋಜಯೇದ್ದ್ವಿಜಾನ್ ।
ಮೌಸಲೇ ಸಾರ್ವಗುಣಿಕಂ ಗನ್ಧಮಾಲ್ಯಾನುಲೇಪನಮ್ ॥೬೯॥

ಆಶ್ರಮವಾಸಪರ್ವವನ್ನು ವಾಚನಮಾಡುವಾಗ ಹವಿಷ್ಯಾನ್ನವನ್ನು ಬ್ರಾಹ್ಮಣರಿಗೆ ಭೋಜನಮಾಡಿಸಬೇಕು. ಮೌಸಲಪರ್ವವನ್ನು ವಾಚನ ಮಾಡುವಾಗ ಬ್ರಾಹ್ಮಣರಿಗೆ ಸರ್ವಗುಣಸಂಪನ್ನವಾದ ಅನ್ನವನ್ನು ಭೋಜನ ಮಾಡಿಸಬೇಕು. ಚಂದನ, ಮಾಲೆ ಮತ್ತು ಅನುಲೇಪನಗಳನ್ನು ದಾನ ಮಾಡಬೇಕು.

ಮಹಾಪ್ರಾಸ್ಥಾನಿಕೇ ತದ್ವತ್ಸರ್ವಕಾಮಗುಣಾನ್ವಿತಾಮ್ ।
ಸ್ವರ್ಗಪರ್ವಣ್ಯಪಿ ತಥಾ ಹವಿಷ್ಯಂ ಭೋಜಯೇದ್ದ್ವಿಜಾನ್ ॥೭೦॥

ಮಹಾಪ್ರಸ್ಥಾನಿಕಪರ್ವವನ್ನು ವಾಚನಮಾಡುವಾಗ ಅಭೀಷ್ಟವಾದ ಗುಣಗಳಿಂದ ಕೂಡಿದ ಅನ್ನವನ್ನು ಬ್ರಾಹ್ಮಣರಿಗೆ ಭೋಜನಮಾಡಿಸಬೇಕು. ಸ್ವರ್ಗಾರೋಹಣಪರ್ವವನ್ನು ವಾಚನಮಾಡಿಸುವಾಗಲೂ ಹವಿಷ್ಯಾನ್ನವನ್ನು ಬ್ರಾಹ್ಮಣರಿಗೆ ಭೋಜನಮಾಡಿಸಬೇಕು.

ಹರಿವಂಶಸಮಾಪ್ತೌ ತು ಸಹಸ್ರಂ ಭೋಜಯೇದ್ದ್ವಿಜಾನ್ ।
ಗಾಮೇಕಾಂ ನಿಷ್ಕಸಂಯುಕ್ತಾಂ ಬ್ರಾಹ್ಮಣಾಯ ನಿವೇದಯೇತ್ ॥೭೧॥

ಹರಿವಂಶದ ವಾಚನವು ಮುಗಿದಾಗ ಒಂದು ಸಾವಿರ ಮಂದಿ ಬ್ರಾಹ್ಮಣರಿಗೆ ಭೋಜನಮಾಡಿಸಬೇಕು. ಸುವರ್ಣನಾಣ್ಯದೊಡನೆ ಒಂದು ಗೋವನ್ನು ದಾನವಾಗಿ ಕೊಡಬೇಕು.

ತದರ್ಧೇನಾಪಿ ದಾತವ್ಯಾ ದರಿದ್ರೇಣಾಪಿ ಪಾರ್ಥಿವ ।
ಪ್ರತಿಪರ್ವಸಮಾಪ್ತೌ ತು ಪುಸ್ತಕಂ ವೈ ವಿಚಕ್ಷಣಃ ॥೭೨॥
ಸುವರ್ಣೇನ ಚ ಸಂಯುಕ್ತಂ ವಾಚಕಾಯ ನಿವೇದಯೇತ್ ॥೭೩॥

ಶ್ರೋತೃವು ದರಿದ್ರನಾದರೆ ಅರ್ಧದಷ್ಟು ದಕ್ಷಿಣೆಯೊಡನೆ ಗೋದಾನವನ್ನು ಅವಶ್ಯವಾಗಿ ಮಾಡಬೇಕು. ಒಂದೊಂದು ಪರ್ವವು ಮುಗಿದಾಗಲೂ ವಿದ್ವಾಂಸನಾದವನು ಸುವರ್ಣದಕ್ಷಿಣೆಯೊಡನೆ ಮಹಾಭಾರತದ ಪುಸ್ತಕವನ್ನು ವಾಚಕನಿಗೆ ಸಮರ್ಪಿಸಬೇಕು.

ಹರಿವಂಶೇ ಪರ್ವಣಿ ಚ ಪಾಯಸಂ ತತ್ರ ಭೋಜಯೇತ್ ।
ಪಾರಣೇ ಪಾರಣೇ ರಾಜನ್ಯಥಾವದ್ಭರತರ್ಷಭ ॥೭೪॥

ಹರಿವಂಶದ ವಾಚನಸಮಯದಲ್ಲಿಯೂ ಪ್ರತಿಪರ್ವದ ಪಾರಣೆಗಳಲ್ಲಿಯೂ ಬ್ರಾಹ್ಮಣರಿಗೆ ಪಾಯಸವನ್ನು ಯಥಾವತ್ತಾಗಿ ಭೋಜನಮಾಡಿಸಬೇಕು.

ಸಮಾಪ್ಯ ಸರ್ವಾಃ ಪ್ರಯತಃ ಸಂಹಿತಾಃ ಶಾಸ್ತ್ರಕೋವಿದಃ ।
ಶುಭೇ ದೇಶೇ ನಿವೇಶ್ಯಾಥ ಕ್ಷೌಮವಸ್ತ್ರಾಭಿಸಂವೃತಾಃ ॥೭೫॥

ಶುಕ್ಲಾಮ್ಬರಧರಃ ಸ್ರಗ್ವೀ ಶುಚಿರ್ಭೂತ್ವಾ ಸ್ವಲಂಕೃತಃ ।
ಅರ್ಚಯೇತ ಯಥಾನ್ಯಾಯಂ ಗನ್ಧಮಾಲ್ಯೈಃ ಪೃಥಕ್ಪೃಥಕ್ ॥೭೬॥

ಸಂಹಿತಾಪುಸ್ತಕಾನ್ರಾಜನ್ಪ್ರಯತಃ ಸುಸಮಾಹಿತಃ ।
ಭಕ್ಷ್ಯೈರ್ಮಾಲ್ಯೈಶ್ಚ ಪೇಯೈಶ್ಚ ಕಾಮೈಶ್ಚ ವಿವಿಧೈಃ ಶುಭೈಃ ॥೭೭॥

ಹೀಗೆ ಶಾಸ್ತ್ರವಿಶಾರದನಾದ ವಾಚಕನು ಏಕಾಗ್ರಚಿತ್ತನಾಗಿ ಎಲ್ಲ ಪರ್ವಗಳ ಸಂಹಿತೆಗಳನ್ನೂ ಪೂರ್ಣಗೊಳಿಸಿ ಆ ಸಂಹಿತೆಗಳನ್ನು ರೇಷ್ಮೆಯ ವಸ್ತ್ರದಲ್ಲಿ ಸುತ್ತಿ ಪವಿತ್ರವಾದ ಸ್ಥಳದಲ್ಲಿಡಬೇಕು. ತಾನೂ ಕೂಡ ಸ್ನಾನಾದಿಗಳಿಂದ ಶುಚಿಯಾಗಿ, ಬಿಳಿಯ ವಸ್ತ್ರವನ್ನುಟ್ಟು, ಮಾಲೆಯನ್ನು ಧರಿಸಿ ಅಲಂಕಾರ ಮಾಡಿಕೊಂಡು, ಯಥಾವಿಧಿಯಾಗಿ ಒಂದೊಂದು ಪರ್ವದ ಸಂಹಿತೆಯನ್ನೂ ಪ್ರತ್ಯೇಕ-ಪ್ರತ್ಯೇಕವಾಗಿ ಗಂಧಮಾಲ್ಯಾಭರಣಗಳಿಂದ ಪೂಜಿಸಿ ಅಲಂಕರಿಸಬೇಕು. ಭಕ್ಷ್ಯಗಳಿಂದಲೂ, ಮಾಲೆಗಳಿಂದಲೂ, ಪೇಯಗಳಿಂದಲೂ, ವಿಧ-ವಿಧವಾದ ಶುಭಪ್ರದವಾದ ಅಭೀಷ್ಟಪದಾರ್ಥಗಳಿಂದಲೂ ಭಾರತಸಂಹಿತೆಗಳಿಗೆ ಪೂಜೆಯನ್ನು ಸಲ್ಲಿಸಬೇಕು.

ಹಿರಣ್ಯಂ ಚ ಸುವರ್ಣಂ ಚ ದಕ್ಷಿಣಾಮಥ ದಾಪಯೇತ್ ।
ಸರ್ವತ್ರ ತ್ರಿಪಲಂ ಸ್ವರ್ಣಂ ದಾತವ್ಯಂ ಪ್ರಯತಾತ್ಮನಾ ॥೭೮॥

ಅನಂತರ ಚಿನ್ನವನ್ನೂ ಮತ್ತು ಬೆಳ್ಳಿಯನ್ನೂ ದಕ್ಷಿಣೆಯ ರೂಪದಲ್ಲಿ ಕೊಡಬೇಕು. ಜಿತಾತ್ಮನಾದವನು ಎಲ್ಲ ಪರ್ವಗಳ ಸಂಹಿತೆಗಳ ಮೇಲೂ ಮೂರು ಮೂರು ಪಲಗಳಷ್ಟು ಚಿನ್ನವನ್ನಿಡಬೇಕು.

ತದರ್ಧಂ ಪಾದಶೇಷಂ ವಾ ವಿತ್ತಶಾಠ್ಯವಿವರ್ಜಿತಮ್ ।
ಯದ್ಯದೇವಾತ್ಮನೋಽಭೀಷ್ಟಂ ತತ್ತದ್ದೇಯಂ ದ್ವಿಜಾತಯೇ ॥೭೯॥

ಮೂರು ಫಲಗಳಷ್ಟು ಚಿನ್ನವನ್ನು ಇಡಲಾಗದಿದ್ದರೆ ಅದರ ಅರ್ಧಭಾಗ ವನ್ನಾಗಲೀ ಅದೂ ಸಾಧ್ಯವಾಗದಿದ್ದರೆ ಕಾಲುಭಾಗವನ್ನಾಗಲೀ ಇಡಬೇಕು. ತನ್ನ ಶಕ್ತಿಗೆ ಅನುಸಾರವಾಗಿ ಇಡಬೇಕೇ ಹೊರತು ವಿತ್ತಶಾಠ್ಯವನ್ನು ಮಾಡ ಬಾರದು. ಶಕ್ತಿಯಿದ್ದೂ ಕಡಿಮೆ ದಕ್ಷಿಣೆಯನ್ನಿಡಬಾರದು. ತನಗೆ ಯಾವುದು ಅತ್ಯಂತಪ್ರಿಯವಾಗಿರುವುದೋ–ಆ ವಸ್ತುವನ್ನೇ ಶ್ರೋತೃವು ಬ್ರಾಹ್ಮಣನಿಗೆ ದಾನಮಾಡಬೇಕು.

ಸರ್ವಥಾ ತೋಷಯೇದ್ಭಕ್ತ್ಯಾ ವಾಚಕಂ ಗುರುಮಾತ್ಮನಃ ।
ದೇವತಾಃ ಕೀರ್ತಯೇತ್ಸರ್ವಾ ನರನಾರಾಯಣೌ ತಥಾ ॥೮೦॥

ಮಹಾಭಾರತವಾಚಕನನ್ನು ತನ್ನ ಗುರುವೆಂದು ಭಾವಿಸಿ ಸರ್ವಪ್ರಕಾರ ದಿಂದಲೂ ಭಕ್ತಿಯಿಂದ ಸಂತೋಷಗೊಳಿಸಬೇಕು. ಆ ಸಮಯದಲ್ಲಿ ಎಲ್ಲ ದೇವತೆಗಳ ಮತ್ತು ನರ-ನಾರಾಯಣರ ಕೀರ್ತನೆಯನ್ನು ಮಾಡಬೇಕು.

ತತೋ ಗನ್ಧೈಶ್ಚ ಮಾಲ್ಯೈಶ್ಚ ಸ್ವಲಂಕೃತ್ಯ ದ್ವಿಜೋತ್ತಮಾನ್ ।
ತರ್ಪಯೇದ್ವಿವಿಧೈಃ ಕಾಮ್ಯೈರ್ದಾನೈಶ್ಚೋಚ್ಚಾವಚೈಸ್ತಥಾ ॥೮೧॥

ಅನಂತರ ಶ್ರೇಷ್ಠರಾದ ಶ್ರೋತ್ರಿಯರಾದ ಬ್ರಾಹ್ಮಣರನ್ನು ಚಂದನ, ಮಾಲೆ ಇತ್ಯಾದಿಗಳಿಂದ ಅಲಂಕರಿಸಿ ನಾನಾಪ್ರಕಾರವಾದ ಮನೋವಾಂಛಿತ ವಾದ ಭೋಗವಸ್ತುಗಳಿಂದಲೂ ನಾನಾಪ್ರಕಾರವಾದ ದಾನಗಳಿಂದಲೂ ತೃಪ್ತಿಗೊಳಿಸಬೇಕು.

ಅತಿರಾತ್ರಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ।
ಪ್ರಾಪ್ನುಯಾಚ್ಚ ಕ್ರತುಫಲಂ ತಥಾ ಪರ್ವಣಿ ಪರ್ವಣಿ ॥೮೨॥

ಹೀಗೆ ಮಾಡುವುದರಿಂದ ಶ್ರೋತೃವು ಅತಿರಾತ್ರಯಜ್ಞವನ್ನು ಮಾಡಿದ ಫಲವನ್ನು ಹೊಂದುತ್ತಾನೆ. ಒಂದೊಂದು ಪರ್ವವು ಮುಗಿದನಂತರ ಮಾಡುವ ಪೂಜೆಯಿಂದ ಶ್ರೌತಯಜ್ಞವನ್ನು ಮಾಡಿದ ಫಲವನ್ನು ಪಡೆಯುತ್ತಾನೆ.

ವಾಚಕೋ ಭರತಶ್ರೇಷ್ಠ ವ್ಯಕ್ತಾಕ್ಷರಪದಸ್ವರಃ ।
ಭವಿಷ್ಯಂ ಶ್ರಾವಯೇದ್ವಿದ್ವಾನ್ಭಾರತಂ ಭರತರ್ಷಭ ॥೮೩॥

ಭರತಶ್ರೇಷ್ಠನೇ! ಜನಮೇಜಯ! ವಾಚಕನು ಅಕ್ಷರ, ಪದ ಮತ್ತು ಸ್ವರಗಳನ್ನು ಸ್ಪಷ್ಟವಾಗಿ ಉಚ್ಚರಿಸುವವನೂ ವಿದ್ವಾಂಸನೂ ಆಗಿರಬೇಕು. ಭಾರತದಲ್ಲಿರುವ (ಹರಿವಂಶದಲ್ಲಿರುವ) ಭವಿಷ್ಯಪರ್ವವನ್ನು ವಾಚನಮಾಡಬೇಕು.

ಭುಕ್ತವತ್ಸು ದ್ವಿಜೇನ್ದ್ರೇಷು ಯಥಾವತ್ಸಮ್ಪ್ರದಾಪಯೇತ್ ।
ವಾಚಕಂ ಭರತಶ್ರೇಷ್ಠ ಭೋಜಯಿತ್ವಾ ಸ್ವಲಂಕೃತಮ್ ॥೮೪॥

ಭವಿಷ್ಯಪರ್ವವನ್ನು ವಾಚನಮಾಡಿದನಂತರ ಶ್ರೋತೃವು ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಬೇಕು. ಅನಂತರ ಯಥೋಚಿತವಾದ ದಾನಗಳನ್ನು ಕೊಡಬೇಕು. ವಸ್ತ್ರಾಭರಣಗಳಿಂದ ಸಮಲಂಕೃತನಾದ ವಾಚಕನಿಗೆ ಭೋಜನ ಮಾಡಿಸಿ ದಾನಾದಿಗಳಿಂದ ಅವನನ್ನು ಸಂತೋಷಗಳಿಸಬೇಕು.

ವಾಚಕೇ ಪರಿತುಷ್ಟೇ ತು ಶುಭಾಪ್ರೀತಿರನುತ್ತಮಾ ।
ಬ್ರಾಹ್ಮಣೇಷು ತು ತುಷ್ಟೇಷು ಪ್ರಸನ್ನಾಃ ಸರ್ವದೇವತಾಃ ॥೮೫॥

ವಾಚಕನು ಸಂತುಷ್ಟನಾದರೆ ಉತ್ತಮವಾದ ಮತ್ತು ಮಂಗಲಮಯವಾದ ಮನಸ್ತೃಪ್ತಿಯುಂಟಾಗುತ್ತದೆ. ಬ್ರಾಹ್ಮಣರು ಸಂತುಷ್ಟರಾದರೆ ಎಲ್ಲ ದೇವತೆಗಳೂ ಪ್ರಸನ್ನರಾಗುತ್ತಾರೆ.

ಭರತಶ್ರೇಷ್ಠನೇ! ಆದುದರಿಂದ, ಸಾಧುವಾದ ಶ್ರೋತೃವು ನ್ಯಾಯಪೂರ್ವಕವಾಗಿ ಬ್ರಾಹ್ಮಣರನ್ನು ವರಣಮಾಡಬೇಕು. ಅವರ ನಾನಾಪ್ರಕಾರವಾದ ಅಭೀಷ್ಟಗಳನ್ನು ಪೂರ್ಣಗೊಳಿಸಬೇಕು. ಮನುಷ್ಯಶ್ರೇಷ್ಠನೇ! ನಿನ್ನ ಪ್ರಶ್ನೆಗಳಿಗೆ ಅನುಗುಣವಾಗಿ ನಾನು ಮಹಾಭಾರತದ ವಾಚನವಿಧಿಯನ್ನೂ–ಶ್ರವಣವಿಧಿಯನ್ನೂ ಹೇಳಿರುತ್ತೇನೆ. ಶ್ರದ್ಧಾಯುಕ್ತನಾಗಿರುವ ನೀನು ಅವಶ್ಯ

ವಾಗಿ ಹೀಗೆಯೇ ನಡೆದುಕೊಳ್ಳಬೇಕು. ತನ್ನ ಪರಮಕಲ್ಯಾಣವನ್ನು ಇಚ್ಛಿಸುವ ಶ್ರೋತೃವು ಮಹಾಭಾರತವನ್ನು ಕೇಳುವುದಕ್ಕೂ ಮತ್ತು ವ್ರತಸಂಬಂಧವಾದ ಪಾರಣೆಮಾಡುವುದಕ್ಕೂ ಯಾವಾಗಲೂ ಪ್ರಯತ್ನಿಸುತ್ತಲೇ ಇರಬೇಕು.

ಭಾರತಂ ಶೃಣುಯಾನ್ನಿತ್ಯಂ ಭಾರತಂ ಪರಿಕೀರ್ತಯೇತ್ ।
ಭಾರತಂ ಭವನೇ ಯಸ್ಯ ತಸ್ಯ ಹಸ್ತಗತೋ ಜಯಃ ॥೮೯॥

ಮಹಾಭಾರತದ ಕಥೆಯನ್ನು ಅನುದಿನವೂ ಕೇಳುತ್ತಿರಬೇಕು. ಮಹಾಭಾರತಗ್ರಂಥವನ್ನು ಯಾವಾಗಲೂ ಪಠಿಸುತ್ತಿರಬೇಕು. ಯಾರ ಮನೆಯಲ್ಲಿ ಮಹಾಭಾರತ ಮಹಾಗ್ರಂಥವಿರುವುದೋ–ಅವನಿಗೆ ಎಲ್ಲ ಕಾರ್ಯಗಳಲ್ಲಿಯೂ ವಿಜಯವು ಹಸ್ತಗತವಾಗಿರುವುದೆಂದೇ ತಿಳಿಯಬೇಕು.

ಭಾರತಂ ಪರಮಂ ಪುಣ್ಯಂ ಭಾರತೇ ವಿವಿಧಾಃ ಕಥಾಃ ।
ಭಾರತಂ ಸೇವ್ಯತೇ ದೇವೈರ್ಭಾರತಂ ಪರಮಂ ಪದಮ್ ॥೯೦॥

ಮಹಾಭಾರತವು ಪರಮಪುಣ್ಯಗ್ರಂಥ. ಭಾರತದಲ್ಲಿ ವಿಧ-ವಿಧವಾದ ಕಥೆಗಳಿವೆ. ದೇವತೆಗಳೂ ಮಹಾಭಾರತವನ್ನೂ ಅನುಸರಿಸುತ್ತಾರೆ. ಮಹಾಭಾರತವು ಪರಮಪದಸ್ವರೂಪವಾಗಿದೆ.

ಭಾರತಂ ಸರ್ವಶಾಸ್ತ್ರಾಣಾಮುತ್ತಮಂ ಭರತರ್ಷಭ ।
ಭಾರತಾತ್ಪ್ರಾಪ್ಯತೇ ಮೋಕ್ಷಸ್ತತ್ತ್ವಮೇತದ್ಬ್ರವೀಮಿ ತತ್ ॥೯೧॥

ಭಾರತವು ಎಲ್ಲ ಶಾಸ್ತ್ರಗಳಿಗಿಂತಲೂ ಉತ್ತಮವಾಗಿದೆ. ಭಾರತದಿಂದಲೇ ಮೋಕ್ಷವು ಲಭಿಸುತ್ತದೆ. ಈ ರಹಸ್ಯವನ್ನು ನಾನು ನಿನಗೆ ಹೇಳುತ್ತಿದ್ದೇನೆ.

ಮಹಾಭಾರತಮಾಖ್ಯಾನಂ ಕ್ಷಿತಿಂ ಗಾಂ ಚ ಸರಸ್ವತೀಮ್ ।
ಬ್ರಾಹ್ಮಣಾನ್ಕೇಶವಂ ಚೈವ ಕೀರ್ತಯನ್ನಾವಸೀದತಿ ॥೯೨॥

ಮಹಾಭಾರತವೆಂಬ ಇತಿಹಾಸವನ್ನೂ, ಭೂಮಿಯನ್ನೂ, ಗೋವುಗಳನ್ನೂ, ಸರಸ್ವತೀದೇವಿಯನ್ನೂ, ಬ್ರಾಹ್ಮಣರನ್ನೂ, ಕೇಶವನನ್ನೂ ಸದಾ ಕೀರ್ತನಮಾಡುವವನು ಯಾವುದೇ ಕಾರಣದಿಂದಲೂ ವಿಪತ್ತಿಗೊಳಗಾಗುವುದಿಲ್ಲ.

ವೇದೇ ರಾಮಾಯಣೇ ಪುಣ್ಯೇ ಭಾರತೇ ಭರತರ್ಷಭ ।
ಆದೌ ಚಾನ್ತೇ ಚ ಮಧ್ಯೇ ಚ ಹರಿಃ ಸರ್ವತ್ರ ಗೀಯತೇ ॥೯೩॥

ವೇದದಲ್ಲಿ, ರಾಮಾಯಣದಲ್ಲಿ ಮತ್ತು ಪುಣ್ಯತಮವಾದ ಭಾರತದಲ್ಲಿ ಪ್ರಾರಂಭದಲ್ಲಿಯೂ, ಮಧ್ಯದಲ್ಲಿಯೂ ಮತ್ತು ಕಡೆಯಲ್ಲಿಯೂ ಸರ್ವತ್ರ ಶ್ರೀಹರಿಯೇ ಸಂಕೀರ್ತಿತನಾಗುತ್ತಾನೆ.

ಯತ್ರ ವಿಷ್ಣುಕಥಾ ದಿವ್ಯಾಃ ಶ್ರುತಯಶ್ಚ ಸನಾತನಾಃ ।
ತಚ್ಛ್ರೋತವ್ಯಂ ಮನುಷ್ಯೇಣ ಪರಂ ಪದಮಿಹೇಚ್ಛತಾ ॥೯೪॥

ಎಲ್ಲಿ ಮಹಾವಿಷ್ಣುವಿನ ದಿವ್ಯಕಥೆಗಳಿರುವುವೋ, ಸನಾತನಶ್ರುತಿಗಳ ಸಮಾವೇಶವಿರುವುದೋ–ಅಂತಹ ಮಹಾಭಾರತವನ್ನು ಈ ಜಗತ್ತಿನಲ್ಲಿ ಪರಮಪದವನ್ನು ಅಪೇಕ್ಷಿಸುವ ಎಲ್ಲ ಮನುಷ್ಯರೂ ಶ್ರವಣಮಾಡಬೇಕು.

ಏತತ್ಪವಿತ್ರಂ ಪರಮಮೇತದ್ಧರ್ಮನಿದರ್ಶನಮ್ ।
ಏತತ್ಸರ್ವಗುಣೋಪೇತಂ ಶ್ರೋತವ್ಯಂ ಭೂತಿಮಿಚ್ಛತಾ ॥೯೫॥

ಮಹಾಭಾರತವು ಪರಮಪವಿತ್ರವಾದುದು. ಇದು ಧರ್ಮದ ಸ್ವರೂಪವನ್ನು ತೋರಿಸಿಕೊಡತಕ್ಕುದು. ಸಮಸ್ತಗುಣಗಳಿಂದಲೂ ಸಂಪನ್ನವಾದುದು. ಕಲ್ಯಾಣವನ್ನು ಬಯಸುವ ಮನುಷ್ಯನು ಈ ಇತಿಹಾಸವನ್ನು ಕೇಳಲೇಬೇಕು.

ಕಾಯಿಕಂ ವಾಚಿಕಂ ಚೈವ ಮನಸಾ ಸಮುಪಾರ್ಜಿತಮ್ ।
ತತ್ಸರ್ವಂ ನಾಶಮಾಯಾತಿ ತಮಃ ಸೂರ್ಯೋದಯೇ ಯಥಾ ॥೯೬॥

ಮಹಾಭಾರತಶ್ರವಣವು ಶರೀರದಿಂದ, ಮಾತಿನಿಂದ ಮತ್ತು ಮನಸ್ಸಿನಿಂದ ಉಂಟಾದ ಸಮಸ್ತಪಾಪಗಳನ್ನೂ–ಸೂರ್ಯೋದಯವು ಕತ್ತಲನ್ನು ಹೋಗಲಾಡಿಸುವಂತೆ–ಹೋಗಲಾಡಿಸುತ್ತದೆ.

ಅಷ್ಟಾದಶಪುರಾಣಾನಾಂ ಶ್ರವಣಾದ್ಯತ್ಫಲಂ ಭವೇತ್ ।
ತತ್ಫಲಂ ಸಮವಾಪ್ನೋತಿ ವೈಷ್ಣವೋ ನಾತ್ರ ಸಂಶಯಃ ॥೯೭॥

ಹದಿನೆಂಟು ಪುರಾಣಗಳ ಶ್ರವಣದಿಂದ ಯಾವ ಪುಣ್ಯವು ಲಭಿಸುವುದೋ–ಆ ಫಲವನ್ನು ವಿಷ್ಣುಭಕ್ತನು ಮಹಾಭಾರತದ ಶ್ರವಣದಿಂದಲೇ ಪಡೆದುಕೊಳ್ಳುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ.

ಸ್ತ್ರಿಯಶ್ಚ ಪುರುಷಾಶ್ಚೈವ ವೈಷ್ಣವಂ ಪದಮಾಪ್ನುಯುಃ ।
ಸ್ತ್ರೀಭಿಶ್ಚ ಪುತ್ರಕಾಮಾಭಿಃ ಶ್ರೋತವ್ಯಂ ವೈಷ್ಣವಂ ಯಶಃ ॥೯೮॥

ಸ್ತ್ರೀಯರಾಗಲೀ ಪುರುಷರಾಗಲೀ ಎಲ್ಲರೂ ಮಹಾಭಾರತಶ್ರವಣ ದಿಂದ ವಿಷ್ಣುವಿನ ಪರಮಧಾಮಕ್ಕೆ ಹೋಗುತ್ತಾರೆ. ಪುತ್ರಾಪೇಕ್ಷಿಣಿಯರಾದ ಸ್ತ್ರೀಯರು ಭಗವಾನ್ ವಿಷ್ಣುವಿನ ಯಶಸ್ಸಿನಿಂದ ತುಂಬಿರುವ ಈ ಮಹಾ ಭಾರತವನ್ನು ಶ್ರವಣಮಾಡಬೇಕು.

ದಕ್ಷಿಣಾ ಚಾತ್ರ ದೇಯಾ ವೈ ನಿಷ್ಕಪಞ್ಚಸುವರ್ಣಕಮ್ ।
ವಾಚಕಾಯ ಯಥಾಶಕ್ತ್ಯಾ ಯಥೋಕ್ತಂ ಫಲಮಿಚ್ಛತಾ ॥೯೯॥

ಶಾಸ್ತ್ರೋಕ್ತವಾದ ಫಲವನ್ನು ಅಭಿಲಾಷಿಸುವ ಶ್ರೋತೃವು ವಾಚಕನಿಗೆ ಮಹಾಭಾರತವನ್ನು ಕೇಳಿದನಂತರ ಐದು ಸುವರ್ಣಮುದ್ರೆಗಳನ್ನು ದಕ್ಷಿಣೆಯಾಗಿ ಕೊಡಬೇಕು.

ಸ್ವರ್ಣಶೃಙ್ಗೀಂ ಚ ಕಪಿಲಾಂ ಸವತ್ಸಾಂ ವಸ್ತ್ರಸಂವೃತಾಮ್ ।
ವಾಚಕಾಯ ಚ ದದ್ಯಾದ್ಧಿ ಆತ್ಮನಃ ಶ್ರೇಯ ಇಚ್ಛತಾ ॥೧೦೦॥

ತನ್ನ ಕಲ್ಯಾಣವನ್ನು ಬಯಸುವ ಮನುಷ್ಯನು ವಾಚಕನಿಗೆ–ಕೊಂಬು ಗಳನ್ನು ಸುವರ್ಣದಿಂದ ಅಲಂಕರಿಸಿರುವ, ವಸ್ತ್ರದಿಂದ ಹೊದ್ದಿಸಲ್ಪಟ್ಟಿರುವ, ಕರುವಿನಿಂದ ಕೂಡಿದ ಕಪಿಲಾಧೇನುವನ್ನು ದಾನವಾಗಿ ಕೊಡಬೇಕು.

ಅಲಙ್ಕಾರಂ ಪ್ರದದ್ಯಾಚ್ಚ ಪಾಣ್ಯೋರ್ವೈ ಭರತರ್ಷಭ ।
ಕರ್ಣಸ್ಯಾಭರಣಂ ದದ್ಯಾದ್ಧನಂ ಚೈವ ವಿಶೇಷತಃ ॥೧೦೧॥

ಮಹಾಭಾರತದ ವಾಚಕನಿಗೆ ಕೈಕಡಗಗಳು–ಕರ್ಣಕುಂಡಲಗಳು ಇವೇ ಮುಂತಾದ ಆಭರಣಗಳನ್ನೂ ಎಲ್ಲಕ್ಕಿಂತಲೂ ವಿಶೇಷವಾಗಿ ಧನವನ್ನೂ ಕೊಡಬೇಕು.

ಭೂಮಿದಾನಂ ಸಮಾದದ್ಯಾದ್ವಾಚಕಾಯ ನರಾಧಿಪ ।
ಭೂಮಿದಾನಸಮಂ ದಾನಂ ನ ಭೂತಂ ನ ಭವಿಷ್ಯತಿ ॥೧೦೨॥

ನರೇಶ್ವರನೇ! ವಾಚಕನಿಗೆ ಭೂದಾನವನ್ನೂ ಕೊಡಬೇಕು. ಭೂದಾನಕ್ಕೆ ಸಮಾನವಾದ ದಾನವು ಹಿಂದೆಯೂ ಇರಲಿಲ್ಲ ; ಮುಂದೆಯೂ ಇರುವುದಿಲ್ಲ.

ಶೃಣೋತಿ ಶ್ರಾವಯೇದ್ವಾಪಿ ಸತತಂ ಚೈವ ಯೋ ನರಃ ।
ಸರ್ವಪಾಪವಿನಿರ್ಮುಕ್ತೋ ವೈಷ್ಣವಂ ಪದಮಾಪ್ನುಯಾತ್ ॥೧೦೩॥

ಯಾವನು ಮಹಾಭಾರತವನ್ನು ಯಾವಾಗಲೂ ಹೇಳುತ್ತಿರುವನೋ ಅಥವಾ ಕೇಳುತ್ತಿರುವನೋ–ಅವನು ಸಮಸ್ತಪಾಪಗಳಿಂದಲೂ ಬಿಡುಗಡೆಯನ್ನು ಹೊಂದಿ ವಿಷ್ಣುವಿನ ಪರಮಧಾಮವನ್ನು ಸೇರುತ್ತಾನೆ.

ಪಿತೄನುದ್ಧರತೇ ಸರ್ವಾನೇಕಾದಶಸಮುದ್ಭವಾನ್ ।
ಆತ್ಮಾನಂ ಸಸುತಂ ಚೈವ ಸ್ತ್ರಿಯಂ ಚ ಭರತರ್ಷಭ ॥೧೦೪॥

ಮಹಾಭಾರತವಾಚಕನು ಅಥವಾ ಮಹಾಭಾರತವನ್ನು ಕೇಳುವವನು ತನ್ನನ್ನೂ ಉದ್ಧರಿಸಿಕೊಂಡು, ತನ್ನ ವಂಶದ ಹನ್ನೊಂದು ತಲೆಮಾರಿನ ಪಿತೃಗಳನ್ನೂ ಪತ್ನೀ-ಪುತ್ರರನ್ನೂ ಉದ್ಧರಿಸುತ್ತಾನೆ.

ದಶಾಂಶಶ್ಚೈವ ಹೋಮೋಽಪಿ ಕರ್ತವ್ಯೋಽತ್ರ ನರಾಧಿಪ ।
ಇದಂ ಮಯಾ ತವಾಗ್ರೇ ಚ ಪ್ರೋಕ್ತಂ ಸರ್ವಂ ನರರ್ಷಭ ॥೧೦೫॥

ಮಹಾಭಾರತಶ್ರವಣಾನಂತರ ಇದರ ಸಂಬಂಧವಾಗಿ ದಶಾಂಶ ಹೋಮವನ್ನು ಮಾಡಬೇಕು. ಹೀಗೆ ನಾನು ನಿನ್ನ ಸಮಕ್ಷದಲ್ಲಿ ಮಹಾಭಾರತಶ್ರವಣ-ವಾಚನಗಳಿಗೆ ಸಂಬಂಧಿಸಿದಂತೆ ಎಲ್ಲವನ್ನೂ ಹೇಳಿರುತ್ತೇನೆ.

ಸರ್ವಸ್ತರತು ದುರ್ಗಾಣಿ ಸರ್ವೋ ಭದ್ರಾಣಿ ಪಶ್ಯತು ।
ಸರ್ವೇಷಾಂ ವಾಂಛಿತಾ ಅರ್ಥಾ ಭವನ್ತ್ವಸ್ಯ ಚ ಪಾರಣಾತ್ ॥೧೦೬॥

ಈ ಮಹಾಭಾರತವನ್ನು ವ್ರತನಿಷ್ಠಾಪೂರ್ವಕವಾಗಿ ಶ್ರವಣಮಾಡಿ ಪಾರಣೆಮಾಡುವುದರಿಂದ ಸರ್ವರೂ ಕಷ್ಟಗಳನ್ನೂ ದಾಟುವಂತಾಗಲಿ ; ಸರ್ವರೂ ಸನ್ಮಂಗಳವನ್ನು ಕಾಣುವಂತಾಗಲಿ. ಇದರಿಂದ ಎಲ್ಲರ ಅಭೀಷ್ಟವಾದ ಅರ್ಥಗಳೂ ಸಿದ್ಧಿಸುತ್ತವೆ. (ಈ ಮಹಾಭಾರತಶ್ರವಣವಿಧಿ ಮತ್ತು ಫಲಗಳನ್ನೊಳಗೊಂಡ ಅಧ್ಯಾಯವು ಹರಿವಂಶದ ಭವಿಷ್ಯಪರ್ವದ ೧೩೨ನೆಯ ಅಧ್ಯಾಯವಾಗಿದೆ.)

ಮಹಾಭಾರತಮಾಹಾತ್ಮ್ಯ

ಪಾರಾಶರ್ಯವಚಃಸರೋಜಮಮಲಂ ಗೀತಾರ್ಥಗನ್ಧೋತ್ಕಟಂ
ನಾನಾಖ್ಯಾನಕಕೇಸರಂ ಹರಿಕಥಾಸಂಬೋಧನಾಬೋಧಿತಮ್ ।
ಲೋಕೇ ಸಜ್ಜನಷಟ್ಪದೈರಹರಹಃ ಪೇಪೀಯಮಾನಂ ಮುದಾ
ಭೂಯಾದ್ಭಾರತಪಙ್ಕಜಂ ಕಲಿಮಲಪ್ರಧ್ವಂಸಿ ನಃ ಶ್ರೇಯಸೇ ॥೧॥

ಪರಾಶರರ ಮಕ್ಕಳಾದ ವ್ಯಾಸರ ವಾಣೀರೂಪವಾದ ಸರೋವರದಲ್ಲಿ ಮಹಾಭಾರತರೂಪವಾದ ಅಮಲವಾದ (ಸ್ವೇಚ್ಛವಾದ) ಕಮಲವು ಹುಟ್ಟಿದೆ. ಆ ದಿವ್ಯಕಮಲವು ಗೀತಾರ್ಥವೆಂಬ ಉತ್ಕಟವಾದ ಗಂಧದಿಂದ ಕೂಡಿದೆ. ನಾನಾಪ್ರಕಾರವಾದ ಆಖ್ಯಾನರೂಪವಾದ ಕೇಸರ (ಕುಸುರು) ಗಳಿಂದ ಸಂಪನ್ನವಾಗಿದೆ. ಹರಿಕಥಾರೂಪವಾದ ಸೂರ್ಯನ ಕಿರಣಗಳಿಂದ ಪ್ರಫುಲ್ಲಿತವಾಗಿದೆ. ಲೋಕದಲ್ಲಿ ಸತ್ಪುರುಷರೆಂಬ ಪ್ರಮುದಿತವಾದ ದುಂಬಿ ಗಳಿಂದ ಅನುದಿನವೂ ಅದರ ರಸವು ಹೀರಲ್ಪಡುತ್ತಿದೆ. ಅಂತಹ ಕಲಿಗಾಲದ ಪಾಪರೂಪವಾದ ಮಲವನ್ನು ಧ್ವಂಸಗೊಳಿಸುವ ಮಹಾಭಾರತಕಮಲವು ನಮ್ಮ ಯಶಸ್ಸಿಗೆ ಸಾಧಕವಾಗಲಿ.

ಯತ್ರ ವಿಷ್ಣುಕಥಾ ದಿವ್ಯಾಃ ಶ್ರುತಯಶ್ಚ ಸನಾತನಾಃ ।
ತಚ್ಛ್ರೋತವ್ಯಂ ಮನುಷ್ಯೇಣ ಪರಂ ಪದಮಿಹೇಚ್ಛತಾ ॥೨॥

"ಯಾವುದರಲ್ಲಿ ಮಹಾವಿಷ್ಣುವಿನ ದಿವ್ಯಕಥೆಗಳಿವೆಯೋ, ಯಾವುದ ರಲ್ಲಿ ಸನಾತನವಾದ ಶ್ರುತಿಗಳು ಪ್ರತಿಪಾದಿತವಾಗಿವೆಯೋ–ಅಂತಹ ಮಹಾ ಭಾರತವನ್ನು ಪರಮಪದವನ್ನು ಬಯಸುವ ಮನುಷ್ಯನು ಕೇಳಲೇಬೇಕು." ಕೇಳಿರಿ. ಇದು ವೇದಗಳಿಗೆ ಮಹಾಸಮುದ್ರದಂತಿರುವ ಹದಿನೆಂಟು ಪುರಾಣ ಗಳ ಕರ್ತೃವಾದ ಮಹಾತ್ಮರಾದ ವ್ಯಾಸಮಹರ್ಷಿಗಳ ಈ ಸಿಂಹವಾಣಿ ಯಾಗಿದೆ.

ಧರ್ಮಶಾಸ್ತ್ರಮಿದಂ ಪುಣ್ಯಮರ್ಥಶಾಸ್ತ್ರಮಿದಂ ಪರಮ್ ।
ಮೋಕ್ಷಶಾಸ್ತ್ರಮಿದಂ ಪ್ರೋಕ್ತಂ ವ್ಯಾಸೇನಾಮಿತಬುದ್ಧಿನಾ ॥೩॥

ಭಾರತಂ ಸರ್ವಶಾಸ್ತ್ರಾಣಾಮುತ್ತಮಂ ಭರತರ್ಷಭ ।
ಸಮ್ಪ್ರತ್ಯಾಚಕ್ಷತೇ ಚೇದಂ ತಥಾ ಶ್ರೋಷ್ಯನ್ತಿ ಚಾಪರೇ ॥೪॥

ಅಪರಿಮಿತವಾದ ಬುದ್ಧಿಯುಳ್ಳ ಪೂಜ್ಯರಾದ ವ್ಯಾಸರಿಂದ ಹೇಳಲ್ಪಟ್ಟಿರುವ ಈ ಮಹಾಭಾರತವು ಧರ್ಮಶಾಸ್ತ್ರವಾಗಿದೆ. ಶ್ರೇಷ್ಠವಾದ ಅರ್ಥಶಾಸ್ತ್ರವಾಗಿದೆ. ಸರ್ವೋತ್ತಮವಾದ ಮೋಕ್ಷಶಾಸ್ತ್ರವೂ ಆಗಿದೆ. ಮಹಾಭಾರತವು ಸಕಲಶಾಸ್ತ್ರಗಳಿಗೂ ಶಿರೋಮಣಿಯಾಗಿದೆ. ಈಗಲೂ ವಿದ್ವಾಂಸರು ಇದರ ಶ್ರವಣ-ಪಠನಗಳನ್ನು ಮಾಡುತ್ತಾರೆ. ಮುಂದೆಯೂ ಮಾಡುತ್ತಾರೆ.

ಯೋಽಧೀತೇ ಭಾರತಂ ಪುಣ್ಯಂ ಬ್ರಾಹ್ಮಣೋ ನಿಯತವ್ರತಃ ।
ಚತುರೋ ವಾರ್ಷಿಕಾನ್ಮಾಸಾನ್ಸರ್ವಪಾಪೈಃ ಪ್ರಮುಚ್ಯತೇ ॥೬॥

ಯಾವ ಬ್ರಾಹ್ಮಣನು ನಿಯತವಾದ ವ್ರತಾನುಷ್ಠಾನಪರನಾಗಿ ವರ್ಷರ್ತುವಿನ ನಾಲ್ಕು ಮಾಸಗಳಲ್ಲಿ ಪವಿತ್ರವಾದ ಈ ಮಹಾಭಾರತವನ್ನು ಪಠಿಸುವನೋ–ಅವನು ಸಮಸ್ತಪಾಪಗಳಿಂದಲೂ ಮುಕ್ತನಾಗುತ್ತಾನೆ.

ಕುರೂಣಾಂ ಪ್ರಥಿತಂ ವಂಶಂ ಕೀರ್ತಯನ್ಸತತಂ ಶುಚಿಃ ।
ವಂಶಮಾಪ್ನೋತಿ ವಿಪುಲಂ ಲೋಕೇ ಪೂಜ್ಯತಮೋ ಭವೇತ್ ॥೭॥

ಯಾವನು ಯಾವಾಗಲೂ ಪರಿಶುದ್ಧನಾಗಿದ್ದು ಪ್ರಸಿದ್ಧವಾದ ಕುರುಗಳ ವಂಶವನ್ನು (ವಂಶಾವಳಿಯನ್ನು) ಕೀರ್ತನಮಾಡುವನೋ–ಅವನ ವಂಶವು ಬಹಳವಾಗಿ ಬೆಳೆಯುತ್ತದೆ ಮತ್ತು ಲೋಕದಲ್ಲವನು ಪೂಜಿತನಾಗುತ್ತಾನೆ.

ಅನಾಗತಶ್ಚ ಮೋಕ್ಷಶ್ಚ ಕೃಷ್ಣದ್ವೈಪಾಯನಃ ಪ್ರಭುಃ ।
ಸಂದರ್ಭಂ ಭಾರತಸ್ಯಾಸ್ಯ ಕೃತವಾನ್ಧರ್ಮಕಾಮ್ಯಯಾ ॥೮॥

ಧರ್ಮೇ ಚಾರ್ಥೇ ಚ ಕಾಮೇ ಚ ಮೋಕ್ಷೇ ಚ ಭರತರ್ಷಭ ।
ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ಕುತ್ರಚಿತ್ ॥೯॥

ನಿತ್ಯಸಿದ್ಧಮೋಕ್ಷಸ್ವರೂಪವಾದ ಪೂಜ್ಯರಾದ ಕೃಷ್ಣದ್ವೈಪಾಯನರು ಧರ್ಮಕಾಮನೆಯಿಂದ ಮಹಾಭಾರತಸಂದರ್ಭವನ್ನು ರಚಿಸಿದರು. ಭರತಶ್ರೇಷ್ಠನೇ! ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳ ವಿಷಯದಲ್ಲಿ ಇಲ್ಲಿ ಯಾವುದು ಹೇಳಲ್ಪಟ್ಟಿರುವುದೋ–ಅದು ಇತರ ಕಡೆಗಳಲ್ಲಿಯೂ ಉಲ್ಲೇಖಿಸಲ್ಪಟ್ಟಿದೆ. ಯಾವುದು ಇಲ್ಲಿ ಇಲ್ಲವೋ ಅದು ಇನ್ನೆಲ್ಲಿಯೂ ಇರುವುದಿಲ್ಲ.

ಮಹಾಭಾರತವು ಪರಮಪವಿತ್ರವಾದುದು. ಇದು ಧರ್ಮದ ಸ್ವರೂಪ

ವನ್ನು ತೋರಿಸಿಕೊಡತಕ್ಕುದು. ಸಮಸ್ತಗುಣಗಳಿಂದಲೂ ಸಂಪನ್ನವಾದುದು. ಕಲ್ಯಾಣವನ್ನು ಬಯಸುವ ಮನುಷ್ಯನು ಈ ಇತಿಹಾಸವನ್ನು ಕೇಳಲೇಬೇಕು. ಮಹಾಭಾರತಶ್ರವಣವು ಶರೀರದಿಂದ, ಮಾತಿನಿಂದ, ಮನಸ್ಸಿನಿಂದ ಉಂಟಾದ ಸಮಸ್ತಪಾಪಗಳನ್ನೂ ಸೂರ್ಯೋದಯವು ಕತ್ತಲನ್ನು ಹೋಗಲಾಡಿಸುವಂತೆ ಹೋಗಲಾಡಿಸುತ್ತದೆ.

ಯ ಇದಂ ಮಾನವೋ ಲೋಕೇ ಪುಣ್ಯಾರ್ಥೇ ಬ್ರಾಹ್ಮಣಾಞ್ಛುಚೀನ್ ।
ಶ್ರಾವಯೇತ ಮಹಾಪುಣ್ಯಂ ತಸ್ಯ ಧರ್ಮಃ ಸನಾತನಃ ॥೧೨॥

ಮಹಾಭಾರತಮಾಖ್ಯಾನಂ ಕ್ಷಿತಿಂ ಗಾಂ ಚ ಸರಸ್ವತೀಮ್ ।
ಬ್ರಾಹ್ಮಣಾನ್ಕೇಶವಂ ಚೈವ ಕೀರ್ತಯನ್ನಾವಸೀದತಿ ॥೧೩॥

ಯಾವ ಮನುಷ್ಯನು ಪವಿತ್ರವಾದ ಮಹಾಭಾರತವನ್ನು ಪುಣ್ಯಸಂಪಾದನೆಗಾಗಿ ಪರಿಶುದ್ಧರಾದ ಬ್ರಾಹ್ಮಣರ ಸಮ್ಮುಖದಲ್ಲಿ ಹೇಳುವನೋ ಅಂತಹವನಿಗೆ ಶಾಶ್ವತವಾದ ಪುಣ್ಯವು ಲಭಿಸುತ್ತದೆ. ಮಹಾಭಾರತದ ಇತಿಹಾಸವನ್ನೂ, ಭೂಮಿಯನ್ನೂ, ಗೋವನ್ನೂ, ಸರಸ್ವತಿಯನ್ನೂ, ಬ್ರಾಹ್ಮಣರನ್ನೂ, ಕೇಶವನನ್ನೂ ಸದಾಕಾಲವು ಕೀರ್ತನಮಾಡುವವನು ವಿನಾಶಹೊಂದುವುದಿಲ್ಲ.

ಶೃಣೋತಿ ಶ್ರಾವಯೇದ್ವಾಪಿ ಸತತಂ ಚೈವ ಯೋ ನರಃ ।
ಸರ್ವಪಾಪವಿನಿರ್ಮುಕ್ತೋ ವೈಷ್ಣವಂ ಪದಮಾಪ್ನುಯಾತ್ ॥೧೩॥

ಪಿತೄನುದ್ಧರತೇ ಸರ್ವಾನೇಕಾದಶಸಮುದ್ಭವಾನ್ ।
ಆತ್ಮಾನಂ ಸಸುತಂ ಚೈವ ಸ್ತ್ರಿಯಂ ಚ ಭರತರ್ಷಭ ॥೧೪॥

ಯಾವನು ಮಹಾಭಾರತವನ್ನು ಯಾವಾಗಲೂ ಹೇಳುತ್ತಿರುವನೋ ಅಥವಾ ಕೇಳುತ್ತಿರುವನೋ ಅಂತಹವನು ಸಮಸ್ತಪಾಪಗಳಿಂದಲೂ ಮುಕ್ತನಾಗಿ ವಿಷ್ಣುವಿನ ಪರಮಧಾಮವನ್ನು ಸೇರುತ್ತಾನೆ. ಮಹಾಭಾರತವಾಚಕನು ಅಥವಾ ಮಹಾಭಾರತವನ್ನು ಕೇಳುವವನು ತನ್ನನ್ನೂ ಉದ್ಧರಿಸಿಕೊಂಡು ತನ್ನ ವಂಶದ ಹನ್ನೊಂದು ತಲೆಮಾರಿನ ಪಿತೃಗಳನ್ನೂ, ಪತ್ನೀ-ಪುತ್ರರನ್ನೂ ಉದ್ಧರಿಸುತ್ತಾನೆ.

ಯಥಾ ಸಮುದ್ರೋ ಭಗವಾನ್ಯಥಾ ಮೇರುರ್ಮಹಾನ್ಗಿರಿಃ ।
ಉಭೌ ಖ್ಯಾತೌ ರತ್ನನಿಧೀ ತಥಾ ಭಾರತಮುಚ್ಯತೇ ॥೧೬॥

ಯಾವ ರೀತಿಯಲ್ಲಿ ಸಮುದ್ರವೂ ಮತ್ತು ಮಹಾಪರ್ವತವಾದ ಮೇರುವೂ ರತ್ನನಿಧಿಗಳೆಂದು ಪ್ರಸಿದ್ಧವಾಗಿವೆಯೋ ಅದೇ ರೀತಿಯಲ್ಲಿ ಮಹಾಭಾರತವೂ ತತ್ತ್ವಗಳ ನಿಧಿಯೆಂದು ಪ್ರಸಿದ್ಧವಾಗಿದೆ.

ನ ತಾಂ ಸ್ವರ್ಗಗತಿಂ ಪ್ರಾಪ್ಯ ತುಷ್ಟಿಂ ಪ್ರಾಪ್ನೋತಿ ಮಾನವಃ ।
ಯಾಂ ಶ್ರುತ್ವೈವ ಮಹಾಪುಣ್ಯಾಮಿತಿಹಾಸಮುಪಾಶ್ನುತೇ ॥೧೭॥

ಮನುಷ್ಯನು ಮಹಾಪುಣ್ಯತಮವಾದ ಇತಿಹಾಸರೂಪವಾದ ಮಹಾಭಾರತವನ್ನು ಕೇಳುವುದರಿಂದ ಎಷ್ಟು ಆನಂದಪಡುವನೋ–ಅಷ್ಟು ಆನಂದವನ್ನು ಸ್ವರ್ಗದಲ್ಲಿಯೂ ಹೊಂದಲಾರನು.

ಶರೀರೇಣ ಕೃತಂ ಪಾಪಂ ವಾಚಾ ಚ ಮನಸೈವ ಚ ।
ಸರ್ವಂ ಸಂತ್ಯಜತಿ ಕ್ಷಿಪ್ರಂ ಯ ಇದಂ ಶೃಣುಯಾನ್ನರಃ ॥೧೮॥

ಭರತಾನಾಂ ಮಹಜ್ಜನ್ಮ ಶೃಣ್ವತಾಮನಸೂಯತಾಮ್ ।
ನಾಸ್ತಿ ವ್ಯಾಧಿಭಯಂ ತೇಷಾಂ ಪರಲೋಕಭಯಂ ಕುತಃ ॥೧೯॥

ಯಾವನು ಈ ಮಹಾಭಾರತದ ಕಥೆಯನ್ನು ಕೇಳುವನೋ–ಅವನು ಶರೀರದಿಂದ, ಮಾತಿನಿಂದ ಮತ್ತು ಮನಸ್ಸಿನಿಂದ ಮಾಡಿದ ಪಾಪಗಳೆಲ್ಲವನ್ನೂ ಬಹಳ ಬೇಗ ದೂರೀಕರಿಸುತ್ತಾನೆ. ಭರತವಂಶೀಯರ ಮಹತ್ತಾದ ಜನ್ಮವೃತ್ತಾಂತವನ್ನು ಕೇಳುವ ದೋಷದೃಷ್ಟಿರಹಿತರಾದ ಮನುಷ್ಯರಿಗೆ ವ್ಯಾಧಿಭಯವೂ ಇರುವುದಿಲ್ಲವೆಂದಮೇಲೆ ಪರಲೋಕದ ಭಯವಾದರೂ ಹೇಗಿದ್ದೀತು?

ಇದಂ ಹಿ ವೇದೈಃ ಸಮಿತಂ ಪವಿತ್ರಮಪಿ ಚೋತ್ತಮಮ್ ।
ಶ್ರಾವ್ಯಂ ಶ್ರುತಿಸುಖಂ ಚೈವ ಪಾವನಂ ಶೀಲವರ್ಧನಮ್ ॥೨೦॥

ಯ ಇದಂ ಭಾರತಂ ರಾಜನ್ವಾಚಕಾಯ ಪ್ರಯಚ್ಛತಿ ।
ತೇನ ಸರ್ವಾ ಮಹೀ ದತ್ತಾ ಭವೇತ್ಸಾಗರಮೇಖಲಾ ॥೨೧॥

ಈ ಮಹಾಭಾರತವು ವೇದಸದೃಶವಾಗಿದೆ. (ಪಂಚಮವೇದವಾಗಿದೆ). ಪವಿತ್ರವಾಗಿದೆ. ಶ್ರೇಷ್ಠವಾಗಿದೆ. ಕೇಳಲು ಯೋಗ್ಯವಾಗಿದೆ. ಕಿವಿಗಳಿಗೆ ಸುಖವನ್ನು ಉಂಟುಮಾಡುವುದಾಗಿದೆ. ಪರಮಪಾವನವಾಗಿದೆ. ಶೀಲವನ್ನು ವರ್ಧಿಸುವುದಾಗಿದೆ. ಯಾವನು ಇಂತಹ ಮಹಾಗ್ರಂಥವನ್ನು ವಾಚಕನಿಗೆ

ದಾನಮಾಡುವನೋ–ಅವನು ಸಾಗರಗಳೇ ಒಡ್ಯಾಣದಂತಿರುವ ಭೂಮಿಯನ್ನೇ ದಾನಮಾಡಿದಂತಾಗುತ್ತದೆ.

ಅಷ್ಟಾದಶ ಪುರಾಣಾನಿ ಧರ್ಮಶಾಸ್ತ್ರಾಣಿ ಸರ್ವಶಃ ।
ವೇದಾಃ ಸಾಙ್ಗಾಸ್ತಥೈಕತ್ರ ಭಾರತಂ ಚೈಕತಃ ಸ್ಥಿತಮ್ ॥೨೨॥

ಮಹತ್ತ್ವಾದ್ಭಾರವತ್ತ್ವಾಚ್ಚ ಮಹಾಭಾರತಮುಚ್ಯತೇ ।
ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ ॥೨೩॥

ಅಷ್ಟಾದಶಪುರಾಣಗಳು, ಧರ್ಮಶಾಸ್ತ್ರಗಳು, ಷಡಂಗಗಳಿಂದ ಕೂಡಿದ ನಾಲ್ಕು ವೇದಗಳು–ಇವೇ ಒಂದು ಕಡೆ ; ಇವುಗಳಿಗೆ ಸಮಾನವೆನಿಸಿದ ಮಹಾಭಾರತವೇ ಒಂದು ಕಡೆ. ಏಕೆಂದರೆ ಈ ಗ್ರಂಥವು ಮಹತ್ತ್ವ ಅಥವಾ ಮಹಾತತ್ತ್ವಪೂರ್ಣವಾದುದು. ಮೇಲಾಗಿ ಎಲ್ಲ ಗ್ರಂಥಗಳಿಗಿಂತಲೂ ಮಹಾಭಾರಯುಕ್ತವಾದುದು. ಆದುದರಿಂದಲೇ ಇದು ಮಹಾಭಾರತವೆಂದು ಕರೆಯಲ್ಪಟ್ಟಿದೆ. ಮಹಾಭಾರತವೆಂಬ ಪದದ ಈ ವ್ಯುತ್ಪತ್ತಿಯನ್ನು ಯಾವನು ತಿಳಿದಿರುವನೋ ಅವನು ಸಮಸ್ತಪಾಪಗಳಿಂದಲೂ ಮುಕ್ತನಾಗುತ್ತಾನೆ.

ಜಯೋ ನಾಮೇತಿಹಾಸೋಽಯಂ ಶ್ರೋತವ್ಯೋ ಮೋಕ್ಷಮಿಚ್ಛತಾ ।
ಬ್ರಾಹ್ಮಣೇನ ಚ ರಾಜ್ಞಾ ಚ ಗರ್ಭಿಣ್ಯಾ ಚೈವ ಯೋಷಿತಾ ॥೨೪॥

ಸ್ವರ್ಗಕಾಮೋ ಲಭೇತ್ಸ್ವರ್ಗಂ ಜಯಕಾಮೋ ಲಭೇಜ್ಜಯಮ್ ।
ಗರ್ಭಿಣೀ ಲಭತೇ ಪುತ್ರಂ ಕನ್ಯಾಂ ವಾ ಬಹುಭಾಗಿನೀಮ್ ॥೨೫॥

'ಜಯ' ಎಂಬ ಹೆಸರಿನ ಈ ಇತಿಹಾಸವನ್ನು ಮೋಕ್ಷಾಪೇಕ್ಷಿಯು, ಬ್ರಾಹ್ಮಣನು, ರಾಜನು ಮತ್ತು ಗರ್ಭಿಣೀಸ್ತ್ರೀಯು ಕೇಳಲೇಬೇಕು. ಇದನ್ನು ಶ್ರವಣಮಾಡಿದರೆ ಸ್ವರ್ಗಕಾಮನು ಸ್ವರ್ಗವನ್ನು ಹೊಂದುತ್ತಾನೆ. ಜಯಕಾಮನು ವಿಜಯಗಳಿಸುತ್ತಾನೆ. ಗರ್ಭಿಣೀಸ್ತ್ರೀಯು ಪುತ್ರನನ್ನು ಪಡೆಯುತ್ತಾಳೆ. ಬಹುಭಾಗ್ಯಶಾಲಿನಿಯಾದ ಹೆಣ್ಣನ್ನಾದರೂ ಹೆರುತ್ತಾಳೆ.

ಯೋ ಗೋಶತಂ ಕನಕಶೃಙ್ಗಮಯಂ ದದಾತಿ
ವಿಪ್ರಾಯ ವೇದವಿದುಷೇ ಸುಬಹುಶ್ರುತಾಯ ।
ಪುಣ್ಯಾಂ ಚ ಭಾರತಕಥಾಂ ಸತತಂ ಶೃಣೋತಿ
ತುಲ್ಯಂ ಫಲಂ ಭವತಿ ತಸ್ಯ ಚ ತಸ್ಯ ಚೈವ ॥೨೬॥

ಯಾವನು ಸುವರ್ಣಮಯವಾದ ಕೊಂಬುಗಳುಳ್ಳ ನೂರು ಹಸುಗಳನ್ನು–ವೇದವಿದನಾದ, ಬಹುಶ್ರುತನಾದ ಬ್ರಾಹ್ಮಣನಿಗೆ ದಾನಮಾಡುವನೋ–ಅಂತಹವನಿಗೆ ಲಭಿಸುವ ಫಲವೂ, ಪುಣ್ಯತಮವಾದ ಭಾರತಕಥೆಯನ್ನು ಸತತವಾಗಿ ಕೇಳುವವನಿಗೆ ಲಭಿಸುವ ಫಲವೂ ಸಮಾನವಾಗಿರುತ್ತದೆ.

ಕಾರ್ಷ್ಣಂ ವೇದಮಿಮಂ ಸರ್ವಂ ಶೃಣುಯಾದ್ಯಃ ಸಮಾಹಿತಃ ।
ಬ್ರಹ್ಮಹತ್ಯಾದಿಪಾಪಾನಾಂ ಕೋಟಿಸ್ತಸ್ಯ ವಿನಶ್ಯತಿ ॥೨೭॥

ಪುತ್ರಾಃ ಶುಶ್ರೂಷವಃ ಸನ್ತಿ ಪ್ರೇಷ್ಯಾಶ್ಚ ಪ್ರಿಯಕಾರಿಣಃ ।
ಭಾರತಾನಾಂ ಮಹಜ್ಜನ್ಮ ಮಹಾಭಾರತಮುಚ್ಯತೇ ॥೨೮॥

ಕೃಷ್ಣದ್ವೈಪಾಯನರು ವಿರಚಿಸಿರುವ ಐದನೆಯ ವೇದರೂಪವಾದ ಮಹಾಭಾರತವನ್ನು ಯಾವನು ಸಮಗ್ರವಾಗಿ ಏಕಾಗ್ರಚಿತ್ತನಾಗಿ ಶ್ರವಣ ಮಾಡುವನೋ–ಅಂತಹವನ ಬ್ರಹ್ಮಹತ್ಯಾದಿ ಕೋಟಿಪಾಪಗಳು ಕ್ಷಿಪ್ರದಲ್ಲಿಯೇ ವಿನಾಶಹೊಂದುತ್ತವೆ. ಮಕ್ಕಳು ಮಾತಾ-ಪಿತೃಗಳ ಶುಶ್ರೂಷೆಯಲ್ಲಿ ನಿರತರಾಗಿರುತ್ತಾರೆ. ಸೇವಕರು ಪ್ರಿಯಕಾರ್ಯಗಳನ್ನೇ ಮಾಡುತ್ತಾರೆ. ಇದರಲ್ಲಿ ಭರತವಂಶೀಯರ ಮಹಾಜನ್ಮವೃತ್ತಾಂತವಿರುವುದರಿಂದ ಮಹಾಭಾರತವೆಂದು ಇದು ಕರೆಯಲ್ಪಟ್ಟಿದೆ.

ದೇವಾ ದೇವರ್ಷಯೋ ಹ್ಯತ್ರ ಪುಣ್ಯಾ ಬ್ರಹ್ಮರ್ಷಯಸ್ತಥಾ ।
ಕೀರ್ತ್ಯನ್ತೇ ಧೂತಪಾಪ್ಮಾನಃ ಕೀರ್ತ್ಯತೇ ಕೇಶವಸ್ತಥಾ ॥೨೯॥

ಭಗವಾಂಶ್ಚಾಪಿ ದೇವೇಶೋ ಯತ್ರ ದೇವೀ ಚ ಕೀರ್ತ್ಯತೇ ।
ಅನೇಕಜನನೋ ಯತ್ರ ಕಾರ್ತಿಕೇಯಸ್ಯ ಸಮ್ಭವಃ ॥೩೦॥

ಮಹಾಭಾರತದಲ್ಲಿ ಪವಿತ್ರರಾದ ದೇವತೆಗಳ, ರಾಜರ್ಷಿಗಳ ಮತ್ತು ಪುಣ್ಯಸ್ವರೂಪರಾದ ಬ್ರಹ್ಮರ್ಷಿಗಳ ಕೀರ್ತನವಿದೆ. ಶ್ರೀಕೇಶವನ ಕೀರ್ತನವಿದೆ. ಪೂಜ್ಯನಾದ ಮಹಾದೇವನ ಮತ್ತು ಪಾರ್ವತೀದೇವಿಯ ಕೀರ್ತನವಿದೆ. ಅನೇಕಮಾತೆಯರನ್ನು ಹೊಂದಿರುವ ಕಾರ್ತಿಕೇಯನ ಜನ್ಮವೃತ್ತಾಂತವಿದೆ.

ಬ್ರಾಹ್ಮಣಾನಾಂ ಗವಾಂ ಚೈವ ಮಾಹಾತ್ಮ್ಯಂ ಯತ್ರ ಕೀರ್ತ್ಯತೇ ।
ಸರ್ವಶ್ರುತಿಸಮೂಹೋಽಯಂ ಶ್ರೋತವ್ಯೋ ಧರ್ಮಬುದ್ಧಿಭಿಃ ॥೩೧॥

ಮುಚ್ಯತೇ ಸರ್ವಪಾಪೇಭ್ಯೋ ರಾಹುಣಾ ಚನ್ದ್ರಮಾ ಯಥಾ ।
ಜಯೋ ನಾಮೇತಿಹಾಸೋಽಯಂ ಶ್ರೋತವ್ಯೋ ವಿಜಿಗೀಷುಣಾ ॥೩೨॥

ಈ ಇತಿಹಾಸದಲ್ಲಿ ಬ್ರಾಹ್ಮಣರ ಮತ್ತು ಗೋವುಗಳ ಮಹಿಮೆಯೂ ಕೀರ್ತಿತವಾಗಿದೆ. ಮಹಾಭಾರತವೆಂಬುದು ಶ್ರುತಿಗಳ ಸಮೂಹ. ಧರ್ಮ ಬುದ್ಧಿಯುಳ್ಳವರು ಇದನ್ನು ಅವಶ್ಯವಾಗಿ ಶ್ರವಣಮಾಡಬೇಕು. ಇದನ್ನು ಶ್ರವಣಮಾಡಿದವನು–ರಾಹುವಿನಿಂದ ಚಂದ್ರನು ಮುಕ್ತನಾಗುವಂತೆ–ಸಮಸ್ತ ಪಾಪಗಳಿಂದಲೂ ಮುಕ್ತನಾಗುತ್ತಾನೆ. ಇದು 'ಜಯ' ಎಂಬ ಹೆಸರಿನ ಇತಿಹಾಸವಾಗಿದೆ. ಯುದ್ಧದಲ್ಲಿ ವಿಜಯವನ್ನು ಬಯಸುವವರು ಇದನ್ನು ಶ್ರವಣಮಾಡಬೇಕು.

ಅಸ್ಮಿನ್ನರ್ಥಶ್ಚ ಕಾಮಶ್ಚ ನಿಖಿಲೇನೋಪದೇಕ್ಷ್ಯತೇ ।
ಇತಿಹಾಸೇ ಮಹಾಪುಣ್ಯೇ ಬುದ್ಧಿಶ್ಚ ಪರಿನೈಷ್ಠಿಕೀ ॥೩೩॥

ಭಾರತಂ ಶೃಣುಯಾನ್ನಿತ್ಯಂ ಭಾರತಂ ಪರಿಕೀರ್ತಯೇತ್ ।
ಭಾರತಂ ಭವನೇ ಯಸ್ಯ ತಸ್ಯ ಹಸ್ತಗತೋ ಜಯಃ ॥೩೪॥

ಪರಮಪವಿತ್ರವಾದ ಈ ಇತಿಹಾಸದಲ್ಲಿ ಧರ್ಮದ ಹಿನ್ನೆಲೆಯಲ್ಲಿ ಅರ್ಥ-ಕಾಮಗಳೂ ಸಮಗ್ರವಾಗಿ ಉಪದೇಶಿಸಲ್ಪಟ್ಟಿವೆ. ಮಹಾಪುಣ್ಯತಮ ವಾದ ಈ ಇತಿಹಾಸದಲ್ಲಿ ನಿಷ್ಠವಾದ ಬುದ್ಧಿಯು ಪರಮಾತ್ಮನಲ್ಲಿಯೇ ನಿಷ್ಠೆಯನ್ನು ಹೊಂದುತ್ತದೆ. ಆದುದರಿಂದ ನಿತ್ಯವೂ ಮಹಾಭಾರತವನ್ನು ಕೇಳುತ್ತಲೇ ಇರಬೇಕು. ಕೀರ್ತನೆಮಾಡುತ್ತಲೇ ಇರಬೇಕು. ಮಹಾಭಾರತ ಗ್ರಂಥವು ಯಾವನ ಮನೆಯಲ್ಲಿರುವುದೋ–ಅವನಿಗೆ ವಿಜಯವು ಕೈಯಲ್ಲಿ ದ್ದಂತೆಯೇ ಸರಿ.

ಪುಣ್ಯೋಽಯಮಿತಿಹಾಸಾಖ್ಯಃ ಪವಿತ್ರಂ ಚೇದಮುತ್ತಮಮ್ ।
ಕೃಷ್ಣೇನ ಮುನಿನಾ ವಿಪ್ರ ನಿರ್ಮಿತಂ ಸತ್ಯವಾದಿನಾ ॥೩೫॥

ಸರ್ವಜ್ಞೇನ ವಿಧಿಜ್ಞೇನ ಧರ್ಮಜ್ಞಾನವತಾ ಸತಾ ।
ಅತೀನ್ದ್ರಿಯೇಣ ಶುಚಿನಾ ತಪಸಾ ಭಾವಿತಾತ್ಮನಾ ॥೩೬॥

ಐಶ್ವರ್ಯೇ ವರ್ತತಾ ಚೈವ ಸಾಂಖ್ಯಯೋಗವತಾ ತಥಾ ।
ನೈಕತನ್ತ್ರವಿಬುದ್ಧೇನ ದೃಷ್ಟ್ವಾ ದಿವ್ಯೇನ ಚಕ್ಷುಷಾ ॥೩೭॥

ಕೀರ್ತಿಂ ಪ್ರಥಯತಾ ಲೋಕೇ ಪಾಣ್ಡವಾನಾಂ ಮಹಾತ್ಮನಾಮ್ ।
ಅನ್ಯೇಷಾಂ ಕ್ಷತ್ರಿಯಾಣಾಂ ಚ ಭೂರಿದ್ರವಿಣತೇಜಸಾಮ್ ॥೩೮॥

ಸತ್ಯವಾದಿಗಳಾದ ವ್ಯಾಸಮಹರ್ಷಿಗಳಿಂದ ಪ್ರಣೀತವಾದ ಪುಣ್ಯಮಯವಾದ ಈ ಇತಿಹಾಸವು ಪರಮಪವಿತ್ರವೂ ಶ್ರೇಷ್ಠವೂ ಆಗಿದೆ. ಸರ್ವಜ್ಞರಾದ, ವಿಧಿ-ವಿಧಾನಗಳನ್ನು ತಿಳಿದಿರುವ, ಧರ್ಮಜ್ಞರಾದ, ಸತ್ಪುರುಷರಾದ, ಇಂದ್ರಿಯಾತೀತಜ್ಞಾನದಿಂದ ಸಂಪನ್ನರಾದ, ಶುದ್ಧವಾದ ತಪಸ್ಸಿನಿಂದ ಪವಿತ್ರವಾದ ಅಂತಃಕರಣವನ್ನು ಹೊಂದಿರುವ, ಐಶ್ವರ್ಯ ಸಂಪನ್ನರಾದ, ಸಾಂಖ್ಯ ಮತ್ತು ಯೋಗಗಳ ವಿದ್ವಾಂಸರಾದ, ಅನೇಕಶಾಸ್ತ್ರಗಳ ಪಾರದರ್ಶಿಗಳಾದ, ಮುನಿಶ್ರೇಷ್ಠರಾದ ವ್ಯಾಸರು ದಿವ್ಯದೃಷ್ಟಿಯಿಂದ ಸಮಸ್ತವನ್ನೂ ಯಥಾವತ್ತಾಗಿ ತಿಳಿದುಕೊಂಡು ಮಹಾತ್ಮರಾದ ಪಾಂಡವರ ಮತ್ತು ಪ್ರಚುರಧನಸಂಪನ್ನರಾದ, ಮಹಾತೇಜಸ್ವಿಗಳಾದ ಇತರ ಕ್ಷತ್ರಿಯರಾಜರ ಕೀರ್ತಿಯನ್ನು ಈ ಲೋಕದಲ್ಲಿ ಪ್ರಚುರಗೊಳಿಸುವ ಸಲುವಾಗಿ ಈ ಇತಿಹಾಸವನ್ನು ರಚಿಸಿದರು.

ಅಷ್ಟಾದಶಪುರಾಣಾನಾಂ ಶ್ರವಣಾದ್ಯತ್ಫಲಂ ಲಭೇತ್ ।
ತತ್ಫಲಂ ಸಮವಾಪ್ನೋತಿ ವೈಷ್ಣವೋ ನಾತ್ರ ಸಂಶಯಃ ॥೩೯॥

ಸ್ತ್ರಿಯಶ್ಚ ಪುರುಷಾಶ್ಚೈವ ವೈಷ್ಣವಂ ಪದಮಾಪ್ನುಯುಃ ।
ಸ್ತ್ರೀಭಿಶ್ಚ ಪುತ್ರಕಾಮಾಭಿಃ ಶ್ರೋತವ್ಯಂ ವೈಷ್ಣವಂ ಯಶಃ ॥೪೦॥

ಹದಿನೆಂಟು ಪುರಾಣಗಳ ಶ್ರವಣದಿಂದ ಯಾವ ಪುಣ್ಯವು ಲಭಿಸುವುದೋ–ಆ ಫಲವನ್ನು ವಿಷ್ಣುಭಕ್ತರು ಮಹಾಭಾರತದ ಶ್ರವಣದಿಂದಲೇ ಪಡೆದುಕೊಳ್ಳುತ್ತಾರೆ. ಇದರಲ್ಲಿ ಸಂಶಯವಿಲ್ಲ. ಸ್ತ್ರೀಯರಾಗಲೀ ಪುರುಷರಾಗಲೀ ವಿಷ್ಣುವಿನ ಪರಮಧಾಮಕ್ಕೆ ಹೋಗುತ್ತಾರೆ. ಪುತ್ರಾಪೇಕ್ಷಿಗಳಾದ ಸ್ತ್ರೀಯರು ಭಗವಾನ್ ವಿಷ್ಣುವಿನ ಯಶಸ್ಸಿನಿಂದ ತುಂಬಿರುವ ಮಹಾಭಾರತವನ್ನು ಶ್ರವಣಮಾಡಬೇಕು.

ನರೇಣ ಧರ್ಮಕಾಮೇನ ಸರ್ವಃ ಶ್ರೋತವ್ಯ ಇತ್ಯಪಿ ।
ನಿಖಿಲೇನೇತಿಹಾಸೋಽಯಂ ತತಃ ಸಿದ್ಧಿಮವಾಪ್ನುಯಾತ್ ॥೪೧॥

ಶೃಣ್ವಞ್ಶ್ರದ್ದಃ ಪುಣ್ಯಶೀಲಃ ಶ್ರಾವಯಂಶ್ಚೇದಮದ್ಭುತಮ್ ।
ನರಃ ಫಲಮವಾಪ್ನೋತಿ ರಾಜಸೂಯಾಶ್ವಮೇಧಯೋಃ ॥೪೨॥

ಧರ್ಮಕಾಮನಾದ ಮನುಷ್ಯನು ಈ ಇತಿಹಾಸವನ್ನು ಸಂಪೂರ್ಣವಾಗಿ ಕೇಳಬೇಕು. ಇದರಿಂದ ಅವನು ಸಿದ್ಧಿಯನ್ನು ಪಡೆಯುತ್ತಾನೆ. ಯಾವ ಮನುಷ್ಯನು ಶ್ರದ್ಧಾಯುಕ್ತನಾಗಿ, ಒಳ್ಳೆಯ ಶೀಲವಂತನಾಗಿ ಈ ಅದ್ಭುತವಾದ ಇತಿಹಾಸವನ್ನು ವಾಚನಮಾಡುವನೋ–ಅವನು ರಾಜಸೂಯ ಮತ್ತು ಅಶ್ವಮೇಧಯಾಗಗಳನ್ನು ಮಾಡಿದ ಫಲವನ್ನು ಹೊಂದುತ್ತಾನೆ.

ತ್ರಿಭಿರ್ವರ್ಷೈರ್ಲಬ್ಧಕಾಮಃ ಕೃಷ್ಣದ್ವೈಪಾಯನೋ ಮುನಿಃ ।
ನಿತ್ಯೋತ್ಥಿತಃ ಶುಚಿಃ ಶಕ್ತೋ ಮಹಾಭಾರತಮಾದಿತಃ ॥೪೩॥

ತಪೋ ನಿಯಮಮಾಸ್ಥಾಯ ಕೃತಮೇತನ್ಮಹರ್ಷಿಣಾ ।
ತಸ್ಮಾನ್ನಿಯಮಸಂಯುಕ್ತೈಃ ಶ್ರೋತವ್ಯಂ ಬ್ರಾಹ್ಮಣೈರಿದಮ್ ॥೪೪॥

ಶಕ್ತಿಶಾಲಿಗಳಾದ ಶುಚೀಭೂತರಾದ ಕೃಷ್ಣದ್ವೈಪಾಯನವ್ಯಾಸರು ಮೂರು ವರ್ಷಗಳಲ್ಲಿಯೇ ಮಹಾಭಾರತವನ್ನು ಮೊದಲಿನಿಂದಲೂ ರಚಿಸಿ ಮುಗಿಸಬೇಕೆಂದು ಅಪೇಕ್ಷಿಸಿ, ನಿಯಮವನ್ನು ಕೈಗೊಂಡು, ಸತತವಾಗಿ ರಚಿಸುತ್ತಾ ಈ ಮಹಾಭಾರತವನ್ನು ಮುಗಿಸಿದರು. ಆದುದರಿಂದ ಬ್ರಾಹ್ಮಣರು ಈ ಮಹಾಭಾರತವನ್ನು ನಿಯಮಾನುಷ್ಠಾನಪರರಾಗಿಯೇ ಕೇಳಬೇಕು.

ಮಹೀಂ ವಿಜಯತೇ ರಾಜಾ ಶತ್ರೂಂಶ್ಚಾಪಿ ಪರಾಜಯೇತ್ ।
ಇದಂ ಪುಂಸವನಂ ಶ್ರೇಷ್ಠಮಿದಂ ಸ್ವಸ್ತ್ಯಯನಂ ಮಹತ್ ॥೪೫॥

ಮಹಿಷೀಯುವರಾಜಾಭ್ಯಾಂ ಶ್ರೋತವ್ಯಂ ಬಹುಶಸ್ತಥಾ ।
ವೀರಂ ಜನಯತೇ ಪುತ್ರಂ ಕನ್ಯಾಂ ವಾ ರಾಜ್ಯಭಾಗಿನೀಮ್ ॥೪೬॥

ಈ ಇತಿಹಾಸಶ್ರವಣದಿಂದ ರಾಜನು ಭೂಮಂಡಲವನ್ನು ಜಯಿಸುತ್ತಾನೆ. ಇದನ್ನು ಕೇಳುವುದರಿಂದ ಯೋಗ್ಯನಾದ ಪುತ್ರನು ಹುಟ್ಟುತ್ತಾನೆ. ಮಹಾಮಂಗಳವಾಗುತ್ತದೆ. ಯುವರಾಜ-ಮಹಾರಾಣಿಯರು ಈ ಇತಿಹಾಸವನ್ನು ಹಲವಾರು ಬಾರಿ ಕೇಳಬೇಕು. ಇದರ ಶ್ರವಣದಿಂದ ಮಹಾರಾಣಿಯು ವೀರಪುತ್ರನನ್ನು ಪಡೆಯುತ್ತಾಳೆ ಅಥವಾ ಪಟ್ಟಮಹಿಷಿಯಾಗುವ ಪುತ್ರಿಯನ್ನಾದರೂ ಪಡೆಯುತ್ತಾಳೆ.

ಯಶ್ಚೇದಂ ಶ್ರಾವಯೇದ್ವಿದ್ವಾನ್ಸದಾ ಪರ್ವಣಿ ಪರ್ವಣಿ ।
ಧೂತಪಾಪ್ಮಾ ಜಿತಸ್ವರ್ಗೋ ಬ್ರಹ್ಮಭೂಯಾಯ ಕಲ್ಪತೇ ॥೪೭॥

ಯಶ್ಚೇದಂ ಶ್ರಾವಯೇಚ್ಛ್ರಾದ್ಧೇ ಬ್ರಾಹ್ಮಣಾನ್ಪಾದಮನ್ತತಃ ।
ಅಕ್ಷಯ್ಯಮನ್ನಪಾನಂ ವೈ ಪಿತ್ೄಂಸ್ತಸ್ಯೋಪತಿಷ್ಠತೇ ॥೪೮॥

ಯಾವನು ಪರ್ವ-ಪರ್ವಗಳಲ್ಲಿಯೂ ಇತರರಿಗೆ ಈ ಇತಿಹಾಸವನ್ನು ವಾಚನಮಾಡುವನೋ–ಅಂತಹ ವಿದ್ವಾಂಸನು ಪಾಪಗಳನ್ನು ಕಳೆದುಕೊಂಡು ಸ್ವರ್ಗವನ್ನು ಜಯಿಸಿ ಬ್ರಹ್ಮಭಾವದ ಪ್ರಾಪ್ತಿಗೆ ಯೋಗ್ಯನಾಗುತ್ತಾನೆ. ಯಾವನು ಶ್ರಾದ್ಧಕಾಲದಲ್ಲಿ ಬ್ರಾಹ್ಮಣರ ಬಳಿಯಲ್ಲಿ ಕುಳಿತು ಮಹಾಭಾರತದ ಒಂದು ಸಣ್ಣ ಭಾಗವನ್ನಾದರೂ ಬ್ರಾಹ್ಮಣರಿಗೆ ಕೇಳಿಸುವಂತೆ ವಾಚನಮಾಡುವನೋ–ಅಂತಹವನು ಕೊಡುವ ಅನ್ನ-ಪಾನಗಳು ಅಕ್ಷಯವಾಗಿ ಅವರ ಪಿತೃಗಳನ್ನು ಸೇರುತ್ತವೆ.

ಇತಿಹಾಸಮಿಮಂ ಪುಣ್ಯಂ ಮಹಾರ್ಥಂ ವೇದಸಮ್ಮಿತಮ್ ।
ವ್ಯಾಸೋಕ್ತಂ ಶ್ರೂಯತೇ ಯೇನ ಕೃತ್ವಾ ಬ್ರಾಹ್ಮಣಮಗ್ರತಃ ॥೪೯॥

ಸ ನರಃ ಸರ್ವಕಾಮಾಂಶ್ಚ ಕೀರ್ತಿಂ ಪ್ರಾಪ್ಯೇಹ ಶೌನಕ ।
ಗಚ್ಛೇತ್ಪರಮಿಕಾಂ ಸಿದ್ಧಿಮತ್ರ ಮೇ ನಾಸ್ತಿ ಸಂಶಯಃ ॥೫೦॥

ಯಾವ ಮನುಷ್ಯನು ಬ್ರಾಹ್ಮಣನನ್ನು ಮುಂದೆಮಾಡಿಕೊಂಡು ಗಂಭೀರವಾದ ಅರ್ಥದಿಂದ ಕೂಡಿರುವ, ವೇದಕ್ಕೆ ಸಮಾನವಾದ, ವ್ಯಾಸರಿಂದ ಹೇಳಲ್ಪಟ್ಟ ಈ ಇತಿಹಾಸವನ್ನು ಕೇಳುವನೋ–ಅಂತಹ ಮನುಷ್ಯನು ಇಲ್ಲಿ ಸರ್ವಕಾಮನೆಗಳನ್ನೂ ಕೀರ್ತಿಯನ್ನೂ ಹೊಂದಿ ಪರಮಸಿದ್ಧಿಯನ್ನೂ ಪಡೆಯುತ್ತಾನೆ. ಈ ವಿಷಯದಲ್ಲಿ ನನಗೆ ಸಂಶಯವೇ ಇಲ್ಲ.

ಶ್ರಾವಯೇದ್ಬ್ರಾಹ್ಮಣಾಞ್ಛ್ರಾದ್ಧೇ ಯಶ್ಚೈನಂ ಪಾದಮನ್ತತಃ ।
ಅಕ್ಷಯ್ಯಂ ತಸ್ಯ ತಚ್ಛ್ರಾದ್ಧಮುಪಾವರ್ತೇತ್ಪಿತ್ೄನಿಹ ॥೫೧॥

ಭಾರತಂ ಪರಮಂ ಪುಣ್ಯಂ ಭಾರತೇ ವಿವಿಧಾಃ ಕಥಾಃ ।
ಭಾರತಂ ಸೇವ್ಯತೇ ದೇವೈರ್ಭಾರತಂ ಪರಮಂ ಪದಮ್ ॥೫೨॥

ಯಾವ ಮನುಷ್ಯನು ಶ್ರಾದ್ಧದ ಕಡೆಯಲ್ಲಿ ಮಹಾಭಾರತದ ಶ್ಲೋಕ

ದಲ್ಲಿರುವ ಒಂದು ಪಾದವನ್ನಾದರೂ ಬ್ರಾಹ್ಮಣರಿಗೆ ಕೇಳಿಸುವಂತೆ ಹೇಳು ವನೋ–ಅಂತಹವನು ಮಾಡಿದ ಶ್ರಾದ್ಧವು ಅಕ್ಷಯವಾಗಿ ಪಿತೃಗಳನ್ನು ಸೇರುತ್ತದೆ. ಮಹಾಭಾರತಶ್ರವಣವು ಮಹಾಪುಣ್ಯದಾಯಕವಾದುದು. ಭಾರತದಲ್ಲಿ ವಿಧ-ವಿಧವಾದ ಕಥೆಗಳಿವೆ. ಭಾರತವು ದೇವತೆಗಳಿಂದಲೂ ಸೇವಿಸಲ್ಪಡುತ್ತದೆ. ಮಹಾಭಾರತದಿಂದ ಪರಮಪದದ ಪ್ರಾಪ್ತಿಯಾಗುತ್ತದೆ.

ಭಾರತಂ ಸರ್ವಶಾಸ್ತ್ರಾಣಾಮುತ್ತಮಂ ಭರತರ್ಷಭ ।
ಭಾರತಾತ್ಪ್ರಾಪ್ಯತೇ ಮೋಕ್ಷಸ್ತತ್ತ್ವಮೇತದ್ಬ್ರವೀಮಿ ತತ್ ॥೫೩॥

ಏವಮೇತನ್ಮಹಾರಾಜ ನಾತ್ರ ಕಾರ್ಯಾ ವಿಚಾರಣಾ ।
ಶ್ರದ್ಧಧಾನೇನ ವೈ ಭಾವ್ಯಮೇವಮಾಹ ಗುರುರ್ಮಮ ॥೫೪॥

ಮಹಾಭಾರತವು ಎಲ್ಲ ಶಾಸ್ತ್ರಗಳಿಗಿಂತಲೂ ಶ್ರೇಷ್ಠವಾಗಿದೆ. ಮಹಾ ಭಾರತಶ್ರವಣದಿಂದ ಮೋಕ್ಷವು ಲಭಿಸುತ್ತದೆ. ಈ ರಹಸ್ಯವನ್ನು ನಾನು ನಿನಗೆ ಹೇಳುತ್ತಿದ್ದೇನೆ. ಮಹಾರಾಜ! ಇದು ಹೀಗೆಯೇ ಸರಿ. ಇದರಲ್ಲಿ ಪುನಃ ವಿಚಾರಮಾಡಬೇಕಾದುದು ಯಾವುದೂ ಇಲ್ಲ. ಶ್ರೋತೃವೂ ವಾಚಕನೂ ಮಹಾಭಾರತದ ಮಹಿಮೆಯ ವಿಷಯವಾಗಿಯೂ ಮತ್ತು ಅದರಿಂದ ಲಭಿಸುವ ಫಲದ ವಿಷಯದಲ್ಲಿಯೂ ಶ್ರದ್ಧಾಳುವಾಗಿರಬೇಕು. ಹೀಗೆ ನಮ್ಮ ಗುರುಗಳಾದ ವ್ಯಾಸರೇ ಹೇಳಿದ್ದಾರೆ.

ವೇದೇ ರಾಮಾಯಣೇ ಪುಣ್ಯೇ ಭಾರತೇ ಭರತರ್ಷಭ ।
ಆದೌ ಚಾನ್ತೇ ಚ ಮಧ್ಯೇ ಚ ಹರಿಃ ಸರ್ವತ್ರ ಗೀಯತೇ ॥೫೫॥

ಭಾರತಶ್ರವಣೇ ರಾಜನ್ಪಾರಣೇ ಚ ನೃಪೋತ್ತಮ ।
ಸದಾ ಯತ್ನವತಾ ಭಾವ್ಯಂ ಶ್ರೇಯಸ್ತು ಪರಮಿಚ್ಛತಾ ॥೫೬॥

ವೇದದಲ್ಲಿ, ರಾಮಾಯಣದಲ್ಲಿ ಮತ್ತು ಪುಣ್ಯತಮವಾದ ಭಾರತದಲ್ಲಿ ಮೊದಲು, ಮಧ್ಯ ಮತ್ತು ಕಡೆಯಲ್ಲಿ ಸರ್ವತ್ರ ಶ್ರೀಹರಿಯೇ ಸಂಕೀರ್ತಿತ ನಾಗುತ್ತಾನೆ. ತನ್ನ ಪರಮಕಲ್ಯಾಣವನ್ನು ಬಯಸುವ ಶ್ರೋತೃವು ಮಹಾ ಭಾರತವನ್ನು ಕೇಳುವುದಕ್ಕೂ ವ್ರತಸಂಬಂಧವಾದ ಪಾರಣೆಮಾಡುವುದಕ್ಕೂ ಯಾವಾಗಲೂ ಪ್ರಯತ್ನಿಸುತ್ತಲೇ ಇರಬೇಕು.

ಪರಿಶಿಷ್ಟ

(31ನೆಯ ಸಂಪುಟದಿಂದ ಮುಂದುವರಿದಿದೆ.)

ಉಮಾ-ಮಹೇಶ್ವರಸಂವಾದ

ಯಮಲೋಕ ಮತ್ತು ಅದರ ಮಾರ್ಗಗಳ ವರ್ಣನೆ: ಪಾಪಿಗಳಿಗೆ ವಿಧಿಸುವ ನರಕಯಾತನೆಗಳ ವಿವರಣೆ: ಕರ್ಮಾನುಸಾರವಾಗಿ ಲಭಿಸುವ ವಿಭಿನ್ನಜನ್ಮಗಳು

ಉಮೆಯು ಹೇಳುತ್ತಾಳೆ :

ಭಗವನ್ಸರ್ವಲೋಕೇಶ ತ್ರಿಪುರಾರ್ದನ ಶಙ್ಕರ ।
ಕೀದೃಶಾ ಯಮದಣ್ಡಾಸ್ತೇ ಕೀದೃಶಾಃ ಪರಿಚಾರಕಾಃ ॥೫೬೩॥

"ಪೂಜ್ಯನೇ! ಸರ್ವಲೋಕೇಶನೇ! ತ್ರಿಪುರನಾಶಕನೇ! ಶಂಕರನೇ! ಯಮದಂಡಗಳು ಹೇಗಿರುತ್ತವೆ? ಯಮನ ಪರಿಚಾರಕರು ಹೇಗಿರುವರು?

ಕಥಂ ಮೃತಾಸ್ತೇ ಗಚ್ಛನ್ತಿ ಪ್ರಾಣಿನೋ ಯಮಸಾದನಮ್ ।
ಕೀದೃಶಂ ಭವನಂ ತಸ್ಯ ಕಥಂ ದಣ್ಡಯತಿ ಪ್ರಜಾಃ ।
ಏತತ್ಸರ್ವಂ ಮಹಾದೇವ ಶ್ರೋತುಮಿಚ್ಛಾಮ್ಯಹಂ ಪ್ರಭೋ ॥೫೬೪॥

ಮಹಾದೇವನೇ! ಸತ್ತುಹೋದ ಪ್ರಾಣಿಗಳು ಯಮಲೋಕಕ್ಕೆ ಹೇಗೆ ಹೋಗುತ್ತವೆ? ಯಮನ ಅರಮನೆಯು ಹೇಗಿದೆ? ಅವನು ಅಲ್ಲಿಗೆ ಹೋದ ಮನುಷ್ಯರನ್ನು ಹೇಗೆ ಶಿಕ್ಷಿಸುತ್ತಾನೆ? ಪ್ರಭುವೇ! ಈ ಎಲ್ಲವನ್ನೂ ನಾನು ಕೇಳಲು ಬಯಸಿದ್ದೇನೆ."

ಮಹೇಶ್ವರನು ಹೇಳುತ್ತಾನೆ :

"ಕಲ್ಯಾಣಿ! ನಿನಗೆ ಕೇಳಲು ಪ್ರಿಯವಾದುದನ್ನು ಹೇಳುವೆನು, ಕೇಳು.

ಶುಭಾಂಗಿಯೇ! ದಕ್ಷಿಣದಿಕ್ಕಿನಲ್ಲಿ ಯಮನ ವಿಶಾಲವಾದ ಭವನವಿದೆ. ಅದು ವಿಚಿತ್ರವಾಗಿಯೂ, ರಮಣೀಯವಾಗಿಯೂ, ನಾನಾಭಾವಗಳಿಂದ ಕೂಡಿದುದಾಗಿಯೂ ಇದೆ. ಪಿತೃಗಳಿಂದಲೂ, ಪ್ರೇತಗಳ ಸಮೂಹ

ಗಳಿಂದಲೂ, ಯಮನ ದೂತರಿಂದಲೂ ಅದು ವ್ಯಾಪ್ತವಾಗಿದೆ. ಕರ್ಮಕ್ಕೆ ಅಧೀನವಾದ ಅನೇಕಪ್ರಾಣಿಗಳ ಸಮೂಹಗಳಿಂದ ಯಮನ ಅರಮನೆಯು ತುಂಬಿಹೋಗಿದೆ. ಲೋಕದ ಹಿತದಲ್ಲಿಯೇ ಆಸಕ್ತನಾದ ಯಮನು ನಿತ್ಯವೂ ಪಾಪಿಗಳನ್ನು ಶಿಕ್ಷಿಸುತ್ತಾ ಅಲ್ಲಿಯೇ ಇರುವನು. ಯಮರಾಜನು ತನ್ನ ಮಾಯಾಶಕ್ತಿಯಿಂದ ಪ್ರಾಣಿಗಳು ಭೂಲೋಕದಲ್ಲಿ ಮಾಡಿದ ಶುಭಾಶುಭ ಕರ್ಮಗಳನ್ನು ತಿಳಿಯುತ್ತಾನೆ. ಅದೇ ಮಾಯೆಯಿಂದಲೇ ಎಲ್ಲೆಂದರಲ್ಲಿ ಪ್ರಾಣಿಗಳ ಸಮೂಹಗಳನ್ನು ಸಂಹರಿಸುತ್ತಾನೆ. ಅವನ ಮಾಯಾಮಯವಾದ ಪಾಶಗಳನ್ನು ದೇವತೆಗಳಾಗಲೀ ಅಸುರರಾಗಲೀ ತಿಳಿಯಲಾರರು. ಹೀಗಿರುವಾಗ ಯಮದೇವನ ಮಹಾಚರಿತ್ರೆಯನ್ನು ಮನುಷ್ಯಮಾತ್ರನಾದ ಯಾವನು ತಾನೇ ತಿಳಿಯುವನು?

ಹೀಗೆ ವಾಸಮಾಡುತ್ತಿರುವ ಯಮರಾಜನ ದೂತರು ಕ್ಷೀಣಕರ್ಮರಾದ (ಭೂಮಿಯಲ್ಲಿ ಪ್ರಾರಬ್ಧಕರ್ಮಗಳನ್ನು ಅನುಭವಿಸಿ ಮುಗಿಸಿದ) ಪ್ರಾಣಿಗಳನ್ನು ಹಿಡಿದು ಯಮನ ಬಳಿಗೆ ಒಯ್ಯುತ್ತಾರೆ. ಯಾವುದಾದರೂ ಒಂದು ನಿಮಿತ್ತದಿಂದ (ಕಾಯಿಲೆ-ಆಘಾತ-ನೀರು-ಬೆಂಕಿ ಇತ್ಯಾದಿಗಳಿಂದ) ಅವರು ಪ್ರಾಣಿಗಳ ಸಮೂಹಗಳನ್ನು ಯಮನ ಬಳಿಗೆ ಕರೆದೊಯ್ಯುತ್ತಾರೆ. ಆ ವ್ಯಾಜವನ್ನು ಅವರೇ ಕಲ್ಪಿಸುತ್ತಾರೆ. ಅವರವರು ಮಾಡಿದ ಕರ್ಮಗಳನ್ನೇ ಆಧಾರವನ್ನಾಗಿಟ್ಟುಕೊಂಡು ಪ್ರಾಣಿಗಳನ್ನು ಉತ್ತಮ, ಮಧ್ಯಮ ಮತ್ತು ಅಧಮ–ಎಂಬ ಮೂರು ಪಂಗಡಗಳಾಗಿ ವಿಂಗಡಿಸುತ್ತಾರೆ. ಆ ಮೂವರನ್ನೂ ಯಥಾಯೋಗ್ಯವಾದ ರೀತಿಯಲ್ಲಿ ಯಮನ ಪರಿಚಾರಕರು ಸಂಯಮಿನೀಪಟ್ಟಣಕ್ಕೆ ಒಯ್ಯುತ್ತಾರೆ.

ಧಾರ್ಮಿಕಾನುತ್ತಮಾನ್ವಿದ್ಧಿ ಸ್ವರ್ಗಿಣಸ್ತೇ ಯಥಾಮರಾಃ ।
ನೃಷು ಜನ್ಮ ಲಭನ್ತೇ ಯೇ ಕರ್ಮಣಾ ಮಧ್ಯಮಾಃ ಸ್ಮೃತಾಃ ।
ತಿರ್ಯಙ್ನರಕಗನ್ತಾರೋ ಹ್ಯಧಮಾಸ್ತೇ ನರಾಧಮಾಃ ॥೫೭॥

ಧಾರ್ಮಿಕರಾದ ಮನುಷ್ಯರು ಉತ್ತಮವರ್ಗದವರು. ಅವರು ದೇವತೆಗಳಿಗೆ ಸಮಾನರಾಗಿ ಸ್ವರ್ಗಕ್ಕೆ ಹೋಗುತ್ತಾರೆ. ಯಾರು ತಮ್ಮ ಕರ್ಮಕ್ಕೆ ಅನುಸಾರವಾಗಿ ಮನುಷ್ಯರಲ್ಲಿ ಜನ್ಮವನ್ನು ಪಡೆಯುವರೋ–ಅವರನ್ನು

ಮಧ್ಯಮವರ್ಗದವರೆಂದು ತಿಳಿ. ನರಾಧಮರು ಪಶು-ಪಕ್ಷಿಗಳ ಯೋನಿಗಳಲ್ಲಿ ಹುಟ್ಟುತ್ತಾರೆ. ನರಕಕ್ಕೂ ಹೋಗುತ್ತಾರೆ. ಅಂತಹವರು ಅಧಮವರ್ಗದವರು.

ಸತ್ತುಹೋದ ಎಲ್ಲ ಪ್ರಾಣಿಗಳಿಗೂ ಯಮಲೋಕಕ್ಕೆ ಹೋಗಲು ಮೂರು ಮಾರ್ಗಗಳಿವೆ.

ರಮಣೀಯಂ ನಿರಾಬಾಧಂ ದುರ್ದರ್ಶಮಿತಿ ನಾಮತಃ ॥೫೭೩॥

ರಮಣೀಯ, ನಿರಾಬಾಧ ಮತ್ತು ದುರ್ದರ್ಶ–ಎಂಬುವೇ ಆ ಮೂರು ಮಾರ್ಗಗಳು.

ರಮಣೀಯಂ ತು ಯನ್ಮಾರ್ಗಂ ಪತಾಕಾಧ್ವಜಸಙ್ಕುಲಮ್ ।
ಧೂಪಿತಂ ಸಿಕ್ತಸಮ್ಮೃಷ್ಟಂ ಪುಷ್ಪಮಾಲಾವಿಭೂಷಿತಮ್ ।
ಮನೋಹರಂ ಸುಖಸ್ಪರ್ಶಂ ಗಚ್ಛತಾಮೇವ ತದ್ಭವೇತ್ ॥೫೭೪॥

ರಮಣೀಯವೆಂಬ ಹೆಸರಿನ ಮಾರ್ಗವು ಧ್ವಜ-ಪತಾಕೆಗಳಿಂದ ಸುಶೋಭಿತವಾಗಿದೆ. ಪುಷ್ಪಮಾಲೆಗಳಿಂದ ಅಲಂಕೃತವಾಗಿದೆ. ಗಂಧದ ನೀರಿನಿಂದ ಚುಮುಕಿಸಲ್ಪಟ್ಟಿದೆ ಮತ್ತು ನಾನಾವಿಧವಾದ ಧೂಪಗಳಿಂದ ಕೂಡಿದ್ದು ಸುಗಂಧಮಯವಾಗಿದೆ. ಅತ್ಯಂತಮನೋಹರವಾಗಿರುವ ಆ ಮಾರ್ಗವಾಗಿ ಹೋಗುವವರಿಗೆ ಅದು ಸುಖಸ್ಪರ್ಶವನ್ನುಂಟುಮಾಡುತ್ತದೆ.

ನಿರಾಬಾಧಾಂ ಯಥಾಲೋಕಂ ಸುಪ್ರಶಸ್ತಂ ಕೃತಂ ಭವೇತ್ ॥೫೭೫॥

ನಿರಾಬಾಧವೆಂಬ ಮಾರ್ಗವು ಲೋಕದಲ್ಲಿರುವ ಮಾರ್ಗಗಳಂತೆಯೇ ಸುಂದರವಾಗಿಯೂ ಪ್ರಶಸ್ತವಾಗಿಯೂ ಇದೆ. ಯಾವುದೇ ವಿಧವಾದ ಬಾಧೆಯೂ ಆ ಮಾರ್ಗದಲ್ಲಿರುವುದಿಲ್ಲ.

ತೃತೀಯಂ ಯತ್ತು ದುರ್ದರ್ಶಂ ದುರ್ಗನ್ಧಿ ತಮಸಾವೃತಮ್ ।
ಪರುಷಂ ಶರ್ಕರಾಕೀರ್ಣಂ ಶ್ವದಂಷ್ಟ್ರಾಬಹುಲಂ ಭೃಶಮ್ ।
ಕೃಮಿಕೀಟಸಮಾಕೀರ್ಣಂ ಭಜತಾಮತಿದುರ್ಗಮಮ್ ॥೫೭೬॥

ಮೂರನೆಯದಾದ ದುರ್ದರ್ಶವೆಂಬ ಕಠಿಣವಾದ ಮಾರ್ಗವು ದುರ್ಗಂಧದಿಂದಲೂ ಕತ್ತಲೆಯಿಂದಲೂ ಕೂಡಿರುವುದು. ಕಲ್ಲುಗಳ ಚೂರು

ಗಳು ದಾರಿಯುದ್ದಕ್ಕೂ ಹರಡಿಕೊಂಡಿವೆ. ನಾಯಿಗಳೂ ಕೋರೆದಾಡೆಗಳಿರುವ ಹಿಂಸ್ರಪ್ರಾಣಿಗಳೂ ಆ ಹಾದಿಯಲ್ಲಿ ಅಪಾರವಾಗಿವೆ. ಕ್ರಿಮೀ-ಕೀಟ ಗಳಿಂದಲೂ ತುಂಬಿಹೋಗಿದೆ. ಆ ಮಾರ್ಗದ ಮೂಲಕವಾಗಿ ಪ್ರಯಾಣ ಮಾಡುವವರಿಗೆ ಹೋಗಲು ಅದು ಅಸಾಧ್ಯವಾಗಿ ಕಾಣುತ್ತದೆ.

ಶುಭ್ರವಾದ ಮಂದಹಾಸವುಳ್ಳವಳೇ! ಕಾಲವು ಸನ್ನಿಹಿತವಾದಾಗ ಯಮದೂತರು ಆ ಮೂರು ಮಾರ್ಗಗಳ ಮೂಲಕವಾಗಿ ಉತ್ತಮರು, ಮಧ್ಯಮರು ಮತ್ತು ಅಧಮರೆಂಬ ಮೂರು ಬಗೆಯ ಪ್ರಾಣಿಗಳನ್ನೂ ಸಮಯಗಳಲ್ಲಿ ಹೇಗೆ ಒಯ್ಯುವರೆಂಬುದನ್ನು ಹೇಳುವೆನು ; ಕೇಳು.

ಉತ್ತಮಾನನ್ತಕಾಲೇ ತು ಯಮದೂತಾಃ ಸುಸಂವೃತಾಃ ।
ನಯನ್ತಿ ಸುಖಮಾದಾಯ ರಮಣೀಯಪಥೇನ ವೈ ॥೫೭೮॥

ಉತ್ತಮವರ್ಗದ ಮನುಷ್ಯರನ್ನು ಅವರ ಅಂತ್ಯಕಾಲವು ಸಮೀಪಿಸಿ ದಾಗ ಸುಂದರವಾದ ವಸ್ತ್ರಾಭರಣಗಳನ್ನು ಧರಿಸಿದ ಯಮಭಟರು ರಮ ಣೀಯವೆಂಬ ಮಾರ್ಗದ ಮೂಲಕವಾಗಿ ಸುಖದಿಂದ ಯಮನಲೋಕಕ್ಕೆ ಕರೆದುಕೊಂಡು ಹೋಗುತ್ತಾರೆ.

ಮಧ್ಯಮಾನ್ಯೋಧವೇಷೇಣ ಮಧ್ಯಮೇನ ಪಥಾ ತಥಾ ।

ಮಧ್ಯಮವರ್ಗದ ಜನರನ್ನು ಯೋಧರ ವೇಷಗಳನ್ನು ಧರಿಸಿರುವ ಯಮಭಟರು ನಿರಾಬಾಧವೆಂಬ ಮಧ್ಯಮಮಾರ್ಗದಿಂದ ಕರೆದೊಯ್ಯುತ್ತಾರೆ.

ಚಣ್ಡಾಲವೇಷಾಸ್ತ್ವಧಮಾನ್ಗೃಹೀತ್ವಾ ಭರ್ತ್ಸತರ್ಜನೈಃ ॥೫೭೯॥
ಆಕರ್ಷನ್ತಸ್ತಥಾ ಪಾಶೈರ್ದುರ್ದರ್ಶೇನ ನಯನ್ತಿ ತಾನ್ ।
ತ್ರಿವಿಧಾನೇವಮಾದಾಯ ನಯನ್ತಿ ಯಮಸಾದನಮ್ ॥೫೮೦॥

ಅಧಮವರ್ಗದ ಪ್ರಾಣಿಗಳನ್ನು ಚಂಡಾಲರ ವೇಷಗಳನ್ನು ಧರಿಸಿದ ಯಮಭಟರು ಹಿಡಿದುಕೊಂಡು ಗದರಿಸುತ್ತಾ, ಭಯಪಡಿಸುತ್ತಾ ಯಮ ಪಾಶಗಳಿಂದ ಬಂಧಿಸಿ ದರದರನೆ ಎಳೆಯುತ್ತಾ ದುರ್ದರ್ಶಮಾರ್ಗದ ಮೂಲಕ ಯಮನ ಲೋಕಕ್ಕೆ ಸೆಳೆದೊಯ್ಯುತ್ತಾರೆ.

ಈ ರೀತಿಯಲ್ಲಿ ಮೂರು ಬಗೆಯ ಪ್ರಾಣಿಗಳನ್ನೂ ಹಿಡಿದುಕೊಂಡು ಯಮಲೋಕಕ್ಕೆ ಒಯ್ಯುತ್ತಾರೆ.

ಧರ್ಮಾಸನದಲ್ಲಿ ಕುಳಿತಿರುವ, ದಕ್ಷನಾದ, ತನ್ನ ತೇಜಸ್ಸಿನಿಂದ ದೇದೀಪ್ಯಮಾನವಾಗಿ ಪ್ರಕಾಶಿಸುವ, ಲೋಕಪಾಲನಾದ, ಸಭೆಯಲ್ಲಿ ಅಧ್ಯಕ್ಷ ಸ್ಥಾನದಲ್ಲಿ ಕುಳಿತಿರುವ ಯಮರಾಜನಿಗೆ–ಯಮನ ಪರಿಚಾರಕರು ತಾವು ಪ್ರಾಣಿಗಳನ್ನು ಭೂಲೋಕದಿಂದ ಕರೆತಂದಿರುವ ವಿಷಯವನ್ನು ನಿವೇದಿಸಿ ಅನಂತರ ಯಮರಾಜನಿಗೆ ಆ ಪ್ರಾಣಿಗಳನ್ನು ತೋರಿಸುತ್ತಾರೆ. ಸಾವಿರಾರು ಸದಸ್ಯರಿಂದ ಯಾವಾಗಲೂ ಸಮಾವೃತನಾಗಿ ಕುಳಿತಿರುವ ಯಮರಾಜನು ಯಮದೂತರಿಂದ ಪ್ರಾಣಿಗಳ ಶುಭಾಶುಭಕರ್ಮಗಳ ವಿವರಣೆಯನ್ನು ಕೇಳಿ, ಅವರಲ್ಲಿ ಕೆಲವರನ್ನು ಸಮಾದರಿಸುತ್ತಾನೆ. ಕೆಲವರನ್ನು ಶಿಕ್ಷಿಸುತ್ತಾನೆ.

ಗತಾನಾಂ ತು ಯಮಸ್ತೇಷಾಮುತ್ತಮಾನಭಿಪೂಜಯೇತ್ ।
ಅಭಿಸಂಗೃಹ್ಯ ವಿಧಿವತ್ಪೃಷ್ಟ್ವಾ ಸ್ವಾಗತಕೌಶಲಮ್ ॥೫೮೩॥

ಯಮನು ಅಲ್ಲಿಗೆ ಹೋದ ಉತ್ತಮವರ್ಗದವರನ್ನು ವಿಧಿಪೂರ್ವಕವಾಗಿ ಸ್ವಾಗತಿಸಿ ಕುಶಲಪ್ರಶ್ನೆಗಳನ್ನು ಕೇಳಿ ಸತ್ಕರಿಸುತ್ತಾನೆ.

ಪ್ರಸ್ತುತ್ಯ ತತ್ಕೃತಂ ತೇಷಾಂ ಲೋಕಂ ಸಂದಿಶತೇ ಯಮಃ ।
ಯಮೇನೈವಮನುಜ್ಞಾತಾ ಯಾನ್ತಿ ಪಶ್ಚಾತ್ತ್ರಿವಿಷ್ಟಪಮ್ ॥೫೮೪॥

ಬಳಿಕ ಯಮನು ಅವರು ಮಾಡಿರುವ ಸತ್ಕರ್ಮಗಳನ್ನು ಪ್ರಶಂಸೆ ಮಾಡಿ ಇಂತಹ ಪುಣ್ಯಲೋಕಕ್ಕೆ ಹೋಗಬೇಕೆಂದು ಆಜ್ಞೆ ನೀಡುತ್ತಾನೆ. ಯಮನಿಂದ ಹೀಗೆ ಅನುಜ್ಞೆಯನ್ನು ಪಡೆದನಂತರ ಉತ್ತಮವರ್ಗದವರು ಸ್ವರ್ಗಕ್ಕೆ ಹೋಗುತ್ತಾರೆ.

ಮಧ್ಯಮವರ್ಗದವರ ಶುಭಾಶುಭಕರ್ಮಗಳನ್ನು ಯಥಾವತ್ತಾಗಿ ಯಮಭಟರಿಂದ ಕೇಳಿ–'ಜಾಯನ್ತಾಂ ಮಾನುಷೇಷ್ವೇವ' 'ನೀವು ಮನುಷ್ಯರಲ್ಲಿಯೇ ಪುನಃ ಹುಟ್ಟಿರಿ'–ಎಂಬುದಾಗಿ ಆಜ್ಞೆಮಾಡುತ್ತಾನೆ. ಯಮಪಾಶದಿಂದ ಬಂಧಿಸಲ್ಪಟ್ಟು ಅಲ್ಲಿಗೆ ಹೋಗಿರುವ ಅಧಮವರ್ಗದವರನ್ನು ಯಮನು ಕಣ್ಣೆತ್ತಿಯೂ ನೋಡುವುದಿಲ್ಲ. ಅವರನ್ನು ಚಂಡಾಲರಂತೆ ಕಾಣುವ ಭಯಂಕರರಾದ ಯಮದೂತರು ಲೋಕಪಾಲನಾದ ಯಮನ ಆಜ್ಞೆಯಂತೆ ಯಾತನಾಸ್ಥಾನಗಳಿಗೆ ಒಯ್ಯುತ್ತಾರೆ.

ಭಿನ್ದನ್ತಶ್ಚ ತುದನ್ತಶ್ಚ ಪ್ರಕರ್ಷನ್ತೋ ಯತಸ್ತತಃ ।
ಕ್ರೋಶನ್ತಃ ಪಾತಯನ್ತ್ಯೇತಾನ್ಮಿಥೋ ಗರ್ತೇಷ್ವವಾಙ್ಮುಖಾನ್ ॥೫೮೭॥

ಹಾಗೆ ಒಯ್ಯುವಾಗ ಯಮಭಟರು ಪಾಪಿಗಳಾದವರ ತಲೆಗಳನ್ನು ಒಡೆಯುತ್ತಾರೆ. ಶರೀರಗಳನ್ನು ಶೂಲಗಳಿಂದ ಚುಚ್ಚುತ್ತಿರುತ್ತಾರೆ. ಅಲ್ಲಿಂದಿಲ್ಲಿಗೂ ಇಲ್ಲಿಂದಲ್ಲಿಗೂ ಎಳೆದಾಡುತ್ತಿರುತ್ತಾರೆ. ಗಟ್ಟಿಯಾಗಿ ಗರ್ಜನೆ ಮಾಡುತ್ತಾ ರಹಸ್ಯವಾಗಿರುವ ನರಕದ ಹಳ್ಳಗಳಲ್ಲಿ ಅವರ ಮುಖಗಳನ್ನು ಕೆಳಕ್ಕೆಮಾಡಿ ಬೀಳಿಸುತ್ತಾರೆ.

ಸಂಯಾಮಿನ್ಯಃ ಶಿಲಾಶ್ಚೈಷಾಂ ಪತನ್ತಿ ಶಿರಸಿ ಪ್ರಿಯೇ ।
ಅಯೋಮುಖಾಃ ಕಙ್ಕವಲಾ ಭಕ್ಷಯನ್ತಿ ಸುದಾರುಣಾಃ ॥೫೮॥

ಆ ಸಮಯದಲ್ಲಿ ಅವರ ತಲೆಗಳ ಮೇಲೆ ಸಂಯಾಮಿನೀ ಎಂಬ ಬಂಡೆಗಳು ಬೀಳುತ್ತವೆ. ಲೋಹದ ಕೊಕ್ಕುಗಳನ್ನು ಹೊಂದಿರುವ ಭಯಂಕರ ವಾದ ಕಾಗೆಗಳೂ ಮತ್ತು ರಣಹದ್ದುಗಳೂ ಕಿತ್ತುತಿನ್ನುತ್ತವೆ.

ಅಸಿಪತ್ರವನೇ ಘೋರೇ ಚಾರಯನ್ತಿ ತಥಾ ಪರಾನ್ ।
ತೀಕ್ಷ್ಣದಂಷ್ಟ್ರಾಸ್ತಥಾ ಶ್ವಾನಃ ಕಾಂಶ್ಚಿತ್ತತ್ರ ಹ್ಯದನ್ತಿ ವೈ ॥೫೯॥

ಭಯಂಕರವಾಗಿರುವ ಕತ್ತಿಗಳೇ ಎಲೆಗಳಾಗಿರುವ ಮರಗಳಿರುವ ಅರಣ್ಯದಲ್ಲಿ ಯಮಭಟರು ಪಾಪಿಗಳಾದವರನ್ನು ತಿರುಗಾಡಿಸುತ್ತಾರೆ. ತೀಕ್ಷ್ಣವಾದ ಕೋರೆದಾಡೆಗಳುಳ್ಳ ನಾಯಿಗಳೂ ಅವರನ್ನು ಕಿತ್ತುತಿನ್ನುತ್ತವೆ.

ತತ್ರ ವೈತರಣೀ ನಾಮ ನದೀ ಗ್ರಾಹಸಮಾಕುಲಾ ।
ದುಷ್ಪ್ರವೇಶಾ ಚ ಘೋರಾ ಚ ಮೂತ್ರಶೋಣಿತವಾಹಿನೀ ॥೬೦॥

ಅಲ್ಲಿ ಮೊಸಳೆಗಳಿಂದ ತುಂಬಿರುವ, ಮೂತ್ರ ಮತ್ತು ರಕ್ತಗಳನ್ನೇ ನೀರಿನ ರೂಪದಲ್ಲಿ ಹೊಂದಿರುವ ವೈತರಣೀ ಎಂಬ ಹೆಸರಿನ ನದಿಯಿದೆ. ಅದು ಭಯಂಕರವಾಗಿದ್ದು ಪ್ರವೇಶಿಸಲು ದುಸ್ಸಾಧ್ಯವಾಗಿದೆ.

ತಸ್ಯಾಂ ಸಮ್ಮಜ್ಜಯನ್ತ್ಯೇತೇ ತೃಷಿತಾನ್ಪಾಯಯನ್ತಿ ತಾನ್ ।
ಆರೋಪಯನ್ತಿ ವೈ ಕಾಂಶ್ಚಿತ್ತತ್ರ ಕಣ್ಟಕಶಾಲ್ಮಲೀಮ್ ॥೬೧॥

ಯಮದೂತರು ಪಾಪಿಗಳಾದವರನ್ನು ಭಯಂಕರವಾದ ಆ ವೈತರಣೀ ನದಿಯಲ್ಲಿಯೇ ಮುಳುಗಿಸುತ್ತಾರೆ. ಬಾಯಾರಿದವರಿಗೆ ರಕ್ತ-ಕೀವುಗಳಿಂದ ಕೂಡಿದ ಅದರ ನೀರನ್ನೇ ಕುಡಿಸುತ್ತಾರೆ. ಕೆಲವರನ್ನು ಮುಳ್ಳುಬೂರುಗದ ಮೇಲಕ್ಕೆ ಹತ್ತಿಸುತ್ತಾರೆ.

ಯನ್ತ್ರಚಕ್ರೇಷು ತಿಲವತ್ಪೀಡ್ಯನ್ತೇ ತತ್ರ ಕೇಚನ ।
ಅಙ್ಗಾರೇಷು ಚ ದಹ್ಯನ್ತೇ ತಥಾ ದುಷ್ಕೃತಕಾರಿಣಃ ॥೫೨॥

ಯಮನ ಪರಿಚಾರಕರು ಕೆಲವರನ್ನು ಯಂತ್ರಚಕ್ರಗಳಲ್ಲಿ (ಗಾಣ ಗಳಲ್ಲಿ) ಹಾಕಿ ಎಳ್ಳನ್ನರೆಯುವಂತೆ ಅರೆಯುತ್ತಾರೆ. ಪಾಪಕರ್ಮಿಗಳಾದ ಕೆಲವರನ್ನು ಕೆಂಡಗಳಲ್ಲಿ ಹಾಕಿ ಸುಡುತ್ತಾರೆ.

ಕುಮ್ಭೀಪಾಕೇಷು ಪಚ್ಯನ್ತೇ ಪಚ್ಯನ್ತೇ ಸಿಕತಾಸು ವೈ।
ಪಾಟ್ಯನ್ತೇ ತರುವಚ್ಛಸ್ತ್ರೈಃ ಪಾಪಿನಃ ಕ್ರಕಚಾದಿಭಿಃ ॥೫೩॥

ಕೆಲವರನ್ನು ಕುಂಭೀಪಾಕವೆಂಬ (ಆವಿಗೆಯಲ್ಲಿ ಮಡಿಕೆಯನ್ನು ಬೇಯಿ ಸುವಂತೆ) ನರಕದಲ್ಲಿ ಹಾಕಿ ಬೇಯಿಸುತ್ತಾರೆ. ಕೆಲವರನ್ನು ಕಾಯ್ದ ಮರಳಿನ ಮೇಲೆ ಬೇಯಿಸುತ್ತಾರೆ. ಕೆಲವರನ್ನು ಗರಗಸವೇ ಮೊದಲಾದ ಶಸ್ತ್ರಗಳಿಂದ ವೃಕ್ಷಗಳನ್ನು ಕತ್ತರಿಸುವಂತೆ ಕತ್ತರಿಸುತ್ತಾರೆ.

ಭಿದ್ಯನ್ತೇ ಭಾಗಶಃ ಶೂಲೈಸ್ತುದ್ಯನ್ತೇ ಸೂಕ್ಷ್ಮಸೂಚಿಭಿಃ ।
ಏವಂ ತ್ವಯಾ ಕೃತೋ ದೋಷಸ್ತದರ್ಥಂ ದಣ್ಡನಂ ತ್ವಿತಿ ।
ವಾಚೈವಂ ಘೋಷಯನ್ತಿ ಸ್ಮ ದಣ್ಡಮಾನಾಃ ಸಮನ್ತತಃ ॥೫೪॥

ಯಮಭಟರು ಕೆಲವರನ್ನು ಶೂಲಗಳಿಂದ ಭಾಗ-ಭಾಗಗಳಾಗಿ ಕತ್ತರಿ ಸುತ್ತಾರೆ. ಕೆಲವರನ್ನು ಚೂಪಾದ ಸೂಜಿಗಳಿಂದ ಚುಚ್ಚುತ್ತಾರೆ. ಯಮನ ಪರಿಚಾರಕರು ಇಂತಹ ಶಿಕ್ಷೆಗಳನ್ನು ಕೊಡುವಾಗ–'ನೀನು ಇಂತಹ ಪಾಪ ಮಾಡಿರುವೆ. ಅದಕ್ಕಾಗಿ ನಿನಗೆ ಈ ಶಿಕ್ಷೆಯು ದೊರೆತಿದೆ'–ಎಂದು ಎಲ್ಲ ಕಡೆಗಳಿಂದಲೂ ಗಟ್ಟಿಯಾಗಿ ಘೋಷಿಸುತ್ತಾರೆ.

ಹೀಗೆ ಪಾಪಿಷ್ಠರು ಯಾತನಾಮಯವಾದ ಶರೀರಗಳ ಮೂಲಕವಾಗಿ ಯಮಭಟರು ಕೊಡುವ ಈ ವಿಧವಾದ ಯಾತನೆಗಳನ್ನು ಹೊಂದಿ ದಾರುಣ ವಾದ ಆ ಮಹಾದುಃಖವನ್ನು ಬಹಳ ಕಷ್ಟದಿಂದ ಸಹಿಸಿಕೊಳ್ಳುತ್ತಾ ತಾವು ಹಿಂದೆ ಮಾಡಿದ ಅಪರಾಧವನ್ನು ಸ್ಮರಿಸಿಕೊಳ್ಳುತ್ತಾ ಕೂಗಿಕೊಳ್ಳುತ್ತಿರುತ್ತಾರೆ. ಅಳುತ್ತಿರುತ್ತಾರೆ. ಆದರೆ ದುಃಖಮಯವಾದ ನರಕದಿಂದ ಹೊರಬರುವು ದಂತೂ ಆಗುವುದಿಲ್ಲ. ತಾವೇ ಮಾಡಿದ ಪಾಪಕರ್ಮಗಳನ್ನು ಸ್ಮರಿಸಿಕೊಂಡು ಬಹಳವಾಗಿ ಪರಿತಪಿಸುತ್ತಿರುತ್ತಾರೆ.

ಹೀಗೆ ಪಾಪಕರ್ಮಿಗಳು ಬಹುವಿಧವಾದ ಶಿಕ್ಷೆಗಳನ್ನು ಅನುಭವಿಸು ತ್ತಿರುತ್ತಾರೆ. ವಿಧ-ವಿಧವಾದ ಯಾತನೆಗಳ ಮೂಲಕವಾಗಿ ಪುನಃ ಪುನಃ ಬೇಯಿಸಲ್ಪಡುತ್ತಿರುತ್ತಾರೆ. ಕೆಲವರು ಇಂತಹ ಯಾತನೆಗಳನ್ನು ಅನುಭವಿ ಸುತ್ತಾ ಕಾಲಾನುಕ್ರಮವಾಗಿ ಪಾಪಗಳಿಂದ ವಿಮುಕ್ತರಾಗುತ್ತಾರೆ.

ಪಾಪದೋಷಕ್ಷಯಕರಾ ಯಾತನಾ ಸಂಸ್ಕೃತಾ ನೃಣಾಮ್ ।
ಬಹು ತಪ್ತಂ ಯಥಾ ಲೋಹಮಮಲಂ ತತ್ತಥಾ ಭವೇತ್ ॥೯೮॥

ಈ ನರಕಯಾತನೆಗಳು ಮಾನವರ ಪಾಪದೋಷಗಳನ್ನು ಹೋಗಲಾ ಡಿಸುತ್ತವೆಯೆಂದು ಹೇಳಲ್ಪಟ್ಟಿದೆ. ಬಹಳವಾಗಿ ಕಾಯಿಸುವಿಕೆಯಿಂದ ಲೋಹವು ಹೇಗೆ ಶುದ್ಧವಾಗುವುದೋ–ಹಾಗೆಯೇ ನರಕಯಾತನೆಗಳಿಂದ ಮನುಷ್ಯರು ಪಾಪದೋಷಗಳನ್ನು ಕಳೆದುಕೊಂಡು ಶುದ್ಧರಾಗುತ್ತಾರೆ.”

ಉಮೆ :

ಭಗವಂಸ್ತೇ ಕಥಂ ತತ್ರ ದಣ್ಡ್ಯನ್ತೇ ನರಕೇಷು ವೈ ।
ಕತಿ ತೇ ನರಕಾ ಘೋರಾಃ ಕೀದೃಶಾಸ್ತೇ ಮಹೇಶ್ವರ ॥೯೯॥

“ಪೂಜ್ಯನೇ! ಮಹೇಶ್ವರನೇ! ಪಾಪಿಷ್ಠರನ್ನು ನರಕದಲ್ಲಿ ಹೇಗೆ ದಂಡಿಸುತ್ತಾರೆ? ಭಯಂಕರವಾದ ಆ ನರಕಗಳು ಎಷ್ಟಿವೆ ಮತ್ತು ಹೇಗಿವೆ?”

ಮಹೇಶ್ವರ :

ಶೃಣು ಭಾಮಿನಿ ತತ್ಸರ್ವಂ ಪಞ್ಚೈತೇ ನರಕಾಃ ಸ್ಮೃತಾಃ ।
ಭೂಮೇರಧದ್ವಿಹಿತಾ ಘೋರಾ ದುಷ್ಕೃತಕರ್ಮಣಾಮ್ ॥೬೦೦॥

“ಭಾಮಿನಿ! ನಿನ್ನ ಎಲ್ಲ ಪ್ರಶ್ನೆಗಳಿಗೂ ಉತ್ತರವನ್ನು ಹೇಳುವೆನು ; ಕೇಳು. ಪಾಪಕರ್ಮಿಗಳಾದ ಮನುಷ್ಯರಿಗೆ ಭೂಮಿಯ ಕೆಳಭಾಗದಲ್ಲಿ ಐದು ವಿಧವಾದ ನರಕಗಳಿವೆ.

ಪ್ರಥಮಂ ರೌರವಂ ನಾಮ ಶತಯೋಜನಮಾಯತಮ್ ।
ತಾವತ್ಪ್ರಮಾಣವಿಸ್ತೀರ್ಣಂ ತಾಮಸಂ ಪಾಪಪೀಡಿತಮ್ ॥೬೦೧॥

ಮೊದಲನೆಯದಾದ ರೌರವವೆಂಬ ನರಕವು ನೂರು ಯೋಜನ ಗಳಷ್ಟು ಉದ್ದವಾಗಿಯೂ ನೂರು ಯೋಜನಗಳಷ್ಟು ಅಗಲವಾಗಿಯೂ

ಇದೆ. ತಮೋಮಯವಾಗಿರುವ ಆ ನರಕವು ಪಾಪಕ್ಕಾಗಿ ಪ್ರಾಪ್ತವಾಗುವ ನಾನಾವಿಧವಾದ ದಂಡನೆಗಳಿಂದ ಕೂಡಿದೆ.

ಭೃಶಂ ದುರ್ಗನ್ಧಿ ಪರುಷಂ ಕೃಮಿಭಿರ್ದಾರುಣೈರ್ಯುತಮ್ ।
ಅತಿಘೋರಮನಿರ್ದೇಶ್ಯಂ ಪ್ರತಿಕೂಲಂ ತತಸ್ತತಃ ॥೬೦೨॥

ಆ ರೌರವನರಕವು ಅತಿಯಾದ ದುರ್ವಾಸನೆಯಿಂದ ತುಂಬಿ ಹೋಗಿದೆ. ಅತ್ಯಂತಕಠೋರವಾಗಿದೆ. ಭಯಂಕರವಾದ ಕೃಮಿಗಳಿಂದ ತುಂಬಿದೆ. ಅತಿಘೋರವೂ ಅನಿರ್ವಚನೀಯವೂ ಆಗಿರುವ ಆ ನರಕವು ಪ್ರಾಣಿಗಳಿಗೆ ಅತ್ಯಂತಪ್ರತಿಕೂಲವಾಗಿದೆ.

ತೇ ಚಿರಂ ತತ್ರ ತಿಷ್ಠನ್ತಿ ನ ತತ್ರ ಶಯನಾಸನೇ ।
ಕೃಮಿಭಿರ್ಭಕ್ಷ್ಯಮಾಣಾಶ್ಚ ವಿಷ್ಠಾಗನ್ಧಸಮಾಯುತಾಃ ॥೬೦೩॥

ಭಯಂಕರವಾದ ಆ ರೌರವನರಕದಲ್ಲಿ ಪಾಪಿಗಳಾದವರು ಬಹಳ ಕಾಲದವರೆಗೂ ನಿಂತೇ ಇರುತ್ತಾರೆ. ಕುಳಿತುಕೊಳ್ಳಲು ಆಸನವಾಗಲೀ ಮಲಗಲು ಹಾಸಿಗೆಯಾಗಲೀ ಅಲ್ಲಿರುವುದಿಲ್ಲ. ಅಮೇಧ್ಯದ ದುರ್ಗಂಧದಿಂದ ಯುಕ್ತರಾದ ಅವರು ಕ್ರಿಮಿಗಳಿಂದ ಭಕ್ಷಿಸಲ್ಪಡುತ್ತಿರುತ್ತಾರೆ.

ಏವಂ ಪ್ರಮಾಣಮುದ್ವಿಗ್ನಾ ಯಾವತ್ತಿಷ್ಠನ್ತಿ ತತ್ರ ತೇ ।
ಯಾತನಾಭ್ಯೋ ದಶಗುಣಂ ನರಕೇ ದುಃಖಮಿಷ್ಯತೇ ॥೬೦೪॥

ಎಲ್ಲಿಯವರೆಗೆ ಅವರು ನರಕದಲ್ಲಿ ನಿಂತಿರುವರೋ ಅಲ್ಲಿಯವರೆಗೂ ಅವರು ಹೀಗೆ ಉದ್ವಿಗ್ನರಾಗಿಯೇ ಇರುತ್ತಾರೆ. ಸಾಧಾರಣವಾದ ಯಾತನೆಗಳ ದೃಷ್ಟಿಯಿಂದ ನರಕಯಾತನೆಯು ಹತ್ತು ಪಟ್ಟು ಹೆಚ್ಚು ದುಃಖಕರವಾಗಿರುತ್ತದೆ.

ತತ್ರ ಚಾತ್ಯನ್ತಿಕಂ ದುಃಖಮಿಷ್ಯತೇ ಚ ಶುಭೇಕ್ಷಣೇ ।
ಕ್ರೋಶನ್ತಶ್ಚ ರುದನ್ತಶ್ಚ ವೇದನಾಸ್ತತ್ರ ಭುಞ್ಜತೇ ॥೬೦೫॥

ಶುಭೇಕ್ಷಣಳೇ! ಆ ರೌರವನರಕದಲ್ಲಿ ಅತ್ಯಂತವಾದ ದುಃಖವುಂಟಾಗುತ್ತದೆ. ಪಾಪಿಷ್ಠರು ಕೂಗಿಕೊಳ್ಳುತ್ತಾ ಮತ್ತು ರೋದನಮಾಡುತ್ತಾ ವೇದನೆಗಳನ್ನು ಅನುಭವಿಸುತ್ತಾರೆ.

ಭ್ರಮನ್ತಿ ದುಃಖಮೋಕ್ಷಾರ್ಥಂ ಜ್ಞಾತಾ ಕಶ್ಚಿನ್ನ ವಿದ್ಯತೇ ।
ದುಃಖಸ್ಯಾನ್ತರಮಾತ್ರಂ ತು ಜ್ಞಾನಂ ವಾ ನ ಚ ಲಭ್ಯತೇ ॥೬೦೬॥

ಪಾಪಿಷ್ಠರಾದವರು ದುಃಖದಿಂದ ಮುಕ್ತಿಯನ್ನು ಪಡೆಯಲು ಎಲ್ಲ ಕಡೆಗಳಲ್ಲಿಯೂ ಅಲೆದಾಡುತ್ತಾರೆ. ಆದರೆ ಅವರ ಕಷ್ಟವನ್ನು ತಿಳಿದವರು ಅಲ್ಲಿ ಯಾರೂ ಇರುವುದಿಲ್ಲ. ದುಃಖವು ಅನಂತವಾಗಿರುತ್ತದೆ. ಅದಕ್ಕೆ ಮಧ್ಯದಲ್ಲಿ ವಿಚ್ಛಿತ್ತಿಯೇ ಇರುವುದಿಲ್ಲ. ದುಃಖದಿಂದ ತಪ್ಪಿಸಿಕೊಳ್ಳುವ ಜ್ಞಾನವೂ ಅವನಿಗೆ ಉಂಟಾಗುವುದಿಲ್ಲ.

ಮಹಾರೌರವಸಂಜ್ಞಂ ತು ದ್ವಿತೀಯಂ ನರಕಂ ಪ್ರಿಯೇ ।
ತಸ್ಮಾದ್ದ್ವಿಗುಣಿತಂ ವಿದ್ಧಿ ಮಾನೇ ದುಃಖೇ ಚ ರೌರವಾತ್ ॥೬೦೭॥

ಪ್ರಿಯಳೇ! ಎರಡನೆಯದು ಮಹಾರೌರವವೆಂಬ ಹೆಸರಿನದು. ಅದು ರೌರವನರಕಕ್ಕಿಂತಲೂ ಎರಡು ಪಟ್ಟು ವಿಸ್ತಾರವುಳ್ಳದ್ದು. ಪಾಪಿಷ್ಠರಿಗೆ ದುಃಖವು ಕೂಡ ರೌರವನರಕಕ್ಕಿಂತಲೂ ಎರಡು ಪಟ್ಟು ಹೆಚ್ಚಾಗಿರುತ್ತದೆ.

ತೃತೀಯಂ ನರಕಂ ತತ್ರ ಕಣ್ಟಕಾವನಸಂಜ್ಞಿತಮ್ ।
ತತೋ ದ್ವಿಗುಣಿತಂ ತಚ್ಚ ಪೂರ್ವಾಭ್ಯಾಂ ದುಃಖಮಾನಯೋಃ ।
ಮಹಾಪಾತಕಸಂಯುಕ್ತಾ ಘೋರಾಸ್ತಸ್ಮಿನ್ವಿಶನ್ತಿ ಹಿ ॥೬೦೮॥

ಮೂರನೆಯದು ಕಂಟಕಾವನವೆಂಬ ಹೆಸರಿನದು. ಅದು ಅಳತೆಯಲ್ಲಿಯೂ ಮತ್ತು ದುಃಖದಲ್ಲಿಯೂ ರೌರವ-ಮಹಾರೌರವನರಕಗಳಿಗಿಂತಲೂ ಎರಡು ಪಟ್ಟು ಹೆಚ್ಚಾಗಿದೆ. ಘೋರವಾದ ಮಹಾಪಾಪಗಳನ್ನು ಮಾಡಿದವರು ಈ ನರಕಕ್ಕೆ ಹೋಗುತ್ತಾರೆ.

ಅಗ್ನಿಕುಣ್ಡಮಿತಿ ಖ್ಯಾತಂ ಚತುರ್ಥಂ ನರಕಂ ಪ್ರಿಯೇ ।
ಏತದ್ದ್ವಿಗುಣಿತಂ ತಸ್ಮಾದ್ಯಥಾನಿಷ್ಟಸುಖಂ ತಥಾ ॥೬೦೯॥

ತತೋ ದುಃಖಂ ಹಿ ಸುಮಹದಮಾನುಷಮಿತಿ ಸ್ಮೃತಮ್ ।
ಭುಞ್ಜತೇ ತತ್ರ ತತ್ರೈವಂ ದುಃಖಂ ದುಷ್ಕೃತಕಾರಿಣಃ ॥೬೧೦॥

ಪ್ರಿಯಳೇ! ಅಗ್ನಿಕುಂಡವೆಂದು ಪ್ರಸಿದ್ಧವಾಗಿರುವ ನರಕವು ನಾಲ್ಕನೆಯದು. ಅದು ಹಿಂದಿನ ಕಂಟಕಾವನನರಕಕ್ಕಿಂತಲೂ ವಿಸ್ತಾರದಲ್ಲಿ ಮತ್ತು

ದುಃಖದಲ್ಲಿ ಎರಡು ಪಟ್ಟು ಹೆಚ್ಚಾಗಿದೆ. ಅಲ್ಲಿ ಅಮಾನುಷವಾದ, ಮನುಷ್ಯ ಮಾತ್ರದವರಿಂದ ಸಹಿಸಿಕೊಳ್ಳಲು ಸಾಧ್ಯವಾಗದಿರುವಷ್ಟು ದುಃಖವನ್ನು ಅನು ಭವಿಸಬೇಕೆಂದು ಹೇಳುತ್ತಾರೆ? ಆ ಎಲ್ಲ ನರಕಗಳಲ್ಲಿಯೂ ಪಾಪಕರ್ಮಿಗಳು ದುಃಖವನ್ನುಅನುಭವಿಸುತ್ತಿರುತ್ತಾರೆ.

ಪಞ್ಚಕಷ್ಟಮಿತಿ ಖ್ಯಾತಂ ನರಕಂ ಪಞ್ಚಮಂ ಪ್ರಿಯೇ ।
ತತ್ರ ದುಃಖಮನಿರ್ದೇಶ್ಯಂ ಮಹಾಘೋರಂ ಯಥಾತಥಮ್ ॥೬೧೧॥

ಐದನೆಯ ನರಕವು ಪಂಚಕಷ್ಟವೆಂಬ ಹೆಸರಿನದು. ಅಲ್ಲಿ ಪಾಪಿಗಳಿಗೆ ಒದಗುವ ಮಹಾದುಃಖವನ್ನು ಯಥಾವತ್ತಾಗಿ ನಿರ್ದೇಶಿಸಿ ಹೇಳಲೂ ಸಾಧ್ಯ ವಾಗುವುದಿಲ್ಲ.

ಪಞ್ಚೇನ್ದ್ರಿಯೈರಸಹ್ಯತ್ವಾತ್ಪಞ್ಚಕಷ್ಟಮಿತಿ ಸ್ಮೃತಮ್ ।
ಭುಞ್ಜತೇ ತತ್ರ ತತ್ರೈವಂ ದುಃಖಂ ದುಷ್ಕೃತಕಾರಿಣಃ ॥೬೧೨॥

ಪಂಚೇಂದ್ರಿಯಗಳಿಂದಲೂ ದುಃಖವನ್ನು ಸಹಿಸಿಕೊಳ್ಳಲು ಅಲ್ಲಿ ಸಾಧ್ಯ ವಾಗದೇ ಇರುವುದರಿಂದ ಆ ನರಕಕ್ಕೆ ಪಂಚಕಷ್ಟವೆಂದು ಹೆಸರಾಗಿದೆ. ಪಾಪ ಕರ್ಮಿಗಳು ಆ ನರಕದಲ್ಲಿ ಮಹಾದುಃಖವನ್ನು ಅನುಭವಿಸುತ್ತಾರೆ.

ಅಮಾನುಷಾರ್ಹಜಂ ದುಃಖಂ ಮಹಾಭೂತೈಶ್ಚ ಭುಜ್ಯತೇ ।
ಅತಿಘೋರಂ ಚಿರಂ ಕೃತ್ವಾ ಮಹಾಭೂತಾನಿ ಯಾನ್ತಿ ತಮ್ ॥೬೧೩॥

ಮಹಾಪಾಪಗಳನ್ನು ಮಾಡಿದ ದೊಡ್ಡ ದೊಡ್ಡ ಪ್ರಾಣಿಗಳು ಬಹಳ ಕಾಲದವರೆಗೆ ಘೋರವಾದ ಮತ್ತು ಅಮಾನುಷವಾದ ದುಃಖವನ್ನು ಅನು ಭವಿಸುತ್ತವೆ. ಬಹಳ ಕಾಲ ಘೋರಪಾಪಗಳನ್ನು ಮಾಡಿದ ಮಹಾಭೂತಗಳು (ಮಹಾಪಾಪಮಾಡಿದ ಪ್ರಾಣಿಗಳು) ಪಂಚಕಷ್ಟನರಕಕ್ಕೆ ಹೋಗುತ್ತವೆ.

ಪಞ್ಚಕಷ್ಟೇನ ಹಿ ಸಮಂ ನಾಸ್ತಿ ದುಃಖಂ ತಥಾ ಪರಮ್ ।
ದುಃಖಸ್ಥಾನಮಿತಿ ಪ್ರಾಹುಃ ಪಞ್ಚಕಷ್ಟಮಿತಿ ಪ್ರಿಯೇ ॥೬೧೪॥

ಪಂಚಕಷ್ಟನರಕದ ದುಃಖಕ್ಕೆ ಸಮಾನವಾದ ಅಥವಾ ಅದಕ್ಕಿಂತಲೂ ಅಧಿಕವಾದ ದುಃಖವು ಬೇರೊಂದಿಲ್ಲ. ಪಂಚಕಷ್ಟನರಕವನ್ನು ಸಮಸ್ತ ದುಃಖಗಳ ನಿವಾಸಸ್ಥಾನವೆನ್ನುತ್ತಾರೆ.

ಹೀಗೆ ಪಾಪಮಾಡಿ ದುಃಖಕ್ಕೆ ಭಾಗಿಗಳಾದ ಜೀವಿಗಳು ಆ ಐದು ಮಹಾನರಕಗಳಲ್ಲಿ ದುಃಖವನ್ನು ಅನುಭವಿಸುತ್ತಿರುತ್ತಾರೆ. ಆ ಐದು ನರಕಗಳಲ್ಲದೇ ಅವೀಚಿಯೇ ಮುಂತಾದ ಇನ್ನೂ ಅನೇಕ ನರಕಗಳಿವೆ. ನರಕ ವೇದನೆಯಿಂದ ಆರ್ತರಾಗಿ ಸಂಕಟಪಡುತ್ತಿರುವ ಜೀವಿಗಳು ಕೂಗಿಕೊಳ್ಳುತ್ತಿರುತ್ತವೆ. ಅಳುತ್ತಿರುತ್ತವೆ. ತಿರುಗುತ್ತಿರುತ್ತವೆ. ಎದ್ದು-ಬಿದ್ದು-ಒದ್ದಾಡುತ್ತಿರುತ್ತವೆ. ಕೆಲವು ಸಂಕಟವನ್ನು ತಾಳಲಾರದೇ ಓಡುತ್ತಿರುತ್ತವೆ. ಹೀಗೆ ಓಡುತ್ತಿರುವ ಜೀವಗಳನ್ನು ಮುಂದೆ ಹೋಗದಂತೆ ತ್ರಿಶೂಲವನ್ನು ಧರಿಸಿರುವ ಯಮಭಟರು ತಡೆಯುತ್ತಿರುತ್ತಾರೆ. ಪಾಪಕರ್ಮಗಳನ್ನು ಮಾಡಿದ ಜೀವಿಗಳು ರೋಗಗಳಿಂದ ಪೀಡಿತರಾಗುತ್ತಾರೆ ಮತ್ತು ಬಾಯಾರಿಕೆಯಿಂದ ಬಳಲುತ್ತಿರುತ್ತಾರೆ. ಹಿಂದೆ ಮಾಡಿದ ಪಾಪದ ಶೇಷವು ಉಳಿದಿರುವವರೆಗೂ ಅವರು ಆ ನರಕಗಳಿಂದ ಬಿಡುಗಡೆಯನ್ನು ಹೊಂದುವುದಿಲ್ಲ. ಕ್ರಿಮಿಗಳಿಂದ ಭಕ್ಷಿಸಲ್ಪಡುವ ಅವರು ವೇದನೆಗಳಿಂದ ಪೀಡಿತರಾಗಿ ಬಾಯಾರಿಕೆಯಿಂದ ಬಳಲುತ್ತಿರುತ್ತಾರೆ. ತಾವು ಮಾಡಿದ ಅಪರಾಧಗಳಿಂದಲೇ ಉಂಟಾದ ತಮ್ಮ ಪಾಪಗಳನ್ನು ಸ್ಮರಿಸಿಕೊಳ್ಳುತ್ತಾ ಪಾಪಕ್ಷಯವಾಗುವವರೆಗೂ ದುಃಖಿಸುತ್ತಲೇ ಇರುತ್ತಾರೆ. ಹೀಗೆ ಅವರು ದುಃಖವನ್ನು ಉಪಭೋಗಿಸುತ್ತಿದ್ದು ಪಾಪಗಳನ್ನು ಕಳೆದುಕೊಂಡು ನರಕದಿಂದ ಮುಕ್ತರಾಗುತ್ತಾರೆ.”

ಉಮೆ :

ಭಗವನ್ಕತಿ ಕಾಲಂ ತೇ ತಿಷ್ಠನ್ತಿ ನರಕೇಷು ವೈ ।
ಏತದ್ವೇದಿತುಮಿಚ್ಛಾಮಿ ತನ್ಮೇ ಬ್ರೂಹಿ ಮಹೇಶ್ವರ ॥೬೨೦॥

“ಪೂಜ್ಯನೇ! ಮಹೇಶ್ವರನೇ! ಅವರು ಹಾಗೆ ನರಕದಲ್ಲಿ ಎಷ್ಟು ಕಾಲವಿರುತ್ತಾರೆ? ಇದನ್ನು ತಿಳಿಯಲು ಇಚ್ಛಿಸಿದ್ದೇನೆ. ಹೇಳುವ ಕೃಪೆಮಾಡು.”

ಮಹೇಶ್ವರ :

ಶತವರ್ಷಸಹಸ್ರಾಣಾಮಾದಿಂ ಕೃತ್ವಾ ಹಿ ಜನ್ತವಃ ।
ತಿಷ್ಠನ್ತಿ ನರಕಾವಾಸಾಃ ಪ್ರಲಯಾನ್ತಮಿತಿ ಸ್ಥಿತಿಃ ॥೬೨೧॥

“ಪ್ರಾಣಿಯು ತಾನು ಮಾಡಿದ ಪಾಪಕ್ಕೆ ಅನುಸಾರವಾಗಿ ಒಂದು ಲಕ್ಷ ವರ್ಷಗಳು ಮೊದಲ್ಗೊಂಡು ಪ್ರಳಯಾಂತದವರೆಗೂ ನರಕದಲ್ಲಿರುತ್ತವೆ. ಇದು ಶಾಸ್ತ್ರನಿರ್ಣಯವಾಗಿದೆ.”

ಉಮೆ :

"ಪೂಜ್ಯನೇ! ಆ ನರಕಗಳಲ್ಲಿ ಎಂತೆಂತಹ ಪಾಪಿಷ್ಠರು ಇರುವರೆಂಬುದನ್ನು ಹೇಳು."

ಮಹೇಶ್ವರ :

ರೌರವೇ ಶತಸಾಹಸ್ರಂ ವರ್ಷಾಣಾಮಿತಿ ಸಂಸ್ಥಿತಿಃ ।
ಮಾನುಷಘ್ನಾಃ ಕೃತಘ್ನಾಶ್ಚ ತಥೈವಾನೃತವಾದಿನಃ ॥೬೨೩॥

"ದೇವಿ! ಮನುಷ್ಯರನ್ನು ಕೊಂದವರು, ಕೃತಘ್ನರು ಮತ್ತು ಸುಳ್ಳು ಹೇಳುವವರು ರೌರವನರಕದಲ್ಲಿ ಒಂದು ಲಕ್ಷವರ್ಷಗಳವರೆಗೆ ಇರುತ್ತಾರೆ.

ದ್ವಿತೀಯೇ ದ್ವಿಗುಣಂ ಕಾಲಂ ಪಚ್ಯನ್ತೇ ತಾದೃಶಾ ನರಾಃ ।
ಮಹಾಪಾತಕಯುಕ್ತಾಸ್ತು ತೃತೀಯೇ ದುಃಖಮಾಪ್ನುಯುಃ ॥೬೨೪॥

ಎರಡನೆಯದಾದ ಮಹಾರೌರವನರಕದಲ್ಲಿ ಅಂತಹ ಪಾಪಗಳನ್ನು ಮಾಡಿದ ಮನುಷ್ಯರು ಎರಡು ಲಕ್ಷ ವರ್ಷಗಳವರೆಗೆ ಬೇಯಿಸಲ್ಪಡುತ್ತಾರೆ. ಮೂರನೆಯದಾದ ಕಂಟಕಾವನನರಕದಲ್ಲಿ ಮಹಾಪಾತಕಿಗಳಾದ ಮನುಷ್ಯರು ದುಃಖವನ್ನುಅನುಭವಿಸುತ್ತಿರುತ್ತಾರೆ.

ಚತುರ್ಥೇ ಪರಿತಪ್ಯನ್ತೇ ಯಾವದ್ಯುಗವಿಪರ್ಯಯಃ ॥೬೨೫॥

ನಾಲ್ಕನೆಯದಾದ ಅಗ್ನಿಕುಂಡನರಕದಲ್ಲಿ ಬಿದ್ದವನು ಮಹಾಪ್ರಳಯದವರೆಗೂ ಅಲ್ಲಿಯೇ ಇರಬೇಕಾಗುತ್ತದೆ.

ಸಹನ್ತಸ್ತಾದೃಶಂ ಘೋರಂ ಪಞ್ಚಕಷ್ಟೇ ತು ಯಾದೃಶಮ್ ।
ತತ್ರಾಸ್ಯ ಚಿರದುಃಖಸ್ಯ ಹ್ಯಧೋಽನ್ಯಾನ್ವಿದ್ಧಿ ಮಾನುಷಾನ್ ॥೬೨೬॥

ಪಂಚಕಷ್ಟನರಕದಲ್ಲಿ ಯಾವ ಘೋರದುಃಖವುಂಟಾಗುವುದೋ ಅಲ್ಲಿಯೂ (ಅಗ್ನಿಕುಂಡನರಕದಲ್ಲಿಯೂ) ಅದನ್ನು ಅನುಭವಿಸಬೇಕಾಗುತ್ತದೆ. ಅತಿದೀರ್ಘಕಾಲದವರೆಗೂ ದುಃಖವನ್ನುಂಟುಮಾಡುವ ಆ ಘೋರನರಕದ ಕೆಳಭಾಗದಲ್ಲಿ ಮನುಷ್ಯಸಂಬಂಧವಾದ ಇತರ ನರಕಗಳ ಸ್ಥಿತಿಯನ್ನು ತಿಳಿ.

ಏವಂ ತೇ ನರಕಾನ್ಭುಕ್ತ್ವಾ ತತ್ರ ಕ್ಷಪಿತಕಲ್ಮಷಾಃ ।
ನರಕೇಭ್ಯೋ ವಿಮುಕ್ತಾಶ್ಚ ಜಾಯನ್ತೇ ಕೃಮಿಜಾತಿಷು ॥೬೨೭॥

ಹೀಗೆ ಅವರು ನರಕದ ಕಷ್ಟವನ್ನು ಉಪಭೋಗಿಸಿದನಂತರ ಪಾಪಗಳನ್ನು ಕಳೆದುಕೊಂಡು ನರಕದಿಂದ ಮುಕ್ತರಾಗಿ ಕೃಮಿ-ಕೀಟಗಳ ಯೋನಿಗಳಲ್ಲಿ ಹುಟ್ಟುತ್ತಾರೆ.

ಉದ್ಭೇದಜೇಷು ವಾ ಕೇಚಿದತ್ರಾಪಿ ಕ್ಷೀಣಕಲ್ಮಷಾಃ ।
ಪುನರೇವ ಪ್ರಜಾಯನ್ತೇ ಮೃಗಪಕ್ಷಿಷು ಶೋಭನೇ ।
ಮೃಗಪಕ್ಷಿಷು ತದ್ಭುಕ್ತ್ವಾ ಲಭನ್ತೇ ಮಾನುಷಂ ಪದಮ್ ॥೬೨೮॥

ಗಿಡ-ಮರ-ಬಳ್ಳಿಗಳಾಗಿಯೂ ಕೆಲವರು ಹುಟ್ಟಿ ಪಾಪಗಳನ್ನು ಕಳೆದುಕೊಂಡು ಪುನಃ ಮೃಗ-ಪಕ್ಷಿಗಳಾಗಿ ಹುಟ್ಟುತ್ತಾರೆ. ಅಲ್ಲಿಯೂ ಕರ್ಮಫಲವನ್ನು ಅನುಭವಿಸಿ ಅನಂತರ ಅವರು ಪುನಃ ಮನುಷ್ಯಯೋನಿಯಲ್ಲಿ ಹುಟ್ಟುತ್ತಾರೆ.”

ಉಮೆ :

“ಪ್ರಭುವೇ! ಪಾಪಿಷ್ಠರಾದ ಮನುಷ್ಯರು ಯಾವ ಕ್ರಮವನ್ನು ಅನುಸರಿಸಿ ನಾನಾವಿಧವಾದ ಯೋನಿಗಳಲ್ಲಿ ಜನ್ಮತಾಳುತ್ತಾರೆ?”

ಮಹೇಶ್ವರ :

“ಶೋಭನಳೇ! ನೀನು ಕೇಳಲು ಬಯಸಿರುವುದನ್ನು ಹೇಳುತ್ತೇನೆ. ಜೀವನು ಯಾವಾಗಲೂ ಕರ್ಮಕ್ಕೆ ಅಧೀನನಾಗಿ ಆ ಕರ್ಮಫಲದಿಂದಲೇ ನಾನಾವಿಧವಾದ ಯೋನಿಗಳಲ್ಲಿ ಜನ್ಮತಾಳುತ್ತಾನೆ.

ಯಶ್ಚ ಮಾಂಸಪ್ರಿಯೋ ನಿತ್ಯಂ ಕಾಕಗೃಧ್ರಾನ್ಸ ಸಂಸ್ಪೃಶೇತ್ ।
ಸುರಾಪಃ ಸತತಂ ಮರ್ತ್ಯಃ ಸೂಕರತ್ವಂ ವ್ರಜೇದ್ಧ್ರುವಮ್ ॥೬೩೦॥

ಯಾವನು ಪ್ರತಿನಿತ್ಯವೂ ಮಾಂಸವನ್ನು ತಿನ್ನಬೇಕೆಂಬ ಲಾಲಸೆಯಿಂದಿರುವನೋ–ಅವನು ಕಾಗೆಯಾಗಿ ಅಥವಾ ರಣಹದ್ದಾಗಿ ಹುಟ್ಟುತ್ತಾನೆ. ಸತತವಾಗಿ ಮದ್ಯವನ್ನು ಕುಡಿಯುವ ಮನುಷ್ಯನು ನಿಶ್ಚಯವಾಗಿಯೂ ಹಂದಿಯಾಗಿ ಹುಟ್ಟುತ್ತಾನೆ.

ಅಭಕ್ಷ್ಯಭಕ್ಷಣೋ ಮರ್ತ್ಯಃ ಕಾಕಜಾತಿಷು ಜಾಯತೇ ।
ಆತ್ಮಘ್ನೋ ಯೋ ನರಃ ಕೋಪಾತ್ಪ್ರೇತಜಾತಿಷು ತಿಷ್ಠತಿ ॥೬೩೨॥

ತಿನ್ನಬಾರದುದನ್ನು ತಿನ್ನುವ ಮನುಷ್ಯನು ಕಾಗೆಯ ಜಾತಿಯಲ್ಲಿ ಹುಟ್ಟುತ್ತಾನೆ. ಕ್ರೋಧವಶನಾಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳುವವನು ಪ್ರೇತಜನ್ಮವನ್ನು ಹೊಂದುತ್ತಾನೆ.

ಪೈಶುನ್ಯಾತ್ಪರಿವಾದಾಚ್ಚ ಕುಕ್ಕುಟತ್ವಮವಾಪ್ನುಯಾತ್ ।
ನಾಸ್ತಿಕಶ್ಚೈವ ಯೋ ಮೂರ್ಖೋ ಮೃಗಜಾತಿಂ ಸ ಗಚ್ಛತಿ ॥೬೩೩॥

ಮನುಷ್ಯನು ಚಾಡಿಹೇಳುವುದರಿಂದಲೂ, ನಿಂದನೆಮಾಡುವುದರಿಂದಲೂ ಕೋಳಿಯ ಜನ್ಮವನ್ನು ಪಡೆಯುತ್ತಾನೆ. ನಾಸ್ತಿಕನಾಗಿರುವ ಮೂರ್ಖನು ಮೃಗಜಾತಿಯಲ್ಲಿ ಹುಟ್ಟುತ್ತಾನೆ.

ಹಿಂಸಾವಿಹಾರಸ್ತು ನರಃ ಕೃಮಿಕೀಟೇಷು ಜಾಯತೇ ।
ಅತಿಮಾನಯುತೋ ನಿತ್ಯಂ ಪ್ರೇತ್ಯ ಗರ್ದಭತಾಂ ವ್ರಜೇತ್ ॥೬೩೪॥

ಮೃಗಗಳನ್ನು ಬೇಟೆಮಾಡುವ ಮನುಷ್ಯನು ಕೃಮಿ-ಕೀಟಜಂತುಗಳಲ್ಲಿ ಹುಟ್ಟುತ್ತಾನೆ. ದುರಭಿಮಾನದಿಂದ ಕೂಡಿರುವವನು ಅವಸಾನಾನಂತರದಲ್ಲಿ ಕತ್ತೆಯಾಗಿ ಹುಟ್ಟುತ್ತಾನೆ.

ಅಗಮ್ಯಾಗಮನಾಚ್ಚೈವ ಪರದಾರನಿಷೇವಣಾತ್ ।
ಮೂಷಿಕತ್ವಂ ವ್ರಜೇನ್ಮರ್ತ್ಯೋ ನಾಸ್ತಿ ತತ್ರ ವಿಚಾರಣಾ ॥೬೩೫॥

ಸಮಾಗಮಮಾಡಬಾರದ ಸ್ತ್ರೀಯೊಡನೆ ಸಮಾಗಮಮಾಡುವುದರಿಂದಲೂ ಪರಸ್ತ್ರೀಯರನ್ನು ಸೇವಿಸುವುದರಿಂದಲೂ ಮನುಷ್ಯನು ಇಲಿಯಾಗಿ ಹುಟ್ಟುತ್ತಾನೆ. ಈ ವಿಷಯದಲ್ಲಿ ಸಂದೇಹಪಡಬೇಕಾಗಿಯೇ ಇಲ್ಲ.

ಕೃತಘ್ನೋ ಮಿತ್ರಘಾತೀ ಚ ಶೃಗಾಲವೃಕಜಾತಿಷು ।
ಕೃತಘ್ನಃ ಪುತ್ರಘಾತೀ ಚ ಸ್ಥಾವರೇಷ್ವಥ ತಿಷ್ಠತಿ ॥೬೩೬॥

ಮಾಡಿರುವ ಕೆಲಸವನ್ನು ಹಾಳುಮಾಡುವವನು ಮತ್ತು ಮಿತ್ರರನ್ನು ಕೊಲ್ಲುವವನು ಗುಳ್ಳೇನರಿ ಮತ್ತು ತೋಳಗಳ ಜಾತಿಯಲ್ಲಿ ಜನ್ಮತಾಳುತ್ತಾನೆ. ಮಾಡಿದ ಉಪಕಾರವನ್ನು ಸ್ಮರಿಸದವನೂ ಮತ್ತು ಮಗನನ್ನು ಕೊಂದವನೂ ಸ್ಥಾವರಯೋನಿಯಲ್ಲಿ ಜನ್ಮತಾಳುತ್ತಾನೆ.

ಹೀಗೆ ಪಾಪಕರ್ಮಗಳನ್ನು ಮಾಡಿದ ಮನುಷ್ಯರು ನರಕಕ್ಕೂ ಹೋಗು

ತ್ತಾರೆ ಮತ್ತು ತಾವು ಮಾಡಿದ ಪಾಪಕರ್ಮದ ಫಲವಾಗಿಯೇ ಹಿಂದೆ ಹೇಳಿದ ನೀಚಯೋನಿಗಳಲ್ಲಿಯೂ ಜನ್ಮತಾಳುತ್ತಾರೆ.

ಹೀಗೆ ಪಾಪಕರ್ಮಗಳಿಂದ ಪುರುಷರಿಗೆ ಅವರು ಪಾಪದ ಫಲವಾಗಿ ಪಡೆಯುವ ಜಾತಿಗಳನ್ನು ನಿರ್ದೇಶಿಸಬಹುದಾಗಿದೆ. ಹೀಗೆ ಅವರು ವಿಧ-ವಿಧವಾದ ಯೋನಿಗಳಲ್ಲಿ ಹುಟ್ಟಿ ಪಾಪಫಲವನ್ನು ಕಳೆದುಕೊಂಡು ಕಡೆಗೊಮ್ಮೆ ಮನುಷ್ಯರಾಗಿ ಹುಟ್ಟುತ್ತಾರೆ.

ಬಹುಶಶ್ಚಾಗ್ನಿಸಂಕ್ರಾನ್ತಂ ಲೋಹಂ ಶುಚಿಮಯಂ ಯಥಾ ।
ಬಹುದುಃಖಾಭಿಸಂತಪ್ತಸ್ತಥಾತ್ಮಾ ಶೋಧ್ಯತೇ ಬಲಾತ್ ।
ತಸ್ಮಾತ್ಸುದುರ್ಲಭಂ ಚೇತಿ ವಿದ್ಧಿ ಜನ್ಮಸು ಮಾನುಷಮ್ ॥೬೩॥

ಲೋಹವನ್ನು ಪುನಃ ಪುನಃ ಅಗ್ನಿಯಲ್ಲಿ ಕಾಯಿಸುವುದರಿಂದ ಅದು ಶುದ್ಧವಾಗುವಂತೆ–ಅನೇಕಪ್ರಕಾರವಾದ ದುಃಖಗಳಿಂದ ಪರಿತಪಿಸಿದ ಜೀವಾತ್ಮವೂ ಶುದ್ಧವಾಗುತ್ತದೆ. ಆದುದರಿಂದ ಜನ್ಮಗಳಲ್ಲಿ ಮನುಷ್ಯಜನ್ಮವು ಪಡೆದುಕೊಳ್ಳಲು ಅತಿಕಷ್ಟವಾದುದೆಂದು ತಿಳಿ.”

* * *

ಶುಭ-ಅಶುಭ ಮತ್ತು ಮಾನಸಕರ್ಮಗಳ ಸ್ವರೂಪ ಮತ್ತು ಫಲ : ಮದ್ಯಸೇವನೆಯ ದೋಷ : ಆಹಾರಶುದ್ಧಿ : ಮಾಂಸಭಕ್ಷಣದ ದೋಷ : ಮಾಂಸವನ್ನು ಭಕ್ಷಿಸದೇ ಇರುವುದರಿಂದ ಲಭಿಸುವ ಫಲ : ಪ್ರಾಣಿದಯೆಯ ಮಹತ್ತ್ವ : ಗುರುಪೂಜಾವಿಧಿ : ಉಪವಾಸವಿಧಿ : ಬ್ರಹ್ಮಚರ್ಯಪಾಲನೆ : ಸರ್ವಸಾಧಾರಣದ್ರವ್ಯದ ದಾನದಿಂದಲೂ ಲಭಿಸುವ ಪುಣ್ಯ : ಅನ್ನ, ಸುವರ್ಣ, ಗೋವು, ಭೂಮಿ, ಕನ್ಯೆ ಮತ್ತು ವಿದ್ಯಾದಾನಗಳ ಮಹತ್ತ್ವ : ಪುಣ್ಯತಮವಾದ ದೇಶ ಮತ್ತು ಕಾಲಗಳು, ವಿವಿಧದಾನಗಳು, ಲೌಕಿಕ-ವೈದಿಕ ಯಜ್ಞಗಳು, ದೇವತಾಪೂಜೆ–ಇವುಗಳ ನಿರೂಪಣೆ

ಉಮೆ :

“ಮಹಾದೇವನೇ! ಪ್ರಜೆಗಳಿಗೆ ಹಿತವನ್ನುಂಟುಮಾಡುವ ಅಪೇಕ್ಷೆ

ಯಿಂದ ಶುಭಾಶುಭಗಳೆಂದು ಹೇಳಲ್ಪಡುವ ಅವರವರ ಕರ್ಮಗಳನ್ನು ಸಂಕ್ಷೇಪವಾಗಿ ಕೇಳಲು ಅಪೇಕ್ಷಿಸುತ್ತೇನೆ."

ಮಹೇಶ್ವರ :

"ಶೋಭನಳೇ! ಎಲ್ಲವನ್ನೂ ಹೇಳುವೆನು ; ಏಕಾಗ್ರಚಿತ್ತಳಾಗಿ ಕೇಳು.

ಸುಕೃತಂ ದುಷ್ಕೃತಂ ಚೇತಿ ದ್ವಿವಿಧಂ ಕರ್ಮವಿಸ್ತರಮ್ ॥೬೪೧॥

ವಿಸ್ತಾರವಾದ ಕರ್ಮವು ಸುಕೃತ ಮತ್ತು ದುಷ್ಕೃತಗಳೆಂದು ಎರಡು ಬಗೆಯಾಗಿದೆ.

ತಯೋರ್ಯದ್ದುಷ್ಕೃತಂ ಕರ್ಮ ತಚ್ಚ ಸಂಜಾಯತೇ ತ್ರಿಧಾ ।
ಮನಸಾ ಕರ್ಮಣಾ ವಾಚಾ ಬುದ್ಧಿಮೋಹಸಮುದ್ಭವಾತ್ ॥೬೪೨॥

ಆ ಎರಡರಲ್ಲಿ ದುಷ್ಕೃತವು ಬುದ್ಧಿಯ ಮೋಹದಿಂದ ಉಂಟಾಗುವುದ ರಿಂದ–ಮನಸ್ಸಿನಿಂದ, ಕರ್ಮದಿಂದ ಮತ್ತು ಮಾತಿನಿಂದ–ಎಂಬ ಮೂರು ಕಾರಣಗಳಿಂದ ಹುಟ್ಟುತ್ತವೆ.

ಮನಃಪೂರ್ವಂ ತು ವಾ ಕರ್ಮ ವರ್ತತೇ ವಾಙ್ಮಯಂ ತತಃ ।
ಜಾಯತೇ ವೈ ಕ್ರಿಯಾಯೋಗಮನುಚೇಷ್ಟಾಕ್ರಮಃ ಪ್ರಿಯೇ ॥೬೪೩॥

ಮೊದಲು ಮನಸ್ಸಿನಿಂದ ಕರ್ಮದ ಚಿಂತನೆಯಾಗುತ್ತದೆ. ಬಳಿಕ ಮಾತಿನ ಮೂಲಕವಾಗಿ ಆ ಕರ್ಮವು ಪ್ರಕಾಶನಕ್ಕೆ ಬರುತ್ತದೆ. ಮೂರನೆಯ ದಾಗಿ ಕ್ರಿಯಾಯೋಗವು ಹುಟ್ಟಿ (ಮಾಡಬೇಕೆಂಬ ಉತ್ಸಾಹವು ಹುಟ್ಟಿ) ಅದನ್ನನುಸರಿಸಿ ಕಾರ್ಯದಲ್ಲಿ ಪ್ರವೃತ್ತಿಯುಂಟಾಗುತ್ತದೆ.

ಅಭಿದ್ರೋಹೋಽಭ್ಯಸೂಯಾ ಚ ಪರಾರ್ಥೇಷು ಚ ಸುಸ್ಪೃಹಾ ।
ಧರ್ಮಕಾರ್ಯೇ ಯದಾಶ್ರದ್ಧಾ ಪಾಪಕರ್ಮಣಿ ಹರ್ಷಣಮ್ ।
ಏವಮಾದ್ಯಶುಭಂ ಕರ್ಮ ಮನಸಾ ಪಾಪಮುಚ್ಯತೇ ॥೬೪೪॥

ಮೋಸ, ಅಸೂಯೆ, ಇತರರ ಸ್ವತ್ತಿನಮೇಲೆ ಆಶೆ, ಧರ್ಮಕಾರ್ಯ ದಲ್ಲಿ ಅಶ್ರದ್ಧೆ, ಪಾಪಕಾರ್ಯಮಾಡುವುದರಲ್ಲಿ ಸಂತುಷ್ಟಿ–ಇವೇ ಮೊದಲಾದ ಅಶುಭಕರ್ಮಗಳನ್ನು ಮಾನಸಿಕಪಾಪವೆಂದು ಹೇಳುತ್ತಾರೆ.

ಅನೃತಂ ಯಚ್ಚ ಪರುಷಮಬದ್ಧಂ ಯಚ್ಚ ಶಂಕರಿ ।
ಅಸತ್ಯಂ ಪರಿವಾದಶ್ಚ ಪಾಪಮೇತತ್ತು ವಾಙ್ಮಯಮ್ ॥೬೪೫॥

ಶಂಕರಿ! ಸುಳ್ಳು, ಕಠೋರವಾದ ಮತ್ತು ಅಸಂಬದ್ಧವಾದ ಮಾತು, ಅಸತ್ಯಭಾಷಣ, ಪರನಿಂದೆ–ಇವೆಲ್ಲವೂ ಮಾತಿನಿಂದಾಗುವ ಪಾಪಗಳು.

ಅಗಮ್ಯಾಗಮನಂ ಚೈವ ಪರದಾರನಿಷೇವಣಮ್ ।
ವಧಬನ್ಧಪರಿಕ್ಲೇಶೈಃ ಪರಪ್ರಾಣೋಪತಾಪನಮ್ ॥೬೪೬॥

ಚೌರ್ಯಂ ಪರೇಷಾಂ ದ್ರವ್ಯಾಣಾಂ ಹರಣಂ ನಾಶನಂ ತಥಾ ।
ಅಭಕ್ಷ್ಯಭಕ್ಷಣಂ ಚೈವ ವ್ಯಸನೇಷ್ವಭಿಷಙ್ಗತಾ ॥೬೪೭॥

ದರ್ಪಾತ್ಸ್ತಮ್ಭಾಭಿಮಾನಾಚ್ಚ ಪರೇಷಾಮುಪತಾಪನಮ್ ।
ಅಕಾರ್ಯಾಣಾಂ ಚ ಕರಣಮಶೌಚಂ ಪಾನಸೇವನಮ್ ॥೬೪೮॥

ದೌಃಶೀಲ್ಯಂ ಪಾಪಸಮ್ಪರ್ಕೋ ಸಾಹಾಯ್ಯಂ ಪಾಪಕರ್ಮಣಿ ।
ಅಧರ್ಮ್ಯಮಯಶಸ್ಯಂ ಚ ಕಾರ್ಯಂ ತಸ್ಯ ನಿಷೇವಣಮ್ ।
ಏವಮಾದ್ಯಶುಭಂ ಚಾನ್ಯಚ್ಛಾರೀರಂ ಪಾಪಮುಚ್ಯತೇ ॥೬೪೯॥

ಸಮಾಗಮಮಾಡಬಾರದ ಸ್ತ್ರೀಯರೊಡನೆ ಸಮಾಗಮಮಾಡುವುದು ; ಪರಸ್ತ್ರೀಯರನ್ನು ಸೇವಿಸುವುದು ; ವಧೆ, ಬಂಧನ, ಕ್ಲೇಶಗಳನ್ನು ಕೊಟ್ಟು ಇತರರನ್ನು ಸಂಕಟಪಡಿಸುವುದು ; ಕಳ್ಳತನ ; ಇತರರ ದ್ರವ್ಯವನ್ನು ಅಪಹರಿಸುವುದು ಮತ್ತು ವಿನಾಶಗೊಳಿಸುವುದು ; ತಿನ್ನಬಾರದುದನ್ನು ತಿನ್ನುವುದು ; ದುರ್ವ್ಯಸನಗಳಲ್ಲಿ ಆಸಕ್ತಿ ; ದರ್ಪದಿಂದಲೂ, ಉದ್ಧಟತನದಿಂದಲೂ, ದುರಭಿಮಾನದಿಂದಲೂ ಇತರರನ್ನು ಪರಿತಾಪಗೊಳಿಸುವುದು ; ಅಕಾರ್ಯಗಳನ್ನು ಮಾಡುವುದು ; ಅಪವಿತ್ರತೆ ; ಮದ್ಯಪಾನ ; ಕೆಟ್ಟನಡತೆ; ಪಾಪಿಗಳ ಸಹವಾಸ ; ಪಾಪಕರ್ಮಕ್ಕೆ ಸಹಾಯಮಾಡುವುದು ; ಅಧರ್ಮವೂ ಮತ್ತು ಅಯಶಸ್ಕರವೂ ಆದ ಕಾರ್ಯವನ್ನು ಮಾಡುವುದು–ಇವೇ ಮೊದಲಾದುವು ಶರೀರದಿಂದ ಮಾಡುವ ಪಾಪಕರ್ಮಗಳೆಂದು ಹೇಳಲ್ಪಟ್ಟಿವೆ.

ಮಾನಸಾದ್ವಾಙ್ಮಯಂ ಪಾಪಂ ವಿಶಿಷ್ಟಮಿತಿ ಲಕ್ಷ್ಯತೇ ।
ವಾಙ್ಮಯಾದಪಿ ವೈ ಪಾಪಾಚ್ಛಾರೀರಂ ಗಣ್ಯತೇ ಬಹು ॥೬೫೦॥

ಮನಸ್ಸಿನ ಮೂಲಕವಾಗಿ ಮಾಡುವ ಪಾಪಕ್ಕಿಂತಲೂ ಮಾತಿನ ಮೂಲಕ ಮಾಡುವ ಪಾಪವು ಅಧಿಕವಾದುದು. ಮಾತಿನ ಮೂಲಕ ಮಾಡುವ ಪಾಪಕ್ಕಿಂತಲೂ ಶರೀರದಿಂದ ಮಾಡುವ ಪಾಪವು ಬಹಳ ಹೆಚ್ಚಿನದೆಂದು ಹೇಳುತ್ತಾರೆ.

ಏವಂ ಪಾಪಯುತಂ ಕರ್ಮ ತ್ರಿವಿಧಂ ಪಾತಯೇನ್ನರಮ್ ।
ಪರೋಪತಾಪಜನನಮತ್ಯನ್ತಂ ಪಾತಕಂ ಸ್ಮೃತಮ್ ॥೬೫೧॥

ಹೀಗೆ ಪಾಪಕರ್ಮವು ಮೂರು ಬಗೆಯಾಗಿ ವಿಂಗಡಿಸಲ್ಪಟ್ಟಿದೆ. ಇದು ಮನುಷ್ಯನನ್ನು ಅಧೋಗತಿಗೆ ತಳ್ಳುತ್ತದೆ. ಇತರರಿಗೆ ಸಂತಾಪವನ್ನುಂಟು ಮಾಡುವ ಕರ್ಮವು ಹೆಚ್ಚು ಪಾಪವನ್ನುಂಟುಮಾಡುವುದೆಂದು ಹೇಳುತ್ತಾರೆ.

ತ್ರಿವಿಧಂ ತತ್ಕೃತಂ ಪಾಪಂ ಕರ್ತಾರಂ ಪಾಪಕಂ ನಯೇತ್ ।
ಪಾತಕಂ ಚಾಪಿ ಯತ್ಕರ್ಮ ಕರ್ಮಣಾ ಬುದ್ಧಿಪೂರ್ವಕಮ್ ॥೬೫೨॥
ಸಾಪದೇಶಮವಶ್ಯಂ ತು ಕರ್ತವ್ಯಮಿತಿ ತತ್ಕೃತಮ್ ।
ಕಥಂಚಿತ್ತತ್ಕೃತಮಪಿ ಕರ್ತಾ ತೇನ ನ ಲಿಪ್ಯತೇ ॥೬೫೩॥

ಮೂರು ವಿಧವಾದ ಈ ಪಾಪಕರ್ಮಗಳು ಕರ್ತೃವನ್ನು ಪಾಪಯೋನಿಗೆ ಒಯ್ಯುತ್ತವೆ. ಒಂದು ವೇಳೆ ಯಾವುದಾದರೂ ಒಂದು ಕರ್ಮವು ಪಾಪಕರ್ಮವೇ ಆಗಿದ್ದರೂ ಬುದ್ಧಿಪೂರ್ವಕವಾಗಿಯೇ ಆ ಕರ್ಮವನ್ನು ಮಾಡಿದ್ದರೂ–ಆ ಕರ್ಮವು ಪ್ರಾಣರಕ್ಷಣೆ, ಬಂಧವಿಮೋಚನೆ ಮುಂತಾದ ಒಳ್ಳೆಯ ಉದ್ದೇಶದಿಂದ ಅವಶ್ಯವೆಂದೂ ಕರ್ತವ್ಯವೆಂದೂ ಭಾವಿಸಿ ಮಾಡಲ್ಪಟ್ಟಿದ್ದರೆ ಕರ್ತೃವು ಪಾಪದಿಂದ ಲಿಪ್ತನಾಗುವುದಿಲ್ಲ."*

ಉಮೆ :

"ಪರಮೇಶ್ವರ! ಪಾಪಕರ್ಮವನ್ನು ಮಾಡಿಯೂ ಅವನು ಹೇಗೆ ಪಾಪದಿಂದ ಲಿಪ್ತನಾಗುವುದಿಲ್ಲ?"

---

* ಗೋವನ್ನು ವಧಿಸಲು ಪುಂಡರು ಕೊಂಡೊಯ್ಯುತ್ತಿರುವಾಗ ಗೋರಕ್ಷಣೆಯು ಪರಮಶ್ರೇಷ್ಠವಾದ ಧರ್ಮ. ಆ ಧರ್ಮದ ರಕ್ಷಣೆಗಾಗಿ ಪುಂಡರನ್ನು ವಧ-ಬಂಧ- ಕ್ಲೇಶಗಳಿಂದ ದಂಡಿಸಬೇಕು. ಈ ಪ್ರಕರಣದಂತೆ ವಧ-ಬಂಧ-ಕ್ಲೇಶಗಳಿಂದ ಒಬ್ಬನ

ಮಹೇಶ್ವರ :

ಯೋ ನರೋಽನಪರಾಧೀ ಚ ಸ್ವಾತ್ಮಪ್ರಾಣಸ್ಯ ರಕ್ಷಣಾತ್ ।
ಶತ್ರುಮುದ್ಯತಶಸ್ತ್ರಂ ವಾ ಪೂರ್ವಂ ತೇನ ಹತೋಽಪಿ ವಾ ।
ಪ್ರತಿಹನ್ಯಾನ್ನರೋ ಹಿಂಸ್ಯಾನ್ನ ಸ ಪಾಪೇನ ಲಿಪ್ಯತೇ ॥೬೫೫॥

"ನಿರಪರಾಧಿಯಾದ ಒಬ್ಬ ಮನುಷ್ಯನು ಆತ್ಮರಕ್ಷಣೆಗಾಗಿ ಕತ್ತಿಯನ್ನು ಹಿಡಿದು ತನ್ನನ್ನು ಪ್ರಹರಿಸಿದ ಅಥವಾ ಪ್ರಹರಿಸಲು ಬಂದ ಶತ್ರುವನ್ನು ಕೊಂದುದೇ ಆದರೆ ಅಥವಾ ಹಿಂಸಿಸಿದ್ದೇ ಆದರೆ ಅಂತಹ ಸಮಯದಲ್ಲಿ ಅವನಿಗೆ ಪಾಪದ ಲೇಪವಿರುವುದಿಲ್ಲ.

ಚೋರಾದಧಿಕಸಂತ್ರಸ್ತಸ್ತತ್ಪ್ರತೀಕಾರಚೇಷ್ಟಯಾ ।
ಯಃ ಪ್ರಜಘ್ನನ್ನರೋ ಹನ್ಯಾನ್ನ ಸ ಪಾಪೇನ ಲಿಪ್ಯತೇ ॥೬೫೬॥

ಒಬ್ಬ ಮನುಷ್ಯನು ಕಳ್ಳನ ಉಪಟಳದಿಂದ ಬಹಳವಾಗಿ ಭಯಗೊಂಡು ಪ್ರತೀಕಾರವನ್ನು ಮಾಡಲು ಅವನನ್ನು ಪ್ರಹರಿಸಿದರೆ ಅಥವಾ ಕೊಂದರೆ ಪಾಪದಿಂದ ಲಿಪ್ತನಾಗುವುದಿಲ್ಲ.

ಗ್ರಾಮಾರ್ಥಂ ಭರ್ತೃಪಿಣ್ಡಾರ್ಥಂ ದೀನಾನುಗ್ರಹಕಾರಣಾತ್ ।
ವಧಬನ್ಧಪರಿಕ್ಲೇಶಾನ್ಕುರ್ವಾಣ್ಸ್ಪಾಪಾತ್ಪ್ರಮುಚ್ಯತೇ ॥೬೫೭॥

ಗ್ರಾಮದ ರಕ್ಷಣೆಗಾಗಿ, ಸ್ವಾಮಿಯ ಅನ್ನವನ್ನು ತಿಂದುದಕ್ಕಾಗಿ, ದೀನರಾದವರ ದುಃಖಪರಿಹಾರಕ್ಕಾಗಿ ವಧ-ಬಂಧಾದಿ ಪರಿಕ್ಲೇಶಗಳನ್ನು ಶತ್ರುಗಳಿಗೆ ಉಂಟುಮಾಡಿದರೆ ಅಂತಹವನು ಪಾಪದಿಂದ ವಿಮುಕ್ತನಾಗುತ್ತಾನೆ. (ಗ್ರಾಮದ ಮೇಲೆ ಹಲ್ಲೆಮಾಡಲು ಬಂದವರನ್ನು ಹೊಡೆದೋಡಿಸಬಹುದು. ಯಜಮಾನನ ಅನ್ನತಿಂದ ಸೇವಕನು ಯಜಮಾನನ ರಕ್ಷಣಾರ್ಥವಾಗಿ ಅವನನ್ನು ಆಕ್ರಮಿಸುವ ಶತ್ರುಗಳನ್ನು ಬಡಿದುಹಾಕಬಹುದು. ದೀನರನ್ನು ಉದ್ಧರಿಸುವ ಸಲುವಾಗಿ ಕಾರ್ಯಮಾಡುತ್ತಿರುವಾಗ ತಡೆಮಾಡಲು ಬಂದವರನ್ನು ನಿಗ್ರಹಿಸಬಹುದು.

ಪ್ರಾಣಾಪಹಾರಮಾಡುವುದು ಪಾಪವಾದರೂ ಗೋರಕ್ಷಣೆಯ ಸಂದರ್ಭದಲ್ಲಿ ಅದು ಪಾಪ ಕರ್ಮವಾಗುವುದಿಲ್ಲ. ಗೋಹಂತಕನನ್ನು ವಧಿಸಿದ ಪಾಪವು ಗೋರಕ್ಷಕನಿಗೆ ಅಂಟುವುದಿಲ್ಲ.

ವಧ-ಬಂಧ-ಕ್ಲೇಶಗಳು ಪಾಪಕರ್ಮಗಳಾದರೂ ಇಂತಹ ಸಂದರ್ಭದಲ್ಲಿ ಪಾಪಕರ್ಮಗಳೆನಿಸುವುದಿಲ್ಲ.)

ದುರ್ಭಿಕ್ಷೇ ಚಾತ್ಮವೃತ್ತ್ಯರ್ಥಮೇಕಾಯನಗತಸ್ತಥಾ ।
ಅಕಾರ್ಯಂ ವಾಪ್ಯಭಕ್ಷ್ಯಂ ವಾ ಕೃತ್ವಾ ಪಾಪಾನ್ನ ಲಿಪ್ಯತೇ ॥೬೫೮॥

ದುರ್ಭಿಕ್ಷದ ಸಮಯದಲ್ಲಿ ಜೀವನದ ನಿರ್ವಹಣೆಗೆ ಅಕಾರ್ಯವೊಂದೇ ಮಾರ್ಗವಾಗಿದ್ದಾಗ–ಆ ಸಮಯದಲ್ಲಿ ಅಕಾರ್ಯವನ್ನು ಮಾಡಿದರೂ, ತಿನ್ನಬಾರದುದನ್ನು ತಿಂದರೂ ಪಾಪವಿಲ್ಲ.

ಕೇಚಿದ್ಧಸನ್ತಿ ತತ್ಪೀತ್ವಾ ಪ್ರವದನ್ತಿ ತಥಾ ಪರೇ ।
ನೃತ್ಯನ್ತಿ ಮುದಿತಾಃ ಕೇಚಿದ್ಗಾಯನ್ತಿ ಚ ಶುಭಾಶುಭಾನ್ ॥೬೫೯॥

ಪ್ರಿಯಳೇ! (ಈಗ ನಾನು ಮದ್ಯಪಾನದ ದೋಷಗಳನ್ನು ಹೇಳುತ್ತೇನೆ.) ಮದ್ಯವನ್ನು ಕುಡಿದು ಕೆಲವರು ನಗುತ್ತಾರೆ. ಕೆಲವರು ಹರಟುತ್ತಾರೆ. ಸಂತೋಷಭರಿತರಾಗಿ ಕೆಲವರು ಕುಣಿಯುತ್ತಾರೆ. ಕೆಲವರು ಒಳ್ಳೆಯ ಮತ್ತು ಕೆಟ್ಟ ಹಾಡುಗಳನ್ನು ಹಾಡುತ್ತಾರೆ.

ಕಲಿಂ ತೇ ಕುರ್ವತೇಽಭೀಷ್ಟಂ ಪ್ರಹರನ್ತಿ ಪರಸ್ಪರಮ್ ।
ಕ್ವಚಿದ್ಧಾವನ್ತಿ ಸಹಸಾ ಪ್ರಸ್ಖಲನ್ತಿ ಪತನ್ತಿ ಚ ॥೬೬೦॥

ತಮ್ಮ ಇಚ್ಛಾನುಸಾರವಾಗಿ ಪರಸ್ಪರವಾಗಿ ಜಗಳವಾಡುತ್ತಾರೆ. ಒಮ್ಮೆ ಓಡುತ್ತಾರೆ. ಒಡನೆಯೇ ತತ್ತರಿಸುತ್ತಾರೆ ; ಬೀಳುತ್ತಾರೆ.

ಅಯುಕ್ತಂ ಬಹು ಭಾಷನ್ತೇ ಯತ್ರ ಕ್ವಚನ ಶೋಭನೇ ।
ನಗ್ನಾ ವಿಕ್ಷಿಪ್ಯ ಗಾತ್ರಾಣಿ ನಷ್ಟಜ್ಞಾನಾ ಇವಾಸತೇ ॥೬೬೧॥

ಶೋಭನಳೇ! ಎಲ್ಲೆಂದರಲ್ಲಿ ಆಡಬಾರದ ಮಾತುಗಳನ್ನೇ ಆಡುತ್ತಿರುತ್ತಾರೆ. ಬೆತ್ತಲೆಯಾಗಿ ಅಂಗಾಂಗಗಳನ್ನು ಚಾಚಿಕೊಂಡು ಮೂರ್ಛಿತರಾದಂತೆ ಎಲ್ಲೆಂದರಲ್ಲಿ ಬಿದ್ದಿರುತ್ತಾರೆ.

ಮಹಾಮೋಹವನ್ನುಂಟುಮಾಡುವ ಮದ್ಯವನ್ನು ಯಾವ ಪಾಪಿಷ್ಠ ಜನರು ಕುಡಿಯುವರೋ–ಅವರು ಹೀಗೆ ಭ್ರಮಿಸಿದ ಬುದ್ಧಿಯಿಂದ

ಕೂಡಿದವರಾಗಿ ಶರೀರದ ಮೇಲಿನ ಹತೋಟಿಯನ್ನೇ ಕಳೆದುಕೊಂಡು, ನಾನಾವಿಧವಾದ ಭಾವಗಳನ್ನು ಪ್ರದರ್ಶಿಸುತ್ತಾರೆ.

ಧೃತಿಂ ಲಜ್ಜಾಂ ಚ ಬುದ್ಧಿಂ ಚ ಪಾನಂ ಪೀತಂ ಪ್ರಣಾಶಯೇತ್ ।
ತಸ್ಮಾನ್ನರಾಃ ಸಮ್ಭವನ್ತಿ ನಿರ್ಲಜ್ಜಾ ನಿರಪತ್ರಪಾಃ ॥೬೬೩॥

ಮಿತಿಮೀರಿ ಕುಡಿದ ಆ ಮದ್ಯವು ಮನುಷ್ಯನ ಧೈರ್ಯವನ್ನೂ, ಲಜ್ಜೆಯನ್ನೂ, ಬುದ್ಧಿಯನ್ನೂ, ಹಾಳುಮಾಡಿಬಿಡುತ್ತದೆ. ಈ ಕಾರಣದಿಂದಲೇ ಮದ್ಯವನ್ನು ಕುಡಿಯುವ ಮನುಷ್ಯರೆಲ್ಲರೂ ನಿರ್ಲಜ್ಜರೂ ನಾಚಿಕೆಗೆಟ್ಟವರೂ ಆಗುತ್ತಾರೆ.

ಪಾನಪಸ್ತು ಸುರಾಂ ಪೀತ್ವಾ ತದಾ ಬುದ್ಧಿಪ್ರಣಾಶನಾತ್ ।
ಕಾರ್ಯಾಕಾರ್ಯಸ್ಯ ಚಾಜ್ಞಾನಾದ್ಯಥೇಷ್ಟಕರಣಾತ್ಸ್ವಯಮ್ ।
ವಿದುಷಾಮವಿಧೇಯತ್ವಾತ್ಪಾಪಮೇವಾಭಿಪದ್ಯತೇ ॥೬೬೪॥

ಕುಡುಕನು ಮದ್ಯವನ್ನು ಕುಡಿದು ಬುದ್ಧಿಯನ್ನು ಕೆಡಿಸಿಕೊಳ್ಳುವುದರಿಂದಲೂ, ಕಾರ್ಯ ಮತ್ತು ಅಕಾರ್ಯಗಳಲ್ಲಿ ವಿವೇಚನೆಯಿಲ್ಲದೇ ಸ್ವೇಚ್ಛೆಯಿಂದ ಮಾಡಬಾರದುದನ್ನು ಮಾಡುವುದರಿಂದಲೂ, ವಿದ್ವಾಂಸರಿಗೂ ಹಿರಿಯರಿಗೂ ಅವಿಧೇಯನಾಗಿರುವುದರಿಂದಲೂ ಪಾಪವನ್ನು ಹೊಂದುತ್ತಾನೆ.

ಪರಿಭೂತೋ ಭವೇಲ್ಲೋಕೇ ಮದ್ಯಪೋ ಮಿತ್ರಭೇದಕಃ ।
ಸರ್ವಕಾಲಮಶುದ್ಧಶ್ಚ ಸರ್ವಭಕ್ಷಸ್ತಥಾ ಭವೇತ್ ॥೬೬೫॥

ಮದ್ಯಪಾನಮಾಡುವವನು ಜಗತ್ತಿನಲ್ಲಿ ಅವಮಾನಿತನಾಗುತ್ತಾನೆ. ಮಿತ್ರರೊಡನೆ ಜಗಳವಾಡುತ್ತಾನೆ. ಸಿಕ್ಕಿದುದೆಲ್ಲವನ್ನೂ ತಿನ್ನುತ್ತಿರುತ್ತಾನೆ. ಎಲ್ಲ ಕಾಲಗಳಲ್ಲಿಯೂ ಅವನು ಅಶುದ್ಧನಾಗಿಯೇ ಇರುತ್ತಾನೆ.

ವಿನಷ್ಟೋ ಜ್ಞಾನವಿದ್ವದ್ಭಿಃ ಸತತಂ ಕಲಿಭಾವಗಃ ।
ಪರುಷಂ ಕಟುಕಂ ಘೋರಂ ವಾಕ್ಯಂ ವದತಿ ಸರ್ವಶಃ ॥೬೬೬॥

ಮದ್ಯಪಾಯಿಯು ತಾನು ಹಾಳಾಗಿಹೋಗುವುದು ಮಾತ್ರವಲ್ಲದೇ ವಿದ್ವಾಂಸರೊಡನೆ ಯಾವಾಗಲೂ ಜಗಳವಾಡುತ್ತಾನೆ. ಕಠೋರವಾದ, ಕಟುವಾದ, ಭಯಂಕರವಾದ ಮಾತನ್ನೇ ಯಾವಾಗಲೂ ಆಡುತ್ತಿರುತ್ತಾನೆ.

ಗುರೂನತಿವದೇನ್ಮತ್ತಃ ಪರದಾರಾನ್ಪ್ರಧರ್ಷಯೇತ್ ।
ಸಂವಿದಂ ಕುರುತೇ ಶೌಣ್ಡೈರ್ನ ಶೃಣೋತಿ ಹಿತಂ ಕ್ವಚಿತ್ ॥೬೬೭॥

ಮದ್ಯವನ್ನು ಕುಡಿದು ಎಚ್ಚರದಪ್ಪಿ ಗುರುಜನರನ್ನು ನಿಂದಿಸಿ ಮಾತನಾಡುತ್ತಾನೆ. ಪರಸ್ತ್ರೀಯರ ಮಾನಭಂಗವನ್ನು ಮಾಡುತ್ತಾನೆ. ಧೂರ್ತರ ಮತ್ತು ಜೂಜುಕೋರರ ಸಹವಾಸಮಾಡುತ್ತಾನೆ. ಹಿತಕರವಾದ ಯಾವ ಮಾತನ್ನೂ ಕೇಳುವುದಿಲ್ಲ.

ಶೋಭನಳೇ! ಹೀಗೆ ಮದ್ಯಪಾಯಿಯಲ್ಲಿ ನಾನಾವಿಧವಾದ ದೋಷಗಳಿರುತ್ತವೆ. ಅವರೆಲ್ಲರೂ ನರಕಕ್ಕೇ ಹೋಗುತ್ತಾರೆ. ಈ ವಿಷಯದಲ್ಲಿ ಪುನಃ ವಿಚಾರಮಾಡಬೇಕಾದ ಅವಶ್ಯಕತೆಯೇ ಇಲ್ಲ.

ತಸ್ಮಾತ್ತದ್ವರ್ಜಿತಂ ಸದ್ಭಿಃ ಪಾನಮಾತ್ಮಹಿತೈಷಿಭಿಃ ।
ಯದಿ ಪಾನಂ ನ ವರ್ಜೇರನ್ಸನ್ತಶ್ಚಾರಿತ್ರಕಾರಣಾತ್ ।
ಭವೇದೇತಜ್ಜಗತ್ಸರ್ವಮಮರ್ಯಾದಂ ಚ ನಿಷ್ಕ್ರಿಯಮ್ ॥೬೬೯॥

ಆದುದರಿಂದ ತಮ್ಮ ಹಿತವನ್ನು ಬಯಸುವ ಸತ್ಪುರುಷರು ಮದ್ಯಪಾನವನ್ನು ಸರ್ವಥಾ ತ್ಯಾಗಮಾಡಿರುತ್ತಾರೆ. ಸದಾಚಾರದ ಕಾರಣದಿಂದ ಸತ್ಪುರುಷರೇನಾದರೂ ಮದ್ಯಪಾನವನ್ನು ತ್ಯಾಗಮಾಡದೇ ಇದ್ದಿದ್ದರೆ–ಈ ಪ್ರಪಂಚವೇ ಮರ್ಯಾದಾರಹಿತವಾಗಿ ಬಿಡುತ್ತಿದ್ದಿತು. ನಿಷ್ಕ್ರಿಯವಾಗುತ್ತಿದ್ದಿತು.

ಮದ್ಯಪಾನವು ಶರೀರಸಂಬಂಧವಾದ ಮಹಾಪಾಪವಾಗಿದೆ. ಆದುದರಿಂದ ಬುದ್ಧಿಯ ರಕ್ಷಣೆಗಾಗಿ ಸತ್ಪುರುಷರು ಮದ್ಯಪಾನವನ್ನು ಸರ್ವಥಾ ತ್ಯಾಗಮಾಡಿದ್ದಾರೆ.

ಶುಭ್ರವಾದ ಮಂದಹಾಸದಿಂದ ಕೂಡಿರುವವಳೇ! ದೇವಿ! ಈಗ ಪುಣ್ಯದ ವಿಧಾನವನ್ನು ಕೇಳು. ಸುಕೃತವೂ ಮೂರು ಪ್ರಕಾರವಾಗಿ ಹೇಳಲ್ಪಟ್ಟಿದೆ. ಅದನ್ನು ಸಂಕ್ಷೇಪಿಸಿ ಹೇಳುವೆನು ; ಕೇಳು.

ತ್ರೈವಿಧ್ಯದೋಷೋಪರಮೋ ಯಸ್ತು ದೋಷವ್ಯಪೇಕ್ಷಯಾ ।
ಸ ಹಿ ಪ್ರಾಪ್ನೋತಿ ಸಕಲಂ ಸರ್ವದುಃಖವಿವರ್ಜನಾತ್ ॥೬೭೦॥

ಮನಸ್ಸು, ಮಾತು ಮತ್ತು ಶರೀರ–ಈ ಮೂರರಿಂದ ಉಂಟಾಗುವ

ದೋಷಗಳಿಂದ ನಿವೃತ್ತನಾದ ಬಳಿಕ ಸಕಲದೋಷಗಳ ಉಪೇಕ್ಷೆಯಿಂದಾಗಿ ಸಮಸ್ತವಾದ ಪಾಪಕರ್ಮಗಳೂ ವರ್ಜಿಸಲ್ಪಡುವುದರಿಂದ ಅಂತಹ ಮನುಷ್ಯನು ಸಕಲಶುಭಕರ್ಮಗಳ ಫಲಗಳನ್ನು ಪಡೆಯುತ್ತಾನೆ. (ಮನಸ್ಸು, ಮಾತು ಮತ್ತು ಕರ್ಮಗಳಲ್ಲಿನ ದೋಷತ್ಯಾಗವೇ ಸುಕೃತವಾಗಿ ಪರಿಣಮಿಸುತ್ತದೆ. ಇತರರ ವಿಷಯದಲ್ಲೂ ಅಸೂಯೆಪಡದೇ ಸದ್ಭಾವನೆಯಿಂದಿದ್ದರೆ ಅದರಿಂದ ಸುಕೃತವುಂಟಾಗುತ್ತದೆ. ಕೆಟ್ಟಮಾತನ್ನಾಡದೇ ಒಳ್ಳೆಯ ಮಾತನ್ನಾಡಿದರೆ ಅದರಿಂದಲೇ ಪುಣ್ಯಪ್ರಾಪ್ತಿ. ಅಗಮ್ಯಾಗಮನಾದಿ ದೋಷಗಳನ್ನು ಪರಿತ್ಯಜಿಸಿ ತನ್ನ ಪತ್ನಿಯಲ್ಲಿಯೇ ಅನುರಕ್ತನಾಗಿದ್ದರೆ ಅದೂ ಸುಕೃತವೇ ಆಗುತ್ತದೆ.)

ಪ್ರಥಮಂ ವರ್ಜಯೇದ್ದೋಷಾನ್ಯುಗಪತ್ಪೃಥಗೇವ ವಾ ।
ತಥಾ ಧರ್ಮಮವಾಪ್ನೋತಿ ದೋಷತ್ಯಾಗೋ ಹಿ ದುಷ್ಕರಃ ॥೬೭೩॥

ಮೊದಲು ಮೂರು ವಿಧವಾದ ದೋಷಗಳನ್ನೂ ಏಕಕಾಲದಲ್ಲಿ ಪರಿತ್ಯಜಿಸಬೇಕು. ಹಾಗೆ ಸಾಧ್ಯವಾಗದಿದ್ದರೆ ಒಂದೊಂದನ್ನೇ ತ್ಯಾಗಮಾಡುತ್ತಾ ಅನುಕ್ರಮವಾಗಿ ಮೂರನ್ನೂ ತ್ಯಜಿಸಬೇಕು. ಹಾಗೆ ಮಾಡಿದರೆ ಧರ್ಮಪ್ರಾಪ್ತಿಯಾಗುತ್ತದೆ. ಆದರೆ ದೋಷಗಳನ್ನು ಪರಿತ್ಯಜಿಸುವುದು ಅತ್ಯಂತ ದುಷ್ಕರವೇ ಸರಿ.

ದೋಷಸಾಕಲ್ಯಸಂತ್ಯಾಗಾನ್ಮುನಿರ್ಭವತಿ ಮಾನವಃ ।
ಸೌಕರ್ಯಂ ಪಶ್ಯ ಧರ್ಮಸ್ಯ ಕಾರ್ಯಾರಮ್ಭಾದೃತೇಽಪಿ ಚ ।
ಆತ್ಮೋಪಲಬ್ಧೋಪರಮಾಲ್ಲಭನ್ತೇ ಸುಕೃತಂ ಪರಮ್ ॥೬೭೪॥

ಮನೋವಾಕ್ಕಾಯಸಂಬಂಧವಾದ ಸಮಸ್ತದೋಷಗಳನ್ನೂ ತ್ಯಾಗಮಾಡುವುದರಿಂದ ಮನುಷ್ಯನು ಮುನಿಯಾಗುತ್ತಾನೆ. ದೇವಿ! ಧರ್ಮಸಂಪಾದನೆಯು ಎಷ್ಟು ಸುಲಭವೆಂಬುದನ್ನು ಗಮನಿಸು. ಧರ್ಮಸಂಬಂಧವಾದ ಯಾವುದೇ ಕಾರ್ಯವನ್ನು ಆರಂಭಿಸದೆಯೇ ಇದ್ದರೂ ತನ್ನಲ್ಲಿರುವ ದೋಷಗಳನ್ನು ತ್ಯಾಗಮಾಡುವುದರಿಂದಲೇ ಮನುಷ್ಯರು ಶ್ರೇಷ್ಠವಾದ ಸುಕೃತವನ್ನು ಪಡೆದುಕೊಳ್ಳುತ್ತಾರೆ.

ಅಹೋ ನೃಶಂಸಾಃ ಪಚ್ಯನ್ತೇ ಮಾನುಷಾಃ ಸ್ವಲ್ಪಬುದ್ಧಯಃ ।

ಯೇ ತಾದೃಶಂ ನ ಬುಧ್ಯನ್ತೇ ಆತ್ಮಾಧೀನಂ ಚ ನಿರ್ವೃತಾಃ ।
ದುಷ್ಕೃತತ್ಯಾಗಮಾತ್ರೇಣ ಪದಮೂರ್ಧ್ವಂ ಹಿ ಲಭ್ಯತೇ ॥೬೭॥

ಅಯ್ಯೋ! ಅಲ್ಪಮತಿಗಳಾದ, ಕ್ರೂರಿಗಳಾದ ಮನುಷ್ಯರು ನರಕದಲ್ಲಿ ಬೇಯಿಸಲ್ಪಡುತ್ತಾರೆ. ಪುಣ್ಯಸಂಪಾದನೆಯು ತಮ್ಮ ಅಧೀನದಲ್ಲಿಯೇ ಇದೆ ಯೆಂಬುದನ್ನು ಅವರು ನಿರ್ಧರವಾಗಿ ತಿಳಿದವರಾಗಿಲ್ಲ. ಕೇವಲ ಮನೋ ವಾಕ್ಕಾಯಸಂಬಂಧವಾದ ದುಷ್ಕೃತಗಳ ತ್ಯಾಗದಿಂದಲೇ ಮಾನವರು ಸುಖಿಗಳಾಗುತ್ತಾರೆ ಮತ್ತು ಅವಸಾನಾನಂತರದಲ್ಲಿ ಅವರಿಗೆ ಸ್ವರ್ಗವೇ ಲಭಿಸುತ್ತದೆ.

ಪಾಪಭೀರುತ್ವಮಾತ್ರೇಣ ದೋಷಾಣಾಂ ಪರಿವರ್ಜನಾತ್ ।
ಸುಶೋಭನೋ ಭವೇದ್ದೇವಿ ಋಜುರ್ಧರ್ಮವ್ಯಪೇಕ್ಷಯಾ ॥೬೭॥

ಪಾಪಕರ್ಮಗಳನ್ನು ಮಾಡಲು ಭಯಪಡುವುದರಿಂದಲೂ, ದೋಷ ಗಳ ಪರಿತ್ಯಾಗದಿಂದಲೂ, ನಿಷ್ಕಪಟವಾದ ಧರ್ಮವನ್ನು ಅಪೇಕ್ಷಿಸುವುದ ರಿಂದಲೂ ಮನುಷ್ಯನಿಗೆ ಕಲ್ಯಾಣವುಂಟಾಗುತ್ತದೆ.

ಶ್ರುತ್ವಾ ಚ ಬುದ್ಧಿಸಂಯೋಗಾದಿನ್ದ್ರಿಯಾಣಾಂ ಚ ನಿಗ್ರಹಾತ್ ।
ಸಂತೋಷಾಚ್ಚ ಧೃತೇಶ್ಚೈವ ಶಕ್ಯತೇ ದೋಷವರ್ಜನಮ್ ॥೬೭॥

ಜ್ಞಾನಿಗಳ ಸಂಪರ್ಕದಿಂದಲೂ, ಧರ್ಮೋಪದೇಶಗಳನ್ನು ಕೇಳುವುದ ರಿಂದಲೂ, ಇಂದ್ರಿಯಗಳನ್ನು ನಿಗ್ರಹಿಸುವುದರಿಂದಲೂ, ಸಂತೋಷ ದಿಂದಲೂ ಮತ್ತು ಧೈರ್ಯದಿಂದಲೂ ಮನೋವಾಕ್ಕಾಯಗಳ ಸಂಬಂಧ ವಾದ ದೋಷಗಳನ್ನು ತ್ಯಜಿಸಲು ಸಾಧ್ಯವಾಗುತ್ತದೆ.

ತದೇವ ಧರ್ಮಮಿತ್ಯಾಹುರ್ದೋಷಸಂಯಮನಂ ಪ್ರಿಯೇ ।
ಯಮಧರ್ಮೇಣ ಧರ್ಮೋಽಸ್ತಿ ನಾನ್ಯಃ ಶುಭತರಃ ಪ್ರಿಯೇ ॥೬೭॥

ಪ್ರಿಯಳೇ! ದೋಷವನ್ನು ಸಂಯಮಿಸುವುದನ್ನೇ (ನಿಯಂತ್ರಿಸುವು ದನ್ನೇ) ಧರ್ಮವೆನ್ನುತ್ತಾರೆ. ದೋಷಸಂಯಮರೂಪವಾದ ಧರ್ಮದ ಪರಿಪಾಲನೆಯಿಂದ ಯಾವ ಪುಣ್ಯವು ಲಭಿಸುವುದೋ–ಅಂತಹ ಪುಣ್ಯವು ಬೇರೆ ಯಾವುದರಿಂದಲೂ ಲಭಿಸುವುದಿಲ್ಲ. ಇದಕ್ಕಿಂತಲೂ ಶುಭತರ ವಾದುದು ಬೇರೆ ಯಾವುದೂ ಇಲ್ಲ.

ಯಮುಧರ್ಮೇಣ ಯತಯಃ ಪ್ರಾಪ್ನುವನ್ತ್ಯುತ್ತಮಾಂ ಗತಿಮ್ ।
ಈಶ್ವರಾಣಾಂ ಪ್ರಭವತಾಂ ದರಿದ್ರಾಣಾಂ ಚ ವೈ ನೃಣಾಮ್ ।
ಸಫಲೋ ದೋಷಸಂತ್ಯಾಗೋ ದಾನಾದಪಿ ಶುಭಾದಪಿ ॥೬೭೬॥

ದೋಷಗಳ ಸಂಯಮವೆಂಬ ಈ ಧರ್ಮದಿಂದ ಯತಿಗಳು ಉತ್ತಮ ಗತಿಯನ್ನು ಹೊಂದುತ್ತಾರೆ. ಪ್ರಭಾವಶಾಲಿಗಳಾದ ಧನಿಕರಿಗೂ, ದರಿದ್ರ ಮನುಷ್ಯರಿಗೂ ಮನೋವಾಕ್ಕಾಯಗಳ ದೋಷತ್ಯಾಗವೇ ದಾನಕ್ಕಿಂತಲೂ ಶುಭಕರ್ಮಗಳಿಗಿಂತಲೂ ಉತ್ತಮವಾದ ಫಲವನ್ನು ಕೊಡುತ್ತದೆ.

ತಪೋ ದಾನಂ ಮಹಾದೇವಿ ದೋಷಮಲ್ಪಂ ಹಿ ನಿರ್ಹರೇತ್ ।
ಸುಕೃತಂ ಯಾಮಿಕಂ ಚೋಕ್ತಂ ವಕ್ಷ್ಯೇ ನಿರುಪಸಾಧನಮ್ ॥೬೭೭॥

ತಪಸ್ಸೇ ಆಗಲೀ ದಾನವೇ ಆಗಲೀ–ಅಲ್ಪವಾದ ದೋಷವನ್ನು ಪರಿಹರಿಸುತ್ತದೆ. ಆದರೆ ದೋಷಸಂತ್ಯಾಗವು ಪುಣ್ಯವೆಂದೇ ಹೇಳಲ್ಪಟ್ಟಿದೆ. ಹೀಗೆ ನಾನು ನಿನಗೆ ದೋಷಸಂಯಮಸಂಬಂಧವಾದ ಸುಕೃತವನ್ನು ಹೇಳಿದೆನು. ಈಗ ಯಾವ ಸಾಧನವೂ ಇಲ್ಲದೇ ಸುಕೃತವನ್ನು ಪಡೆಯಬಹುದಾದ ಉಪಾಯವನ್ನು ಹೇಳುತ್ತೇನೆ.

ಸುಖಾಭಿಸನ್ಧಿರ್ಲೋಕಾನಾಂ ಸತ್ಯಂ ಶೌಚಮಥಾರ್ಜವಮ್ ।
ವ್ರತೋಪವಾಸಃ ಪ್ರೀತಿಶ್ಚ ಬ್ರಹ್ಮಚರ್ಯಂ ದಮಃ ಶಮಃ ॥೬೭೮॥

ಏವಮಾದಿ ಶುಭಂ ಕರ್ಮ ಸುಕೃತಂ ನಿಯಮಾಶ್ರಿತಮ್ ।
ಶೃಣು ತೇಷಾಂ ವಿಶೇಷಾಂಶ್ಚ ಕೀರ್ತಯಿಷ್ಯಾಮಿ ಭಾಮಿನಿ ॥೬೭೯॥

ಜಗತ್ತಿನಲ್ಲಿರುವ ಮನುಷ್ಯರೆಲ್ಲರಿಗೂ ಸುಖವಾಗಲೆಂಬ ಶುಭಕಾಮನೆ, ಸತ್ಯನಿಷ್ಠೆ, ಪವಿತ್ರತೆ, ಸರಳತೆ, ವ್ರತಸಂಬಂಧವಾದ ಉಪವಾಸ, ಪ್ರೀತಿ, ಬ್ರಹ್ಮಚರ್ಯ, ದಮ ಮತ್ತು ಶಮ ಮುಂತಾದ ಶುಭಕರ್ಮಗಳು ನಿಯಮವನ್ನೇ ಅವಲಂಬಿಸಿವೆ. ಭಾಮಿನಿ! ಈಗ ನಾನು ನಿನಗೆ ಇವುಗಳಲ್ಲಿರುವ ವಿಶೇಷಭೇದಗಳನ್ನು ಹೇಳುತ್ತೇನೆ.

ಸತ್ಯಂ ಸ್ವರ್ಗಸ್ಯ ಸೋಪಾನಂ ಪಾರಾವಾರಸ್ಯ ನೌರಿವ ।
ನಾಸ್ತಿ ಸತ್ಯಾತ್ಪರಂ ದಾನಂ ನಾಸ್ತಿ ಸತ್ಯಾತ್ಪರಂತಪಃ ॥೬೮೦॥

ನೌಕೆಯು ಸಮುದ್ರವನ್ನು ದಾಟಲು ಸಾಧನವಾಗಿರುವಂತೆ–ಸತ್ಯವು

ಸ್ವರ್ಗಕ್ಕೆ ಹೋಗಲು ಸೋಪಾನದಂತಿದೆ. ದಾನವು ಕೂಡ ಸತ್ಯಕ್ಕಿಂತ ಶ್ರೇಷ್ಠವಾದುದಲ್ಲ. ತಪಸ್ಸೂ ಸತ್ಯಕ್ಕಿಂತ ಶ್ರೇಷ್ಠವಾದುದಲ್ಲ. (ಸತ್ಯನಿಷ್ಠೆಗಿಂತಲೂ ಶ್ರೇಷ್ಠವಾದ ತಪಸ್ಸು ಮತ್ತೊಂದಿಲ್ಲ.)

ಯಥಾ ಶ್ರುತಂ ಯಥಾ ದೃಷ್ಟಮಾತ್ಮನಾ ಯದ್ಯಥಾ ಕೃತಮ್ ।
ತಥಾ ತಸ್ಯಾವಿಕಾರೇಣ ವಚನಂ ಸತ್ಯಲಕ್ಷಣಮ್ ॥೬೮೪॥

ಯಾವ ರೀತಿಯಲ್ಲಿ ಕೇಳಿಸಿತೋ, ಯಾವ ರೀತಿಯಲ್ಲಿ ಕಂಡಿತೋ, ಯಾವ ರೀತಿಯಲ್ಲಿ ಮಾಡಲ್ಪಟ್ಟಿತೋ–ಅದನ್ನೇ ಸ್ವಲ್ಪವಾದರೂ ವಿಕಾರಗೊಳಿಸದೇ ಹೇಳುವುದೇ ಸತ್ಯದ ಲಕ್ಷಣವಾಗಿದೆ.

ಯಚ್ಛಲೇನಾಭಿಸಂಯುಕ್ತಂ ಸತ್ಯರೂಪಂ ಮೃಷೈವ ತತ್ ।
ಸತ್ಯಮೇವ ಪ್ರವಕ್ತವ್ಯಂ ಪಾರಾವರ್ಯಂ ವಿಜಾನತಾ ॥೬೮೫॥

ನಿಜಾಂಶವನ್ನು ಮರೆಮಾಚಿ ಹೇಳುವ ಸತ್ಯದಂತೆಯೇ ಕಾಣುವ ಮಾತು ಕೂಡ ಅಸತ್ಯವೇ ಸರಿ. ಸತ್ಯಾಸತ್ಯಗಳ ಶುಭಾಶುಭಪರಿಣಾಮವನ್ನು ತಿಳಿದಿರುವ ವಿದ್ವಾಂಸನು ಸತ್ಯವನ್ನೇ ಹೇಳಬೇಕು.

ದೀರ್ಘಾಯುಶ್ಚ ಭವೇತ್ಸತ್ಯಾತ್ಕುಲಸಂತಾನಪಾಲಕಃ ।
ಲೋಕಸಂಸ್ಥಿತಿಪಾಲಶ್ಚ ಭವೇತ್ಸತ್ಯೇನ ಮಾನವಃ ॥೬೮೬॥

ಸತ್ಯಪಾಲನೆಯಿಂದ ಮನುಷ್ಯನು ದೀರ್ಘಾಯುಷ್ಮಂತನಾಗುತ್ತಾನೆ. ಸತ್ಯದಿಂದ ಕುಲಪರಂಪರೆಯ ಪಾಲಕನಾಗುತ್ತಾನೆ ಮತ್ತು ಲೋಕಮರ್ಯಾದೆಯ ಸಂರಕ್ಷಕನಾಗುತ್ತಾನೆ."

ಉಮೆ :

ಕಥಂ ಸಂಧಾರಯನ್ಮರ್ತ್ಯೋ ವ್ರತಂ ಶುಭಮವಾಪ್ನುಯಾತ್ ॥೬೮೭॥

"ಪರಮೇಶ್ವರ! ಮನುಷ್ಯನು ಯಾವ ರೀತಿಯಲ್ಲಿ ವ್ರತವನ್ನು ಆಚರಿಸಿ ಶುಭಫಲವನ್ನು ಹೊಂದುತ್ತಾನೆ?"

ಪರಮೇಶ್ವರ :

ಪೂರ್ವಮುಕ್ತಂ ತು ಯತ್ಪಾಪಂ ಮನೋವಾಕ್ಕಾಯಕರ್ಮಭಿಃ ।
ವ್ರತವತ್ತಸ್ಯ ಸಂತ್ಯಾಗಸ್ತಪೋವ್ರತಮಿತಿ ಸ್ಮೃತಮ್ ॥೬೮೮॥

“ನಾನು ಹಿಂದೆ ಮನೋವಾಕ್ಕಾಯಕರ್ಮಗಳಿಂದ ಯಾವ ದೋಷ ಗಳುಂಟಾಗುತ್ತವೆಯೆಂದು ಹೇಳಿದ್ದೆನೋ–ಅವುಗಳನ್ನು ವ್ರತದಂತೆ ಪರಿತ್ಯಜಿ ಸುವುದೇ ತಪೋವ್ರತವೆಂದು ಹೇಳಲ್ಪಟ್ಟಿದೆ.

ಶುದ್ಧಕಾಯೋ ನರೋ ಭೂತ್ವಾ ಸ್ನಾತ್ವಾ ತೀರ್ಥೇ ಯಥಾವಿಧಿ ।
ಪಞ್ಚಭೂತಾನಿ ಚನ್ದ್ರಾರ್ಕೌ ಸಂಧ್ಯೇ ಧರ್ಮಯಮೌ ಪಿತೄನ್ ।
ಆತ್ಮನ್ಯೈವ ತಥಾತ್ಮಾನಂ ನಿವೇದ್ಯ ವ್ರತವಚ್ಚರೇತ್ ॥೬೯॥

ಮನುಷ್ಯನು ತೀರ್ಥದಲ್ಲಿ ಯಥಾವಿಧಿಯಾಗಿ ಸ್ನಾನಮಾಡಿ ಶುದ್ಧ ಶರೀರನಾಗಿ-ಪಂಚಭೂತಗಳನ್ನೂ, ಸೂರ್ಯ-ಚಂದ್ರರನ್ನೂ, ಎರಡು ಸಂಧ್ಯೆ ಗಳನ್ನೂ, ಧರ್ಮವನ್ನೂ, ಯಮನನ್ನೂ ಮತ್ತು ಪಿತೃಗಳನ್ನೂ ತನ್ನಲ್ಲಿಯೇ ಇರುವವರನ್ನಾಗಿ ಭಾವಿಸಿಕೊಂಡು ಅವರಿಗೆ ತನ್ನನ್ನು ಸಮರ್ಪಿಸಿಕೊಂಡು ವ್ರತವನ್ನು ಕೈಗೊಂಡು ಧರ್ಮಾಚರಣೆಯನ್ನು ಮಾಡಬೇಕು.

ವ್ರತಮಾಮರಣಾದ್ವಾಪಿ ಕಾಲಚ್ಛೇದೇನ ವಾ ಹರೇತ್ ।
ಶಾಕಾದಿಷು ವ್ರತಂ ಕುರ್ಯಾತ್ತಥಾ ಪುಷ್ಪಫಲಾದಿಷು ।
ಬ್ರಹ್ಮಚರ್ಯವ್ರತಂ ಕುರ್ಯಾದುಪವಾಸವ್ರತಂ ತಥಾ ॥೭೦॥

ವ್ರತವನ್ನು ಮರಣಪರ್ಯಂತವಾಗಿ ಕೈಗೊಳ್ಳಬಹುದು ಅಥವಾ ಇಂತಿಷ್ಟು ಕಾಲದವರೆಗೆ-ಎಂದು ಸಂಕಲ್ಪಿಸಿಯಾದರೂ ವ್ರತವನ್ನು ಕೈಗೊಳ್ಳ ಬಹುದು. ಕಾಯಿ-ಪಲ್ಯಗಳಲ್ಲಿ ವ್ರತವನ್ನು ಕೈಗೊಳ್ಳಬಹುದು. (ನನಗೆ ಪ್ರಿಯವಾದ ಇಂತಹ ತರಕಾರಿಯನ್ನು ಇಷ್ಟುಕಾಲ ಬಿಡುತ್ತೇನೆ–ಮುಂತಾಗಿ ವ್ರತವನ್ನು ಕೈಗೊಳ್ಳಬಹುದು). ಹೀಗೆಯೇ ಪುಷ್ಪ-ಫಲಾದಿಗಳಲ್ಲಿಯೂ ವ್ರತವನ್ನು ಕೈಗೊಳ್ಳಬಹುದು. ಬ್ರಹ್ಮಚರ್ಯವ್ರತವನ್ನೂ ಸ್ವೀಕರಿಸಬಹುದು. ಅಂತೆಯೇ ಉಪವಾಸವ್ರತವನ್ನು ಕೈಗೊಳ್ಳಬಹುದು.

ಏವಮನ್ಯೇಷು ಬಹುಷು ವ್ರತಂ ಕಾರ್ಯಂ ಹಿತೈಷಿಣಾ ।
ವ್ರತಭಙ್ಗೋ ಯಥಾ ನ ಸ್ಯಾದ್ರಕ್ಷಿತವ್ಯಂ ತಥಾ ಬುಧೈಃ ॥೭೧॥

ಹಿತವನ್ನು ಬಯಸುವವನು ಹೀಗೆಯೇ ಇತರ ಇನ್ನೂ ಅನೇಕವ್ರತ ಗಳನ್ನು ಕೈಗೊಳ್ಳಬಹುದು. ಆದರೆ ವ್ರತವನ್ನು ಕೈಗೊಂಡನಂತರ ಅದಕ್ಕೆ

ಯಾವ ರೀತಿಯಿಂದಲೂ ಭಂಗವುಂಟಾಗದ ರೀತಿಯಲ್ಲಿ ವಿದ್ವಾಂಸನಾದವನು ವ್ರತವನ್ನು ಪೂರ್ಣಗೊಳಿಸಬೇಕು.

ವ್ರತಭಙ್ಗೇ ಮಹತ್ಪಾಪಮಿತಿ ವಿದ್ಧಿ ಶುಭೇಕ್ಷಣೇ ।
ಔಷಧಾರ್ಥಂ ಯದಜ್ಞಾನಾದ್ಗುರೂಣಾಂ ವಚನಾದಪಿ ।
ಅನುಗ್ರಹಾರ್ಥಂ ಬನ್ಧೂನಾಂ ವ್ರತಭಙ್ಗೋ ನ ದುಷ್ಯತೇ ॥೬೨॥

ಶುಭೇಕ್ಷಣಳೇ! ಕೈಗೊಂಡ ವ್ರತವು ಭಂಗವಾಗಿಬಿಟ್ಟರೆ ಮಹಾಪಾಪವು ಸಂಭವಿಸುತ್ತದೆ. ಆದರೆ ಆ ಸಮಯದಲ್ಲಿ ರೋಗವು ಬಂದು ಔಷಧವನ್ನು ತೆಗೆದುಕೊಳ್ಳುವ ಸಲುವಾಗಿ, ಅಜ್ಞಾನವಶದಿಂದ, ಗುರುಗಳ ಆಜ್ಞೆಯನ್ನು ಪರಿಪಾಲಿಸುವ ಸಲುವಾಗಿ, ಬಂಧುಜನರನ್ನು ಅನುಗ್ರಹಿಸುವ ಸಲುವಾಗಿ ವ್ರತಭಂಗವುಂಟಾದರೂ ಅದರಿಂದ ವ್ರತವನ್ನು ಕೈಗೊಂಡವನು ದೂಷ್ಯನಾಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಉಂಟಾಗುವ ವ್ರತಭಂಗದಿಂದ ಪಾಪವು ಸಂಘಟಿಸುವುದಿಲ್ಲ.

ವ್ರತಾಪವರ್ಗಕಾಲೇ ತು ದೈವಬ್ರಾಹ್ಮಣಪೂಜನಮ್ ।
ನರೇಣ ತು ಯಥಾವದ್ಧಿ ಕಾರ್ಯಸಿದ್ಧಿಂ ಯಥಾಪ್ನುಯಾತ್ ॥೬೩॥

ವ್ರತವು ಪರಿಸಮಾಪ್ತಿಯಾಗುವ ಸಮಯದಲ್ಲಿ ದೇವ-ಬ್ರಾಹ್ಮಣರನ್ನು ಯಥಾವಿಧಿಯಾಗಿ ಸಂಪೂಜಿಸಬೇಕು. ಹೀಗೆ ಮಾಡುವುದರಿಂದ ವ್ರತಿಯು ಕಾರ್ಯಸಿದ್ಧಿಯನ್ನು ಹೊಂದುತ್ತಾನೆ. (ಅವನ ಕಾರ್ಯಗಳು ಸಿದ್ಧಿಸುತ್ತವೆ.)"

ಉಮೆ :

"ಪರಮೇಶ್ವರ! ವ್ರತಾನುಷ್ಠಾನಸಮಯದಲ್ಲಿ ಶೌಚಾಚಾರಗಳು ಹೇಗಿರಬೇಕೆಂಬುದನ್ನು ಹೇಳು."

ಮಹೇಶ್ವರ :

ಬಾಹ್ಯಮಾಭ್ಯನ್ತರಂ ಚೇತಿ ದ್ವಿವಿಧಂ ಶೌಚಮಿಷ್ಯತೇ ।
ಮಾನಸಂ ಸುಕೃತಂ ಯತ್ತಚ್ಛೌಚಮಾಭ್ಯನ್ತರಂ ಸ್ಮೃತಮ್ ॥೬೪॥

"ಉಮೆ! ಶೌಚದಲ್ಲಿ-ಬಾಹ್ಯ (ಹೊರಗಿನ) ಶೌಚ ಮತ್ತು ಆಭ್ಯಂತರ (ಒಳಗಿನ) ಶೌಚ–ಎಂಬ ಎರಡು ವಿಧಗಳಿವೆ. ಮಾನಸಿಕಸುಕೃತವೆಂದು

ಹಿಂದೆ ಯಾವುದು ಹೇಳಲ್ಪಟ್ಟಿದ್ದಿತೋ–ಅದನ್ನೇ ಆಭ್ಯಂತರಶೌಚವೆಂದೂ ಕರೆಯುತ್ತಾರೆ.

ಸದಾಹಾರವಿಶುದ್ಧಿಶ್ಚ ಕಾಯಪ್ರಕ್ಷಾಲನಂ ತು ಯತ್ ।
ಬಾಹ್ಯಶೌಚಂ ಭವೇದೇತತ್ತಥೈವಾಚಮನಾದಿನಾ ॥೯೬॥

ಶುದ್ಧವಾದ ಆಹಾರವನ್ನು ತೆಗೆದುಕೊಳ್ಳುವುದು, ಮೈತೊಳೆದುಕೊಳ್ಳುವುದು, ಆಚಮನಮಾಡುವುದು ಇವೆಲ್ಲವೂ ಬಾಹ್ಯಶುದ್ಧಿಗಳಾಗುತ್ತವೆ.

ಮೃಚ್ಚೈವ ಶುದ್ಧದೇಶಸ್ಥಾ ಗೋಶಕೃನ್ಮೂತ್ರಮೇವ ಚ ।
ದ್ರವ್ಯಾಣಿ ಗನ್ಧಯುಕ್ತಾನಿ ಯಾನಿ ಪುಷ್ಟಿಕರಾಣಿ ಚ ।
ಏತೈಃ ಸಮ್ಮಾರ್ಜನೈಃ ಕಾಯಮಮ್ಭಸಾ ಚ ಪುನಃ ಪುನಃ ॥೯೭॥

ಶುದ್ಧವಾದ ಸ್ಥಳದಲ್ಲಿರುವ ಮಣ್ಣು, ಗೋವಿನ ಸಗಣಿ, ಗೋಮೂತ್ರ, ಸುಗಂಧಯುಕ್ತವಾದ ದ್ರವ್ಯಗಳು, ಪೌಷ್ಟಿಕಪದಾರ್ಥಗಳು–ಇವೆಲ್ಲವೂ ಸೇರಿರುವ ನೀರಿನಿಂದ ಮಾರ್ಜನೆಮಾಡಿಕೊಂಡು ಪುನಃ ಪುನಃ ನೀರಿನಿಂದ ಮೈತೊಳೆದುಕೊಳ್ಳಬೇಕು.

ಅಕ್ಷೋಭ್ಯಂ ಯತ್ತ್ವಕೀರ್ಣಂ ಚ ನಿತ್ಯಸ್ರೋತಶ್ಚ ಯಜ್ಜಲಮ್ ।
ಪ್ರಾಯಶಸ್ತಾದೃಶೇ ಮಜ್ಜೇದನ್ಯಥಾ ಚ ವಿವರ್ಜಯೇತ್ ॥೯೮॥

ಯಾವ ನೀರು ಅಲ್ಲೋಲ-ಕಲ್ಲೋಲವಾಗಿ ಕೆಸರಿನಿಂದ ಕೂಡಿರುವುದಿಲ್ಲವೋ, ಯಾವ ಜಲಾಶಯವು ವಿಸ್ತಾರವಾಗಿರುವುದೋ, ಹರಿದು ಹೋಗುತ್ತಿರುತ್ತದೆಯೋ–ಅಂತಹ ನೀರಿನಲ್ಲಿಯೇ ಸಾಧ್ಯವಾದಮಟ್ಟಿಗೂ ಸ್ನಾನಮಾಡಬೇಕು. ಬಗ್ಗಡವಿರುವ, ಒಂದೇ ಕಡೆಯಲ್ಲಿ ನಿಂತಿರುವ ಚಿಕ್ಕದಾದ ಹಳ್ಳದ ನೀರಿನಲ್ಲಿ ಸ್ನಾನಮಾಡಬಾರದು.

ತ್ರಿಸ್ತ್ರಿರಾಚಮನಂ ಶ್ರೇಷ್ಠಂ ನಿರ್ಮಲೈರುದ್ಧೃತೈರ್ಜಲೈಃ ।
ತಥಾ ವಿಣ್ಮೂತ್ರಯೋಃ ಶುದ್ಧಿರದ್ಭಿರ್ಬಹುಮೃದಾ ಭವೇತ್ ॥೯೯॥

ನಿರ್ಮಲವಾದ ನೀರನ್ನು ಕೈಯಲ್ಲಿ ತೆಗೆದುಕೊಂಡು ಮೂರುಬಾರಿ ಆಚಮನಮಾಡುವುದು ಶ್ರೇಷ್ಠವಾದುದು. ಮಲ-ಮೂತ್ರಗಳ ವಿಸರ್ಜನೆಯ ಸ್ಥಾನಗಳ ಶುದ್ಧಿಯು ನೀರಿನಿಂದಲೂ ಮಣ್ಣಿನಿಂದಲೂ ಆಗುತ್ತದೆ.

ತಥೈವ ಜಲಸಂಶುದ್ಧಿರ್ಯತ್ಸಂಶುದ್ಧಂ ತು ಸಂಸ್ಪೃಶೇತ್ ॥೨೦೦॥

ಹಾಗೆಯೇ ನೀರಿನ ಶುದ್ಧಿಯ ವಿಷಯದಲ್ಲಿಯೂ ಗಮನವನ್ನು ಕೊಡಬೇಕು. ಶುದ್ಧವಾದ ನೀರಿನಿಂದಲೇ ಆಚಮನವನ್ನೂ ಸ್ನಾನವನ್ನೂ ಮಾಡಬೇಕು.

ಶಕೃತಾ ಭೂಮಿಶುದ್ಧಿಃ ಸ್ಯಾಲ್ಲೌಹಾನಾಂ ಭಸ್ಮನಾ ಸ್ಮೃತಮ್ ।
ತಕ್ಷಣಂ ಘರ್ಷಣಂ ಚೈವ ದಾರವಾಣಾಂ ವಿಶೋಧನಮ್ ॥೨೦೧॥

ಸಗಣಿಯಿಂದ ಸಾರಿಸುವುದರಿಂದ ಭೂಮಿಯು ಶುದ್ಧವಾಗುತ್ತದೆ. ಬೂದಿಯಿಂದ (ಬೂದಿಯನ್ನು ಹಾಕಿಕೊಂಡು ತಿಕ್ಕುವುದರಿಂದ) ಲೋಹದ ಪಾತ್ರೆ-ಪದಾರ್ಥಗಳು ಶುದ್ಧವಾಗುತ್ತವೆ. ಕೆತ್ತುವುದರಿಂದಲೂ, ತಿಕ್ಕುವುದರಿಂದಲೂ ಮರದ ಪಾತ್ರೆಗಳು ಶುದ್ಧವಾಗುತ್ತವೆ.

ದಹನಂ ಮೃಣ್ಮಯಾನಾಂ ಚ ಮರ್ತ್ಯಾನಾಂ ಕೃಚ್ಛ್ರಧಾರಣಮ್ ।
ಶೇಷಾಣಾಂ ದೇವಿ ಸರ್ವೇಷಾಮಾತಪೇನ ಜಲೇನ ಚ ।
ಬ್ರಾಹ್ಮಣಾನಾಂ ಚ ವಾಕ್ಯೇನ ಸದಾ ಸಂಶೋಧನಂ ಭವೇತ್ ॥೨೦೨॥

ಬೆಂಕಿಯಲ್ಲಿ ಕಾಯಿಸುವುದರಿಂದ ಮಣ್ಣಿನ ಪಾತ್ರೆಗಳ ಶುದ್ಧಿಯಾಗುತ್ತದೆ. ಕೃಚ್ಛ್ರ-ಚಾಂದ್ರಾಯಣಾದಿವ್ರತಗಳಿಂದ ಮನುಷ್ಯರು ಶುದ್ಧರಾಗುತ್ತಾರೆ. ಉಳಿದೆಲ್ಲ ವಸ್ತುಗಳೂ ಬಿಸಿಲಿನಿಂದಲೂ, ನೀರಿನಿಂದಲೂ ಮತ್ತು ಬ್ರಾಹ್ಮಣರ ವಚನದಿಂದಲೂ ಶುದ್ಧವಾಗುತ್ತವೆ.

ಅದೃಷ್ಟಮದ್ಭಿರ್ನಿರ್ಣಿಕ್ತಂ ಯಚ್ಚ ವಾಚಾ ಪ್ರಶಸ್ಯತೇ ।
ಏವಮಾಪದಿ ಸಂಶುದ್ಧಿರೇವಂ ಶೌಚಂ ವಿಧೀಯತೇ ॥೨೦೩॥

ಯಾವುದರಲ್ಲಿರುವ ದೋಷವು ಕಣ್ಣಿಂದ ಕಾಣುವುದಿಲ್ಲವೋ ಅಂತಹುದನ್ನು ನೀರಿನಿಂದ ತೊಳೆದು ಹೋಗಲಾಡಿಸಬಹುದು.* ಯಾವುದು ವಿದ್ವಾಂಸರಿಂದ ಮಾತಿನ ಮೂಲಕವಾಗಿ ಪ್ರಶಂಸಿಸಲ್ಪಡುವುದೋ–ಅದನ್ನು

---

* ನಾಯಿಮುಟ್ಟಿದ ಪಾತ್ರೆಯಲ್ಲಿ ದೋಷವಿರುವುದು ಸಹಜ. ಆದರೆ ಕಣ್ಣಿಗೆ ಕಾಣುವುದಿಲ್ಲ. ಆ ಪಾತ್ರೆಯನ್ನು ನೀರಿನಲ್ಲಿ ತೊಳೆಯುವುದರಿಂದ ಆ ಪಾತ್ರೆಯು ಶುದ್ಧವಾಗುತ್ತದೆ.

ಶುದ್ಧವಾಗಿರುವುದೆಂದೇ ತಿಳಿಯಬೇಕು. ಹೀಗೆ ಆಪತ್ಕಾಲದಲ್ಲಿ ಶುದ್ಧಿಯ ವ್ಯವಸ್ಥೆಯಿದೆ. ಇದು ಶೌಚದ ವಿಧಾನವಾಗಿದೆ.”

ಉಮೆ :

“ದೇವದೇವನೇ! ಮಹೇಶ್ವರನೇ! ಆಹಾರಶುದ್ಧಿಯು ಹೇಗೆ?–ಎಂಬುದನ್ನು ದಯಮಾಡಿ ಹೇಳು.”

ಮಹೇಶ್ವರ :

ಅಮಾಂಸಮದ್ಯಮಕ್ಲೇದ್ಯಮಪರ್ಯುಷಿತಮೇವ ಚ ।
ಅತಿಕಟ್ವಮ್ಲಲವಣಹೀನಂ ಚ ಶುಭಗನ್ಧಿ ಚ ।
ಕೃಮಿಕೇಶಮಲೈರ್ಹೀನಂ ಸಂವೃತಂ ಶುದ್ಧದರ್ಶನಮ್ ॥೨೦೫॥

ಏವಂವಿಧಂ ಸದಾಹಾರ್ಯಂ ದೇವಬ್ರಾಹ್ಮಣಸತ್ಕೃತಮ್ ।
ಶ್ರೇಷ್ಠಮಿತ್ಯೇವ ತಜ್ಜ್ಞೇಯಮನ್ಯಥಾ ಮನ್ಯತೇಽಶುಭಮ್ ॥೨೦೬॥

“ಯಾವ ಆಹಾರದಲ್ಲಿ ಮಾಂಸ-ಮದ್ಯಗಳಿರುವುದಿಲ್ಲವೋ, ಯಾವುದು ಕೊಳೆತು-ಹಳಸಿಲ್ಲವೋ, ಅತಿಯಾದ ಖಾರ-ಹುಳಿ-ಉಪ್ಪುಗಳಿಂದ ಕೂಡಿಲ್ಲವೋ, ಸುಗಂಧಯುಕ್ತವಾಗಿರುವುದೋ, ಕೃಮಿ-ಕೂದಲು ಮತ್ತು ಕಿಲುಬುಗಳಿಂದ ರಹಿತವಾಗಿರುವುದೋ, ಧೂಳು ಬೀಳದಂತೆ ಮುಚ್ಚಲ್ಪಟ್ಟಿರುವುದೋ, ನೋಡಲು ಶುದ್ಧವಾಗಿ ಕಾಣುವುದೋ, ಯಾವ ಆಹಾರದಿಂದ ದೇವ-ಬ್ರಾಹ್ಮಣರು ಸತ್ಕೃತರಾಗಿರುವರೋ–ಅಂತಹ ಆಹಾರವು ಭೋಜನಕ್ಕೆ ಯೋಗ್ಯವೂ ಮತ್ತು ಶ್ರೇಷ್ಠವೂ ಆದುದೆಂದು ತಿಳಿಯಬೇಕು. ಹೀಗಿಲ್ಲದೇ ಇದಕ್ಕೆ ವಿರುದ್ಧವಾಗಿರುವುದು ಅಶುದ್ಧವೂ ಮತ್ತು ಅಭೋಜ್ಯವೂ ಆಗಿರುವುದೆಂದು ತಿಳಿಯಬೇಕು.

ಗ್ರಾಮ್ಯಾದಾರಣ್ಯಕೈಃ ಸಿದ್ಧಂ ಶ್ರೇಷ್ಠಮಿತ್ಯವಧಾರಯ ।
ಅತಿಮಾತ್ರಗೃಹೀತಾತ್ತು ಅಲ್ಪದತ್ತಂ ಭವೇಚ್ಛುಚಿ ॥೨೦೭॥

ಗ್ರಾಮದಲ್ಲಿನ ಅನ್ನಕ್ಕಿಂತಲೂ ಅರಣ್ಯದಲ್ಲಿ ಸಿಕ್ಕುವ ಪದಾರ್ಥಗಳಿಂದ ಸಿದ್ಧಪಡಿಸಿದ ಅನ್ನವು ಶ್ರೇಷ್ಠವಾದುದೆಂದು ತಿಳಿ. ದೊಡ್ಡ ಪಾತ್ರೆಯಲ್ಲಿ ಅನ್ನವನ್ನಿಟ್ಟುಕೊಂಡು ಹೆಚ್ಚು ಬಡಿಸುವುದಕ್ಕಿಂತಲೂ ಸಣ್ಣ ಪಾತ್ರೆಯಲ್ಲಿ ಸ್ವಲ್ಪ-ಸ್ವಲ್ಪ ಬಡಿಸುವುದೇ ಶುದ್ಧವಾದುದು.

ಯಜ್ಞಶೇಷಂ ಹವಿಃಶೇಷಂ ಪಿತೃಶೇಷಂ ಚ ನಿರ್ಮಲಮ್ ।
ಇತಿ ತೇ ಕಥಿತಂ ದೇವಿ ಭೂಯಃ ಶ್ರೋತುಂ ಕಿಮಿಚ್ಛಸಿ ॥೨೦೮॥

ಯಜ್ಞಶೇಷ, ಹವಿಸ್ಸಿನ ಶೇಷ ಮತ್ತು ಪಿತೃಶೇಷಗಳು ಶುದ್ಧವಾದುದೆಂದು ಹೇಳುತ್ತಾರೆ. ಹೀಗೆ ನಾನು ನಿನಗೆ ಆಹಾರಶುದ್ಧಿಯ ವಿಷಯವಾಗಿ ಹೇಳಿರುತ್ತೇನೆ. ಪುನಃ ಮತ್ತೇನನ್ನು ಕೇಳಬಯಸಿರುವೆ?"

ಉಮೆ :

"ಮಹಾದೇವನೇ! ಕೆಲವರು ಮಾಂಸವನ್ನು ತಿನ್ನುತ್ತಾರೆ ; ಕೆಲವರು ತಿನ್ನುವುದಿಲ್ಲ. ಹೀಗಿರುವಾಗ ಭಕ್ಷ್ಯಾಭಕ್ಷ್ಯಗಳ ನಿರ್ಣಯವನ್ನು ಮಾಡು ವುದು ಹೇಗೆ? ಈ ವಿಷಯವನ್ನು ಹೇಳು."

ಮಹೇಶ್ವರ :

"ಮಾಂಸವನ್ನು ತಿನ್ನುವುದರಲ್ಲಿ ಯಾವ ದೋಷವಿದೆ? ತಿನ್ನದೇ ಇರುವುದರಲ್ಲಿ ಯಾವ ಗುಣವಿದೆಯೆಂಬುದನ್ನು ವಿವರಿಸಿ ಹೇಳುತ್ತೇನೆ ; ಯಥಾವತ್ತಾಗಿ ಈ ವಿಷಯವನ್ನು ಕೇಳು.

ಇಷ್ಟಂ ದತ್ತಮಧೀತಂ ಚ ಕ್ರತವಶ್ಚ ಸದಕ್ಷಿಣಾಃ ।
ಅಮಾಂಸಭಕ್ಷಣಸ್ಯೈವ ಕಲಾಂ ನಾರ್ಹನ್ತಿ ಷೋಡಶೀಮ್ ॥೨೧೧॥

ಯಜ್ಞ, ದಾನ, ವೇದಾಧ್ಯಯನ, ದಕ್ಷಿಣಾಯುಕ್ತವಾದ ಯಜ್ಞಗಳು– ಇವುಗಳು ಮಾಂಸವನ್ನು ತಿನ್ನದೇ ಇರುವುದರ ಹದಿನಾರನೆಯ ಒಂದು ಭಾಗಕ್ಕೂ ಸಮವಲ್ಲ.

ಆತ್ಮಾರ್ಥಂ ಯಃ ಪರಪ್ರಾಣಾನ್ಹಿಂಸ್ಯಾತ್ಸ್ವಾದುಫಲೇಪ್ಸಯಾ ।
ವ್ಯಾಘ್ರಗೃಧ್ರಶೃಗಾಲೈಶ್ಚ ರಾಕ್ಷಸೈಶ್ಚ ಸಮಸ್ತು ಸಃ ॥೨೧೨॥

ನಾಲಿಗೆಯ ರುಚಿಗೋಸ್ಕರ ತನಗಾಗಿ ಯಾವನು ಇತರ ಪ್ರಾಣಿಗಳ ಪ್ರಾಣಗಳನ್ನು ಹಿಂಸಿಸುವನೋ–ಅಂತಹವನು ಹುಲಿ, ರಣಹದ್ದು, ಗುಳ್ಳೇನರಿ ಮತ್ತು ರಾಕ್ಷಸರು–ಇವರಿಗೆ ಸಮಾನನು.

ಸ್ವಮಾಂಸಂ ಪರಮಾಂಸೇನ ಯೋ ವರ್ಧಯಿತುಮಿಚ್ಛತಿ ।
ಉದ್ವಿಗ್ನವಾಸಂ ಲಭತೇ ಯತ್ರ ಯತ್ರೋಪಜಾಯತೇ ॥೨೧೩॥

ಯಾವನು ಇತರ ಪ್ರಾಣಿಗಳ ಮಾಂಸದಿಂದ ತನ್ನ ಮಾಂಸವನ್ನು ವೃದ್ಧಿಪಡಿಸಿಕೊಳ್ಳಲು ಇಚ್ಛಿಸುವನೋ–ಅವನು ಅವಸಾನಾನಂತರದಲ್ಲಿ ಎಲ್ಲೆಲ್ಲಿಯೇ ಹುಟ್ಟಿದರೂ ಯಾವಾಗಲೂ ಉದ್ವಿಗ್ನನಾಗಿಯೇ ಇರುತ್ತಾನೆ.

ಸಂಛೇದನಂ ಸ್ವಮಾಂಸಸ್ಯ ಯಥಾ ಸಂಜನಯೇದ್ರುಜಮ್ ।
ತಥೈವ ಪರಮಾಂಸೇಽಪಿ ವೇದಿತವ್ಯಂ ವಿಜಾನತಾ ॥೭೧೪॥

ತನ್ನ ಶರೀರದ ಮಾಂಸವನ್ನು ಕತ್ತರಿಸಿದಾಗ ವೇದನೆಯಾಗುವಂತೆ–ಇತರರ ಶರೀರಗಳ ಮಾಂಸವನ್ನು ಕತ್ತರಿಸಿದರೆ ಅವರಿಗೂ ವೇದನೆಯುಂಟಾಗುವುದೆಂದು ವಿವೇಕಿಯು ಅರಿತುಕೊಳ್ಳಬೇಕು.

ಯಸ್ತು ಸರ್ವಾಣಿ ಮಾಂಸಾನಿ ಯಾವಜ್ಜೀವಂ ನ ಭಕ್ಷಯೇತ್ ।
ನ ಸ್ವರ್ಗೇ ವಿಪುಲಂ ಸ್ಥಾನಂ ಲಭತೇ ನಾತ್ರ ಸಂಶಯಃ ॥೭೧೫॥

ಯಾವನು ಜನ್ಮಪೂರ್ತಿಯಾಗಿ ಯಾವುದೇ ಮಾಂಸವನ್ನೂ ತಿನ್ನುವುದಿಲ್ಲವೋ–ಅವನು ಸ್ವರ್ಗದಲ್ಲಿ ಸರ್ವಸಮೃದ್ಧವಾದ ಸ್ಥಾನವನ್ನು ಪಡೆದುಕೊಳ್ಳುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ.

ಯತ್ತು ವರ್ಷಶತಂ ಪೂರ್ಣಂ ತಪ್ಯತೇ ಪರಮಂ ತಪಃ ।
ಯಚ್ಚಾಪಿ ವರ್ಜಯೇನ್ಮಾಂಸಂ ಸಮಮೇತನ್ನ ವಾ ಸಮಮ್ ॥೭೧೬॥

ನೂರು ವರ್ಷಗಳ ಕಾಲ ಪೂರ್ತಿಯಾಗಿ ಉತ್ಕೃಷ್ಟವಾದ ತಪಸ್ಸನ್ನು ಮಾಡುವವನು ಮಾಂಸಭಕ್ಷಣವನ್ನು ವರ್ಜಿಸಿರುವವನಿಗೆ ಸಮನಾಗಬಹುದು. ಅಥವಾ ಆಗದೆಯೂ ಇರಬಹುದು. (ನೂರು ವರ್ಷಗಳ ಕಾಲ ಶ್ರೇಷ್ಠವಾದ ತಪಸ್ಸನ್ನು ಮಾಡಿದವನಿಗಿಂತಲೂ ಮಾಂಸತ್ಯಾಗಮಾಡಿದವನೇ ಶ್ರೇಷ್ಠನಾಗಬಹುದು.)

ನ ಹಿ ಪ್ರಾಣೈಃ ಪ್ರಿಯತಮಂ ಲೋಕೇ ಕಿಂಚನ ವಿದ್ಯತೇ ।
ತಸ್ಮಾತ್ಪ್ರಾಣಿದಯಾ ಕಾರ್ಯಾ ಯಥಾತ್ಮನಿ ತಥಾ ಪರೇ ॥೭೧೭॥

ಪ್ರಪಂಚದಲ್ಲಿ ಪ್ರಾಣಿಗಳಿಗೆ ಪ್ರಾಣಗಳಿಗಿಂತಲೂ ಪ್ರಿಯವಾದ ವಸ್ತುವು ಬೇರೊಂದಿಲ್ಲ. ಆದುದರಿಂದ ಪ್ರತಿಯೊಬ್ಬನೂ ಪ್ರಾಣಿದಯಾಪರನಾಗಿರಬೇಕು. ತನಗೆ ಹೇಗೆ ತನ್ನ ಪ್ರಾಣಗಳ ಮೇಲೆ ಹೆಚ್ಚಿನ ಮಮತೆಯಿರು

ವುದೋ–ಹಾಗೆಯೇ ಇತರರಿಗೂ ಅವರವರ ಪ್ರಾಣಗಳ ಮೇಲೆ ಮಮತೆಯಿರುವುದೆಂದು ಭಾವಿಸಬೇಕು.

ದೇವಿ! ಹೀಗೆ ಮುನಿಗಳು ಮಾಂಸವನ್ನು ತಿನ್ನದೇ ಇರುವುದರಲ್ಲಿರುವ ಗುಣಗಳನ್ನು ಹೇಳಿರುತ್ತಾರೆ."

ಉಮೆ :

"ದೇವ! ಧರ್ಮಾಚರಣೆಯುಳ್ಳ ಮನುಷ್ಯರು ಗುರುಜನರ ಪೂಜೆಯನ್ನು ಹೇಗೆ ಮಾಡುತ್ತಾರೆ?"

ಮಹೇಶ್ವರ :

"ಶೋಭನಳೇ! ಗುರುಜನರ ಪೂಜೆಯನ್ನು ಹೇಗೆ ಮಾಡಬೇಕೆಂಬುದನ್ನು ಯಥಾವತ್ತಾಗಿ ಹೇಳುವೆನು ; ಕೇಳು.

ಕೃತಜ್ಞಾನಾಂ ಪರೋ ಧರ್ಮ ಇತಿ ವೇದಾನುಶಾಸನಮ್ ॥೭೧೯॥

ಕೃತಜ್ಞರಾದವರಿಗೆ (ಬೇರೆಯವರು ತಮಗೆ ಮಾಡಿದ ಉಪಕಾರವನ್ನು ಸ್ಮರಿಸಿ ಅದಕ್ಕೆ ತಕ್ಕಂತೆ ಆಚರಿಸುವವರಿಗೆ) ಶ್ರೇಷ್ಠಧರ್ಮಪ್ರಾಪ್ತಿಯಾಗುವುದೆಂದು ವೇದಾನುಶಾಸನವಿದೆ.

ತಸ್ಮಾತ್ಸ್ವಗುರವಃ ಪೂಜ್ಯಾಸ್ತೇ ಹಿ ಪೂರ್ವೋಪಕಾರಿಣಃ ।
ಗುರೂಣಾಂ ಚ ಗರೀಯಾಂಸಸ್ತ್ರಯೋ ಲೋಕೇಷು ಪೂಜಿತಾಃ ।
ಉಪಾಧ್ಯಾಯಃ ಪಿತಾ ಮಾತಾ ಸಮ್ಪೂಜ್ಯಾಸ್ತೇ ವಿಶೇಷತಃ ॥೭೨೦॥

ಆದುದರಿಂದ ಪ್ರತಿಯೊಬ್ಬರಿಗೂ ಅವರವರ ಗುರುಜನರು ಪೂಜಾರ್ಹರಾಗಿರುತ್ತಾರೆ. ಏಕೆಂದರೆ : ಅವರು ಮೊದಲಿನ ಉಪಕಾರಿಗಳು, ಗುರುಜನರಲ್ಲಿಯೂ ಶ್ರೇಷ್ಠರಾದ ಉಪಾಧ್ಯಾಯ, ತಾಯಿ ಮತ್ತು ತಂದೆ–ಈ ಮೂವರು ಮೂರುಲೋಕಗಳಲ್ಲಿಯೂ ವಿಶೇಷರೀತಿಯಲ್ಲಿ ಪೂಜೆಗೆ ಅರ್ಹರಾದವರು.

ಯೇ ಪಿತುರ್ಭ್ರಾತರೋ ಜ್ಯೇಷ್ಠಾ ಯೇ ಚ ತಸ್ಯಾನುಜಾಸ್ತಥಾ ।
ಪಿತುಃ ಪಿತಾ ಚ ಸರ್ವೇ ತೇ ಪೂಜನೀಯಾಃ ಪಿತಾ ತಥಾ ॥೭೨೧॥

ತಂದೆಯ ಅಣ್ಣಂದಿರು (ದೊಡ್ಡಪ್ಪ), ತಂದೆಯ ತಮ್ಮಂದಿರು (ಚಿಕ್ಕಪ್ಪ), ತಂದೆಯ ತಂದೆ (ಅಜ್ಜ)–ಇವರೆಲ್ಲರೂ ತಂದೆಯಂತೆಯೇ ಪೂಜನೀಯರು.

ಮಾತುರ್ಯಾ ಭಗಿನೀ ಜ್ಯೇಷ್ಠಾ ಮಾತುರ್ಯಾ ಚ ಯವೀಯಸೀ ।
ಮಾತಾಮಹೀ ಚ ಧಾತ್ರೀ ಚ ಸರ್ವಾಸ್ತಾ ಮಾತರಃ ಸ್ಮೃತಾಃ ॥೭೨॥

ತಾಯಿಯ ಅಕ್ಕ (ದೊಡ್ಡಮ್ಮ), ತಾಯಿಯ ತಂಗಿ (ಚಿಕ್ಕಮ್ಮ)–ತಾಯಿಯ ತಾಯಿ (ಅಜ್ಜಿ), ಸಾಕುತಾಯಿ–ಇವರೆಲ್ಲರೂ ತಾಯಿಯಂತೆಯೇ ಪೂಜನೀಯರು.

ಉಪಾಧ್ಯಾಯಸ್ಯ ಯಃ ಪುತ್ರೋ ಯಶ್ಚ ತಸ್ಯ ಭವೇದ್ಗುರುಃ ।
ಋತ್ವಿಗ್ಗುರುಃ ಪಿತಾ ಚೇತಿ ಗುರವಃ ಸಮ್ಪ್ರಕೀರ್ತಿತಾಃ ॥೭೩॥

ಉಪಾಧ್ಯಾಯನ ಮಗನೂ ಗುರುವೇ ಆಗಿರುತ್ತಾನೆ. ಉಪಾಧ್ಯಾಯನಿಗೆ ಗುರುವಾದವನೂ ಗುರುವಿಗೆ ಸಮಾನನಾಗಿಯೇ ಇರುತ್ತಾನೆ. ಋತ್ವಿಜನೂ ಗುರುವೇ ಆಗಿರುತ್ತಾನೆ. ತಂದೆಯೂ ಗುರುವೇ ಆಗಿರುತ್ತಾನೆ. ಇವರೆಲ್ಲರೂ ಗುರುಗಳೆಂದೇ ಹೇಳಲ್ಪಡುತ್ತಾರೆ.

ಜ್ಯೇಷ್ಠೋ ಭ್ರಾತಾ ನರೇನ್ದ್ರಶ್ಚ ಮಾತುಲಃ ಶ್ವಶುರಸ್ತಥಾ ।
ಭಯತ್ರಾತಾ ಚ ಭರ್ತಾ ಚ ಗುರವಸ್ತೇ ಪ್ರಕೀರ್ತಿತಾಃ ॥೭೪॥

ಹಿರಿಯ ಅಣ್ಣ, ರಾಜಾ, ಸೋದರಮಾವ, ಹೆಣ್ಣು ಕೊಟ್ಟ ಮಾವ, ಭಯದಿಂದ ರಕ್ಷಿಸುವವನು ಮತ್ತು ಒಡೆಯ–ಇವರೆಲ್ಲರೂ ಗುರುಗಳೆಂದೇ ಹೇಳಲ್ಪಡುತ್ತಾರೆ.

ಸಾಧ್ವಿಯೇ! ಹೀಗೆ ನಾನು ನಿನಗೆ ಯಾರು-ಯಾರು ಗುರುಗಳೆಂದು ಪರಿಗಣಿಸಲ್ಪಡತಕ್ಕವರೆಂಬುದನ್ನು ಸಂಗ್ರಹಿಸಿ ಹೇಳಿದ್ದೇನೆ. ಇನ್ನು ಮುಂದೆ ಈ ಗುರುಜನರಲ್ಲಿ ಯಾರು ಯಾರಿಗೆ ಹೇಗೆ ವಿಧೇಯರಾಗಿರಬೇಕೆಂಬುದನ್ನೂ ಮತ್ತು ಅವರನ್ನು ಹೇಗೆ ಸತ್ಕರಿಸಬೇಕೆಂಬುದನ್ನೂ ಹೇಳುತ್ತೇನೆ. ಏಕಾಗ್ರಚಿತ್ತಳಾಗಿ ಕೇಳು.

ಆರಾಧ್ಯಾ ಮಾತಾಪಿತರಾವುಪಾಧ್ಯಾಯಸ್ತಥೈವ ಚ ।
ಕಥಂಚಿನ್ನಾವಮನ್ತವ್ಯಾ ನರೇಣ ಹಿತಮಿಚ್ಛತಾ ॥೭೬॥

ತನ್ನ ಹಿತವನ್ನು ಬಯಸುವವನು ತಾಯಿ, ತಂದೆ ಮತ್ತು ಉಪಾಧ್ಯಾಯ–ಇವರನ್ನು ಆರಾಧಿಸಬೇಕು. (ಸೇವಿಸಬೇಕು.) ಇವರನ್ನು ಯಾವುದೇ ಕಾರಣದಿಂದಲೂ ಅವಮಾನಿಸಬಾರದು.

ಯೇನ ಪ್ರೀಣನ್ತಿ ಪಿತರಸ್ತೇನ ಪ್ರೀತಃ ಪ್ರಜಾಪತಿಃ ।
ಯೇನ ಪ್ರೀಣಾತಿ ಚೇನ್ಮಾತಾ ಪ್ರೀತಾಃ ಸ್ಯುರ್ದೇವಮಾತರಃ ॥೭೨೭॥

ಯೇನ ಪ್ರೀಣಾತ್ಯುಪಾಧ್ಯಾಯೋ ಬ್ರಹ್ಮಾ ತೇನಾಭಿಪೂಜಿತಃ ।
ಅಪ್ರೀತೇಷು ಪುನಸ್ತೇಷು ನರೋ ನರಕಮೇತಿ ಹಿ ॥೭೨೮॥

ಯಾರ ಸೇವೆಯಿಂದ ಪಿತೃಗಳು ಪ್ರಸನ್ನರಾಗುವರೋ–ಅವನ ವಿಷಯದಲ್ಲಿ ಪ್ರಜಾಪತಿಯೂ ಸುಪ್ರೀತನಾಗುತ್ತಾನೆ. ಯಾರ ಸೇವೆಯಿಂದ ತಾಯಿಯು ಪ್ರಸನ್ನಳಾಗುವಳೋ–ಅಂತಹವನ ವಿಷಯದಲ್ಲಿ ದೇವಮಾತೆಯರು ಸುಪ್ರೀತರಾಗುತ್ತಾರೆ. ಯಾವನ ಸೇವೆಯಿಂದ ಉಪಾಧ್ಯಾಯನು ಸುಪ್ರೀತನಾಗುವನೋ-ಅಂತಹವನಿಂದ ಬ್ರಹ್ಮನ ಪೂಜೆಯೇ ನಡೆದಂತಾಗುತ್ತದೆ. ಮನುಷ್ಯನು ಶುಶ್ರೂಷೆಯಿಂದ ಮಾತಾ-ಪಿತೃ-ಗುರುಗಳನ್ನು ಸಂತೋಷಗೊಳಿಸದಿದ್ದರೆ ನರಕಕ್ಕೆ ಹೋಗುತ್ತಾನೆ.

ಗುರೂಣಾಂ ವೈರನಿರ್ಬನ್ಧೋ ನ ಕರ್ತವ್ಯಃ ಕಥಂಚನ ।
ನರಕಂ ಸ್ವಗುರುಪ್ರೀತ್ಯಾ ಮನಸಾಪಿ ನ ಗಚ್ಛತಿ ॥೭೨೯॥

ಗುರುಗಳೊಡನೆ ವೈರವನ್ನು ಯಾವುದೇ ಕಾರಣದಿಂದಲೂ ಕಟ್ಟಿಕೊಳ್ಳಬಾರದು. ಗುರುಜನರನ್ನು ತನ್ನ ಸೇವೆಯಿಂದ ಪ್ರಸನ್ನಗೊಳಿಸಿದವನು ಮನಸ್ಸಿನಿಂದಲೂ ನರಕಕ್ಕೆ ಹೋಗುವುದಿಲ್ಲ.

ನ ಬ್ರೂಯಾದ್ವಿಪ್ರಿಯಂ ತೇಷಾಮನಿಷ್ಟಂ ನ ಪ್ರವರ್ತಯೇತ್ ।
ವಿಗೃಹ್ಯ ನ ವದೇತ್ತೇಷಾಂ ಸಮೀಪೇ ಸ್ಪರ್ಧಯಾ ಕ್ವಚಿತ್ ॥೭೩೦॥

ಅವರಿಗೆ ಅಪ್ರಿಯವಾದ ಮಾತುಗಳನ್ನಾಡಬಾರದು. ಅವರಿಗೆ ತೊಂದರೆಯಾಗುವಂತೆ ವ್ಯವಹರಿಸಬಾರದು. ಅವರ ಸಮೀಪದಲ್ಲಿ ಸ್ಪರ್ಧೆಯಿಂದಾಗಲೀ ಸೆಟೆದಾಗಲೀ ಮಾತನಾಡಬಾರದು.

ಯದ್ಯದಿಚ್ಛನ್ತಿ ತೇ ಕರ್ತುಮಸ್ವತನ್ತ್ರಸ್ತದಾಚರೇತ್ ।
ವೇದಾನುಶಾಸನಸಮಂ ಗುರುಶಾಸನಮಿಷ್ಯತೇ ॥೭೩೧॥

ಅವರು ತಮ್ಮ ಶಿಷ್ಯನಿಂದ ಯಾವ ಕಾರ್ಯವನ್ನು ಅಪೇಕ್ಷಿಸುವರೋ ಆ ಕಾರ್ಯದ ಯುಕ್ತಾಯುಕ್ತತೆಯನ್ನು ವಿವೇಚಿಸದೇ ಅಸ್ವತಂತ್ರನಾಗಿ ಮಾಡಬೇಕು. ವೇದಗಳ ಆಜ್ಞೆಯನ್ನು ಪರಿಪಾಲಿಸುವಂತೆಯೇ ಗುರುಗಳ

ಆಜ್ಞೆಯನ್ನೂ ಪರಿಪಾಲಿಸಬೇಕು. ಗುರ್ವಾಜ್ಞೆಯು ವೇದಗಳ ಆಜ್ಞೆಗೆ ಸಮನಾದುದು.

ಕಲಹಾಂಶ್ಚ ವಿವಾದಾಂಶ್ಚ ಗುರುಭಿಃ ಸಹ ವರ್ಜಯೇತ್ ।
ಕೈತವಂ ಪರಿಹಾಸಾಂಶ್ಚ ಮನ್ಯುಕಾಮಾಶ್ರಯಾಂಸ್ತಥಾ ॥೭೩೨॥

ಗುರುಜನರೊಡನೆ ಜಗಳವನ್ನಾಗಲೀ ವಿವಾದಗಳನ್ನಾಗಲೀ ಮಾಡಬಾರದು. ಮೋಸವನ್ನಾಗಲೀ, ಕಾಮ-ಕ್ರೋಧಗಳಿಗೆ ಆಶ್ರಯಭೂತವಾದ ಪರಿಹಾಸವನ್ನಾಗಲೀ ಗುರುಜನರ ವಿಷಯದಲ್ಲಿ ಮಾಡಬಾರದು.

ಗುರೂಣಾಂ ಯೋಽನಹಂವಾದೀ ಕರೋತ್ಯಾಜ್ಞಾಮತನ್ದ್ರಿತಃ ।
ನ ತಸ್ಮಾತ್ಸರ್ವಮರ್ತ್ಯೇಷು ವಿದ್ಯತೇ ಪುಣ್ಯಕೃತ್ತಮಃ ॥೭೩೩॥

ಅಹಂಕಾರವನ್ನೂ ಆಲಸ್ಯವನ್ನೂ ತೊರೆದು ಯಾವನು ಗುರುಜನರ ಆಜ್ಞೆಯನ್ನು ಪರಿಪಾಲಿಸುವನೋ–ಅಂತಹವನಿಗಿಂತಲೂ ಶ್ರೇಷ್ಠನಾದ ಪುಣ್ಯಾತ್ಮನು ಈ ಲೋಕದಲ್ಲಿರುವ ಮನುಷ್ಯರಲ್ಲಿ ಬೇರೆ ಯಾವನೂ ಇರುವುದಿಲ್ಲ.

ಅಸೂಯಾಮಪವಾದಂ ಚ ಗುರೂಣಾಂ ಪರಿವರ್ಜಯೇತ್ ।
ತೇಷಾಂ ಪ್ರಿಯಹಿತಾನ್ವೇಷೀ ಭೂತ್ವಾ ಪರಿಚರೇತ್ಸದಾ ॥೭೩೪॥

ಗುರುಗಳಲ್ಲಿರುವ ದೋಷಗಳನ್ನು ಹುಡುಕಬಾರದು. ಅವರನ್ನು ಯಾವುದೇ ಕಾರಣದಿಂದಲೂ ನಿಂದಿಸಬಾರದು. ಗುರುಜನರಿಗೆ ಪ್ರಿಯವನ್ನೂ ಹಿತವನ್ನೂ ಬಯಸುತ್ತಾ ಯಾವಾಗಲೂ ಅವರ ಸೇವೆಯನ್ನೇ ಮಾಡುತ್ತಿರಬೇಕು.

ನ ತದ್ಯಜ್ಞಫಲಂ ಕುರ್ಯಾತ್ತಪೋ ವಾಚರಿತಂ ಮಹತ್ ।
ಯತ್ಕುರ್ಯಾತ್ಪುರುಷಸ್ಯೇಹ ಗುರುಪೂಜಾ ಸದಾ ಕೃತಾ ॥೭೩೫॥

ಸರ್ವಕಾಲದಲ್ಲಿಯೂ ಗುರುಶುಶ್ರೂಷೆಯಿಂದ ಲಭಿಸುವ ಫಲವು–ಯಜ್ಞವನ್ನು ಮಾಡುವುದರಿಂದಾಗಲೀ–ಮಹಾತಪಸ್ಸನ್ನು ಆಚರಿಸುವುದರಿಂದಾಗಲೀ ಲಭಿಸುವುದಿಲ್ಲ.

ಅನುವೃತ್ತೇರ್ವಿನಾ ಧರ್ಮೋ ನಾಸ್ತಿ ಸರ್ವಾಶ್ರಮೇಷ್ವಪಿ ।
ತಸ್ಮಾತ್ಕ್ಷಮಾವೃತಃ ಕ್ಷಾನ್ತೋ ಗುರುವೃತ್ತಿಂ ಸಮಾಚರೇತ್ ॥೭೩೬॥

ಯಾವುದೇ ಆಶ್ರಮದಲ್ಲಿದ್ದರೂ ಗುರುಸೇವೆಯ ಹೊರತಾಗಿ ಯಾವುದೇ ಧರ್ಮವೂ ಸಫಲವಾಗುವುದಿಲ್ಲ. ಆದುದರಿಂದ ಕ್ಷಮೆಯಿಂದಲೂ ಸಹನೆಯಿಂದಲೂ ಕೂಡಿದವನಾಗಿ ಗುರುಸೇವೆಯನ್ನು ಮಾಡಬೇಕು.

ಸ್ವಮರ್ಥಂ ಸ್ವಶರೀರಂ ಚ ಗುರ್ವರ್ಥೇ ಸಂತ್ಯಜೇದ್ಬುಧಃ ।
ವಿವಾದಂ ಧನಹೇತೋರ್ವಾ ಮೋಹಾದ್ವಾ ತೈರ್ನ ರೋಚಯೇತ್ ॥

ವಿದ್ವಾಂಸನು ತನ್ನ ಐಶ್ವರ್ಯವನ್ನೂ–ಶರೀರವನ್ನೂ ಗುರುಗಳ ಸಲುವಾಗಿಯೇ ಸಮರ್ಪಿಸಬೇಕು. ಧನದ ಕಾರಣದಿಂದಾಗಲೀ ಮೋಹವಶದಿಂದಾಗಲೀ ಗುರುಜನರೊಡನೆ ವಿವಾದವನ್ನು ಮಾಡಬಾರದು.

ಬ್ರಹ್ಮಚರ್ಯಮಹಿಂಸಾ ಚ ದಾನಾನಿ ವಿವಿಧಾನಿ ಚ ।
ಗುರುಭಿಃ ಪ್ರತಿಷಿದ್ಧಸ್ಯ ಸರ್ವಮೇತದಪಾರ್ಥಕಮ್ ॥೭೩೮॥

ಗುರುಜನರಿಂದ ತಿರಸ್ಕೃತನಾದವನಿಗೆ ಬ್ರಹ್ಮಚರ್ಯೆ, ಅಹಿಂಸೆ, ವಿಧ-ವಿಧವಾದ ದಾನಗಳು ಎಲ್ಲವೂ ವ್ಯರ್ಥವೇ ಸರಿ.

ಉಪಾಧ್ಯಾಯಂ ಪಿತರಂ ಮಾತರಂ ಚ
ಯೇಽಭಿದ್ರುಹ್ಯುರ್ಮನಸಾ ಕರ್ಮಣಾ ವಾ ।
ತೇಷಾಂ ಪಾಪಂ ಭ್ರೂಣಹತ್ಯಾವಿಶಿಷ್ಟಂ
ತೇಭ್ಯೋ ನಾನ್ಯಃ ಪಾಪಕೃದಸ್ತಿ ಲೋಕೇ ॥೭೩೯॥

ಯಾರು ಉಪಾಧ್ಯಾಯನಿಗೂ, ತಂದೆ-ತಾಯಿಗಳಿಗೂ ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ, ಕ್ರಿಯೆಯಿಂದಾಗಲೀ ದ್ರೋಹಮಾಡುವರೋ–ಅಂತಹವರಿಗೆ ಭ್ರೂಣಹತ್ಯೆಯನ್ನು ಮಾಡಿದುದಕ್ಕಿಂತಲೂ ಹೆಚ್ಚಿನ ಪಾಪವು ಸಂಘಟಿಸುತ್ತದೆ. ಉಪಾಧ್ಯಾಯ-ಮಾತಾ-ಪಿತೃದ್ರೋಹಿಗಿಂತಲೂ ಪಾಪಿಷ್ಠನಾದವನು ಈ ಲೋಕದಲ್ಲಿಯೇ ಮತ್ತಾರೂ ಇರುವುದಿಲ್ಲ.”

ಉಮೆ :

“ಮಹೇಶ್ವರ! ಉಪವಾಸವಿಧಿಯನ್ನು ಹೇಳುವ ಕೃಪೆಮಾಡು.”

ಮಹೇಶ್ವರ :

ಶರೀರಮಲಶಾನ್ತ್ಯರ್ಥಮಿನ್ದ್ರಿಯೋಚ್ಛೋಷಣಾಯ ಚ ।

ಏಕಭುಕ್ತೋಪವಾಸೈಸ್ತು ಧಾರಯನ್ತೇ ವ್ರತಂ ನರಾಃ ।
ಲಭನ್ತೇ ವಿಪುಲಂ ಧರ್ಮಂ ತಥಾಹಾರಪರಿಕ್ಷಯಾತ್ ॥೭೪೧॥

"ದೇವಿ! ಶರೀರದಲ್ಲಿರುವ ದೋಷಗಳ ನಾಶಕ್ಕಾಗಿಯೂ, ಇಂದ್ರಿಯಗಳನ್ನು ಶೋಷಿಸಿ ಅಧೀನದಲ್ಲಿಟ್ಟುಕೊಳ್ಳುವ ಸಲುವಾಗಿಯೂ ಮನುಷ್ಯರು ಒಪ್ಪತ್ತು ಊಟಮಾಡುವ ಅಥವಾ ದಿನಪೂರ್ತಿಯಾಗಿ ಊಟಮಾಡದೆಯೇ ಇರುವ ವ್ರತವನ್ನು ಕೈಗೊಳ್ಳುತ್ತಾರೆ. ಹೀಗೆ ಅವರು ಆಹಾರವನ್ನು ಅಲ್ಪವೇ ತೆಗೆದುಕೊಳ್ಳುವುದರಿಂದ ಅಥವಾ ತೆಗೆದುಕೊಳ್ಳ ದೆಯೇ ಇರುವುದರಿಂದ ಮಹಾಪುಣ್ಯವನ್ನು ಹೊಂದುತ್ತಾರೆ.

ಬಹೂನಾಮುಪರೋಧಂ ತು ನ ಕುರ್ಯಾದಾತ್ಮಕಾರಣಾತ್ ।
ಜೀವೋಪಘಾತಂ ಚ ತಥಾ ಸ ಜೀವನ್ಧನ್ಯ ಇಷ್ಯತೇ ॥೭೪೨॥

ತನಗಾಗಿ ಹಲವರಿಗೆ ತೊಂದರೆಯನ್ನು ಉಂಟುಮಾಡಬಾರದು. ತನ್ನ ಜೀವನಕ್ಕೂ ತೊಂದರೆಯನ್ನು ಉಂಟುಮಾಡಿಕೊಳ್ಳಬಾರದು. ಹೀಗೆ ಬಾಳು ವವನು ಧನ್ಯನೆನಿಸಿಕೊಳ್ಳುತ್ತಾನೆ.

ತಸ್ಮಾತ್ಪುಣ್ಯಂ ಲಭೇನ್ಮರ್ತ್ಯಃ ಸ್ವಯಮಾಹಾರಕರ್ಶನಾತ್ ।
ತದ್ಗೃಹಸ್ಥೈರ್ಯಥಾಶಕ್ತಿ ಕರ್ತವ್ಯಮಿತಿ ನಿಶ್ಚಯಃ ॥೭೪೩॥

ಆದುದರಿಂದ ತಾನೇ ಆಹಾರವನ್ನು ಬಿಡುವುದರಿಂದ ಅಥವಾ ಕಡಿಮೆ ಮಾಡುವುದರಿಂದ ಮನುಷ್ಯನು ಪುಣ್ಯವನ್ನು ಹೊಂದುತ್ತಾನೆ. ಗೃಹಸ್ಥರು ಯಥಾಶಕ್ತಿ ಉಪವಾಸಮಾಡಬೇಕು. ಇದು ಶಾಸ್ತ್ರದ ನಿಶ್ಚಯವಾಗಿದೆ.

ಉಪವಾಸಾರ್ದಿತೇ ಕಾಯೇ ಆಪದರ್ಥಂ ಪಯೋ ಜಲಮ್ ।
ಭುಞ್ಜನ್ನಪ್ರತಿಘಾತೀ ಸ್ಯಾದ್ಬ್ರಾಹ್ಮಣಾನನುಮಾನ್ಯ ಚ ॥೭೪೪॥

ಶರೀರವು ಉಪವಾಸದಿಂದ ಪೀಡಿಸಲ್ಪಡುತ್ತಿರುವಾಗ ಅಂತಹ ಆಪ ತ್ತಿನ ಸಮಯದಲ್ಲಿ ಬ್ರಾಹ್ಮಣರ ಅನುಮತಿಯನ್ನು ಪಡೆದು ಹಾಲನ್ನಾಗಲೀ ನೀರನ್ನಾಗಲೀ ಕುಡಿಯುವುದರಿಂದ ವ್ರತದ ಭಂಗವಾಗುವುದಿಲ್ಲ."

ಉಮೆ :

"ದೇವ! ವಿದ್ವಾಂಸನಾದವನು ಬ್ರಹ್ಮಚರ್ಯವನ್ನು ಹೇಗೆ ರಕ್ಷಿಸಿ ಕೊಳ್ಳಬೇಕು?"

ಮಹೇಶ್ವರ :

"ದೇವಿ! ಆ ವಿಷಯವನ್ನು ಹೇಳುತ್ತೇನೆ. ಏಕಾಗ್ರಚಿತ್ತಳಾಗಿ ಕೇಳು.

ಬ್ರಹ್ಮಚರ್ಯಂ ಪರಂ ಶೌಚಂ ಬ್ರಹ್ಮಚರ್ಯಂ ಪರಂ ತಪಃ ।
ಕೇವಲಂ ಬ್ರಹ್ಮಚರ್ಯೇಣ ಪ್ರಾಪ್ಯತೇ ಪರಮಂ ಪದಮ್ ॥೭೪೬॥

ಬ್ರಹ್ಮಚರ್ಯವು ಪರಮಶ್ರೇಷ್ಠವಾದ ಶೌಚಾಚಾರವಾಗಿದೆ. ಪರಮ ಶ್ರೇಷ್ಠವಾದ ತಪಸ್ಸಾಗಿದೆ. ಬ್ರಹ್ಮಚರ್ಯವೊಂದರಿಂದಲೇ ಪರಮಪದವು ಲಭಿಸುತ್ತದೆ.

ಸಂಕಲ್ಪಾದ್ದರ್ಶನಾಚ್ಚೈವ ತದುಕ್ತವಚನಾದಪಿ ।
ಸಂಸ್ಪರ್ಶಾದಥ ಸಂಯೋಗಾತ್ಪಞ್ಚಧಾ ರಕ್ಷಿತಂ ವ್ರತಮ್ ॥೭೪೭॥

ಸಂಕಲ್ಪ, ದೃಷ್ಟಿ, ಅದಕ್ಕೆ ಸಂಬಂಧಿಸಿದ ಮಾತು, ಸ್ಪರ್ಶ ಮತ್ತು ಸಂಯೋಗ–ಈ ಐದನ್ನು ಬಿಟ್ಟು ಬ್ರಹ್ಮಚರ್ಯವ್ರತವನ್ನು ರಕ್ಷಿಸಿಕೊಳ್ಳಬೇಕು.

ವ್ರತವದ್ಧಾರಿತಂ ಚೈವ ಬ್ರಹ್ಮಚರ್ಯಮಕಲ್ಮಷಮ್ ।
ನಿತ್ಯಂ ಸಂರಕ್ಷಿತಂ ತಸ್ಯ ನೈಷ್ಠಿಕಾನಾಂ ವಿಧೀಯತೇ ॥೭೪೮॥

ವ್ರತಪೂರ್ವಕವಾಗಿ ಧಾರಣೆಮಾಡಿದ ನಿಷ್ಕಲ್ಮಷವಾದ ಬ್ರಹ್ಮಚರ್ಯವನ್ನು ನಿತ್ಯವೂ ಸಂರಕ್ಷಿಸಿಕೊಳ್ಳಬೇಕು. ನೈಷ್ಠಿಕಬ್ರಹ್ಮಚಾರಿಗಳಿಗೆ ಹೀಗೆ ನಿಯಮವು ವಿಧಿಸಲ್ಪಟ್ಟಿದೆ.

ತದಿಷ್ಯತೇ ಗೃಹಸ್ಥಾನಾಂ ಕಾಲಮುದ್ದಿಶ್ಯ ಕಾರಣಮ್ ।
ಜನ್ಮನಕ್ಷತ್ರಯೋಗೇಷು ಪುಣ್ಯವಾಸೇಷು ಪರ್ವಸು ।
ದೇವತಾಧರ್ಮಕಾರ್ಯೇಷು ಬ್ರಹ್ಮಚರ್ಯವ್ರತಂ ಚರೇತ್ ॥೭೪೯॥

ಇಂತಹ ಬ್ರಹ್ಮಚರ್ಯವು ಗೃಹಸ್ಥರಿಗೂ ಅಭೀಷ್ಟವೇ ಆಗಿದೆ. ಗೃಹಸ್ಥರು ನಿರ್ದಿಷ್ಟವಾದ ಕಾಲದಲ್ಲಿ ಶ್ರೇಯಸ್ಸಿಗೆ ಕಾರಣವಾದ ಈ ವ್ರತವನ್ನು ಕೈಗೊಳ್ಳಬೇಕು. ಜನ್ಮನಕ್ಷತ್ರದ ಯೋಗವಿರುವ ದಿವಸಗಳಲ್ಲಿ, ಪುಣ್ಯಸ್ಥಳ ಗಳಲ್ಲಿ, ಪರ್ವದಿವಸಗಳಲ್ಲಿ, ದೇವತಾಸಂಬಂಧವಾದ ಧರ್ಮಕಾರ್ಯಗಳಲ್ಲಿ–ಗೃಹಸ್ಥರೂ ಬ್ರಹ್ಮಚರ್ಯವ್ರತವನ್ನು ಆಚರಿಸಬೇಕು.

ಬ್ರಹ್ಮಚರ್ಯವ್ರತಫಲಂ ಲಭೇದ್ದಾರವ್ರತೀ ಸದಾ ।
ಶೌಚಮಾಯುಸ್ತಥಾರೋಗ್ಯಂ ಲಭ್ಯತೇ ಬ್ರಹ್ಮಚಾರಿಭಿಃ ॥೭೫೦॥

ಯಾವನು ಏಕಪತ್ನೀವ್ರತಸ್ಥನಾಗಿರುವನೋ–ಅವನು ಬ್ರಹ್ಮಚರ್ಯ ವ್ರತವನ್ನು ಪರಿಪಾಲಿಸಿದ ಫಲವನ್ನೇ ಹೊಂದುತ್ತಾನೆ. ಬ್ರಹ್ಮಚರ್ಯವ್ರತ ನಿಷ್ಠರಿಗೆ ಪವಿತ್ರತೆ, ಆಯುಸ್ಸು, ಆರೋಗ್ಯ–ಇವೆಲ್ಲವೂ ಪ್ರಾಪ್ತವಾಗುತ್ತವೆ."

ಉಮೆ :

"ದೇವ! ಧರ್ಮಾಕಾಂಕ್ಷಿಗಳಾದ ಅನೇಕ ಮನುಷ್ಯರು ತೀರ್ಥ ಯಾತ್ರಾವ್ರತವನ್ನು ಕೈಗೊಳ್ಳುತ್ತಾರೆ. ಲೋಕದಲ್ಲಿ ಎಂತೆಂತಹ ತೀರ್ಥಗಳಿವೆ ಯೆಂಬುದನ್ನು ಹೇಳುವ ಕೃಪೆಮಾಡು."

ಮಹೇಶ್ವರ :

"ಪ್ರಿಯಳೇ! ನಿನಗೆ ತೀರ್ಥಸ್ನಾನವಿಧಿಯನ್ನು ಸಂತೋಷದಿಂದ ಹೇಳುತ್ತೇನೆ. ಇತರರನ್ನು ಪಾವನಗೊಳಿಸುವ ಸಲುವಾಗಿಯೂ ಆತ್ಮಶುದ್ಧಿ ಗಾಗಿಯೂ ಹಿಂದೆ ಬ್ರಹ್ಮನೇ ತೀರ್ಥಸ್ನಾನವಿಧಿಯನ್ನು ನಿರ್ಮಿಸಿದನು.

ಯಾಸ್ತು ಲೋಕೇ ಮಹಾನದ್ಯಸ್ತಾಃ ಸರ್ವಾಸ್ತೀರ್ಥಸಂಜ್ಞಿಕಾಃ ।
ತಾಸಾಂ ಪ್ರಕ್ಸ್ರೋತಸಃ ಶ್ರೇಷ್ಠಾಃ ಸಙ್ಗಮಶ್ಚ ಪರಸ್ಪರಮ್ ॥೭೫೩॥

ಲೋಕದಲ್ಲಿರುವ ಎಲ್ಲ ಮಹಾನದಿಗಳಿಗೂ ತೀರ್ಥಗಳೆಂದೇ ಹೆಸರು. ಅವುಗಳಲ್ಲಿ ಪೂರ್ವದಿಕ್ಕಿಗೆ ಹರಿಯುವ ನದಿಗಳು ಶ್ರೇಷ್ಠವಾದುವುಗಳು. ಎರಡು ನದಿಗಳು ಸೇರುವ ಸಂಗಮಸ್ಥಳವೂ ಶ್ರೇಷ್ಠವಾದುದು.

ತಾಸಾಂ ಸಾಗರಸಂಯೋಗೋ ವರಿಷ್ಠಶ್ಚೇತಿ ವಿದ್ಯತೇ ।
ತಾಸಾಮುಭಯತಃ ಕೂಲಂ ತತ್ರ ತತ್ರ ಮನೀಷಿಭಿಃ ।
ದೇವೈರ್ವಾ ಸೇವಿತಂ ದೇವಿ ತತ್ತೀರ್ಥಂ ಪರಮಂ ಸ್ಮೃತಮ್ ॥

ಆ ನದಿಗಳಿಗೆ ಸಮುದ್ರದೊಡನೆ ಸಂಗಮವು ಯಾವ ಸ್ಥಳದಲ್ಲಾಗು ವುದೋ–ಆ ಸ್ಥಳವು ಎಲ್ಲ ಸ್ಥಳಗಳಿಗಿಂತಲೂ ಶ್ರೇಷ್ಠವಾದುದು. ಆ ನದಿಗಳ ಎರಡು ತೀರಗಳಲ್ಲಿ ಮನನಶೀಲರಾದ ತಪಸ್ವಿಗಳಿಂದಾಗಲೀ ದೇವತೆಗಳಿಂದಾ ಗಲೀ ಯಾವಾಗಲಾದರೂ ಸೇವಿಸಲ್ಪಟ್ಟಿರುವ ಪ್ರದೇಶವು ಶ್ರೇಷ್ಠತೀರ್ಥ ವೆನಿಸುತ್ತದೆ.

ಸಮುದ್ರಶ್ಚ ಮಹಾತೀರ್ಥಂ ಪಾವನಂ ಪರಮಂ ಶುಭಮ್ ।
ತಸ್ಯ ಕೂಲಗತಾಸ್ತೀರ್ಥಾ ಮಹದ್ಭಿಶ್ಚ ಸಮಾಪ್ಲುತಾಃ ॥೭೫೫॥

ಸಮುದ್ರವು ಕೂಡ ಪಾವನವೂ ಪರಮಶುಭಕರವೂ ಆದ ಮಹಾ ತೀರ್ಥವೇ ಆಗಿದೆ. ಅದರ ತೀರದಲ್ಲಿ ಮಹಾತ್ಮರು ಮಿಂದ ಸ್ಥಳಗಳೂ ತೀರ್ಥ ಗಳೇ ಆಗಿರುತ್ತವೆ.

ಸ್ರೋತಸಾಂ ಪರ್ವತಾನಾಂ ಚ ಚೋಷಿತಾನಾಂ ಮಹರ್ಷಿಭಿಃ ।
ಅಪಿ ಕೂಲಂ ತಟಾಕಂ ವಾ ಸೇವಿತಂ ಮುನಿಭಿಃ ಪ್ರಿಯೇ ॥೭೫೬॥

ಮಹರ್ಷಿಗಳಿಂದ ಸೇವಿಸಲ್ಪಟ್ಟ ಜಲಪ್ರವಾಹಗಳಿರುವ ಸ್ಥಳಗಳೂ, ಪರ್ವತಪ್ರದೇಶಗಳೂ ತೀರ್ಥಗಳೇ ಆಗಿವೆ. ಮುನಿಗಳಿಂದ ಸೇವಿಸಲ್ಪಟ್ಟ ಕೆರೆ-ಕಟ್ಟೆಗಳೂ, ತಟಾಕಗಳೂ ತೀರ್ಥಗಳೇ ಆಗಿವೆ.

ತತ್ತು ತೀರ್ಥಮಿತಿ ಜ್ಞೇಯಂ ಪ್ರಭಾವಾತ್ತು ತಪಸ್ವಿನಾಮ್ ।
ತದಾಪ್ರಭೃತಿ ತೀರ್ಥತ್ವಂ ಲಭೇಲ್ಲೋಕಹಿತಾಯ ವೈ ।
ಏವಂ ತೀರ್ಥಂ ಭವೇದ್ದೇವಿ ತಸ್ಯ ಸ್ನಾನವಿಧಿಂ ಶೃಣು ॥೭೫೭॥

ತಪಸ್ವಿಗಳ ಪ್ರಭಾವದಿಂದಾಗಿ ಆ ಸ್ಥಳಗಳಿಗೆ ತೀರ್ಥವೆಂಬ ಅಭಿಧಾನವು ಬಂದಿದೆ. ತಪಸ್ವಿಗಳು ಸೇವಿಸಿದ ಮೊದಲ್ಗೊಂಡು ಲೋಕಜನರ ಹಿತಕ್ಕಾಗಿ ಆ ಸ್ಥಳವು ತೀರ್ಥತ್ವವನ್ನು ಹೊಂದುತ್ತದೆ. ಹೀಗೆ ಸ್ಥಾನವಿಶೇಷದಿಂದ ತಪಸ್ವಿಗಳ ಸೇವನೆಯಿಂದ ಒಂದು ಪ್ರದೇಶವು ತೀರ್ಥವೆನಿಸಿಕೊಳ್ಳುತ್ತದೆ. ಇನ್ನು ಮುಂದೆ ಸ್ನಾನವಿಧಿಯನ್ನು ಹೇಳುವೆನು ; ಕೇಳು.

ಜನ್ಮನಾ ವ್ರತಭೂಯಿಷ್ಠೋ ಗತ್ವಾ ತೀರ್ಥಾನಿ ಕಾಂಕ್ಷಯಾ ।
ಉಪವಾಸತ್ರಯಂ ಕುರ್ಯಾದೇಕಂ ವಾ ನಿಯಮಾನ್ವಿತಃ ॥೭೫೮॥

ಹುಟ್ಟಿದಾಗಿನಿಂದಲೂ ಅನೇಕವಾದ ವ್ರತಾನುಷ್ಠಾನಗಳನ್ನು ಮಾಡುತ್ತಾ ತೀರ್ಥಯಾತ್ರೆಯನ್ನು ಮಾಡುವ ಆಕಾಂಕ್ಷೆಯಿಂದ ಹೋದವನು ಮೂರು ದಿನ ಉಪವಾಸಮಾಡಬೇಕು ಅಥವಾ ನಿಯಮವಾಗಿದ್ದು ಒಂದು ದಿನ ಉಪವಾಸವನ್ನಾದರೂ ಮಾಡಬಹುದು.

ಪುಣ್ಯಮಾಸಯುತೇ ಕಾಲೇ ಪೌರ್ಣಮಾಸ್ಯಾಂ ಯಥಾವಿಧಿ ।
ಬಹಿರೇವ ಶುಚಿರ್ಭೂತ್ವಾ ತತ್ತೀರ್ಥಂ ಮನ್ಮನಾ ವಿಶೇತ್ ॥೭೫೯॥

ಪವಿತ್ರವಾದ ಮಾಸದಿಂದ ಯುಕ್ತವಾಗಿರುವ ಕಾಲದಲ್ಲಿ ಮತ್ತು ಹುಣ್ಣಿಮೆಯಲ್ಲಿ ವಿಧಿಪೂರ್ವಕವಾಗಿ (ಮಂತ್ರಸ್ನಾನದಿಂದ) ಬಹಿಶ್ಶುದ್ಧನಾಗಿ ನನ್ನನ್ನೇ ಧ್ಯಾನಿಸುತ್ತಾ ತೀರ್ಥದಲ್ಲಿಳಿಯಬೇಕು.

ತ್ರಿರಾಪ್ಲುತ್ಯ ಜಲಾಭ್ಯಾಶೇ ದತ್ತ್ವಾ ಬ್ರಾಹ್ಮಣದಕ್ಷಿಣಾಮ್ ।
ಅಭ್ಯರ್ಚ್ಯ ದೇವಾಯತನಂ ತತಃ ಪ್ರಾಯಾದ್ಯಥಾಗತಮ್ ॥೭೬೦॥

ತೀರ್ಥದಲ್ಲಿ ಮೂರು ಬಾರಿ ಮುಳುಗಬೇಕು. ಅನಂತರ ತೀರ್ಥದ ಬಳಿಯಲ್ಲಿಯೇ ಬ್ರಾಹ್ಮಣನಿಗೆ ದಕ್ಷಿಣೆಯನ್ನು ಕೊಡಬೇಕು. ಬಳಿಕ ದೇವಾಲಯಕ್ಕೆ ಹೋಗಿ ಪೂಜೆಮಾಡಿಕೊಂಡು ಮುಂದೆ ಪ್ರಯಾಣಮಾಡಬೇಕು.

ಏತದ್ವಿಧಾನಂ ಸರ್ವೇಷಾಂ ತೀರ್ಥಂ ತೀರ್ಥಮಿತಿ ಪ್ರಿಯೇ ।
ಸಮೀಪತೀರ್ಥಸ್ನಾನಾತ್ತು ದೂರತೀರ್ಥಂ ಸುಪೂಜಿತಮ್ ॥೭೬೧॥

ಎಲ್ಲರೂ ತೀರ್ಥಯಾತ್ರೆಯನ್ನೂ ಮತ್ತು ತೀರ್ಥಸ್ನಾನವನ್ನೂ ಇದೇ ವಿಧಾನದಲ್ಲಿ ಮಾಡಬೇಕು. ಊರಿಗೆ ಅತಿಹತ್ತಿರದಲ್ಲಿರುವ ತೀರ್ಥದಲ್ಲಿ ಸ್ನಾನ ಮಾಡುವುದಕ್ಕಿಂತಲೂ ದೂರದಲ್ಲಿರುವ ತೀರ್ಥಕ್ಕೆ ಹೋಗಿ ಸ್ನಾನಮಾಡುವುದು ಮಹತ್ತ್ವಪೂರ್ಣವಾದುದು.

ಆದಿಪ್ರಭೃತಿ ಶುದ್ಧಸ್ಯ ತೀರ್ಥಸ್ನಾನಂ ಶುಭಂ ಭವೇತ್ ।
ತಪೋಽರ್ಥಂ ಪಾಪನಾಶಾರ್ಥಂ ಶೌಚಾರ್ಥಂ ತೀರ್ಥಗಾಹನಮ್ ॥

ಮೊದಲಿನಿಂದಲೂ ಶುದ್ಧನಾಗಿಯೇ ಇರುವವನಿಗೆ ತೀರ್ಥಸ್ನಾನವು ಶುಭಪ್ರದವಾಗುತ್ತದೆ. ತಪಸ್ಸಿದ್ಧಿಯನ್ನು ಪಡೆಯುವ ಸಲುವಾಗಿ, ಪಾಪ ನಿರಸನಕ್ಕಾಗಿ ಮತ್ತು ಪಾವಿತ್ರ್ಯಕ್ಕಾಗಿ ತೀರ್ಥಗಳಲ್ಲಿ ಸ್ನಾನಮಾಡಬೇಕು.

ದೇವಿ! ಹೀಗೆ ಪುಣ್ಯತೀರ್ಥಗಳಲ್ಲಿ ಸ್ನಾನಮಾಡುವುದು ಶುಭಪ್ರದವಾದುದು. ತೀರ್ಥಸ್ನಾನದ ನಿಯಮವನ್ನೂ ಮತ್ತು ಅದರಿಂದ ಪ್ರಾಪ್ತವಾಗುವ ಸುಕೃತವನ್ನೂ ನಿನಗೆ ಹೇಳಿರುತ್ತೇನೆ."

ಉಮೆ :

ಲೋಕಸಿದ್ಧಂ ತು ಯದ್ದ್ರವ್ಯಂ ಸರ್ವಸಾಧಾರಣಂ ಭವೇತ್ ।
ತದ್ದದತ್ಸರ್ವಸಾಮಾನ್ಯಂ ಕಥಂ ಧರ್ಮಂ ಲಭೇನ್ನರಃ ॥೭೬೪॥

"ಲೋಕದಲ್ಲಿ ಯಾವುದು ಎಲ್ಲರಿಗೂ ಸುಲಭವಾಗಿ ಸಿಕ್ಕುವ ವಸ್ತುವಾಗಿರುವುದೋ, ಸರ್ವಸಾಮಾನ್ಯವಸ್ತುವಾಗಿರುವುದೋ–ಅಂತಹ ವಸ್ತುವನ್ನು ದಾನಮಾಡುವುದರಿಂದ ಮನುಷ್ಯನಿಗೆ ಧರ್ಮವು ಹೇಗೆ ಲಭಿಸುತ್ತದೆ?"

ಮಹೇಶ್ವರ :

ಲೋಕೇ ಭೂತಮಯಂ ದ್ರವ್ಯಂ ಸರ್ವಸಾಧಾರಣಂ ತಥಾ ।
ತಥೈವ ತದ್ದದನ್ಮರ್ತ್ಯೋ ಲಭೇತ್ಪುಣ್ಯಂ ಸ ತಚ್ಛೃಣು ॥೭೬೫॥

"ದೇವಿ! ಲೋಕದಲ್ಲಿ ಭೌತಿಕದ್ರವ್ಯವು ಸರ್ವಸಾಧಾರಣವಾದುದು. ಅಂತಹ ಭೌತಿಕದ್ರವ್ಯವನ್ನು ಮನುಷ್ಯನು ದಾನವಾಗಿ ಕೊಡುವುದರಿಂದ ಯಾವ ರೀತಿಯಲ್ಲಿ ಪುಣ್ಯಕ್ಕೆ ಭಾಗಿಯಾಗುವನೆಂಬುದನ್ನು ಹೇಳುವೆನು ; ಕೇಳು.

ದಾತಾ ಪ್ರತಿಗ್ರಹೀತಾ ಚ ದೇಯಂ ಸೋಪಕ್ರಮಂ ತಥಾ ।
ದೇಶಕಾಲೌ ಚ ಯತ್ತ್ವೇತದ್ದಾನಂ ಷಡ್ಗುಣಮುಚ್ಯತೇ ॥೭೬೬॥

ದಾನವನ್ನು ಕೊಡುವವನು, ದಾನವನ್ನು ತೆಗೆದುಕೊಳ್ಳುವವನು, ದಾನಕೊಡುವ ವಸ್ತು, ದಾನಕೊಡುವ ಪ್ರಯತ್ನ, ದೇಶ ಮತ್ತು ಕಾಲ–ಹೀಗೆ ದಾನವು ಆರು ಗುಣಗಳಿಂದ ಯುಕ್ತವಾಗಿದೆ.

ನಾನು ಈಗ ದಾನದ ಈ ಆರು ಅಂಗಗಳ ವಿಶೇಷಗುಣಗಳನ್ನು ಹೇಳುವೆನು ; ಕೇಳು.

ಆದಿಪ್ರಭೃತಿ ಯಃ ಶುದ್ಧೋ ಮನೋವಾಕ್ಕಾಯಕರ್ಮಭಿಃ ।
ಸತ್ಯವಾದೀ ಜಿತಕ್ರೋಧಸ್ತ್ವಲುಬ್ಧೋ ನಾಭ್ಯಸೂಯಕಃ ।
ಶ್ರದ್ಧಾವಾನಾಸ್ತಿಕಶ್ಚೈವ ಏವಂ ದಾತಾ ಪ್ರಶಸ್ಯತೇ ॥೭೬೭॥

ಮೊದಲಿನಿಂದಲೂ ಯಾವನು–ಮನಸ್ಸು, ಮಾತು, ಶರೀರ ಮತ್ತು ಕರ್ಮಗಳಿಂದ ಶುದ್ಧನಾಗಿರುವನೋ, ಸತ್ಯನಿಷ್ಠನೋ, ಕ್ರೋಧವನ್ನು ಜಯಿಸಿರುವನೋ, ಅಲುಬ್ಧನೋ, ಇತರರಲ್ಲಿ ದೋಷವೆಣಿಸದವನೋ, ಶ್ರದ್ಧಾಳುವೋ, ಆಸ್ತಿಕನೋ–ಅಂತಹ ದಾತನು ಶ್ಲಾಘ್ಯನು.

ಶುದ್ಧೋ ದಾನ್ತೋ ಜಿತಕ್ರೋಧಸ್ತಥಾದೀನಕುಲೋದ್ಭವಃ ।
ಶ್ರುತಚಾರಿತ್ರಸಮ್ಪನ್ನಸ್ತಥಾ ಬಹುಕಲತ್ರವಾನ್ ॥೭೬೮॥

ಪಞ್ಚಯಜ್ಞಪರೋ ನಿತ್ಯಂ ನಿರ್ವಿಕಾರಶರೀರವಾನ್ ।
ಏತಾನ್ಪಾತ್ರಗುಣಾನ್ವಿದ್ಧಿ ತಾದೃಕ್ಪಾತ್ರಂ ಪ್ರಶಸ್ಯತೇ ॥೭೭೦॥

ಯಾವನು ಶುದ್ಧನೋ, ಜಿತೇಂದ್ರಿಯನೋ, ಕೋಪವನ್ನು ಜಯಿಸಿರುವನೋ, ಬಡತನದ ಕುಟುಂಬದಲ್ಲಿ ಹುಟ್ಟಿದವನೋ, ಶಾಸ್ತ್ರಜ್ಞಾನ-ಸದಾಚಾರಗಳಿಂದ ಸಂಪನ್ನನಾಗಿರುವನೋ, ಬಹುಕುಟುಂಬಿಯೋ, ಪಂಚಯಜ್ಞಪರಾಯಣನೋ, ರೋಗರಹಿತವಾದ ಶರೀರದಿಂದ ಕೂಡಿರುವನೋ– ಇಂತಹವನು ದಾನಪಡೆಯಲು ಸತ್ಪಾತ್ರನಾಗಿರುತ್ತಾನೆ.

ಪಿತೃದೇವಾಗ್ನಿಕಾರ್ಯೇಷು ತಸ್ಯ ದತ್ತಂ ಮಹತ್ಫಲಮ್ ।
ಯದ್ಯದರ್ಹತಿ ಯೋ ಲೋಕೇ ಪಾತ್ರಂ ತಸ್ಯ ಭವೇಚ್ಚ ಸಃ ॥೭೭೧॥

ಪಿತೃಕಾರ್ಯಗಳಲ್ಲಿಯೂ, ದೇವತಾಕಾರ್ಯಗಳಲ್ಲಿಯೂ, ಅಗ್ನಿಹೋತ್ರಸಂಬಂಧವಾದ ಕಾರ್ಯಗಳಲ್ಲಿಯೂ ಅಂತಹವನಿಗೆ ಕೊಡಲ್ಪಡುವ ದಾನವು ಮಹಾಫಲದಾಯಕವಾಗುತ್ತದೆ. ಲೋಕದಲ್ಲಿ ಯಾವನು ಯಾವ ವಸ್ತುವನ್ನು ಪಡೆಯಲು ಅರ್ಹನೋ–ಅವನು ಅದಕ್ಕೆ ಪಾತ್ರನಾಗುತ್ತಾನೆ.

ಮುಚ್ಯೇದಾಪದಮಾಪನ್ನೋ ಯೇನ ಪಾತ್ರಂ ತದಸ್ಯ ತು ।
ಅನ್ನಸ್ಯ ಕ್ಷುಧಿತಂ ಪಾತ್ರಂ ತೃಷಿತಂ ತು ಜಲಸ್ಯ ವೈ ।
ಏವಂ ಪಾತ್ರೇಷು ನಾನಾತ್ವಮಿಷ್ಯತೇ ಪುರುಷಂ ಪ್ರತಿ ॥೭೭೨॥

ಆಪತ್ತಿನಲ್ಲಿರುವ ಮನುಷ್ಯನು ಯಾವ ವಸ್ತುವನ್ನು ಪಡೆದುಕೊಳ್ಳುವುದರಿಂದ ಸನ್ನಿಹಿತವಾಗಿರುವ ಆಪತ್ತಿನಿಂದ ಪಾರಾಗುವನೋ–ಆ ವಸ್ತುವಿಗೆ ಅವನೇ ಸತ್ಪಾತ್ರನು. ಹಸಿದಿರುವವನು ಅನ್ನದಾನಕ್ಕೆ ಪಾತ್ರನು. ಬಾಯಾರಿರುವವನು ಜಲದಾನಕ್ಕೆ ಪಾತ್ರನು. ಹೀಗೆ ದಾನಕ್ಕೆ ಪಾತ್ರರಾದ ಪುರುಷರಲ್ಲಿ ನಾನಾತ್ವವಿರುತ್ತದೆ. (ಹೊಟ್ಟೆತುಂಬಿದವನು ಅನ್ನದಾನಕ್ಕೆ ಪಾತ್ರನಾಗುವುದಿಲ್ಲ. ಯಾವನಿಗೆ ಯಾವ ವಸ್ತುವಿನ ಅವಶ್ಯಕತೆಯಿರುವುದೋ ಯಾವ ವಸ್ತುವನ್ನು ಪಡೆದುಕೊಳ್ಳುವುದರಿಂದ ಆ ಮನುಷ್ಯನು ಆಪತ್ತಿನಿಂದ ಪಾರಾಗುವನೋ– ಅಂತಹ ಮನುಷ್ಯನಿಗೆ ಅವನ ಆಪತ್ಪರಿಹಾರಕವಾದ ವಸ್ತುವನ್ನು ದಾನವಾಗಿ ಕೊಡಬೇಕು. ಹಾಗೆ ದಾನಪಡೆಯುವವನು ಸತ್ಪಾತ್ರನೂ ಆಗಿರಬೇಕು.)

ಜಾರಶ್ಚೋರಶ್ಚ ಷಣ್ಡಶ್ಚ ಹಿಂಸ್ರಃ ಸಮಯಭೇದಕಃ ।
ಲೋಕವಿಘ್ನಕರಾಶ್ಚಾನ್ಯೇ ವರ್ಜಿತಾಃ ಸರ್ವಶಃ ಪ್ರಿಯೇ ॥೭೭೩॥

ವ್ಯಭಿಚಾರಿಗಳು, ಚೋರರು, ಷಂಡರು, ಕ್ರೂರಿಗಳು, ಪ್ರತಿಜ್ಞೆಯನ್ನು ಭಂಗಮಾಡುವವರು, ಜನರ ಕಾರ್ಯಕ್ಕೆ ವಿಘ್ನವನ್ನುಂಟುಮಾಡುವವರು–ಇವರೆಲ್ಲರೂ ಪ್ರತಿಗ್ರಹಕ್ಕೆ ಅನರ್ಹರು.

ಪರೋಪಘಾತಾದ್ಯದ್ದ್ರವ್ಯಂ ಚೌರ್ಯಾದ್ವಾ ಲಭ್ಯತೇ ನೃಭಿಃ ।
ನಿರ್ದಯಾಲ್ಲಭ್ಯತೇ ಯಚ್ಚ ಧೂರ್ತಭಾವೇನ ವೈ ತಥಾ ॥೭೭೪॥
ಅಧರ್ಮಾದರ್ಥಮೋಹಾದ್ವಾ ಬಹೂನಾಮುಪರೋಧನಾತ್ ।
ಲಭ್ಯತೇ ಯದ್ಧನಂ ದೇವಿ ತದತ್ಯನ್ತವಿಗರ್ಹಿತಮ್ ॥೭೭೫॥

ಇತರರನ್ನು ವಧಿಸುವುದರಿಂದ ಮತ್ತು ಕಳ್ಳತನದಿಂದ ಸಿಕ್ಕುವ ಧನ, ನಿರ್ದಯತೆಯಿಂದ ಬಲಾತ್ಕಾರಪೂರ್ವಕವಾಗಿ ತೆಗೆದುಕೊಂಡ ಧನ, ಧೂರ್ತಭಾವದಿಂದ ಭಯವನ್ನು ಹುಟ್ಟಿಸಿ ಪಡೆದುಕೊಂಡ ಧನ, ಧನದ ಮೇಲಿನ ವ್ಯಾಮೋಹದಿಂದ ಅಧರ್ಮಮಾರ್ಗದಿಂದ ಸಂಪಾದಿಸಿದ ಧನ, ಬಹುಜನರನ್ನು ಬಲಾತ್ಕರಿಸಿ ಸಂಪಾದಿಸಿದ ಧನ–ಇವೆಲ್ಲವೂ ನಿಂದಿತವಾದುವುಗಳು.

ತಾದೃಶೇನ ಕೃತಂ ಧರ್ಮಂ ನಿಷ್ಫಲಂ ವಿದ್ಧಿ ಭಾಮಿನಿ ।
ತಸ್ಮಾನ್ನ್ಯಾಯಾಗತೇನೈವ ದಾತವ್ಯಂ ಶುಭಮಿಚ್ಛತಾ ॥೭೭೬॥

ಅಂತಹ ಧನದಿಂದ ಮಾಡಿದ ಧರ್ಮವು ಖಂಡಿತವಾಗಿಯೂ ನಿಷ್ಫಲವಾಗುತ್ತದೆ. ಆದುದರಿಂದ ಶುಭಕಾಮನು ನ್ಯಾಯವಾದ ರೀತಿಯಲ್ಲಿ ಸಂಪಾದಿಸಿದ ದ್ರವ್ಯವನ್ನೇ ದಾನಮಾಡಬೇಕು.

ಯದ್ಯದಾತ್ಮಪ್ರಿಯಂ ನಿತ್ಯಂ ತತ್ತದ್ದೇಯಮಿತಿ ಸ್ಥಿತಿಃ ।
ಉಪಕ್ರಮಮಿಮಂ ವಿದ್ಧಿ ದಾತೄಣಾಂ ಪರಮಂ ಹಿತಮ್ ॥೭೭೭॥

ತನಗೆ ಯಾವ ವಸ್ತುವು ಅತ್ಯಂತಪ್ರಿಯವಾಗಿರುವುದೋ–ಆ ವಸ್ತುವನ್ನೇ ದಾನಮಾಡಬೇಕು. ಹೀಗೆ ದಾನಕೊಡಲು ಉಪಕ್ರಮಿಸುವುದು ದಾನಿಗಳಿಗೆ ಪರಮಹಿತದಾಯಕವೆಂದು ಭಾವಿಸು.

ಪಾತ್ರಭೂತಂ ತು ದೂರಸ್ಥಮಭಿಗಮ್ಯ ಪ್ರಸಾದ್ಯ ಚ ।
ದಾತಾ ದಾನಂ ತಥಾ ದದ್ಯಾದ್ಯಥಾ ತುಷ್ಯೇತ ತೇನ ಸಃ ॥೭೭೮॥

ಏಷ ದಾನವಿಧಿಃ ಶ್ರೇಷ್ಠಃ ಸಮಾಹೂಯ ತು ಮಧ್ಯಮಃ ।

ದಾನಕೊಡಲು ಸತ್ಪಾತ್ರನಾಗಿರುವವನು ಬಹಳ ದೂರದಲ್ಲಿಯೇ ಇದ್ದರೂ ಅವನ ಬಳಿಗೆ ಹೋಗಿ ಅವನನ್ನು ಪ್ರಸನ್ನಗೊಳಿಸಿ, ಅವನು ಸಂತೋಷಿಸುವ ರೀತಿಯಲ್ಲಿ ಅವನಿಗೆ ದಾನವನ್ನು ಕೊಡಬೇಕು. ಹೀಗೆ ದಾನಮಾಡುವುದು ಅತ್ಯಂತಶ್ರೇಷ್ಠವಾದುದು. ದಾನಕ್ಕೆ ಪಾತ್ರನಾದವನನ್ನು ತನ್ನ ಮನೆಗೆ ಆಹ್ವಾನಿಸಿ ದಾನಕೊಡುವುದು ಮಧ್ಯಮಶ್ರೇಣಿಯದು.

ಪೂರ್ವಂ ಚ ಪಾತ್ರತಾಂ ಜ್ಞಾತ್ವಾ ಸಮಾಹೂಯ ನಿವೇದ್ಯ ಚ ।
ಶೌಚಾಚಮನಸಂಯುಕ್ತಂ ದಾತವ್ಯಂ ಶ್ರದ್ಧಯಾ ಪ್ರಿಯೇ ॥೭೭॥

ಮೊದಲು ಪ್ರತಿಗ್ರಹಮಾಡುವವನು ಸತ್ಪಾತ್ರನೇ ಎಂಬುದನ್ನರಿತು ಅವನನ್ನು ಮನೆಗೆ ಆಹ್ವಾನಿಸಿ, ಅವನಿಗೆ ದಾನಕೊಡಲಿರುವ ವಿಷಯವನ್ನು ನಿವೇದಿಸಿ, ಅನಂತರ ಸ್ನಾನಾದಿಗಳಿಂದ ಪವಿತ್ರನಾಗಿ ಶ್ರದ್ಧಾಪೂರ್ವಕವಾಗಿ ದಾನಮಾಡಬೇಕು.

ಯಾಚಿತ್ವಾಣಾಂ ತು ಪರಮಮಾಭಿಮುಖ್ಯಂ ಪುರಸ್ಕೃತಮ್ ।
ಸಮ್ಮಾನಪೂರ್ವಂ ಸಂಗ್ರಾಹ್ಯಂ ದಾತವ್ಯಂ ದೇಶಕಾಲಯೋಃ ।
ಅಪಾತ್ರೇಭ್ಯೋಽಪಿ ಚಾನ್ಯೇಭ್ಯೋ ದಾತವ್ಯಂ ಭೂತಿಮಿಚ್ಛತಾ ॥೭೦॥

ಯಾಚಿಸುವವರಲ್ಲಿ ಅರ್ಹರಾದವರನ್ನು ಯಥಾಯೋಗ್ಯವಾಗಿ ಪುರಸ್ಕರಿಸಿ ಸಮ್ಮಾನಪೂರ್ವಕವಾಗಿ ತನ್ನ ಮುಂಭಾಗದಲ್ಲಿ ಕುಳ್ಳಿರಿಸಿಕೊಂಡು ದೇಶ-ಕಾಲಗಳಿಗೆ ತಕ್ಕಂತೆ ದಾನಮಾಡಬೇಕು. ಐಶ್ವರ್ಯವನ್ನು ಬಯಸುವವನು ಸಮಯಗಳಲ್ಲಿ ಅಪಾತ್ರರಾದವರಿಗೂ ಅನ್ನ-ವಸ್ತ್ರಾದಿಗಳನ್ನು ದಾನಮಾಡಬೇಕು.

ಪಾತ್ರಾಣಿ ಸಮ್ಪರೀಕ್ಷ್ಯೈವ ದಾತ್ರಾ ವೈ ದಾನಮಾತ್ರಯಾ ।
ಅತಿಶಕ್ತ್ಯಾ ಪರಂ ದಾನಂ ಯಥಾಶಕ್ತ್ಯಾ ತು ಮಧ್ಯಮಮ್ ।
ತೃತೀಯಂ ಚಾಪರಂ ದಾನಂ ನಾನುರೂಪಮಿವಾತ್ಮನಃ ॥೭೮॥

ದಾನಕ್ಕೆ ಯೋಗ್ಯರಾದವರನ್ನು ಚೆನ್ನಾಗಿ ಪರೀಕ್ಷಿಸಿ ತನ್ನ ಶಕ್ತಿಮೀರಿ ದಾನಕೊಡುವುದು ಸರ್ವಶ್ರೇಷ್ಠವಾದುದು. ಯಥಾಶಕ್ತಿ ದಾನಕೊಡುವುದು

ಮಧ್ಯಮರೀತಿಯದು. ತನ್ನ ಶಕ್ತಿಗೆ ಅನುರೂಪವಲ್ಲದ ದಾನವನ್ನು ಕೊಡುವುದು (ಹೆಚ್ಚು ದಾನಕೊಡಲು ಶಕ್ತಿಯಿದ್ದರೂ ಬಹಳ ಕಡಿಮೆಯಾಗಿ ದಾನ ಮಾಡುವುದು) ಅಧಮರೀತಿಯ ದಾನವಾಗಿದೆ.

ಯಥಾ ಸಮ್ಭಾವಿತಂ ಪೂರ್ವಂ ದಾತವ್ಯಂ ತತ್ತಥೈವ ಚ ।
ಪುಣ್ಯಕ್ಷೇತ್ರೇಷು ಯದ್ದತ್ತಂ ಪುಣ್ಯಕಾಲೇಷು ವಾ ತಥಾ ।
ತಚ್ಛೋಭನತರಂ ವಿದ್ಧಿ ಗೌರವಾದ್ದೇಶಕಾಲಯೋಃ ॥೭೮೨॥

ಹಿಂದೆ ಯಾವುದಾದರೂ ಸಮಯದಲ್ಲಿ ಇಷ್ಟೇ ದಾನಮಾಡುವೆನೆಂದು ವಾಗ್ದಾನಮಾಡಿದ್ದರೆ ಹಾಗೆಯೇ ದಾನಮಾಡಬೇಕು. ಪುಣ್ಯಕ್ಷೇತ್ರಗಳಲ್ಲಿ ಮತ್ತು ಪುಣ್ಯಕಾಲಗಳಲ್ಲಿ ಮಾಡುವ ದಾನವು ದೇಶ ಮತ್ತು ಕಾಲಗಳ ಮಹತ್ತ್ವದಿಂದಾಗಿ ಹೆಚ್ಚು ಶುಭಫಲವನ್ನು ಕೊಡುವುದೆಂದು ತಿಳಿ."

ಉಮೆ :

"ಪರಮೇಶ್ವರ! ನಿನ್ನ ಅಭಿಪ್ರಾಯದಲ್ಲಿ ಪುಣ್ಯತಮವಾದ ದೇಶವು ಯಾವುದು ಮತ್ತು ಕಾಲವು ಯಾವುದು ?"

ಮಹೇಶ್ವರ :

ಕುರುಕ್ಷೇತ್ರಂ ಮಹಾನದ್ಯೋ ಯಚ್ಚ ದೇವರ್ಷಿಸೇವಿತಮ್ ।
ಗಿರಿರ್ವರಶ್ಚ ತೀರ್ಥಾನಿ ದೇಶಭಾಗೇಷು ಪೂಜಿತಃ ।
ಗ್ರಹೀತುಮೀಪ್ಸತೇ ಯತ್ರ ತತ್ರ ದತ್ತಂ ಮಹಾಫಲಮ್ ॥೭೮೪॥

"ದೇವಿ! ಕುರುಕ್ಷೇತ್ರ, ಗಂಗೆಯೇ ಮೊದಲಾದ ಮಹಾನದಿಗಳು, ದೇವತೆಗಳಿಂದಲೂ ಮತ್ತು ಋಷಿಗಳಿಂದಲೂ ಸೇವಿಸಲ್ಪಟ್ಟ ಸ್ಥಾನ, ಶ್ರೇಷ್ಠವಾದ ಪರ್ವತಪ್ರದೇಶಗಳು ಮತ್ತು ತೀರ್ಥಗಳು–ಇವೆಲ್ಲವೂ ಪುಣ್ಯತಮ ಪ್ರದೇಶಗಳೇ ಆಗಿವೆ. ದೇಶದ ಎಲ್ಲ ಕಡೆಗಳಲ್ಲಿಯೂ ಪೂಜಿತನಾದ ಶ್ರೇಷ್ಠ ಪುರುಷನು ದಾನವನ್ನು ಪ್ರತಿಗ್ರಹಿಸಲು ಇಚ್ಛಿಸಿದರೆ ಅಂತಹವನಿಗೆ ಕೊಡುವ ದಾನವು ಮಹಾಫಲದಾಯಕವು.

ಶರದ್ವಸನ್ತಕಾಲಶ್ಚ ಪುಣ್ಯಮಾಸಸ್ತಥೈವ ಚ ।
ಶುಕ್ಲಪಕ್ಷಶ್ಚ ಪಕ್ಷಾಣಾಂ ಪೌರ್ಣಮಾಸೀ ಚ ಪರ್ವಸು ॥೭೮೫॥

ಪಿತೃದೈವತನಕ್ಷತ್ರನಿರ್ಮಲೋ ದಿವಸಸ್ತಥಾ ।
ತಚ್ಛೋಭನತರಂ ವಿದ್ಧಿ ಚನ್ದ್ರಸೂರ್ಯಗ್ರಹೇ ತಥಾ ॥೭೮೬॥

ದಾನಕ್ಕೆ ಶರತ್ ಮತ್ತು ವಸಂತಕಾಲಗಳು ಪುಣ್ಯತಮವಾದುವು. ಪವಿತ್ರವಾದ ಮಾಸ, ಪಕ್ಷಗಳಲ್ಲಿ ಶುಕ್ಲಪಕ್ಷ, ಪರ್ವಗಳಲ್ಲಿ ಹುಣ್ಣಿಮೆ, ಮಘಾ ನಕ್ಷತ್ರಯುಕ್ತವಾದ ನಿರ್ಮಲವಾದ ದಿವಸ, ಚಂದ್ರಗ್ರಹಣ-ಸೂರ್ಯ ಗ್ರಹಣ–ಈ ದಿವಸಗಳಲ್ಲಿ ದಾನಮಾಡುವುದು ಅತ್ಯಂತಶುಭದಾಯಕವು.

ದಾತಾ ದೇಯಂ ಚ ಪಾತ್ರಂ ಚ ಉಪಕ್ರಮಯುತಾ ಕ್ರಿಯಾ ।
ದೇಶಕಾಲಂ ತಥೇತ್ಯೇಷಾಂ ಸಮ್ಪಚ್ಛುದ್ಧಿಃ ಪ್ರಕೀರ್ತಿತಾ ॥೭೮೭॥

ದಾನಕೊಡುವವನು, ದಾನಕೊಡುವ ವಸ್ತು, ದಾನವನ್ನು ತೆಗೆದು ಕೊಳ್ಳುವ ಸತ್ಪಾತ್ರನು, ಉಪಕ್ರಮಯುಕ್ತವಾದ ಕ್ರಿಯೆ, ಉತ್ತಮವಾದ ದೇಶ ಮತ್ತು ಉತ್ತಮವಾದ ಕಾಲ–ಈ ಆರರ ಸಂಪತ್ತನ್ನು ಶುದ್ಧಿಯೆಂದು ಹೇಳುತ್ತಾರೆ.

ಯದೈವ ಯುಗಪತ್ಸಮ್ಪತ್ತತ್ರ ದಾನಂ ಮಹದ್ಭವೇತ್ ।
ಅತ್ಯಲ್ಪಮಪಿ ಯದ್ದಾನಮೇಭಿಃ ಷಡ್ಭಿರ್ಗುಣೈರ್ಯುತಮ್ ।
ಭೂತ್ವಾನನ್ತಂ ನಯೇತ್ಸ್ವರ್ಗಂ ದಾತಾರಂ ದೋಷವರ್ಜಿತಮ್ ॥

ಈ ಆರೂ ಕೂಡಿಬಂದಲ್ಲಿ ಅಂತಹ ದಾನವು ಮಹಾಫಲವನ್ನು ಕೊಡುತ್ತದೆ. ಈ ಆರು ಗುಣಗಳಿಂದ ಯುಕ್ತವಾದ ದಾನವು ಅಲ್ಪವೇ ಆಗಿದ್ದರೂ ಅನಂತಫಲದಾಯಕವಾಗಿ ದಾತೃವನ್ನು ದೋಷಗಳಿಂದ ವಿಮುಕ್ತನನ್ನಾಗಿ ಮಾಡಿ ಸ್ವರ್ಗಕ್ಕೆ ಒಯ್ಯುತ್ತದೆ.”

ಉಮೆ :

“ಇಂತಹ ಗುಣಯುತವಾದ ದಾನವೂ ನಿಷ್ಫಲವಾಗುವುದೇ? ಯಾವ ಕಾರಣದಿಂದ ನಿಷ್ಫಲವಾಗುತ್ತದೆ.”

ಮಹೇಶ್ವರ :

"ದೇವಿ! ಕೆಲವು ವೇಳೆ ಮನುಷ್ಯರ ದೋಷಯುಕ್ತವಾದ ಭಾವನೆಯಿಂದಾಗಿ ನೀನು ಹೇಳಿದಂತೆ ಸಂಪಚ್ಛುದ್ಧವಾದ ದಾನವೂ ನಿಷ್ಫಲವಾಗುತ್ತದೆ.

ಕೃತ್ವಾ ಧರ್ಮಂ ತು ವಿಧಿವತ್ಪಶ್ಚಾತ್ತಾಪಂ ಕರೋತಿ ಚೇತ್ ।
ಶ್ಲಾಘಯಾ ವಾ ಯದಿ ಬ್ರೂಯಾದ್ವೃಥಾ ಸಂಸದಿ ಯತ್ಕೃತಮ್ ॥

ವಿಧಿವತ್ತಾಗಿ ಧರ್ಮಕಾರ್ಯವನ್ನು ಮಾಡಿ (ದಾನಮಾಡಿ) ಅನಂತರ ತಾನು ದಾನಕೊಟ್ಟುದಕ್ಕಾಗಿ ಪಶ್ಚಾತ್ತಾಪಪಟ್ಟರೆ ಅಥವಾ ತಾನು ಕೊಟ್ಟುದನ್ನು ತುಂಬಿದ ಸಭೆಯಲ್ಲಿ ಹೇಳಿಕೊಂಡರೆ ಅಂತಹ ದಾನವು ನಿಷ್ಫಲವಾಗುತ್ತದೆ.

ಏತೇ ದೋಷಾ ವಿವರ್ಜ್ಯಾಶ್ಚ ದಾತೃಭಿಃ ಪುಣ್ಯಕಾಂಕ್ಷಿಭಿಃ ।
ಸನಾತನಮಿದಂ ವೃತ್ತಂ ಸದ್ಭಿರಾಚರಿತಂ ತಥಾ ॥೬೧॥

ಪುಣ್ಯಾಪೇಕ್ಷಿಗಳು ಇಂತಹ ದೋಷಗಳನ್ನು ಪರಿತ್ಯಾಗಮಾಡಬೇಕು. ದಾನಕ್ಕೆ ಸಂಬಂಧಿಸಿದ ಈ ಆಚಾರ ಹಿಂದಿನ ಕಾಲದಿಂದಲೂ ನಡೆದುಕೊಂಡು ಬಂದಿದೆ ; ಸತ್ಪುರುಷರಿಂದಲೂ ಆಚರಿಸಲ್ಪಟ್ಟಿದೆ.

ಅನುಗ್ರಹಾತ್ಪರೇಷಾಂ ತು ಗೃಹಸ್ಥಾನಾಮೃಣಂ ಹಿ ತತ್ ।
ಇತ್ಯೇವಂ ಮನ ಆವಿಶ್ಯ ದಾತವ್ಯಂ ಸತತಂ ಬುಧೈಃ ॥೬೨॥

ಇತರರಿಗೆ ಅನುಗ್ರಹವುಂಟಾಗಲೆಂದೇ ಗೃಹಸ್ಥರಿಗೆ ಋಣರೂಪವಾದ ಈ ದಾನಕ್ರಿಯೆಯು ಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟಿದೆ–ಹೀಗೆ ಮನಸ್ಸಿನಲ್ಲಿ ನಿರ್ಧರಿಸಿಕೊಂಡು ವಿದ್ವಾಂಸರು ಯಾವಾಗಲೂ ದಾನಮಾಡುತ್ತಲೇ ಇರಬೇಕು. ಹೀಗೆ ಭಾವಿಸಿಕೊಂಡು ದಾನಮಾಡುತ್ತಿದ್ದರೆ ಮಹಾಫಲವು ಲಭಿಸುತ್ತದೆ. ಸರ್ವಸಾಧಾರಣವಾದ ದ್ರವ್ಯವನ್ನು ಈ ಮನೋಭಾವನೆಯನ್ನಿಟ್ಟುಕೊಂಡು ದಾನಮಾಡಿದಲ್ಲಿ ಮಹಾಫಲವೇ ಪ್ರಾಪ್ತವಾಗುತ್ತದೆ."

ಉಮೆ :

"ಪತಿದೇವನೇ! ಧರ್ಮದ ಉದ್ದೇಶದಿಂದ ಮನುಷ್ಯರು ಯಾವ

ಯಾವ ವಸ್ತುಗಳನ್ನು ದಾನವಾಗಿ ಕೊಡಬೇಕು? ಆ ಪದಾರ್ಥಗಳನ್ನು ನಾನು ಕೇಳಲು ಬಯಸಿದ್ದೇನೆ. ಅವುಗಳನ್ನು ಹೇಳುವ ಕೃಪೆಮಾಡು."

ಮಹೇಶ್ವರ :

ಅಜಸ್ರಂ ಧರ್ಮಕಾರ್ಯಂ ಚ ತಥಾ ನೈಮಿತ್ತಿಕಂ ಪ್ರಿಯೇ ।
ಅನ್ನಂ ಪ್ರತಿಶ್ರಯೋ ದೀಪಃ ಪಾನೀಯಂ ತೃಣಮಿನ್ಧನಮ್ ॥೭೯೫॥

ಸ್ನೇಹೋ ಗನ್ಧಶ್ಚ ಭೈಷಜ್ಯಂ ತಿಲಾಶ್ಚ ಲವಣಂ ತಥಾ ।
ಏವಮಾದಿ ತಥಾನ್ಯಚ್ಚ ದಾನಮಾಜಸ್ರಮುಚ್ಯತೇ ॥೭೯೬॥

"ಪ್ರಿಯಳೇ! ನಿರಂತರವೂ ಧರ್ಮಕಾರ್ಯಗಳನ್ನೂ–ನೈಮಿತ್ತಿಕ ಕರ್ಮಗಳನ್ನೂ ಮಾಡುತ್ತಲೇ ಇರಬೇಕು. ಅನ್ನ, ವಸತಿ, ದೀಪ, ಜಲ, ತೃಣ, ಇಂಧನ, ತೈಲ, ಗಂಧ, ಔಷಧ, ಎಳ್ಳು ಮತ್ತು ಉಪ್ಪು–ಇವೇ ಮುಂತಾದು ವುಗಳು ನಿರಂತರವಾಗಿ ಕೊಡತಕ್ಕ ದಾನವಸ್ತುಗಳೆಂದು ಹೇಳುತ್ತಾರೆ.

ಅನ್ನಂ ಪ್ರಾಣೋ ಮನುಷ್ಯಾಣಾಮನ್ನದಃ ಪ್ರಾಣದೋ ಭವೇತ್ ।
ತಸ್ಮಾದನ್ನಂ ವಿಶೇಷೇಣ ದಾತುಮಿಚ್ಛತಿ ಮಾನವಃ ॥೭೯೭॥

ಮನುಷ್ಯರಿಗೆ ಅನ್ನವೇ ಪ್ರಾಣವಾಗಿದೆ. ಆದುದರಿಂದ ಅನ್ನದಾನಿಯು ಪ್ರಾಣದಾನಿಯೂ ಆಗುತ್ತಾನೆ. ಆದುದರಿಂದ ಮನುಷ್ಯನು ಯಾವಾಗಲೂ ವಿಶೇಷವಾಗಿ ಅನ್ನವನ್ನೇ ದಾನಮಾಡಲು ಬಯಸುತ್ತಾನೆ.

ಬ್ರಾಹ್ಮಣಾಯಾಭಿರೂಪಾಯ ಯೋ ದದ್ಯಾದನ್ನಮೀಪ್ಸಿತಮ್ ।
ನಿದಧಾತಿ ನಿಧಿಶ್ರೇಷ್ಠಂ ಸೋಽನನ್ತಂ ಪಾರಲೌಕಿಕಮ್ ॥೭೯೮॥

ಯಾವನು ಅನುರೂಪನಾದ ಬ್ರಾಹ್ಮಣನಿಗೆ, ಅವನಿಗೆ ಅಭೀಷ್ಟವಾದ ಅನ್ನವನ್ನು ದಾನಮಾಡುವನೋ–ಅಂತಹವನು ಪರಲೋಕಕ್ಕೆ ಸಂಬಂಧಿಸಿದ ಅನಂತವಾದ ಮತ್ತು ಶ್ರೇಷ್ಠವಾದ ನಿಧಿಯನ್ನು ಸ್ಥಾಪನೆಮಾಡುತ್ತಾನೆ. ಅಂತಹ ನಿಧಿಯು ಅವನ ಪರಮಸುಖಕ್ಕೆ ಕಾರಣವಾಗುತ್ತದೆ.

ಶ್ರಾನ್ತಮಧ್ವಪರಿಶ್ರಾನ್ತಮತಿಥಿಂ ಗೃಹಮಾಗತಮ್ ।
ಅರ್ಚಯೀತ ಪ್ರಯತ್ನೇನ ಸ ಹಿ ಯಜ್ಞೋ ವರಪ್ರದಃ ॥೭೯೯॥

ದಾರಿಯನ್ನು ನಡೆದು ಬಹಳವಾಗಿ ಬಳಲಿ ಮನೆಗೆ ಆಗಮಿಸುವ ಅತಿಥಿಯನ್ನು ಪ್ರಯತ್ನಪೂರ್ವಕವಾಗಿ ಶ್ರದ್ಧೆಯಿಂದ ಸತ್ಕರಿಸಬೇಕು. ಅಂತಹ ಅತಿಥಿಸತ್ಕಾರವು ಮಹಾವರಪ್ರದವಾದ ಯಜ್ಞವೇ ಆಗುತ್ತದೆ.

ಪಿತರಸ್ತಸ್ಯ ನನ್ದನ್ತಿ ಸುವೃಷ್ಟ್ಯಾ ಕರ್ಷಕಾ ಇವ ।
ಪುತ್ರೋ ಯಸ್ಯ ತು ಪೌತ್ರೋ ವಾ ಶ್ರೋತ್ರಿಯಂ ಭೋಜಯಿಷ್ಯತಿ ॥೮೦೦॥

ಯಾವನ ಮಗನಾಗಲೀ ಮೊಮ್ಮಗನಾಗಲೀ ಶ್ರೋತ್ರಿಯನಾದ ಬ್ರಾಹ್ಮಣನೊಬ್ಬನಿಗೆ ಭೋಜನಮಾಡಿಸುವನೋ ಅವನ ಪಿತೃಗಳು ಸುವೃಷ್ಟಿಯಿಂದ ರೈತರು ಸಂತೋಷಪಡುವಂತೆ–ಸಂತೋಷಿಸುತ್ತಾರೆ.

ಅಪಿ ಚಾಣ್ಡಾಲಶೂದ್ರಾಣಾಮನ್ನದಾನಂ ನ ಗರ್ಹ್ಯತೇ ।
ತಸ್ಮಾತ್ಸರ್ವಪ್ರಯತ್ನೇನ ದದ್ಯಾದನ್ನಮಮತ್ಸರಃ ॥೮೦೧॥

ಚಂಡಾಲ-ಶೂದ್ರರಿಗಾದರೂ ಅನ್ನದಾನಮಾಡುವುದು ನಿಂದ್ಯವೆನಿಸುವುದಿಲ್ಲ. ಆದುದರಿಂದ ಯಾವ ಮಾತ್ಸರ್ಯವೂ ಇಲ್ಲದೇ ಸರ್ವಪ್ರಯತ್ನದಿಂದಲೂ ಮನುಷ್ಯನು ಅನ್ನದಾನಮಾಡಬೇಕು.

ಅನಿಂದ್ಯಳೇ! ಅನ್ನದಾನದಿಂದ ಯಾವ ಲೋಕಗಳು ಲಭಿಸುವುವೆಂಬುದನ್ನು ಹೇಳುತ್ತೇನೆ. ಅನ್ನದಾನಮಾಡುವ ಮಹಾತ್ಮರ ಭವನಗಳು ಸ್ವರ್ಗಲೋಕದಲ್ಲಿ ಯಾವಾಗಲೂ ಪ್ರಕಾಶಿಸುತ್ತಿರುತ್ತವೆ.

ಸ್ವರ್ಗದಲ್ಲಿರುವ ಅವರ ಸೌಧಗಳು ನೂರಾರು ಉಪ್ಪರಿಗೆಗಳನ್ನು ಹೊಂದಿರುತ್ತವೆ. ಅವುಗಳಲ್ಲಿ ಅನೇಕ ಅಂತರ್ಜಲಗಳೂ ಮತ್ತು ಉದ್ಯಾನ ಗಳು ಇರುತ್ತವೆ. ವೈಡೂರ್ಯಮಣಿಗಳಿಂದ ಆ ಸೌಧಗಳು ಪ್ರಕಾಶಿಸುತ್ತಿರು ತ್ತವೆ. ಚಿನ್ನದ ಮತ್ತು ಬೆಳ್ಳಿಗಳಂತೆಯೇ ಅವು ಕಂಗೊಳಿಸುತ್ತಿರುತ್ತವೆ. ಆ ಭವನಗಳಿಗೂ ಅನೇಕರೂಪಗಳಿರುತ್ತವೆ. ಅವು ನಾನಾರತ್ನಗಳಿಂದಲೇ ನಿರ್ಮಿಸಲ್ಪಟ್ಟಿವೆ. ಚಂದ್ರಮಂಡಲದಷ್ಟು ಶುಭ್ರವಾಗಿವೆ. ಚಿಕ್ಕ-ಚಿಕ್ಕ ಗಂಟೆಗಳ ಸಾಲುಗಳಿಂದ ಶೋಭಾಯಮಾನವಾಗಿವೆ. ಬಾಲಸೂರ್ಯನ ವರ್ಣದಿಂದ ಕೂಡಿವೆ. ಅನ್ನದಾನಿಗಳಾದ ಮಹಾತ್ಮರಿಗೆ ಲಭಿಸುವ ಭವನಗಳು ಸಂಚರಿ ಸುತ್ತಲೂ ಒಂದೆಡೆಯಲ್ಲಿಯೇ ಸ್ಥಿರವಾಗಿಯೂ ಇರುತ್ತವೆ. ಅವುಗಳಲ್ಲಿ

ಯಾವಾಗಲೂ ಯಥೇಷ್ಟವಾದ ಭಕ್ಷ್ಯ-ಭೋಜ್ಯಗಳು ತುಂಬಿರುತ್ತವೆ. ಹಾಸಿಗೆ ಮತ್ತು ಆಸನಗಳೂ ಸಿದ್ಧವಾಗಿರುತ್ತವೆ. ಆ ಭವನಗಳಲ್ಲಿಯೇ ಸಕಲಕಾಮನೆಗಳನ್ನೂ ಒದಗಿಸಿಕೊಡುವ ಕಲ್ಪವೃಕ್ಷಗಳೂ ಇವೆ. ಸಾವಿರಾರು ಬಾವಿಗಳೂ, ಕೂಪಗಳೂ, ಜಲಾಶಯಗಳೂ ಇವೆ. ಪ್ರಾಣಸ್ವರೂಪವಾದ ಅನ್ನವನ್ನು ದಾನಮಾಡುವವರಿಗೆ ಸ್ವರ್ಗಲೋಕದಲ್ಲಿ ನಾನಾವಿಧವಾದ, ವಿಚಿತ್ರವಾದ, ರೋಗ-ಶೋಕಗಳಿಂದ ರಹಿತವಾದ, ಚಿರಸ್ಥಾಯಿಯಾದ ಭವನಗಳು ಸಿದ್ಧವಾಗಿವೆ. ಪ್ರಪಂಚದಲ್ಲಿ ಅನ್ನವನ್ನು ಮತ್ತು ನೀರನ್ನು ದಾನ ಮಾಡುವವರು ಸೂರ್ಯ, ಚಂದ್ರ ಮತ್ತು ಪ್ರಜಾಪತಿ ಬ್ರಹ್ಮರ ಲೋಕಗಳಿಗೂ ಹೋಗುತ್ತಾರೆ. ಅವರು ಅಲ್ಲಿ ಅಪ್ಸರೆಯರ ಸಮೂಹದೊಡನೆ ಬಹಳ ಕಾಲದವರೆಗೆ ವಿಹರಿಸುತ್ತಿದ್ದು, ಪುನಃ ಮನುಷ್ಯಲೋಕದಲ್ಲಿ ಸಮಸ್ತ ಕಲ್ಯಾಣಗುಣಸಂಪನ್ನರಾಗಿ ಹುಟ್ಟುತ್ತಾರೆ. ಅನ್ನದಾನಮಾಡಿದ ಜನರು ಬಲಿಷ್ಠವಾದ ಶರೀರವುಳ್ಳವರೂ, ರೋಗರಹಿತರೂ, ಚಿರಜೀವಿಗಳೂ, ಕುಲೀನರೂ, ಬುದ್ಧಿವಂತರೂ ಆಗುತ್ತಾರೆ. ಆದುದರಿಂದ ತನ್ನ ಕಲ್ಯಾಣವನ್ನು ಬಯಸುವವನು ಸರ್ವಕಾಲಗಳಲ್ಲಿಯೂ, ಎಲ್ಲರಿಗೂ, ಎಲ್ಲ ಕಡೆಗಳಲ್ಲಿಯೂ ಅನ್ನದಾನಮಾಡುತ್ತಲೇ ಇರಬೇಕು.

ಸುವರ್ಣದಾನಂ ಪರಮಂ ಸ್ವರ್ಗ್ಯಂ ಸ್ವಸ್ತ್ಯಯನಂ ಮಹತ್ ।
ತಸ್ಮಾತ್ತೇ ವರ್ಣಯಿಷ್ಯಾಮಿ ಯಥಾವದನುಪೂರ್ವಶಃ ।
ಅಪಿ ಪಾಪಕೃತಂ ಕ್ರೂರಂ ದತ್ತಂ ರುಕ್ಮಂ ಪ್ರಕಾಶಯೇತ್ ॥೮೦೨॥

ದೇವಿ! ಸುವರ್ಣದಾನವು ಪರಮಶ್ರೇಷ್ಠವಾದುದು, ಸ್ವರ್ಗಪ್ರಾಪಕ ವಾದುದು ಮತ್ತು ಮಹತ್ತಾದ ಕಲ್ಯಾಣವನ್ನು ಉಂಟುಮಾಡತಕ್ಕದ್ದು. ಆದುದರಿಂದ ಸುವರ್ಣದಾನದ ವಿಷಯವನ್ನು ನಿನಗೆ ಅನುಕ್ರಮವಾಗಿ ವಿವರಿಸಿ ಹೇಳುತ್ತೇನೆ. ಸುವರ್ಣದಾನವು ಮಹಾಪಾಪಿಷ್ಠನನ್ನೂ ಮತ್ತು ಕ್ರೂರಿಯನ್ನೂ ಅವರ ಪಾಪಗಳನ್ನು ಸಂಪೂರ್ಣವಾಗಿ ತೊಳೆದು ಪ್ರಕಾಶ ಯುಕ್ತರನ್ನಾಗಿ ಮಾಡುತ್ತದೆ.

ಯಾವ ಶುದ್ಧಹೃದಯರಾದ ಮನುಷ್ಯರು ಶ್ರೋತ್ರಿಯರಿಗೆ ಸುವರ್ಣ ವನ್ನು ದಾನಮಾಡುವರೋ–ಅವರು (ಆ ದಾನದಿಂದ) ದೇವತೆಗಳನ್ನೂ ತೃಪ್ತಿಗೊಳಿಸಿದಂತಾಗುತ್ತದೆ. ಇದು ಶ್ರುತಿಯ ಅಭಿಪ್ರಾಯವಾಗಿದೆ.

ಅಗ್ನಿರ್ಹಿ ದೇವತಾಃ ಸರ್ವಾಃ ಸುವರ್ಣಂ ಚಾಗ್ನಿರುಚ್ಯತೇ ।
ತಸ್ಮಾತ್ಸುವರ್ಣದಾನೇನ ತೃಪ್ತಾಃ ಸ್ಯುಃ ಸರ್ವದೇವತಾಃ ॥೮೦೪॥

ಅಗ್ನಿಯು ಎಲ್ಲ ದೇವತೆಗಳ ಸ್ವರೂಪನೇ ಆಗಿದ್ದಾನೆ. ಚಿನ್ನವನ್ನು ಅಗ್ನಿಯೆಂದೂ ಹೇಳುತ್ತಾರೆ. ಆದುದರಿಂದ ಸುವರ್ಣದಾನಮಾಡುವುದರಿಂದ ಎಲ್ಲ ದೇವತೆಗಳೂ ತೃಪ್ತರಾಗುತ್ತಾರೆ.

ಅಗ್ನ್ಯಭಾವೇ ತು ಕುರ್ವನ್ತಿ ವಹ್ನಿಸ್ಥಾನೇಷು ಕಾಞ್ಚನಮ್ ।
ತಸ್ಮಾತ್ಸುವರ್ಣದಾತಾರಃ ಸರ್ವಾನ್ಕಾಮಾನವಾಪ್ನುಯುಃ ॥೮೦೫॥

ಅಗ್ನಿಯ ಅಭಾವವಿದ್ದಾಗ ಅಗ್ನಿಯ ಸ್ಥಾನದಲ್ಲಿ ಸುವರ್ಣವನ್ನೇ ಇಡು ತ್ತಾರೆ. ಆದುದರಿಂದ ಸುವರ್ಣವನ್ನು ದಾನಮಾಡುವವರು ಸಕಲಕಾಮನೆ ಗಳನ್ನೂ ಪಡೆಯುತ್ತಾರೆ.

ಆದಿತ್ಯಸ್ಯ ಹುತಾಶಸ್ಯ ಲೋಕಾನ್ನಾನಾವಿಧಾಞ್ಶುಭಾನ್ ।
ಕಾಞ್ಚನಂ ಸಮ್ಪ್ರದಾಯಾಶು ಪ್ರವಿಶನ್ತಿ ನ ಸಂಶಯಃ ॥೮೦೬॥

ಸುವರ್ಣವನ್ನು ದಾನಮಾಡಿದ ಮನುಷ್ಯರು ಬಹಳ ಶೀಘ್ರವಾಗಿ ಅಗ್ನಿಯ ಮತ್ತು ಸೂರ್ಯನ ನಾನಾವಿಧವಾದ ಶುಭಲೋಕಗಳನ್ನು ಹೊಂದುತ್ತಾರೆ. ಇದರಲ್ಲಿ ಸಂಶಯವೇ ಇಲ್ಲ.

ಅಲಂಕಾರಂ ಕೃತಂ ಚಾಪಿ ಕೇವಲಾತ್ಪ್ರವಿಶಿಷ್ಯತೇ ।
ಸುವರ್ಣೈರ್ಬ್ರಾಹ್ಮಣಂ ಕಾಲೇ ತೈರಲಂಕೃತ್ಯ ಭೋಜಯೇತ್ ॥೮೦೭॥

ಯ ಏತತ್ಪರಮಂ ದಾನಂ ದತ್ತ್ವಾ ಸೌವರ್ಣಮದ್ಭುತಮ್ ।
ದ್ಯುತಿಂ ಮೇಧಾಂ ವಪುಃ ಕೀರ್ತಿಂ ಪುನರ್ಜಾತೇ ಲಭೇದ್ಧ್ರುವಮ್ ॥

ಬರೀ ಚಿನ್ನವನ್ನೇ ದಾನಕೊಡುವ ಬದಲು ಆಭರಣಗಳನ್ನು ಮಾಡಿಸಿ ದಾನಕೊಡುವುದು ಅತ್ಯಂತಶ್ರೇಷ್ಠವಾದುದು. ದಾನಕಾಲದಲ್ಲಿ ಬ್ರಾಹ್ಮಣನನ್ನು ಚಿನ್ನದ ಆಭರಣಗಳಿಂದ ಅಲಂಕರಿಸಿ ಭೋಜನವನ್ನು ಮಾಡಿಸಬೇಕು. ಇಂತಹ ಅದ್ಭುತವಾದ ಸುವರ್ಣವನ್ನು ದಾನಮಾಡುವವನು ಪುನರ್ಜನ್ಮ ವನ್ನು ಹೊಂದಿದಾಗ ಕಾಂತಿಯನ್ನೂ, ಮೇಧಾಶಕ್ತಿಯನ್ನೂ, ಸುಂದರವಾದ ಶರೀರವನ್ನೂ, ಕೀರ್ತಿಯನ್ನೂ ನಿಶ್ಚಯವಾಗಿಯೂ ಪಡೆದುಕೊಳ್ಳುತ್ತಾನೆ.

ಆದುದರಿಂದ ಮನುಷ್ಯರು ಶಕ್ತಿಗೆ ಅನುಸಾರವಾಗಿ ಸುವರ್ಣದಾನವನ್ನು ಮಾಡಬೇಕು. ಲೋಕದಲ್ಲಿ ಇದಕ್ಕಿಂತಲೂ ಶ್ರೇಷ್ಠವಾದ ದಾನವು ಮತ್ತೊಂದಿಲ್ಲ. ಸುವರ್ಣದಾನವು ಮನುಷ್ಯನನ್ನು ಪಾಪದಿಂದ ಮುಕ್ತಗೊಳಿಸುತ್ತದೆ.

ಪ್ರಿಯಳೇ! ನಾನು ಇನ್ನು ಮುಂದೆ ನಿನಗೆ ಗೋದಾನದ ವಿಷಯವಾಗಿ ಹೇಳುತ್ತೇನೆ. ಜಗತ್ತಿನಲ್ಲಿ ಗೋದಾನಕ್ಕಿಂತಲೂ ಶ್ರೇಷ್ಠವಾದ ದಾನವೇ ಮತ್ತೊಂದಿಲ್ಲ.

ಲೋಕಜ್ಯೇಷ್ಠಾ ಲೋಕವೃತ್ತ್ಯಾಂ ಪ್ರವೃತ್ತಾ
ಮಯ್ಯಾಯತ್ತಾಃ ಸೋಮನಿಷ್ಯನ್ದಭೂತಾಃ ।
ಸೌಮ್ಯಾಃ ಪುಣ್ಯಾಃ ಕಾಮದಾಃ ಪ್ರಾಣದಾಶ್ಚ
ತಸ್ಮಾತ್ಪೂಜ್ಯಾಃ ಪುಣ್ಯಕಾಮೈರ್ಮನುಷ್ಯೈಃ ॥೮೨॥

ಗೋವುಗಳು ಜಗತ್ತಿನಲ್ಲಿಯೇ ಶ್ರೇಷ್ಠವಾದುವುಗಳು. ಲೋಕದ ಜನರಿಗೆ ಜೀವನಾಧಾರದ ಕಾರ್ಯದಲ್ಲಿ ಪ್ರವೃತ್ತವಾಗಿರತಕ್ಕುವುಗಳು. ನನ್ನ ಅಧೀನದಲ್ಲಿರತಕ್ಕುವುಗಳು. ಚಂದ್ರನ ಅಮೃತಮವಾದ ಧಾರೆಯ ಸ್ವರೂಪವಾಗಿರತಕ್ಕವುಗಳು. ಸೌಮ್ಯಸ್ವಭಾವದುವುಗಳು. ಪುಣ್ಯಮಯವಾದುವುಗಳು. ಕಾಮನೆಗಳನ್ನು ಪೂರ್ಣಗೊಳಿಸತಕ್ಕುವುಗಳು. ಪ್ರಾಣಿಗಳಿಗೆ ಬಲವನ್ನು ಕೊಡತಕ್ಕುವುಗಳು. ಆದುದರಿಂದಲೇ ಅವು ಪುಣ್ಯಕಾಮರಾದ ಮನುಷ್ಯರಿಂದ ಪೂಜಿಸಲ್ಪಡತಕ್ಕುವುಗಳಾಗಿವೆ.

ಧೇನುಂ ದತ್ತ್ವಾ ನಿಭೃತಾಂ ಸುಶೀಲಾಂ
ಕಲ್ಯಾಣವತ್ಸಾಂ ಚ ಪಯಸ್ವಿನೀಂ ಚ ।
ಯಾವನ್ತಿ ರೋಮಾಣಿ ಭವನ್ತಿ ತಸ್ಯಾ-
ಸ್ತಾವತ್ಸಮಾಃ ಸ್ವರ್ಗಫಲಾನಿ ಭುಙ್ಕ್ತೇ ॥೮೩॥

ಯಾವನು ಹೃಷ್ಟ-ಪುಷ್ಟವಾದ, ಒಳ್ಳೆಯ ಸ್ವಭಾವವುಳ್ಳ, ಸುಂದರವಾದ ಕರುವಿನಿಂದ ಕೂಡಿರುವ, ಹಾಲುಕೊಡುವ ಹಸುವನ್ನು ದಾನಮಾಡುವನೋ–ಅವನು ಆ ಹಸುವಿನಲ್ಲಿ ಎಷ್ಟು ರೋಮಗಳಿರುತ್ತವೆಯೋ ಅಷ್ಟು ಸಂವತ್ಸರಗಳವರೆಗೆ ಸ್ವರ್ಗಫಲವನ್ನು ಉಪಭೋಗಿಸುತ್ತಿರುತ್ತಾನೆ.

ಪ್ರಯಚ್ಛತೇ ಯಃ ಕಪಿಲಾಂ ಸಚೈಲಾಂ
ಸಕಾಂಸ್ಯದೋಹಾಂ ಕನಕಾಗ್ರಶೃಙ್ಗೀಮ್ ।
ಪುತ್ರಾಂಶ್ಚ ಪೌತ್ರಾಂಶ್ಚ ಕುಲಂ ಚ ಸರ್ವ-
ಮಾಸಪ್ತಮಂ ತಾರಯತೇ ಪರತ್ರ ॥೮೨೪॥

ಯಾವನು ಹಾಲುಕರೆಯುವ ಕಂಚಿನ ಪಾತ್ರೆಯೊಡನೆ ಸುವರ್ಣ ಮಯವಾದ ಶೃಂಗಾಗ್ರದಿಂದ ಕೂಡಿರುವ ಮತ್ತು ಕರುವಿನಿಂದ ಯುಕ್ತವಾಗಿ ರುವ ಕಪಿಲಾಧೇನುವನ್ನು ದಾನವಾಗಿ ಕೊಡುವನೋ–ಅವನ, ಅಂತಹ ಗೋದಾನಮಾಡಿದ ಮಹಾಫಲವು ಅವನ ಮಕ್ಕಳನ್ನೂ ಮೊಮ್ಮಕ್ಕಳನ್ನೂ ಕುಲವನ್ನೂ ಏಳು ತಲೆಮಾರಿನವರೆಗೆ ಉದ್ಧರಿಸುತ್ತದೆ.

ಅನ್ತರ್ಜಾತಾಃ ಕ್ರೀತಕಾ ದ್ಯೂತಲಬ್ಧಾಃ
ಪ್ರಾಣಿಕ್ರೀತಾಃ ಸೋದಕಾಶ್ಚೌಜಸಾ ವಾ ।
ಕೃಚ್ಛ್ರೋತ್ಸೃಷ್ಟಾಃ ಪೋಷಣಾರ್ಥಾಗತಾಶ್ಚ
ದ್ವಾರೈರೇತೈಸ್ತಾಃ ಪ್ರಲಬ್ಧಾಃ ಪ್ರದದ್ಯಾತ್ ॥೮೨೫॥

ತನ್ನ ಮನೆಯಲ್ಲಿಯೇ ಹುಟ್ಟಿರುವ, ಕ್ರಯಕ್ಕೆ ಪಡೆದಿರುವ, ದ್ಯೂತದಲ್ಲಿ ಗೆದ್ದುತಂದಿರುವ, ಒಂದು ಪ್ರಾಣಿಯನ್ನು ಕೊಟ್ಟು ವಿನಿಮಯರೂಪವಾಗಿ ತಂದಿರುವ, ದಾನರೂಪವಾಗಿ ಬಂದಿರುವ, ಯುದ್ಧದಲ್ಲಿ ಗೆದ್ದುತಂದಿರುವ ಸಾಕಲಾಗದ ಕಷ್ಟದಿಂದ ತ್ಯಜಿಸಲ್ಪಟ್ಟಿರುವ, ಪಾಲನೆಗಾಗಿಯೇ ಇತರರಿಂದ ಪಡೆದು ತಂದಿರುವ ಗೋವುಗಳನ್ನು ದಾನಮಾಡಬೇಕು.

ಕೃಶಾಯ ಬಹುಪುತ್ರಾಯ ಶ್ರೋತ್ರಿಯಾಯಾಹಿತಾಗ್ನಯೇ ।
ಪ್ರದಾಯ ನೀರುಜಾಂ ಧೇನುಂ ಲೋಕಾನ್ಪ್ರಾಪ್ನೋತ್ಯನುತ್ತಮಾನ್ ॥

ದುರ್ಬಲನಾಗಿರುವ, ಬಹುಸಂತಾನವುಳ್ಳ, ಆಹಿತಾಗ್ನಿಯಾದ ಶ್ರೋತ್ರಿಯನಿಗೆ ರೋಗರಹಿತವಾದ ಧೇನುವನ್ನು ದಾನವಾಗಿ ಕೊಡುವವನು ಸರ್ವೋತ್ತಮವಾದ ಲೋಕಗಳನ್ನು ಹೊಂದುತ್ತಾನೆ.

ನೃಶಂಸಸ್ಯ ಕೃತಘ್ನಸ್ಯ ಲುಬ್ಧಸ್ಯಾನೃತವಾದಿನಃ ।
ಹವ್ಯಕವ್ಯವ್ಯಪೇತಸ್ಯ ನ ದದ್ಯಾದ್ಗಾಃ ಕಥಂಚನ ॥೮೨೭॥

ಕ್ರೂರಿಗೆ, ಕೃತಘ್ನನಿಗೆ, ಲೋಭಿಗೆ, ಸುಳ್ಳುಹೇಳುವವನಿಗೆ, ಹವ್ಯ-ಕವ್ಯಾದಿಗಳನ್ನು ಬಿಟ್ಟಿರುವವನಿಗೆ ಯಾವುದೇ ಕಾರಣದಿಂದಲೂ ಗೋವುಗಳನ್ನು ದಾನಮಾಡಬಾರದು.

ಸಮಾನವತ್ಸಾಂ ಯೋ ದದ್ಯಾದ್ಧೇನುಂ ವಿಪ್ರೇ ಪಯಸ್ವಿನೀಮ್ ।
ಸುವೃತಾಂ ವಸ್ತ್ರಸಂಛನ್ನಾಂ ಸೋಮಲೋಕೇ ಮಹೀಯತೇ ॥

ಸಮಾನವಾದ ಬಣ್ಣವುಳ್ಳ ಕರುವಿನಿಂದ ಕೂಡಿರುವ, ಹಾಲು ಕೊಡುವ, ಒಳ್ಳೆಯ ಸ್ವಭಾವವಿರುವ, ವಸ್ತ್ರದಿಂದ ಹೊದ್ದಿಸಲ್ಪಟ್ಟಿರುವ ಧೇನುವನ್ನು ಬ್ರಾಹ್ಮಣನಿಗೆ ದಾನಮಾಡುವವನು ಚಂದ್ರನ ಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಸಮಾನವಾದ ಬಣ್ಣವುಳ್ಳ ಕರುವಿನಿಂದ ಕೂಡಿರುವ, ಹಾಲುಕರೆಯುವ ಒಳ್ಳೆಯ ಸ್ವಭಾವದಿಂದ ಕೂಡಿರುವ, ವಸ್ತ್ರದಿಂದ ಹೊದ್ದಿಸಲ್ಪಟ್ಟಿರುವ ಕಪ್ಪು ಹಸುವನ್ನು ಬ್ರಾಹ್ಮಣನಿಗೆ ದಾನಮಾಡಿದವನು ವರುಣನ ಲೋಕಗಳನ್ನು ಹೊಂದುತ್ತಾನೆ.

ಸುವರ್ಣದ ವರ್ಣವಿರುವ, ಕಂದುಬಣ್ಣದ ಕಣ್ಣುಗಳಿಂದ ಕೂಡಿರುವ, ಕರುವಿನೊಡನಿರುವ, ವಸ್ತ್ರದಿಂದ ಆಚ್ಛಾದಿತವಾಗಿರುವ ಗೋವನ್ನು ಕರೆಯುವ ಕಂಚಿನಪಾತ್ರೆಯೊಡನೆ ದಾನಮಾಡುವವನು ಕುಬೇರನ ಲೋಕಕ್ಕೆ ಹೋಗುತ್ತಾನೆ.

ವಾಯುವಿನಿಂದ ಹಾರಿಸಲ್ಪಡುವ ಧೂಳಿಗೆ ಸಮಾನವಾದ ಬಣ್ಣವುಳ್ಳ, ಕರುವಿನೊಡನಿರುವ, ವಸ್ತ್ರದಿಂದ ಆಚ್ಛಾದಿತವಾದ ಹಸುವನ್ನು ಕರೆಯುವ ಕಂಚಿನಪಾತ್ರೆಯೊಡನೆ ದಾನಮಾಡುವವನು ವಾಯುವಿನ ಲೋಕದಲ್ಲಿ ಪೂಜಿತನಾಗುತ್ತಾನೆ.

ಸಮಾನವಾದ ಬಣ್ಣವಿರುವ ಕರುವಿನಿಂದ ಕೂಡಿರುವ, ಗೌರವರ್ಣದ, ಹಾಲುಕರೆಯುವ, ಒಳ್ಳೆಯ ಸ್ವಭಾವದಿಂದ ಕೂಡಿರುವ, ವಸ್ತ್ರದಿಂದ ಆಚ್ಛಾದಿತವಾಗಿರುವ ಹಸುವನ್ನು ದಾನಮಾಡುವವನು ಅಗ್ನಿಯ ಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಪಡ್ಡೆಯಾಗಿರುವ, ಬಲಿಷ್ಠವಾಗಿರುವ, ಶ್ಯಾಮಲವರ್ಣದ, ನೂರು

ಹಸುಗಳ ಸಮೂಹಕ್ಕೆ ಪತಿಯಾದ, ದೊಡ್ಡದಾದ ಕೋಡುಗಳಿಂದ ಕೂಡಿರುವ, ಅಲಂಕರಿಸಲ್ಪಟ್ಟಿರುವ ಹೋರಿಯನ್ನು ಶ್ರೋತ್ರಿಯರಾದ ಬ್ರಾಹ್ಮಣರಿಗೆ ದಾನಮಾಡುವವನು ಪುನಃ ಪುನಃ ಹುಟ್ಟಿದರೂ ಐಶ್ವರ್ಯದೊಡನೆಯೇ ಹುಟ್ಟುತ್ತಾನೆ.

ಗವಾಂ ಮೂತ್ರಪುರೀಷಾಣಿ ನೋದ್ವಿಜೇತ ಕದಾಚನ ।
ನ ಚಾಸಾಂ ಮಾಂಸಮಶ್ನೀಯಾದ್ಗೋಷು ಭಕ್ತಃ ಸದಾ ಭವೇತ್ ॥

ಹಸುಗಳ ಗಂಜಲ-ಸಗಣಿಗಳನ್ನು ನೋಡಿ ಯಾವಾಗಲೂ ಉದ್ವಿಗ್ನನಾಗಬಾರದು. (ಅಸಹ್ಯಪಟ್ಟುಕೊಳ್ಳಬಾರದು.) ಅವುಗಳ ಮಾಂಸವನ್ನು ತಿನ್ನಬಾರದು. ಯಾವಾಗಲೂ ಗೋಭಕ್ತನಾಗಿರಬೇಕು.

ಗ್ರಾಸಮುಷ್ಟಿಂ ಪರಗವೇ ದದ್ಯಾತ್ಸಂವತ್ಸರಂ ಶುಚಿಃ ।
ಅಕೃತ್ವಾ ಸ್ವಯಮಾಹಾರಂ ವ್ರತಂ ತತ್ಸಾರ್ವಕಾಮಿಕಮ್ ॥೮೩೬॥

ಯಾವನು ಶುಚೀಭೂತನಾಗಿ ತಾನು ಆಹಾರವನ್ನು ತೆಗೆದುಕೊಳ್ಳುವ ಮೊದಲು ಒಂದು ಮುಷ್ಟಿ ಹುಲ್ಲನ್ನು ಇತರರ ಮನೆಯಲ್ಲಿರುವ ಹಸುವಿಗೆ ಒಂದು ವರ್ಷಪರ್ಯಂತವಾಗಿ ಕೊಡುವನೋ–ಅಂತಹವನ ಈ ವ್ರತವು ಸಕಲಕಾಮನೆಗಳನ್ನೂ ಕೊಡುವುದಾಗುತ್ತದೆ.

ಗವಾಮುಭಯತಃ ಕಾಲೇ ನಿತ್ಯಂ ಸ್ವಸ್ತ್ಯಯನಂ ವದೇತ್ ।
ನ ಚಾಸಾಂ ಚಿನ್ತಯೇತ್ಪಾಪಮಿತಿ ಧರ್ಮವಿದೋ ವಿದುಃ ॥೮೩೭॥

ಪ್ರತಿನಿತ್ಯವೂ ಎರಡು ಕಾಲಗಳಲ್ಲಿಯೂ ಗೋವುಗಳಿಗೆ ಸ್ವಸ್ತ್ಯಯನವನ್ನು ಮಾಡಬೇಕು. ('ಗೋವುಗಳಿಗೆ ಶುಭವಾಗಲಿ'–ಎಂದು ಹಾರೈಸಬೇಕು.) ಅವುಗಳ ವಿಷಯದಲ್ಲಿ ಅನಿಷ್ಟವನ್ನು ಚಿಂತಿಸಬಾರದು–ಎಂಬುದು ಧರ್ಮವನ್ನು ತಿಳಿದವರ ಅಭಿಮತವಾಗಿದೆ.

ಗಾವಃ ಪವಿತ್ರಂ ಪರಮಂ ಗೋಷು ಲೋಕಾಃ ಪ್ರತಿಷ್ಠಿತಾಃ ।
ಕಥಂಚಿನ್ನಾವಮನ್ತವ್ಯಾ ಗಾವೋ ಲೋಕಸ್ಯ ಮಾತರಃ ॥೫

ಗೋವು ಪರಮಪವಿತ್ರವಾದ ಪ್ರಾಣಿಯಾಗಿದೆ. ಗೋವುಗಳಲ್ಲಿಯೇ ಎಲ್ಲ ಲೋಕಗಳೂ ಪ್ರತಿಷ್ಠಿತವಾಗಿವೆ. ಗೋವುಗಳು ಲೋಕಕ್ಕೇ ತಾಯಿಯರ

ಸ್ವರೂಪದಲ್ಲಿವೆ. ಆದುದರಿಂದ ಗೋವುಗಳನ್ನು ಯಾವುದೇ ಕಾರಣ ದಿಂದಲೂ ತಿರಸ್ಕರಿಸಬಾರದು.

ತಸ್ಮಾದೇವ ಗವಾಂ ದಾನಂ ವಿಶಿಷ್ಟಮಿತಿ ಕಥ್ಯತೇ ।
ಗೋಷು ಪೂಜಾ ಚ ಭಕ್ತಿಶ್ಚ ನರಸ್ಯಾಯುಷ್ಯತಾಂ ವಹೇತ್ ॥೮೯॥

ಆದುದರಿಂದಲೇ ಗೋವುಗಳ ದಾನವು ವಿಶಿಷ್ಟವಾದುದೆಂದು ಹೇಳುತ್ತಾರೆ. ಗೋವುಗಳಲ್ಲಿ ಭಕ್ತಿಯೂ ಮತ್ತು ಗೋಪೂಜೆಯೂ ಮನುಷ್ಯನ ಆಯುಷ್ಯವನ್ನು ಹೆಚ್ಚಿಸುತ್ತದೆ.

ದೇವಿ! ನಾನು ಇನ್ನು ಮುಂದೆ ಮಹಾಫಲದಾಯಕವಾದ ಭೂಮಿ ದಾನದ ವಿಷಯವನ್ನು ಹೇಳುತ್ತೇನೆ. ಭೂಮಿದಾನಕ್ಕೆ ಸಮಾನವಾದ ದಾನವು ಲೋಕದಲ್ಲಿಯೇ ಬೇರೊಂದಿಲ್ಲವೆಂಬುದು ನಿಶ್ಚಿತವಾಗಿದೆ.

ಗೃಹಯುಕ್ ಕ್ಷೇತ್ರಯುಗ್ವಾಪಿ ಭೂಮಿಭಾಗಃ ಪ್ರದೀಯತೇ ।
ಸುಖಭೋಗಂ ನಿರಾಕ್ರೋಶಂ ವಾಸ್ತುಪೂರ್ವಂ ಪ್ರಕಲ್ಪ್ಯ ಚ ॥೯೧॥

ಗ್ರಹೀತಾರಮಲಂಕೃತ್ಯ ವಸ್ತ್ರಪುಷ್ಪಾನುಲೇಪನೈಃ ।
ಸಭೃತ್ಯಂ ಸಪರೀವಾರಂ ಭೋಜಯಿತ್ವಾ ಯಥೇಷ್ಟತಃ ।
ಯೋ ದದ್ಯಾದ್ದಕ್ಷಿಣಾಂ ಕಾಲೇ ತ್ರಿರದ್ಭಿರ್ಗೃಹ್ಯತಾಮಿತಿ ॥೯೨॥

ಮನೆ ಅಥವಾ ಕ್ಷೇತ್ರದಿಂದ (ಗದ್ದೆ-ತೋಟ ಮುಂತಾದುವುಗಳಿಂದ) ಯುಕ್ತವಾದ ಭೂಭಾಗವನ್ನು ದಾನಮಾಡಬೇಕು. ಸುಖವಾಗಿ ಉಪಭೋಗಿಸಲು ಸಾಧ್ಯವಾಗುವಂತಹ, ಅನಿಂದನೀಯವಾದ ಸಾಮಗ್ರಿಗಳಿಂದ ಸಂಪನ್ನವಾದ ಮನೆಯನ್ನು ಕಲ್ಪಿಸಿ–ವಸ್ತ್ರದಿಂದಲೂ, ಹೂವಿನಿಂದಲೂ, ಗಂಧದಿಂದಲೂ ದಾನವನ್ನು ಪ್ರತಿಗ್ರಹಿಸುವವನನ್ನು ಅಲಂಕರಿಸಿ, ಸೇವಕರಿಂದಲೂ ಮತ್ತು ಪರಿವಾರದಿಂದಲೂ ಕೂಡಿದ ಅವನಿಗೆ ಯಥೇಷ್ಟವಾಗಿ ಭೋಜನ ಮಾಡಿಸಬೇಕು. ಅನಂತರ ಸಕಾಲದಲ್ಲಿ–'ಭೂದಾನಂ ಗೃಹಾಣ' 'ಭೂದಾನವನ್ನು ಸ್ವೀಕರಿಸು'–ಎಂದು ಹೇಳುತ್ತಾ ಮೂರು ಬಾರಿ ನೀರನ್ನು ಬಿಟ್ಟು ದಕ್ಷಿಣೆಯೊಡನೆ ದಾನಮಾಡಬೇಕು. ಮತ್ಸರದಿಂದ ರಹಿತರಾದವರು ಶ್ರದ್ಧೆಯಿಂದ ಹೀಗೆ ಭೂಮಿಯನ್ನು ದಾನಮಾಡಿದರೆ ಆ ಭೂಮಿಯಿರುವವರೆಗೆ ಅವರು ಭೂದಾನ ಫಲವನ್ನು ಉಪಭೋಗಿಸುತ್ತಿರುತ್ತಾರೆ. ಭೂದಾನ

ಮಾಡಿದವನು ಸ್ವರ್ಗಕ್ಕೆ ಹೋಗಿ ನಿರಂತರವಾಗಿ ಅಲ್ಲಿಯೇ ರಮಿಸುತ್ತಿರುತ್ತಾನೆ. ಅಚಲವೂ, ಅಕ್ಷಯವೂ ಆದ ಭೂಮಿಯು ಸರ್ವಕಾಮನೆಗಳನ್ನೂ ಪೂರ್ತಿಗೊಳಿಸುತ್ತದೆ. ಜೀವಿಕೆಗಾಗಿ ಕಷ್ಟಪಡುತ್ತಿರುವ ಮನುಷ್ಯನು ಅಲ್ಪ- ಸ್ವಲ್ಪ ಪಾಪಮಾಡಿದ್ದರೂ ಗೋಕರ್ಣದಷ್ಟು ವಿಸ್ತಾರವಾದ ಭೂದಾನದಿಂದಲೇ ಮುಕ್ತನಾಗುತ್ತಾನೆ. ಚಿನ್ನ, ಬೆಳ್ಳಿ, ಮಣಿ, ಮುತ್ತು ಮತ್ತು ಸಂಪತ್ತು ಇವೆಲ್ಲವೂ ಭೂಮಿದಾನದಲ್ಲಿಯೇ ಅಡಕವಾಗಿವೆ.

ಭರ್ತುರ್ನಿಃಶ್ರೇಯಸೇ ಯುಕ್ತಾಸ್ತ್ಯಕ್ತಾತ್ಮಾನೋ ರಣೇ ಹತಾಃ ।
ಬ್ರಹ್ಮಲೋಕಾಯ ಸಂಸಿದ್ಧಾ ನಾತಿಕ್ರಾಮನ್ತಿ ಭೂಮಿದಮ್ ॥೮೪೭॥

ಒಡೆಯನ ನಿಃಶ್ರೇಯಸದ ಸಾಧನೆಯಲ್ಲಿ ತತ್ಪರರಾಗಿರತಕ್ಕವರೂ ಒಡೆಯನಿಗಾಗಿ ಯುದ್ಧದಲ್ಲಿ ಹತರಾಗಿ ತಮ್ಮ ಶರೀರವನ್ನು ತ್ಯಾಗ ಮಾಡಿದವರೂ ಉತ್ತಮವಾದ ಸಿದ್ಧಿಯನ್ನು ಪಡೆದು ಬ್ರಹ್ಮಲೋಕಕ್ಕೆ ಹೋಗುತ್ತಾರೆ. ಆದರೆ ಅವರಾರೂ ಪುಣ್ಯವನ್ನು ಗಳಿಸುವುದರಲ್ಲಿ ಭೂದಾನಿಯನ್ನು ಮೀರಲಾರರು.

ಹಲಕೃಷ್ಟಾಂ ಮಹೀಂ ದದ್ಯಾದ್ಯತ್ಸಬೀಜಫಲಾನ್ವಿತಾಮ್ ।
ಸುಕೂಪಶರಣಾಂ ವಾಪಿ ಸಾ ಭವೇತ್ಸರ್ವಕಾಮದಾ ॥೮೪೮॥

ನೇಗಿಲಿನಿಂದ ಉತ್ತು ಬೀಜಫಲಗಳಿಂದ ಯುಕ್ತವಾದ ಭೂಮಿಯನ್ನು ದಾನಮಾಡಬೇಕು ಅಥವಾ ಬಾವಿಯಿರುವ ಮನೆಯನ್ನಾದರೂ ದಾನಮಾಡಬಹುದು. ಇಂತಹ ಭೂದಾನವೂ ಸಕಲಕಾಮನೆಗಳನ್ನೂ ಉಂಟುಮಾಡುತ್ತದೆ. ಆಹಾರಧಾನ್ಯಗಳು ಬೆಳೆದಿರುವ ಹೊಲ-ಗದ್ದೆಗಳನ್ನು ಅಥವಾ ಅಡಿಕೆ-ತೆಂಗು ಮುಂತಾದುವುಗಳಿಂದ ಸಮೃದ್ಧವಾಗಿರುವ ತೋಟವನ್ನು ಬ್ರಾಹ್ಮಣರಿಗೆ ಯಾವನು ದಾನಮಾಡುವನೋ–ಅವನು ಸರ್ವಪಾಪಗಳಿಂದಲೂ ಮುಕ್ತನಾಗಿ ಇಂದ್ರನ ಲೋಕಕ್ಕೆ ಹೋಗುತ್ತಾನೆ.

ಯಥಾ ಜನಿತ್ರೀ ಕ್ಷೀರೇಣ ಸ್ವಪುತ್ರಮಭಿವರ್ಧಯೇತ್ ।
ಏವಂ ಸರ್ವಫಲೈರ್ಭೂಮಿರ್ದಾತಾರಮಭಿವರ್ಧಯೇತ್ ॥೮೫೦॥

ಯಾವ ರೀತಿಯಲ್ಲಿ ತಾಯಿಯು ಎದೆಹಾಲು ಕೊಟ್ಟು ತನ್ನ ಮಗುವನ್ನು ಪೋಷಿಸುವಳೋ–ಅದೇ ರೀತಿಯಲ್ಲಿ ಭೂಮಿಯು ಸಮಸ್ತವಾದ

ಫಲಗಳಿಂದಲೂ ಭೂದಾನಿಗೆ ಅಭ್ಯುದಯವನ್ನುಂಟುಮಾಡುತ್ತದೆ. ಆಚಾರ ಸಂಪನ್ನನಾದ, ಆಹಿತಾಗ್ನಿಯಾದ, ಶುಚಿವ್ರತನಾದ ಬ್ರಾಹ್ಮಣನಿಗೆ ತನ್ನ ಭೂಮಿಯನ್ನು ದಾನಮಾಡಿದರೆ ಅಂತಹವರು ಯಮಲೋಕಕ್ಕೆ ಹೋಗುವುದಿಲ್ಲ.

ಯಾವ ರೀತಿಯಲ್ಲಿ ಶುಕ್ಲಪಕ್ಷದ ಚಂದ್ರನು ದಿನ-ದಿನಕ್ಕೂ ವೃದ್ಧಿ ಹೊಂದುವನೋ–ಅದೇ ರೀತಿಯಲ್ಲಿ ಭೂದಾನದ ಫಲವು ದಾನಮಾಡಿದ ಭೂಮಿಯಲ್ಲಿ ಸಸ್ಯವು ಬೆಳೆದಂತೆಲ್ಲಾ ವೃದ್ಧಿಸುತ್ತಿರುತ್ತದೆ. ಯಾವ ರೀತಿಯಲ್ಲಿ ಭೂಮಿಯಲ್ಲೆರಚಿದ ಬೀಜಗಳು ಹುಟ್ಟುವುವೋ–ಅದೇ ರೀತಿಯಲ್ಲಿ ಭೂಮಿದಾನದ ಗುಣಗಳಿಂದ ಸಂಪಾದಿಸಿದ ಮನೋವಾಂಛಿತ ಭೋಗ ಸಾಮಗ್ರಿಗಳು ಹುಟ್ಟುತ್ತಲೇ ಇರುತ್ತವೆ ಮತ್ತು ಬೆಳೆಯುತ್ತಲೇ ಇರುತ್ತವೆ. ಪಿತೃಲೋಕದಲ್ಲಿರುವ ಪಿತೃಗಳೂ ದೇವಲೋಕದಲ್ಲಿರುವ ದೇವತೆಗಳೂ ಭೂದಾನಿಯನ್ನು ನಾನಾವಿಧವಾದ ಭೋಗಗಳ ಪ್ರದಾನದಿಂದ ಸಂತೃಪ್ತಿಗೊಳಿಸುತ್ತಾರೆ. ಭೂದಾನಮಾಡಿದ ಮನುಷ್ಯನು ಪರಲೋಕದಲ್ಲಿ ದೀರ್ಘಾಯುಷ್ಯವನ್ನೂ ಸುಂದರವಾದ ಶರೀರವನ್ನೂ ಸಮೃದ್ಧವಾದ ಸಂಪತ್ತನ್ನೂ ಹೊಂದುತ್ತಾನೆ.

ದೇವಿ! ಭೂಮಿಯನ್ನು ದಾನಮಾಡಿದವನಿಗೆ ಯಾವ ಫಲವೆಂಬುದನ್ನು ನಾನು ಹೇಳಿದ್ದೇನೆ. ಶ್ರದ್ಧಾಳುವಾದ ಮನುಷ್ಯನು ಪ್ರತಿನಿತ್ಯವೂ ಸನಾತನವಾದ ಈ ದಾನದ ಮಾಹಾತ್ಮ್ಯವನ್ನು ಕೇಳಬೇಕು.

ದೇವಿ! ಇನ್ನು ಮುಂದೆ ನಾನು ನಿನಗೆ ವಿಧಿಪೂರ್ವಕವಾಗಿ ಕನ್ಯಾದಾನದ ವಿಷಯವನ್ನು ಹೇಳುತ್ತೇನೆ. ಮನುಷ್ಯನು ತನ್ನ ಮತ್ತು ಇತರರ ಕನ್ಯೆಯರನ್ನು ಯೋಗ್ಯರಾದವರಿಗೆ ದಾನಮಾಡಬೇಕು.

ಕನ್ಯಾಂ ಶುದ್ಧವ್ರತಾಚಾರಾಂ ಕುಲರೂಪಸಮನ್ವಿತಾಮ್ ।
ಯಸ್ಮೈ ದಿತ್ಸತಿ ಪಾತ್ರಾಯ ತೇನಾಪಿ ಭೃಶಕಾಮಿತಾಮ್ ॥೮೫॥

ಶುದ್ಧವಾದ ವ್ರತಾಚಾರಗಳುಳ್ಳ, ಸತ್ಕುಲಪ್ರಸೂತಳಾದ, ರೂಪವತಿಯಾದ ಕನ್ಯೆಯನ್ನು ಸತ್ಪಾತ್ರನಿಗೆ ದಾನಮಾಡಬೇಕು. ಕನ್ಯೆಯನ್ನು ಪ್ರತಿಗ್ರಹಿಸುವ ವರನೂ ಕನ್ಯೆಯನ್ನು ಬಹಳವಾಗಿ ಮೆಚ್ಚಿಕೊಂಡಿರಬೇಕು. (ವರನು ಒಪ್ಪಿದ ಕನ್ಯೆಯನ್ನು ದಾನಮಾಡಬೇಕು.)

ಪ್ರಥಮಂ ತಾಂ ಸಮಾಕಲ್ಪ್ಯ ಬನ್ಧುಭಿಃ ಕೃತನಿಶ್ಚಯಾಮ್ ।
ಕಾರಯಿತ್ವಾ ಗೃಹಂ ಪೂರ್ವಂ ದಾಸೀದಾಸಪರಿಚ್ಛದೈಃ ॥೮೫೯॥

ಗೃಹೋಪಕರಣೈಶ್ಚೈವ ಪಶುಧಾನ್ಯೇನ ಸಂಯುತಾಮ್ ।
ತದರ್ಥಿನೇ ತದರ್ಹಾಯ ಕನ್ಯಾಂ ತಾಂ ಸಮಲಂಕೃತಾಮ್ ।
ಸವಿವಾಹಂ ಯಥಾನ್ಯಾಯಂ ಪ್ರಯಚ್ಛೇದಗ್ನಿಸಾಕ್ಷಿಕಮ್ ॥೮೬೦॥

ಮೊದಲು ಬಂಧುಗಳೊಡನೆ ಸಮಾಲೋಚಿಸಿ ಕನ್ಯೆಯ ಮದುವೆಯನ್ನು ನಿಶ್ಚಯಿಸಬೇಕು. ಅನಂತರ ಅವಳಿಗಾಗಿ ಒಂದು ಮನೆಯನ್ನು ಸಿದ್ಧಗೊಳಿಸಬೇಕು. ದಾಸ-ದಾಸಿಯರೇ ಮುಂತಾದ ಸೇವಕರಿಂದಲೂ, ಗೃಹೋಪಕರಣಗಳಿಂದಲೂ, ಪಶುಗಳಿಂದಲೂ, ಧಾನ್ಯಗಳಿಂದಲೂ ಯುಕ್ತಳಾದ ಸಾಲಂಕೃತ ಕನ್ಯೆಯನ್ನು ಅವಳನ್ನು ಅಪೇಕ್ಷಿಸಿರುವ ಮತ್ತು ಅವಳನ್ನು ಪಡೆದುಕೊಳ್ಳಲು ಅರ್ಹನಾಗಿರುವ ವರನಿಗೆ ವಿವಾಹಪೂರ್ವಕವಾಗಿ ಅಗ್ನಿಯ ಸಮ್ಮುಖದಲ್ಲಿ ಯಥಾವಿಧಿಯಾಗಿ ದಾನಮಾಡಬೇಕು.

ವೃತ್ತ್ಯಾಯತೀಂ ಯಥಾ ಕೃತ್ವಾ ಸದ್ಗೃಹೇ ತೌ ನಿವೇಶಯೇತ್ ।
ಏವಂ ಕೃತ್ವಾ ವಧೂದಾನಂ ತಸ್ಯ ದಾನಸ್ಯ ಗೌರವಾತ್ ॥೮೬೧॥

ಪ್ರೇತ್ಯಭಾವೇ ಮಹೀಯೇತ ಸ್ವರ್ಗಲೋಕೇ ಯಥಾಸುಖಮ್ ।
ಪುನರ್ಜಾತಶ್ಚ ಸೌಭಾಗ್ಯಂ ಕುಲವೃದ್ಧಿಂ ತಥಾಪ್ನುಯಾತ್ ॥೮೬೨॥

ದಂಪತಿಗಳ ಜೀವನನಿರ್ವಹಣೆಗೆ ವ್ಯವಸ್ಥೆಯನ್ನು ಮಾಡಿ ಅವರನ್ನು ಉತ್ತಮವಾದ ಮನೆಯಲ್ಲಿ ವಾಸಿಸುವಂತೆ ಏರ್ಪಡಿಸಬೇಕು. ಹೀಗೆ ಕನ್ಯಾದಾನವನ್ನು ಮಾಡಿದವನು ಆ ಕನ್ಯಾದಾನದ ಮಹಿಮೆಯಿಂದಾಗಿ ಮರಣಾನಂತರದಲ್ಲಿ ಸ್ವರ್ಗಲೋಕದಲ್ಲಿ ಸುಖವಾಗಿರುತ್ತಾನೆ ಮತ್ತು ಅಲ್ಲಿ ದೇವತೆಗಳಿಂದ ಪೂಜಿಸಲ್ಪಡುತ್ತಾನೆ. ಪುಣ್ಯವು ಕ್ಷೀಣಿಸಿದನಂತರ ಪುನಃ ಅವನು ಮನುಷ್ಯನಾಗಿ ಹುಟ್ಟಿ ಸೌಭಾಗ್ಯವನ್ನೂ ಕುಲದ ವೃದ್ಧಿಯನ್ನೂ ಹೊಂದುತ್ತಾನೆ.

ವಿದ್ಯಾದಾನಂ ತಥಾ ದೇವಿ ಪಾತ್ರಭೂತಾಯ ವೈ ದದತ್ ।
ಪ್ರೇತ್ಯಭಾವೇ ಲಭೇನ್ಮರ್ತ್ಯೋ ಮೇಧಾಂ ವೃದ್ಧಿಂ ಧೃತಿಂ ಸ್ಮೃತಿಮ್ ॥೮೬೩॥

ಹೀಗೆಯೇ ಸತ್ಪಾತ್ರನಾದ ಶಿಷ್ಯನಿಗೆ ವಿದ್ಯಾದಾನವನ್ನು ಮಾಡುವವನು ಅವಸಾನಾನಂತರದಲ್ಲಿ ಅನೇಕ ದಿವಸಗಳವರೆಗೆ ಸ್ವರ್ಗಸುಖವನ್ನು ಅನು ಭವಿಸಿ, ಪುನಃ ಭೂಮಿಯಲ್ಲಿ ಮನುಷ್ಯನಾಗಿ ಜನ್ಮತಾಳಿ ಮೇಧಾಶಕ್ತಿಯನ್ನೂ, ಬುದ್ಧಿಯನ್ನೂ, ಧೈರ್ಯವನ್ನೂ, ಸ್ಮೃತಿಯನ್ನೂ ಪಡೆದುಕೊಳ್ಳುತ್ತಾನೆ.

ಅನುರೂಪಾಯ ಶಿಷ್ಯಾಯ ಯಶ್ಚ ವಿದ್ಯಾಂ ಪ್ರಯಚ್ಛತಿ ।
ಯಥೋಕ್ತಸ್ಯ ಪ್ರದಾನಸ್ಯ ಫಲಮಾನನ್ತ್ಯಮಶ್ನುತೇ ॥೮೬೪॥

ಯಾವನು ಯೋಗ್ಯನಾದ ಶಿಷ್ಯನಿಗೆ ವಿದ್ಯಾದಾನಮಾಡುವನೋ– ಅವನು ಶಾಸ್ತ್ರೋಕ್ತವಾದ ಇತರ ದಾನಗಳಿಂದ ಲಭಿಸುವ ಫಲಕ್ಕಿಂತಲೂ ಅತಿಹೆಚ್ಚಿನ ಫಲವನ್ನು ಪಡೆದುಕೊಳ್ಳುತ್ತಾನೆ.

ದಾಪನಂ ತ್ವಥ ವಿದ್ಯಾನಾಂ ದರಿದ್ರೇಭ್ಯೋಽರ್ಥವೇದನೈಃ ।
ಸ್ವಯಂ ದತ್ತೇನ ತುಲ್ಯಂ ಸ್ಯಾದಿತಿ ವಿದ್ಧಿ ಶುಭಾನನೇ ॥೮೬೫॥

ಶುಭಾನನೆಯೇ! ನಿರ್ಧನರಾದ ವಿದ್ಯಾರ್ಥಿಗಳಿಗೆ ಧನಸಹಾಯವನ್ನು ಮಾಡಿ ಅವರು ವಿದ್ಯೆಯನ್ನು ಕಲಿಯುವಂತೆ ಮಾಡಿದರೂ ವಿದ್ಯಾದಾನದ ಫಲವೇ ಲಭಿಸುವುದೆಂದು ತಿಳಿ.

ಮಾನಿನಿಯೇ! ದೇವಿ! ಹೀಗೆ ನಾನು ನಿನ್ನ ಪ್ರೀತಿಗಾಗಿ ಮಹಾದಾನಗಳ ವಿಷಯವಾಗಿ ವಿವರಿಸಿ ಹೇಳಿದೆನು. ಪುನಃ ಮತ್ತೇನನ್ನು ನನ್ನಿಂದ ಕೇಳಲು ಬಯಸಿರುವೆ.?"

ಉಮೆ :

"ಪೂಜ್ಯನೇ! ದೇವಾಧಿದೇವತೆಗಳಿಗೂ ಈಶ್ವರನೇ! ಎಳ್ಳಿನ ದಾನವನ್ನು ಹೇಗೆ ಕೊಡುವುದು? ತಿಲದಾನಮಾಡುವುದರಿಂದ ಯಾವ ಫಲವು ಲಭಿಸುತ್ತದೆ?–ಈ ವಿಷಯವನ್ನು ಹೇಳುವ ಕೃಪೆಮಾಡು."

ಮಹೇಶ್ವರ :

"ದೇವಿ! ನೀನು ಏಕಾಗ್ರಚಿತ್ತಳಾಗಿ ತಿಲದಾನದ ವಿಧಿಯನ್ನು ಕೇಳು.

ಸಮೃದ್ಧೈರಸಮೃದ್ಧೈರ್ವಾ ತಿಲಾ ದೇಯಾ ವಿಶೇಷತಃ ।
ತಿಲಾಃ ಪವಿತ್ರಾಃ ಪಾಪಘ್ನಾಃ ಸುಪುಣ್ಯಾ ಇತಿ ಸಂಸ್ಮೃತಾಃ ॥೮೬೬॥

ಐಶ್ವರ್ಯವಂತರಾಗಲೀ ಬಡವರಾಗಲೀ ವಿಶೇಷವಾಗಿ ತಿಲದಾನವನ್ನು ಮಾಡಬೇಕು. ಎಳ್ಳು ಪವಿತ್ರವೂ, ಪಾಪಹರವೂ ಮತ್ತು ಪುಣ್ಯಪ್ರದವೂ ಎಂದು ಹೇಳಲ್ಪಟ್ಟಿದೆ.

ತನ್ನ ಶಕ್ತಿಗೆ ಅನುಸಾರವಾಗಿ ನ್ಯಾಯಪೂರ್ವಕವಾಗಿ ಶುದ್ಧವಾದ ಎಳ್ಳನ್ನು ಸಂಗ್ರಹಿಸಿ ಂಅದನ್ನು ಪರ್ವತದಂತೆ ರಾಶಿಯಾಗಿ ಒಂದೆಡೆಯಲ್ಲಿ ಸುರಿಯಬೇಕು. ಆ ರಾಶಿಯು ಚಿಕ್ಕದಾಗಿರಲಿ ; ಅಥವಾ ದೊಡ್ಡದೇ ಆಗಿ ರಲಿ–ನಾನಾದ್ರವ್ಯಗಳಿಂದ ಯುಕ್ತವಾದ ಆ ತಿಲರಾಶಿಯನ್ನು ಚಿನ್ನದ, ಬೆಳ್ಳಿಯ ಆಭರಣಗಳಿಂದಲೂ ಮಣಿ-ಮುತ್ತು-ಹವಳಗಳಿಂದಲೂ ಅಲಂಕರಿಸಬೇಕು. ಪ್ರಾಯಶಃ ಶರದೃತುವಿನ (ಆಶ್ವಯುಜಮಾಸದ) ಹುಣ್ಣಿಮೆಯಲ್ಲಿ ಅನೇಕ ಬ್ರಾಹ್ಮಣರನ್ನು ಆಹ್ವಾನಿಸಿ ಅವರಿಗೆ ಭೋಜನಮಾಡಿಸಿ, ತಾನು ಉಪವಾಸ ವಿದ್ದು ಸದಾಚಾರ-ಶೌಚಸಂಪನ್ನನಾಗಿ-ಪತಾಕೆ, ವೇದಿಕೆ, ಭೂಷಣ, ವಸ್ತ್ರ, ಹಾಸಿಗೆ, ಆಸನ, ದಕ್ಷಿಣೆ–ಇವುಗಳಿಂದ ಯುಕ್ತವಾದ ತಿಲರಾಶಿಯನ್ನು ಪ್ರದಕ್ಷಿಣೆಮಾಡಿ ಬ್ರಾಹ್ಮಣರಿಗೆ ದಾನಮಾಡಬೇಕು. ತಿಲದಾನವನ್ನು ಒಬ್ಬನಿ ಗಾದರೂ ಕೊಡಬಹುದು ; ಅನೇಕರಿಗಾದರೂ ಕೊಡಬಹುದು. ಎಳ್ಳನ್ನು ದಾನಮಾಡುವುದರಿಂದ ಅಗ್ನಿಷ್ಟೋಮಯಾಗಮಾಡಿದ ಫಲವು ಲಭಿಸುತ್ತದೆ. ಗೋದಾನಮಾಡಲು ಬಯಸುವವನು ನಿಜವಾದ ಗೋವನ್ನು ದಾನಮಾಡು ವಷ್ಟು ಸಾಮರ್ಥ್ಯವಿಲ್ಲದಿದ್ದರೆ ಭೂಮಿಯ ಮೇಲೆ ಎಳ್ಳಿನಿಂದಲೇ ಗೋವಿನ ಆಕೃತಿಯನ್ನು ರಚಿಸಿ ಅದನ್ನು ವಸ್ತ್ರದಿಂದ ಹೊದ್ದಿಸಿ ರತ್ನಗಳ ಸಹಿತವಾಗಿ ದಾನವನ್ನು ತೆಗೆದುಕೊಳ್ಳಲು ಅರ್ಹನಾದವನಿಗೆ ಕೊಡಬೇಕು. ಹಾಗೆ ಮಾಡಿ ದವನಿಗೆ ಗೋದಾನವನ್ನು ಮಾಡುವುದರಿಂದ ಲಭಿಸುವ ಫಲವೇ ಲಭಿಸು ತ್ತದೆ. ಸುವರ್ಣದಿಂದಲೂ ಮತ್ತು ಸಂಪಿಗೆಹೂವಿನಿಂದಲೂ ಯುಕ್ತವಾದ ಎಳ್ಳಿನಿಂದ ತುಂಬಿದ ಶರಾವೆಗಳನ್ನು ಬ್ರಾಹ್ಮಣರಿಗೆ ದಾನಮಾಡುವ ರಾಜನು ಪುಣ್ಯಫಲವನ್ನು ಹೊಂದುತ್ತಾನೆ. ತನ್ನ ಹಿತವನ್ನು ಅಪೇಕ್ಷಿಸುವವನು ಹೀಗೆ ತಿಲಮಯವಾದ ಗೋವನ್ನು ಬ್ರಾಹ್ಮಣನಿಗೆ ದಾನಮಾಡಬೇಕು.

ಪುನಃ ನಾನು ನಿನಗೆ ನಾನಾವಿಧವಾದ ದಾನಗಳ ಫಲವನ್ನು ಹೇಳುವೆನು; ಏಕಾಗ್ರಚಿತ್ತಳಾಗಿ ಕೇಳು.

ಅನ್ನದಾನಮಾಡುವ ಮನುಷ್ಯನು ಬಲ-ಆಯುಷ್ಯ-ಆರೋಗ್ಯಗಳನ್ನು ಹೊಂದುತ್ತಾನೆ. ಜಲದಾನಮಾಡುವವನು ಸೌಭಾಗ್ಯಶಾಲಿಯಾಗುತ್ತಾನೆ. ಮತ್ತು ರಸಗಳ ಜ್ಞಾನವನ್ನು ಹೊಂದುತ್ತಾನೆ. ವಸ್ತ್ರದಾನದಿಂದ ಶರೀರ ಶೋಭೆಯನ್ನೂ ಮತ್ತು ಅಲಂಕಾರವಸ್ತುಗಳನ್ನೂ ಪಡೆದುಕೊಳ್ಳುತ್ತಾನೆ. ದೀಪದಾನಮಾಡುವವನು ನಿರ್ಮಲವಾದ ಬುದ್ಧಿಯನ್ನೂ ಕಾಂತಿಯುಕ್ತವಾದ ಶೋಭೆಯನ್ನೂ ಪಡೆದುಕೊಳ್ಳುತ್ತಾನೆ. ಛತ್ರಿಯನ್ನು ದಾನಕೊಟ್ಟವನು ಯಾವುದೇ ಜನ್ಮದಲ್ಲಿಯೂ ರಾಜವಂಶದಿಂದ ದೂರವಿರುವುದಿಲ್ಲ. (ಎಲ್ಲ ಜನ್ಮಗಳಲ್ಲಿಯೂ ರಾಜನಾಗಿಯೇ ಹುಟ್ಟುತ್ತಾನೆ.) ದಾಸ-ದಾಸಿಯರನ್ನು ದಾನಮಾಡುವವನು ಕರ್ಮಗಳ ಅಂತವನ್ನು ಕಾಣುತ್ತಾನೆ. (ಮುಂದೆ ಅವನು ಯಾವುದೇ ಕರ್ಮಗಳನ್ನು ಮಾಡಬೇಕಾಗಿಲ್ಲ. ಆ ದಾನದಿಂದಲೇ ಸ್ವರ್ಗಪ್ರಾಪ್ತಿಯಾಗುತ್ತದೆ.) ಮರಣಾನಂತರ ಮರುಹುಟ್ಟಿನಲ್ಲಿ ವಿಧ-ವಿಧ ವಾದ ಮತ್ತು ಗುಣಯುಕ್ತರಾದ ದಾಸ-ದಾಸಿಯರನ್ನು ಹೊಂದುತ್ತಾನೆ. ರಥವೇ ಮೊದಲಾದ ವಾಹನಗಳನ್ನು ಸುಯೋಗ್ಯನಾದ ಬ್ರಾಹ್ಮಣನಿಗೆ ದಾನ ಮಾಡುವವನು–ಕಾಲಿನ ರೋಗದ ಸಂಕಟದಿಂದ ಮುಕ್ತನಾಗುತ್ತಾನೆ. ಮರುಹುಟ್ಟಿನಲ್ಲಿ ವಾಯುವೇಗಕ್ಕೆ ಸಮಾನವಾದ ವಾಹನವುಳ್ಳವನಾಗುತ್ತಾನೆ. ವಿಚಿತ್ರವೂ ಮತ್ತು ಸುಂದರವೂ ಆದ ವಾಹನವನ್ನು ಪಡೆದುಕೊಳ್ಳುತ್ತಾನೆ. ಅಣೆಕಟ್ಟನ್ನು ಕಟ್ಟಿಸುವವನೂ, ಬಾವಿಯನ್ನೂ, ಕೆರೆ-ಕುಂಟೆಗಳನ್ನೂ ತೋಡಿಸುವವನೂ ಕೂಡ ಇಹದಲ್ಲಿ ದೀರ್ಘಾಯುಷ್ಯವನ್ನೂ, ಸೌಭಾಗ್ಯ ವನ್ನೂ ಪಡೆದುಕೊಂಡು ಅವಸಾನಾನಂತರದಲ್ಲಿ ಶುಭಗತಿಯನ್ನು ಹೊಂದು ತ್ತಾನೆ. ಯಾವನು ನದಿಯಿಂದ ನೀರುತರುವವರ ಅನುಕೂಲಕ್ಕಾಗಿ ಸೋಪಾನವನ್ನು ನಿರ್ಮಿಸುವನೋ ಅವನು ಅವಸಾನಾನಂತರ ಸಕಲವ್ಯಸನ ಗಳಿಂದಲೂ ಮುಕ್ತನಾಗಿ ಪುಣ್ಯಫಲವನ್ನು ಪಡೆಯುತ್ತಾನೆ. ದಾರಿಹೋಕರಿಗೆ ಮಾರ್ಗವನ್ನು ನಿರ್ಮಿಸಿಕೊಡುವವನು ಸತ್ಸಂತಾನವನ್ನು ಪಡೆಯುತ್ತಾನೆ. ಹಾಗೆಯೇ ನೀರಿಗೆ ಇಳಿಯಲು ದಾರಿಯನ್ನು ನಿರ್ಮಿಸುವವನು ಶರೀರ ದೋಷದಿಂದ ಮುಕ್ತನಾಗುತ್ತಾನೆ. ಯಾವಾಗಲೂ ದಯಾಪೂರ್ಣನಾಗಿ ರೋಗಿಗಳಿಗೆ ಔಷಧವನ್ನು ಕೊಡುವವನು ನೀರೋಗಿಯೂ ದೀರ್ಘಾಯುವೂ ಆಗುತ್ತಾನೆ.

ಅನಾಥಾನ್ಪೋಷಯೇದ್ಯಸ್ತು ಕೃಪಣಾನ್ಧಕಪಙ್ಗುಕಾನ್ ।
ಸ ತು ಪುಣ್ಯಫಲಂ ಪ್ರೇತ್ಯ ಲಭತೇ ಕೃಚ್ಛ್ರಮೋಕ್ಷಣಮ್ ॥

ಯಾವನು ಅನಾಥರನ್ನೂ, ದೀನರನ್ನೂ, ದುಃಖದಲ್ಲಿರುವವರನ್ನೂ, ಕುರುಡರನ್ನೂ, ಹೆಳವರನ್ನೂ ಲಾಲಿಸಿ-ಪೋಷಿಸುವನೋ ಅವನು ಅವಸಾನಾನಂತರ ಪುಣ್ಯಫಲವನ್ನು ಹೊಂದುತ್ತಾನೆ ಮತ್ತು ಎಲ್ಲ ಸಂಕಟಗಳಿಂದಲೂ ಮುಕ್ತನಾಗುತ್ತಾನೆ.

ವೇದವಿದ್ಯಾಲಯಗಳನ್ನೂ, ಸಭೆಗಳನ್ನೂ, ಧರ್ಮಶಾಲೆಗಳನ್ನೂ ಭಿಕ್ಷುಗಳಿಗೆ ಆಶ್ರಮಗಳನ್ನೂ ನಿರ್ಮಿಸಿಕೊಡುವವನು ಅವಸಾನಾನಂತರ ಶುಭಫಲವನ್ನು ಹೊಂದುತ್ತಾನೆ.

ಯಾವನು ವಿಧ-ವಿಧವಾದ, ನಾನಾಪ್ರಕಾರವಾದ ಆಕಾರಗಳುಳ್ಳ, ಭಕ್ಷ್ಯ-ಭೋಜ್ಯಗಳಿಗೆ ಸಂಬಂಧಿಸಿದ ಗುಣಗಳಿಂದ ಯುಕ್ತವಾದ, ರಮ್ಯವಾದ ಗೋಶಾಲೆಗಳನ್ನು ಅನವರತವಾಗಿ ಕಟ್ಟಿಸುತ್ತಿರುವನೋ–ಅಂತಹವನು ಅವಸಾನಾನಂತರ ಉತ್ತಮಜನ್ಮವನ್ನು ಹೊಂದುತ್ತಾನೆ ಮತ್ತು ಸಕಲರೋಗಗಳಿಂದಲೂ ಮುಕ್ತನಾಗುತ್ತಾನೆ.

ದೇವಿ! ಹೀಗೆ ನಾನಾವಿಧವಾದ ವಸ್ತುಗಳನ್ನು ದಾನಮಾಡುವವನು ಬಹುವಿಧವಾದ ಪುಣ್ಯಫಲಗಳನ್ನು ಪಡೆದುಕೊಳ್ಳುತ್ತಾನೆ.

ಬುದ್ಧಿಮಾಯುಷ್ಯಮಾರೋಗ್ಯಂ ಬಲಂ ಭಾಗ್ಯಂ ತಥಾಗಮಮ್ ।
ರೂಪೇಣ ಸಪ್ತಧಾ ಭೂತ್ವಾ ಮಾನುಷ್ಯಂ ಫಲತಿ ಧ್ರುವಮ್ ॥

ಪುಣ್ಯಕರ್ಮಗಳು–ಬುದ್ಧಿ, ಆಯುಷ್ಯ, ಆರೋಗ್ಯ, ಬಲ, ಭಾಗ್ಯ, ಆಗಮ ಮತ್ತು ರೂಪ–ಹೀಗೆ ಏಳು ಪ್ರಕಾರವಾಗಿ ವಿಭಾಗಗೊಂಡು ಮನುಷ್ಯನಿಗೆ ಫಲವನ್ನು ಕೊಡುತ್ತವೆ."

ಉಮೆ :

"ಪೂಜ್ಯನೇ! ದೇವದೇವೇಶನೇ! ಎಲ್ಲ ಕರ್ಮಗಳಿಂದಲೂ ಯಜ್ಞಕರ್ಮವೇ ವಿಶಿಷ್ಟವಾದುದೆಂದೂ ಯಜ್ಞದಲ್ಲಿ ಲೌಕಿಕ ಮತ್ತು ವೈದಿಕಗಳೆಂಬ ಎರಡು ವಿಧಗಳಿವೆಯೆಂದೂ ಹೇಳುತ್ತಾರೆ. ಈ ವಿಷಯವನ್ನು ನನಗೆ ವಿವರಿಸಿ ಹೇಳುವ ಕೃಪೆಮಾಡು."

ಮಹೇಶ್ವರ :

“ಉಮೆ! ದೇವತೆಗಳ ಪೂಜೆಯು ಯಜ್ಞಗಳಲ್ಲಿಯೇ ಅಂತರ್ಗತವಾಗಿದೆ. ಯಜ್ಞಗಳು ವೇದಗಳಲ್ಲಿ ವರ್ಣಿಸಲ್ಪಟ್ಟಿವೆ. ಆ ವೇದಗಳು ಬ್ರಾಹ್ಮಣರಲ್ಲಿ ಸೇರಿವೆ. ಸ್ವರ್ಗದಲ್ಲಿರುವ ಅಥವಾ ಭೂಮಿಯಲ್ಲಿರುವ ಸಕಲ ಪದಾರ್ಥಗಳೂ ಜನರಿಗೆ ಹಿತವುಂಟಾಗಲೆಂಬ ಬಯಕೆಯಿಂದ ಯಜ್ಞಾರ್ಥವಾಗಿ ಬ್ರಹ್ಮನಿಂದಲೇ ಸೃಷ್ಟಿಸಲ್ಪಟ್ಟಿವೆ. ಈ ವಿಷಯವನ್ನು ತಿಳಿದುಕೊಂಡು ಯಾವ ಬ್ರಾಹ್ಮಣನು ಪತ್ನೀಸಮೇತನಾಗಿ ಸತತವಾಗಿ ಯಜ್ಞಕರ್ಮವನ್ನು ಮಾಡುವನೋ–ಅವನು ಸದಾ ಬ್ರಹ್ಮಕರ್ಮದಲ್ಲಿಯೇ ನಿರತನಾಗಿರುವುದರಿಂದ ಅವಸಾನಾನಂತರದಲ್ಲಿ ಪುಣ್ಯಲೋಕಗಳನ್ನು ಹೊಂದುತ್ತಾನೆ.

ದೇವಿ! ವೇದವು ಯಾವಾಗಲೂ ಬ್ರಾಹ್ಮಣರಲ್ಲಿಯೇ ಅಧಿಷ್ಠಿತವಾಗಿದೆ. ಆದುದರಿಂದ ಶಾಸ್ತ್ರವಿಧಿಗೆ ಅನುಸಾರವಾಗಿ ಬ್ರಾಹ್ಮಣರ ಮೂಲಕ ಮಾಡಲ್ಪಡುವ ಯಜ್ಞಕರ್ಮವು ದೇವತೆಗಳಿಗೆ ತೃಪ್ತಿಯನ್ನುಂಟುಮಾಡುತ್ತದೆ. ಬ್ರಾಹ್ಮಣರ ಮತ್ತು ಕ್ಷತ್ರಿಯರ ಸೃಷ್ಟಿಯು ಪ್ರಾಯಶಃ ಯಜ್ಞದ ಸಲುವಾಗಿಯೇ ಆಗಿದೆ. ಶುದ್ಧರಾದ ಯಜಮಾನರಿಂದಲೂ, ಶುದ್ಧರಾದ ಋತ್ವಿಜರಿಂದಲೂ, ಶುದ್ಧವಾದ ದ್ರವ್ಯೋಪಕರಣಗಳಿಂದಲೂ ಯಥಾವಿಧಿಯಾಗಿ ಯಜ್ಞಮಾಡಬೇಕೆಂಬುದು ಶಾಸ್ತ್ರನಿಶ್ಚಯವಾಗಿದೆ. ಈ ಪ್ರಕಾರವಾಗಿ ಯಜ್ಞಗಳನ್ನು ಮಾಡಿದರೆ ದೇವತೆಗಳು ತೃಪ್ತರಾಗುತ್ತಾರೆ. ಸರ್ವದೇವತೆಗಳೂ ತುಷ್ಟರಾದರೆ ಯಜಮಾನನು ಯಜ್ಞದ ಫಲವನ್ನು ಹೊಂದುತ್ತಾನೆ. ಯಜ್ಞಗಳಿಂದ ದೇವತೆಗಳನ್ನು ಸಂತೋಷಗೊಳಿಸಿದರೆ ಅವರು ಲೋಕಗಳನ್ನೇ ಅಭಿವೃದ್ಧಿಪಡಿಸುತ್ತಾರೆ. ಆದುದರಿಂದ ಯಜಮಾನನು ಅವಸಾನಾನಂತರ ಸ್ವರ್ಗಕ್ಕೆ ಹೋಗಿ ದೇವತೆಗಳೊಡನೆ ಆನಂದವಾಗಿರುತ್ತಾನೆ. ಯಜ್ಞಕ್ಕೆ ಸಮಾನವಾದ ದಾನವಿಲ್ಲ ; ಯಜ್ಞಕ್ಕೆ ಸಮಾನವಾದ ಯಾವ ನಿಧಿಯೂ ಇಲ್ಲ. ಸರ್ವಧರ್ಮಗಳ ಉದ್ದೇಶವೂ ಯಜ್ಞದಲ್ಲಿಯೇ ಪ್ರತಿಷ್ಠಿತವಾಗಿದೆ. ಯಜ್ಞದ ಮೂಲಕವಾಗಿ ಮಾಡುವ ಈ ದೇವತಾಪೂಜೆಯು ವೈದಿಕಪೂಜೆಯಾಗಿದೆ. ದೇವತೆಗಳನ್ನು ಸತ್ಕರಿಸುವ ಸಲುವಾಗಿ ಲೋಕದಲ್ಲಿ ಕಾಲ-ಕಾಲಗಳಲ್ಲಿ ಲೌಕಿಕವಾದ ಉತ್ಸವಗಳು ನಡೆಯುತ್ತವೆ. ಯಾವನು ದೇವಸ್ಥಾನದಲ್ಲಿರುವ ದೇವತಾವಿಗ್ರಹವನ್ನು ವಿಧಿವತ್ತಾಗಿ

ಸಂಸ್ಕರಿಸಿ ಉತ್ಸವವನ್ನು ಮಾಡುವನೋ–ಶುಚೀಭೂತನಾಗಿ ದೇವತೆಗಳನ್ನು ಉದ್ದೇಶಿಸಿ ಅಗ್ನಿಯಲ್ಲಿ ಹೋಮಗಳನ್ನು ಮಾಡುವನೋ, ಬಲಿಯನ್ನು ಸಮರ್ಪಿಸುವನೋ ಮತ್ತು ಈ ವಿಧವಾದ ಪೂಜೆಗಳಿಂದ ದೇವತೆಗಳನ್ನು ಸಂತುಷ್ಟಿಗೊಳಿಸುವನೋ–ಅವನು ಮಹಾಪುಣ್ಯವನ್ನು ಹೊಂದುತ್ತಾನೆ. ಈ ಪ್ರಪಂಚದಲ್ಲಿ ಯಾವ ಮನುಷ್ಯರು ದೇವತೆಗಳನ್ನು ಸತ್ಕರಿಸುವ ಉದ್ದೇಶ ದಿಂದ ಗಂಧ, ಹೂಮಾಲೆ, ಉತ್ತಮವಾದ ಅನ್ನ, ಧೂಪ–ಇವುಗಳ ಮೂಲಕ ಆರಾಧಿಸುವರೋ, ಸ್ತುತಿಗಳ ಮೂಲಕವಾಗಿ ಸ್ತೋತ್ರಮಾಡುವರೋ, ನೃತ್ಯ, ವಾದ್ಯ, ಗಾನ ಮತ್ತು ಕಣ್ಣುಗಳನ್ನು ಆಕರ್ಷಿಸುವ ಯಾವುದೇ ಸುಂದರವಸ್ತುಗಳ ಮೂಲಕ ದೇವತಾರಾಧನೆಯನ್ನು ಮಾಡುವರೋ–ಅಂತಹವರ ಭಕ್ತಿಪೂರ್ವಕವಾದ ಸತ್ಕಾರದಿಂದಲೇ ಸ್ವರ್ಗದಲ್ಲಿ ದೇವತೆಗಳು ಸಂತೋಷಗೊಳ್ಳುತ್ತಾರೆ.”

* * *

ಶ್ರಾದ್ಧವಿಧಾನ : ಮೂರು ವಿಧವಾದ ದಾನಗಳು ಮತ್ತು ಅದರ ಫಲಗಳು : ದಾನದಿಂದ ಲಭಿಸುವ ಐದು ಫಲಗಳು : ನಾನಾಪ್ರಕಾರವಾದ ಧರ್ಮಗಳು ಮತ್ತು ಅವುಗಳ ಫಲಗಳ ಪ್ರತಿಪಾದನೆ

ಉಮೆ :

ಪಿತೃಮೇಧಃ ಕಥಂ ದೇವ ತನ್ಮೇ ಶಂಸಿತುಮರ್ಹಸಿ ।
ಸರ್ವೇಷಾಂ ಪಿತರಃ ಪೂಜ್ಯಾಃ ಸರ್ವಸಮ್ಪತ್ಪ್ರದಾಯಿನಃ ॥೯೦೬॥

“ದೇವನೇ! ಪಿತೃಮೇಧವನ್ನು (ಶ್ರಾದ್ಧವನ್ನು) ಹೇಗೆ ಮಾಡ ಬೇಕೆಂಬುದನ್ನು ಹೇಳು. ಎಲ್ಲರಿಗೂ ಪಿತೃಗಳು ಪರಮಪೂಜ್ಯರು. ಹಾಗೆಯೇ ಅವರು ಸಕಲಸಂಪತ್ತನ್ನೂ ಅನುಗ್ರಹಿಸುವವರೂ ಆಗಿದ್ದಾರೆ.”

ಮಹೇಶ್ವರ :

“ದೇವಿ! ಪಿತೃಮೇಧದ ವಿಷಯವನ್ನು ಹೇಳುತ್ತೇನೆ. ಏಕಾಗ್ರಚಿತ್ತಳಾಗಿ ಕೇಳು. ದೇಶ, ಕಾಲ, ವಿಧಾನ ಮತ್ತು ಅದರಿಂದ ಪ್ರಾಪ್ತವಾಗುವ ಶುಭಾಶುಭಫಲಗಳು–ಈ ಎಲ್ಲವನ್ನೂ ಹೇಳುತ್ತೇನೆ.

ಲೋಕಗಳಲ್ಲಿ ಪಿತೃದೇವತೆಗಳು ಸರ್ವಪೂಜ್ಯರಾಗಿರುತ್ತಾರೆ. ಅವರು ದೇವತೆಗಳಿಗೂ ದೇವತೆಗಳಾಗಿರುತ್ತಾರೆ. ದಕ್ಷಿಣದಿಕ್ಕನ್ನು ಆಶ್ರಯಿಸಿರುವ ಅವರು ಶುದ್ಧರೂ ನಿರ್ಮಲರೂ ಪುಣ್ಯವಂತರೂ ಆಗಿರುತ್ತಾರೆ. ಭೂಮಿಯಲ್ಲಿರುವ ಎಲ್ಲ ಪ್ರಾಣಿಗಳೂ ಯಾವ ರೀತಿಯಲ್ಲಿ ಮಳೆಯನ್ನು ನಿರೀಕ್ಷಿಸುತ್ತಿರುತ್ತವೆಯೋ–ಅದೇ ರೀತಿಯಲ್ಲಿ ಪಿತೃಗಳು ಪಿತೃಮೇಧಕರ್ಮವನ್ನು ನಿರೀಕ್ಷಿಸುತ್ತಿರುತ್ತಾರೆ.

ತಸ್ಯ ದೇಶಾಃ ಕುರುಕ್ಷೇತ್ರಂ ಗಯಾ ಗಙ್ಗಾ ಸರಸ್ವತೀ ।
ಪ್ರಭಾಸಂ ಪುಷ್ಕರಂ ಚೇತಿ ತೇಷು ದತ್ತಂ ಮಹಾಫಲಮ್ ॥೯೧೦॥

ಪಿತೃಮೇಧವನ್ನು (ಶ್ರಾದ್ಧವನ್ನು) ಮಾಡಲು ಕುರುಕ್ಷೇತ್ರ, ಗಯಾ, ಗಂಗಾತೀರ, ಸರಸ್ವತೀತೀರ, ಪ್ರಭಾಸ, ಪುಷ್ಕರ–ಈ ಸ್ಥಳಗಳು ಶ್ರೇಷ್ಠವಾಗಿವೆ. ಅಂತಹ ಪವಿತ್ರಸ್ಥಳಗಳಲ್ಲಿ ಕೊಡಲ್ಪಡುವ ಶ್ರಾದ್ಧದಾನವು ಮಹಾಫಲವನ್ನು ಕೊಡುತ್ತದೆ.

ತೀರ್ಥಾನಿ ಸರಿತಃ ಪುಣ್ಯಾ ವಿವಿಕ್ತಾನಿ ವನಾನಿ ಚ ।
ನದೀನಾಂ ಪುಲಿನಾನೀತಿ ದೇಶಾಃ ಶ್ರಾದ್ಧಸ್ಯ ಪೂಜಿತಾಃ ॥೯೧೧॥

ತೀರ್ಥಗಳು, ಪವಿತ್ರವಾದ ನದಿಗಳು, ನಿರ್ಜನವಾದ ಅರಣ್ಯ ಮತ್ತು ನದಿಗಳ ತೀರಪ್ರದೇಶಗಳು–ಇವೆಲ್ಲವೂ ಶ್ರಾದ್ಧಮಾಡಲು ಪ್ರಶಸ್ತವಾದ ಸ್ಥಳಗಳಾಗಿವೆ.

ಮಾಘಪ್ರೋಷ್ಠಪದೌ ಮಾಸೌ ಶ್ರಾದ್ಧಕರ್ಮಣಿ ಪೂಜಿತೌ ।
ಪಕ್ಷಯೋಃ ಕೃಷ್ಣಪಕ್ಷಶ್ಚ ಪೂರ್ವಪಕ್ಷಾತ್ಪ್ರಶಸ್ಯತೇ ॥೯೧೨॥

ಶ್ರಾದ್ಧಕರ್ಮಕ್ಕೆ ಮಾಘ-ಭಾದ್ರಪದಮಾಸಗಳೂ, ಪಕ್ಷಗಳಲ್ಲಿ ಶುಕ್ಲಪಕ್ಷಕ್ಕಿಂತಲೂ ಕೃಷ್ಣಪಕ್ಷವೂ ಪ್ರಶಸ್ತವಾದುವು.

ಅಮಾವಾಸ್ಯಾಂ ತ್ರಯೋದಶ್ಯಾಂ ನವಮ್ಯಾಂ ಪ್ರತಿಪತ್ಸು ಚ ।
ತಿಥಿಷ್ವೇತಾಸು ತುಷ್ಯನ್ತಿ ದತ್ತೇನೇಹ ಪಿತಾಮಹಾಃ ॥೯೧೩॥

ಅಮಾವಾಸ್ಯೆ, ತ್ರಯೋದಶೀ, ನವಮಿ ಮತ್ತು ಪಾಡ್ಯ–ಈ ದಿವಸಗಳಲ್ಲಿ ಶ್ರಾದ್ಧದಾನದಿಂದ ಪಿತೃಗಳು ತೃಪ್ತರಾಗುತ್ತಾರೆ.

ಪೂರ್ವಾಹ್ಣೇ ಶುಕ್ಲಪಕ್ಷೇ ಚ ರಾತ್ರೌ ಜನ್ಮದಿನೇಷು ವಾ ।
ಯುಗ್ಮೇಷ್ವಹಸ್ಸು ಚ ಶ್ರಾದ್ಧಂ ನ ಚ ಕುರ್ವೀತ ಪಣ್ಡಿತಃ ॥೯೧೪॥

ವಿದ್ಯಾವಂತನಾದವನು ಪೂರ್ವಾಹ್ಣದಲ್ಲಿಯೂ, ಶುಕ್ಲಪಕ್ಷದಲ್ಲಿಯೂ, ರಾತ್ರಿಯಲ್ಲಿಯೂ, ಹುಟ್ಟಿದ ದಿವಸಗಳಲ್ಲಿಯೂ, ಎರಡು ತಿಥಿಗಳಿರುವ ದಿವಸದಲ್ಲಿಯೂ ಶ್ರಾದ್ಧವನ್ನು ಮಾಡಬಾರದು.

ಏಷ ಕಾಲೋ ಮಯಾ ಪ್ರೋಕ್ತಃ ಪಿತೃಮೇಧಸ್ಯ ಪೂಜಿತಃ ।
ಯಸ್ಮಿಂಶ್ಚ ಬ್ರಾಹ್ಮಣಂ ಪಾತ್ರಂ ಪಶ್ಯೇತ್ಕಾಲಃ ಸ ಚ ಸ್ಮೃತಃ ॥೯೧೫॥

* ಪಿತೃಮೇಧಕ್ಕೆ (ಶ್ರಾದ್ಧಕ್ಕೆ) ಪ್ರಶಸ್ತವಾದ ಕಾಲವನ್ನು ನಾನು ಹೇಳಿದ್ದೇನೆ. ಯಾವ ದಿನ ಸತ್ಪಾತ್ರನಾದ ಬ್ರಾಹ್ಮಣನ ದರ್ಶನವಾಗುವುದೋ ಆ ದಿನವೂ ಶ್ರಾದ್ಧಮಾಡಲು ಉತ್ತಮವಾದ ಕಾಲವೆಂದು ಹೇಳಲ್ಪಟ್ಟಿದೆ.

ಶ್ರಾದ್ಧದಲ್ಲಿ ಅಪಾಂಕ್ತೇಯರಾದ ಬ್ರಾಹ್ಮಣರನ್ನು ಬಿಡಬೇಕು. ಪಂಕ್ತಿ ಪಾವನರಾದ ಬ್ರಾಹ್ಮಣರನ್ನು ಆಮಂತ್ರಿಸಬೇಕು. ಶ್ರಾದ್ಧಗಳಲ್ಲಿ ಪಾಪಿಷ್ಠರಿಗೆ ಭೋಜನಮಾಡಿಸಿದ್ದೇ ಆದರೆ ಯಜಮಾನನು ನರಕಕ್ಕೆ ಹೋಗುತ್ತಾನೆ.

ವೃತ್ತಶ್ರುತಕುಲೋಪೇತಾನ್ಸಕಲತ್ರಾನ್ಸುಗ್ಣಾನ್ವಿತಾನ್ ।
ತದರ್ಹಾಞ್ಶ್ರೋತ್ರಿಯಾನ್ವಿದ್ಧಿ ಬ್ರಾಹ್ಮಣಾನಯುಜಃ ಶುಭೇ ॥೯೧೬॥

ಸದಾಚಾರಸಂಪನ್ನರಾದ, ಶಾಸ್ತ್ರಗಳನ್ನು ತಿಳಿದಿರುವ, ಸತ್ಕುಲಪ್ರಸೂತ ರಾದ, ಸಪತ್ನೀಕರಾದ, ಸದ್ಗುಣಸಂಪನ್ನರಾದ ಶ್ರೋತ್ರಿಯಬ್ರಾಹ್ಮಣರು ಶ್ರಾದ್ಧಕರ್ಮಕ್ಕೆ ಯೋಗ್ಯರಾದವರೆಂದು ತಿಳಿ. ಶ್ರಾದ್ಧದಲ್ಲಿ ಬ್ರಾಹ್ಮಣರ ಸಂಖ್ಯೆಯು ವಿಷಮವಾಗಿರಬೇಕು.

ಏತಾನ್ನಿಮನ್ತ್ರಯೇದ್ವಿದ್ವಾನ್ಪೂರ್ವೇದ್ಯುಃ ಪ್ರಾತರೇವ ವಾ ।
ತತಃ ಶ್ರಾದ್ಧಕ್ರಿಯಾಂ ಪಶ್ಚಾದಾರಭೇತ ಯಥಾವಿಧಿ ॥೯೧೭॥

ವಿದ್ವಾಂಸನಾದವನು ಇಂತಹ ಸದ್ಗುಣಸಂಪನ್ನರಾದ ಬ್ರಾಹ್ಮಣರನ್ನು

---

* ಪಿತೃಮೇಧವೆಂದರೆ–ಪಿತೃಯಜ್ಞ ಅಥವಾ ಶ್ರಾದ್ಧವೇ ಆದರೂ ಮರಣಹೊಂದಿದ ನಂತರ ಮಾಡುವ ಅಪರಕ್ರಿಯೆಗೂ ಪಿತೃಮೇಧವೆಂದು ಹೇಳುವ ವಾಡಿಕೆಯಿದೆ. ಇಲ್ಲಿ ಸೂಚಿಸಿರುವ ಕಾಲಗಳಲ್ಲಿ ಮಾಡುವ ಶ್ರಾದ್ಧವು ಕಾಮ್ಯವೆಂದೂ, ನಿಯತವಾದ ಶ್ರಾದ್ಧಕ್ಕೆ ಈ ನಿಯಮವು ಅನ್ವಯಿಸುವುದಿಲ್ಲವೆಂದೂ ಹಲವು ವಿದ್ವಾಂಸರ ಅಭಿಪ್ರಾಯವಾಗಿದೆ.

ಶ್ರಾದ್ಧದ ಹಿಂದಿನ ದಿನವಾಗಲೀ ಅಥವಾ ಶ್ರಾದ್ಧದ ದಿನವೇ ಪ್ರಾತಃಕಾಲವಾಗಲೀ ನಿಮಂತ್ರಣಮಾಡಬೇಕು. ಅನಂತರ ವಿಧಿಪೂರ್ವಕವಾಗಿ ಶ್ರಾದ್ಧಕರ್ಮವನ್ನು ಆರಂಭಿಸಬೇಕು.

ತ್ರೀಣಿ ಶ್ರಾದ್ಧೇ ಪವಿತ್ರಾಣಿ ದೌಹಿತ್ರಃ ಕುತಪಸ್ತಿಲಾಃ ।
ತ್ರೀಣಿ ಚಾತ್ರ ಪ್ರಶಂಸನ್ತಿ ಶೌಚಮಕ್ರೋಧಮತ್ವರಾಮ್ ॥೯೧॥

ಶ್ರಾದ್ಧದಲ್ಲಿ ಮಗಳ ಮಗ, ಕುತಪಕಾಲ* ಮತ್ತು ಎಳ್ಳು–ಇವು ಮೂರು ಪವಿತ್ರವಾದುವುಗಳು. ಪವಿತ್ರತೆ, ಅಕ್ರೋಧ ಮತ್ತು ಅವಸರಪಡದಿರುವುದು–ಈ ಮೂರನ್ನೂ, ಶ್ರಾದ್ಧಸಮಯದಲ್ಲಿ ವಿದ್ವಾಂಸರು ಪ್ರಶಂಸೆ ಮಾಡುತ್ತಾರೆ.

ಕುತಪಃ ಖಡ್ಗಪಾತ್ರಂ ಚ ಕುಶಾ ದರ್ಭಾಸ್ತಿಲಾ ಮಧು ।
ಕಾಲಶಾಕಂ ಗಜಚ್ಛಾಯಾ ಪವಿತ್ರಂ ಶ್ರಾದ್ಧಕರ್ಮಸು ॥೯೨೦॥

ಕುತಪಕಾಲ, ಖಡ್ಗಪಾತ್ರ, ಕುಶ, ದರ್ಭೆ, ಎಳ್ಳು, ಜೇನುತುಪ್ಪ, ಕರಿಬೇವು, ಗಜಚ್ಛಾಯಾಯೋಗ[1]–ಇವು ಶ್ರಾದ್ಧಕರ್ಮದಲ್ಲಿ ಪವಿತ್ರಗಳು.

ತಿಲಾನವಕಿರೇತ್ತತ್ರ ನಾನಾವರ್ಣಾನ್ಸಮನ್ತತಃ ।
ಅಶುದ್ಧಮಪವಿತ್ರಂ ಚ ತಿಲೈಃ ಶುಧ್ಯತಿ ಶೋಭನೇ ॥೯೨೧॥

ಶ್ರಾದ್ಧಮಾಡುವ ಸ್ಥಳದ ಸುತ್ತಲೂ ಹಲವು ಬಣ್ಣಗಳ ಎಳ್ಳನ್ನು ಎರಚಬೇಕು. ಅಶುದ್ಧವಾದ ಮತ್ತು ಅಪವಿತ್ರವಾದ ಸ್ಥಳವು ಎಳ್ಳಿನಿಂದ ಪರಿಶುದ್ಧವಾಗುತ್ತದೆ.

ನೀಲಕಾಷಾಯವಸ್ತ್ರಂ ಚ ಭಿನ್ನವರ್ಣಂ ನವವ್ರಣಮ್ ।
ಹೀನಾಙ್ಗಮಶುಚಿಂ ವಾಪಿ ವರ್ಜಯೇತ್ತತ್ರ ದೂರತಃ ॥೯೨೨॥

ಶ್ರಾದ್ಧದಲ್ಲಿ ನೀಲ ಅಥವಾ ಕಾಷಾಯವಸ್ತ್ರವನ್ನು ಧರಿಸಿರುವವನನ್ನೂ

---

* ಕುತಪಕಾಲ–ಹಗಲಿನ ಹದಿನೈದು ಮುಹೂರ್ತಗಳಲ್ಲಿ ಎಂಟನೆಯ ಮುಹೂರ್ತ. ಸೂರ್ಯೋದಯವು 6 ಘಂಟೆ ಎಂದು ಇಟ್ಟುಕೊಂಡರೆ 11ಘಂಟೆ 36 ನಿಮಿಷದಿಂದ 12ಘಂಟೆ 24 ನಿಮಿಷದವರೆಗೆ ಕುತಪಕಾಲ. ಶ್ರಾದ್ಧಕ್ಕೆ ಪವಿತ್ರವಾದ ಸಮಯ.

1 ಗಜಚ್ಛಾಯಾ–ಮಘಾನಕ್ಷತ್ರದಲ್ಲಿ ಚಂದ್ರನೂ–ಹಸ್ತನಕ್ಷತ್ರದಲ್ಲಿ ಸೂರ್ಯನೂ ಇರುವಾಗ ಬರುವ ಒಂದು ಪುಣ್ಯತಿಥಿ. ಇದೊಂದು ಶ್ರಾದ್ಧಕಾಲ. ವ್ಯತೀಪಾತೋ

ಭಿನ್ನವರ್ಣದವನನ್ನೂ, ಆಗತಾನೇ ಗಾಯಗೊಂಡವನನ್ನೂ, ಅಂಗಹೀನನನ್ನೂ, ಅಪವಿತ್ರನಾದವನನ್ನೂ ದೂರದಿಂದಲೇ ಪರಿತ್ಯಜಿಸಬೇಕು.

ಉಪಕಲ್ಪ್ಯ ತದಾಹಾರಂ ಬ್ರಾಹ್ಮಣಾನರ್ಚಯೇತ್ತತಃ ।
ಶ್ಮಶ್ರುಕರ್ಮಶಿರಸ್ನಾತಾನ್ಸಮಾರೋಪ್ಯಾಸನಂ ಕ್ರಮಾತ್ ।
ಸುಗನ್ಧಮಾಲ್ಯಾಭರಣೈಃ ಸ್ರಗ್ಭಿರೇತಾನ್ವಿಭೂಷಯೇತ್ ॥೬೨೩॥

ಶ್ರಾದ್ಧಕ್ಕಾಗಿ ಆಹಾರವನ್ನು ಸಿದ್ಧಗೊಳಿಸಿ ಬ್ರಾಹ್ಮಣರನ್ನು ಪೂಜಿಸಬೇಕು. ಕ್ಷುರಕರ್ಮವನ್ನು ಮಾಡಿಸಿಕೊಂಡು ಸ್ನಾನಮಾಡಿದ ಬ್ರಾಹ್ಮಣರನ್ನು ಅನುಕ್ರಮವಾಗಿ ಆಸನದಲ್ಲಿ ಕುಳ್ಳಿರಿಸಿ, ಸುಗಂಧಯುಕ್ತವಾದ ಮಾಲೆಗಳಿಂದಲೂ ಆಭರಣಗಳಿಂದಲೂ ಪುಷ್ಪಹಾರಗಳಿಂದಲೂ ಅಲಂಕರಿಸಬೇಕು. ಅಲಂಕೃತರಾಗಿ ಕುಳಿತಿರುವ ಬ್ರಾಹ್ಮಣರನ್ನು ಕುರಿತು–'ನಾನೀಗ ಪಿಂಡಪ್ರದಾನವನ್ನು ಮಾಡುವೆನು'–ಎಂದು ಹೇಳಬೇಕು. ಅವರಿಂದ ಅನುಮತಿ ಪಡೆದು ಅನಂತರ ದಕ್ಷಿಣಾಭಿಮುಖವಾಗಿ (ದಕ್ಷಿಣಾಗ್ರವಾಗಿ) ದರ್ಭೆಗಳನ್ನು ಹರಡಬೇಕು. ಅದರ ಸಮೀಪದಲ್ಲಿಯೇ ಅಗ್ನಿಯನ್ನು ಪ್ರತಿಷ್ಠಾಪಿಸಿ **ಅಗ್ನಯೇ ಕವ್ಯವಾಹನಾಯ ಸ್ವಾಹಾ–ಸೋಮಾಯ ಪಿತೃಮತೇ ಸ್ವಾಹಾ**–ಎಂದು ಹೇಳಿಕೊಂಡು ಶ್ರಾದ್ಧಾನ್ನದ ಆಹುತಿಯನ್ನು ಅಗ್ನಿಯಲ್ಲಿ ಹೋಮಮಾಡಬೇಕು. ಹೀಗೆ ಅಗ್ನೀಷೋಮರಿಗೆ ಆಹುತಿಯನ್ನು ಕೊಟ್ಟು ಅನಂತರ ಪಿತೃಗಳ ಸಲುವಾಗಿ ಹೋಮಮಾಡಬೇಕು. ಅನಂತರ ದಕ್ಷಿಣಾಭಿಮುಖವಾಗಿ ಕುಳಿತು ಯಜ್ಞೋಪವೀತವನ್ನು ಬಲಹೆಗಲಮೇಲೆ ಹಾಕಿಕೊಂಡು ಪಿತೃಗಳ ನಾಮ-ಗೋತ್ರಪುರಸ್ಸರವಾಗಿ ಮೂರು ಪಿಂಡಗಳನ್ನು ಹೆಬ್ಬೆರಳನ್ನು ತಾಕಿಸದೇ ದರ್ಭೆಗಳಲ್ಲಿಡಬೇಕು. ಈ ವಿಧಿಯಿಂದ ಕೊಡುವ ಶ್ರಾದ್ಧದಾನವು ಪಿತೃಗಳಿಗೆ ಅಕ್ಷಯವಾದ ಪುಣ್ಯಲೋಕಗಳನ್ನು ಕೊಡುತ್ತದೆ. ಪಿಂಡಪ್ರದಾನವಾದನಂತರ ಕರ್ತೃವು ಶುಚೀಭೂತನಾಗಿ ತುಷ್ಟರಾಗುವಂತೆ

ಗ್ರಹಣಂ ಚನ್ದ್ರಸೂರ್ಯಯೋಃ। ಶ್ರಾದ್ಧಂ ಪ್ರತಿ ರುಚಿಶ್ಚೈತೇ ಶ್ರಾದ್ಧಕಾಲಾಃ ಪ್ರಕೀರ್ತಿತಾಃ ॥ ಯಾಜ್ಞವಲ್ಕ್ಯ ೧-೨೬೮. ಸೂರ್ಯಗ್ರಹಣಕ್ಕೂ ಗಜಚ್ಛಾಯಾ ಎಂಬ ಹೆಸರಿದೆ. ಸೈಂಹಿಕೇಯೋ ಯದಾ ಭಾನುಂ ಗ್ರಸತೇ ಪರ್ವಸನ್ಧಿಷು। ಗಜಚ್ಛಾಯಾ ತು ಸಾ ಪ್ರೋಕ್ತಾ ಶ್ರಾದ್ಧಂ ತತ್ರ ಪ್ರಕಲ್ಪಯೇತ್ ॥

ಬ್ರಾಹ್ಮಣರನ್ನು ದಕ್ಷಿಣೆ ಮತ್ತು ಭೋಜನಸಾಮಗ್ರಿಗಳಿಂದ ಯಥಾಶಕ್ತಿ ಸಂಪೂಜಿಸಬೇಕು.

ಯತ್ರ ತತ್ಕ್ರಿಯತೇ ತತ್ರ ನ ಜಲ್ಪೇನ್ನ ಜಪೇನ್ಮಿಥಃ ।
ನಿಯಮ್ಯ ವಾಚಂ ದೇಹಂ ಚ ಶ್ರಾದ್ಧಕರ್ಮ ಸಮಾರಭೇತ್ ॥

ಶ್ರಾದ್ಧಕರ್ಮವು ನಡೆಯುತ್ತಿರುವ ಸ್ಥಳದಲ್ಲಿ ಯಾರೊಡನೆಯೂ ಮಾತನಾಡಬಾರದು. ತಾನೂ ಕೂಡ ಯಾವ ಮಾತನ್ನೂ ಆಡಬಾರದು. ಮಾತನ್ನೂ ಮತ್ತು ಶರೀರವನ್ನೂ ಸಂಯಮಿಸಿಕೊಂಡು ಶ್ರಾದ್ಧಕರ್ಮವನ್ನು ಆರಂಭಿಸಬೇಕು.

ತತೋ ನಿರ್ವಪನೇ ವೃತ್ತೇ ತಾನ್ಪಿಣ್ಡಾಂಸ್ತದನನ್ತರಮ್ ।
ಬ್ರಾಹ್ಮಣೋಽಗ್ನಿರಜೋ ಗೌರ್ವಾ ಭಕ್ಷಯೇದಪ್ಸು ವಾ ಕ್ಷಿಪೇತ್ ॥

ಪಿಂಡಪ್ರದಾನಕಾರ್ಯವು ಪೂರ್ಣವಾದ ಬಳಿಕ ಆ ಪಿಂಡಗಳನ್ನು ಬ್ರಾಹ್ಮಣರು ತಿನ್ನಬಹುದು. ಅಥವಾ ಅದನ್ನು ಬೆಂಕಿಗೂ ಹಾಕಬಹುದು. ಆಡಾಗಲೀ ಹಸುವಾಗಲೀ ತಿನ್ನಬಹುದು. ನೀರಿನಲ್ಲಾದರೂ ಬಿಡಬಹುದು.

ಪತ್ನೀಂ ವಾ ಮಧ್ಯಮಂ ಪಿಣ್ಡಂ ಪುತ್ರಕಾಮಾಂ ಹಿ ಪ್ರಾಶಯೇತ್ ।
ಆಧತ್ತ ಪಿತರೋ ಗರ್ಭಂ ಕುಮಾರಂ ಪುಷ್ಕರಸ್ರಜಮ್ ॥೯೩೦॥

ಶ್ರಾದ್ಧಕರ್ತೃವಿನ ಪತ್ನಿಯು ಪುತ್ರಕಾಮಳಾಗಿದ್ದರೆ ಮಧ್ಯಮಪಿಂಡ ವನ್ನು (ಪಿತಾಮಹನಿಗೆ ಅರ್ಪಿತವಾಗಿರುವುದನ್ನು) ಅವಳಿಗೆ ತಿನ್ನಲು ಕೊಡ ಬೇಕು ಮತ್ತು ಪತ್ನಿಯು ಪಿತೃಗಳನ್ನು ಹೀಗೆ ಪ್ರಾರ್ಥಿಸಬೇಕು–"ಪಿತೃಗಳೇ! ನೀವು ನನ್ನ ಗರ್ಭದಲ್ಲಿ ಕಮಲಗಳ ಮಾಲೆಯಿಂದ ಸಮಲಂಕೃತನಾದ ಪುತ್ರನನ್ನು ಪ್ರತಿಷ್ಠಾಪಿಸಿರಿ."

ತೃಪ್ತಾನುತ್ಥಾಪ್ಯ ತಾನ್ವಿಪ್ರಾನನ್ನಶೇಷಂ ನಿವೇದಯೇತ್ ।
ತಚ್ಛೇಷಂ ಬಹುಭಿಃ ಪಶ್ಚಾತ್ಸಭೃತ್ಯೋ ಭಕ್ಷಯೇನ್ನರಃ ॥೯೩೧॥

ಭೋಜನಮಾಡಿ ತೃಪ್ತರಾದ ಬ್ರಾಹ್ಮಣರನ್ನು ಎಬ್ಬಿಸಿ ಅನ್ನಶೇಷವನ್ನು ಅವರಿಗೆ ನಿವೇದಿಸಬೇಕು. ಅವರ ಅನುಮತಿಯನ್ನು ಪಡೆದು ಅನಂತರ ಅನ್ನಶೇಷವನ್ನು ಭೃತ್ಯವರ್ಗದವರೊಡನೆಯೂ ಬಂಧುಗಳೊಡನೆಯೂ ಊಟಮಾಡಬೇಕು.

ದೇವಿ! ಸನಾತನವಾದ ಪಿತೃಯಜ್ಞವಿಧಿಯನ್ನು ನಾನೀಗ ಸಂಕ್ಷೇಪವಾಗಿ ಹೇಳಿದ್ದೇನೆ. ಈ ವಿಧವಾದ ಪಿತೃಮೇಧದಿಂದ ಪಿತೃಗಳೂ ತೃಪ್ತರಾಗುತ್ತಾರೆ ; ಕರ್ತೃವೂ ಫಲವನ್ನು ಹೊಂದುತ್ತಾನೆ.

ಅಹನ್ಯಹನಿ ವಾ ಕುರ್ಯಾನ್ಮಾಸೇ ಮಾಸೇಽಥವಾ ಪುನಃ ।
ಸಂವತ್ಸರಂ ದ್ವಿಃ ಕುರ್ಯಾಚ್ಚ ಚತುರ್ವಾಪಿ ಸ್ವಶಕ್ತಿತಃ ॥೯೩೩॥

ಮನುಷ್ಯನು ತನ್ನ ಶಕ್ತಿಗೆ ಅನುಸಾರವಾಗಿ ಶ್ರಾದ್ಧವನ್ನು ಅನುದಿನವೂ ಮಾಡಬಹುದು. ಪ್ರತಿಮಾಸವೂ ಮಾಡಬಹುದು. ಎರಡು ಅಯನಗಳಲ್ಲಿಯೂ ಮಾಡಬಹುದು ಅಥವಾ ವರ್ಷಕ್ಕೆ ನಾಲ್ಕು ಬಾರಿಯಾದರೂ ಮಾಡಬಹುದು.

ದೀರ್ಘಾಯುಶ್ಚ ಭವೇತ್ಸ್ವಸ್ಥಃ ಪಿತೃಮೇಧೇನ ವಾ ಪುನಃ ।
ಸುಪುತ್ರೋ ಬಹುಭೃತ್ಯಶ್ಚ ಪ್ರಭೂತಧನಧಾನ್ಯವಾನ್ ॥೯೩೪॥

ಪಿತೃಗಳ ತೃಪ್ತಿಗಾಗಿ ಶ್ರಾದ್ಧವನ್ನು ಮಾಡುವುದರಿಂದ ಮನುಷ್ಯನು ದೀರ್ಘಾಯುಷ್ಮಂತನಾಗುತ್ತಾನೆ. ಸಮಾಧಾನಚಿತ್ತನಾಗಿರುತ್ತಾನೆ. ಪುತ್ರವಂತನಾಗುತ್ತಾನೆ. ಅನೇಕ ಸೇವಕರನ್ನು ಹೊಂದಿರುತ್ತಾನೆ. ಹೇರಳವಾದ ಧನ-ಧಾನ್ಯಗಳನ್ನು ಹೊಂದಿರುತ್ತಾನೆ.

ಶ್ರಾದ್ಧಾನ್ನವನ್ನು ದಾನಮಾಡಿದವನು ವಿಧ-ವಿಧವಾದ ಆಕೃತಿಗಳುಳ್ಳ, ನಿರ್ಮಲವಾದ, ಅಪ್ಸರೆಯರ ಸಮೂಹಗಳಿಂದ ಶಬ್ದಾಯಮಾನವಾದ, ರಜೋಗುಣರಹಿತವಾದ ಸ್ವರ್ಗವನ್ನು ಹೊಂದುತ್ತಾನೆ.

ಪುಷ್ಟಿಕಾಮರಾದ ಯಾವ ಪಂಡಿತರು ಹೀಗೆ ಶ್ರಾದ್ಧವನ್ನು ಮಾಡುವರೋ–ಅವರ ಪಿತೃಗಳು ಅವರಿಗೆ ಸರ್ವದಾ ಪುಷ್ಟಿಯನ್ನೂ–ಸಂತಾನವನ್ನೂ ಅನುಗ್ರಹಿಸುತ್ತಾರೆ.

ಧನ್ಯಂ ಯಶಸ್ಯಮಾಯುಷ್ಯಂ ಸ್ವರ್ಗ್ಯಂ ಶತ್ರುವಿನಾಶನಮ್ ।
ಕುಲಸಂಧಾರಕಂ ಚೇತಿ ಶ್ರಾದ್ಧಮಾಹುರ್ಮನೀಷಿಣಃ ॥೯೩೭॥

ವಿದ್ವಾಂಸರು-ಶ್ರಾದ್ಧವು ಧನ, ಯಶಸ್ಸು, ಆಯುಸ್ಸು, ಸ್ವರ್ಗ, ಶತ್ರುನಾಶ, ಕುಲಾಭಿವೃದ್ಧಿ–ಎಂಬ ಈ ಫಲಗಳನ್ನು ಕೊಡುವುದೆಂದು ಹೇಳುತ್ತಾರೆ.

ಭಾಮಿನಿ! ದಾನಕ್ಕೆ ಪ್ರಮಾಣದ ಪರಿಮಿತಿಯನ್ನು ಹೇಳುವೆನು,

ಕೇಳು : ಜಗತ್ತಿನಲ್ಲಿ ಮನುಷ್ಯನ ಹತ್ತಿರ ಯಾವ ಸಾರವತ್ತಾದ ಮತ್ತು ಅವನಿಗೆ ಅತ್ಯಂತಪ್ರಿಯವಾದ ವಸ್ತುವಿರುವುದೋ–ಆ ವಸ್ತುವೇ ದಾನಮಾಡಲು ಉತ್ತಮೋತ್ತಮವಾದ ವಸ್ತುವಾಗಿದೆ. ಶೋಭನಳೇ! ಹೀಗೆಯೇ ಎಲ್ಲ ದಾನಗಳ ವಿಧಿಗಳನ್ನೂ ಹೇಳುತ್ತಾರೆ.

ಪ್ರಸ್ಥಂ ಸಾರಂ ದರಿದ್ರಸ್ಯ ಸಾರಂ ಕೋಟಿಧನಸ್ಯ ಚ ॥೯೩॥

ಪ್ರಸ್ಥಸಾರಸ್ತು ತತ್ಪ್ರಸ್ಥಂ ದದನ್ಮಹದವಾಪ್ನುಯಾತ್ ।
ಕೋಟಿಸಾರಸ್ತು ತಾಂ ಕೋಟಿಂ ದದನ್ಮಹದವಾಪ್ನುಯಾತ್ ।
ಉಭಯಂ ತನ್ಮಹತ್ತಚ್ಚ ಫಲೇನೈವ ಸಮಂ ಸ್ಮೃತಮ್ ॥೯೪॥

ದರಿದ್ರನಿಗೆ ಒಂದು ಬಳ್ಳ ಧಾನ್ಯವೇ ಸಾರಭೂತವಾದ (ಶ್ರೇಷ್ಠವಾದ) ವಸ್ತುವಾಗಿದೆ. ಕೋಟಿಧನವಿರುವವನಿಗೆ ಆ ಕೋಟಿಧನವೇ ಸಾರಭೂತವಾದ ವಸ್ತುವಾಗಿದೆ. ಒಂದು ಬಳ್ಳ ಧಾನ್ಯವನ್ನೇ ಸಾರವನ್ನಾಗಿ ಹೊಂದಿರುವವನು ಅದನ್ನೇ ದಾನವಾಗಿ ಕೊಟ್ಟು ಮಹಾಫಲವನ್ನು ಹೊಂದುತ್ತಾನೆ. ಕೋಟಿ ಧನವನ್ನೇ ಸಾರವನ್ನಾಗಿ ಹೊಂದಿರುವವನು ಆ ಕೋಟಿಧನದ ದಾನದಿಂದ ಮಹಾಫಲವನ್ನು ಹೊಂದುತ್ತಾನೆ. ಇಬ್ಬರು ಮಾಡಿದ ದಾನವೂ ಮಹತ್ವ ಪೂರ್ಣವೇ ಆಗಿದೆ. ಇಬ್ಬರಿಗೂ ಸಮಾನವಾದ ಫಲವೇ ಲಭಿಸುತ್ತದೆ.

ಧರ್ಮಾರ್ಥಕಾಮಭೋಗೇಷು ಶಕ್ತ್ಯಭಾವಸ್ತು ಮಧ್ಯಮಮ್ ।
ಸ್ವದ್ರವ್ಯಾದತಿಹೀನಂ ತು ತದ್ದಾನಮಧಮಂ ಸ್ಮೃತಮ್ ॥೯೫॥

ಧರ್ಮಾರ್ಥ-ಕಾಮಗಳ ಉಪಭೋಗಗಳಲ್ಲಿ ಶಕ್ತಿಯ ಅಭಾವವಿದ್ದ ವರು ಸ್ವಲ್ಪದಾನಮಾಡಿದರೂ ಅದು ಮಧ್ಯಮವರ್ಗದ್ದೆಂದು ಹೇಳುತ್ತಾರೆ. ತನ್ನಲ್ಲಿರುವ ಐಶ್ವರ್ಯದಲ್ಲಿ ಅತ್ಯಲ್ಪವನ್ನೇ ದಾನಮಾಡುವುದು ಅಧಮ ವೆನಿಸುತ್ತದೆ.

ದೇವಿ! ದಾನದ ಫಲಗಳು ಐದು ಪ್ರಕಾರವಾಗಿ ಕಲ್ಪಿತವಾಗಿವೆ.

ಆನನ್ತ್ಯಂ ಚ ಮಹಚ್ಚೈವ ಸಮಂ ಹೀನಂ ಹಿ ಪಾತಕಮ್ ॥೯೬॥

ಅನಂತ, ಮಹತ್, ಸಮ, ಹೀನ ಮತ್ತು ಪಾಪ–ಇವೇ ಐದು ಫಲ ಪ್ರಕಾರಗಳು.

ಉಮೆ! ಅವುಗಳಲ್ಲಿ ಒಂದೊಂದರಲ್ಲಿಯೂ ಇರುವ ವಿಶೇಷವನ್ನು ಹೇಳುವೆನು ; ಏಕಾಗ್ರಚಿತ್ತಳಾಗಿ ಕೇಳು.

ದುಸ್ತ್ಯಜಸ್ಯ ಚ ವೈ ದಾನಂ ಪಾತ್ರ ಆನನ್ತ್ಯಮುಚ್ಯತೇ ॥೯೪೩॥

ಯಾವ ವಸ್ತುವನ್ನು ತ್ಯಜಿಸಲು ಅತ್ಯಂತದುಃಸ್ಸಾಧ್ಯವೋ ಅಂತಹ ವಸ್ತುವನ್ನು ಸತ್ಪಾತ್ರನಿಗೆ ದಾನಮಾಡುವುದು 'ಆನಂತ್ಯ' ಅಥವಾ ಅಕ್ಷಯ ಫಲದಾಯಕವಾದುದೆಂದು ಹೇಳುತ್ತಾರೆ.

ದಾನಂ ಷಡ್ಗುಣಯುಕ್ತಂ ತು ಮಹದಿತ್ಯಭಿಧೀಯತೇ ।

ಹಿಂದೆ ಹೇಳಿದ ಆರು ಗುಣಗಳಿಂದ ಯುಕ್ತವಾದ ದಾನವು 'ಮಹತ್' ಅಥವಾ ಮಹಾದಾನವೆಂದು ಕರೆಯಲ್ಪಡುತ್ತದೆ.

ಯಥಾಶ್ರದ್ಧಂ ತು ವೈ ದಾನಂ ಯಥಾರ್ಹಂ ಸಮಮುಚ್ಯತೇ ॥

ತನ್ನ ಶ್ರದ್ಧೆಗೆ ಅನುಸಾರವಾಗಿ ಯಥಾಯೋಗ್ಯವಾದ ರೀತಿಯಲ್ಲಿ ದಾನ ಮಾಡುವುದು 'ಸಮ' ಎಂದು ಹೇಳಲ್ಪಡುತ್ತದೆ.

ಗುಣತಸ್ತು ತಥಾ ಹೀನಂ ದಾನಂ ಹೀನಮಿತಿ ಸ್ಮೃತಮ್ ।

ಆರು ಗುಣಗಳಲ್ಲಿ ಯಾವುದಾದರೂ ಕೆಲವು ಗುಣಗಳಿಂದ ಹೀನವಾದ ದಾನವನ್ನು 'ಹೀನದಾನ'–ವೆನ್ನುತ್ತಾರೆ.

ದಾನಂ ಪಾತಕಮಿತ್ಯಾಹುಃ ಷಡ್ಗುಣಾನಾಂ ವಿಪರ್ಯಯೇ ॥

ಆರು ಗುಣಗಳಿಂದಲೂ ಹೀನವಾಗಿರುವ ದಾನಕ್ಕೆ 'ಪಾತಕದಾನ' ವೆನ್ನುತ್ತಾರೆ. ಆನಂತ್ಯದಾನದ ಫಲವನ್ನು ಪಡೆದವನು ದೇವಲೋಕದಲ್ಲಿ ಅತಿಹೆಚ್ಚುಕಾಲ ಇರುತ್ತಾನೆ. ಮಹಾದಾನದ ಫಲವನ್ನು ಪಡೆದವನು ಸ್ವರ್ಗ ಲೋಕದಲ್ಲಿ ಹೆಚ್ಚುಕಾಲದವರೆಗೆ ಪೂಜಿಸಲ್ಪಡುತ್ತಿರುತ್ತಾನೆ. ಸಮದಾನದ ಫಲವನ್ನು ಪಡೆದವನು ಮನುಷ್ಯಭೋಗಗಳನ್ನು ಹೆಚ್ಚು ಕಾಲದವರೆಗೆ ಉಪಭೋಗಿಸುತ್ತಾನೆ. ಕ್ರಿಯೆಯಿಂದ ಹೀನವಾದ ದಾನವನ್ನು ನಿಷ್ಫಲವೆನ್ನುತ್ತಾರೆ. ಅಥವಾ ಮ್ಲೇಚ್ಛದೇಶಗಳಲ್ಲಿ ಹುಟ್ಟಿ ಅಲ್ಲಿಯಾದರೂ ಹೀನದಾನದ ಫಲವನ್ನೂ ಅನುಭವಿಸುತ್ತಾನೆ. ಅಶುಭದಾನದಿಂದ (ಷಡ್ಗುಣಗಳಿಂದಲೂ ವಿಹೀನವಾದ ದಾನದಿಂದ) ಪಾಪವೇ ಉಂಟಾಗುತ್ತದೆ. ಅಶುಭದಾನಿಯು

ಅವಸಾನಾನಂತರ ಅನೇಕವರ್ಷಗಳವರೆಗೆ ನರಕದಲ್ಲಿದ್ದು ಅನಂತರ ಪಶು-ಪಕ್ಷಿಗಳ ಯೋನಿಗಳಲ್ಲಿ ಹುಟ್ಟುತ್ತಾನೆ."

ಉಮೆ :

"ಪರಮೇಶ್ವರನೇ! ಅಶುಭದಾನಮಾಡಿಯೂ–ಶುಭಫಲವು ಪ್ರಾಪ್ತವಾಗುವುದೇ? ಪ್ರಾಪ್ತವಾಗುವುದಾದರೆ ಅದು ಹೇಗೆ ಸಾಧ್ಯವಾಗುತ್ತದೆ?"

ಮಹೇಶ್ವರ :

ಮನಸಾ ತತ್ತ್ವತಃ ಶುದ್ಧಮಾನೃಶಂಸ್ಯಪುರಸ್ಸರಮ್ ।
ಪ್ರೀತ್ಯಾ ತು ಸರ್ವದಾನಾನಿ ದತ್ತ್ವಾ ಫಲಮವಾಪ್ನುಯಾತ್ ॥

"ಪ್ರಿಯೇ! ಯಾವ ದಾನವು ಶುದ್ಧಹೃದಯದಿಂದಲೂ (ನಿಷ್ಕಾಮಭಾವದಿಂದಲೂ), ದಯಾಪುರಸ್ಸರವಾಗಿಯೂ, ಪ್ರೀತಿಯಿಂದಲೂ ಕೊಡಲ್ಪಡುವುದೋ–ಅಂತಹ ದಾನವು ಶುಭಫಲವನ್ನೇ ಕೊಡುತ್ತದೆ. ಯಾವುದೇ ದಾನವನ್ನಾದರೂ ದಾತೃವು ಪ್ರಸನ್ನಚಿತ್ತನಾಗಿ ಕೊಟ್ಟಲ್ಲಿ ಅದರ ಫಲವನ್ನು ಅವನು ಹೊಂದಿಯೇ ಹೊಂದುತ್ತಾನೆ. ಶುಭೇಕ್ಷಣಳೇ! ಎಲ್ಲ ಪ್ರಕಾರವಾದ ದಾನಗಳಲ್ಲಿಯೂ ಇರುವ ರಹಸ್ಯವೇ ಇದಾಗಿದೆ.

ಸತ್ಪುರುಷರು ಆಚರಿಸಿರುವ ಇನ್ನೂ ಇತರಧರ್ಮಕಾರ್ಯಗಳನ್ನು ಹೇಳುವೆನು ; ಕೇಳು :

ಉದ್ಯಾನಗಳನ್ನು ಬೆಳೆಸುವುದು ; ದೇವಾಲಯಗಳನ್ನು ಕಟ್ಟಿಸುವುದು ; ಸೇತುವೆಗಳನ್ನು ಕಟ್ಟಿಸುವುದು ; ಬಾವಿಗಳನ್ನು ತೋಡಿಸುವುದು ; ಎಲ್ಲೆಡೆಗಳಲ್ಲಿಯೂ ಗೋಶಾಲೆಗಳನ್ನೂ, ತಟಾಕಗಳನ್ನೂ, ಧರ್ಮಶಾಲೆಗಳನ್ನೂ ಕಟ್ಟಿಸುವುದು ; ಪಾಷಂಡಿಗಳಿಗೂ (ವೇದವಿಹಿತಮಾರ್ಗವನ್ನು ಬಿಟ್ಟಿರುವವರಿಗೂ) ಮನೆಗಳನ್ನು ಕಟ್ಟಿಸುವುದು ; ಅರವಟ್ಟಿಗೆಗಳನ್ನು ಸ್ಥಾಪಿಸುವುದು ; ಗೋವುಗಳಿಗೆ ಅನುದಿನವೂ ಹುಲ್ಲುತಿನ್ನಿಸುವುದು ; ರೋಗಪೀಡಿತರಿಗೆ ಔಷಧಗಳನ್ನು ಒದಗಿಸಿಕೊಡುವುದು ; ಅನಾಥರನ್ನು ಪೋಷಿಸುವುದು ; ಅನಾಥಶವಗಳ ದಹನಸಂಸ್ಕಾರವನ್ನು ಮಾಡುವುದು ; ತೀರ್ಥಕ್ಷೇತ್ರಗಳಿಗೆ ಹೋಗುವ ಮಾರ್ಗಗಳನ್ನು ಶುದ್ಧಿಗೊಳಿಸುವುದು ; ತನ್ನ ಶಕ್ತಿಗೆ ಅನುಸಾರವಾಗಿ ಇತರರ ಕಷ್ಟಗಳನ್ನು ಹೋಗಲಾಡಿಸಲು ಪ್ರಯತ್ನಿಸುವುದು–ಒಟ್ಟಿನಲ್ಲಿ

ಹೇಳುವುದಾದರೆ ಜನರಿಗೆ ಉಪಯೋಗವಾಗುವ ಇಂತಹ ಕಾರ್ಯಗಳೆಲ್ಲವೂ ಧರ್ಮಕಾರ್ಯಗಳೆಂದೇ ಹೇಳಲ್ಪಡುತ್ತವೆ. ಈ ಬಗೆಯ ಧರ್ಮ ಕಾರ್ಯಗಳನ್ನು ಮನುಷ್ಯನು ತನ್ನ ಶಕ್ತಿಗೆ ಅನುಸಾರವಾಗಿ ಶ್ರದ್ಧೆಯಿಂದ ಮಾಡಬೇಕು. ಹಾಗೆ ಮಾಡಿದವನು ಅವಸಾನಾನಂತರ ಪುಣ್ಯವನ್ನು ಹೊಂದುತ್ತಾನೆ. ಈ ವಿಷಯವನ್ನು ಪುನಃ ವಿಚಾರಿಸಬೇಕಾಗಿಯೇ ಇಲ್ಲ. ಆ ಪುಣ್ಯಫಲದಿಂದ ಅವನು ಮರುಹುಟ್ಟಿನಲ್ಲಿ ಸುಂದರವಾದ ರೂಪವನ್ನೂ, ಆರೋಗ್ಯವನ್ನೂ, ಸೌಭಾಗ್ಯವನ್ನೂ, ಬಲವನ್ನೂ, ಸೌಖ್ಯವನ್ನೂ ಹೊಂದು ತ್ತಾನೆ. ಸ್ವರ್ಗಲೋಕದಲ್ಲಿರಲಿ, ಮನುಷ್ಯಲೋಕದಲ್ಲಿರಲಿ–ಆಯಾ ಪುಣ್ಯಫಲ ವಿಶೇಷಗಳಿಂದ ಅವನು ತೃಪ್ತಿಯನ್ನು ಹೊಂದುತ್ತಾನೆ."

ಉಮೆ :

"ಪೂಜ್ಯನೇ! ಲೋಕಪಾಲಕರಿಗೂ ಈಶನೇ! ಧರ್ಮದಲ್ಲಿ ಎಷ್ಟು ಭೇದಗಳಿವೆ? ಸತ್ಪುರುಷರು ಎಷ್ಟು ಭೇದಗಳನ್ನು ಕಂಡುಕೊಂಡಿರುವರು? ಈ ವಿಷಯವನ್ನು ಹೇಳುವ ಕೃಪೆಮಾಡು."

ಮಹೇಶ್ವರ :

"ದೇವಿ! ಸ್ಮೃತಿಗಳಲ್ಲಿ ಹೇಳಿರುವ ಧರ್ಮಗಳೇ ಅನೇಕಪ್ರಕಾರವಾಗಿವೆ. ಸತ್ಪುರುಷರ ಆಚಾರವೂ ಧರ್ಮವೆಂದೇ ಹೇಳಲ್ಪಡುತ್ತದೆ. ದೇಶಧರ್ಮಗಳೂ ಪ್ರತ್ಯೇಕ-ಪ್ರತ್ಯೇಕವಾಗಿರುವುದು ಕಂಡುಬರುತ್ತದೆ. ಕುಲಗಳ ಧರ್ಮಗಳೂ ಇವೆ. ಜಾತಿಧರ್ಮಗಳೂ ಇವೆ. ಸಮುದಾಯಧರ್ಮಗಳೂ ಅನೇಕವಾಗಿವೆ. ಶರೀರ ಮತ್ತು ಕಾಲಗಳ ವೈಪರೀತ್ಯದಿಂದ ಆಪದ್ಧರ್ಮಗಳ ಆಚರಣೆಯೂ ಕಂಡುಬರುತ್ತದೆ. ಇದು ಧರ್ಮದ ನಾನಾಸ್ವರೂಪವಾಗಿದೆ. ಲೋಕದ ಜನರು (ಯಾವುದಾದರೂ ಕಾರಣಕ್ಕಾಗಿ) ಇವೆಲ್ಲ ಧರ್ಮಗಳನ್ನೂ ಆಚರಿಸುತ್ತಾರೆ. ಕಾರಣಸಮಾಯೋಗದಿಂದ ಧರ್ಮಕಾರ್ಯವನ್ನು ಮಾಡುತ್ತಾ ಮನುಷ್ಯನು ಅದರ ಫಲವನ್ನು ಪಡೆಯುತ್ತಾನೆ. ಧರ್ಮಗಳಲ್ಲಿ ವೇದೋಕ್ತವಾದ ಧರ್ಮ ಮತ್ತು ಸ್ಮೃತ್ಯುಕ್ತವಾದ ಧರ್ಮ–ಇವುಗಳು ಪ್ರಧಾನವಾದ ಧರ್ಮಗಳೆಂದು

ಹೇಳಲ್ಪಟ್ಟಿವೆ. ದೇವಿ! ಹೀಗೆ ನಾನು ನಿನಗೆ ಧರ್ಮದ ನಾನಾತ್ವವನ್ನು ವರ್ಣಿಸಿ ಹೇಳಿರುವೆನು. ಮತ್ತೇನನ್ನು ಕೇಳಬಯಸುವೆ?"

* * *

ಪ್ರಾಣಿಗಳ ಶುಭಾಶುಭಗತಿಗಳನ್ನು ನಿಶ್ಚಯಿಸುವ ಲಕ್ಷಣಗಳು : ಮೃತ್ಯುವಿನ ಎರಡು ಮತ್ತು ನಾಲ್ಕು ಭೇದಗಳು : ಕರ್ತವ್ಯಪಾಲನಪೂರ್ವಕವಾಗಿ ಶರೀರತ್ಯಾಗಮಾಡುವುದರ ಫಲ : ಕಾಮ-ಕ್ರೋಧಯುಕ್ತರಾಗಿ ದೇಹತ್ಯಾಗಮಾಡುವುದರಿಂದ ಆಗುವ ಪರಿಣಾಮ

ಉಮೆ :

"ಪರಮೇಶ್ವರನೇ! ಮನುಷ್ಯರು ಜೀವಿಸಿರುವಾಗಲೇ ಅವರಿಗೆ ಮುಂದೆ ಲಭಿಸುವ ಗತಿಯು ತಿಳಿಯುವುದೇ ಅಥವಾ ಇಲ್ಲವೇ? ಶುಭಾಚಾರವುಳ್ಳವನ ಜೀವನಕ್ರಮದಂತೆ ಅಶುಭಾಚರಣೆಯುಳ್ಳವನ ಜೀವನವಿರುವುದಿಲ್ಲ. ಈ ವಿಷಯವನ್ನು ಕೇಳಲು ನಾನು ಇಚ್ಛಿಸಿದ್ದೇನೆ. ಈ ವಿಷಯವನ್ನು ಹೇಳುವ ಕೃಪೆಮಾಡು."

ಮಹೇಶ್ವರ :

"ದೇವಿ! ಪ್ರಾಣಿಗಳ ಜೀವನದ ರೀತಿ-ನೀತಿಗಳು ಹೇಗಿರುವುದೆಂಬುದನ್ನು ನಾನು ನಿನಗೆ ಹೇಳುತ್ತೇನೆ. ಪ್ರಪಂಚದಲ್ಲಿ ದೈವಭಾವವನ್ನು ಆಶ್ರಯಿಸಿರುವ ಮತ್ತು ಆಸುರಭಾವವನ್ನು ಆಶ್ರಯಿಸಿರುವ ಇಬ್ಬಗೆಯಾದ ಮನುಷ್ಯರಿದ್ದಾರೆ.

ಮನಸಾ ಕರ್ಮಣಾ ವಾಚಾ ಪ್ರತಿಕೂಲಾ ಭವನ್ತಿ ಯೇ ।
ತಾದೃಶಾನಾಸುರಾನ್ವಿದ್ಧಿ ಮರ್ತ್ಯಾಸ್ತೇ ನರಕಾಲಯಾಃ ॥೯೬೪॥

ಮನಸ್ಸು, ಮಾತು ಮತ್ತು ಕಾರ್ಯಗಳ ಮೂಲಕವಾಗಿ ಯಾರು ಇತರರಿಗೆ ಪ್ರತಿಕೂಲವಾಗಿಯೇ ನಡೆದುಕೊಳ್ಳುವರೋ–ಅಂತಹ ಮನುಷ್ಯರು ಆಸುರಭಾವವನ್ನು ಆಶ್ರಯಿಸಿರುವರೆಂದು ತಿಳಿ. ಅವರೆಲ್ಲರೂ ಮುಂದೆ ನರಕದಲ್ಲಿಯೇ ವಾಸಮಾಡುತ್ತಾರೆ.

ಹಿಂಸಕರು, ಕಳ್ಳರು, ಧೂರ್ತರು, ಪರಸ್ತ್ರೀಸಮಾಗಮಮಾಡುವವರು,

ನೀಚಕರ್ಮಗಳಲ್ಲಿಯೇ ಆಸಕ್ತರಾಗಿರತಕ್ಕವರು, ಶುದ್ಧವಾದ ಮತ್ತು ಮಂಗಳಕರವಾದ ಆಚಾರದಿಂದ ವರ್ಜಿತರಾಗಿರುವವರು, ಪವಿತ್ರತೆಯನ್ನು ದ್ವೇಷಿಸುವವರು, ಜನರ ಸಚ್ಚಾರಿತ್ರ್ಯವನ್ನೇ ದೂಷಿಸುವವರು ಮತ್ತು ಇಂತಹುದೇ ಆಸುರಸ್ವಭಾವವುಳ್ಳ ಜನರು ಅವಸಾನಾನಂತರದಲ್ಲಿ ನರಕದಲ್ಲಿ ಬೀಳುತ್ತಾರೆ.

ಜನರಿಗೆ ಹಿಂಸೆಯನ್ನು (ಉದ್ವೇಗವನ್ನು) ಉಂಟುಮಾಡುವ ಪ್ರಾಣಿಗಳೂ, ಸರ್ಪವೇ ಮೊದಲಾದ ವಿಷಜಂತುಗಳೂ, ಮುಳ್ಳುಮರಗಳೂ ಆಸುರ ಸ್ವಭಾವವುಳ್ಳವುಗಳೆಂದು ತಿಳಿ.

ದೇವತೆಗಳ ಪಕ್ಷದಲ್ಲಿರುವ ಅಥವಾ ದೈವೀಭಾವವನ್ನು ಆಶ್ರಯಿಸಿರುವ ಮನುಷ್ಯರ ಆಚಾರ-ವ್ಯವಹಾರಗಳು ಹೇಗಿರುತ್ತವೆಯೆಂಬುದನ್ನು ಹೇಳುವೆನು; ಕೇಳು.

ಮನೋವಾಕ್ಕರ್ಮಭಿರ್ನಿತ್ಯಮನುಕೂಲಾ ಭವನ್ತಿ ಯೇ ।
ತಾದೃಶಾನಮರಾನ್ವಿದ್ಧಿ ತೇ ನರಾ ಸ್ವರ್ಗಗಾಮಿನಃ ॥೯೭॥

ಯಾರು ಮನಸ್ಸು, ಮಾತು ಮತ್ತು ಕರ್ಮಗಳಿಂದ ಇತರರಿಗೆ ಅನುಕೂಲರಾಗಿರುವರೋ–ಅವರನ್ನು ನೀನು ದೇವತೆಗಳೆಂದೇ ತಿಳಿ. ಅಂತಹ ಮನುಷ್ಯರು ಅವಸಾನಾನಂತರ ಸ್ವರ್ಗಕ್ಕೆ ಹೋಗುತ್ತಾರೆ.

ಶೌಚಾರ್ಜವಪರಾ ಧೀರಾಃ ಪರಾರ್ಥಾನ್ನ ಹರನ್ತಿ ಯೇ ।
ಯೇ ಸಮಾಃ ಸರ್ವಭೂತೇಷು ತೇ ನರಾಃ ಸ್ವರ್ಗಗಾಮಿನಃ ॥೯೯॥

ಯಾರು ಪವಿತ್ರರಾಗಿರುವರೋ, ಸರಳತೆಯಿಂದಿರುವರೋ, ಇತರರ ವಸ್ತುಗಳನ್ನು ಅಪಹರಿಸುವುದಿಲ್ಲವೋ, ಸರ್ವಪ್ರಾಣಿಗಳ ವಿಷಯದಲ್ಲಿಯೂ ಸಮಭಾವದಿಂದಿರುವರೋ–ಅಂತಹ ಮನುಷ್ಯರು ಅವಸಾನಾನಂತರದಲ್ಲಿ ಸ್ವರ್ಗಕ್ಕೆ ಹೋಗುತ್ತಾರೆ.

ಧಾರ್ಮಿಕಾಃ ಶೌಚಸಮ್ಪನ್ನಾಃ ಶುಕ್ಲಾ ಮಧುರವಾದಿನಃ ।
ನಾಕಾರ್ಯಂ ಮನಸೇಚ್ಛನ್ತಿ ತೇ ನರಾಃ ಸ್ವರ್ಗಗಾಮಿನಃ ॥೯೭೦॥

ಧಾರ್ಮಿಕರೂ, ಶೌಚಾಚಾರಸಂಪನ್ನರೂ, ಶುದ್ಧರೂ, ಮಧುರಭಾಷಿ

ಗಳೂ, ಅಕಾರ್ಯವನ್ನು ಮಾಡಲು ಮನಸ್ಸಿನಿಂದಲೂ ಚಿಂತಿಸದವರೂ ಸ್ವರ್ಗಕ್ಕೆ ಹೋಗುತ್ತಾರೆ.

ದರಿದ್ರಾ ಅಪಿ ಯೇ ಕೇಚಿದ್ಯಾಚಿತಾಃ ಪ್ರೀತಿಪೂರ್ವಕಮ್ ।
ದದತ್ಯೇವ ಚ ಯತ್ಕಿಂಚಿತ್ತೇ ನರಾಃ ಸ್ವರ್ಗಗಾಮಿನಃ ॥೯೭೧॥

ದರಿದ್ರರಾಗಿದ್ದರೂ ಯಾಚಕರು ಪ್ರಾರ್ಥಿಸಿದರೆ ಏನನ್ನಾದರೂ ಪ್ರೀತಿ ಪೂರ್ವಕವಾಗಿ ಯಾರು ದಾನಕೊಡುವರೋ–ಅಂತಹವರೂ ಅವಸಾನಾ ನಂತರ ಸ್ವರ್ಗಕ್ಕೆ ಹೋಗುತ್ತಾರೆ.

ಆಸ್ತಿಕಾ ಮಙ್ಗಲಪರಾಃ ಸತತಂ ವೃದ್ಧಸೇವಿನಃ ।
ಪುಣ್ಯಕರ್ಮಪರಾ ನಿತ್ಯಂ ತೇ ನರಾಃ ಸ್ವರ್ಗಗಾಮಿನಃ ॥೯೭೨॥

ಆಸ್ತಿಕರೂ, ಮಂಗಳಪರಾಯಣರೂ, ಸತತವಾಗಿ ವೃದ್ಧರ ಸೇವೆ ಮಾಡುವವರೂ, ಯಾವಾಗಲೂ ಪುಣ್ಯಕಾರ್ಯಗಳಲ್ಲಿಯೇ ನಿರತರಾಗಿರು ವವರೂ ಅವಸಾನಾನಂತರ ಸ್ವರ್ಗಕ್ಕೆ ಹೋಗುತ್ತಾರೆ.

ನಿರ್ಮಮಾ ನಿರಹಂಕಾರಾಃ ಸಾನುಕ್ರೋಶಾಃ ಸ್ವಬನ್ಧುಷು ।
ದೀನಾನುಕಮ್ಪಿನೋ ನಿತ್ಯಂ ತೇ ನರಾಃ ಸ್ವರ್ಗಗಾಮಿನಃ ॥೯೭೩॥

ಅಹಂಕಾರ-ಮಮಕಾರಗಳಿಲ್ಲದವರೂ, ಬಂಧುಗಳ ವಿಷಯದಲ್ಲಿ ದಯಾಪರರಾಗಿರುವವರೂ, ದೀನರ ವಿಷಯದಲ್ಲಿ ಸತತವಾಗಿ ಅನುಕಂಪ ವಿರುವವರೂ ಮರಣಾನಂತರ ಸ್ವರ್ಗಕ್ಕೆ ಹೋಗುತ್ತಾರೆ.

ಸ್ವದುಃಖಮಿವ ಮನ್ಯನ್ತೇ ಪರೇಷಾಂ ದುಃಖವೇದನಮ್ ।
ಗುರುಶುಶ್ರೂಷಣಪರಾ ದೇವಬ್ರಾಹ್ಮಣಪೂಜಕಾಃ ।
ಕೃತಜ್ಞಾಃ ಕೃತವಿದ್ಯಾಶ್ಚ ತೇ ನರಾಃ ಸ್ವರ್ಗಗಾಮಿನಃ ॥೯೭೪॥

ಇತರರ ದುಃಖ ಮತ್ತು ವೇದನೆಗಳನ್ನು ತಮ್ಮದೇ ಎಂದು ಭಾವಿಸು ವವರೂ, ಗುರುಜನರ ಸೇವೆಯಲ್ಲಿ ತತ್ಪರರಾಗಿರುವವರೂ, ದೇವ-ಬ್ರಾಹ್ಮಣ ರನ್ನು ಪೂಜಿಸುವವರೂ, ಮಾಡಿದ ಉಪಕಾರವನ್ನು ಸ್ಮರಿಸುವವರೂ, ವಿದ್ಯಾ ಸಂಪನ್ನರೂ ಸ್ವರ್ಗಕ್ಕೆ ಹೋಗುತ್ತಾರೆ.

ಜಿತೇನ್ದ್ರಿಯಾ ಜಿತಕ್ರೋಧಾ ಜಿತಮಾನಮದಾಸ್ತಥಾ ।

ಲೋಭಮಾತ್ಸರ್ಯಹೀನಾ ಯೇ ತೇ ನರಾಃ ಸ್ವರ್ಗಗಾಮಿನಃ ।
ಶಕ್ತ್ಯಾ ಚಾಭ್ಯವಪದ್ಯನ್ತೇ ತೇ ನರಾಃ ಸ್ವರ್ಗಗಾಮಿನಃ ॥೯೭॥

ಇಂದ್ರಿಯಗಳನ್ನು ಜಯಿಸಿರತಕ್ಕವರೂ, ಕೋಪವನ್ನು ಜಯಿಸಿರತಕ್ಕವರೂ, ಮಾನ ಮತ್ತು ಮದಗಳನ್ನು ಜಯಿಸಿರುವವರೂ, ಲೋಭ-ಮಾತ್ಸರ್ಯಗಳಿಂದ ರಹಿತರಾಗಿರುವವರೂ, ಯಥಾಶಕ್ತಿ ಪರೋಪಕಾರದಲ್ಲಿ ನಿರತರಾಗಿರುವವರೂ ಸ್ವರ್ಗಕ್ಕೆ ಹೋಗುತ್ತಾರೆ.

ವ್ರತಿನೋ ದಾನಶೀಲಾಶ್ಚ ಧರ್ಮಶೀಲಾಶ್ಚ ಮಾನವಾಃ ।
ಋಜವೋ ಮೃದವೋ ನಿತ್ಯಂ ತೇ ನರಾಃ ಸ್ವರ್ಗಗಾಮಿನಃ ॥೯೮॥

ವ್ರತನಿಷ್ಠರೂ, ದಾನಶೀಲರೂ, ಧರ್ಮಶೀಲರೂ, ಸರಳಸ್ವಭಾವದವರೂ, ಮೃದುಸ್ವಭಾವದವರೂ ಮರಣಾನಂತರ ಸ್ವರ್ಗಕ್ಕೆ ಹೋಗುತ್ತಾರೆ.

ದೇವಿ! ಹೀಗೆ ಜನರ ಐಹಿಕವಾದ ಆಚಾರ-ವ್ಯವಹಾರಗಳಿಂದಲೇ ಅವರಿಗೆ ಪರಲೋಕದಲ್ಲಿ ಲಭಿಸುವ ಗತಿಯನ್ನು ಊಹಿಸಬಹುದಾಗಿದೆ. ಮೇಲೆ ಹೇಳಿದಂತೆ ಜೀವನವನ್ನು ನಡೆಸುವ ಮನುಷ್ಯರು ಖಂಡಿತವಾಗಿಯೂ ಸ್ವರ್ಗಕ್ಕೆ ಹೋಗುತ್ತಾರೆ. ಲೋಕದಲ್ಲಿ ಪ್ರಜಾನುಗ್ರಹಕರವಾದ ಇನ್ನೂ ಯಾವ ಶುಭಕರ್ಮಗಳಿವೆಯೋ–ಅವೆಲ್ಲವೂ ಸ್ವರ್ಗಪ್ರಾಪ್ತಿಗೆ ಸಾಧನಗಳಾಗಿವೆ. ಪ್ರಜೆಗಳಿಗೆ ಹಿತವನ್ನುಂಟುಮಾಡುವ ಪಶುಗಳೂ ಮತ್ತು ವೃಕ್ಷಗಳೂ ದೇವತೆಗಳ ಪಕ್ಷಕ್ಕೆ ಸೇರಿದುವೆಂಬುದನ್ನು ತಿಳಿ. ಲೋಕದಲ್ಲಿ ಸಮಸ್ತವಾದ ಚರಾಚರಗಳ ಸಮುದಾಯವೂ ಶುಭಾಶುಭಮಯವೇ ಆಗಿವೆ. ಅವುಗಳಲ್ಲಿ ಶುಭವನ್ನು ದೈವವೆಂದೂ–ಅಶುಭವನ್ನು ಆಸುರವೆಂದೂ ಹೇಳುತ್ತಾರೆ."

ಉಮೆ :

"ಪೂಜ್ಯನೇ! ಪ್ರಪಂಚದಲ್ಲಿ ಕೆಲವರಿಗೆ ಮೃತ್ಯುವು ಸನ್ನಿಹಿತವಾಗಿರುತ್ತದೆ. ಆ ಸಮಯದಲ್ಲಿ ಅವರು ತಮ್ಮ ಪ್ರಾಣಗಳನ್ನು ಯಾವ ರೀತಿಯಲ್ಲಿ ಪರಿತ್ಯಜಿಸಿ ಪರಲೋಕದಲ್ಲಿ ಹಿತವನ್ನು ಪಡೆಯಬಲ್ಲರು?"

ಮಹೇಶ್ವರ :

"ದೇವಿ! ಈ ವಿಷಯವನ್ನು ಸಂತೋಷದಿಂದ ಹೇಳುವೆನು. ಏಕಾಗ್ರ

ಚಿತ್ತಳಾಗಿ ಕೇಳು. ಸ್ವಾಭಾವಿಕಮರಣ ; ಪ್ರಯತ್ನಪೂರ್ವಕವಾಗಿ ಪ್ರಾಣಗಳ ಪರಿತ್ಯಾಗ–ಎಂದು ಲೋಕದಲ್ಲಿ ಮರಣವು ಎರಡು ವಿಧವಾಗಿವೆ. ಇವೆರಡ ರಲ್ಲಿ ಸ್ವಭಾವಸಿದ್ಧವಾದ ಮರಣವು ಯಾವ ವಿಧವಾದ ಅಪಾಯವೂ ಇಲ್ಲದು ದಾಗಿದೆ. ಆದರೆ ಪ್ರಯತ್ನದಿಂದ ಪ್ರಾಣಗಳನ್ನು ತ್ಯಜಿಸುವುದು ಸಾಧನ ಸಾಮಗ್ರಿಗಳ ಮೂಲಕವಾಗಿ ಸಾಧ್ಯವಾಗುತ್ತದೆ. ಈ ಎರಡರಲ್ಲಿಯೂ ಯಾವ ವಿಧಾನಗಳಿವೆಯೆಂಬುದನ್ನು ಹೇಳುವೆನು ; ಕೇಳು. ಸಮರ್ಥವಾದ ಮತ್ತು ಅಸಮರ್ಥವಾದ ಶರೀರದೊಡನೆ ಸಂಬಂಧವಿರುವುದರಿಂದ ಯತ್ನಸಾಧ್ಯ ವಾದ ಮೃತ್ಯುವೂ ಎರಡು ರೀತಿಯಲ್ಲಿರುವುದೆಂದು ಹೇಳುತ್ತಾರೆ. ಮರಣ ಹೊಂದಬೇಕೆನ್ನುವ ಇಚ್ಛೆಯಿಂದ ತನ್ನ ಶರೀರವನ್ನು ಪರಿತ್ಯಾಗಮಾಡುವುದಕ್ಕೆ ಯತ್ನಸಾಧ್ಯವಾದ ಮೃತ್ಯುವೆಂದು ಹೆಸರು.

ತತ್ರಾಕಲ್ಯಶರೀರಸ್ಯ ಜರಾ ವ್ಯಾಧಿಶ್ಚ ಕಾರಣಮ್ ।
ಮಹಾಪ್ರಸ್ಥಾನಗಮನಂ ತಥಾ ಪ್ರಾಯೋಪವೇಶನಮ್ ।
ಜಲಾವಗಾಹನಂ ಚೈವ ಅಗ್ನಿಚಿತ್ಯಾಪ್ರವೇಶನಮ್ ।
ಏವಂ ಚತುರ್ವಿಧಃ ಪ್ರೋಕ್ತ ಆತ್ಮತ್ಯಾಗೋ ಮುಮೂರ್ಷತಾಮ್ ॥

ಅಸಮರ್ಥವಾದ ಶರೀರದಿಂದ ಯುಕ್ತನಾಗಿರುವವನಿಗೆ, ಮುದಿತನ ಮತ್ತು ರೋಗಗಳು ಮರಣಕ್ಕೆ ಕಾರಣಗಳಾಗುತ್ತವೆ. ಅಂತಹ ಸಮಯದಲ್ಲಿ ನಾಲ್ಕು ಪ್ರಕಾರವಾದ ದೇಹತ್ಯಾಗವು ಉಕ್ತವಾಗಿದೆ. ಮಹಾಪ್ರಸ್ಥಾನಗಮನ, ಪ್ರಾಯೋಪವೇಶನ, ನೀರಿನಲ್ಲಿ ಮುಳುಗುವುದು, ಚಿತಾಗ್ನಿಯಲ್ಲಿ ಪ್ರವೇಶಿ ಸುವುದು–ಇವೇ ಆ ನಾಲ್ಕು ವಿಧಾನಗಳು. ಉಮೆ! ಈಗ ಕ್ರಮವಾಗಿ ಅವು ಗಳ ವಿಧಿಯನ್ನು ಹೇಳುವೆನು ; ಕೇಳು. ಮನುಷ್ಯನು ಸ್ವಧರ್ಮಯುಕ್ತವಾದ ಗೃಹಸ್ಥಾಶ್ರಮವನ್ನು ದೀರ್ಘಕಾಲದವರೆಗೆ ವಿಧಿಪೂರ್ವಕವಾಗಿ ನಿರ್ವಹಿ ಸುತ್ತಿದ್ದು ದೇವಋಣ-ಋಷಿಋಣ-ಪಿತೃಋಣಗಳೆಲ್ಲವನ್ನೂ ತೀರಿಸಿ (ಮಕ್ಕಳನ್ನು ಪಡೆದು ಯಜ್ಞಗಳನ್ನು ಮಾಡಿ) ವೃದ್ಧನಾದರೆ ಅಥವಾ ರೋಗಿಷ್ಠ ನಾದರೆ ತನ್ನ ದೌರ್ಬಲ್ಯವನ್ನು ಎಲ್ಲರಿಗೂ ತಿಳಿಯಪಡಿಸಿ, ಗೃಹಸ್ಥಾಶ್ರಮ ವನ್ನು ಪರಿತ್ಯಜಿಸಲು ಎಲ್ಲರ ಅನುಮತಿಯನ್ನೂ ಪಡೆದು ಸಮಸ್ತಬಂಧು ಗಳನ್ನೂ ಮತ್ತು ಕರ್ಮಗಳನ್ನೂ ಪರಿತ್ಯಜಿಸಿ, ತನ್ನ ಧರ್ಮಕಾರ್ಯದ ಸಲುವಾಗಿ ವಿಧಿವತ್ತಾಗಿ ದಾನಗಳನ್ನು ಮಾಡಿ, ಮಧುರವಾದ ಮಾತಿನ

ಮೂಲಕ ಗೃಹಸ್ಥಾಶ್ರಮವನ್ನು ಪರಿತ್ಯಜಿಸಿ, ಆತ್ಮತ್ಯಾಗಮಾಡಲು ಎಲ್ಲ ಜನರಿಂದಲೂ ಅನುಮತಿಯನ್ನು ಪಡೆದು, ನೂತನ ವಸ್ತ್ರವನ್ನು ಉಟ್ಟು ಕೊಂಡು, ಅದನ್ನು ದರ್ಭೆಯ ಹಗ್ಗದಲ್ಲಿ ಬಿಗಿದು, ಆಚಮನಮಾಡಿ, ಪ್ರಯತ್ನಪುರಸ್ಸರವಾಗಿ ಆತ್ಮತ್ಯಾಗದ ಪ್ರತಿಜ್ಞೆಯನ್ನು ಮಾಡಿ, ಗ್ರಾಮ್ಯಧರ್ಮ ವನ್ನು ಸಂಪೂರ್ಣವಾಗಿ ಪರಿತ್ಯಜಿಸಿ–ಅನಂತರ ಇಚ್ಛಾನುಸಾರವಾಗಿ ಪ್ರಾಣ ತ್ಯಾಗವನ್ನು ಮಾಡಬಹುದು.

ಮಹಾಪ್ರಸ್ಥಾನಮಿಚ್ಛೇಚ್ಚೇತ್ಪ್ರತಿಷ್ಠೇತೋತ್ತರಾಂ ದಿಶಮ್ ।
ಭೂತ್ವಾ ತಾವನ್ನಿರಾಹಾರೋ ಯಾವತ್ಪ್ರಾಣವಿಮೋಕ್ಷಣಮ್ ॥೯೧॥

ಚೇಷ್ಟಾಹಾನೌ ಶಯಿತ್ವಾಪಿ ತನ್ಮನಾಃ ಪ್ರಾಣಮುತ್ಸೃಜೇತ್ ।
ಏವಂ ಪುಣ್ಯಕೃತಾಂ ಲೋಕಾನಮಲಾನ್ಪ್ರತಿಪದ್ಯತೇ ॥೯೨॥

ಮಹಾಪ್ರಸ್ಥಾನದ ಮೂಲಕವಾಗಿ ಪ್ರಾಣತ್ಯಾಗಮಾಡಲು ಇಚ್ಛಿಸುವು ದಾದರೆ ನಿರಾಹಾರನಾಗಿ ಎಂದಿನವರೆಗೆ ಪ್ರಾಣವು ಶರೀರದಲ್ಲಿ ಉಳಿದಿರು ವುದೋ ಅಂದಿನವರೆಗೂ ಉತ್ತರದಿಕ್ಕಿನ ಕಡೆಗೆ ನಿರಂತರವಾಗಿ ಹೋಗುತ್ತಲೇ ಇರಬೇಕು. ಶರೀರವು ನಿಶ್ಚೇಷ್ಟವಾಗಿ ಮುಂದೆ ಹೋಗದಿದ್ದಾಗ ಅಲ್ಲಿಯೇ ಮಲಗಿ ಪರಮಾತ್ಮನನ್ನೇ ಧ್ಯಾನಿಸುತ್ತಾ ಪ್ರಾಣಗಳನ್ನು ಪರಿತ್ಯಜಿಸಬೇಕು. ಹೀಗೆ ಮಾಡುವವನು ಪುಣ್ಯಾತ್ಮರಿಗೆ ಲಭಿಸುವ ನಿರ್ಮಲವಾದ ಲೋಕಗಳನ್ನು ಹೊಂದುತ್ತಾನೆ.

ಪ್ರಾಯೋಪವೇಶನಂ ಚೇಚ್ಛೇತ್ತೇನೈವ ವಿಧಿನಾ ನರಃ ।
ದೇಶೇ ಪುಣ್ಯತಮೇ ಶ್ರೇಷ್ಠೇ ನಿರಾಹಾರಸ್ತು ಸಂವಿಶೇತ್ ॥೯೩॥

ಪ್ರಾಯೋಪವೇಶನದ ಮೂಲಕ (ಮರಣಾಂತವಾಗಿ ಉಪವಾಸ ಮಾಡುವುದರ ಮೂಲಕ) ಪ್ರಾಣತ್ಯಾಗಮಾಡಲು ಇಚ್ಛಿಸುವುದಾದರೆ ಪೂರ್ವೋಕ್ತವಾದ ರೀತಿಯಲ್ಲಿ ಮನೆಯನ್ನು ಬಿಟ್ಟು ಪರಮಪವಿತ್ರವಾದ ಮತ್ತು ಶ್ರೇಷ್ಠತಮವಾದ ಪ್ರದೇಶದಲ್ಲಿ ನಿರಾಹಾರನಾಗಿ ಮಲಗಬೇಕು.

ಆಪ್ರಾಣಾನ್ತಂ ಶುಚಿರ್ಭೂತ್ವಾ ಕುರ್ವನ್ದಾನಂ ಸ್ವಶಕ್ತಿತಃ ।
ಹರಿಂ ಸ್ಮರಂಸ್ತ್ಯಜೇತ್ಪ್ರಾಣಾನೇಷ ಧರ್ಮಃ ಸನಾತನಃ ॥೯೪॥

ಏವಂ ಕಲೇವರಂ ತ್ಯಕ್ತ್ವಾ ಸ್ವರ್ಗಲೋಕೇ ಮಹೀಯತೇ ।

ಪ್ರಾಣಗಳು ಶರೀರವನ್ನು ಬಿಟ್ಟುಹೋಗುವವರೆಗೂ ಶುಚಿಯಾಗಿದ್ದು, ತನ್ನ ಶಕ್ತಿಗೆ ಅನುಸಾರವಾಗಿ ದಾನಮಾಡುತ್ತಾ ಶ್ರೀಹರಿಯನ್ನು ಸ್ಮರಿಸಿಕೊಂಡೇ ಪ್ರಾಣಗಳನ್ನು ತ್ಯಾಗಮಾಡಬೇಕು. ಇದು ಸನಾತನಧರ್ಮವಾಗಿದೆ. ಹೀಗೆ ಶರೀರವನ್ನು ತ್ಯಾಗಮಾಡಿದವನು ಸ್ವರ್ಗಲೋಕದಲ್ಲಿ ಪೂಜಿತನಾಗುತ್ತಾನೆ.

ಅಗ್ನಿಪ್ರವೇಶನಂ ಚೇಚ್ಛೇತ್ತೇನೈವ ವಿಧಿನಾ ಶುಭೇ ।
ಕೃತ್ವಾ ಕಾಷ್ಠಮಯಂ ಚಿತ್ಯಂ ಪುಣ್ಯಕ್ಷೇತ್ರೇ ನದೀಷು ವಾ ।
ದೈವತೇಭ್ಯೋ ನಮಸ್ಕೃತ್ವಾ ಕೃತ್ವಾ ಚಾಪಿ ಪ್ರದಕ್ಷಿಣಮ್ ॥೯೧೭॥

ಭೂತ್ವಾ ಶುಚಿರ್ವ್ಯವಸ್ಥಿತಃ ಸ್ಮರನ್ನಾರಾಯಣಂ ಹರಿಮ್ ।
ಬ್ರಾಹ್ಮಣೇಭ್ಯೋ ನಮಸ್ಕೃತ್ವಾ ಪ್ರವಿಶೇದಗ್ನಿಸಂಸ್ತರಮ್ ॥೯೧೮॥

ಶುಭಾಂಗಿಯೇ! ಅಗ್ನಿಪ್ರವೇಶದ ಮೂಲಕ ಪ್ರಾಣಗಳನ್ನು ತೊರೆಯಲು ಇಚ್ಛಿಸುವುದಾದರೆ–ಹಿಂದೆ ಹೇಳಿದ ವಿಧಿಯಂತೆ ಮನೆಯನ್ನು ತ್ಯಜಿಸಿ, ಪುಣ್ಯಕ್ಷೇತ್ರದಲ್ಲಾಗಲೀ ನದಿಗಳ ತೀರದಲ್ಲಾಗಲೀ ಕಟ್ಟಿಗೆಗಳಿಂದ ಚಿತೆಯನ್ನು ಕಲ್ಪಿಸಿ, ದೇವತೆಗಳಿಗೂ ಬ್ರಾಹ್ಮಣರಿಗೂ ಪ್ರದಕ್ಷಿಣ-ನಮಸ್ಕಾರಗಳನ್ನು ಮಾಡಿ ಶುಚೀಭೂತನಾಗಿ ದೃಢವಾದ ನಿಶ್ಚಯದಿಂದ ಕೂಡಿದವನಾಗಿ ಶ್ರೀಹರಿನಾರಾಯಣನನ್ನು ಸ್ಮರಿಸುತ್ತಾ ಪ್ರಜ್ವಲಿಸುತ್ತಿರುವ ಚಿತಾಗ್ನಿಯನ್ನು ಪ್ರವೇಶಿಸಬೇಕು.

ಸೋಽಪಿ ಲೋಕಾನ್ಯಥಾನ್ಯಾಯಂ ಪ್ರಾಪ್ನುಯಾತ್ಪುಣ್ಯಕರ್ಮಣಾಮ್ ॥

ಅಗ್ನಿಯನ್ನು ಪ್ರವೇಶಿಸಿ ಪ್ರಾಣತ್ಯಾಗಮಾಡಿದವನೂ ಯಥೋಚಿತ ವಾದ ರೀತಿಯಲ್ಲಿ ಪುಣ್ಯಕರ್ಮಿಗಳ ಲೋಕಗಳನ್ನು ಹೊಂದುತ್ತಾನೆ.

ಜಲಾವಗಾಹನಂ ಚೇಚ್ಛೇತ್ತೇನೈವ ವಿಧಿನಾ ಶುಭೇ ।
ಖ್ಯಾತೇ ಪುಣ್ಯತಮೇ ತೀರ್ಥೇ ನಿಮಜ್ಜೇತ್ಸುಕೃತಂ ಸ್ಮರನ್ ।
ಸೋಽಪಿ ಪುಣ್ಯತಮಾಲ್ಲೋಕಾನ್ನಿಸರ್ಗಾತ್ಪ್ರತಿಪದ್ಯತೇ ॥೯೧೯॥

ನೀರಿನಲ್ಲಿ ಮುಳುಗಿ ಪ್ರಾಣಗಳನ್ನು ಬಿಡಲು ಇಚ್ಛಿಸುವುದಾದರೆ ಹಿಂದೆ ಹೇಳಿರುವ ರೀತಿಯಲ್ಲಿಯೇ ಮನೆಯನ್ನು ಪರಿತ್ಯಜಿಸಿ ವಿಖ್ಯಾತವಾದ

ಪುಣ್ಯತಮವಾದ ತೀರ್ಥದಲ್ಲಿ ತಾನು ಮಾಡಿದ ಸುಕೃತಗಳನ್ನು (ಪುಣ್ಯಕರ್ಮ ಗಳನ್ನು) ಸ್ಮರಿಸುತ್ತಾ ನೀರಿನಲ್ಲಿ ಮುಳುಗಬೇಕು. ಅಂತಹವನು ಕೂಡ ಸ್ವಾಭಾವಿಕವಾಗಿಯೇ ಪುಣ್ಯತಮವಾದ ಲೋಕಗಳನ್ನು ಹೊಂದುತ್ತಾನೆ.

ಉಮೆ! ಈಗ ನೀನು ಸಮರ್ಥವಾದ ಶರೀರವುಳ್ಳವನ ಪ್ರಾಣತ್ಯಾಗದ ವಿಧಾನವನ್ನು ಯಥಾವತ್ತಾಗಿ ಕೇಳು.

ರಕ್ಷಾರ್ಥಂ ಕ್ಷತ್ರಿಯಸ್ಯೇಷ್ಟಃ ಪ್ರಜಾಪಾಲನಕಾರಣಾತ್ ।
ಯೋಧಾನಾಂ ಭರ್ತೃಪಿಣ್ಡಾರ್ಥಂ ಗುರ್ವರ್ಥಂ ಬ್ರಹ್ಮಚಾರಿಣಾಮ್ ।
ಗೋಬ್ರಾಹ್ಮಣಾರ್ಥಂ ಸರ್ವೇಷಾಂ ಪ್ರಾಣತ್ಯಾಗೋ ವಿಧೀಯತೇ ॥

ಕ್ಷತ್ರಿಯನಿಗೆ ಶಿಷ್ಟರ ಮತ್ತು ದೀನ-ದುಃಖಿಗಳ ರಕ್ಷಣಾರ್ಥವಾಗಿ ಮತ್ತು ಪ್ರಜೆಗಳನ್ನು ಪರಿಪಾಲಿಸುವ ನಿಮಿತ್ತದಿಂದ ಪ್ರಾಣತ್ಯಾಗವು ಅಭೀಷ್ಟವೆಂದು ಹೇಳಲ್ಪಟ್ಟಿದೆ. ಯೋಧರು ಪ್ರಭುವಿನ ಅನ್ನವನ್ನು ತಿಂದುದರ ಕಾರಣ ಕ್ಕಾಗಿಯೂ, ಬ್ರಹ್ಮಚಾರಿಗಳು ಗುರುವಿನ ಸಲುವಾಗಿಯೂ ಮತ್ತು ಸರ್ವರೂ ಗೋ-ಬ್ರಾಹ್ಮಣರ ರಕ್ಷಣೆಗಾಗಿಯೂ ಪ್ರಾಣತ್ಯಾಗಮಾಡಬಹುದು. ಹೀಗೆ ಶಾಸ್ತ್ರವು ವಿಧಿಸಿದೆ.

ಸ್ವರಾಜ್ಯರಕ್ಷಣಾರ್ಥಂ ವಾ ಕುನೃಪೈಃ ಪೀಡಿತಾಃ ಪ್ರಜಾಃ ।
ಮೋಕ್ತುಕಾಮಸ್ತ್ಯಜೇತ್ಪ್ರಾಣಾನ್ಯುದ್ಧಮಾರ್ಗೇ ಯಥಾವಿಧಿ ॥೧೦೦೨॥

ತನ್ನ ರಾಜ್ಯದ ರಕ್ಷಣೆಯ ಸಲುವಾಗಿ ಅಥವಾ ದುಷ್ಟರಾಜರಿಂದ ಪೀಡಿಸಲ್ಪಟ್ಟ ಪ್ರಜೆಗಳನ್ನು ಮುಕ್ತಿಗೊಳಿಸುವ ಸಲುವಾಗಿ ಯಥಾವಿಧಿಯಾಗಿ ಯುದ್ಧಮಾರ್ಗವನ್ನು ಹಿಡಿದು ರಾಜನು ಪ್ರಾಣಗಳನ್ನು ತ್ಯಜಿಸಬೇಕು.

ಸುಸನ್ನದ್ಧೋ ವ್ಯವಸ್ಥಿತಃ ಸಮ್ಪ್ರವಿಶ್ಯಾಪರಾಙ್ಮುಖಃ ।
ಏವಂ ರಾಜಾ ಮೃತಃ ಸದ್ಯಃ ಸ್ವರ್ಗಲೋಕೇ ಮಹೀಯತೇ ।
ತಾದೃಶೀ ಸುಗತಿರ್ನಾಸ್ತಿ ಕ್ಷತ್ರಿಯಸ್ಯ ವಿಶೇಷತಃ ॥೧೦೦೩॥

ಯಾವ ರಾಜನು ಕವಚವನ್ನು ತೊಟ್ಟು ದೃಢನಿಶ್ಚಯಮಾಡಿ ರಣರಂಗ ವನ್ನು ಪ್ರವೇಶಿಸಿ, ಪರಾಙ್ಮುಖನಾಗದೇ ಶತ್ರುಗಳೊಡನೆ ಹೋರಾಡುತ್ತಲೇ ಮರಣವನ್ನಪ್ಪುವನೋ–ಅಂತಹ ರಾಜನು ಕೂಡಲೇ ಸ್ವರ್ಗಲೋಕದಲ್ಲಿ

ಪೂಜಿಸಲ್ಪಡುತ್ತಾನೆ. ಸಾಮಾನ್ಯವಾಗಿ ಎಲ್ಲರಿಗೂ ಅದರಲ್ಲಿಯೂ ವಿಶೇಷ ವಾಗಿ ಕ್ಷತ್ರಿಯರಿಗೆ ಇಂತಹ ಗತಿಗಿಂತಲೂ ಬೇರೆ ಉತ್ತಮಗತಿಯಿರುವುದಿಲ್ಲ.

ಭೃತ್ಯೋ ವಾ ಭರ್ತೃಪಿಣ್ಡಾರ್ಥಂ ಭರ್ತೃಕರ್ಮಣ್ಯುಪಸ್ಥಿತೇ ।
ಕುರ್ವಂಸ್ತತ್ರ ತು ಸಾಹಾಯ್ಯಮಾತ್ಮಪ್ರಾಣಾನಪೇಕ್ಷಯಾ ॥೧೦೦೪॥

ಸ್ವಾಮ್ಯರ್ಥಂ ಸಂತ್ಯಜೇತ್ಪ್ರಾಣಾನ್ಪುಣ್ಯಾಲ್ಲೋಕಾನ್ಸ ಗಚ್ಛತಿ ।
ಸ್ಪೃಹಣೀಯಃ ಸುರಗಣೈಸ್ತತ್ರ ನಾಸ್ತಿ ವಿಚಾರಣಾ ॥೧೦೦೫॥

ಯಾವ ಸೇವಕನು ಸ್ವಾಮಿಯ ಅನ್ನದ ಋಣವನ್ನು ತೀರಿಸುವ ಸಲು ವಾಗಿ ಒಡೆಯನ ಕಾರ್ಯವು ಸನ್ನಿಹಿತವಾದಾಗ ಪ್ರಾಣಗಳ ಹಂಗನ್ನೂ ತೊರೆದು ಸ್ವಾಮಿಯ ಕಾರ್ಯವನ್ನು ಮಾಡುವಾಗ ಅವನ ಸಲುವಾಗಿ ಪ್ರಾಣ ವನ್ನು ತೊರೆಯುವನೋ–ಅಂತಹವನು ದೇವತೆಗಳಿಂದಲೂ ಸ್ಪೃಹಣೀಯ ನಾಗಿ ಪುಣ್ಯತಮವಾದ ಲೋಕಗಳನ್ನು ಹೊಂದುತ್ತಾನೆ. ಇದನ್ನು ಪುನಃ ವಿಚಾರಿಸಬೇಕಾದ ಆವಶ್ಯಕತೆಯೇ ಇಲ್ಲ.

ಏವಂ ಗೋಬ್ರಾಹ್ಮಣಾರ್ಥಂ ವಾ ದೀನಾರ್ಥಂ ವಾ ತ್ಯಜೇತ್ತನುಮ್ ।
ಸೋಽಪಿ ಪುಣ್ಯಮವಾಪ್ನೋತಿ ಆನೃಶಂಸ್ಯವ್ಯಪೇಕ್ಷಯಾ ।
ಇತ್ಯೇತೇ ಜೀವಿತತ್ಯಾಗೇ ಮಾರ್ಗಾಸ್ತೇ ಸಮುದಾಹೃತಾಃ ॥೧೦೦೬॥

ಹೀಗೆಯೇ ಗೋ-ಬ್ರಾಹ್ಮಣರ ಸಲುವಾಗಿ ಮತ್ತು ದೀನರ ಸಲುವಾಗಿ ಪ್ರಾಣಗಳನ್ನು ತ್ಯಜಿಸುವವನು ದಯಾಧರ್ಮದ ಕಾರಣದಿಂದ ಪುಣ್ಯತಮ ವಾದ ಲೋಕಗಳನ್ನು ಹೊಂದುತ್ತಾನೆ.

ದೇವಿ! ಹೀಗೆ ನಾನು ಜೀವಿತತ್ಯಾಗದಲ್ಲಿರುವ ನಾನಾಮಾರ್ಗಗಳನ್ನು ಹೇಳಿರುತ್ತೇನೆ.

ಕಾಮಾತ್ಕ್ರೋಧಾದ್ಭಯಾದ್ವಾಪಿ ಯದಿ ಚೇತ್ಸಂತ್ಯಜೇತ್ತನುಮ್ ।
ಸೋಽನನ್ತಂ ನರಕಂ ಯಾತಿ ಆತ್ಮಹನ್ತೃತ್ವಕಾರಣಾತ್ ॥೧೦೦೭॥

ಕಾಮದಿಂದಾಗಲೀ, ಕ್ರೋಧದಿಂದಾಗಲೀ, ಭಯದಿಂದಾಗಲೀ ಶರೀರವನ್ನು ಪರಿತ್ಯಜಿಸಿದ್ದೇ ಆದರೆ ಅವನು ತನ್ನ ಶರೀರವನ್ನು ಹತ್ಯೆಮಾಡಿ ಕೊಂಡ ಕಾರಣ ಅನಂತವಾದ ನರಕಕ್ಕೆ ಹೋಗುತ್ತಾನೆ.

ಸ್ವಭಾವಂ ಮರಣಂ ನಾಮ ನ ತು ಚಾತ್ಮೇಚ್ಛಯಾ ಭವೇತ್ ।
ಯಥಾ ಮೃತಾನಾಂ ಯತ್ಕಾರ್ಯಂ ತನ್ಮೇ ಶೃಣು ಯಥಾವಿಧಿ ॥

ಮರಣವು ಸ್ವಾಭಾವಿಕವಾದುದು. ತನ್ನ ಇಚ್ಛೆಯಿಂದ ಉಂಟಾಗತಕ್ಕುದಲ್ಲ. ಮರಣಹೊಂದಿದವರಿಗೆ ಯಾವ ರೀತಿಯಲ್ಲಿ ಯಾವ ಕಾರ್ಯವನ್ನು ಮಾಡಬೇಕೆಂಬುದನ್ನು ಹೇಳುವೆನು ; ಕೇಳು.

ಅದರಲ್ಲಿಯೂ ಸ್ವಾಭಾವಿಕವಾದ ಮರಣವಾಗಲೀ ಶಾಸ್ತ್ರೀಯವಾದ ದೇಹತ್ಯಾಗವಾಗಲೀ ಮೂರ್ಖನೊಬ್ಬನ ಆತ್ಮಹತ್ಯೆಗಿಂತಲೂ ವಿಶಿಷ್ಟವಾಗಿಯೇ ಇರುತ್ತದೆ.

ಸಾಯಲಿರುವ ಮನುಷ್ಯನ ಶರೀರವನ್ನು ಭೂಮಿಯ ಮೇಲಿರಿಸಬೇಕು. ಪ್ರಾಣವು ಹೊರಟುಹೋದೊಡನೆಯೇ ಜೀವರಹಿತವಾದ ಆ ಶರೀರವನ್ನು ನೂತನವಸ್ತ್ರದಿಂದ ಹೊದಿಸಬೇಕು. ಸುವರ್ಣದಿಂದಲೂ, ಮಾಲೆಗಳಿಂದಲೂ ಮತ್ತು ಗಂಧದಿಂದಲೂ ನಿರ್ಜೀವವಾದ ಶರೀರವನ್ನು ಅಲಂಕರಿಸಿ ಶ್ಮಶಾನದ ದಕ್ಷಿಣದ ಪ್ರದೇಶದಲ್ಲಿ ಚಿತಾಗ್ನಿಯಲ್ಲಿ ದಹನಮಾಡಬೇಕು. ಅಥವಾ ಜೀವದಿಂದ ರಹಿತವಾದ ಆ ಶರೀರವನ್ನು ಭೂಮಿಯಲ್ಲಾದರೂ ಹೂಳಬಹುದು.

ದಿವಾ ಚ ಶುಕ್ಲಪಕ್ಷಶ್ಚ ಉತ್ತರಾಯಣಮೇವ ಚ ।
ಮುಮೂರ್ಷೂಣಾಂ ಪ್ರಶಸ್ತಾನಿ ವಿಪರೀತಂ ತು ಗರ್ಹಿತಮ್ ॥

ಹಗಲು, ಶುಕ್ಲಪಕ್ಷ ಮತ್ತು ಉತ್ತರಾಯಣ–ಇವು ಸಾಯುವವರಿಗೆ ಪ್ರಶಸ್ತವಾದ ಕಾಲಗಳಾಗಿವೆ. ಇದಕ್ಕೆ ಪ್ರತಿಯಾಗಿ ರಾತ್ರಿ, ಕೃಷ್ಣಪಕ್ಷ ಮತ್ತು ದಕ್ಷಿಣಾಯನಗಳು ನಿಂದ್ಯಕಾಲಗಳು.

ಅನೇಕಪುರುಷರಿಂದ ಮಾಡಲ್ಪಡುವ ಜಲತರ್ಪಣ ಮತ್ತು ಅಷ್ಟಕಾಶ್ರಾದ್ಧಗಳು ಮೃತರಾದವರಿಗೆ ಪರಲೋಕದಲ್ಲಿ ತೃಪ್ತಿಯನ್ನುಂಟುಮಾಡುತ್ತವೆ. ಶುಭವೂ ಉಂಟಾಗುತ್ತದೆ.

ದೇವಿ! ಹೀಗೆ ನಾನು ನಿನಗೆ, ಮನುಷ್ಯರಿಗೆ ಹಿತಕರವಾದ ಮಾತುಗಳನ್ನು ಹೇಳಿದ್ದೇನೆ."

* * *

ಮೋಕ್ಷಧರ್ಮದ ಶ್ರೇಷ್ಠತೆಯ ಪ್ರತಿಪಾದನೆ : ಮೋಕ್ಷಸಾಧನೆಯ ಜ್ಞಾನದ ಪ್ರಾಪ್ತಿಗೆ ಇರುವ ಉಪಾಯಗಳ ನಿರೂಪಣೆ : ಮೋಕ್ಷಪ್ರಾಪ್ತಿಯಲ್ಲಿ ವೈರಾಗ್ಯದ ಪ್ರಧಾನತೆ

ಉಮೆ :

ದೇವದೇವ ನಮಸ್ತೇಽಸ್ತು ಕಾಲಸೂದನ ಶಙ್ಕರ ।
ಲೋಕೇಷು ವಿವಿಧಾ ಧರ್ಮಾಸ್ತ್ವತ್ಪ್ರಸಾದಾನ್ಮಯಾ ಶ್ರುತಾಃ ।
ವಿಶಿಷ್ಟಂ ಸರ್ವಧರ್ಮೇಭ್ಯಃ ಶಾಶ್ವತಂ ಧ್ರುವಮವ್ಯಯಮ್ ॥೧೦೧೫॥

"ದೇವದೇವನೇ! ಕಾಲಸೂದನನೇ! ಶಂಕರನೇ! ನಿನಗೆ ನಮಸ್ಕಾರ ಮಾಡುತ್ತೇನೆ. ನಿನ್ನ ಕೃಪೆಯಿಂದಾಗಿ ನಾನು ಲೋಕದ ವಿವಿಧಧರ್ಮಗಳನ್ನು ಕೇಳಿದೆನು. ಈಗ ನೀನು ಎಲ್ಲ ಧರ್ಮಗಳಿಗಿಂತಲೂ ಶ್ರೇಷ್ಠವೂ, ಶಾಶ್ವತವೂ, ಸುನಿಶ್ಚಿತವೂ, ಮತ್ತು ಅಕ್ಷಯವೂ ಆಗಿರುವ ಧರ್ಮವನ್ನು ಹೇಳು."

ನಾರದರು ಹೇಳುತ್ತಾರೆ : "ಋಷಿಸತ್ತಮರೇ! ದೇವಿಯು ಹೀಗೆ ಪ್ರಶ್ನಿಸಲಾಗಿ ಪಿನಾಕಧರನಾದ ಮಹಾದೇವನು ಸೂಕ್ಷ್ಮವೂ, ಅಧ್ಯಾತ್ಮಭಾವದಿಂದ ಕೂಡಿದುದೂ, ಮಧುರವೂ ಆದ ಈ ಮಾತನ್ನೂ ಹೇಳಿದನು :

"ಮಹಾಭಾಗಳೇ! ನ್ಯಾಯಪೂರ್ವಕವಾಗಿಯೇ ನೀನು ಧರ್ಮದ ನಿರ್ಣಯವನ್ನು ಕೇಳಲು ಬಯಸಿರುವೆ. ನೀನು ಕೇಳುತ್ತಿರುವುದು ಎಲ್ಲಕ್ಕಿಂತಲೂ ಮೇಲಾದ ಧರ್ಮವಾಗಿದೆ.

ಸರ್ವತ್ರ ವಿಹಿತೋ ಧರ್ಮಃ ಸ್ವರ್ಗಲೋಕಫಲಾಶ್ರಿತಃ ।
ಬಹುದ್ವಾರಸ್ಯ ಧರ್ಮಸ್ಯ ನೇಹಾಸ್ತಿ ವಿಫಲಾ ಕ್ರಿಯಾ ॥೧೦೧೭॥

ಸ್ವರ್ಗಲೋಕರೂಪವಾದ ಫಲವನ್ನು ಆಶ್ರಯಿಸಿರುವ ಧರ್ಮವು ಎಲ್ಲ ಕಡೆಗಳಲ್ಲಿಯೂ ಹೇಳಲ್ಪಟ್ಟಿದೆ. ಅನೇಕ ಮಾರ್ಗಗಳುಳ್ಳ ಧರ್ಮದ ಯಾವುದೇ ಕಾರ್ಯವೂ ನಿಷ್ಫಲವಾಗುವುದಿಲ್ಲ.

ಯಸ್ಮಿನ್ಯಸ್ಮಿಂಶ್ಚ ವಿಷಯೇ ಯೋ ಯೋ ಯಾತಿ ವಿನಿಶ್ಚಯಮ್ ।
ತಂ ತಮೇವಾಭಿಜಾನಾತಿ ನಾನ್ಯಂ ಧರ್ಮಂ ಶುಚಿಸ್ಮಿತೇ ॥೧೦೧೮॥

ಯಾವ ಯಾವನು-ಯಾವ ಯಾವ ವಿಷಯದಲ್ಲಿ ನಿಶ್ಚಯವಾದ ಅಭಿ

ಪ್ರಾಯವನ್ನು ಹೊಂದಿರುವನೋ–ಅವನು ಆ ವಿಷಯದಲ್ಲಿ ಮಾತ್ರ ಪರಿಣತನಾಗಿರುತ್ತಾನೆ. ಬೇರೆ ಯಾವ ಧರ್ಮವೂ ಅವನಿಗೆ ತಿಳಿದಿರುವುದಿಲ್ಲ. (ಒಬ್ಬನು ಒಂದು ಧರ್ಮವನ್ನು ನಿಶ್ಚಯಬುದ್ಧಿಯಿಂದ ಆಶ್ರಯಿಸಿದರೆ ಬೇರೆ ಯಾವ ಧರ್ಮವನ್ನೂ ಅವನು ಆಶ್ರಯಿಸಹೋಗುವುದಿಲ್ಲ.)

ದೇವಿ! ಈಗ ನಾನು ಸಂಕ್ಷೇಪವಾಗಿ ಹೇಳುವ ಮೋಕ್ಷದ್ವಾರದ (ಮೋಕ್ಷಧರ್ಮದ) ವಿವರಣೆಯನ್ನು ಕೇಳು. ಈ ಮೋಕ್ಷಧರ್ಮವು ಎಲ್ಲ ಧರ್ಮಗಳಲ್ಲಿಯೂ ಶ್ರೇಷ್ಠವೂ ಶುಭಪ್ರದವೂ ಮತ್ತು ಅವಿನಾಶಿಯೂ ಆಗಿರುವುದು.

ನಾಸ್ತಿ ಮೋಕ್ಷಾತ್ಪರಂ ದೇವಿ ನಾಸ್ತಿ ಮೋಕ್ಷಾತ್ಪರಾ ಗತಿಃ ।
ಸುಖಮಾತ್ಯನ್ತಿಕಂ ಶ್ರೇಷ್ಠಮನಿವೃತ್ತಂ ಚ ತದ್ವಿದುಃ ॥೧೦೨೦॥

ಮೋಕ್ಷಕ್ಕಿಂತಲೂ ಶ್ರೇಷ್ಠವಾದುದು ಯಾವುದೂ ಇಲ್ಲ. ಮೋಕ್ಷಕ್ಕಿಂತಲೂ ಶ್ರೇಷ್ಠವಾದ ಗತಿಯೂ ಬೇರೆ ಯಾವುದೂ ಇಲ್ಲ. ಜ್ಞಾನಿಗಳು ಮೋಕ್ಷವನ್ನು ಪುನರಾವರ್ತನೆ ಇಲ್ಲದೇ ಇರುವುದೆಂದೂ ಆತ್ಯಂತಿಕಸುಖ ಪ್ರದವೆಂದೂ ತಿಳಿಯುತ್ತಾರೆ.

ನಾತ್ರ ದೇವಿ ಜರಾ ಮೃತ್ಯುಃ ಶೋಕೋ ವಾ ದುಃಖಮೇವ ವಾ ।
ಅನುತ್ತಮಮಚಿನ್ತ್ಯಂ ಚ ತದ್ದೇವಿ ಪರಮಂ ಸುಖಮ್ ॥೧೦೨೧॥

ಮೋಕ್ಷದಲ್ಲಿ ಮುಪ್ಪಾಗಲೀ, ಸಾವಾಗಲೀ, ಶೋಕವಾಗಲೀ, ದುಃಖವಾಗಲೀ ಇರುವುದಿಲ್ಲ. ಇದು ಸರ್ವೋತ್ತಮವೂ, ಅಚಿಂತ್ಯವೂ, ಪರಮ ಸುಖಸ್ವರೂಪವೂ ಆಗಿದೆ.

ಜ್ಞಾನಾನಾಮುತ್ತಮಂ ಜ್ಞಾನಂ ಮೋಕ್ಷಜ್ಞಾನಂ ವಿದುರ್ಬುಧಾಃ ।
ಋಷಿಭಿರ್ದೇವಸಙ್ಘೈಶ್ಚ ಪ್ರೋಚ್ಯತೇ ಪರಮಂ ಪದಮ್ ॥೧೦೨೨॥

ಮೋಕ್ಷಜ್ಞಾನವು ಎಲ್ಲ ಜ್ಞಾನಗಳಿಗೂ ಪರಮಶ್ರೇಷ್ಠವಾದ ಜ್ಞಾನವೆಂದು ವಿದ್ವಾಂಸರು ತಿಳಿಯುತ್ತಾರೆ. ಋಷಿಗಳೂ ಮತ್ತು ದೇವತೆಗಳೂ ಮೋಕ್ಷವನ್ನು ಪರಮಪದವೆಂದೇ ಹೇಳುತ್ತಾರೆ.

ನಿತ್ಯಮಕ್ಷರಮಕ್ಷೋಭ್ಯಮಜೇಯಂ ಶಾಶ್ವತಂ ಶಿವಮ್ ।
ವಿಶನ್ತಿ ತತ್ಪದಂ ಪ್ರಾಜ್ಞಾಃ ಸ್ಪೃಹಣೀಯಂ ಸುರಾಸುರೈಃ ॥೧೦೨೩॥

ಮೋಕ್ಷವು ನಿತ್ಯವಾದುದು ; ಅವಿನಾಶಿಯು ; ಕ್ಷೋಭೆಯಿಲ್ಲದುದು ; ಅಜೇಯವಾದುದು ; ಶಾಶ್ವತವಾದುದು ಮತ್ತು ಮಂಗಳಕರವಾದುದು. ಸುರಾಸುರರಿಗೂ ಅಪೇಕ್ಷಣೀಯವಾಗಿರುವ ಮೋಕ್ಷದ್ವಾರವನ್ನು ಪ್ರಾಜ್ಞರು ಪ್ರವೇಶಿಸುತ್ತಾರೆ.

ದುಃಖಾದಿಶ್ಚ ದುರನ್ತಶ್ಚ ಸಂಸಾರೋಽಯಂ ಪ್ರಕೀರ್ತಿತಃ ।
ಶೋಕವ್ಯಾಧಿಜರಾದೋಷೈರ್ಮರಣೇನ ಚ ಸಂಯುತಃ ॥೧೦೨೪॥

ಈ ಸಂಸಾರವು ದುಃಖದಿಂದಲೇ ಆರಂಭಗೊಂಡು ಅಶುಭದಲ್ಲಿಯೇ ಕಡೆಹೊಂದುತ್ತದೆಂದೂ ಹೇಳಲ್ಪಟ್ಟಿದೆ. ಇದು ಶೋಕ, ವ್ಯಾಧಿ, ಮುಪ್ಪು ಮತ್ತು ಮರಣದೋಷಗಳಿಂದ ಕೂಡಿರುವುದು.

ಯಥಾ ಜ್ಯೋತಿರ್ಗಣಾ ವ್ಯೋಮ್ನಿ ನಿವರ್ತನ್ತೇ ಪುನಃ ಪುನಃ ।
ಏವಂ ಜೀವಾ ಅಮೀ ಲೋಕೇ ನಿವರ್ತನ್ತೇ ಪುನಃ ಪುನಃ ॥೧೦೨೫॥

ತಸ್ಯ ಮೋಕ್ಷಸ್ಯ ಮಾರ್ಗೋಽಯಂ ಶ್ರೂಯತಾಂ ಶುಭಲಕ್ಷಣೇ ।
ಬ್ರಹ್ಮಾದಿಸ್ಥಾವರಾನ್ತಶ್ಚ ಸಂಸಾರೋ ಯಃ ಪ್ರಕೀರ್ತಿತಃ ।
ಸಂಸಾರೇ ಪ್ರಾಣಿನಃ ಸರ್ವೇ ನಿವರ್ತನ್ತೇ ಯಥಾ ಪುನಃ ॥೧೦೨೬॥

ಆಕಾಶದಲ್ಲಿ ನಕ್ಷತ್ರಗಳು ಯಾವ ರೀತಿ ಹುಟ್ಟುತ್ತಾ ಮುಳುಗುತ್ತಾ ಇರುತ್ತವೆಯೋ-ಹಾಗೆಯೇ ಲೋಕದಲ್ಲಿ ಜೀವಿಗಳೂ ಹುಟ್ಟುತ್ತಿರುತ್ತವೆ ಮತ್ತು ಸಾಯುತ್ತಿರುತ್ತವೆ. ಆ ಹುಟ್ಟು-ಸಾವುಗಳಿಂದ ಮುಕ್ತಿಯೇ ಮೋಕ್ಷ ಮಾರ್ಗವಾಗಿದೆ. ಶುಭಲಕ್ಷಣಳೇ! ಆ ಮಾರ್ಗವನ್ನೇ ನಿನಗೆ ವಿವರಿಸಿ ಹೇಳುವೆನು ; ಕೇಳು. ಬ್ರಹ್ಮನಿಂದ ಮೊದಲಾಗಿ ವೃಕ್ಷವೇ ಮೊದಲಾದ ಸ್ಥಾವರ ಪ್ರಾಣಿಗಳವರೆಗೂ ಇರುವುದನ್ನು ಸಂಸಾರವೆಂದು ಹೇಳುತ್ತಾರೆ. ಈ ಸಂಸಾರದಲ್ಲಿ ಎಲ್ಲ ಪ್ರಾಣಿಗಳೂ ಬರುತ್ತಿರುತ್ತವೆ ಮತ್ತು ಹೋಗುತ್ತಿರುತ್ತವೆ.

ತತ್ರ ಸಂಸಾರಚಕ್ರಸ್ಯ ಮೋಕ್ಷೋ ಜ್ಞಾನೇನ ದೃಶ್ಯತೇ ।
ಅಧ್ಯಾತ್ಮತತ್ತ್ವವಿಜ್ಞಾನಂ ಜ್ಞಾನಮಿತ್ಯಭಿಧೀಯತೇ ॥೧೦೨೭॥

ಈ ಸಂಸಾರಚಕ್ರದ ಮುಕ್ತಿಯು ಜ್ಞಾನದಿಂದ ಸಾಧ್ಯವಾಗುತ್ತದೆ. ಆಧ್ಯಾತ್ಮತತ್ತ್ವವನ್ನು ಚೆನ್ನಾಗಿ ತಿಳಿದುಕೊಳ್ಳುವುದೇ ಜ್ಞಾನವೆಂದು ಹೇಳಲ್ಪಡುತ್ತದೆ. ಅಂತಹ ಜ್ಞಾನವನ್ನೂ, ಗ್ರಹಿಸುವ ಉಪಾಯವನ್ನೂ,

ಜ್ಞಾನಿಗಳ ಆಚಾರ-ವಿಚಾರಗಳನ್ನೂ ಯಥಾವತ್ತಾಗಿ ಹೇಳುತ್ತೇನೆ. ದೇವಿ! ಏಕಾಗ್ರವಾದ ಮನಸ್ಸಿನಿಂದ ಈ ತತ್ತ್ವವನ್ನು ಕೇಳು.

ಬ್ರಾಹ್ಮಣನಾಗಲೀ, ಕ್ಷತ್ರಿಯನಾಗಲೀ–ಮೊದಲು ಗೃಹಸ್ಥನಾಗಿದ್ದು ಎಲ್ಲ ಬಗೆಯ ಋಣಗಳಿಂದಲೂ ಮುಕ್ತನಾಗಿ ಗೃಹಸ್ಥಾಶ್ರಮವನ್ನು ಪರಿತ್ಯಜಿಸಿ, ಮೋಕ್ಷದಲ್ಲಿಯೇ ನಿಶ್ಚಿತವಾದ ಬುದ್ಧಿಯುಳ್ಳವನಾಗಿ ಅರಣ್ಯಕ್ಕೆ ಹೋಗಬೇಕು. ಅರಣ್ಯದಲ್ಲಿ ಗುರುವಿನ ಆಜ್ಞೆಯನ್ನು ಪಡೆದು ವಿಧಿಪೂರ್ವಕವಾಗಿ ದೀಕ್ಷೆಯನ್ನು ಕೈಗೊಳ್ಳಬೇಕು. ದೀಕ್ಷೆಯನ್ನು ಕೈಗೊಂಡು ಯಥೋಚಿತವಾದ ರೀತಿಯಲ್ಲಿ ತನ್ನ ಆಚಾರವನ್ನು ಪರಿಪಾಲಿಸಬೇಕು. ಬಳಿಕ ದೋಷರಹಿತನಾಗಿರುತ್ತಾ ಉಪಾಧ್ಯಾಯನಿಂದ ಮೋಕ್ಷಜ್ಞಾನವನ್ನು ತಿಳಿದುಕೊಳ್ಳಬೇಕು. ಮೋಕ್ಷಸಾಧನೆಯಲ್ಲಿ ಸಾಂಖ್ಯಮಾರ್ಗ ಮತ್ತು ಯೋಗಮಾರ್ಗಗಳೆಂಬ ಎರಡು ವಿಧವಾದ ಮಾರ್ಗಗಳಿವೆ.

ಪಞ್ಚವಿಂಶತಿವಿಜ್ಞಾನಂ ಸಾಂಖ್ಯಮಿತ್ಯಭಿಧೀಯತೇ ।

ಇಪ್ಪತ್ತೈದು ತತ್ತ್ವಗಳನ್ನು ಯಥಾವತ್ತಾಗಿ ತಿಳಿದುಕೊಳ್ಳುವುದು ಸಾಂಖ್ಯವೆಂದು ಹೇಳಲ್ಪಡುತ್ತದೆ.

ಐಶ್ವರ್ಯಂ ದೇವಸಾರೂಪ್ಯಂ ಯೋಗಶಾಸ್ತ್ರಸ್ಯ ನಿರ್ಣಯಃ ॥

ಅಣಿಮಾದಿ ಐಶ್ವರ್ಯಗಳನ್ನು ಪಡೆಯುವುದೂ ಮತ್ತು ದೇವಸಾ ರೂಪ್ಯವೂ (ದೇವತೆಗಳಿಗೆ ಸಮಾನವಾದ ರೂಪವನ್ನು ಹೊಂದುವುದು.) ಯೋಗಶಾಸ್ತ್ರದ ನಿರ್ಣಯವಾಗಿದೆ. ಈ ಎರಡರಲ್ಲಿ ಯಾವುದಾದರೂ ಒಂದರ ಜ್ಞಾನವನ್ನು ಶಿಷ್ಯಭಾವವನ್ನು ಹೊಂದಿ ಗುರುವಿನಿಂದ ತಿಳಿಯಬೇಕು.

ನಾಕಾಲೋ ನಾಪ್ಯಕಾಷಾಯೀ ನಾಪ್ಯಸಂವತ್ಸರೋಷಿತಃ ।
ನಾಸಾಂಖ್ಯಯೋಗೋ ನಾಶ್ರದ್ಧಂ ಗುರುಣಾ ಸ್ನೇಹಪೂರ್ವಕಮ್ ॥

ಗುರುವಿನಿಂದ ಪ್ರೇಮಪೂರ್ವಕವಾಗಿ ಉಪದೇಶವನ್ನು ಪಡೆಯ ಬೇಕು. ಅಕಾಲದಲ್ಲಿ ಗುರುವಿನ ಬಳಿಗೆ ಉಪದೇಶಕ್ಕಾಗಿ ಹೋಗಬಾರದು. ಕಾಷಾಯ ವಸ್ತ್ರವನ್ನು ಧರಿಸದೇ ಹೋಗಬಾರದು. ಒಂದು ವರ್ಷವಾದರೂ ಗುರುವಿನ ಬಳಿಯಲ್ಲಿದ್ದು ಅವನ ಸೇವೆಯನ್ನು ಮಾಡದೆ ಉಪದೇಶವನ್ನು ಪಡೆಯಬಾರದು ಸಾಂಖ್ಯ ಅಥವಾ ಯೋಗ ಈ ಎರಡರಲ್ಲಿ ಯಾವು

ದಾದರೂ ಒಂದರ ಜ್ಞಾನವಿಲ್ಲದೇ ಉಪದೇಶವನ್ನು ಪಡೆದುಕೊಳ್ಳಬಾರದು. ಅಶ್ರದ್ಧೆಯಿಲ್ಲದೇ ಶ್ರದ್ಧಾವಂತನಾಗಿ ಉಪದೇಶವನ್ನು ಪಡೆಯಬೇಕು.

ಸಮಃ ಶೀತೋಷ್ಣಹರ್ಷಾದೀನ್ವಿಷಹೇತ ಸ ವೈ ಮುನಿಃ ।
ಅಮೃಷ್ಯಃ ಕ್ಷುತ್ಪಿಪಾಸಾಭ್ಯಾಮುಚಿತೇಭ್ಯೋ ನಿವರ್ತಯೇತ್ ॥೧೦೩೨॥

ತ್ಯಜೇತ್ಸಂಕಲ್ಪಜಾನ್ಗ್ರನ್ಥೀನ್ಸದಾ ಧ್ಯಾನಪರೋ ಭವೇತ್ ।
ಕುಂಡಿಕಾ ಚಮಸಂ ಶಿಕ್ಯಂ ಛತ್ರಂ ಯಷ್ಟಿಮುಪಾನಹೌ ॥೧೦೩೩॥

ಚೈಲಮಿತ್ಯೇವ ನೈತೇಷು ಸ್ಥಾಪಯೇತ್ಸ್ವಾಮ್ಯಮಾತ್ಮನಃ ।
ಗುರೋಃ ಪೂರ್ವಂ ಸಮುತ್ತಿಷ್ಠೇಜ್ಜಘನ್ಯಂ ತಸ್ಯ ಸಂವಿಶೇತ್ ॥೧೦೩೪॥

ನೈವಾವಿಜ್ಞಾಪ್ಯ ಭರ್ತಾರಮಾವಶ್ಯಕಮಪಿ ವ್ರಜೇತ್ ।
ದ್ವಿರಹ್ನಿ ಸ್ನಾನಶಾಟೇನ ಸಂಧ್ಯಯೋರಭಿಷೇಚನಮ್ ।
ಏಕಕಾಲಾಶನಂ ಚಾಸ್ಯ ವಿಹಿತಂ ಯತಿಭಿಃ ಪುರಾ ॥೧೦೩೬॥

ಯಾವನು ಎಲ್ಲವನ್ನೂ ಸಮಭಾವದಿಂದ ಕಾಣುತ್ತಾ ಶೀತೋಷ್ಣ-ಹರ್ಷ-ಶೋಕಗಳೇ ಮುಂತಾದ ದ್ವಂದ್ವಗಳನ್ನು ಸಹಿಸಿಕೊಳ್ಳುವನೋ–ಅವನೇ ಮುನಿಯು. ಹಸಿವು-ಬಾಯಾರಿಕೆಗಳಿಗೆ ವಶೀಭೂತನಾಗದೇ, ಉಚಿತವಾದ ಭೋಗಗಳಿಂದ ಮನಸ್ಸನ್ನು ಹಿಂದಿರುಗಿಸಬೇಕು. ಸಂಕಲ್ಪದಿಂದ ಹುಟ್ಟಿದ ಗ್ರಂಥಿಗಳನ್ನು (ಬಂಧನಗಳನ್ನು) ತ್ಯಾಗಮಾಡಬೇಕು. ಯಾವಾಗಲೂ ಧ್ಯಾನಪರನಾಗಿರಬೇಕು. ಕಮಂಡಲು, ಬಟ್ಟಲು, ಕಾವಡಿಯಬಟ್ಟೆ (ಜೋಳಿಗೆ), ಛತ್ರಿ, ಕೋಲು, ಪಾದರಕ್ಷೆ, ವಸ್ತ್ರ–ಇವು ಯಾವುದರಲ್ಲಿಯೂ ತನ್ನವೆಂಬ ಸ್ವಾಮ್ಯವನ್ನು ಸ್ಥಾಪಿಸಬಾರದು. ಗುರುವು ಏಳುವುದಕ್ಕೆ ಮೊದಲು ಏಳಬೇಕು. ಗುರುವು ಮಲಗಿದ ಬಳಿಕ ಮಲಗಬೇಕು. ಸ್ವಾಮಿಗೆ (ಗುರುವಿಗೆ) ತಿಳಿಸದೇ ಯಾವುದೇ ಅವಶ್ಯಕಾರ್ಯಕ್ಕಾದರೂ ಹೋಗಬಾರದು. ದಿನದಲ್ಲಿ ಎರಡುಬಾರಿ ಸಂಧ್ಯಾಸಮಯಗಳಲ್ಲಿ ಸವಸ್ತ್ರನಾಗಿ ಸ್ನಾನಮಾಡಬೇಕು. ಇಂತಹ ಸಾಧಕನು ದಿನಕ್ಕೆ ಒಮ್ಮೆ ಊಟಮಾಡುವುದು ವಿಹಿತವಾಗಿದೆ. ಹಿಂದೆ ಯತಿಗಳೂ ಹೀಗೆಯೇ ಆಚರಿಸುತ್ತಿದ್ದರು.

ಭೈಕ್ಷಂ ಸರ್ವತ್ರ ಗೃಹ್ಣೀಯಾಚ್ಚಿನ್ತಯೇತ್ಸತತಂ ನಿಶಿ ।
ಕಾರಣೇ ಚಾಪಿ ಸಮ್ಪ್ರಾಪ್ತೇ ನ ಕುಪ್ಯೇತ ಕದಾಚನ ॥೧೦೩೭॥

ಭಿಕ್ಷೆಯನ್ನು ಸರ್ವತ್ರ ಸ್ವೀಕರಿಸಬೇಕು. ರಾತ್ರಿಯಲ್ಲಿ ಆಧ್ಯಾತ್ಮಚಿಂತನೆಯನ್ನು ಮಾಡಬೇಕು. ಕೋಪಬರುವ ಸಂದರ್ಭದಲ್ಲಿಯೂ ಕೋಪಗೊಳ್ಳಬಾರದು.

ಬ್ರಹ್ಮಚರ್ಯಂ ವನೇ ವಾಸಃ ಶೌಚಮಿನ್ದ್ರಿಯಸಂಯಮಃ ।
ದಯಾ ಚ ಸರ್ವಭೂತೇಷು ತಸ್ಯ ಧರ್ಮಃ ಸನಾತನಃ ॥೧೦೩೯॥

ಬ್ರಹ್ಮಚರ್ಯ, ಅರಣ್ಯವಾಸ, ಇಂದ್ರಿಯಸಂಯಮ, ಎಲ್ಲ ಪ್ರಾಣಿಗಳಲ್ಲಿಯೂ ದಯೆ–ಇದು ಆಧ್ಯಾತ್ಮಸಾಧಕನ ಸನಾತನಧರ್ಮವಾಗಿದೆ.

ವಿಮುಕ್ತಃ ಸರ್ವಪಾಪೇಭ್ಯೋ ಲಘ್ವಾಹಾರೋ ಜಿತೇನ್ದ್ರಿಯಃ ।
ಆತ್ಮಯುಕ್ತಃ ಪರಾಂ ಬುದ್ಧಿಂ ಲಭತೇ ಪಾಪನಾಶಿನೀಮ್ ॥೧೦೪೦॥

ಸಮಸ್ತಪಾಪಗಳಿಂದಲೂ ಮುಕ್ತನಾಗಿ, ಅಲ್ಪಾಹಾರಿಯಾಗಿ, ಜಿತೇಂದ್ರಿಯನಾಗಿ ಪರಮಾತ್ಮಚಿಂತನೆಯಲ್ಲಿಯೇ ಸದಾ ಯುಕ್ತನಾಗಿರಬೇಕು. ಹೀಗೆ ಮಾಡುವುದರಿಂದ ಸಾಧಕನು ಪಾಪನಾಶಕವಾದ ಶ್ರೇಷ್ಠವಾದ ಜ್ಞಾನವನ್ನು ಹೊಂದುತ್ತಾನೆ.

ಯದಾ ಭಾವಂ ನ ಕುರುತೇ ಸರ್ವಭೂತೇಷು ಪಾಪಕಮ್ ।
ಕರ್ಮಣಾ ಮನಸಾ ವಾಚಾ ಬ್ರಹ್ಮ ಸಮ್ಪದ್ಯತೇ ತದಾ ॥೧೦೪೧॥

ಅನಿಷ್ಠುರೋಽನಹಂಕಾರೋ ನಿರ್ದ್ವನ್ದ್ವೋ ವೀತಮತ್ಸರಃ ।
ವೀತಶೋಕಭಯಾಬಾಧಃ ಪರಂ ಪ್ರಾಪ್ನೋತ್ಯನುತ್ತಮಮ್ ॥೧೦೪೨॥

ತುಲ್ಯನಿನ್ದಾಸ್ತುತಿರ್ಮೌನೀ ಸಮಲೋಷ್ಟಾಶ್ಮಕಾಞ್ಚನಃ ।
ಸಮಃ ಶತ್ರೌ ಚ ಮಿತ್ರೇ ಚ ನಿರ್ವಾಣಮಧಿಗಚ್ಛತಿ ॥೧೦೪೩॥

ಕರ್ಮದಿಂದಾಗಲೀ, ಮಾತಿನಿಂದಾಗಲೀ, ಮನಸ್ಸಿನಿಂದಾಗಲೀ ಸಮಸ್ತ ಪ್ರಾಣಿಗಳ ವಿಷಯದಲ್ಲಿಯೂ ಪಾಪಭಾವವನ್ನು ಹೊಂದದವನು ಬ್ರಹ್ಮಭಾವವನ್ನು ಹೊಂದುತ್ತಾನೆ. ನಿಷ್ಠುರವಾದ ಸ್ವಭಾವವಿಲ್ಲದವನು, ಅಹಂಕಾರವಿಲ್ಲದವನು, ದ್ವಂದ್ವಗಳಿಂದ ರಹಿತನಾದವನು, ಮಾತ್ಸರ್ಯವಿಲ್ಲದವನು, ಶೋಕ-ಭಯಗಳ ಬಾಧೆಯಿಂದ ಮುಕ್ತನಾದವನು–ಅತಿಶ್ರೇಷ್ಠವಾದ ಬ್ರಹ್ಮಪದವನ್ನು ಹೊಂದುತ್ತಾನೆ. ನಿಂದಾ-ಸ್ತುತಿಗಳನ್ನು ಸಮಾನವಾಗಿ ಭಾವಿಸುವವನು, ಯಾವಾಗಲೂ ಮೌನಮುದ್ರೆಯಲ್ಲಿರುವವನು, ಮಣ್ಣುಹೆಂಟೆ,

ಕಲ್ಲು ಮತ್ತು ಚಿನ್ನ ಈ ಮೂರೂ ಸಮಾನವೆಂದು ಭಾವಿಸುವವನು, ಶತ್ರು-ಮಿತ್ರರಿಬ್ಬರನ್ನೂ ಸಮಾನವಾಗಿ ಕಾಣುವವನು–ನಿರ್ವಾಣವನ್ನು (ಮೋಕ್ಷವನ್ನು) ಹೊಂದುತ್ತಾನೆ.

ಇಂತಹ ಆಚರಣೆಯಿಂದ ಯುಕ್ತನಾಗಿರುವ, ಅಧ್ಯಾತ್ಮಚಿಂತನೆಯಲ್ಲಿಯೇ ನಿರತನಾಗಿರುವ ಸಾಧಕನು ಜ್ಞಾನದ ಅಭ್ಯಾಸದಿಂದಲೇ ಶ್ರೇಷ್ಠವಾದ ಗತಿಯನ್ನು ಹೊಂದುತ್ತಾನೆ. ಈ ಸಂಸಾರಮಂಡಲದ ವಿಷಯದಲ್ಲಿ ಉದ್ವೇಗಗೊಳ್ಳದ ಮನಸ್ಸುಳ್ಳವನು ಶೋಕ-ವ್ಯಾಧಿ-ಮುಪ್ಪು ಮತ್ತು ದುಃಖಗಳಿಂದ ಪೀಡಿತನಾಗಿ ನಿರ್ವಾಣವನ್ನು (ಮೋಕ್ಷವನ್ನು) ಹೊಂದುವುದೇ ಇಲ್ಲ. ಆದುದರಿಂದ ಸಂಸಾರದ ವಿಷಯದಲ್ಲಿ ಮನಸ್ಸಿನಲ್ಲಿ ಉದ್ವೇಗವನ್ನು ಹುಟ್ಟಿಸುವ ಮತ್ತು ಮನಸ್ಸನ್ನು ಸ್ಥಿರಗೊಳಿಸುವ ಜ್ಞಾನವನ್ನು ನಿನಗೆ ಹೇಳುತ್ತೇನೆ. ಅಮೃತಕ್ಕೆ (ಮೋಕ್ಷಕ್ಕೆ) ಮೂಲಕಾರಣವು ಜ್ಞಾನವೇ ಆಗಿದೆ.

ಶೋಕಸ್ಥಾನಸಹಸ್ರಾಣಿ ಭಯಸ್ಥಾನಶತಾನಿ ಚ ।
ದಿವಸೇ ದಿವಸೇ ಮೂಢಮಾವಿಶನ್ತಿ ನ ಪಣ್ಡಿತಮ್ ॥೧೦೪೭॥

ಸಾವಿರಾರು ಶೋಕದ ಸ್ಥಾನಗಳೂ (ಸಾವಿರಾರು ಬಗೆಯ ಶೋಕಗಳೂ) ನೂರಾರು ಭಯದ ಸ್ಥಾನಗಳೂ (ನೂರಾರು ವಿಧವಾದ ಭಯಗಳೂ) ದಿವಸ-ದಿವಸವೂ ಮೂಢನಾದ ಮನುಷ್ಯನನ್ನು ಆವರಿಸುತ್ತಲೇ ಇರುತ್ತವೆ. ಆದರೆ ಶೋಕ-ಭಯಗಳು ವಿದ್ವಾಂಸನ ಹತ್ತಿರಕ್ಕೂ ಸುಳಿಯಲಾರವು.

ನಷ್ಟೇ ಧನೇ ವಾ ದಾರೇ ವಾ ಪುತ್ರೇ ಪಿತರಿ ವಾ ಮೃತೇ ।
ಅಹೋ ದುಃಖಮಿತಿ ಧ್ಯಾಯಞ್ಶೋಕಸ್ಯ ಪದಮಾವ್ರಜೇತ್ ॥೧೦೪೮॥

ಧನವು ನಷ್ಟವಾಗಿಹೋದರೆ–ಪತ್ನೀ, ಪುತ್ರ, ಪಿತೃ–ಇವರಲ್ಲಿ ಯಾರಾದರೂ ಮೃತರಾದರೆ 'ಅಯ್ಯೋ'! ನನಗೆ ಎಂತಹ ದುಃಖವು ಪ್ರಾಪ್ತವಾಯಿತು?'–ಎಂದು ಚಿಂತಿಸುತ್ತಾ ಮಾನವನು ಶೋಕಕ್ಕೆ ಆಶ್ರಯಭೂತನಾಗುತ್ತಾನೆ. (ಶೋಕಪರವಶನಾಗುತ್ತಾನೆ.)

ದ್ರವ್ಯೇಷು ಸಮತೀತೇಷು ಯೇ ಶುಭಾಸ್ತಾನ್ನ ಚಿನ್ತಯೇತ್ ।
ತಾನನಾದ್ರಿಯಮಾಣಸ್ಯ ಶೋಕಬನ್ಧಃ ಪ್ರಣಶ್ಯತಿ ॥೧೦೪೯॥

ಐಶ್ವರ್ಯಾದಿಗಳು ನಷ್ಟವಾಗಿಹೋದಾಗ ಅವುಗಳಲ್ಲಿರುವ ಶುಭಗುಣ

ಗಳನ್ನು ಕುರಿತು ಚಿಂತಿಸಲೇಬಾರದು. ಕಳೆದುಹೋದ ದ್ರವ್ಯದಲ್ಲಿರುವ ಶುಭ ಗುಣಗಳನ್ನು ಅನಾದರಣೆಮಾಡಿದರೆ ಶೋಕದ ಬಂಧನವು ನಷ್ಟವಾಗಿ ಹೋಗುತ್ತದೆ.

ಸಮ್ಪ್ರಯೋಗಾದನಿಷ್ಟಸ್ಯ ವಿಪ್ರಯೋಗಾತ್ಪ್ರಿಯಸ್ಯ ಚ ।
ಮಾನುಷಾ ಮಾನಸೈರ್ದುಃಖೈಃ ಸಂಯುಜ್ಯನ್ತೇಽಲ್ಪಬುದ್ಧಯಃ ॥೧೦೫೦॥

ಅಪ್ರಿಯವಾದ ವಸ್ತುವಿನ ಪ್ರಾಪ್ತಿಯಿಂದಲೂ–ಪ್ರಿಯವಾದ ವಸ್ತುವಿನ ವಿಯೋಗದಿಂದಲೂ ಅಲ್ಪಬುದ್ಧಿಗಳಾದ ಮನುಷ್ಯರು ಮಾನಸಿಕವಾದ ದುಃಖ ಗಳಿಗೆ ಒಳಗಾಗುತ್ತಾರೆ.

ಮೃತಂ ವಾ ಯದಿ ವಾ ನಷ್ಟಂ ಯೋಽತೀತಮನುಶೋಚತಿ ।
ಸಂತಾಪೇನ ಚ ಯುಜ್ಯೇತ ತಚ್ಚಾಸ್ಯ ನ ನಿವರ್ತತೇ ॥೧೦೫೧॥

ಉತ್ಪನ್ನಮಿಹ ಮಾನುಷ್ಯೇ ಗರ್ಭಪ್ರಭೃತಿ ಮಾನವಮ್ ।
ವಿವಿಧಾನ್ಯುಪವರ್ತನ್ತೇ ದುಃಖಾನಿ ಚ ಸುಖಾನಿ ಚ ।೧೦೫೨॥

ಸತ್ತುಹೋದ ಮನುಷ್ಯನಿಗಾಗಿ ಅಥವಾ ಕಳೆದುಹೋದ ವಸ್ತುವಿಗಾಗಿ ಶೋಕಪಡುವವನು ಸಂತಾಪಕ್ಕೆ ಭಾಗಿಯಾಗುತ್ತಾನೆ. ಅವನು ಶೋಕಪಡು ವುದರಿಂದ ಸತ್ತುಹೋದ ಮನುಷ್ಯನೂ ಹಿಂದಿರುಗುವುದಿಲ್ಲ ; ಕಳೆದುಹೋದ ಪದಾರ್ಥವೂ ಸಿಕ್ಕುವುದಿಲ್ಲ. ಮನುಷ್ಯಯೋನಿಯಲ್ಲಿ ಹುಟ್ಟಿದ ಮಾನವನಿಗೆ ಗರ್ಭಪ್ರವೇಶವು ಮೊದಲ್ಗೊಂಡು ಮರಣದವರೆಗೂ ವಿಧ-ವಿಧವಾದ ದುಃಖಗಳೂ ಸುಖಗಳೂ ಒದಗುತ್ತಲೇ ಇರುತ್ತವೆ.

ತಯೋರೇಕತರೋ ಮಾರ್ಗೋ ಯದ್ಯೇನಮಭಿಸಂನಮೇತ್ ।
ಸುಖಂ ಪ್ರಾಪ್ಯ ನ ಸಂಹೃಷ್ಯೇನ್ನ ದುಃಖಂ ಪ್ರಾಪ್ಯ ಸಂಜ್ವರೇತ್ ॥೧೦೫೩॥

ಸಾಂಖ್ಯ ಅಥವಾ ಯೋಗಮಾರ್ಗಗಳಲ್ಲಿ ಯಾವುದಾದರೂ ಒಂದು ಮಾರ್ಗವು ಮನುಷ್ಯನನ್ನು ಮೋಕ್ಷಕ್ಕೆ ಒಯ್ಯುತ್ತದೆ. ಸುಖವನ್ನು ಹೊಂದಿದಾಗ ಸಂತೋಷಪಡಬಾರದು. ದುಃಖವನ್ನು ಹೊಂದಿದಾಗ ಉದ್ವಿಗ್ನನಾಗಬಾರದು.

ದೋಷದರ್ಶೀ ಭವೇತ್ತತ್ರ ಯತ್ರ ಸ್ನೇಹಃ ಪ್ರವರ್ತತೇ |
ಅನಿಷ್ಟೇನಾನ್ವಿತಂ ಪಶ್ಯೇದ್ಯಥಾ ಕ್ಷಿಪ್ರಂ ವಿರಜ್ಯತೇ ||೧೦೫||

ಯಾವ ವಿಷಯದಲ್ಲಿ ಆಸಕ್ತಿಯು ಹುಟ್ಟುವುದೋ–ಅದರಲ್ಲಿ ದೋಷವನ್ನೇ ಕಾಣಬೇಕು. ಅಪೇಕ್ಷಿತವಾದ ವಸ್ತುವು ಅನಿಷ್ಟದಿಂದ ಕೂಡಿದೆಯೆಂಬುದನ್ನು ಮನಗಾಣಬೇಕು. ಬೇಗ ವೈರಾಗ್ಯವುಂಟಾಗುವ ರೀತಿಯಲ್ಲಿ ಮನಸ್ಸನ್ನು ಅಪೇಕ್ಷಿಸಿದ ಎಲ್ಲ ವಸ್ತುಗಳಲ್ಲಿಯೂ ದೋಷವನ್ನು ಹುಡುಕಬೇಕು.

ಯಥಾ ಕಾಷ್ಠಂ ಚ ಕಾಷ್ಠಂ ಚ ಸಮೇಯಾತಾಂ ಮಹೋದಧೌ |
ಸಮೇತ್ಯ ಚ ವ್ಯಪೇಯಾತಾಂ ತದ್ವಜ್ಜ್ಞಾತಿಸಮಾಗಮಃ ||೧೦೬||

ಯಾವ ರೀತಿ ಮಹಾಸಮುದ್ರದಲ್ಲಿ ಎಲ್ಲಿಂದಲೋ ತೇಲಿಬಂದ ಎರಡು ದಿಮ್ಮಿಗಳು ಒಂದಾಗಿ ಸೇರಿ ತೇಲಿಹೋಗುತ್ತಿದ್ದು ಪುನಃ ಯಾವುದೋ ಸ್ಥಳದಲ್ಲಿ ಬೇರೆಯಾಗುತ್ತವೆಯೋ–ಅದೇ ರೀತಿಯಲ್ಲಿ ಸಹೋದರರ, ನೆಂಟರಿಷ್ಟರ, ಬಂಧುಗಳ ಸಮಾಗಮವೂ ಆಗುತ್ತದೆ.

ಅದರ್ಶನಾದಾಪತಿತಾಃ ಪುನಶ್ಚಾದರ್ಶನಂ ಗತಾಃ |
ಸ್ನೇಹಸ್ತತ್ರ ನ ಕರ್ತವ್ಯೋ ವಿಪ್ರಯೋಗೋ ಹಿ ತೈರ್ಧ್ರುವಃ ||೧೦೭||

ಪ್ರಪಂಚದಲ್ಲಿ ಎಲ್ಲ ಜನರೂ ಅದೃಶ್ಯವಾದ ಸ್ಥಾನದಿಂದಲೇ ಬಂದಿರುತ್ತಾರೆ. ಪುನಃ ಅದೃಶ್ಯವಾದ ಸ್ಥಳಕ್ಕೇ ಹೊರಟುಹೋಗುತ್ತಾರೆ. ಅವರೊಡನೆ ವಿಯೋಗವೆಂಬುದು ನಿಶ್ಚಿತವಾಗಿರುವುದರಿಂದ ಅವರಲ್ಲಿ ಹೆಚ್ಚು ಆಸಕ್ತನಾಗಬಾರದು.

ಕುಟುಮ್ಬಪುತ್ರದಾರಾಶ್ಚ ಶರೀರಂ ಧನಸಂಚಯಃ |
ಐಶ್ವರ್ಯಂ ಸ್ವಸ್ಥತಾ ಚೇತಿ ನ ಮುಹ್ಯೇತ್ತತ್ರ ಪಣ್ಡಿತಃ ||೧೦೮||

ಸುಖಮೇಕಾನ್ತತೋ ನಾಸ್ತಿ ಶಕ್ರಸ್ಯಾಪಿ ತ್ರಿವಿಷ್ಟಪೇ |
ತತ್ರಾಪಿ ಸುಮಹದ್ದುಃಖಂ ಸುಖಮಲ್ಪತರಂ ಭವೇತ್ ||೧೦೯||

ಕುಟುಂಬ, ಮಕ್ಕಳು, ಹೆಂಡತಿ, ಶರೀರ, ಧನಸಂಗ್ರಹ, ಐಶ್ವರ್ಯ ಮತ್ತು ಸ್ವಾಸ್ಥ್ಯ–ಇವುಗಳ ವಿಷಯದಲ್ಲಿ ವಿದ್ವಾಂಸನು ವ್ಯಾಮೋಹಗೊಳ್ಳಬಾರದು. ಸ್ವರ್ಗದಲ್ಲಿರುವ ಇಂದ್ರನಿಗೂ ಯಾವಾಗಲೂ ಸುಖವೇ ಶಾಶ್ವತ

ವಾಗಿರುವುದಿಲ್ಲ. ಅಲ್ಲಿಯೂ ಕೂಡ ದುಃಖವು ಅಧಿಕವಾಗಿಯೇ ಇರುತ್ತದೆ. ಸುಖವು ಅಲ್ಪವಾಗಿರುತ್ತದೆ.

ನ ನಿತ್ಯಂ ಲಭತೇ ದುಃಖಂ ನ ನಿತ್ಯಂ ಲಭತೇ ಸುಖಮ್ ।
ಸುಖಸ್ಯಾನನ್ತರಂ ದುಃಖಂ ದುಃಖಸ್ಯಾನನ್ತರಂ ಸುಖಮ್ ॥೧೦೬೦॥

ಯಾವನೇ ಮನುಷ್ಯನಾದರೂ ಪ್ರತಿನಿತ್ಯವೂ ದುಃಖವನ್ನೇ ಹೊಂದುವುದಿಲ್ಲ. ಅಥವಾ ಸುಖವನ್ನೇ ಹೊಂದುವುದಿಲ್ಲ. ಸುಖದನಂತರ ದುಃಖವೂ ದುಃಖದನಂತರ ಸುಖವೂ ಬರುತ್ತಿರುತ್ತವೆ.

ಕ್ಷಯಾನ್ತಾ ನಿಚಯಾಃ ಸರ್ವೇ ಪತನಾನ್ತಾಃ ಸಮುಚ್ಛ್ರಯಾಃ ।
ಸಂಯೋಗಾ ವಿಪ್ರಯೋಗಾನ್ತಾ ಮರಣಾನ್ತಂ ಚ ಜೀವಿತಮ್ ॥೧೦೬೧॥

ಉಚ್ಛ್ರಯಾನ್ವಿನಿಪಾತಾಂಶ್ಚ ದೃಷ್ಟ್ವಾ ಪ್ರತ್ಯಕ್ಷತಃ ಸ್ವಯಮ್ ।
ಅನಿತ್ಯಮಸುಖಂ ಚೇತಿ ವ್ಯವಸ್ಯೇತ್ಸರ್ವಮೇವ ಚ ॥೧೦೬೨॥

ಸಂಗ್ರಹವೆಲ್ಲವೂ ನಷ್ಟದಲ್ಲಿಯೇ ಪರ್ಯವಸಾನವನ್ನು ಹೊಂದುತ್ತವೆ. ಔನ್ನತ್ಯವು ಪತನದಲ್ಲಿಯೇ ಪರ್ಯವಸಾನಹೊಂದುತ್ತದೆ. ಸೇರುವಿಕೆಯು ಅಗಲುವಿಕೆಯಲ್ಲಿ ಅಂತ್ಯಗೊಳ್ಳುತ್ತದೆ. ಜೀವನವು ಮರಣದಲ್ಲಿಯೇ ಅಂತ್ಯವಾಗುತ್ತದೆ. ಲೋಕದಲ್ಲಿ ಔನ್ನತ್ಯವನ್ನೂ ಪತನವನ್ನೂ ತಾನು ಪ್ರತ್ಯಕ್ಷವಾಗಿಯೇ ನೋಡಿ ಈ ಸಂಸಾರವು ಅನಿತ್ಯವೆಂದೂ ದುಃಖಮಯವೆಂದೂ ನಿಶ್ಚಯಿಸಬೇಕು.

ಅರ್ಥಾನಾಮಾರ್ಜನೇ ದುಃಖಮಾರ್ಜಿತಾನಾಂ ತು ರಕ್ಷಣೇ ।
ನಾಶೇ ದುಃಖಂ ವ್ಯಯೇ ದುಃಖಂ ಧಿಗರ್ಥಂ ದುಃಖಭಾಜನಮ್ ॥

ಹಣದ ಸಂಪಾದನೆಗೂ ಕಷ್ಟಪಡಬೇಕಾಗುತ್ತದೆ. ಸಂಪಾದಿಸಿದುದನ್ನು ರಕ್ಷಿಸುವುದಕ್ಕೂ ಕಷ್ಟಪಡಬೇಕಾಗುತ್ತದೆ. ಯಾವುದಾದರೂ ಕಾರಣದಿಂದ ಧನವು ನಾಶವಾದರೂ ಸಂಕಟವಾಗುತ್ತದೆ. ವ್ಯಯವಾದರೂ ದುಃಖವಾಗುತ್ತದೆ. ಸರ್ವದಾ ದುಃಖಕ್ಕೆ ಆಶ್ರಯಭೂತವಾದ ಅರ್ಥಕ್ಕೆ ಧಿಕ್ಕಾರವಿರಲಿ.

ಅರ್ಥವನ್ತಂ ನರಂ ನಿತ್ಯಂ ಪಞ್ಚಾಭಿಘ್ನನ್ತಿ ಶತ್ರವಃ ।
ರಾಜಾ ಚೋರಶ್ಚ ದಾಯಾದಾ ಭೂತಾನಿ ಕ್ಷಯ ಏವ ಚ ॥೧೦೬೪॥

ಅರ್ಥಮೇವಮನರ್ಥಸ್ಯ ಮೂಲಮಿತ್ಯವಧಾರಯ ।
ನ ಹ್ಯನರ್ಥಾಃ ಪ್ರಬಾಧನ್ತೇ ನರಮರ್ಥವಿವರ್ಜಿತಮ್ ॥೧೦೬೫॥

ಐಶ್ವರ್ಯವಂತನನ್ನು ಪ್ರತಿನಿತ್ಯವೂ ಐವರು ಶತ್ರುಗಳು ಬಾಧೆಪಡಿಸುತ್ತಿರುತ್ತಾರೆ. ರಾಜಾ, ಕಳ್ಳರು, ದಾಯಾದಿಗಳು, ಇತರ ಪ್ರಾಣಿಗಳು ಮತ್ತು ನಾಶ–ಇವೇ ಆ ಐದು ಶತ್ರುಗಳು. ಪ್ರಿಯೇ! ಅರ್ಥವೇ ಅನರ್ಥಕ್ಕೆ ಮೂಲ ಕಾರಣವೆಂದು ತಿಳಿ. ಹಣವಿಲ್ಲದವನನ್ನು ಖಂಡಿತವಾಗಿಯೂ ಅನರ್ಥಗಳು ಬಾಧೆಪಡಿಸುವುದಿಲ್ಲ.

ಅರ್ಥಪ್ರಾಪ್ತಿರ್ಮಹದ್ದುಃಖಮಾಕಿಂಚನ್ಯಂ ಪರಂ ಸುಖಮ್ ।
ಉಪದ್ರವೇಷು ಚಾರ್ಥಾನಾಂ ದುಃಖಂ ಹಿ ನಿಯತಂ ಭವೇತ್ ॥

ಅರ್ಥಪ್ರಾಪ್ತಿಯು ಮಹಾದುಃಖಕರವಾದುದು. ಬಡತನವೇ ಪರಮ ಸುಖವಾದುದು. ಏಕೆಂದರೆ : ಗಳಿಸಿದ ಧನಕ್ಕೇನಾದರೂ ಉಪದ್ರವವುಂಟಾದರೆ ನಿಶ್ಚಯವಾಗಿಯೂ ಬಲು ಹೆಚ್ಚಿನ ದುಃಖವೇ ಉಂಟಾಗುತ್ತದೆ.

ಧನಲೋಭೇನ ತೃಷ್ಣಾಯಾ ನ ತೃಪ್ತಿರುಪಲಭ್ಯತೇ।
ಲಬ್ಧಾಶ್ರಯೋ ವಿವರ್ಧೇತ ಸಮಿದ್ಧ ಇವ ಪಾವಕಃ ॥೧೦೬೭॥

ಧನದ ಲೋಭದಿಂದ ಆಸೆಗೆ ತೃಪ್ತಿಯೆಂಬುದೇ ಇರುವುದಿಲ್ಲ. ತೃಷ್ಣೆಗೆ ಮನುಷ್ಯನಲ್ಲಿ ಆಶ್ರಯವೇನಾದರೂ ಸಿಕ್ಕಿತೆಂದರೆ ಆಹುತಿಗಳಿಂದ ಪ್ರಜ್ವಲಿಸುವ ಅಗ್ನಿಯಂತೆ–ಆ ತೃಷ್ಣೆಯೂ ದಿನ-ದಿನಕ್ಕೆ ವೃದ್ಧಿಹೊಂದುತ್ತಿರುತ್ತದೆ.

ಜಿತ್ವಾಪಿ ಪೃಥಿವೀಂ ಕೃತ್ಸ್ನಾಂ ಚತುಃಸಾಗರಮೇಖಲಾಮ್ ।
ಸಾಗರಾಣಾಂ ಪುನಃ ಪಾರಂ ಜೇತುಮಿಚ್ಛತ್ಯಸಂಶಯಮ್ ॥೧೦೬೮॥

ನಾಲ್ಕು ಸಮುದ್ರಗಳೇ ಮೇಖಲೆಯ (ಒಡ್ಯಾಣದ) ರೂಪದಲ್ಲಿರುವ ಸಮಗ್ರವಾದ ಪೃಥ್ವಿಯನ್ನೇ ಜಯಿಸಿದರೂ ಅವನಿಗೆ ಸಾಗರದ ಆಚೆಯ ದಡದಲ್ಲಿರುವ ದೇಶಗಳನ್ನು ಜಯಿಸುವ ಇಚ್ಛೆಯೂ ಉಂಟಾಗುತ್ತದೆ. ಇದರಲ್ಲಿ ಸಂಶಯವೇ ಇಲ್ಲ.

ಅಲಂ ಪರಿಗ್ರಹೇಣೇಹ ದೋಷವಾನ್ಹಿ ಪರಿಗ್ರಹಃ ।
ಕೋಶಕಾರಃ ಕೃಮಿರ್ದೇವಿ ಬಧ್ಯತೇ ಹಿ ಪರಿಗ್ರಹಾತ್ ॥೧೦೬೯॥

ಮನುಷ್ಯನು ಅರ್ಥಸಂಗ್ರಹವನ್ನು ನಿಲ್ಲಿಸಬೇಕು. ಸಂಚಯವು ಯಾವಾಗಲೂ ದೋಷದಿಂದ ಕೂಡಿರುತ್ತದೆ. ಕೋಶವನ್ನು ರಚಿಸಿಕೊಳ್ಳುವ ರೇಷ್ಮೆಯ ಹುಳುವು ಹೆಚ್ಚು ಹೆಚ್ಚು ಕೋಶಗಳ ಸಂಗ್ರಹಮಾಡುವುದರಿಂದ ತಾನು ಸಂಗ್ರಹಿಸಿದ ಕೋಶದಿಂದಲೇ ಬಂಧಿಸಲ್ಪಡುತ್ತದೆ.

ಏಕೋऽಪಿ ಪೃಥಿವೀಂ ಕೃತ್ಸ್ನಾಮೇಕಚ್ಛತ್ರಾಂ ಪ್ರಶಾಸ್ತಿ ಚ ।
ಏಕಸ್ಮಿನ್ನೇವ ರಾಷ್ಟ್ರೇ ತು ಸ ಚಾಪಿ ನಿವಸೇನ್ನೃಪಃ ॥೧೦೭೦॥

ತಸ್ಮಿನ್ರಾಷ್ಟ್ರೇऽಪಿ ನಗರಮೇಕಮೇವಾಧಿತಿಷ್ಠತಿ ।
ನಗರೇऽಪಿ ಗೃಹಂ ಚೈಕಂ ಭವೇತ್ತಸ್ಯ ನಿವೇಶನಮ್ ॥೧೦೭೧॥

ಒಬ್ಬನೇ ರಾಜನು ಸಮಗ್ರವಾದ ಭೂಮಂಡಲಕ್ಕೂ ಏಕಚ್ಛತ್ರಾಧಿಪತಿಯಾಗಿರುತ್ತಾನೆ. ಆದರೂ ಅವನು ಯಾವುದೋ ಒಂದು ರಾಷ್ಟ್ರದಲ್ಲಿ ಮಾತ್ರ ವಾಸಮಾಡುತ್ತಿರುತ್ತಾನೆ. ಆ ರಾಷ್ಟ್ರದಲ್ಲಿಯೂ ಒಂದು ನಗರದಲ್ಲಿ ವಾಸ ಮಾಡುತ್ತಿರುತ್ತಾನೆ. ಆ ನಗರದಲ್ಲಿಯೂ ಒಂದು ಮನೆಯಲ್ಲಿ ವಾಸಮಾಡುತ್ತಿರುತ್ತಾನೆ. ಹೀಗೆ ರಾಜನು ಚಕ್ರವರ್ತಿಯಾಗಿದ್ದರೂ ಮನೆಯೊಂದರ ಏಕದೇಶದಲ್ಲಿ ಮಾತ್ರವೇ ಇರುತ್ತಾನೆ.

ಏಕ ಏವ ಪ್ರದಿಷ್ಟಃ ಸ್ಯಾದಾವಾಸಸ್ತದ್ಗೃಹೇऽಪಿ ಚ ।
ಆವಾಸೇ ಶಯನಂ ಚೈಕಂ ನಿಶಿ ಯತ್ರ ಪ್ರಲೀಯತೇ ॥೧೦೭೨॥

ಆ ಮನೆಯಲ್ಲಿಯೂ ಒಂದು ಕೊಠಡಿಯು ಮಾತ್ರವೇ ಅವನ ವಾಸಕ್ಕೆ ನಿಯತವಾಗಿರುತ್ತದೆ. ಆ ಕೊಠಡಿಯಲ್ಲಿಯೂ ಅವನು ಮಲಗಲು ಒಂದು ಹಾಸಿಗೆಯು ಮಾತ್ರವಿರುತ್ತದೆ. ರಾತ್ರಿಯಲ್ಲಿ ಅವನು ಆ ಹಾಸಿಗೆಯಲ್ಲಿ ಮಲಗುತ್ತಾನೆ.

ಶಯನಸ್ಯಾರ್ಧಮೇವಾಸ್ಯ ಸ್ತ್ರಿಯಾಶ್ಚಾರ್ಧಂ ವಿಧೀಯತೇ ।
ತದನೇನ ಪ್ರಸಂಗೇನ ಸ್ವಲ್ಪೇನೈವೇಹ ಯುಜ್ಯತೇ ॥೧೦೭೩॥

ಸರ್ವಂ ಮಮೇತಿ ಸಮ್ಮೂಢೋ ಬಲಂ ಪಶ್ಯತಿ ಬಾಲಿಶಃ ।
ಏವಂ ಸರ್ವೋಪಯೋಗೇಷು ಸ್ವಲ್ಪಮಸ್ಯ ಪ್ರಯೋಜನಮ್ ॥೧೦೭೪॥

ತಣ್ಡುಲಪ್ರಸ್ಥಮಾತ್ರೇಣ ಯಾತ್ರಾ ಸ್ಯಾತ್ಸರ್ವದೇಹಿನಾಮ್ ।
ತತೋ ಭೂಯಸ್ತರೋ ಭೋಗೋ ದುಃಖಾಯ ತಪನಾಯ ಚ ॥

ಆ ಹಾಸಿಗೆಯಲ್ಲಿಯೂ ಅವನೊಬ್ಬನೇ ಮಲಗುವಂತೆಯೂ ಇಲ್ಲ. ಹಾಸಿಗೆಯ ಅರ್ಧಭಾಗವು ಮಹಾರಾಣಿಗೆ ಮೀಸಲಾಗಿರುತ್ತದೆ. ಈ ಪ್ರಸಂಗ ದಿಂದ ತಿಳಿದುಬರುವುದೇನೆಂದರೆ : ಅವನು ಏಕಚ್ಛಕ್ರಾಧಿಪತಿಯಾಗಿದ್ದರೂ ಅವನ ಉಪಭೋಗಕ್ಕೆ ಸಿಕ್ಕುವುದು ಅತ್ಯಲ್ಪವಾದ ಅರ್ಧಹಾಸಿಗೆ. ಆದರೂ ಮೂರ್ಖನಾದ ಬಾಲಬುದ್ಧಿಯವನಾದ ಆ ಮನುಷ್ಯನು (ರಾಜನು) ಅಖಂಡ ಭೂಮಂಡಲವೂ ತನ್ನದೆಂದೇ ಭಾವಿಸಿರುತ್ತಾನೆ. ಎಲ್ಲೆಲ್ಲಿಯೂ ತನ್ನ ಬಾಹುಬಲವನ್ನೇ ಕಾಣುತ್ತಾನೆ. ಹೀಗೆ ಉಪಯೋಗಿಸಲು ಯೋಗ್ಯವಾದ ಸಮಸ್ತವಾದ ವಸ್ತುಗಳಲ್ಲಿಯೂ ಅವನ ಉಪಯೋಗಕ್ಕೆ ಲಭಿಸುವುದು ಅತ್ಯಲ್ಪ. ಪ್ರತಿದಿನ ಒಂದು ಪಡಿ ಅಕ್ಕಿಯಿಂದ ಎಲ್ಲ ಮನುಷ್ಯರಿಗೂ ಜೀವನ ನಿರ್ವಹಣೆಯಾಗಿಬಿಡುತ್ತದೆ. ಅದಕ್ಕಿಂತಲೂ ಹೆಚ್ಚಿನ ಭೋಗವನ್ನು ಬಯಸುವವನು ದುಃಖಕ್ಕೂ ಪರಿತಾಪಕ್ಕೂ ಪಾತ್ರನಾಗುತ್ತಾನೆ.

ನಾಸ್ತಿ ತೃಷ್ಣಾಸಮಂ ದುಃಖಂ ನಾಸ್ತಿ ತ್ಯಾಗಸಮಂ ಸುಖಮ್ ।
ಸರ್ವಾನ್ಕಾಮಾನ್ಪರಿತ್ಯಜ್ಯ ಬ್ರಹ್ಮಭೂಯಾಯ ಕಲ್ಪತೇ ॥೧೦೭೬॥

ತೃಷ್ಣೆಗೆ ಸಮಾನವಾದ ದುಃಖವು ಬೇರೊಂದಿಲ್ಲ. ತ್ಯಾಗಕ್ಕೆ ಸಮಾನವಾದ ಸುಖವು ಬೇರೊಂದಿಲ್ಲ. ಸಮಸ್ತಕಾಮನೆಗಳನ್ನೂ ಪರಿತ್ಯಾಗಮಾಡಿದ ಮನುಷ್ಯನು ಬ್ರಹ್ಮಭಾವವನ್ನು ಹೊಂದುತ್ತಾನೆ.

ಯಾ ದುಸ್ತ್ಯಜಾ ದುರ್ಮತಿಭಿರ್ಯಾ ನ ಜೀರ್ಯತಿ ಜೀರ್ಯತಃ ।
ಯೋಽಸೌ ಪ್ರಾಣಾನ್ತಿಕೋ ರೋಗಸ್ತಾಂ ತೃಷ್ಣಾಂ ತ್ಯಜತಃ ಸುಖಮ್ ॥೧೦೭೭॥

ತೃಷ್ಣೆಯು ದುಷಬುದ್ಧಿಯುಳ್ಳ ಮನುಷ್ಯರಿಂದ ತ್ಯಜಿಸಲು ಸಾಧ್ಯವಾಗದು. ಮನುಷ್ಯನು ಮುದುಕನಾದರೂ ಅವನಲ್ಲಿರುವ ತೃಷ್ಣೆಯು ಮುದಿತನವನ್ನು ಹೊಂದುವುದಿಲ್ಲ. ಅದು ಮರಣಪರ್ಯಂತವಾಗಿರುವ (ಪ್ರಾಣನಾಶಕವಾದ) ರೋಗವೇ ಆಗಿದೆ. ಅಂತಹ ತೃಷ್ಣೆಯನ್ನು ತ್ಯಜಿಸುವವನಿಗೆ ಸುಖವಿದೆ.

ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥೧೦೭೮॥

ಕಾಮವು ಭೋಗವಸ್ತುಗಳನ್ನು ಉಪಭೋಗಿಸುವುದರಿಂದ ಉಪಶಮನವನ್ನು ಹೊಂದುವುದಿಲ್ಲ. ಯಜ್ಞೇಶ್ವರನು ಹವಿಸ್ಸಿನಿಂದ ಮತ್ತಷ್ಟು ಪ್ರಜ್ವಲಿಸುವಂತೆ–ಭೋಗಗಳ ಉಪಭೋಗದಿಂದ ತೃಷ್ಣೆಯು ಮತ್ತಷ್ಟು ಹೆಚ್ಚುತ್ತಿರುತ್ತದೆ.

ಅಲಾಭೇನ್ಯೆವ ಕಾಮಾನಾಂ ಶೋಕಂ ತ್ಯಜತಿ ಪಣ್ಡಿತಃ |
ಆಯಾಸವಿಟಪಸ್ತೀವ್ರಃ ಕಾಮಾಗ್ನಿಃ ಕರ್ಷಣಾರಣಿಃ |
ಇನ್ದ್ರಿಯಾರ್ಥೇನ ಸಮ್ಮೋಹ್ಯ ದಹತ್ಯಕುಶಲಂ ಜನಮ್ ||೧೦೭೯||

ಕಾಮನೆಗಳು ಲಭಿಸದೇ ಇರುವುದರಿಂದಲೇ ವಿದ್ವಾಂಸನು ಶೋಕರಹಿತನಾಗುತ್ತಾನೆ. ಮಹಾಪ್ರಯತ್ನವೆಂಬುದೇ ಮಹಾವೃಕ್ಷ. ಆಕರ್ಷಣೆಯೆಂಬುದೇ ಅರಣಿ. ಅದರಿಂದ ಹುಟ್ಟುವುದೇ ತೀವ್ರವಾದ ಕಾಮಾಗ್ನಿ. ಕಾಮರೂಪವಾದ ಅಗ್ನಿಯು ಇಂದ್ರಿಯವಿಷಯಗಳ ಮೂಲಕವಾಗಿ ಮೂರ್ಖಮನುಷ್ಯರನ್ನು ಸಮ್ಮೋಹಗೊಳಿಸಿ ಸುಟ್ಟುಹಾಕುತ್ತದೆ.

ಯತ್ಪೃಥಿವ್ಯಾಂ ವ್ರೀಹಿಯವಂ ಹಿರಣ್ಯಂ ಪಶವಃ ಸ್ತ್ರಿಯಃ |
ನಾಲಮೇಕಸ್ಯ ಪರ್ಯಾಪ್ತಮಿತಿ ಪಶ್ಯನ್ನ ಮುಹ್ಯತಿ ||೧೦೮೦||

ಈ ಭೂಮಂಡಲದಲ್ಲಿ ಎಷ್ಟು ಧಾನ್ಯಗಳು, ಸುವರ್ಣ, ಪಶು ಮತ್ತು ಸ್ತ್ರೀಯರು ಇರುವರೋ–ಅವೆಲ್ಲವೂ ಒಬ್ಬನಿಗೇ ಸಾಕಾಗುವುದಿಲ್ಲ. ಈ ವಿಷಯವನ್ನು ವಿವೇಕದಿಂದ ಕಂಡುಕೊಂಡ ಮನುಷ್ಯನು ಐಶ್ವರ್ಯದ ವಿಷಯದಲ್ಲಿ ವಿಮೋಹಿತನಾಗುವುದಿಲ್ಲ.

ಯಚ್ಚ ಕಾಮಸುಖಂ ಲೋಕೇ ಯಚ್ಚ ದಿವ್ಯಂ ಮಹತ್ಸುಖಮ್ |
ತೃಷ್ಣಾಕ್ಷಯಸುಖಸ್ಯೈತೇ ನಾರ್ಹತಃ ಷೋಡಶೀಂ ಕಲಾಮ್ ||೧೦೮೧||

ಈ ಲೋಕದಲ್ಲಿ ಯಾವ ಕಾಮಸುಖವಿರುವುದೋ, ಪರಲೋಕದಲ್ಲಿ ಯಾವ ದೈವಿಕವಾದ ಮಹಾಸುಖವಿರುವುದೋ–ಆ ಯಾವ ಸುಖಗಳೂ ತೃಷ್ಣಾಪರಿತ್ಯಾಗದಿಂದ ಪ್ರಾಪ್ತವಾಗುವ ಸುಖದ ಹದಿನಾರನೇ ಒಂದಂಶಕ್ಕೂ ಸಾಟಿಯಿಲ್ಲ.

ಇನ್ದ್ರಿಯಾಣೀನ್ದ್ರಿಯಾರ್ಥೇಷು ನೈವ ಧೀರೋ ನಿಯೋಜಯೇತ್ |
ಮನಃಷಷ್ಠಾನಿ ಸಂಯಮ್ಯ ನಿತ್ಯಮಾತ್ಮನಿ ಯೋಜಯೇತ್ |

ಇನ್ದ್ರಿಯಾಣಾಂ ವಿಸರ್ಗೇಣ ದೋಷಮೃಚ್ಛತ್ಯಸಂಶಯಮ್ ।
ಸಂನಿಯಮ್ಯ ತು ತಾನ್ಯೇವ ತತಃ ಸಿದ್ಧಿಮವಾಪ್ನುಯಾತ್ ॥೧೦೮೩॥

ಷಣ್ಣಾಮಾತ್ಮನಿ ಯುಕ್ತಾನಾಮೈಶ್ವರ್ಯಂ ಯೋಽಧಿಗಚ್ಛತಿ ।
ನ ಚ ಪಾಪೈರ್ನ ಚಾನರ್ಥೈಃ ಸಂಯುಜ್ಯೇತ ವಿಚಕ್ಷಣಃ ॥೧೦೮೪॥

ಧೀರನಾದ ಪುರುಷನು ತನ್ನ ಇಂದ್ರಿಯಗಳನ್ನು ವಿಷಯಗಳಲ್ಲಿ ಲೀನ ವಾಗಲು ಬಿಡುವುದಿಲ್ಲ. ಮನಃಸಹಿತವಾದ ಆರು ಇಂದ್ರಿಯಗಳನ್ನೂ ಹತೋಟಿಯಲ್ಲಿಟ್ಟುಕೊಂಡು ನಿತ್ಯವೂ ಆತ್ಮನಲ್ಲಿ ನಿಯೋಜಿಸಬೇಕು. (ಲೀನ ಗೊಳಿಸಬೇಕು.) ಇಂದ್ರಿಯಗಳನ್ನು ಸ್ವೇಚ್ಛೆಯಿಂದಿರಲು ಬಿಟ್ಟುಬಿಡುವುದ ರಿಂದ ಮನುಷ್ಯನು ಖಂಡಿತವಾಗಿಯೂ ಪಾಪವನ್ನೇ ಹೊಂದುತ್ತಾನೆ. ಇದ ರಲ್ಲಿ ಸಂಶಯವೇ ಇಲ್ಲ. ಅವುಗಳನ್ನೇ ಹಿಡಿತದಲ್ಲಿಟ್ಟುಕೊಂಡರೆ ಸಾಧಕನು ಸಿದ್ಧಿಯನ್ನೇ ಹೊಂದುತ್ತಾನೆ. ಪರಮಾತ್ಮನ ಚಿಂತನೆಯಲ್ಲಿ ಆಸಕ್ತವಾಗಿರುವ, ಮನಸ್ಸಿನಿಂದ ಸಹಿತವಾದ ಆರು ಇಂದ್ರಿಯಗಳ ಮೇಲೆ ಯಾವನು ಪ್ರಭುತ್ವ ವನ್ನು ಸ್ಥಾಪಿಸಿರುವನೋ–ಅಂತಹ ವಿದ್ವಾಂಸನು ಪಾಪಗಳಿಂದಾಗಲೀ ಅನರ್ಥಗಳಿಂದಾಗಲೀ ಯುಕ್ತನಾಗುವುದಿಲ್ಲ.

ಅಪ್ರಮತ್ತಃ ಸದಾ ರಕ್ಷೇದಿನ್ದ್ರಿಯಾಣಿ ವಿಚಕ್ಷಣಃ ।
ಅರಕ್ಷಿತೇಷು ತೇಷ್ವಾಶು ನರೋ ನರಕಮೇತಿ ಹಿ ॥೧೦೮೫॥

ವಿದ್ವಾಂಸನಾದವನು ಸದಾ ಜಾಗರೂಕನಾಗಿದ್ದುಕೊಂಡು ಇಂದ್ರಿಯ ಗಳು ವಿಷಯಗಳ ವಶವಾಗದಂತೆ ರಕ್ಷಿಸಬೇಕು. ಹಾಗೇನಾದರೂ ಅವು ಗಳನ್ನು ರಕ್ಷಿಸದೇ ವಿಷಯಗಳು ಸೆಳೆದುಕೊಂಡು ಹೋಗಲು ಬಿಟ್ಟುಬಿಟ್ಟರೆ ಅಂತಹ ಮನುಷ್ಯನು ನಿಶ್ಚಯವಾಗಿಯೂ ಬೇಗನೆ ನರಕಕ್ಕೆ ಹೋಗುತ್ತಾನೆ.

ಹೃದಿ ಕಾಮಮಯಶ್ಚಿತ್ರೋ ಮೋಹಸಂಚಯಸಮ್ಭವಃ ।
ಅಜ್ಞಾನರೂಢಮೂಲಸ್ತು ವಿಧಿತ್ಸಾಪರಿಷೇಚನಃ ॥೧೦೮೬॥

ರೋಷಲೋಭಮಹಾಸ್ಕನ್ಧಃ ಪುರಾ ದುಷ್ಕೃತಸಾರವಾನ್ ।
ಆಯಾಸವಿಟಪಸ್ತೀವ್ರಶೋಕಪುಷ್ಪೋ ಭಯಾಙ್ಕುರಃ ॥೧೦೮೭॥

ನಾನಾಸಂಕಲ್ಪಪತ್ರಾಢ್ಯಃ ಪ್ರಮಾದಾತ್ಪರಿವರ್ಧಿತಃ ।
ಮಹತೀಭಿಃ ಪಿಪಾಸಾಭಿಃ ಸಮನ್ತಾತ್ಪರಿವೇಷ್ಟಿತಃ ॥೧೦೮೮॥

ಸಂರೋಹತ್ಯಕೃತಪ್ರಜ್ಞೇ ಪಾದಪಃ ಕಾಮಸಮ್ಭವಃ ।
ನೈವ ರೋಹತಿ ತತ್ತ್ವಜ್ಞೇ ರೂಢೋ ವಾ ಛಿದ್ಯತೇ ಪುನಃ ॥೧೮೯॥

ಕೃಚ್ಛ್ರೋಪಾಯೇಷ್ವನಿತ್ಯೇಷು ನಿಸ್ಸಾರೇಷು ಫಲೇಷು ಚ ।
ದುಃಖಾದಿಷು ದುರನ್ತೇಷು ಕಾಮಯೋಗೇಷು ಕಾ ರತಿಃ ॥೧೯೦॥

ದೇವಿ! ಮನುಷ್ಯರ ಹೃದಯದಲ್ಲಿ ವಿಚಿತ್ರವಾದ ಕಾಮಮಯವಾದ ವೃಕ್ಷವಿದೆ. ಅದು ಮೋಹಸಂಚಯರೂಪವಾದ ಬೀಜದಿಂದ ಹುಟ್ಟಿದೆ. ಅಜ್ಞಾನವೆಂಬುದೇ ಅದರ ರೂಢಮೂಲವಾದ ಬೇರು. ಸಕಾಮಕರ್ಮವನ್ನು ಮಾಡಬೇಕೆಂಬ ಇಚ್ಛೆಯೇ ಅದರ ಸುತ್ತಲೂ ಹಾಕುವ ನೀರಾಗಿದೆ. ದೋಷ ಮತ್ತು ಲೋಭಗಳೆಂಬುದೇ ಆ ಮಹಾಕಾಮವೃಕ್ಷದ ದೊಡ್ಡರೆಂಬೆಗಳಾಗಿವೆ. ಹಿಂದೆ ಮಾಡಿದ ಪಾಪವೇ ಆ ವೃಕ್ಷದ ಸಾರವತ್ತಾದ ಭಾಗವಾಗಿದೆ. ಆಯಾಸ-ಪ್ರಯಾಸಗಳೇ ಅದರ ಶಾಖೆಗಳಾಗಿವೆ. ತೀವ್ರವಾದ ಶೋಕವೇ ಅದರ ಪುಷ್ಪವಾಗಿದೆ. ಭಯವೆಂಬುದೇ ಕಾಮವೃಕ್ಷದ ಚಿಗುರಾಗಿದೆ. ನಾನಾ ವಿಧವಾದ ಸಂಕಲ್ಪಗಳೇ ಅದರ ಎಲೆಗಳಾಗಿವೆ. ಪ್ರಮಾದವೆಂಬ ನೀರಿನಿಂದ ಅದು ದಿನದಿನಕ್ಕೂ ವೃದ್ಧಿಹೊಂದುತ್ತಲೇ ಇದೆ. ಮಹತ್ತರವಾದ 'ತೃಷ್ಣೆ' ಎಂಬ ಬಳ್ಳಿಗಳಿಂದ ಆ ವೃಕ್ಷವು ಸುತ್ತುವರಿಯಲ್ಪಟ್ಟಿದೆ. ಕಾಮಸಂಭವವಾದ ಆ ಕಾಮವೃಕ್ಷವು ಮೂಢನಲ್ಲಿ ಹುಲುಸಾಗಿ ಬೆಳೆಯುತ್ತದೆ. ತತ್ತ್ವಜ್ಞನ ಹೃದಯವೆಂಬ ಕ್ಷೇತ್ರದಲ್ಲಿ ಅದು ಬೆಳೆಯುವುದೇ ಇಲ್ಲ. ಒಂದು ವೇಳೆ ಬೆಳೆದರೂ ಒಡನೆಯೇ ಅದು ಕತ್ತರಿಸಲ್ಪಡುತ್ತದೆ. ಆದರೆ ಬಹಳ ಕಷ್ಟಕರವಾದ ಉಪಾಯದಿಂದ ಮಾತ್ರವೇ ಕತ್ತರಿಸಲು ಸಾಧ್ಯವಾದ, ಅನಿತ್ಯವಾದ, ಸಾರವಿಲ್ಲದ ಫಲಗಳನ್ನು ಕೊಡುವ, ದುಃಖವೇ ಆದಿಯೂ ಮತ್ತು ಅಂತ್ಯವೂ ಆಗಿರುವ (ಮೊದಲಿನಿಂದ ಕಡೆಯವರೆಗೂ ದುಃಖಮಯವೇ ಆಗಿರುವ) ಕಾಮವೃಕ್ಷದ ಸಂಬಂಧದಿಂದ ಯಾವ ಸಂತೋಷವು ತಾನೇ ಉಂಟಾಗುತ್ತದೆ?

ಇನ್ದ್ರಿಯೇಷು ಚ ಜೀರ್ಯತ್ಸು ಛಿದ್ಯಮಾನೇ ತಥಾಯುಷಿ ।
ಪುರಸ್ತಾಚ್ಚ ಸ್ಥಿತೇ ಮೃತ್ಯೌ ಕಿಂ ಸುಖಂ ಪಶ್ಯತಃ ಶುಭೇ ॥೧೯೧॥

ಶುಭಾಂಗಿಯೇ! ಇಂದ್ರಿಯಗಳು ಜೀರ್ಣವಾಗುತ್ತಿರಲಾಗಿ, ಆಯು

ಷ್ಯವು ನಷ್ಟವಾಗಿ ಹೋಗುತ್ತಿರಲಾಗಿ, ಮೃತ್ಯುವು ಎದುರಿನಲ್ಲಿ ನಿಂತಿರಲಾಗಿ–ಅದನ್ನು ಪ್ರತ್ಯಕ್ಷವಾಗಿಯೇ ಕಾಣುತ್ತಿರುವವನಿಗೆ ಯಾವ ಸುಖವಿದೆ?

ವ್ಯಾಧಿಭಿಃ ಪೀಡ್ಯಮಾನಸ್ಯ ನಿತ್ಯಂ ಶಾರೀರಮಾನಸೈಃ ।
ನರಸ್ಯಾಕೃತಕೃತ್ಯಸ್ಯ ಕಿಂ ಸುಖಂ ಮರಣೇ ಸತಿ ॥೧೯೨॥

ಶಾರೀರವಾದ ವ್ಯಾಧಿಯಿಂದಲೂ ಮಾನಸಿಕವಾದ ಆದಿಯಿಂದಲೂ ಪೀಡಿತನಾಗಿರುವ, ತನ್ನ ಕರ್ತವ್ಯವನ್ನು ಪೂರ್ತಿಗೊಳಿಸದಿರುವ ಮನುಷ್ಯನಿಗೆ ಮರಣವುಂಟಾಗಿಬಿಟ್ಟರೆ ಅವನಿಗೆ ಅದರಿಂದ ಯಾವ ಸುಖವು ಲಭಿಸುತ್ತದೆ?

ಸಂಚಿನ್ತಯಾನಮೇವಾರ್ಥಂ ಕಾಮಾನಾಮವಿತೃಪ್ತಕಮ್ ।
ವ್ಯಾಘ್ರಃ ಪಶುಮಿವಾರಣ್ಯೇ ಮೃತ್ಯುರಾದಾಯ ಗಚ್ಛತಿ ॥೧೯೩॥

ಜನ್ಮಮೃತ್ಯುಜರಾದುಃಖೈಃ ಸತತಂ ಸಮಭಿದ್ರುತಃ ।
ಸಂಸಾರೇ ಪಚ್ಯಮಾನಸ್ತು ಪಾಪಾನ್ನೋದ್ವಿಜತೇ ಜನಃ ॥೧೯೪॥

ಮನುಷ್ಯನು ಅರ್ಥಪ್ರಾಪ್ತಿಯ ಉಪಾಯವನ್ನೇ ಕುರಿತು ಯೋಚಿಸುತ್ತಾ, ತನಗೆ ಲಭಿಸಿದ ಕಾಮನೆಗಳಿಂದ ತೃಪ್ತನಾಗದೇ ಅನ್ಯಾನ್ಯಕಾಮನೆಗಳನ್ನೇ ಹುಡುಕಿಕೊಂಡು ಹೋಗುತ್ತಿದ್ದರೆ–ಅರಣ್ಯದಲ್ಲಿರುವ ಪಶುವನ್ನು ಹಠಾತ್ತಾಗಿ ವ್ಯಾಘ್ರವು ಹಿಡಿದು ಒಯ್ದುಬಿಡುವಂತೆ–ಮೃತ್ಯುವು ಒಯ್ದುಬಿಡುತ್ತದೆ. ಮನುಷ್ಯನು ಹುಟ್ಟು-ಸಾವು, ಮುಪ್ಪು-ದುಃಖಗಳಿಂದ ಆಕ್ರಮಿಸಲ್ಪಟ್ಟವನಾಗಿ ಸಂಸಾರವೆಂಬ ಅಗ್ನಿಯಲ್ಲಿ ಬೇಯಿಸಲ್ಪಡುತ್ತಿದ್ದರೂ ಪಾಪಕರ್ಮಗಳನ್ನು ಮಾಡುವಾಗ ಉದ್ವೇಗಗೊಳ್ಳುವುದಿಲ್ಲ."

ಉಮೆ :

"ಪರಮೇಶ್ವರನೇ! ಯಾವ ಉಪಾಯದಿಂದ ಮನುಷ್ಯರಿಗೆ ಮುಪ್ಪು ಮತ್ತು ಸಾವುಗಳ ನಿವೃತ್ತಿಯಾಗುತ್ತದೆ? ಇದಕ್ಕೇನಾದರೂ ಉಪಾಯವಿರುವುದಾದರೆ ಹೇಳುವ ಕೃಪೆಮಾಡು. ಮಹಾತಪಸ್ಸು, ಕರ್ಮ, ಶಾಸ್ತ್ರಜ್ಞಾನ ಅಥವಾ ಯಾವುದಾದರೂ ರಾಸಾಯನಿಕಪ್ರಯೋಗ–ಇವುಗಳಲ್ಲಿ ಯಾವುದರಿಂದಾದರೂ ಮುಪ್ಪು-ಸಾವುಗಳನ್ನು ಅತಿಕ್ರಮಿಸಲು ಸಾಧ್ಯವಾಗುವುದೇ?"

ಮಹೇಶ್ವರ :

"ಮಹಾಭಾಗಳೇ! ಎಲ್ಲ ಲೋಕಗಳಲ್ಲಿಯೂ ಮೋಕ್ಷವೊಂದರ

ಹೊರತಾಗಿ ಬೇರೆ ಯಾವುದೇ ಉಪಾಯದಿಂದಲೂ ಮುಪ್ಪು-ಸಾವುಗಳ ನಿವೃತ್ತಿಯಾಗುವುದಿಲ್ಲ.

ನ ಧನೇನ ನ ರಾಜ್ಯೇನ ನಾಗ್ರ್ಯೇಣ ತಪಸಾಪಿ ವಾ ।
ಮರಣಂ ನಾತಿತರತೇ ವಿನಾ ಮುಕ್ತ್ಯಾ ಶರೀರಿಣಃ ॥೧೯೮॥

ಮೋಕ್ಷವೊಂದರ ಹೊರತಾಗಿ ಮನುಷ್ಯರು ಧನದಿಂದಾಗಲೀ, ರಾಜ್ಯದಿಂದಾಗಲೀ, ಮಹತ್ತರವಾದ ತಪಸ್ಸಿನಿಂದಾಗಲೀ–ಮೃತ್ಯುವನ್ನು ಅತಿಕ್ರಮಿಸಲಾರರು.

ಅಶ್ವಮೇಧಸಹಸ್ರಾಣಿ ವಾಜಪೇಯಶತಾನಿ ಚ ।
ನ ತರನ್ತಿ ಜರಾಮೃತ್ಯೂ ನಿರ್ವಾಣಾಧಿಗಮಾದ್ವಿನಾ ॥೧೯೯॥

ಸಾವಿರ ಅಶ್ವಮೇಧಗಳೂ, ನೂರು ವಾಜಪೇಯಗಳೂ ಮೋಕ್ಷೋಪಲಬ್ಧಿಯಿಲ್ಲದಿದ್ದರೆ ಜರಾ-ಮೃತ್ಯುಗಳನ್ನು ಅತಿಕ್ರಮಿಸಲಾರವು.

ಐಶ್ವರ್ಯಂ ಧನಧಾನ್ಯಂ ಚ ವಿದ್ಯಾಲಾಭಸ್ತಪಸ್ತಥಾ ।
ರಸಾಯನಪ್ರಯೋಗೋ ವಾ ನ ತರನ್ತಿ ಜರಾನ್ತಕೌ ॥೧೧೦೦॥

ಐಶ್ವರ್ಯ, ಧನ-ಧಾನ್ಯಗಳೂ, ವಿದ್ಯೆ, ತಪಸ್ಸು, ರಸಾಯನ ಪ್ರಯೋಗ–ಇವು ಯಾವುವೂ ಮುಪ್ಪು-ಸಾವುಗಳನ್ನು ಅತಿಕ್ರಮಿಸಲು ಸಾಧನಗಳಾಗಲಾರವು.

ದೇವದಾನವಗನ್ಧರ್ವಕಿನ್ನರೋರಗರಾಕ್ಷಸಾನ್ ।
ಸ್ವವಶೇ ಕುರುತೇ ಕಾಲೋ ನ ಕಾಲಸ್ಯಾಸ್ತ್ಯಗೋಚರಃ ॥೧೧೦೧॥

ನ ಹ್ಯಹಾನಿ ನಿವರ್ತನ್ತೇ ನ ಮಾಸಾ ನ ಪುನಃ ಕ್ಷಪಾಃ ।
ಸೋಽಯಂ ಪ್ರಪದ್ಯತೇಽಧ್ವಾನಮಜಸ್ರಂ ಧ್ರುವಮವ್ಯಯಮ್ ॥೧೧೦೨॥

ಸ್ರವನ್ತಿ ನ ನಿವರ್ತನ್ತೇ ಸ್ರೋತಾಂಸಿ ಸರಿತಾಮಿವ ।
ಆಯುರಾದಾಯ ಮರ್ತ್ಯಾನಾಮಹೋರಾತ್ರೇಷು ಸಂತತಮ್ ॥೧೧೦೩॥

ಕಾಲಕ್ಕೆ ದೇವತೆಗಳೇನು? ದಾನವರೇನು? ಗಂಧರ್ವರೇನು? ಕಿನ್ನರರೇನು? ನಾಗರೇನು? ರಾಕ್ಷಸರೇನು? ಎಲ್ಲರನ್ನೂ ಅದು ಅಧೀನಪಡಿಸಿಕೊಳ್ಳುತ್ತದೆ. ಕಾಲಕ್ಕೆ ಅಗೋಚರವಾದುದು (ಕಾಣಿಸದೇ ಇರುವುದು) ಯಾವುದೂ ಇರುವುದಿಲ್ಲ. ಕಳೆದುಹೋದ ದಿವಸಗಳಾಗಲೀ, ರಾತ್ರಿಗಳಾಗಲೀ, ಮಾಸಗಳಾಗಲೀ ಪುನಃ ಹಿಂದಿರುಗಿ ಬರುವುದಿಲ್ಲ. ಈ

ಜೀವಾತ್ಮನು ಯಾವಾಗಲೂ ಶಾಶ್ವತವೂ ಅವಿನಾಶಿಯೂ ಆದ ಮಾರ್ಗವನ್ನು ಆಶ್ರಯಿಸಿರುತ್ತಾನೆ. ನದಿಗಳ ಪ್ರವಾಹಗಳಂತೆ ಕಳೆದುಹೋದ ಆಯುಷ್ಯವು ಪುನಃ ಹಿಂದಿರುಗಿ ಬರುವುದಿಲ್ಲ. ಹಗಲು-ರಾತ್ರಿಗಳಲ್ಲಿ ಸತತವಾಗಿ ಮೃತ್ಯುವು ಅಥವಾ ಕಾಲವು ಮನುಷ್ಯರ ಆಯುಷ್ಯವನ್ನು ಅಪಹರಿಸಿಕೊಂಡು ಹೋಗುತ್ತಿರುತ್ತದೆ.

ಜೀವಿತಂ ಸರ್ವಭೂತಾನಾಮಕ್ಷಯಃ ಕ್ಷಪಯನ್ನಸೌ ।
ಆದಿತ್ಯೋ ಹ್ಯಸ್ತಮಭ್ಯೇತಿ ಪುನಃ ಪುನರುದೇತಿ ಚ ॥೧೧೦೪॥

ಅಕ್ಷಯನಾದ ಸೂರ್ಯನು ಎಲ್ಲ ಪ್ರಾಣಿಗಳ ಜೀವಿತವನ್ನೂ ಕ್ಷೀಣ ಗೊಳಿಸುತ್ತಾ ಅಸ್ತನಾಗುತ್ತಾನೆ. ಪುನಃ ಉದಯಿಸುತ್ತಾನೆ.

ರಾತ್ರ್ಯಾಂ ರಾತ್ರ್ಯಾಂ ವ್ಯತೀತಾಯಾಮಾಯುರಲ್ಪತರಂ ಭವೇತ್ ।
ಗಾಧೋದಕೇ ಮತ್ಸ್ಯ ಇವ ಕಿಂ ನು ತಸ್ಯ ಕುಮಾರತಾ ॥೧೧೦೫॥

ಒಂದೊಂದು ರಾತ್ರಿಯು ಕಳೆಯುತ್ತಿದ್ದಂತೆಯೇ ಮನುಷ್ಯನ ಆಯು ಷ್ಯವೂ ಕ್ಷೀಣವಾಗುತ್ತಿರುತ್ತದೆ. ಸ್ವಲ್ಪವೇ ನೀರಿನಲ್ಲಿರುವ ಮೀನಿನಂತೆ– ಅತ್ಯಲ್ಪಕಾಲವಿರುವ ಕೌಮಾರ್ಯದಿಂದೇನು ಪ್ರಯೋಜನ?

ಮರಣಂ ಹಿ ಶರೀರಸ್ಯ ನಿಯತಂ ಧ್ರುವಮೇವ ಚ ।
ತಿಷ್ಠನ್ನಪಿ ಕ್ಷಣಂ ಸರ್ವಃ ಕಾಲಸ್ಯೈತಿ ವಶಂ ಪುನಃ ॥೧೧೦೬॥

ಶರೀರಕ್ಕೆ ಮರಣವೆಂಬುದು ನಿಯತವಾದುದು ಮತ್ತು ಶಾಶ್ವತ ವಾದುದು. ಪ್ರಪಂಚದಲ್ಲಿರುವ ಎಲ್ಲ ಪ್ರಾಣಿಗಳೂ ಒಂದು ಕ್ಷಣಮಾತ್ರ ಜೀವಿಸಿದ್ದರೂ ಮತ್ತೆ ಕಾಲಕ್ಕೆ ಅಧೀನವಾಗುತ್ತವೆ.

ನ ಮ್ರಿಯೇರನ್ನ ಜೀರ್ಯೇರನ್ಯದಿ ಸ್ಯುಃ ಸರ್ವದೇಹಿನಃ ।
ನ ಚಾನಿಷ್ಟಂ ಪ್ರವರ್ತೇತ ಶೋಕೋ ವಾ ಪ್ರಾಣಿನಾಂ ಕ್ವಚಿತ್ ॥

ಎಲ್ಲ ಪ್ರಾಣಿಗಳೂ ಮುಪ್ಪಾಗದೆಯೇ ಇದ್ದಿದ್ದರೆ ಮತ್ತು ಮರಣ ಹೊಂದದೆಯೇ ಇದ್ದಿದ್ದರೆ–ಯಾವ ಪ್ರಾಣಿಗಳಿಗೇ ಆಗಲೀ ಯಾವ ವಿಧವಾದ ಅನಿಷ್ಟವೂ ಉಂಟಾಗುತ್ತಿರಲಿಲ್ಲ ; ದುಃಖವೂ ಉಂಟಾಗುತ್ತಿರಲಿಲ್ಲ.

ಅಪ್ರಮತ್ತಃ ಪ್ರಮತ್ತೇಷು ಕಾಲೋ ಭೂತೇಷು ತಿಷ್ಠತಿ ।
ಅಪ್ರಮತ್ತಸ್ಯ ಕಾಲಸ್ಯ ಕ್ಷಯಂ ಪ್ರಾಪ್ತೋ ನ ಮುಚ್ಯತೇ ॥೧೧೦೮॥

ಶ್ವಃ ಕಾರ್ಯಮದ್ಯ ಕುರ್ವೀತ ಪೂರ್ವಾಹ್ಣೇ ವಾಪರಾಹ್ಣಿಕಮ್ ।
ಕೋऽಪಿ ತದ್ವೇದ ಯತ್ರಾಸೌ ಮೃತ್ಯುನಾ ನಾಭಿವೀಕ್ಷಿತಃ ॥೧೧೯॥

ಸಕಲಪ್ರಾಣಿಗಳೂ ಅಜಾಗರೂಕತೆಯಿಂದಿದ್ದರೂ ಕಾಲವು ಮಾತ್ರ ಸದಾ ಜಾಗರೂಕವಾಗಿಯೇ ಇರುತ್ತದೆ. ಹಾಗೆ ಸದಾ ಸಾವಧಾನವಾಗಿರುವ ಕಾಲದ ಆಶ್ರಯವನ್ನು ಹೊಂದಿರುವ ಯಾವುದೇ ಪ್ರಾಣಿಯೂ ಬಿಡುಗಡೆಯನ್ನು ಹೊಂದುವ ಸಾಧ್ಯತೆಯೇ ಇಲ್ಲ. ಆದುದರಿಂದ ನಾಳೆ ಮಾಡಬೇಕಾದ ಕಾರ್ಯವನ್ನು ಇಂದೇ ಮಾಡಬೇಕು. ಅಪರಾಹ್ಣದಲ್ಲಿ ಮಾಡಬೇಕಾದ ಕಾರ್ಯವನ್ನು ಪೂರ್ವಾಹ್ಣದಲ್ಲಿಯೇ ಮಾಡಬೇಕು. ಏಕೆಂದರೆ : ಮೃತ್ಯುವಿನ ದೃಷ್ಟಿಯು ಯಾರ ಮೇಲೆ ಯಾವಾಗ ಬೀಳುವುದಿಲ್ಲವೆಂಬುದು ಯಾರಿಗೆ ತಿಳಿದಿರುತ್ತದೆ?

ವರ್ಷಾಸ್ವಿದಂ ಕರಿಷ್ಯಾಮಿ ಇದಂ ಗ್ರೀಷ್ಮವಸನ್ತಯೋಃ ।
ಇತಿ ಬಾಲಶ್ಚಿನ್ತಯತಿ ಅನ್ತರಾಯಂ ನ ಬುಧ್ಯತೇ ॥೧೧೦॥
ಇದಂ ಮೇ ಸ್ಯಾದಿದಂ ಮೇ ಸ್ಯಾದಿತ್ಯೇವಂ ಮನಸಾ ನರಾಃ ।
ಅನವಾಪ್ತೇಷು ಕಾಮೇಷು ಹ್ರಿಯನ್ತೇ ಮರಣಂ ಪ್ರತಿ ॥೧೧೧॥
ಕಾಲಪಾಶೇನ ಬದ್ಧಾನಾಮಹನ್ಯಹನಿ ಜೀರ್ಯತಾಮ್ ।
ಕಾ ಶ್ರದ್ಧಾ ಪ್ರಾಣಿನಾಂ ಮಾರ್ಗೇ ವಿಷಮೇ ಭ್ರಮತಾಂ ಸದಾ ॥೧೧೨॥
ಯುವೈವ ಧರ್ಮಶೀಲಃ ಸ್ಯಾದನಿಮಿತ್ತಂ ಹಿ ಜೀವಿತಮ್ ।
ಫಲಾನಾಮಿವ ಪಕ್ವಾನಾಂ ಸದಾ ಹಿ ಪತನಾದ್ಭಯಮ್ ॥೧೧೩॥

ಅವಿವೇಕಿಯಾದ ಮನುಷ್ಯನು–'ಈ ಕಾರ್ಯವನ್ನು ವರ್ಷಾಕಾಲದಲ್ಲಿ ಮಾಡುತ್ತೇನೆ. ಗ್ರೀಷ್ಮ-ವಸಂತಗಳಲ್ಲಿ ಈ ಕಾರ್ಯವನ್ನು ಆರಂಭಿಸುತ್ತೇನೆ'–ಎಂಬುದಾಗಿ ಯೋಚಿಸುತ್ತಲೇ ಇರುತ್ತಾನೆ. ಆದರೆ ಮೃತ್ಯುವಿನ ಮೂಲಕ ಆ ಮಧ್ಯದಲ್ಲಿ ಬರುವ ವಿಘ್ನವನ್ನು ಅವನು ತಿಳಿದವನಾಗಿರುವುದಿಲ್ಲ. 'ಇದೂ ನನಗೆ ಬೇಕು ; ಅದೂ ನನಗೆ ಬೇಕು'–ಎಂದು ಹೇಳಿಕೊಂಡು ಮನುಷ್ಯರು ಎಲ್ಲದಕ್ಕೂ ಆಸೆಪಡುತ್ತಲೇ ಇರುತ್ತಾರೆ. ಆದರೆ ತಾವು ಅಪೇಕ್ಷಿಸಿದ ಕಾಮನೆಗಳನ್ನು ಹೊಂದದೆಯೇ ಅವರು ಮರಣದ ಕಡೆಗೆ ಸೆಳೆಯಲ್ಪಡುತ್ತಾರೆ. ಕಾಲನ ಪಾಶದಿಂದ ಬಂಧಿಸಲ್ಪಟ್ಟು, ದಿನ-ದಿನಕ್ಕೂ ಆಯುಸ್ಸು ಕ್ಷಯಿಸುತ್ತಿ

ರುವ ಇಂತಹ ಅವ್ಯವಸ್ಥಿತವಾದ ಮಾರ್ಗವನ್ನು ಹಿಡಿದುಹೋಗುತ್ತಿರುವ ಪ್ರಾಣಿಗಳಿಗೆ ಈ ಜೀವನವಿಧಾನದಲ್ಲಿ ಹೇಗೆತಾನೇ ವಿಶ್ವಾಸವು ಹುಟ್ಟುತ್ತದೆ? ಆದುದರಿಂದ ಯುವಕನಾಗಿರುವಾಗಲೇ ಧರ್ಮಶೀಲನಾಗಿರಬೇಕು. ಏಕೆಂದರೆ: ಜೀವನವು ಆಧಾರರಹಿತವಾಗಿದೆ. ಮಾಗಿದ ಹಣ್ಣುಗಳಂತೆ ಜೀವಿಗಳಿಗೆ ಸದಾ ಪತನದ (ಮರಣದ) ಭಯವಿದ್ದೇ ಇರುತ್ತದೆ.

ಮರ್ತ್ಯಸ್ಯ ಕಿಮು ತೈರ್ದಾರೈಃ ಪುತ್ರೈರ್ಭೋಗೈಃ ಪ್ರಿಯೈರಪಿ ।
ಏಕಾಹ್ನಾ ಸರ್ವಮುತ್ಸೃಜ್ಯ ಮೃತ್ಯೋಽಸ್ತು ವಶಮನ್ವಿಯಾತ್ ॥೧೧೧೪॥

ಮರಣಧರ್ಮವಿರುವ ಮನುಷ್ಯನಿಗೆ ಹೆಂಡತಿ, ಮಕ್ಕಳು, ಸುಖೋಪ ಭೋಗಗಳು, ಪ್ರಿಯರಾದವರು–ಇವರಿಂದ ಯಾವ ಪ್ರಯೋಜನವಿದೆ? ಒಂದು ದಿನ ಮನುಷ್ಯನು ಎಲ್ಲವನ್ನೂ ಬಿಟ್ಟು ಮೃತ್ಯುವಿನ ವಶನಾಗಿಬಿಡು ತ್ತಾನೆ.

ಜಾಯಮಾನಾಂಶ್ಚ ಸಮ್ಪ್ರೇಕ್ಷ್ಯ ಮ್ರಿಯಮಾಣಾಂಸ್ತಥೈವ ಚ ।
ನ ಸಂವೇಗೋಽಸ್ತಿ ಚೇತ್ಪುಂಸಃ ಕಾಷ್ಠಲೋಷ್ಟಸಮೋ ಹಿ ಸಃ ॥೧೧೧೫॥

ಹುಟ್ಟುತ್ತಿರುವವರನ್ನೂ ಸಾಯುತ್ತಿರುವವರನ್ನೂ ಸದಾ ನೋಡಿಯೂ ವೈರಾಗ್ಯದ ತೀವ್ರತೆಯು ಉಂಟಾಗದಿದ್ದರೆ ಅವನು ಖಂಡಿತವಾಗಿಯೂ ಮನುಷ್ಯನೇ ಅಲ್ಲ. ಕಲ್ಲೋ, ಮಣ್ಣುಹೆಂಟೆಯೋ ಆಗಿದ್ದಿರಬೇಕು.

ವಿನಾಶಿನೋ ಹ್ಯಧ್ರುವಜೀವಿತಸ್ಯ
ಕಿಂ ಬನ್ಧುಭಿರ್ಮಿತ್ರಪರಿಗ್ರಹೈಶ್ಚ ।
ವಿಹಾಯ ಯದ್ಗಚ್ಛತಿ ಸರ್ವಮೇವಂ
ಕ್ಷಣೇನ ಗತ್ವಾ ನ ನಿವರ್ತತೇ ಚ ॥೧೧೧೬॥

ಮನುಷ್ಯನು ಯಾವಾಗಲೂ ವಿನಾಶಹೊಂದತಕ್ಕವನು. ಅವನ ಜೀವನವು ಯಾವಾಗಲೂ ಅನಿಶ್ಚಿತವಾದುದು. ಅಂತಹವನಿಗೆ ಬಂಧುಗಳ ಮತ್ತು ಮಿತ್ರರ ಸಂಗ್ರಹದಿಂದ ಪ್ರಯೋಜನವೇನು? ಕ್ಷಣಮಾತ್ರದಲ್ಲವನು ಎಲ್ಲವನ್ನೂ ಬಿಟ್ಟು ಹೊರಟೇಹೋಗುತ್ತಾನೆ. ಹಾಗೆ ಹೋದವನು ಪುನಃ ಬರುವುದೂ ಇಲ್ಲ.

ಏವಂ ಚಿನ್ತಯತೋ ನಿತ್ಯಂ ಸರ್ವಾರ್ಥಾನಾಮನಿತ್ಯತಾಮ್ ।
ಉದ್ವೇಗೋ ಜಾಯತೇ ಶೀಘ್ರಂ ನಿರ್ವಾಣಸ್ಯ ಪರಸ್ಪರಮ್ ॥೧೧೧೭॥

ತೇನೋದ್ವೇಗೇನ ಚಾಪ್ಯಸ್ಯ ವಿಮರ್ಶೋ ಜಾಯತೇ ಪುನಃ ।
ವಿಮರ್ಶೋ ನಾಮ ವೈರಾಗ್ಯಂ ಸರ್ವದ್ರವ್ಯೇಷು ಜಾಯತೇ ॥೧೧೧೮॥

ವೈರಾಗ್ಯೇಣ ಪರಾಂ ಶಾನ್ತಿಂ ಲಭನ್ತೇ ಮಾನವಾಃ ಶುಭೇ ।
ಮೋಕ್ಷಸ್ಯೋಪನಿಷದ್ದಿವ್ಯಂ ವೈರಾಗ್ಯಮಿತಿ ನಿಶ್ಚಿತಮ್ ॥೧೧೧೯॥

ಏತತ್ತೇ ಕಥಿತಂ ದೇವಿ ವೈರಾಗ್ಯೋತ್ಪಾದನಂ ವಚಃ ।
ಏವಂ ಸಂಚಿನ್ತ್ಯ ಸಂಚಿನ್ತ್ಯ ಮುಚ್ಯನ್ತೇ ಹಿ ಮುಮುಕ್ಷವಃ ॥೧೧೨೦॥

ಹೀಗೆ ಮನುಷ್ಯನು ಎಲ್ಲ ಪದಾರ್ಥಗಳಲ್ಲಿಯೂ ಇರುವ ಅನಿತ್ಯತೆಯನ್ನು ಚಿಂತನೆಮಾಡುತ್ತಿದ್ದರೆ ತಾನಿರುವ ಪರಿಸ್ಥಿತಿಯನ್ನು ನೋಡಿ ಭಯವುಂಟಾಗುತ್ತದೆ. ಆ ಭಯದಿಂದ ಪುನಃ ಯಾವುದು ಅನಿತ್ಯ ಮತ್ತು ಯಾವುದು ನಿತ್ಯ ಎಂಬ ಬಗೆಗೆ ಮನಸ್ಸಿನಲ್ಲಿಯೇ ವಿಮರ್ಶೆಯುಂಟಾಗುತ್ತದೆ. ಆ ವಿಮರ್ಶೆಯಿಂದ ಉಂಟಾಗುವ ಪರಿಣಾಮವೇ ಎಲ್ಲ ಪದಾರ್ಥಗಳ ವಿಷಯದಲ್ಲಿಯೂ ವೈರಾಗ್ಯ ಎನಿಸುತ್ತದೆ. ಶುಭಾಂಗಿಯೇ! ವೈರಾಗ್ಯದಿಂದಲೇ ಮನುಷ್ಯರು ಪರಮಶಾಂತಿಯನ್ನು ಹೊಂದುತ್ತಾರೆ. ವೈರಾಗ್ಯವು ಮೋಕ್ಷಕ್ಕೆ ಬಹಳ ಹತ್ತಿರವಾದ ದಿವ್ಯಸಾಧನವಾಗಿದೆ. ದೇವಿ! ನಿನಗೆ ನಾನು ವೈರಾಗ್ಯವು ಹುಟ್ಟುವ ಮಾತುಗಳನ್ನು ಹೇಳಿರುತ್ತೇನೆ. ಮೋಕ್ಷವನ್ನು ಬಯಸುವವರು ವೈರಾಗ್ಯೋತ್ಪಾದಕಗಳಾದ ಈ ನನ್ನ ಮಾತುಗಳನ್ನೇ ಪುನಃ ಚಿಂತಿಸುತ್ತಾ ಭವಬಂಧನದಿಂದ ಬಿಡುಗಡೆಹೊಂದುತ್ತಾರೆ."

* * *

ಸಾಂಖ್ಯಜ್ಞಾನದ ಪ್ರತಿಪಾದನೆ : ಇಪ್ಪತ್ತುನಾಲ್ಕು ತತ್ತ್ವಗಳ ನಿರೂಪಣೆ

ಮಹೇಶ್ವರನು ಮುಂದುವರಿದು ಹೇಳುತ್ತಾನೆ :

"ಶುಭ್ರವಾದ ಮುಗುಳ್ನಗೆಯುಳ್ಳವಳೇ! ಪಾರ್ವತಿ! ಇನ್ನು ಮುಂದೆ ನಿನಗೆ ಸಾಂಖ್ಯಶಾಸ್ತ್ರವನ್ನು ಹೇಳುತ್ತೇನೆ. ಈ ಶಾಸ್ತ್ರವನ್ನು ತಿಳಿಯುವುದರಿಂದ ಮನುಷ್ಯನು ಪುನಃ ಸಂಸಾರದಲ್ಲಿ ತೊಡಗುವುದಿಲ್ಲ. ಸಂನ್ಯಾಸಕುಶಲರಾದ (ಸರ್ವಸಂಗಪರಿತ್ಯಾಗಿಗಳಾದ) ಸಾಂಖ್ಯರು ಜ್ಞಾನದಿಂದಲೇ ಮುಕ್ತಿಯನ್ನು

ಹೊಂದಿದ್ದಾರೆ. (ಮುಕ್ತರಾಗಬಹುದೆನ್ನುವ ಸಿದ್ಧಾಂತವುಳ್ಳವರಾಗಿದ್ದಾರೆ.) ಆದುದರಿಂದಲೇ ಸಾಂಖ್ಯರು ಘೋರವಾದ ಶಾರೀರಕತಪಸ್ಸು ವ್ಯರ್ಥವೆಂದೇ ಹೇಳುತ್ತಾರೆ.

ಪಞ್ಚವಿಂಶತಿಕಂ ಜ್ಞಾನಂ ತೇಷಾಂ ಜ್ಞಾನಮಿತಿ ಸ್ಮೃತಮ್ ।
ಮೂಲಪ್ರಕೃತಿರವ್ಯಕ್ತಮವ್ಯಕ್ತಾಜ್ಜಾಯತೇ ಮಹಾನ್ ॥೧೧೨೩॥

ಮಹತೋಽಭೂದಹಙ್ಕಾರಸ್ತಸ್ಮಾತ್ತನ್ಮಾತ್ರಪಞ್ಚಕಮ್ ।
ಇನ್ದ್ರಿಯಾಣಿ ದಶೈಕಂ ಚ ತನ್ಮಾತ್ರೇಭ್ಯೋ ಭವನ್ತ್ಯುತ ॥೧೧೨೪॥

ತೇಭ್ಯೋ ಭೂತಾನಿ ಪಞ್ಚಭ್ಯಃ ಶರೀರಂ ವೈ ಪ್ರವರ್ತತೇ ।
ಇತಿ ಕ್ಷೇತ್ರಸ್ಯ ಸಂಕ್ಷೇಪಃ ಚತುರ್ವಿಂಶತಿರಿಷ್ಯತೇ ।
ಪಞ್ಚವಿಂಶತಿರಿತ್ಯಾಹುಃ ಪುರುಷೇಣೇಹ ಸಂಖ್ಯಯಾ ॥೧೧೨೫॥

ಸಾಂಖ್ಯರ ಜ್ಞಾನವೆಂದರೆ ಇಪ್ಪತ್ತೈದು ತತ್ತ್ವಗಳ ಯಥಾವತ್ತಾದ ಜ್ಞಾನವೇ ಆಗಿದೆ. ಮೂಲಪ್ರಕೃತಿಯನ್ನೇ ಅವ್ಯಕ್ತವೆಂದೂ ಕರೆಯುತ್ತಾರೆ. ಆ ಅವ್ಯಕ್ತದಿಂದ ಮಹತ್ತತ್ತ್ವವು ಹುಟ್ಟುತ್ತದೆ. ಮಹತ್ತತ್ತ್ವದಿಂದ ಅಹಂಕಾರವೂ, ಅಹಂಕಾರದಿಂದ ಪಂಚತನ್ಮಾತ್ರೆಗಳೂ ಹುಟ್ಟುತ್ತವೆ. ಪಂಚತನ್ಮಾತ್ರೆಗಳಿಂದ ಐದು ಜ್ಞಾನೇಂದ್ರಿಯಗಳೂ ಐದು ಕರ್ಮೇಂದ್ರಿಯಗಳೂ ಮತ್ತು ಹನ್ನೊಂದನೆಯದಾದ ಮನಸ್ಸೂ ಹುಟ್ಟುತ್ತವೆ. ಅವುಗಳಿಂದ ಪಂಚಭೂತಗಳು ಪ್ರಕಟವಾಗಿ ಪಂಚಭೂತಗಳಿಂದ ಶರೀರದ ನಿರ್ಮಾಣವಾಗುತ್ತದೆ. ಇದು ಕ್ಷೇತ್ರದ ಸಂಕ್ಷೇಪಸ್ವರೂಪವಾಗಿದೆ. ಕ್ಷೇತ್ರವನ್ನು ಇಪ್ಪತ್ತನಾಲ್ಕು ತತ್ತ್ವಗಳ ಸಮುದಾಯವೆನ್ನುತ್ತಾರೆ. ಕ್ಷೇತ್ರದಲ್ಲಿರುವ (ಶರೀರದಲ್ಲಿರುವ) ಪುರುಷನನ್ನು ಗಣನೆಗೆ ತೆಗೆದುಕೊಂಡು ಒಟ್ಟು ಇಪ್ಪತ್ತೈದು ತತ್ತ್ವಗಳೆಂದು ಕೆಲವರು ಸಾಂಖ್ಯರು ಹೇಳುತ್ತಾರೆ.

ಸತ್ತ್ವಂ ರಜಸ್ತಮಶ್ಚೇತಿ ಗುಣಾಃ ಪ್ರಕೃತಿಸಮ್ಭವಾಃ ।
ತೈಃ ಸೃಜತ್ಯಖಿಲಂ ಲೋಕಂ ಪ್ರಕೃತಿಸ್ತ್ವಾತ್ಮಜೈರ್ಗುಣೈಃ ॥೧೧೨೬॥

ಇಚ್ಛಾ ದ್ವೇಷಃ ಸುಖಂ ದುಃಖಂ ಸಙ್ಘಾತಶ್ಚೇತನಾ ಧೃತಿಃ ।
ವಿಕಾರಾಃ ಪ್ರಕೃತೇಶ್ಚೈತೇ ವೇದಿತವ್ಯಾ ಮನೀಷಿಭಿಃ ॥೧೧೨೭॥

ಸತ್ತ್ವ, ರಜಸ್ಸು ಮತ್ತು ತಮಸ್ಸುಗಳೆಂಬ ಮೂರು ಗುಣಗಳು ಪ್ರಕೃತಿಯಿಂದ ಹುಟ್ಟಿದುವುಗಳಾಗಿವೆ. ಪ್ರಕೃತಿಯು ತನ್ನಿಂದಲೇ ಹುಟ್ಟಿದ ಈ ಮೂರು ಗುಣಗಳಿಂದ ಸಮಸ್ತವಾದ ಲೋಕವನ್ನೂ ಸೃಷ್ಟಿಸುತ್ತದೆ. ಇಚ್ಛೆ, ದ್ವೇಷ, ದುಃಖ, ಸ್ಥೂಲಶರೀರ, ಚೇತನಾ ಮತ್ತು ಧೃತಿ–ಇವನ್ನು ಪ್ರಕೃತಿಯ ವಿಕಾರಗಳೆಂದು ವಿದ್ವಾಂಸರು ಹೇಳುತ್ತಾರೆ.

ದೇವಿ! ಈ ಎಲ್ಲದರ ಲಕ್ಷಣಗಳನ್ನೂ, ಪ್ರತ್ಯೇಕ-ಪ್ರತ್ಯೇಕವಾದ ವಿಕಲ್ಪಗಳನ್ನೂ ಮೊದಲಿನಿಂದಲೂ ವಿಸ್ತಾರವಾಗಿ ಹೇಳುತ್ತೇನೆ. ಅದರ ವ್ಯಾಖ್ಯಾನವನ್ನು ಕೇಳು.

ನಿತ್ಯಮೇಕಮಣು ವ್ಯಾಪಿ ಕ್ರಿಯಾಹೀನಮಹೇತುಕಮ್ ।
ಅಗ್ರಾಹ್ಯಮಿನ್ದ್ರಿಯೈಃ ಸರ್ವೈರೇತದವ್ಯಕ್ತಲಕ್ಷಣಮ್ ॥೧೧೨೯॥
ಅವ್ಯಕ್ತಂ ಪ್ರಕೃತಿರ್ಮೂಲಂ ಪ್ರಧಾನಂ ಯೋನಿರವ್ಯಯಮ್ ।
ಅವ್ಯಕ್ತಸ್ಯೈವ ನಾಮಾನಿ ಶಬ್ದೈಃ ಪರ್ಯಾಯವಾಚಕೈಃ ॥೧೧೩೦॥

ನಿತ್ಯತೆ, ಅದ್ವಿತೀಯತೆ, ಅತ್ಯಂತಸೂಕ್ಷ್ಮತೆ, ಸರ್ವತ್ರ ವ್ಯಾಪಕತೆ, ಕ್ರಿಯಾಹೀನತೆ, ಕಾರಣರಾಹಿತ್ಯ ಮತ್ತು ಇಂದ್ರಿಯಗಳಿಂದ ಗ್ರಹಿಸಲು ಸಾಧ್ಯವಾಗದೇ ಇರುವಿಕೆ–ಇವು ಅವ್ಯಕ್ತದ ಲಕ್ಷಣಗಳಾಗಿವೆ. ಅವ್ಯಕ್ತ, ಪ್ರಕೃತಿ, ಮೂಲ, ಪ್ರಧಾನ, ಯೋನಿ, ಅವ್ಯಯ–ಈ ಪರ್ಯಾಯಶಬ್ದಗಳಿಂದಲೂ ಅವ್ಯಕ್ತವನ್ನು ಕರೆಯುತ್ತಾರೆ.

ತತ್ಸೂಕ್ಷ್ಮತ್ವಾದನಿರ್ದೇಶ್ಯಂ ತತ್ಸದಿತ್ಯಭಿಧೀಯತೇ ।
ತನ್ಮೂಲಂ ಚ ಜಗತ್ಸರ್ವಂ ತನ್ಮೂಲಾ ಸೃಷ್ಟಿರಿಷ್ಯತೇ ॥೧೧೩೧॥

ಅವ್ಯಕ್ತವು ಅತ್ಯಂತಸೂಕ್ಷ್ಮವಾಗಿರುವುದರಿಂದ ಅನಿರ್ದೇಶ್ಯವಾದುದು. (ಮಾತಿನಿಂದ ಅದರ ಸ್ವರೂಪ-ಲಕ್ಷಣಗಳನ್ನು ಹೇಳಲು ಸಾಧ್ಯವಾಗುವುದಿಲ್ಲ.) ಆದುದರಿಂದ ಅದನ್ನು 'ಸತ್' (ಸೂಕ್ಷ್ಮರೀತಿಯಲ್ಲಿ ಇರತಕ್ಕುದು)– ಎಂದು ಹೇಳುತ್ತಾರೆ. ಸಂಪೂರ್ಣಜಗತ್ತಿಗೂ ಮತ್ತು ಸಂಪೂರ್ಣಸೃಷ್ಟಿಗೂ ಅದನ್ನೇ ಮೂಲವೆಂದು ಹೇಳುತ್ತಾರೆ.

ಪ್ರಕೃತಿಯಿಂದಲೇ ಹುಟ್ಟಿರುವ ಸತ್ತ್ವಾದಿಗಳ ಗುಣಗಳನ್ನು ಹೇಳುತ್ತೇನೆ.

ಸುಖಂ ತುಷ್ಟಿಃ ಪ್ರಕಾಶಶ್ಚ ತ್ರಯಸ್ತೇ ಸಾತ್ತ್ವಿಕಾ ಗುಣಾಃ ।
ರಾಗದ್ವೇಷೌ ಸುಖಂ ದುಃಖಂ ಸ್ತಮ್ಭಶ್ಚ ರಜಸೋ ಗುಣಾಃ ॥೧೦೩೨॥

ಅಪ್ರಕಾಶೋ ಭಯಂ ಮೋಹಸ್ತನ್ದ್ರೀ ಚ ತಮಸೋ ಗುಣಾಃ ।

ಸುಖ, ಸಂತೋಷ, ಪ್ರಕಾಶ–ಈ ಮೂರು ಸತ್ತ್ವದ ಗುಣಗಳು. ರಾಗ-ದ್ವೇಷಗಳು, ಸುಖ-ದುಃಖಗಳು ಮತ್ತು ದುರಭಿಮಾನ–ಇವು ರಜಸ್ಸಿನ ಗುಣಗಳು. ಅಪ್ರಕಾಶ, ಭಯ, ಮೋಹ, ಆಲಸ್ಯ–ಇವು ತಮಸ್ಸಿನ ಗುಣಗಳು.

ಶ್ರದ್ಧಾ ಪ್ರಹರ್ಷೋ ವಿಜ್ಞಾನಮಸಮ್ಮೋಹೋ ದಯಾ ಧೃತಿಃ ।
ಸತ್ತ್ವೇ ಪ್ರವೃದ್ಧೇ ವರ್ಧನ್ತೇ ವಿಪರೀತೇ ವಿಪರ್ಯಯಃ ॥೧೧೩೩॥

ಶ್ರದ್ಧೆ, ಹರ್ಷ, ವಿಜ್ಞಾನ, ಮೋಹವಿಲ್ಲದಿರುವಿಕೆ, ದಯೆ, ಧೈರ್ಯ–ಇವು ಸತ್ತ್ವಗುಣವು ಹೆಚ್ಚಾಗಿದ್ದರೆ ವೃದ್ಧಿಹೊಂದುತ್ತವೆ. ಸತ್ತ್ವಗುಣವು ಅಲ್ಪವಾಗಿದ್ದರೆ ಅಶ್ರದ್ಧೆ, ಅಸಂತೋಷ–ಮುಂತಾದುವು ವೃದ್ಧಿಹೊಂದುತ್ತವೆ.

ಕಾಮಕ್ರೋಧೌ ಮನಸ್ತಾಪೋ ಲೋಭೋ ಮೋಹಸ್ತಥಾ ಮೃಷಾ।
ಪ್ರವೃದ್ಧೇ ಪರಿವರ್ಧನ್ತೇ ರಜಸ್ಯೇತಾನಿ ಸರ್ವಶಃ ॥೧೧೩೪॥

ವಿಷಾದಃ ಸಂಶಯೋ ಮೋಹಸ್ತನ್ದ್ರೀ ನಿದ್ರಾ ಭಯಂ ತಥಾ ।
ತಮಸ್ಯೇತಾನಿ ವರ್ಧನ್ತೇ ಪ್ರವೃದ್ಧೇ ಹೇತ್ವಹೇತುಕಮ್ ॥೧೧೩೫॥

ಕಾಮ, ಕ್ರೋಧ, ಮಾನಸಿಕಸಂತಾಪ, ಲೋಭ, ಮೋಹ, (ಆಸಕ್ತಿ) ಮತ್ತು ಸುಳ್ಳುಹೇಳುವುದು–ಈ ಎಲ್ಲ ದೋಷಗಳೂ ರಜೋಗುಣವು ಹೆಚ್ಚಾಗಿದ್ದರೆ ವೃದ್ಧಿಹೊಂದುತ್ತವೆ. ವಿಷಾದ, ಸಂಶಯ, ಮೋಹ, ಆಲಸ್ಯ, ನಿದ್ರೆ, ಭಯ–ಇವು ತಮೋಗುಣವು ಹೆಚ್ಚಾಗಿದ್ದರೆ ವೃದ್ಧಿಹೊಂದುತ್ತವೆ. ಹೀಗೆ ಇವುಗಳಲ್ಲಿ ಕಾರಣ-ಅಕಾರಣಗಳನ್ನು ತಿಳಿಯಬಹುದು.

ಹೀಗೆ ಈ ಮೂರು ಗುಣಗಳೂ ಪರಸ್ಪರವಾಗಿ ಸ್ಪರ್ಧಿಸುತ್ತಾ ಪುನಃ ಪುನಃ ಹೆಚ್ಚುತ್ತಲೇ ಇರುತ್ತವೆ. ಒಂದು ಗುಣದಿಂದ ಮತ್ತೊಂದು ಗುಣವು ತಿರಸ್ಕೃತವಾಗಿ ಕ್ಷೀಣಿಸುತ್ತಲೂ ಇರುತ್ತವೆ. (ಸತ್ತ್ವವು ಹೆಚ್ಚಿದರೆ ತಮಸ್ಸಿಗೆ

ಸ್ಥಾನವಿರುವುದಿಲ್ಲ. ತಮಸ್ಸು ಹೆಚ್ಚಾಗಿದ್ದರೆ ಸತ್ತ್ವಕ್ಕೆ ಸ್ಥಾನವಿರುವುದಿಲ್ಲ. ರಜೋಗುಣ-ತಮೋಗುಣಗಳು ಆಗಿಂದಾಗ್ಗೆ ಅದಲು ಬದಲಾಗುತ್ತಿರುತ್ತವೆ.)

ತತ್ರ ಯತ್ಪ್ರೀತಿಸಂಯುಕ್ತಂ ಕಾಯೇನ ಮನಸಾಪಿ ವಾ ।
ವರ್ತತೇ ಸಾತ್ತ್ವಿಕೋ ಭಾವ ಇತ್ಯುಪೇಕ್ಷೇತ ತತ್ತದಾ ॥೧೧೩೭॥

ಯದಾ ಸಂತಾಪಸಂಯುಕ್ತಂ ಚಿತ್ತಕ್ಷೋಭಕರಂ ಭವೇತ್ ।
ವರ್ತತೇ ರಜ ಇತ್ಯೇವ ತದಾ ತದಭಿಚಿನ್ತಯೇತ್ ॥೧೧೩೮॥

ಶರೀರ ಮತ್ತು ಮನಸ್ಸುಗಳಿಂದ ಯಾವ ಪ್ರಸನ್ನತೆಯ ಭಾವವುಂಟಾಗುವುದೋ ಅದನ್ನು ಸಾತ್ತ್ವಿಕಭಾವವೆಂದು ತಿಳಿಯಬೇಕು. (ಈ ಭಾವವು ಬಂದನಂತರ ಇತರ ಭಾವಗಳನ್ನು ಉಪೇಕ್ಷಿಸಬೇಕು.) ಯಾವಾಗ ಮನಸ್ಸಿನಲ್ಲಿ ಕ್ಷೋಭೆಗೊಳಿಸುವ ಸಂತಾಪಯುಕ್ತವಾದ ಭಾವವುಂಟಾಗುವುದೋ ಆಗ ರಜೋಗುಣವು ಆವಿರ್ಭಾವವಾಗಿರುವುದೆಂದು ತಿಳಿಯಬೇಕು.

ಯದಾ ಸಮ್ಮೋಹಸಂಯುಕ್ತಂ ಯದ್ವಿಷಾದಕರಂ ಭವೇತ್ ।
ಅಪ್ರತರ್ಕ್ಯಮವಿಜ್ಞೇಯಂ ತಮಸ್ತದುಪಧಾರಯೇತ್ ॥೧೧೩೯॥

ಯಾವಾಗ ಊಹಿಸಲೂ ಸಾಧ್ಯವಾಗದ ರೀತಿಯಲ್ಲಿ ಕಾರಣವೇನೆಂದು ತಿಳಿಯದೇ ಇರುವ ಮೋಹಯುಕ್ತವಾದ ಮತ್ತು ವಿಷಾದವನ್ನುಂಟುಮಾಡುವ ಭಾವವು ಶರೀರ ಮತ್ತು ಮನಸ್ಸುಗಳಲ್ಲಿ ಆವಿರ್ಭವಿಸುವುದೋ ಆಗ ತಮೋಗುಣದ ಆವಿರ್ಭಾವವಾಗಿರುವುದೆಂದು ತಿಳಿಯಬೇಕು.

ಸಮಾಸಾತ್ಸಾತ್ತ್ವಿಕೋ ಧರ್ಮಃ ಸಮಾಸಾದ್ರಾಜಸಂ ಧನಮ್ ।
ಸಮಾಸಾತ್ತಾಮಸಃ ಕಾಮಸ್ತ್ರಿವರ್ಗೇ ತ್ರಿಗುಣಾಃ ಕ್ರಮಾತ್ ॥೧೧೪೦॥

ಬ್ರಹ್ಮಾದಿದೇವಸೃಷ್ಟಿರ್ಯಾ ಸಾತ್ತ್ವಿಕೀತಿ ಪ್ರಕೀರ್ತ್ಯತೇ ।
ರಾಜಸೀ ಮಾನುಷೀ ಸೃಷ್ಟಿಃ ತಿರ್ಯಗ್ಯೋನಿಸ್ತು ತಾಮಸೀ ॥೧೧೪೧॥

ತ್ರಿವರ್ಗಗಳನ್ನು ಸಂಕ್ಷೇಪವಾಗಿ ಹೇಳುವುದಾದರೆ–ಧರ್ಮವು ಸಾತ್ತ್ವಿಕ; ಅರ್ಥವು ರಾಜಸ ; ಭೋಗವು ತಾಮಸ. ಬ್ರಹ್ಮನೇ ಮೊದಲಾದ ದೇವತೆಗಳ ಸೃಷ್ಟಿಯು ಸಾತ್ತ್ವಿಕಗುಣದಿಂದ ಉಂಟಾದುದು. ಮನುಷ್ಯರ

ಸೃಷ್ಟಿಯು ರಾಜಸಗುಣದಿಂದ ಉಂಟಾದುದು. ತಿರ್ಯಕ್ಪ್ರಾಣಿಗಳ ಸೃಷ್ಟಿಯು ತಮೋಗುಣದಿಂದ ಉಂಟಾದುದು.

ಊರ್ಧ್ವಂ ಗಚ್ಛನ್ತಿ ಸತ್ತ್ವಸ್ಥಾ ಮಧ್ಯೇ ತಿಷ್ಠನ್ತಿ ರಾಜಸಾಃ ।
ಜಘನ್ಯಗುಣವೃತ್ತಿಸ್ಥಾ ಅಧೋ ಗಚ್ಛನ್ತಿ ತಾಮಸಾಃ ॥೧೧೪೨॥

ಸತ್ತ್ವಗುಣವುಳ್ಳವರು ಊರ್ಧ್ವಲೋಕಗಳಿಗೆ ಹೋಗುತ್ತಾರೆ. ರಾಜಸ ಗುಣವುಳ್ಳವರು ಮಧ್ಯದಲ್ಲಿ (ಮನುಷ್ಯಲೋಕದಲ್ಲಿ) ಇರುತ್ತಾರೆ. ಪ್ರಮಾದ, ನಿದ್ರೆ, ಆಲಸ್ಯ–ಇವೇ ಮೊದಲಾದ ತಾಮಸಗುಣವುಳ್ಳವರು ಅಧೋಗತಿಗೆ ಹೋಗುತ್ತಾರೆ. (ಕ್ರಿಮಿ-ಕೀಟಗಳಾಗಿ ಹುಟ್ಟುತ್ತಾರೆ ಅಥವಾ ನರಕದಲ್ಲಿ ಬೀಳು ತ್ತಾರೆ.)

ದೇವಮಾನುಷತಿರ್ಯಕ್ಷು ಯದ್ಭೂತಂ ಸಚರಾಚರಮ್ ।
ಆದಿಪ್ರಭೃತಿ ಸಂಯುಕ್ತಂ ವ್ಯಾಪ್ತಮೇಭಿಸ್ತ್ರಿಭಿರ್ಗುಣೈಃ ॥೧೧೪೩॥

ದೇವ-ಮನುಷ್ಯ-ತಿರ್ಯಕ್ಪ್ರಾಣಿಗಳಲ್ಲಿ ಸ್ಥಾವರ-ಜಂಗಮಾತ್ಮಕ ಗಳಾದ ಯಾವ ಪ್ರಾಣಿಗಳಿವೆಯೋ–ಅವೆಲ್ಲವೂ ಸೃಷ್ಟಿಯ ಆದಿಯಿಂದಲೂ ಸತ್ತ್ವರಜಸ್ತಮಗಳೆಂಬ ಈ ಮೂರು ಗುಣಗಳಿಂದಲೇ ವ್ಯಾಪ್ತವಾಗಿದೆ.

ದೇವಿ! ಮುಂದೆ ನಾನು ಮಹತ್ತೇ ಮೊದಲಾದ ತತ್ತ್ವಗಳ ಲಕ್ಷಣಗಳನ್ನು ಹೇಳುತ್ತೇನೆ.

ವಿಜ್ಞಾನಂ ಚ ವಿವೇಕಶ್ಚ ಮಹತೋ ಲಕ್ಷಣಂ ಭವೇತ್ ।

ಬುದ್ಧಿಯ ಮೂಲಕವಾಗಿ ಯಾವ ವಿವೇಕ ಮತ್ತು ವಿಶೇಷವಾದ ಜ್ಞಾನವುಂಟಾಗುವುದೋ–ಅದೇ ಶರೀರದಲ್ಲಿರುವ ಮಹತ್ತತ್ತ್ವದ ಲಕ್ಷಣ ವಾಗಿದೆ.

ಮಹಾನ್ಬುದ್ಧಿರ್ಮತಿಃ ಪ್ರಜ್ಞಾ ನಾಮಾನಿ ಮಹತೋ ವಿದುಃ ।

ಮಹತ್, ಬುದ್ಧಿ, ಮತಿ ಮತ್ತು ಪ್ರಜ್ಞೆ–ಇವು ಮಹತ್ತತ್ತ್ವದ ಪರ್ಯಾಯನಾಮಗಳೆಂದು ವಿದ್ವಾಂಸರು ತಿಳಿಯುತ್ತಾರೆ.

ಅಹಙ್ಕಾರಃ ಸ ವಿಜ್ಞೇಯೋ ಲಕ್ಷಣೇನ ಸಮಾಸತಃ ॥೧೧೪೪॥

ಅಹಙ್ಕಾರೇಣ ಭೂತಾನಾಂ ಸರ್ಗೋ ನಾನಾವಿಧೋ ಭವೇತ್ ।
ಅಹಙ್ಕಾರನಿವೃತ್ತಿರ್ಹಿ ನಿರ್ವಾಣಾಯೋಪಪದ್ಯತೇ ॥೧೧೪೬॥

ತನ್ನ ಹೆಸರಿನಲ್ಲಿರುವ ಸಂಕ್ಷೇಪವಾದ ಲಕ್ಷಣದಿಂದಲೇ ತಿಳಿಯಲ್ಪಡುವುದಕ್ಕೆ ಅಹಂಕಾರವೆಂದು ಹೆಸರು. (ಅಹಂಭಾವವಿರುವುದೇ ಅಹಂಕಾರ). ಈ ಅಹಂಕಾರದಿಂದಲೇ ಪ್ರಾಣಿಗಳಿಗೆ ನಾನಾವಿಧವಾದ ಜನ್ಮವು ಪ್ರಾಪ್ತವಾಗುತ್ತದೆ. ಅಹಂಕಾರದ ನಿವೃತ್ತಿಯೇ ಮೋಕ್ಷಕ್ಕೆ ಸಾಧನವಾಗುತ್ತದೆ.

ಖಂ ವಾಯುರಗ್ನಿಃ ಸಲಿಲಂ ಪೃಥಿವೀ ಚೇತಿ ಪಞ್ಚಮೀ ।
ಮಹಾಭೂತಾನಿ ಭೂತಾನಾಂ ಸರ್ವೇಷಾಂ ಪ್ರಭವಾಪ್ಯಯೌ ॥೧೧೪೭॥

ಆಕಾಶ, ವಾಯು, ಅಗ್ನಿ, ನೀರು, ಐದನೆಯದಾದ ಭೂಮಿ–ಇವೇ ಪಂಚಭೂತಗಳು. ಇವುಗಳೇ ಪ್ರಾಣಿಗಳ ಉತ್ಪತ್ತಿ ಮತ್ತು ಲಯಗಳಿಗೆ ಸ್ಥಾನಗಳಾಗಿವೆ.

ಶಬ್ದಃ ಶ್ರೋತ್ರಂ ತಥಾ ಖಾನಿ ತ್ರಯಮಾಕಾಶಸಮ್ಭವಮ್ ।
ಸ್ಪರ್ಶವತ್ಪ್ರಾಣಿನಾಂ ಚೇಷ್ಟಾ ಪವನಸ್ಯ ಗುಣಾಃ ಸ್ಮೃತಾಃ ॥೧೧೪೮॥

ಶಬ್ದ, ಶ್ರವಣೇಂದ್ರಿಯ ಮತ್ತು ಇಂದ್ರಿಯಗಳಲ್ಲಿರುವ ಛಿದ್ರಗಳು– ಇವು ಆಕಾಶದಿಂದ ಹುಟ್ಟಿದುವುಗಳು. ಸ್ಪರ್ಶ ಮತ್ತು ಪ್ರಾಣಿಗಳ ಚೇಷ್ಟೆ– ಇವು ವಾಯುವಿನ ಗುಣಗಳಾಗಿವೆ. (ವಾಯುವಿನಿಂದ ಹುಟ್ಟಿದ ಗುಣಗಳಾಗಿವೆ.)

ರೂಪಂ ಪಾಕೋಽಕ್ಷಿಣೀ ಜ್ಯೋತಿಶ್ಚತ್ವಾರಸ್ತೇಜಸೋ ಗುಣಾಃ ।
ರಸಃ ಸ್ನೇಹಸ್ತಥಾ ಜಿಹ್ವಾ ಶೈತ್ಯಂ ಚ ಜಲಜಾ ಗುಣಾಃ ॥೧೧೪೯॥

ರೂಪ, ಪಕ್ವವಾಗುವುದು, ಕಣ್ಣು ಮತ್ತು ಜ್ಯೋತಿ–ಈ ನಾಲ್ಕು ತೇಜಸ್ಸಿನ ಗುಣಗಳಾಗಿವೆ. ರಸ, ಸ್ನೇಹ (ಸ್ನಿಗ್ಧತೆ), ನಾಲಿಗೆ, ಶೀತಲತೆ–ಈ ನಾಲ್ಕು ನೀರಿನ ಗುಣಗಳಾಗಿವೆ.

ಗನ್ಧೋ ಘ್ರಾಣಂ ಶರೀರಂ ಚ ಪೃಥಿವ್ಯಾಸ್ತೇ ಗುಣಾಸ್ತ್ರಯಃ ।
ಇತಿ ಸರ್ವಗುಣಾ ದೇವಿ ವಿಖ್ಯಾತಾಃ ಪಾಞ್ಚಭೌತಿಕಾಃ ॥೧೧೫೦॥

ಗಂಧ, ಮೂಗು ಮತ್ತು ಶರೀರ–ಇವು ಪೃಥ್ವಿಯ ಮೂರು ಗುಣಗಳಾಗಿವೆ. ಹೀಗೆ ಪಂಚಭೂತಗಳ ಸಮಸ್ತಗುಣಗಳೂ ವಿಖ್ಯಾತವಾಗಿವೆ.

ಗುಣಾನ್ಪೂರ್ವಸ್ಯ ಪೂರ್ವಸ್ಯ ಪ್ರಾಪ್ನುವನ್ತ್ಯುತ್ತರಾಣಿ ತು ।
ತಸ್ಮಾನ್ನೈಕಗುಣಾಶ್ಚೇಹ ದೃಶ್ಯನ್ತೇ ಭೂತಸೃಷ್ಟಯಃ ॥೧೧೫೧॥

ಉಪಲಭ್ಯಾಪ್ಸು ಯೇ ಗನ್ಧಂ ಕೇಚಿದ್ಬ್ರೂಯುರನೈಪುಣಾಃ।
ಅಪಾಂ ಗನ್ಧಗುಣಂ ಪ್ರಾಜ್ಞಾ ನೇಚ್ಛನ್ತಿ ಕಮಲೇಕ್ಷಣೇ ॥೧೧೫೨॥

ಮೊದಲ-ಮೊದಲ ಭೂತಗಳ ಗುಣಗಳನ್ನು ಕಡೆ-ಕಡೆಯ ಭೂತಗಳು ಅನುಕ್ರಮವಾಗಿ ಪಡೆದುಕೊಳ್ಳುತ್ತವೆ. ಇದರಿಂದ ಪ್ರಾಣಿಗಳ ಸೃಷ್ಟಿಯು ಅನೇಕ ಗುಣಗಳಿಂದ ಕೂಡಿರುವುದಾಗಿ ಕಾಣುತ್ತದೆ. (ಆಕಾಶಕ್ಕೆ ಶಬ್ದಗುಣವಿದ್ದರೆ ವಾಯುವಿಗೆ ಶಬ್ದ, ಸ್ಪರ್ಶ–ಎಂಬ ಎರಡು ಗುಣಗಳಿರುತ್ತವೆ. ವಾಯುವಿನ ಮೂಲಕ ಶಬ್ದವನ್ನು ಕೇಳಬಹುದು ; ಸ್ಪರ್ಶವನ್ನೂ ಅನುಭವಿಸಬಹುದು. ಅಗ್ನಿಗೆ ಶಬ್ದ, ಸ್ಪರ್ಶ, ರೂಪಗಳೆಂಬ ಮೂರು ಗುಣಗಳಿರುತ್ತವೆ. ಅಗ್ನಿಯಲ್ಲಿ ಶಬ್ದವೂ ಇದೆ. ಅದನ್ನು ಸ್ಪರ್ಶಿಸಲೂಬಹುದು. ಅಗ್ನಿಗೆ ರೂಪವೂ ಇದೆ. ಜಲಕ್ಕೆ ಶಬ್ದ-ಸ್ಪರ್ಶ-ರೂಪ-ರಸಗಳೆಂಬ ನಾಲ್ಕು ಗುಣಗಳಿವೆ. ಭೂಮಿಗೆ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳೆಂಬ ಐದು ಗುಣಗಳಿವೆ.) ಕೆಲವರು ಅವಿದ್ವಾಂಸರು ನೀರಿನಲ್ಲಿ ವಾಸನೆಯನ್ನು ಆಘ್ರಾಣಿಸಿ ಗಂಧವು ನೀರಿನ ಗುಣವೆಂದು ಹೇಳುತ್ತಾರೆ. ನೀರಿನಲ್ಲಿ ಗಂಧವಿರುವುದೆಂಬ ಅಭಿಪ್ರಾಯವನ್ನು ವಿದ್ವಾಂಸರು ಒಪ್ಪುವುದಿಲ್ಲ.

ತದ್ಗನ್ಧತ್ವಮಪಾಂ ನಾಸ್ತಿ ಪೃಥಿವ್ಯಾ ಏವ ತದ್ಗುಣಃ ।
ಭೂಮೌ ಗನ್ಧೋ ರಸೇ ಸ್ನೇಹೋ ಜ್ಯೋತಿಶ್ಚಕ್ಷುಷಿ ಸಂಸ್ಥಿತಮ್ ॥

ನೀರಿನಲ್ಲಿ ಗಂಧವಿಲ್ಲ. ಗಂಧವು ಪೃಥ್ವಿಯ ಗುಣವಾಗಿದೆ. ಭೂಮಿಯಲ್ಲಿ ಗಂಧವೂ, ನೀರಿನಲ್ಲಿ ಸ್ನಿಗ್ಧತೆಯೂ, ತೇಜಸ್ಸು ಕಣ್ಣುಗಳಲ್ಲಿಯೂ ಸ್ಥಿರವಾಗಿರುತ್ತವೆ.

ಪ್ರಾಣಾಪಾನಾಶ್ರಯೋ ವಾಯುಃ ಖೇಷ್ವಾಕಾಶಃ ಶರೀರಿಣಾಮ್ ।
ಕೇಶಾಸ್ಥಿನಖದನ್ತತ್ವಕ್ಪಾಣಿಪಾದಶಿರಾಂಸಿ ಚ ।
ಪೃಷ್ಠೋದರಕಟಿಗ್ರೀವಾಃ ಸರ್ವಂ ಭೂಮ್ಯಾತ್ಮಕಂ ಸ್ಮೃತಮ್ ॥೧೧೫೪॥

ಪ್ರಾಣ ಮತ್ತು ಅಪಾನಗಳಿಗೆ ವಾಯುವು ಆಶ್ರಯವಾಗಿದೆ. ದೇಹ

ದಾರಿಗಳಲ್ಲಿ ಎಷ್ಟು ರಂಧ್ರಗಳಿವೆಯೋ ಅವೆಲ್ಲವೂ ಆಕಾಶದಿಂದ ವ್ಯಾಪ್ತ ವಾಗಿವೆ. ಕೂದಲು, ಮೂಳೆ, ಉಗುರು, ಹಲ್ಲು, ಚರ್ಮ, ಕೈ-ಕಾಲುಗಳು, ಶಿರಸ್ಸು, ಪೃಷ್ಠ, ಹೊಟ್ಟೆ, ಸೊಂಟ ಮತ್ತು ಕುತ್ತಿಗೆ–ಇವೆಲ್ಲವೂ ಪೃಥಿವೀ ಭೂತದಿಂದ ವ್ಯಾಪ್ತವಾಗಿವೆ.

ಯತ್ಕಿಂಚಿದಪಿ ಕಾಯೇಽಸ್ಮಿನ್ಧಾತುದೋಷಮಲಾಶ್ರಿತಮ್ ।
ತತ್ಸರ್ವಂ ಭೌತಿಕಂ ವಿದ್ಧಿ ದೇಹೈರೇವಾಸ್ಯ ಸ್ವಾಮಿಕಮ್ ॥೧೧೫೫॥

ಈ ಶರೀರದಲ್ಲಿ ಯಾವ ಧಾತು, ದೋಷ ಮತ್ತು ಮಲಕ್ಕೆ ಸಂಬಂಧಿ ಸಿದ ವಸ್ತುಗಳಿವೆಯೋ–ಅವೆಲ್ಲವೂ ಪಂಚಭೂತಗಳಿಗೆ ಸಂಬಂಧಿಸಿದುವು ಗಳೆಂದು ತಿಳಿ. ಶರೀರಗಳ ಮೂಲಕವಾಗಿಯೇ ಪಂಚಭೂತಗಳು ಈ ವಿಶ್ವದಲ್ಲಿ ತಮ್ಮ ಸ್ವಾಮಿತ್ವವನ್ನು ಸ್ಥಾಪಿಸಿಕೊಂಡಿವೆ.

ಬುದ್ಧೀನ್ದ್ರಿಯಾಣಿ ಕರ್ಣತ್ವಕ್ಚಕ್ಷುರ್ಜಿಹ್ವಾಥ ನಾಸಿಕಾ ।
ಕರ್ಮೇನ್ದ್ರಿಯಾಣಿ ವಾಕ್ಪಾಣಿಪಾದೌ ಮೇಢ್ರಂ ಗುದಸ್ತಥಾ ॥೧೧೫೬॥

ಶಬ್ದಃ ಸ್ಪರ್ಶಶ್ಚ ರೂಪಂ ಚ ರಸೋ ಗನ್ಧಶ್ಚ ಪಞ್ಚಮಃ ।
ಬುದ್ಧೀನ್ದ್ರಿಯಾರ್ಥಾಞ್ಜಾನೀಯಾದ್ಭೂತೇಭ್ಯಸ್ತ್ವಭಿನಿಃಸೃತಾನ್ ॥೧೧೫೭॥

ಕಿವಿ, ಚರ್ಮ, ಕಣ್ಣು, ನಾಲಿಗೆ ಮತ್ತು ಮೂಗು–ಇವು ಐದೂ ಜ್ಞಾನೇಂದ್ರಿಯಗಳು. ವಾಕ್ಕು, ಕೈ-ಕಾಲುಗಳು, ಜನನೇಂದ್ರಿಯ ಮತ್ತು ಗುದ–ಇವು ಐದೂ ಕರ್ಮೇಂದ್ರಿಯಗಳು. ಶಬ್ದ, ಸ್ಪರ್ಶ, ರೂಪ, ರಸ, ಗಂಧ–ಇವು ಐದೂ ಜ್ಞಾನೇಂದ್ರಿಯಗಳಿಗೆ ಅನುಕ್ರಮವಾಗಿ ವಿಷಯಗಳಾ ಗಿವೆ. ಇವೆಲ್ಲವೂ ಪಂಚಭೂತಗಳಿಂದಲೇ ಪ್ರಕಟವಾಗಿವೆ.

ವಾಕ್ಯಂ ಕ್ರಿಯಾ ಗತಿಃ ಪ್ರೀತಿರುತ್ಸರ್ಗಶ್ಚೇತಿ ಪಞ್ಚಧಾ ।
ಕರ್ಮೇನ್ದ್ರಿಯಾರ್ಥಾಞ್ಜಾನೀಯಾತ್ತೇ ಚ ಭೂತೋದ್ಭವಾ ಮತಾಃ ॥

ವಾಕ್ಯ (ಮಾತನಾಡುವುದು), ಕ್ರಿಯೆ (ಕೆಲಸಮಾಡುವುದು), ನಡೆ ಯುವುದು, ಪ್ರೀತಿಸುವುದು (ಮೈಥುನ), ಮಲ-ಮೂತ್ರರೂಪದಲ್ಲಿ ವಿಸರ್ಜಿ ಸುವುದು–ಇವು ಕರ್ಮೇಂದ್ರಿಯಗಳ ವಿಷಯಗಳಾಗಿವೆ. ಇವುಗಳೂ ಪಂಚ ಭೂತಗಳಿಂದಲೇ ಹುಟ್ಟಿದುವುಗಳೆಂದು ಹೇಳಲ್ಪಟ್ಟಿವೆ. ಎಲ್ಲ ಇಂದ್ರಿಯ

ಗಳಿಗೂ ಮನಸ್ಸೇ ಈಶ್ವರನೆಂದು (ಪ್ರೇರಕವೆಂದು) ಹೇಳುತ್ತಾರೆ. ಮನಸ್ಸು ಪ್ರಾರ್ಥನಾಲಕ್ಷಣವುಳ್ಳದ್ದು (ಅಪೇಕ್ಷಾಧರ್ಮವುಳ್ಳದ್ದು ; ಯಾವಾಗಲೂ ವಸ್ತುಗಳನ್ನು ಅಪೇಕ್ಷಿಸುತ್ತಲೇ ಇರುತ್ತದೆ.) ಮನಸ್ಸನ್ನೂ ಒಂದು ಇಂದ್ರಿಯವೆಂದು ಹೇಳುತ್ತಾರೆ.

ನಿಯುಙ್ಕ್ತೇ ಚ ಸದಾ ತಾನಿ ಭೂತಾನಿ ಮನಸಾ ಸಹ ।
ನಿಯಮೇ ಚ ವಿಸರ್ಗೇ ಚ ಮನಸಃ ಕಾರಣಂ ಪ್ರಭುಃ ॥೧೧೬೦॥

ಇನ್ದ್ರಿಯಾಣೀನ್ದ್ರಿಯಾರ್ಥಾಶ್ಚ ಸ್ವಭಾವಶ್ಚೇತನಾ ಧೃತಿಃ ।
ಭೂತಾಭೂತವಿಕಾರಶ್ಚ ಶರೀರಮಿತಿ ಸಂಸ್ಥಿತಮ್ ॥೧೧೬೧॥

ಇವೆಲ್ಲಕ್ಕೂ ಪ್ರಭುವಾದ ಆತ್ಮನು ಮನಸ್ಸಿನ ನಿಯಂತ್ರಣಕ್ಕೂ ಮತ್ತು ಸೃಷ್ಟಿಗೂ ಕಾರಣನಾಗಿರುತ್ತಾನೆ. ಮನಸ್ಸಿನಿಂದ ಕೂಡಿದ ಸಮಸ್ತಭೂತಗಳನ್ನೂ (ಭೂತಾತ್ಮಕವಾದ ಇಂದ್ರಿಯಗಳನ್ನೂ) ಅವನು ನಾನಾವಿಧವಾದ ಕಾರ್ಯಗಳಲ್ಲಿ ನಿಯೋಜಿಸುತ್ತಿರುತ್ತಾನೆ. ಇಂದ್ರಿಯಗಳು, ಇಂದ್ರಿಯಗಳ ವಿಷಯಗಳು, ಸ್ವಭಾವ, ಚೇತನಾ, ಧೃತಿ, ಭೂತಾಭೂತವಿಕಾರ–ಇವೆಲ್ಲವೂ ಸೇರಿ ಶರೀರವಾಗಿದೆ.

ಶರೀರಾಚ್ಚ ಪರೋ ದೇಹೀ ಶರೀರಂ ಚ ವ್ಯಪಾಶ್ರಿತಃ ।
ಶರೀರಿಣಃ ಶರೀರಸ್ಯ ಸೋಽನ್ತರಂ ವೇತ್ತಿ ವೈ ಮುನಿಃ ॥೧೧೬೨॥

ಶರೀರಕ್ಕಿಂತಲೂ ಬೇರೆಯಾಗಿ ಆದರೆ ಶರೀರವನ್ನು ಧರಿಸಿ, ಶರೀರದ ಆಶ್ರಯದಲ್ಲಿಯೇ ಆತ್ಮನಿದ್ದಾನೆ. ಶರೀರಕ್ಕೂ (ಜಡದೇಹಕ್ಕೂ) ಮತ್ತು ಶರೀರಿಗೂ (ಆತ್ಮನಿಗೂ) ವ್ಯತ್ಯಾಸವನ್ನು ತಿಳಿದಿರುವವನೇ ಮುನಿಯು.

ರಸಃ ಸ್ಪರ್ಶಶ್ಚ ಗನ್ಧಶ್ಚ ರೂಪಂ ಶಬ್ದವಿವರ್ಜಿತಮ್ ।
ಅಶರೀರಂ ಶರೀರೇಷು ದಿದೃಕ್ಷೇತ ನಿರಿನ್ದ್ರಿಯಮ್ ॥೧೧೬೩॥

ರಸ-ಸ್ಪರ್ಶ-ಗಂಧ-ರೂಪ ಮತ್ತು ಶಬ್ದಗಳಿಂದ ರಹಿತನಾದ (ಪಂಚ ಭೂತಗಳಿಗೂ ಅತೀತನಾದ), ಇಂದ್ರಿಯಗಳಿಂದಲೂ, ಶರೀರದಿಂದಲೂ ರಹಿತನಾದ ಆತ್ಮನನ್ನು ಶರೀರದೊಳಗೆ ನೋಡುವ ಆಶೆಯುಳ್ಳವನಾಗಬೇಕು.

ಅವ್ಯಕ್ತಂ ಸರ್ವದೇಹೇಷು ಮರ್ತ್ಯೇಷ್ವಮರಮಾಶ್ರಿತಮ್ ।
ಯಃ ಪಶ್ಯೇತ್ಪರಮಾತ್ಮಾನಂ ಬನ್ಧನೈಃ ಸ ವಿಮುಚ್ಯತೇ ॥೧೧೬೪॥

ಮನುಷ್ಯರ ಎಲ್ಲ ದೇಹಗಳಲ್ಲಿಯೂ ಅವ್ಯಕ್ತನಾಗಿರುವ ನಾಶ ಹೊಂದುವ ಪದಾರ್ಥಗಳಲ್ಲಿಯೂ ಅಮರನಾಗಿರುವ ಪರಮಾತ್ಮನನ್ನು ಯಾವನು ನೋಡುವನೋ–ಅಂತಹವನು ಸಮಸ್ತವಾದ ಬಂಧನ ಗಳಿಂದಲೂ ಮುಕ್ತನಾಗುತ್ತಾನೆ.

ಸ ಹಿ ಸರ್ವೇಷು ಭೂತೇಷು ಸ್ಥಾವರೇಷು ಚರೇಷು ಚ ।
ವಸತ್ಯೇಕೋ ಮಹಾವೀರ್ಯೋ ನಾನಾಭಾವಸಮನ್ವಿತಃ ॥೧೧೬೫॥

ನೈವ ಚೋರ್ಧ್ವಂ ನ ತಿರ್ಯಕ್ಚ ನಾಧಸ್ತಾನ್ನ ಕದಾಚನ ।
ಇನ್ದ್ರಿಯೈರಿಹ ಬುದ್ಧ್ಯಾ ವಾ ನ ದೃಶ್ಯೇತ ಕದಾಚನ ॥೧೧೬೬॥

ನಾನಾಭಾವಗಳಿಂದ ಯುಕ್ತನಾಗಿರುವ, ಮಹಾಶಕ್ತಿಶಾಲಿಯಾದ ಆ ಪರಮಾತ್ಮನು ಏಕಾಕಿಯಾಗಿ ಸಮಸ್ತವಾದ ಚರಾಚರಪ್ರಾಣಿಗಳಲ್ಲಿಯೂ ವಾಸಮಾಡುತ್ತಿದ್ದಾನೆ. ಮೇಲಾಗಲೀ, ಕೆಳಗಾಗಲೀ, ಅಕ್ಕ-ಪಕ್ಕಗಳಲ್ಲಾಗಲೀ ಅವನನ್ನು ನೋಡಲು ಸಾಧ್ಯವಾಗುವುದಿಲ್ಲ. ಇಂದ್ರಿಯಗಳಿಗಾಗಲೀ, ಬುದ್ಧಿಗಾಗಲೀ ಅವನು ಯಾವಾಗಲೂ ಗೋಚರಿಸತಕ್ಕವನಲ್ಲ.

ನವದ್ವಾರಂ ಪುರಂ ಗತ್ವಾ ಸತತಂ ನಿಯತೋ ವಶೀ ।
ಈಶ್ವರಃ ಸರ್ವಲೋಕೇಷು ಸ್ಥಾವರಸ್ಯ ಚರಸ್ಯ ಚ ॥೧೧೬೭॥

ತಮೇವಾಹುರಣುಭ್ಯೋಽಣುಂ ತಂ ಮಹದ್ಭ್ಯೋ ಮಹತ್ತರಮ್ ।
ಬಹುಧಾ ಸರ್ವಭೂತಾನಿ ವ್ಯಾಪ್ಯ ತಿಷ್ಠತಿ ಶಾಶ್ವತಮ್ ॥೧೧೬೮॥

ಕ್ಷೇತ್ರಜ್ಞಮೇಕತಃ ಕೃತ್ವಾ ಸರ್ವಂ ಕ್ಷೇತ್ರಮಥೈಕತಃ ।
ಏವಂ ಸಂವಿಮೃಶೇಜ್ಜ್ಞಾನೀ ಸಂಯತಃ ಸತತಂ ಹೃದಿ ॥೧೧೬೯॥

ಸರ್ವಲೋಕಗಳಲ್ಲಿಯೂ ಇರುವ, ಸ್ಥಾವರ-ಜಂಗಮಪ್ರಾಣಿಗಳಿಗೂ ಈಶ್ವರನಾಗಿ, ಎಲ್ಲರನ್ನೂ ವಶದಲ್ಲಿ ಇಟ್ಟುಕೊಂಡಿರುವ ಆತ್ಮನು ಒಂಬತ್ತು ಬಾಗಿಲುಗಳುಳ್ಳ ಪುರಕ್ಕೆ ಹೋಗಿ ಅಲ್ಲಿ ನಿಯಮಪೂರ್ವಕವಾಗಿ ನಿವಾಸ ಮಾಡುತ್ತಾನೆ. ಅವನನ್ನೇ ಋಷಿಗಳು ಅಣುವಿಗಿಂತಲೂ ಅಣುವೆಂದೂ (ಪರ ಮಾಣುವೆಂದೂ) ಮಹತ್ತುಗಳಿಗಿಂತಲೂ ಮಹತ್ತರನೆಂದೂ, ಶಾಶ್ವತ ನೆಂದೂ

ಹೇಳುತ್ತಾರೆ. ಅವನು ಅನೇಕಪ್ರಕಾರವಾದ ರೂಪಗಳಲ್ಲಿ ಎಲ್ಲ ಪ್ರಾಣಿಗಳನ್ನೂ ವ್ಯಾಪಿಸಿಕೊಂಡಿರುವನು. ಜ್ಞಾನಿಯಾದವನು ಕ್ಷೇತ್ರಗಳನ್ನು ಮತ್ತು ಕ್ಷೇತ್ರಜ್ಞನನ್ನು ಪ್ರತ್ಯೇಕಿಸಬೇಕು. ಏಕಾಗ್ರಚಿತ್ತನಾಗಿ ಕ್ಷೇತ್ರ-ಕ್ಷೇತ್ರಜ್ಞರ ಸಂಬಂಧವನ್ನು ಯಥಾವತ್ತಾಗಿ ಮನಸ್ಸಿನಲ್ಲಿ ಸರ್ವಕಾಲದಲ್ಲಿಯೂ ಚಿಂತಿಸುತ್ತಾ ಕ್ಷೇತ್ರದಿಂದ ಭಿನ್ನವಾದ ಕ್ಷೇತ್ರಜ್ಞನನ್ನು (ಪರಮಾತ್ಮನನ್ನು) ಅರಿತುಕೊಳ್ಳಬೇಕು.

ಪುರುಷಃ ಪ್ರಕೃತಿಸ್ಥೋ ಹಿ ಭುಙ್ಕ್ತೇ ಪ್ರಕೃತಿಜಾನ್ಗುಣಾನ್ ।
ಅಕರ್ತಾಲೇಪಕೋ ನಿತ್ಯೋ ಮಧ್ಯಸ್ಥಃ ಸರ್ವಕರ್ಮಣಾಮ್ ॥೧೧೭೦॥

ಪುರುಷನು ಪ್ರಕೃತಿಯಲ್ಲಿಯೇ ಇದ್ದುಕೊಂಡು ಅದರಿಂದ ಹುಟ್ಟಿದ ಗುಣಗಳನ್ನು ಉಪಭೋಗಿಸುವಂತೆ (ಆಶ್ರಯಿಸಿರುವಂತೆ) ಕಾಣುತ್ತಾನೆ. ಆದರೆ ಅವನು ಅಕರ್ತನು (ಯಾವ ಕಾರ್ಯವನ್ನೂ ಮಾಡುವವನಲ್ಲ.) ನಿರ್ಲೇಪನು (ಯಾವುದರಿಂದಲೂ ಲಿಪ್ತನಾಗುವುದಿಲ್ಲ). ನಿತ್ಯನು, ಸಮಸ್ತ ಕಾರ್ಯಗಳನ್ನೂ ಮಧ್ಯಸ್ಥನಾಗಿದ್ದು ವೀಕ್ಷಿಸುವವನು.

ಕಾರ್ಯಕರಣಕರ್ತೃತ್ವೇ ಹೇತುಃ ಪ್ರಕೃತಿರುಚ್ಯತೇ ।
ಪುರುಷಃ ಸುಖದುಃಖಾನಾಂ ಭೋಕ್ತೃತ್ವೇ ಹೇತುರುಚ್ಯತೇ ॥೧೧೭೧॥

ಅಜರೋಽಯಮಚಿನ್ತ್ಯೋಽಯಮವ್ಯಕ್ತೋಽಯಂ ಸನಾತನಃ ।
ದೇಹೀ ತೇಜೋಮಯೋ ದೇಹೇ ತಿಷ್ಠತೀತ್ಯಪರೇ ವಿದುಃ ॥೧೧೭೨॥

ಅಪರೇ ಸರ್ವಲೋಕಾಂಶ್ಚ ವ್ಯಾಪ್ಯತಿಷ್ಠನ್ತಮೀಶ್ವರಮ್ ।
ಬ್ರುವತೇ ಕೇಚಿದತ್ರೈವ ತಿಲತೈಲವದಾಸ್ಥಿತಮ್ ॥೧೧೭೩॥

ಕಾರ್ಯ ಮತ್ತು ಕರಣಗಳ ಕರ್ತೃತ್ವಕ್ಕೆ (ಕಾರ್ಯ-ಕರಣಗಳೆರಡನ್ನೂ ಸಿದ್ಧಪಡಿಸುವುದಕ್ಕೆ) ಪ್ರಕೃತಿಯೇ ಮೂಲಕಾರಣವೆನ್ನುತ್ತಾರೆ. ಸುಖ-ದುಃಖಗಳ ಉಪಭೋಗಕ್ಕೆ ಪುರುಷನೇ ಕಾರಣವೆಂದು ಹೇಳುತ್ತಾರೆ. ಕೆಲವರು ಮುಪ್ಪಿಲ್ಲದವನೂ, ಅವ್ಯಕ್ತನೂ, ಸನಾತನನೂ, ತೇಜೋಮಯನೂ ಆದ ಆತ್ಮನು ಈ ಶರೀರದಲ್ಲಿಯೇ ಇರುವನೆಂದೂ ಹೇಳುತ್ತಾರೆ. ಮತ್ತೆ ಕೆಲವರು ಎಲ್ಲ ಲೋಕಗಳನ್ನೂ ವ್ಯಾಪಿಸಿರುವ ಈಶ್ವರನೇ

ಈ ಶರೀರದಲ್ಲಿ ಎಳ್ಳಿನಲ್ಲಿರುವ ಎಣ್ಣೆಯಂತೆ ಇಲ್ಲಿ ಇರುವ ಆತ್ಮನೆಂದು ಹೇಳು ತ್ತಾರೆ.

ಅಪರೇ ನಾಸ್ತಿಕಾ ಮೂಢಾ ಭಿನ್ನತ್ವಾತ್ಸ್ಥೂಲಲಕ್ಷಣೈಃ ।
ನಾಸ್ತ್ಯಾತ್ಮೇತಿ ವಿನಿಶ್ಚಿತ್ಯ ಪ್ರಜಾಸ್ತೇ ನಿರಯಾಲಯಾಃ ।
ಏವಂ ನಾನಾವಿಧಾನೇನ ವಿಮೃಶನ್ತಿ ಮಹೇಶ್ವರಮ್ ॥೧೧೭೪॥

ಮೂರ್ಖರಾದ ಇತರ ನಾಸ್ತಿಕರು ಆತ್ಮನು ಸ್ಥೂಲಲಕ್ಷಣಗಳಿಂದ ಭಿನ್ನ ನಾಗಿರುವುದರಿಂದ ಆತ್ಮನ ಸತ್ತೆಯೇ ಇಲ್ಲವೆಂದು ಹೇಳುತ್ತಾರೆ. 'ಆತ್ಮನೇ ಇಲ್ಲ'–ಎಂದು ಹೇಳುವ ಈ ನಾಸ್ತಿಕರೂ ಅವಸಾನಾನಂತರ ನರಕನಿವಾಸಿ ಗಳಾಗುತ್ತಾರೆ. ಹೀಗೆ ವಿದ್ವಾಂಸರು ಪರಮೇಶ್ವರನನ್ನು ನಾನಾವಿಧವಾಗಿ ವಿಮರ್ಶೆಮಾಡುತ್ತಾರೆ."

ಉಮೆ :

ಊಹವಾನ್ಬ್ರಾಹ್ಮಣೋ ಲೋಕೇ ನಿತ್ಯಮಕ್ಷರಮವ್ಯಯಮ್ ।
ಅಸ್ತ್ಯಾತ್ಮಾ ಸರ್ವದೇಹೇಷು ಹೇತುಸ್ತತ್ರ ಸುದುರ್ಗಮಃ ॥೧೧೭೫॥

"ಪೂಜ್ಯನೇ! ಲೋಕದಲ್ಲಿ ವಿಚಾರಶೀಲರಾದ ಬ್ರಾಹ್ಮಣರೂ– 'ಆತ್ಮನು ಎಲ್ಲರ ದೇಹಗಳಲ್ಲಿಯೂ ಇದ್ದಾನೆ ; ಅವನು ನಿತ್ಯನೂ, ಅಕ್ಷರನೂ ಮತ್ತು ಅವ್ಯಯನೂ ಆಗಿದ್ದಾನೆ'–ಎಂದು ಹೇಳುತ್ತಾರೆ. ಆದರೆ ಅದನ್ನು ಕಾರಣಗಳ ನಿರೂಪಣೆಯಿಂದ ಸ್ಥಿರಪಡಿಸಿಹೇಳುವುದು ಅತ್ಯಂತಕಠಿಣವೆಂದು ನಾನು ಭಾವಿಸುತ್ತೇನೆ."

ಮಹೇಶ್ವರ :

ಋಷಿಭಿಶ್ಚಾಪಿ ದೇವೈಶ್ಚ ವ್ಯಕ್ತಮೇಷ ನ ದೃಶ್ಯತೇ ।
ದೃಷ್ಟ್ವಾ ತು ತಂ ಮಹಾತ್ಮಾನಂ ಪುನಸ್ತನ್ನ ನಿವರ್ತತೇ ॥೧೧೭೬॥
ತಸ್ಮಾತ್ತದ್ದರ್ಶನಾದೇವ ವಿನ್ದತೇ ಪರಮಾಂ ಗತಿಮ್ ।

"ದೇವಿ! ಋಷಿಗಳೇ ಆಗಲೀ, ದೇವತೆಗಳೇ ಆಗಲೀ–ಪರಮಾತ್ಮ ನನ್ನು ಪ್ರತ್ಯಕ್ಷವಾಗಿ ಕಾಣಲಾರರು. ನಿಶ್ಚಯವಾಗಿಯೂ ಯಾರು ಮಹಾತ್ಮನಾದ ಆ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವರೋ–ಅಂತಹ

ವರು ಈ ಸಂಸಾರಕ್ಕೆ ಪುನಃ ಹಿಂದಿರುಗುವುದಿಲ್ಲ. ಆದುದರಿಂದ ಹೃತ್ಕಮಲ ದಲ್ಲಿರುವ ಪರಮಾತ್ಮನನ್ನು ದರ್ಶನಮಾಡುವುದರಿಂದಲೇ ಯೋಗಿಗಳು ಪರಮಗತಿಯನ್ನು ಹೊಂದುತ್ತಾರೆ.

ದೇವಿ! ಹೀಗೆ ನಿನಗೆ ಸನಾತನವಾದ ಸಾಂಖ್ಯಧರ್ಮವನ್ನು ಹೇಳಿರು ತ್ತೇನೆ. ಈ ಸಾಂಖ್ಯಧರ್ಮವು ಋಷಿಶ್ರೇಷ್ಠರಾದ ಕಪಿಲನೇ ಮೊದಲಾದ ಆಚಾರ್ಯರಿಂದ ಆಶ್ರಯಿಸಲ್ಪಟ್ಟಿದೆ."

* * *

ಯೋಗಧರ್ಮದ ಪ್ರತಿಪಾದನೆ ಮತ್ತು ಫಲದ ವರ್ಣನೆ

ಮಹೇಶ್ವರನು ಹೇಳುತ್ತಾನೆ :

"ಪ್ರಿಯಳೇ! ಸಾಂಖ್ಯಜ್ಞಾನದಲ್ಲಿ ಆಸಕ್ತರಾಗಿರುವವರ ಧರ್ಮವನ್ನು ನಾನು ನಿನಗೆ ಯಥಾವತ್ತಾಗಿ ಹೇಳಿರುತ್ತೇನೆ. ಈಗ ನಾನು ನಿನಗೆ ಯೋಗಧರ್ಮವನ್ನು ಸಮಗ್ರವಾಗಿ ಹೇಳುವೆನು. ಏಕಾಗ್ರಚಿತ್ತಳಾಗಿ ಕೇಳು.

ಸ ಚ ಯೋಗೋ ದ್ವಿಧಾ ಭಿನ್ನೋ ಬ್ರಹ್ಮದೇವರ್ಷಿಸಮ್ಮತಃ ।
ಸಮಾನಮುಭಯತ್ರಾಪಿ ವೃತ್ತಂ ಶಾಸ್ತ್ರಪ್ರಚೋದಿತಮ್ ॥೧೧೭೯॥

ಬ್ರಹ್ಮರ್ಷಿಗಳಿಂದಲೂ ದೇವರ್ಷಿಗಳಿಂದಲೂ ಪುರಸ್ಕೃತವಾಗಿರುವ ಯೋಗವು ಸಬೀಜ ಮತ್ತು ನಿರ್ಬಿಜಗಳೆಂಬ ಭೇದಗಳಿಂದ ಎರಡು ಪ್ರಕಾರ ವಾಗಿದೆ. ಆ ಎರಡರಲ್ಲಿಯೂ ಶಾಸ್ತ್ರೋಕ್ತವಾದ ಸದಾಚಾರಗಳು ಸಮಾನವೇ ಆಗಿವೆ.

ಸ ಚಾಷ್ಟಗುಣಮೈಶ್ವರ್ಯಮಧಿಕೃತ್ಯ ವಿಧೀಯತೇ ।
ಸಾಯುಜ್ಯಂ ಸರ್ವದೇವಾನಾಂ ಯೋಗಧರ್ಮಃ ಪರಾಶ್ರಿತಃ ॥೧೧೮೦॥

ಜ್ಞಾನಂ ಸರ್ವಸ್ಯ ಯೋಗಸ್ಯ ಮೂಲಮಿತ್ಯವಧಾರಯ ।
ವ್ರತೋಪವಾಸನಿಯಮೈಃ ತತ್ಸರ್ವಂ ಚಾಪಿ ಬೃಂಹಯೇತ್ ॥೧೧೮೧॥

ಯೋಗಶಾಸ್ತ್ರವು ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ, ವಶಿತ್ವ–ಈ ಎಂಟು ಐಶ್ವರ್ಯಗಳನ್ನೂ ಅಧಿಕರಿಸಿ ನಿರೂಪಿತವಾಗಿದೆ. ಸರ್ವದೇವತೆಗಳ ಸಾಯುಜ್ಯಪ್ರಾಪ್ತಿಯೇ ಪರಾಶ್ರಿತವಾದ

ಯೋಗಧರ್ಮವಾಗಿದೆ. ಜ್ಞಾನವೇ ಸಕಲಯೋಗಕ್ಕೂ ಮೂಲವೆಂದು ತಿಳಿ. ಸಾಧಕನು ವ್ರತೋಪವಾಸ-ನಿಯಮಗಳಿಂದ ಸಂಪೂರ್ಣವಾದ ಯೋಗ ಧರ್ಮವನ್ನು ವೃದ್ಧಿಪಡಿಸಿಕೊಳ್ಳಬೇಕು.

ಐಕಾಗ್ರ್ಯಂ ಬುದ್ಧಿಮನಸೋರಿನ್ದ್ರಿಯಾಣಾಂ ಚ ಸರ್ವಶಃ ।
ಆತ್ಮನೋಽವ್ಯಯಿನಃ ಪ್ರಾಜ್ಞೇ ಜ್ಞಾನಮೇತತ್ತು ಯೋಗಿನಾಮ್ ॥೧೧೮೭॥

ಅರ್ಚಯೇದ್ಬ್ರಾಹ್ಮಣಾನಗ್ನಿಂ ದೇವತಾಯತನಾನಿ ಚ ।
ವರ್ಜಯೇದಶಿವಂ ಭಾವಂ ಸರ್ವಸತ್ತ್ವಮುಪಾಶ್ರಿತಃ ॥೧೧೮೮॥

ಪ್ರಾಜ್ಞಳೇ! ಅವಿನಾಶಿಯಾದ ಆತ್ಮನಲ್ಲಿ ಬುದ್ಧಿ, ಮನಸ್ಸು ಮತ್ತು ಎಲ್ಲ ಇಂದ್ರಿಯಗಳನ್ನೂ ಕೇಂದ್ರೀಕರಿಸಬೇಕು. ಇದೇ ಯೋಗದ ಜ್ಞಾನ ವಾಗಿದೆ. ಬ್ರಾಹ್ಮಣರನ್ನೂ, ಅಗ್ನಿಯನ್ನೂ, ದೇವಮಂದಿರಗಳನ್ನೂ (ದೇವತೆ ಗಳನ್ನೂ) ಪೂಜಿಸಬೇಕು. ಯಾವಾಗಲೂ ಸತ್ತ್ವಗುಣವನ್ನೇ ಆಶ್ರಯಿಸಿ ಅಮಂಗಳಕರವಾದ ಭಾವವನ್ನು ತ್ಯಾಗಮಾಡಬೇಕು.

ದಾನಮಧ್ಯಯನಂ ಶ್ರದ್ಧಾ ವ್ರತಾನಿ ನಿಯಮಾಸ್ತಥಾ ।
ಸತ್ಯಮಾಹಾರಶುದ್ಧಿಶ್ಚ ಶೌಚಮಿನ್ದ್ರಿಯನಿಗ್ರಹಃ ।
ಏತೈಶ್ಚ ವರ್ಧತೇ ತೇಜಃ ಪಾಪಂ ಚಾಪ್ಯವಧೂಯತೇ ॥೧೧೮೯॥

ದಾನ, ಅಧ್ಯಯನ, ಶ್ರದ್ಧೆ, ವ್ರತ, ನಿಯಮ, ಸತ್ಯ, ಆಹಾರಶುದ್ಧಿ, ಶೌಚ ಮತ್ತು ಇಂದ್ರಿಯನಿಗ್ರಹ–ಇವುಗಳ ಆಚರಣೆಯಿಂದ ತೇಜಸ್ಸು ವೃದ್ಧಿಸುತ್ತದೆ. ಪಾಪವೂ ಧೂಳೀಪಟಲವಾಗುತ್ತದೆ.

ನಿರ್ಧೂತಪಾಪಸ್ತೇಜಸ್ವೀ ನಿರಾಹಾರೋ ಜಿತೇನ್ದ್ರಿಯಃ ।
ಅಮೋಘೋ ನಿರ್ಮಲೋ ದಾನ್ತಃ ಪಶ್ಚಾದ್ಯೋಗಂ
ಸಮಾಚರೇತ್ ॥೧೧೯೦॥

ಮೊದಲು ಸಾಧಕನು ಪಾಪರಹಿತನೂ, ತೇಜಸ್ವಿಯೂ, ನಿರಾ ಹಾರನೂ, ಜಿತೇಂದ್ರಿಯನೂ, ಅಮೋಘನೂ (ಗುರಿಯನ್ನು ಮುಟ್ಟುವ ಸಾಮರ್ಥ್ಯವುಳ್ಳವನೂ), ನಿರ್ಮಲನೂ ಮತ್ತು ಮನಸ್ಸನ್ನು ದಮನ ಮಾಡುವವನೂ ಆಗಿ ಅನಂತರ ಯೋಗಾಭ್ಯಾಸವನ್ನು ಮಾಡಬೇಕು.

ಏಕಾನ್ತೇ ವಿಜನೇ ದೇಶೇ ಸರ್ವತಃ ಸಂವೃತೇ ಶುಚೌ ।
ಕಲ್ಪಯೇದಾಸನಂ ತತ್ರ ಸ್ವಾಸ್ತೀರ್ಣಂ ಮೃದುಭಿಃ ಕುಶೈಃ ॥೧೧೮೬॥

ನಿರ್ಜನವಾದ ಪ್ರದೇಶದಲ್ಲಿ ಎಲ್ಲ ಕಡೆಗಳಲ್ಲಿಯೂ ಆವರಣವಿರುವ ಪವಿತ್ರವಾದ ಏಕಾಂತಸ್ಥಳದಲ್ಲಿ ಕೋಮಲವಾದ ದರ್ಭೆಗಳನ್ನು ನೆಲದ ಮೇಲೆ ಹರಡಿ ಆಸನವನ್ನು ರಚಿಸಿಕೊಳ್ಳಬೇಕು.

ಉಪವಿಶ್ಯಾಸನೇ ತಸ್ಮಿನ್ನೃಜುಕಾಯಶಿರೋಧರಃ ।
ಅವ್ಯಗ್ರಃ ಸುಖಮಾಸೀನಃ ಸ್ವಾಙ್ಗಾನಿ ನ ವಿಕಮ್ಪಯೇತ್ ।
ಸಮ್ಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್ ॥೧೧೮೭॥

ಆ ದರ್ಭಾಸನದಲ್ಲಿ ಕುಳಿತು ಶರೀರ-ಶಿರಸ್ಸುಗಳನ್ನು ನೆಟ್ಟಗೆ ಇಟ್ಟು ಕೊಳ್ಳಬೇಕು. ಸುಖಾಸನದಲ್ಲಿ ಕುಳಿತು ಏಕಾಗ್ರಚಿತ್ತನಾಗಿರಬೇಕು. ಶರೀರದ ಅವಯವಗಳನ್ನು ಅಲ್ಲಾಡಿಸಬಾರದು. ದಿಕ್ಕುಗಳ ಕಡೆಗೆ ನೋಡದೇ ಮೂಗಿನ ತುದಿಯಲ್ಲಿ ದೃಷ್ಟಿಯನ್ನಿಟ್ಟು ಧ್ಯಾನಮಗ್ನನಾಗಬೇಕು.

ಮನೋಽವಸ್ಥಾಪನಂ ದೇವಿ ಯೋಗಸ್ಯೋಪನಿಷದ್ಭವೇತ್ ।
ತಸ್ಮಾತ್ಸರ್ವಪ್ರಯತ್ನೇನ ಮನೋಽವಸ್ಥಾಪಯೇತ್ಸದಾ ॥೧೧೮೮॥

ತ್ವಕ್ಶ್ರೋತ್ರಂ ಚ ತತೋ ಜಿಹ್ವಾಂ ಘ್ರಾಣಂ ಚಕ್ಷುಶ್ಚ ಸಂಹರೇತ್ ।
ಪಞ್ಚೇನ್ದ್ರಿಯಾಣಿ ಸಂಧಾಯ ಮನಸಿ ಸ್ಥಾಪಯೇದ್ಬುಧಃ ॥೧೧೮೯॥

ಮನಸ್ಸನ್ನು ದೃಢವಾಗಿ ಸ್ತಂಭನಗೊಳಿಸುವುದು ಯೋಗಸಿದ್ಧಿಯ ರಹಸ್ಯವಾಗಿದೆ. ಆದುದರಿಂದ ಸರ್ವಪ್ರಯತ್ನದಿಂದಲೂ ಮನಸ್ಸನ್ನು ಸ್ಥಿರ ಗೊಳಿಸಬೇಕು. ಚರ್ಮ, ಕಿವಿ, ನಾಲಿಗೆ, ಮೂಗು ಮತ್ತು ಕಣ್ಣು–ಇವುಗಳನ್ನು ಅವುಗಳ ವಿಷಯಗಳಾದ ಸ್ಪರ್ಶ, ಶಬ್ದ, ರಸ, ಗಂಧ ಮತ್ತು ರೂಪಗಳಿಂದ ಹಿಂದಕ್ಕೆ ತೆಗೆದುಕೊಳ್ಳಬೇಕು. ಹೀಗೆ ಐದು ಇಂದ್ರಿಯಗಳನ್ನು ಏಕಾಗ್ರಗೊಳಿಸಿ ಮನಸ್ಸಿನಲ್ಲಿ ಸ್ಥಾಪಿಸಬೇಕು. (ಲೀನಗೊಳಿಸಬೇಕು.)

ಸರ್ವಂ ಚಾಪೋಹ್ಯ ಸಂಕಲ್ಪಮಾತ್ಮನಿ ಸ್ಥಾಪಯೇನ್ಮನಃ ।
ಯದೈತಾನ್ಯವತಿಷ್ಠನ್ತೇ ಮನಃಷಷ್ಠಾನಿ ಚಾತ್ಮನಿ ॥೧೧೯೦॥

ಪ್ರಾಣಾಪಾನೌ ತದಾ ತಸ್ಯ ಯುಗಪತ್ತಿಷ್ಠತೋ ವಶೇ ।
ಪ್ರಾಣೇ ಹಿ ವಶಮಾಪನ್ನೇ ಯೋಗಸಿದ್ಧಿರ್ಧ್ರುವಾ ಭವೇತ್ ॥೧೯೧॥

ಎಲ್ಲ ಸಂಕಲ್ಪಗಳನ್ನೂ ಮನಸ್ಸಿನಿಂದ ದೂರೀಕರಿಸಿ ಶುದ್ಧವಾದ ಮನಸ್ಸನ್ನು ಆತ್ಮನಲ್ಲಿ ಸ್ಥಾಪಿಸಬೇಕು. ಆರನೆಯದಾದ ಮನಸ್ಸಿನಿಂದ ಕೂಡಿದ ಐದು ಇಂದ್ರಿಯಗಳು ಯಾವಾಗ ಆತ್ಮನಲ್ಲಿ ಉಪಸ್ಥಿತವಾಗುವುದೋ ಆ ಸಮಯದಲ್ಲಿ ಪ್ರಾಣವಾಯುವು ವಶವಾಯಿತೆಂದರೆ ಯೋಗಸಿದ್ಧಿಯು ನಿಶ್ಚಿತವಾದಂತೆಯೇ ಸರಿ.

ಶರೀರಂ ಚಿನ್ತಯೇತ್ಸರ್ವಂ ವಿಪಾಟ್ಯ ಚ ಸಮೀಪತಃ ।
ಅನ್ತರ್ದೇಹಗತಿಂ ಚಾಪಿ ಪ್ರಾಣಾನಾಂ ಪರಿಚಿನ್ತಯೇತ್ ॥೧೯೨॥

ಸಂಪೂರ್ಣಶರೀರವೂ ಹತ್ತಿರದಿಂದ ದೂರ-ದೂರಕ್ಕೆ ಹೋಗುತ್ತಿರುವುದಾಗಿ ಭಾವಿಸಿ ಧ್ಯಾನಮಾಡಬೇಕು. ಶರೀರದ ಒಳಗಿರುವ ಪ್ರಾಣಗಳ ಸಂಚಾರವನ್ನು ಕುರಿತು ಚಿಂತಿಸಬೇಕು.

ತತೋ ಮೂರ್ಧಾನಮಗ್ನಿಂ ಚ ಶರೀರಂ ಪರಿಪಾಲಯೇತ್ ।
ಪ್ರಾಣೋ ಮೂರ್ಧನಿ ಚ ಶ್ವಾಸೋ ವರ್ತಮಾನೋ ವಿಚೇಷ್ಟತೇ ॥

ಸಜ್ಜಸ್ತು ಸರ್ವಭೂತಾತ್ಮಾ ಪುರುಷಃ ಸ ಸನಾತನಃ ।
ಮನೋ ಬುದ್ಧಿರಹಙ್ಕಾರೋ ಭೂತಾನಿ ವಿಷಯಾಶ್ಚ ಸಃ ॥೧೯೪॥

ಬಸ್ತಿಮೂಲಂ ಗುದಂ ಚೈವ ಪಾವಕಂ ಚ ಸಮಾಶ್ರಿತಃ ।
ವಹನ್ಮೂತ್ರಂ ಪುರೀಷಂ ಚ ಸದಾಪಾನಃ ಪ್ರವರ್ತತೇ ॥೧೯೫॥

ಅಥ ಪ್ರವೃತ್ತಿರ್ದೇಹೇಷು ಕರ್ಮಾಪಾನಸ್ಯ ಸಮ್ಮತಮ್ ।
ಉದೀರಯನ್ಸರ್ವಧಾತೂನತ ಊರ್ಧ್ವಂ ಪ್ರವರ್ತತೇ ।
ಉದಾನ ಇತಿ ತಂ ವಿದ್ಯುರಧ್ಯಾತ್ಮಕುಶಲಾ ಜನಾಃ ॥೧೯೬॥

ಅನಂತರ ತಲೆಯನ್ನೂ ಅಗ್ನಿಯನ್ನೂ ಶರೀರವನ್ನೂ ಪರಿಪಾಲಿಸ ಬೇಕು. ಪ್ರಾಣವು ತಲೆಯಲ್ಲಿ ಶ್ವಾಸರೂಪದಲ್ಲಿದ್ದು ಕಾರ್ಯಮಾಡುತ್ತದೆ. ಸದಾ ಸನ್ನದ್ಧವಾಗಿರುವ ಆ ಪ್ರಾಣವೇ ಎಲ್ಲ ಪ್ರಾಣಗಳ ಆತ್ಮವೂ, ಸನಾತನ

ಪುರುಷನೂ ಆಗಿದೆ. ಆ ಪ್ರಾಣವೇ ಮನಸ್ಸೂ, ಬುದ್ಧಿಯೂ, ಅಹಂಕಾರವೂ, ಪಂಚಭೂತಗಳೂ ಮತ್ತು ಅವುಗಳ ವಿಷಯಗಳೂ ಆಗಿದೆ. ಬಸ್ತಿಮೂಲ (ಹೊಕ್ಕಳಿನ ಕೆಳಭಾಗ), ಗುದ, ಅಗ್ನಿಯನ್ನು ಆಶ್ರಯಿಸಿರುವ ಅಪಾನ ವಾಯು–ಇವುಗಳು ಮೂತ್ರವನ್ನೂ ಪುರೀಷವನ್ನೂ ಹೊತ್ತು (ಹೊರ ಹಾಕುತ್ತಾ) ತಮ್ಮ ಕರ್ಮಗಳಲ್ಲಿ ತೊಡಗಿರುತ್ತವೆ. ದೇಹಗಳಲ್ಲಿ ಪ್ರವೃತ್ತಿ ಕರ್ಮವು ಅಪಾನವಾಯುವಿಗೆ ಸಮ್ಮತವಾದುದು. ಯಾವ ವಾಯುವು ಸಮಸ್ತಧಾತುಗಳನ್ನೂ ಅಪಾನದಿಂದ ಪ್ರತ್ಯೇಕಿಸಿ ಊರ್ಧ್ವಮುಖವಾಗಿ ಪ್ರೇರಿಸುವುದೋ–ಅಂತಹ ವಾಯುವನ್ನು ಆಧ್ಯಾತ್ಮವಿದ್ಯೆಯಲ್ಲಿ ಕುಶಲರಾದ ವಿದ್ವಾಂಸರು ಉದಾನವಾಯುವೆಂದು ತಿಳಿಯುತ್ತಾರೆ.

ಸಂಧೌಸಂಧೌ ಚ ನಿರ್ವಿಷ್ಟಃ ಸರ್ವಚೇಷ್ಟಾಪ್ರವರ್ತಕಃ ।
ಶರೀರೇಷು ಮನುಷ್ಯಾಣಾಂ ವ್ಯಾನ ಇತ್ಯುಪದಿಶ್ಯತೇ ॥೧೯೮॥

ಧಾತುಷ್ವಗ್ನೌ ಚ ವಿತತಃ ಸಮಾನೋಽಗ್ನಿಃ ಸಮೀರಣಃ ।
ಸ ಏವ ಸರ್ವಚೇಷ್ಟಾನಾಮನ್ತಕಾಲೇ ನಿವರ್ತಕಃ ॥೧೯೯॥

ಯಾವ ವಾಯುವು ಮನುಷ್ಯನ ಶರೀರದ ಪ್ರತಿಯೊಂದು ಸಂಧಿಯ ಲ್ಲಿಯೂ ವ್ಯಾಪಿಸಿ ಸಂಧಿಗಳಲ್ಲಾಗುವ ಕಾರ್ಯಕ್ಕೆ ಪ್ರಚೋದಕವಾಗಿರು ವುದೋ–ಆ ವಾಯುವನ್ನು ವ್ಯಾನವೆಂದು ಕರೆಯುತ್ತಾರೆ. ಯಾವ ವಾಯುವು ಧಾತುಗಳಲ್ಲಿಯೂ ಮತ್ತು ಅಗ್ನಿಯಲ್ಲಿಯೂ ವ್ಯಾಪಿಸಿರುವುದೋ ಅದು ಅಗ್ನಿಸ್ವರೂಪವಾದ ಸಮಾನವೆಂಬ ವಾಯುವಾಗಿದೆ. ಆ ವಾಯುವು ಪ್ರಾಣಿಗಳ ಅಂತ್ಯಕಾಲದಲ್ಲಿ ಸಮಸ್ತಚೇಷ್ಟೆಗಳನ್ನೂ ನಿವೃತ್ತಿಗೊಳಿಸುವುದಾಗಿದೆ.

ಪ್ರಾಣಾನಾಂ ಸಂನಿಪಾತೇಷು ಸಂಸರ್ಗಾದ್ಯಃ ಪ್ರಜಾಯತೇ ।
ಊಷ್ಮಾ ಸೋಽಗ್ನಿರಿತಿ ಜ್ಞೇಯಃ ಸೋಽನ್ನಂ ಪಚತಿ ದೇಹಿನಾಮ್ ॥

ಅಪಾನಪ್ರಾಣಯೋರ್ಮಧ್ಯೇ ವ್ಯಾನೋದಾನಾವುಪಾಶ್ರಿತೌ ।
ಸಮನ್ವಿತಃ ಸಮಾನೇನ ಸಮ್ಯಕ್ಪಚತಿ ಪಾವಕಃ ॥೨೦೦॥

ಶರೀರಮಧ್ಯೇ ನಾಭಿಸ್ಸ್ಯಾನ್ನಾಭ್ಯಾಮಗ್ನಿಃ ಪ್ರತಿಷ್ಠಿತಃ ।
ಅಗ್ನೌ ಪ್ರಾಣಾಶ್ಚ ಸಂಯುಕ್ತಾ ಪ್ರಾಣೇಷ್ವಾತ್ಮಾ ವ್ಯವಸ್ಥಿತಃ ॥೨೦೧॥

ಸಮಸ್ತಪ್ರಾಣಗಳೂ ಪರಸ್ಪರ ಸೇರಿದಾಗ ಸಂಸರ್ಗದಿಂದ ಹುಟ್ಟುವ ತಾಪಕ್ಕೆ ಜಠರಾಗ್ನಿಯೆಂದು ಹೆಸರು. ಆ ಅಗ್ನಿಯು ಪ್ರಾಣಿಗಳು ತಿನ್ನುವ ಅನ್ನವನ್ನು ಜೀರ್ಣಿಸುತ್ತದೆ. ಅಪಾನವಾಯು ಮತ್ತು ಪ್ರಾಣವಾಯುಗಳ ಮಧ್ಯದಲ್ಲಿ ವ್ಯಾನ ಮತ್ತು ಉದಾನವಾಯುಗಳಿವೆ. ಸಮಾನವಾಯುವಿನಿಂದ ಯುಕ್ತವಾದ ಜಠರಾಗ್ನಿಯು ಅನ್ನವನ್ನು ಚೆನ್ನಾಗಿ ಪಚನಮಾಡುತ್ತದೆ. ಶರೀರದ ಮಧ್ಯಭಾಗದಲ್ಲಿ ನಾಭಿಯಿದೆ. ಆ ನಾಭಿಯಲ್ಲಿಯೂ ಅಗ್ನಿಯಿದೆ. ಆ ಅಗ್ನಿಯಲ್ಲಿ ಪ್ರಾಣಗಳೂ ಸೇರಿಕೊಂಡಿವೆ. ಆ ಪ್ರಾಣಗಳಲ್ಲಿಯೇ ಆತ್ಮದ ಉಪಸ್ಥಿತಿಯಿದೆ.

ಪಕ್ವಾಶಯಸ್ತ್ವಧೋ ನಾಭೇರೂರ್ಧ್ವಮಾಮಾಶಯಸ್ತಥಾ ।
ನಾಭಿರ್ಮಧ್ಯೇ ಶರೀರಸ್ಯ ಸರ್ವಪ್ರಾಣಾಶ್ಚ ಸಂಶ್ರಿತಾಃ ॥೧೨೦೨॥

ಸ್ಥಿತಾಃ ಪ್ರಾಣಾದಯಃ ಸರ್ವೇ ತಿರ್ಯಗೂರ್ಧ್ವಮಧಶ್ಚರಾಃ ।
ವಹನ್ತ್ಯನ್ನರಸಾನ್ನಾಡ್ಯೋ ದಶಪ್ರಾಣಾಗ್ನಿಚೋದಿತಾಃ ॥೧೨೦೩॥

ಯೋಗಿನಾಮೇಷ ಮಾರ್ಗಸ್ತು ಪಞ್ಚಸ್ವೇತೇಷು ತಿಷ್ಠತಿ ।
ಜಿತಶ್ರಮಃ ಸಮಾಸೀನೋ ಮೂರ್ಧನ್ಯಾತ್ಮಾನಮಾದಧೇತ್ ॥೧೨೦೪॥

ನಾಭಿಯ ಕೆಳಭಾಗದಲ್ಲಿ ಪಕ್ವಾಶಯವೂ ಮೇಲ್ಭಾಗದಲ್ಲಿ ಆಮಾಶಯವೂ ಇದೆ. ಶರೀರದ ಮಧ್ಯಭಾಗದಲ್ಲಿ ನಾಭಿಯೂ, ಆ ನಾಭಿಯನ್ನಾಶ್ರಯಿಸಿ ಸಮಸ್ತಪ್ರಾಣಗಳೂ ಇವೆ. ಪ್ರಾಣಗಳೇ ಮೊದಲಾದ ಸಮಸ್ತ ವಾಯುಗಳೂ ಊರ್ಧ್ವಮುಖವಾಗಿಯೂ, ಅಧೋಮುಖವಾಗಿಯೂ, ಅಕ್ಕ-ಪಕ್ಕಗಳಲ್ಲಿಯೂ ಸಂಚರಿಸುತ್ತವೆ. ಹತ್ತು ಪ್ರಾಣಗಳಿಂದಲೂ ಮತ್ತು ಅಗ್ನಿಯಿಂದಲೂ ಪ್ರಚೋದಿತವಾದ ನಾಡಿಗಳು ಅನ್ನರಸವನ್ನು ಒಯ್ಯುತ್ತವೆ. ಪಂಚಪ್ರಾಣಗಳನ್ನೂ ಆಧರಿಸಿ ನಿಂತಿರುವ ಈ ಮಾರ್ಗವೇ ಯೋಗಿಗಳ ಮಾರ್ಗವಾಗಿದೆ. ಸಾಧಕನು ಶ್ರಮವನ್ನು ಜಯಿಸಿ ಆಸನದಲ್ಲಿ ಕುಳಿತು ಆತ್ಮನನ್ನು ಬ್ರಹ್ಮರಂಧ್ರದಲ್ಲಿ ಸ್ಥಾಪಿಸಬೇಕು.

ಮೂರ್ಧನ್ಯಾತ್ಮಾನಮಾಧಾಯ ಭ್ರುವೋರ್ಮಧ್ಯೇ ಮನಸ್ತಥಾ ।
ಸಂನಿರುಧ್ಯ ತತಃ ಪ್ರಾಣಾನಾತ್ಮಾನಂ ಚಿನ್ತಯೇತ್ಪರಮ್ ॥೧೨೦೫॥

ಪ್ರಾಣೇ ತ್ವಪಾನಂ ಯುಞ್ಜೀತ ಪ್ರಾಣಾಂಶ್ಚಾಪಾನಕರ್ಮಣಿ ।
ಪ್ರಾಣಾಪಾನಗತೀ ರುದ್ಧ್ವಾ ಪ್ರಾಣಾಯಾಮಪರೋ ಭವೇತ್ ॥೧೨೦೭॥

ಬ್ರಹ್ಮರಂಧ್ರದಲ್ಲಿ ಆತ್ಮನನ್ನು ಅನುಸಂಧಾನಮಾಡಿ ಎರಡು ಹುಬ್ಬುಗಳ ಮಧ್ಯದಲ್ಲಿ ಮನಸ್ಸನ್ನು ನಿಲ್ಲಿಸಿ, ಪ್ರಾಣಗಳನ್ನು ನಿರೋಧಿಸಿ ಪರಮಾತ್ಮನನ್ನು ಧ್ಯಾನಮಾಡಬೇಕು. ಪ್ರಾಣದಲ್ಲಿ ಅಪಾನವನ್ನು ಸೇರಿಸಬೇಕು. ಪ್ರಾಣಗಳನ್ನು ಅಪಾನಕರ್ಮದಲ್ಲಿ ನಿಯೋಜಿಸಬೇಕು. ಹೀಗೆ ಪ್ರಾಣಾಪಾನಗಳೆರಡರ ಗತಿಗಳನ್ನೂ ನಿರೋಧಿಸಿ ಸಾಧಕನು ಪ್ರಾಣಾಯಾಮದಲ್ಲಿ ನಿರತನಾಗಬೇಕು.

ಏವಮನ್ತಃ ಪ್ರಯುಞ್ಜೀತ ಪಞ್ಚ ಪ್ರಾಣಾನ್ಪರಸ್ಪರಮ್ ।
ವಿಜನೇ ಸಮ್ಮಿತಾಹಾರೋ ಮುನಿಸ್ತೂಷ್ಣೀಂ ನಿರುಚ್ಛ್ವಸನ್ ॥

ಅಶ್ರಾನ್ತಶ್ಚಿನ್ತಯೇದ್ಯೋಗೀ ಉತ್ಥಾಯ ಚ ಪುನಃ ಪುನಃ ।
ತಿಷ್ಠನ್ಗಚ್ಛನ್ಸ್ವಪನ್ವಾಪಿ ಯುಞ್ಜೀತೈವಮತನ್ದ್ರಿತಃ ॥೧೨೦೮॥

ಹೀಗೆ ಸಾಧಕನಾದ ಮುನಿಯು ಏಕಾಂತಪ್ರದೇಶದಲ್ಲಿ ಕುಳಿತು ಮಿತಾಹಾರಿಯಾಗಿ, ತನ್ನ ಅಂತಃಕರಣದಲ್ಲಿ ಐದು ಪ್ರಾಣವಾಯುಗಳನ್ನೂ ಪರಸ್ಪರವಾಗಿ ಸಮಾವೇಶಗೊಳಿಸಬೇಕು. ಮೌನಿಯಾಗಿರಬೇಕು. ಉಚ್ಛ್ವಾಸ ರಹಿತನಾಗಿ ಸ್ವಲ್ಪವೂ ಶ್ರಮವಾಗದಂತೆ ಧ್ಯಾನಮಗ್ನನಾಗಿಬೇಕು. ಯೋಗಿಯು ಪುನಃ ಪುನಃ ಆಸನದಿಂದ ಎದ್ದು ನಿಂತಾಗಲೂ, ಹೋಗುವಾಗಲೂ, ಮಲಗಿದಾಗಲೂ ಆಲಸ್ಯವನ್ನು ಬಿಟ್ಟು ಯೋಗಾಭ್ಯಾಸದಲ್ಲಿ ನಿರತನಾಗಿರಬೇಕು.

ಏವಂ ನಿಯುಞ್ಜತಸ್ತಸ್ಯ ಯೋಗಿನೋ ಯುಕ್ತಚೇತಸಃ ।
ಪ್ರಸೀದತಿ ಮನಃ ಕ್ಷಿಪ್ರಂ ಪ್ರಸನ್ನೇ ದೃಶ್ಯತೇ ಪರಮ್ ॥೧೨೦೯॥

ವಿಧೂಮ ಇವ ದೀಪೋಽಗ್ನಿರಾದಿತ್ಯ ಇವ ರಶ್ಮಿಮಾನ್ ।
ವೈದ್ಯುತೋಽಗ್ನಿರಿವಾಕಾಶೇ ಪುರುಷೋ ದೃಶ್ಯತೇಽವ್ಯಯಃ ॥೧೨೧೦॥

ಈ ರೀತಿಯಲ್ಲಿ ಯಾವನ ಮನಸ್ಸು ಯಾವಾಗಲೂ ಧ್ಯಾನದಲ್ಲಿಯೇ ಮಗ್ನವಾಗಿರುವುದೋ–ಅಂತಹ ಯೋಗಾಭ್ಯಾಸನಿರತನಾದ ಯೋಗಿಯ ಮನಸ್ಸು ಬಹಳ ಬೇಗ ಪ್ರಸನ್ನವಾಗುತ್ತದೆ. ಮನಸ್ಸು ಪ್ರಸನ್ನವಾದೊಡನೆಯೇ

ಪರಮಾತ್ಮತತ್ತ್ವದ ಸಾಕ್ಷಾತ್ಕಾರವಾಗುತ್ತದೆ. ಆ ಸಮಯದಲ್ಲಿ ಅವಿನಾಶಿಯಾದ, ಪುರುಷನಾದ ಪರಮಾತ್ಮನು ಹೊಗೆಯಿಲ್ಲದೇ ದೇದೀಪ್ಯಮಾನನಾಗಿ ಪ್ರಕಾಶಿಸುವ ಅಗ್ನಿಯಂತೆಯೂ, ಅಂಶುಮಾಲಿಯಾದ ಸೂರ್ಯನಂತೆಯೂ, ಆಕಾಶದಲ್ಲಿ ಕೋರೈಸುವ ಮಿಂಚಿನಂತೆಯೂ ಪ್ರಕಾಶಿಸುತ್ತಾನೆ.

ದೃಷ್ಟ್ವಾ ತದಾ ಮನೋ ಜ್ಯೋತಿರೈಶ್ವರ್ಯಾಷ್ಟಗುಣೈರ್ಯುತಃ ।
ಪ್ರಾಪ್ನೋತಿ ಪರಮಂ ಸ್ಥಾನಂ ಸ್ಪೃಹಣೀಯಂ ಸುರೈರಪಿ ॥೧೨೧೧॥

ಆ ಅವಸ್ಥೆಯಲ್ಲಿ ಯೋಗಿಯು ಮನಸ್ಸಿನ ಮೂಲಕವಾಗಿ ಜ್ಯೋತಿರ್ಮಯನಾದ ಪರಮೇಶ್ವರನನ್ನು ಕಂಡುಕೊಂಡು ಅಣಿಮಾದಿ ಅಷ್ಟೈಶ್ವರ್ಯಗಳಿಂದಲೂ ಯುಕ್ತನಾಗಿ ದೇವತೆಗಳೂ ಬಯಸುವ ಪರಮ ಪದವನ್ನು ಹೊಂದುತ್ತಾನೆ.

ಇಮಾನ್ಯೋಗಸ್ಯ ದೋಷಾಂಶ್ಚ ದಶೈವ ಪರಿಚಕ್ಷತೇ ।
ದೋಷೈರ್ವಿಘ್ನೋ ವರಾರೋಹೇ ಯೋಗಿನಾಂ ಕವಿಭಿಃ ಸ್ಮೃತಃ ॥

ವರಾರೋಹಳೇ! ಯೋಗಮಾರ್ಗದಲ್ಲಿ ಹತ್ತು ವಿಧವಾದ ದೋಷಗಳಿವೆಯೆಂದು ವಿದ್ವಾಂಸರು ಹೇಳುತ್ತಾರೆ. ಆ ದೋಷಗಳಿಂದಲೇ ಯೋಗಿಗಳಿಗೆ ಯೋಗಸಾಧನೆಗೆ ವಿಘ್ನವುಂಟಾಗುತ್ತದೆ.

ಕಾಮಃ ಕ್ರೋಧೋ ಭಯಂ ಸ್ವಪ್ನಃ ಸ್ನೇಹಮತ್ಯಶನಂ ತಥಾ ।
ವೈಚಿತ್ತ್ಯಂ ವ್ಯಾಧಿರಾಲಸ್ಯಂ ಲೋಭಶ್ಚ ದಶಮಃ ಸ್ಮೃತಃ ॥೧೨೧೩॥

ಕಾಮ-ಕ್ರೋಧ-ಭಯ-ಸ್ವಪ್ನ-ಸ್ನೇಹ-ಅಧಿಕಭೋಜನ-ವೈಚಿತ್ತ್ಯ (ಮಾನಸಿಕವಿಕಲ್ಪ)-ವ್ಯಾಧಿ-ಆಲಸ್ಯ ಮತ್ತು ಲೋಭ–ಇವೇ ಆ ಹತ್ತು ದೋಷಗಳು.

ಏತೈಸ್ತೇಷಾಂ ಭವೇದ್ವಿಘ್ನೋ ದಶಭಿರ್ದೇವಕಾರಿತೈಃ ।
ತಸ್ಮಾದೇತಾನಪಾಸ್ಯಾದೌ ಯುಞ್ಜೀತ ಚ ಪರಂ ಮನಃ ॥೧೨೧೪॥

ಇಮಾನಪಿ ಗುಣಾನಷ್ಟೌ ಯೋಗಸ್ಯ ಪರಿಚಕ್ಷತೇ ।
ಗುಣೈಸ್ತೈರಷ್ಟಭಿರ್ದಿವ್ಯಮೈಶ್ವರ್ಯಮಧಿಗಮ್ಯತೇ ॥೧೨೧೫॥

ದೇವತೆಗಳಿಂದಲೇ ಮಾಡಲ್ಪಟ್ಟಿರುವ ಈ ಹತ್ತು ವಿಧವಾದ ದೋಷಗಳಿಂದ ಯೋಗಿಗಳ ಸಾಧನೆಗೆ ವಿಘ್ನವುಂಟಾಗುತ್ತದೆ. ಆದುದರಿಂದ ಯೋಗಾಭ್ಯಾಸಕ್ಕೆ ಮೊದಲಾಗಿಯೇ ಈ ಹತ್ತು ದೋಷಗಳನ್ನೂ ದೂರಮಾಡಿ ಮನಸ್ಸನ್ನು ಪರಮಾತ್ಮನಲ್ಲಿ ಸ್ಥಾಪಿಸಬೇಕು. ವಿದ್ವಾಂಸರು ಯೋಗಕ್ಕೆ ಎಂಟು ಗುಣಗಳನ್ನು ಹೇಳಿರುತ್ತಾರೆ. ಆ ಎಂಟು ಗುಣಗಳಿಂದ ಯುಕ್ತನಾದವನು ದಿವ್ಯೈಶ್ವರ್ಯಗಳನ್ನು ಹೊಂದುತ್ತಾನೆ.

ಅಣಿಮಾ ಮಹಿಮಾ ಚೈವ ಪ್ರಾಪ್ತಿಃ ಪ್ರಾಕಾಮ್ಯಮೇವ ಹಿ ।
ಈಶಿತ್ವಂ ಚ ವಶಿತ್ವಂ ಚ ಯತ್ರ ಕಾಮಾವಸಾಯಿತಾ ॥೧೨೧೬॥

ಏತಾನಷ್ಟೌ ಗುಣಾನ್ಪ್ರಾಪ್ಯ ಕಥಂಚಿದ್ಯೋಗಿನಾಂ ವರಾಃ ।
ಈಶಾಃ ಸರ್ವಸ್ಯ ಲೋಕಸ್ಯ ದೇವಾನಾಮಪ್ಯತಿಶೇರತೇ ॥೧೨೧೭॥

ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ ಮತ್ತು ವಶಿತ್ವ–ಇವುಗಳಿಂದ ಮನುಷ್ಯನ ಸಕಲಕಾಮನೆಗಳೂ ಪೂರ್ತಿಯಾಗುತ್ತವೆ. ಯೋಗಿಗಳಲ್ಲಿ ಶ್ರೇಷ್ಠರಾದವರು ಈ ಎಂಟು ಗುಣ ಗಳನ್ನೂ ಎಷ್ಟೇ ಕಷ್ಟವಾದರೂ ಸಾಧಿಸಿಕೊಂಡು ಸಂಪೂರ್ಣಜಗತ್ತನ್ನೂ ಶಾಸನಮಾಡಲು ಸಮರ್ಥರಾಗುತ್ತಾರೆ. ದೇವತೆಗಳನ್ನೂ ಅತಿಶಯಿಸುತ್ತಾರೆ.

ಯೋಗೋಽಸ್ತಿ ನೈವಾತ್ಯಶಿನೋ ನ ಚೈಕಾನ್ತಮನಶ್ನತಃ ।
ನ ಚಾತಿಸ್ವಪ್ನಶೀಲಸ್ಯ ನಾತಿಜಾಗರತಸ್ತಥಾ ॥೧೨೧೮॥

ಹೆಚ್ಚು ತಿನ್ನುವವನಿಗೂ, ಏನನ್ನೂ ತಿನ್ನದೆಯೇ ಇರುವವನಿಗೂ, ಬಹಳವಾಗಿ ನಿದ್ರಿಸುವವನಿಗೂ, ನಿದ್ರೆಮಾಡದೆಯೇ ಇರುವವನಿಗೂ ಯೋಗವು ಸಿದ್ಧಿಸುವುದಿಲ್ಲ.

ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ।
ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ ॥೧೨೧೯॥

ಅನೇನೈವ ವಿಧಾನೇನ ಸಾಯುಜ್ಯಂ ತತ್ಪ್ರಕಲ್ಪತೇ ।
ಸಾಯುಜ್ಯಂ ದೇವಸಾತ್ಕೃತ್ವಾ ಪ್ರಯುಞ್ಜೀತಾತ್ಮಭಕ್ತಿತಃ ॥೧೨೨೦॥

ಅನನ್ಯಮನಸಾ ದೇವಿ ನಿತ್ಯಂ ತದ್ಗತಚೇತಸಾ ।
ಸಾಯುಜ್ಯಂ ಪ್ರಾಪ್ಯತೇ ದೇವೈರ್ಯತ್ನೇನ ಮಹತಾ ಚಿರಾತ್ ॥೧೨೧॥

ಹವಿರ್ಭಿರರ್ಚನೈರ್ಹೋಮೈಃ ಪ್ರಣಾಮೈರ್ನಿತ್ಯಚಿನ್ತಯಾ ।
ಅರ್ಚಯಿತ್ವಾ ಯಥಾಶಕ್ತಿ ಸ್ವಕಂ ದೇವಂ ವಿಶನ್ತಿ ತೇ ॥೧೨೨॥

ಯುಕ್ತವಾದ ಆಹಾರ-ವಿಹಾರವುಳ್ಳವನಿಗೂ, ಕರ್ಮಗಳಲ್ಲಿ ಉಪಯುಕ್ತವಾದ ಪ್ರಯತ್ನಗಳನ್ನು ಮಾಡುವವನಿಗೂ, ಯುಕ್ತವಾದ ಕಾಲದಲ್ಲಿ ಮಲಗಿ ಯುಕ್ತವಾದ ಕಾಲದಲ್ಲಿ ಎಚ್ಚರಗೊಳ್ಳುವವನಿಗೂ ದುಃಖವನ್ನು ನಾಶಗೊಳಿಸುವ ಯೋಗವು ಸಿದ್ಧಿಸುತ್ತದೆ. ಈ ವಿಧಾನದಿಂದ ದೇವತಾ ಸಾಯುಜ್ಯವು ಪ್ರಾಪ್ತವಾಗುತ್ತದೆ. ತನ್ನ ಭಕ್ತಿಯಿಂದ ದೇವತೆಗಳ ಸಾಯುಜ್ಯವನ್ನು ಹೊಂದಿ ಯೋಗಸಾಧನೆಯಲ್ಲಿ ತತ್ಪರನಾಗಿರಬೇಕು.

ದೇವಿ! ಪ್ರತಿನಿತ್ಯವೂ ಏಕಾಗ್ರಚಿತ್ತನಾಗಿ ದೇವತೆಯಲ್ಲಿಯೇ ಲೀನವಾದ ಮನಸ್ಸಿನಿಂದ ಬಹಳ ಕಾಲದವರೆಗೆ ಪ್ರಯತ್ನಪೂರ್ವಕವಾಗಿ ಧ್ಯಾನ ಮಾಡುತ್ತಿದ್ದರೆ ದೇವತೆಗಳೊಡನೆ ಸಾಯುಜ್ಯವು ಸಿಕ್ಕುತ್ತದೆ. ಯೋಗಿಗಳು ಹವಿಸ್ಸಿನಿಂದಲೂ, ಪೂಜೆಗಳಿಂದಲೂ, ಹೋಮಗಳಿಂದಲೂ, ಪ್ರಣಾಮಗಳಿಂದಲೂ, ನಿತ್ಯಚಿಂತನೆಗಳಿಂದಲೂ ಇಷ್ಟದೇವತೆಯನ್ನು ಯಥಾಶಕ್ತಿ ಆರಾಧಿಸುತ್ತಾ ತಮ್ಮ ಇಷ್ಟದೇವತೆಯಲ್ಲಿಯೇ ಸೇರಿಹೋಗುತ್ತಾರೆ.

ಸಾಯುಜ್ಯಾನಾಂ ವಿಶಿಷ್ಟಂ ಚ ಮಾಮಕಂ ವೈಷ್ಣವಂ ತಥಾ ।
ಮಾಂ ಪ್ರಾಪ್ಯ ನ ನಿವರ್ತನ್ತೇ ವಿಷ್ಣುಂ ವಾ ಶುಭಲೋಚನೇ ॥

ಶುಭನೇತ್ರಳೇ! ಸಾಯುಜ್ಯಗಳಲ್ಲಿ ನನ್ನ ಮತ್ತು ವಿಷ್ಣುವಿನ ಸಾಯುಜ್ಯವು ವಿಶಿಷ್ಟವಾದುದು. ನನ್ನ ಸಾಯುಜ್ಯವನ್ನಾಗಲೀ ವಿಷ್ಣುವಿನ ಸಾಯುಜ್ಯವನ್ನಾಗಲೀ ಹೊಂದಿದವರು ಪುನಃ ಸಂಸಾರಕ್ಕೆ ಹಿಂದಿರುಗುವುದಿಲ್ಲ.

ದೇವಿ! ಹೀಗೆ ನಾನು ನಿನಗೆ ಸನಾತನವಾದ ಯೋಗದ ಧರ್ಮವನ್ನು ಹೇಳಿರುತ್ತೇನೆ. ನಿನ್ನ ಹೊರತಾಗಿ ಬೇರೆ ಯಾರೂ ಇಂತಹ ಜಟಿಲವಾದ ಯೋಗಧರ್ಮದ ವಿಷಯವಾಗಿ ಪ್ರಶ್ನಿಸಲಾರರು.”

ಪಾಶುಪತಯೋಗದ ವರ್ಣನೆ ಮತ್ತು ಶಿವಲಿಂಗಪೂಜೆಯ ಮಹಿಮೆ :

ಪಾರ್ವತಿ :

ತ್ರಿಯಕ್ಷ ತ್ರಿದಶಶ್ರೇಷ್ಠ ತ್ರ್ಯಮ್ಬಕ ತ್ರಿದಶಾಧಿಪ ।
ತ್ರಿಪುರಾನ್ತಕ ಕಾಮಾಙ್ಗ ಹರ ತ್ರಿಪಥಗಾಧರ ॥೧೨೫॥

ದಕ್ಷಯಜ್ಞಪ್ರಮಥನ ಶೂಲಪಾಣೇಽರಿಸೂದನ ।
ನಮಸ್ತೇ ಲೋಕಪಾಲೇಶ ಲೋಕಪಾಲ ವರಪ್ರದ ॥೧೨೬॥

"ತ್ರಿನೇತ್ರನೇ! ತ್ರಿದಶಶ್ರೇಷ್ಠನೇ! ದೇವೇಶ್ವರನೇ! ತ್ರ್ಯಂಬಕನೇ! ತ್ರಿಪುರಾಂತಕನೇ! ಕಾಮನ ಶರೀರವನ್ನು ದಹಿಸಿದವನೇ! ಗಂಗಾಧರನೇ! ದಕ್ಷನ ಯಜ್ಞವನ್ನು ಧ್ವಂಸಮಾಡಿದವನೇ! ಶೂಲಪಾಣಿಯೇ! ಶತ್ರುಸೂದನನೇ! ಲೋಕಪಾಲರಿಗೂ ಈಶನೇ! ಲೋಕಪಾಲರಿಗೂ ವರವನ್ನು ಕೊಡುವವನೇ! ನಿನಗೆ ನಮಸ್ಕಾರಮಾಡುತ್ತೇನೆ.

ನೈಕಶಾಖಮಪರ್ಯನ್ತಮಧ್ಯಾತ್ಮಜ್ಞಾನಮುತ್ತಮಮ್ ।
ಅಪ್ರತರ್ಕ್ಯಮವಿಜ್ಞೇಯಂ ಸಾಂಖ್ಯಯೋಗಸಮನ್ವಿತಮ್ ॥೧೨೭॥

ಭವತಾ ಪರಿಪೃಷ್ಟೇನ ಶೃಣ್ವನ್ತ್ಯಾ ಮಮ ಭಾಷಿತಮ್ ।
ಇದಾನೀಂ ಶ್ರೋತುಮಿಚ್ಛಾಮಿ ಸಾಯುಜ್ಯಂ ತ್ವದ್ಗತಂ ವಿಭೋ ॥

ಕಥಂ ಪರಿಚರನ್ತ್ಯೇತೇ ಭಕ್ತಾಸ್ತ್ವಾಂ ಪರಮೇಷ್ಠಿನಮ್ ।
ಆಚಾರಃ ಕೀದೃಶಸ್ತೇಷಾಂ ಕೇನ ತುಷ್ಟೋ ಭವೇದ್ಭವಾನ್ ।
ವರ್ಣ್ಯಮಾನಂ ತ್ವಯಾ ಸಾಕ್ಷಾತ್ಪ್ರೀಣಯತ್ಯಧಿಕಂ ಹಿ ಮಾಮ್ ॥೧೨೮॥

"ದೇವೇಶ! ಕೇಳುವುದರಲ್ಲಿ ಉತ್ಸುಕಳಾದ ನನಗೆ ನನ್ನ ಪ್ರಶ್ನೆಗಳಿಗೆಲ್ಲಾ ಅನುಗುಣವಾಗಿ ನೀನು ಅನೇಕಶಾಖೆಗಳಿಂದ ಯುಕ್ತವಾದ, ಅನಂತವಾದ, ಊಹಿಸಲೂ ಅಸಾಧ್ಯವಾದ, ಯಾರಿಂದಲೂ ತಿಳಿಯಲ್ಪಡದಿರುವ ಸಾಂಖ್ಯ ಮತ್ತು ಯೋಗಗಳಿಂದ ಯುಕ್ತವಾದ ಉತ್ತಮೋತ್ತಮವಾದ ಅಧ್ಯಾತ್ಮ ಜ್ಞಾನವನ್ನು ಉಪದೇಶಿಸಿರುವೆ. ಈಗ ನಾನು ನಿನ್ನಿಂದಲೇ ನಿನ್ನ ಸಂಬಂಧವಾದ ಸಾಯುಜ್ಯದ ವಿಷಯವಾಗಿಯೂ ಕೇಳಲು ಇಚ್ಛಿಸಿದ್ದೇನೆ. ನಿನ್ನ ಭಕ್ತರು ಪರಮೇಷ್ಠಿಯಾದ ನಿನ್ನನ್ನು ಹೇಗೆ ಉಪಚರಿಸುತ್ತಾರೆ? ಅವರ

ಆಚಾರ-ವ್ಯವಹಾರಗಳು ಹೇಗಿರುತ್ತವೆ? ಯಾವ ವಿಧವಾದ ಪೂಜೆಯಿಂದ ನೀನು ಸಂತುಷ್ಟನಾಗುವೆ? ನಿನ್ನ ಸಾಯುಜ್ಯಪ್ರಾಪ್ತಿಯ ಉಪಾಯವನ್ನು ಸಾಕ್ಷಾತ್ತಾಗಿ ನೀನೇ ಹೇಳುವುದರಿಂದ ನನಗೆ ಹೆಚ್ಚಿನ ಸಂತೋಷವಾಗುತ್ತದೆ. ದಯಮಾಡಿ ಹೇಳುವ ಕೃಪೆಮಾಡು."

ಮಹೇಶ್ವರ :

"ದೇವಿ! ನನ್ನ ಪರಮಾದ್ಭುತವಾದ ಸಾಯುಜ್ಯದ ವಿಷಯವನ್ನು ಸಂತೋಷದಿಂದ ಹೇಳುತ್ತೇನೆ. ನನ್ನ ಧ್ಯಾನದಲ್ಲಿಯೇ ಯುಕ್ತರಾದ ಪರಮ ಯೋಗಿಗಳು ನನ್ನ ಸಾಯುಜ್ಯವನ್ನು ಹೊಂದಿದನಂತರ ಹೇಗೆ ಸಂಸಾರಕ್ಕೆ ಹಿಂದಿರುಗುವುದಿಲ್ಲವೆಂಬುದನ್ನೂ ಹೇಳುತ್ತೇನೆ.

ಅವ್ಯಕ್ತೋಽಹಮಚಿನ್ತ್ಯೋಽಹಂ ಪೂರ್ವೈರಪಿ ಮುಮುಕ್ಷುಭಿಃ ।
ಸಾಂಖ್ಯಯೋಗೌ ಮಯಾ ಸೃಷ್ಟೌ ಸರ್ವಂ ಚಾಪಿ ಚರಾಚರಮ್ ॥

ಹಿಂದಿನ ಮೋಕ್ಷಾಪೇಕ್ಷಿಗಳೆಲ್ಲರೂ ನನ್ನನ್ನು ಅವ್ಯಕ್ತನೆಂದೂ, ಅಚಿನ್ತ್ಯನೆಂದೂ ವರ್ಣಿಸಿದ್ದಾರೆ. ಸಾಂಖ್ಯ-ಯೋಗಗಳು ನನ್ನಿಂದಲೇ ಹುಟ್ಟಿದುವು. ಸಮಸ್ತಚರಾಚರಗಳನ್ನೂನಾನೇ ಸೃಷ್ಟಿಸಿರುವೆನು.

ಅರ್ಚನೀಯೋಽಹಮೀಶೋಽಹಮವ್ಯಯೋಽಹಂ ಸನಾತನಃ ।
ಅಹಂ ಪ್ರಸನ್ನೋ ಭಕ್ತಾನಾಂ ದದಾಮ್ಯಮರತಾಮಪಿ ॥೧೨೩೨॥

ದೇವಿ! ನಾನು ಪೂಜನೀಯನಾದ ಈಶ್ವರನಾಗಿದ್ದೇನೆ. ಅವಿನಾಶಿಯಾದ ಸನಾತನಪುರುಷನಾಗಿದ್ದೇನೆ. ಭಕ್ತರ ವಿಷಯದಲ್ಲಿ ಪ್ರಸನ್ನನಾದ ನಾನು ಅವರಿಗೆ ಅಮರತ್ವವನ್ನೂ ಅನುಗ್ರಹಿಸಬಲ್ಲೆನು.

ದೇವತೆಗಳಾಗಲೀ, ತಪೋಧನರಾದ ಮುನಿಗಳಾಗಲೀ ನನ್ನ ನಿಜ ಸ್ವರೂಪವನ್ನು ತಿಳಿದವರಾಗಿಲ್ಲ. ನಿನಗೆ ಪ್ರಿಯವನ್ನುಂಟುಮಾಡುವ ಸಲುವಾಗಿ ನನ್ನ ದಿವ್ಯಶಕ್ತಿಯ ಬಗೆಗೆ ನಿನ್ನೊಡನೆ ಹೇಳುತ್ತೇನೆ. ಶುಭಾಂಗಿಯೇ! ನಾನು ನಾಲ್ಕು ಆಶ್ರಮಗಳಿಂದ ನಿರ್ಮಲರಾದ, ಪುಣ್ಯಾತ್ಮರಾದ, ತಪಸ್ವಿಗಳಾದ, ನನ್ನ ಭಕ್ತರಾದ, ನಾಲ್ಕು ಮಂದಿ ಬ್ರಾಹ್ಮಣರನ್ನು ಆರಿಸಿ ಕರೆತಂದು ಅವರಿಗೆ ಮಹಾಪಾಶುಪತಯೋಗವನ್ನು ಉಪದೇಶಿಸಿದೆನು. ನನ್ನ ದಕ್ಷಿಣದ

ಮುಖದಿಂದ ಅವರು ಎಲ್ಲ ಉಪದೇಶವನ್ನೂ ಗ್ರಹಿಸಿದರು. ಆ ಮಹಾವಿದ್ಯೆಯನ್ನು ಗ್ರಹಿಸಿದನಂತರ ಆ ನಾಲ್ವರೂ ಮೂರು ಲೋಕಗಳಲ್ಲಿಯೂ ಅದನ್ನು ಪ್ರಚುರಪಡಿಸಿದರು. ನಿನ್ನಿಂದ ಅದೇ ವಿಷಯವಾಗಿ ಪುನಃ ಪ್ರಶ್ನಿಸಲ್ಪಟ್ಟಿರುವ ನಾನು ಮಹಾಪಾಶುಪತಯೋಗವನ್ನು ಪುನಃ ಹೇಳುತ್ತೇನೆ. ಏಕಾಗ್ರಚಿತ್ತಳಾಗಿ ಕೇಳು.

ಅಹಂ ಪಶುಪತಿರ್ನಾಮ ಮದ್ಭಕ್ತಾ ಯೇ ಚ ಮಾನವಾಃ ।
ಸರ್ವೇ ಪಾಶುಪತಾ ಜ್ಞೇಯಾ ಭಸ್ಮದಿಗ್ಧತನೂರುಹಾಃ ॥೧೨೩೭॥

ದೇವಿ! ಪಶುಪತಿ ಎಂಬ ನಾಮಧೇಯವೂ ನನಗಿದೆ. ರೋಮ-ರೋಮಗಳಲ್ಲಿಯೂ ಭಸ್ಮದಿಂದ ಲೇಪಿತರಾಗಿರುವ ನನ್ನ ಭಕ್ತರಾದ ಮನುಷ್ಯರು ಯಾರುಂಟೋ–ಅವರೆಲ್ಲರೂ ಪಾಶುಪತರೆಂದೇ ಕರೆಯಲ್ಪಡುತ್ತಾರೆ.

ರಕ್ಷಾರ್ಥಂ ಮಙ್ಗಲಾರ್ಥಂ ಚ ಪವಿತ್ರಾರ್ಥಂ ಚ ಭಾಮಿನಿ ।
ಲಿಙ್ಗಾರ್ಥಂ ಚೈವ ಭಕ್ತಾನಾಂ ಭಸ್ಮ ದತ್ತಂ ಮಯಾ ಪುರಾ ॥೧೨೩೮॥

ತೇನ ಸಂದಿಗ್ಧಸರ್ವಾಙ್ಗಾ ಭಸ್ಮನಾ ಬ್ರಹ್ಮಚಾರಿಣಃ ।
ಜಟಿಲಾ ಮುಣ್ಡಿತಾ ವಾಪಿ ನಾನಾಕಾರಶಿಖಣ್ಡಿನಃ ॥೧೨೩೯॥

ವಿಕೃತಾಃ ಪಿಙ್ಗಲಾಭಾಶ್ಚ ನಗ್ನಾ ನಾನಾಪ್ರಕಾರಿಣಃ ।
ಭೈಕ್ಷಂ ಚರನ್ತಃ ಸರ್ವತ್ರ ನಿಃಸ್ಪೃಹಾ ನಿಷ್ಪರಿಗ್ರಹಾಃ ॥೧೨೪೦॥

ಮೃತ್ಪಾತ್ರಹಸ್ತಾ ಮದ್ಭಕ್ತಾ ಮನ್ನಿವೇಶಿತಬುದ್ಧಯಃ ।
ಚರನ್ತೋ ನಿಖಿಲಂ ಲೋಕಂ ಮಮ ಹರ್ಷವಿವರ್ಧನಾಃ ॥೧೨೪೧॥

ದೇವಿ! ಹಿಂದೆ ನಾನು ರಕ್ಷಣೆಯ ಸಲುವಾಗಿಯೂ, ಮಂಗಳದ ಸಲುವಾಗಿಯೂ, ಪರಿಶುದ್ಧತೆಯ ಸಲುವಾಗಿಯೂ, ಭಕ್ತರನ್ನು ಗುರುತಿಸುವ ಸಲುವಾಗಿಯೂ ನನ್ನ ಭಕ್ತರಿಗೆ ಭಸ್ಮವನ್ನು ಕೊಟ್ಟೆನು. ಆ ಭಸ್ಮವನ್ನು ಅಂಗಾಂಗಗಳಲ್ಲಿಯೂ ಧರಿಸಿರುವ, ಬ್ರಹ್ಮಚಾರಿಗಳಾದ, ಜಟೆಯನ್ನು ಬಿಟ್ಟಿರುವ, ಮುಂಡನಮಾಡಿಸಿಕೊಂಡಿರುವ ಅಥವಾ ನಾನಾಪ್ರಕಾರವಾದ ಶಿಖೆಗಳನ್ನು ಬಿಟ್ಟಿರುವ, ವಿಕೃತವಾದ ವೇಷಗಳನ್ನು ಧರಿಸಿರುವ, ಪಿಂಗಳವರ್ಣದವರಾದ, ನಗ್ನರಾದ, ನಾನಾಪ್ರಕಾರವಾದ ವೇಷಗಳನ್ನು ಧರಿಸಿರುವ, ನಿಃಸ್ಪ

ೃಹರಾದ, ಯಾವುದನ್ನೂ ಪರಿಗ್ರಹಿಸದಿರುವ, ನನ್ನಲ್ಲಿಯೇ ನೆಟ್ಟಬುದ್ಧಿ ಯುಳ್ಳವರಾಗಿರುವ (ನನ್ನಲ್ಲಿಯೇ ಯಾವಾಗಲೂ ಮನಸ್ಸನ್ನು ಸ್ಥಿರೀಕರಿಸಿರುವ) ನನ್ನ ಭಕ್ತರು ಮಣ್ಣಿನ ಪಾತ್ರೆಯನ್ನು ಕೈಯಲ್ಲಿ ಹಿಡಿದು ಭಿಕ್ಷಾಟನೆಮಾಡುತ್ತಾ ಸಮಗ್ರವಾದ ಲೋಕದಲ್ಲಿಯೂ ಸಂಚರಿಸುತ್ತಾ ನನ್ನ ಹರ್ಷವನ್ನು ಹೆಚ್ಚಿಸುತ್ತಿದ್ದಾರೆ. ಅವರು ಎಲ್ಲ ಲೋಕಗಳಲ್ಲಿಯೂ ಪರಮಶ್ರೇಷ್ಠವಾದ, ಸೂಕ್ಷ್ಮವಾದ, ದಿವ್ಯವಾದ ಪಾಶುಪತಯೋಗಶಾಸ್ತ್ರವನ್ನು ವಿಮರ್ಶಿಸುತ್ತಾ ತಿರುಗುತ್ತಿರುತ್ತಾರೆ. ಹೀಗೆ ಅನುದಿನವೂ ನನ್ನ ಚಿಂತನೆಯಲ್ಲಿಯೇ ಮಗ್ನರಾಗಿರುವ ನನ್ನ ಭಕ್ತರಾದ ತಪಸ್ವಿಗಳು ನನ್ನನ್ನು ಬೇಗನೆ ಸೇರುವ ಬಗೆಗೆ ನಾನು ಯಾವಾಗಲೂ ಉಪಾಯವನ್ನು ಚಿಂತಿಸುತ್ತಲೇ ಇರುತ್ತೇನೆ. ಅಂತಹ ನನ್ನ ಭಕ್ತರನ್ನು ಉದ್ಧರಿಸುವ ಸಲುವಾಗಿಯೇ ನಾನು ಮೂರು ಲೋಕಗಳಲ್ಲಿಯೂ ಶಿವಲಿಂಗವನ್ನು ಪ್ರತಿಷ್ಠಾಪಿಸಿರುವೆನು. ಶಿವಲಿಂಗಕ್ಕೆ ನಮಸ್ಕಾರಮಾಡುವುದರಿಂದಲೇ ಮಾನವನು ಸಮಸ್ತಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ.

ಇಷ್ಟಂ ದತ್ತಮಧೀತಂ ಚ ಯಜ್ಞಾಶ್ಚ ಬಹುದಕ್ಷಿಣಾಃ ।
ಶಿವಲಿಙ್ಗಪ್ರಣಾಮಸ್ಯ ಕಲಾಂ ನಾರ್ಹನ್ತಿ ಷೋಡಶೀಮ್ ॥೧೨೪೪॥

ಹೋಮ, ದಾನ, ಅಧ್ಯಯನ ಮತ್ತು ಬಹುದಕ್ಷಿಣಾಯುಕ್ತವಾದ ಯಜ್ಞಗಳು–ಶಿವಲಿಂಗಕ್ಕೆ ನಮಸ್ಕಾರಮಾಡುವುದರಿಂದ ಪ್ರಾಪ್ತವಾಗುವ ಫಲಕ್ಕೆ ಹದಿನಾರನೆಯ ಒಂದು ಭಾಗದಷ್ಟು ಫಲವನ್ನೂ ನೀಡಲಾರವು.

ಅರ್ಚಯಾ ಶಿವಲಿಙ್ಗಸ್ಯ ಪರಿತುಷ್ಯಾಮ್ಯಹಂ ಪ್ರಿಯೇ ।
ಶಿವಲಿಙ್ಗಾರ್ಚನಾಯಾಂ ತು ವಿಧಾನಮಪಿ ಮೇ ಶೃಣು ॥೧೨೪೫॥

ಪ್ರಿಯಳೇ! ಶಿವಲಿಂಗದ ಅರ್ಚನೆಯಿಂದ ನಾನು ಸುಪ್ರೀತನಾಗುತ್ತೇನೆ. ಶಿವಲಿಂಗವನ್ನು ಪೂಜಿಸುವ ವಿಧಾನವನ್ನು ಕೇಳು.

ಗೋಕ್ಷೀರನವನೀತಾಭ್ಯಾಮರ್ಚಯೇದ್ಯಃ ಶಿವಂ ಮಮ ।
ಇಷ್ಟಸ್ಯ ಹಯಮೇಧಸ್ಯ ಯತ್ಫಲಂ ತತ್ಫಲಂ ಭವೇತ್ ॥೧೨೪೬॥

ಹಸುವಿನ ಹಾಲು ಮತ್ತು ಬೆಣ್ಣೆಗಳಿಂದ ಶಿವಲಿಂಗಕ್ಕೆ ಅಭಿಷೇಕಮಾಡಿ

ನನ್ನನ್ನು ಪೂಜಿಸುವವರು ಅಶ್ವಮೇಧಯಾಗವನ್ನು ಮಾಡಿದ ಫಲವನ್ನು ಹೊಂದುತ್ತಾರೆ.

ಘೃತಮಣ್ಡೇನ ಯೋ ನಿತ್ಯಮರ್ಚಯೇದ್ಯಃ ಶಿವಂ ಮಮ ।
ಸ ಫಲಂ ಪ್ರಾಪ್ನುಯಾನ್ಮರ್ತ್ಯೋ ಬ್ರಾಹ್ಮಣಸ್ಯಾಗ್ನಿಹೋತ್ರಿಣಃ ॥

ಪ್ರತಿನಿತ್ಯವೂ ತುಪ್ಪದ ಸಾರದಿಂದ ಶಿವಲಿಂಗಕ್ಕೆ ಅಭಿಷೇಕಮಾಡಿ ಪೂಜೆಮಾಡುವವನು ಅಗ್ನಿಹೋತ್ರಿಯಾದ ಬ್ರಾಹ್ಮಣನಿಗೆ ಲಭ್ಯವಾಗುವ ಫಲ ವನ್ನು ಪಡೆದುಕೊಳ್ಳುತ್ತಾನೆ.

ಕೇವಲೇನಾಪಿ ತೋಯೇನ ಸ್ನಾಪಯೇದ್ಯಃ ಶಿವಂ ಮಮ ।
ಸ ಚಾಪಿ ಲಭತೇ ಪುಣ್ಯಂ ಪ್ರಿಯಂ ಚ ಲಭತೇ ನರಃ ॥೧೨೪೮॥

ಬರೀ ನೀರಿನಿಂದಲೇ ನನ್ನ ಶಿವಲಿಂಗಕ್ಕೆ ಅಭಿಷೇಕಮಾಡಿ ಪೂಜಿಸುವವನೂ ಪುಣ್ಯಫಲವನ್ನು ಹೊಂದುತ್ತಾನೆ ಮತ್ತು ಅಭೀಷ್ಟವಾದ ಕಾಮನೆಗಳನ್ನೂ ಹೊಂದುತ್ತಾನೆ.

ಸಘೃತಂ ಗುಗ್ಗುಲಂ ಸಮ್ಯಗ್ಧೂಪಯೇದ್ಯಃ ಶಿವಾನ್ತಿಕೇ ।
ಗೋಸವಸ್ಯ ತು ಯಜ್ಞಸ್ಯ ಯತ್ಫಲಂ ತಸ್ಯ ತದ್ಭವೇತ್ ॥೧೨೪೯॥

ಶಿವಲಿಂಗದ ಸಮೀಪದಲ್ಲಿ ಘೃತಮಿಶ್ರವಾದ ಗುಗ್ಗುಲದ ಧೂಪವನ್ನು ಹೊತ್ತಿಸುವವನು ಗೋಸವಯಜ್ಞಮಾಡಿದ ಫಲವನ್ನು ಹೊಂದುತ್ತಾನೆ.

ಯಸ್ತು ಗುಗ್ಗುಲಪಿಣ್ಡೇನ ಕೇವಲೇನಾಪಿ ಧೂಪಯೇತ್ ।
ತಸ್ಯ ರುಕ್ಮಪ್ರದಾನಸ್ಯ ಯತ್ಫಲಂ ತಸ್ಯ ತದ್ಭವೇತ್ ॥೧೨೫೦॥

ಕೇವಲ ಗುಗ್ಗುಲದ ಉಂಡೆಯಿಂದ ಧೂಪವನ್ನು ಹೊತ್ತಿಸುವವನೂ ಸುವರ್ಣವನ್ನು ದಾನಮಾಡಿದ ಫಲವನ್ನು ಹೊಂದುತ್ತಾನೆ.

ಯಸ್ತು ನಾನಾವಿಧೈಃ ಪುಷ್ಪೈರ್ಮಮ ಲಿಙ್ಗಂ ಸಮರ್ಚಯೇತ್ ।
ಸ ಹಿ ಧೇನುಸಹಸ್ರಸ್ಯ ದತ್ತಸ್ಯ ಫಲಮಾಪ್ನುಯಾತ್ ॥೧೨೫೧॥

ನಾನಾವಿಧವಾದ ಪುಷ್ಪಗಳಿಂದ ನನ್ನ ಲಿಂಗಕ್ಕೆ ಪೂಜೆಯನ್ನು ಮಾಡು ವವನು ಸಾವಿರ ಹಸುಗಳನ್ನು ದಾನಮಾಡಿದ ಪುಣ್ಯವನ್ನು ಪಡೆದುಕೊಳ್ಳು ತ್ತಾನೆ.

ಯಸ್ತು ದೇಶಾನ್ತರಂ ಗತ್ವಾ ಶಿವಲಿಙ್ಗಂ ಸಮರ್ಚಯೇತ್ ।
ತಸ್ಮಾತ್ಸರ್ವಮನುಷ್ಯೇಷು ನಾಸ್ತಿ ಮೇ ಪ್ರಿಯಕೃತ್ತಮಃ ॥೧೨೫೨॥

ಯಾವನು ದೇಶಾಂತರಕ್ಕೆ ಹೋಗಿ ಶಿವಲಿಂಗಕ್ಕೆ ಪೂಜೆಮಾಡುವನೋ (ಪಾಶುಪತಯೋಗಧರ್ಮವನ್ನು ಪ್ರಚಾರಮಾಡುವನೋ)–ಅವನಿಗಿಂತಲೂ ಪ್ರಿಯತಮನಾದವನು ನನಗೆ ಬೇರೆ ಯಾರೂ ಇರುವುದಿಲ್ಲ.

ಪ್ರಿಯಳೇ! ಹೀಗೆ ನಾನಾವಿಧವಾದ ದ್ರವ್ಯಗಳಿಂದ ನನ್ನ ಶಿವಲಿಂಗಕ್ಕೆ ಪೂಜೆಯನ್ನು ಮಾಡಬೇಕು. ಮನುಷ್ಯರಲ್ಲಿ ಅಂತಹ ಶಿವಭಕ್ತನು ನನಗೆ ಸಮಾನನು. ಅವಸಾನಾನಂತರ ನನ್ನಲ್ಲಿಯೇ ಸೇರಿಹೋಗುತ್ತಾನೆ. ಅವನಿಗೆ ಪುನರ್ಜನ್ಮವಿಲ್ಲ.

ಅರ್ಚನಾಭಿರ್ನಮಸ್ಕಾರೈರುಪಹಾರೈಃ ಸ್ತವೈರಪಿ ।
ಭಕ್ತೋ ಮಾಮರ್ಚಯೇನ್ನಿತ್ಯಂ ಶಿವಲಿಙ್ಗೇಷ್ವತನ್ದ್ರಿತಃ ॥೧೨೫೪॥

ಪಲಾಶಬಿಲ್ವಪತ್ರಾಣಿ ರಾಜವೃಕ್ಷಸ್ರಜಸ್ತಥಾ ।
ಅರ್ಕಪುಷ್ಪಾಣಿ ಮೇಧ್ಯಾನಿ ಮತ್ಪ್ರಿಯಾಣಿ ವಿಶೇಷತಃ ॥೧೨೫೫॥

ಆದುದರಿಂದ ಭಕ್ತರು ಪೂಜೆ, ನಮಸ್ಕಾರ, ಉಪಹಾರ, ಸ್ತೋತ್ರ–ಇವುಗಳಿಂದ ಶಿವಲಿಂಗರೂಪದಲ್ಲಿರುವ ನನ್ನನ್ನು ಅಲಸಿಕೆಯಿಲ್ಲದೇ ನಿತ್ಯವೂ ಪೂಜಿಸಬೇಕು. ಮುತ್ತುಗದ ಎಲೆಗಳೂ ಮತ್ತು ಹೂವುಗಳೂ, ಬಿಲ್ವಪತ್ರೆಗಳೂ, ರಾಜವೃಕ್ಷದ (ಕಕ್ಕೆಗಿಡದ) ಹೂವಿನಿಂದ ಮಾಡಿದ ಮಾಲಿಕೆಗಳೂ, ಪವಿತ್ರವಾದ ಎಕ್ಕದ ಹೂವುಗಳೂ ನನಗೆ ಅತ್ಯಂತಪ್ರಿಯವಾದುವುಗಳು.

ಫಲಂ ವಾ ಯದಿ ವಾ ಶಾಕಂ ಪುಷ್ಪಂ ವಾ ಯದಿ ವಾ ಜಲಮ್ ।
ದತ್ತಂ ಸಮ್ಪ್ರೀಣಯೇದ್ದೇವಿ ಭಕ್ತೈರ್ಮದ್ಗತಮಾನಸೈಃ ॥೧೨೫೬॥

ಮಮಾಪಿ ಪರಿತುಷ್ಟಸ್ಯ ನಾಸ್ತಿ ಲೋಕೇಷು ದುರ್ಲಭಮ್ ।
ತಸ್ಮಾತ್ತೇ ಸತತಂ ಭಕ್ತಾ ಮಾಮೇವಾಭ್ಯರ್ಚಯನ್ತ್ಯುತ ॥೧೨೫೭॥

ನನ್ನಲ್ಲಿಯೇ ಮನಸ್ಸನ್ನಿಟ್ಟಿರುವ ನನ್ನ ಭಕ್ತರು ಅರ್ಪಿಸುವ ಫಲವಾಗಲೀ, ಕಾಯಾಗಲೀ, ಪುಷ್ಪವಾಗಲೀ, ನೀರಾಗಲೀ–ನನಗೆ ವಿಶೇಷವಾದ

ಸಂತೋಷವನ್ನುಂಟುಮಾಡುತ್ತದೆ. ನಾನು ಸಂತೋಷಗೊಂಡೆನೆಂದರೆ ನನ್ನ ಭಕ್ತನಿಗೆ ದುರ್ಲಭವಾದುದು ಈ ಲೋಕದಲ್ಲಿ ಯಾವುದೂ ಇರುವುದಿಲ್ಲ. (ಅವನ ಅಭೀಷ್ಟಗಳೆಲ್ಲವನ್ನೂ ನಾನು ಪೂರೈಸುತ್ತೇನೆ.) ಆದುದರಿಂದ ಭಕ್ತರು ಯಾವಾಗಲೂ ನನ್ನನ್ನೇ ಅರ್ಚಿಸುತ್ತಿರುತ್ತಾರೆ.

ಮದ್ಭಕ್ತಾ ನ ವಿನಶ್ಯನ್ತಿ ಮದ್ಭಕ್ತಾ ವೀತಕಲ್ಮಷಾಃ ।
ಮದ್ಭಕ್ತಾಃ ಸರ್ವಲೋಕೇಷು ಪೂಜನೀಯಾ ವಿಶೇಷತಃ ॥೧೨೫೮॥

ಮದ್ದ್ವೇಷಿಣಶ್ಚ ಯೇ ಮರ್ತ್ಯಾ ಮದ್ಭಕ್ತದ್ವೇಷಿಣೋಽಪಿ ವಾ ।
ಯಾನ್ತಿ ತೇ ನರಕಂ ಘೋರಮಿಷ್ಟ್ವಾ ಕ್ರತುಶತೈರಪಿ ॥೧೨೫೯॥

ನನ್ನ ಭಕ್ತರು ಯಾವುದೇ ಕಾರಣದಿಂದಲೂ ವಿನಾಶಹೊಂದುವುದಿಲ್ಲ. ನನ್ನ ಭಕ್ತರು ಎಲ್ಲ ಲೋಕಗಳಲ್ಲಿಯೂ ವಿಶೇಷವಾಗಿ ಪೂಜಿಸಲ್ಪಡುತ್ತಾರೆ. ನನ್ನನ್ನು ದ್ವೇಷಿಸುವ ಅಥವಾ ನನ್ನ ಭಕ್ತರನ್ನು ದ್ವೇಷಿಸುವ ಮಾನವರು ನೂರಾರು ಯಜ್ಞಗಳನ್ನು ಮಾಡಿದ್ದರೂ ಘೋರವಾದ ನರಕಕ್ಕೆ ಹೋಗುತ್ತಾರೆ.

ಏತತ್ತೇ ಸರ್ವಮಾಖ್ಯಾತಂ ಯೋಗಂ ಪಾಶುಪತಂ ಮಹತ್ ।
ಮದ್ಭಕ್ತೈರ್ಮನುಜೈರ್ದೇವಿ ಶ್ರಾವ್ಯಮೇತದ್ದಿನೇ ದಿನೇ ॥೧೨೬೦॥

ಶೃಣುಯಾದ್ಯಃ ಪಠೇದ್ವಾಪಿ ಮಮೇದಂ ಧರ್ಮನಿಶ್ಚಯಮ್ ।
ಸ್ವರ್ಗಂ ಕೀರ್ತಿಂ ಧನಂ ಧಾನ್ಯಂ ಲಭತೇ ಸ ನರೋತ್ತಮಃ ॥೧೨೬೧॥

ದೇವಿ! ಹೀಗೆ ನಾನು ನಿನಗೆ ಮಹಾಪಾಶುಪತಯೋಗವನ್ನು ಸಂಪೂರ್ಣವಾಗಿ ಹೇಳಿರುತ್ತೇನೆ. ನನ್ನ ಭಕ್ತರು ಈ ಆಖ್ಯಾನವನ್ನು ಅನು ದಿನವೂ ಕೇಳಬೇಕು. ಈ ಧರ್ಮನಿಶ್ಚಯವನ್ನು ಮತ್ತೊಬ್ಬರಿಂದ ಕೇಳಿದರೂ ತಾನೇ ಪಾರಾಯಣಮಾಡಿದರೂ ನರಶ್ರೇಷ್ಠನಾದ ಅವನು ಕೀರ್ತಿಯನ್ನೂ, ಧನವನ್ನೂ, ಧಾನ್ಯವನ್ನೂ ಮತ್ತು ಸ್ವರ್ಗವನ್ನೂ ಹೊಂದುತ್ತಾನೆ."

ಉಮಾ-ಮಹೇಶ್ವರಸಂವಾದವು ಮುಗಿಯಿತು.

ಅನುಬಂಧ

ವ್ಯಾಸರು-ಬಾದರಾಯಣರು ಭಿನ್ನವ್ಯಕ್ತಿಗಳೇ?

ಶ್ರೀ ಬ್ರಹ್ಮಸೂತ್ರಕರ್ತೃನಿರ್ಣಯ :

ಮಹಾಭಾರತ ಚರಿತ್ರಕಾರರಾದ ಶ್ರೀ ಪೆಂಡ್ಯಾಲ ವೆಂಕಟಸುಬ್ರಹ್ಮಣ್ಯ ಶಾಸ್ತ್ರಿಗಳು 23-12-1945 ; 6-1-1946ರ ಆಂಧ್ರಪತ್ರಿಕೆಗಳಲ್ಲಿ ಬ್ರಹ್ಮಸೂತ್ರಕರ್ತೃ ಬಾದರಾಯಣರು ವೇದವ್ಯಾಸರಲ್ಲವೆಂದು ಲೇಖನಗಳನ್ನು ಬರೆದು, ಅವರು ತಮ್ಮ ವಾದಕ್ಕೆ ಪೋಷಕವಾಗಿ 14 ಕಾರಣಗಳನ್ನು ತೋರಿಸಿದ್ದಾರೆ. ಆ ವಾದವು ವಿದ್ವತ್ಸಿದ್ಧಾಂತವಿರುದ್ಧವೆಂದೂ, ಆ 14 ಕಾರಣಗಳು ಅವರ ವಾದವನ್ನು ಸಮರ್ಥಿಸಲಾರವೆಂದೂ 'ಕಲ್ಪವಲ್ಲಿ' 'ದಿವ್ಯವಾಣಿ' ಪತ್ರಿಕೆಗಳಲ್ಲಿ ನಿರೂಪಿಸಿ ಬ್ರಹ್ಮಸೂತ್ರಗಳನ್ನು ರಚಿಸಿದ ಬಾದರಾಯಣರು ವೇದವ್ಯಾಸರೇ ಎಂದೂ ಪ್ರಕಟಿಸಿದ್ದೇವೆ. ಈಗ ಅದರ ಸಾರಾಂಶ ಓದುಗರಿಗೆ ವಿಷಯ ಪರಿಜ್ಞಾನದ ಸಲುವಾಗಿ ಪ್ರಕಟಿಸುತ್ತಿದ್ದೇನೆ.

(ವಾರಣಾಸಿ ಸುಬ್ರಹ್ಮಣ್ಯಶಾಸ್ತ್ರಿ)

ಪ್ರತಿವಾದಿಗಳ ಪ್ರತಿಜ್ಞಾವಾಕ್ಯ

"ಇಂದಿಗೆ ಸುಮಾರು ಏಳು ಶತಮಾನಗಳಿಂದ ವ್ಯಾಸ-ಬಾದರಾಯಣರನ್ನು ಏಕವ್ಯಕ್ತಿಯೆಂದೇ ಭಾವಿಸಿ ಸಂಸ್ಕೃತಾಂಧ್ರಗ್ರಂಥಕರ್ತರು ವ್ಯಾಸರೇ ಬಾದರಾಯಣರೆಂದು ಬರೆಯುತ್ತಾ ಬಂದಿದ್ದಾರೆ. ಆದರೆ ಅದು ಸರಿಯಲ್ಲ– ತಪ್ಪು. ಮಲ್ಲಿನಾಥ-ವೆಂಕಟಾಧ್ವರ್ಯಾದಿ ಸಂಸ್ಕೃತಪಂಡಿತರಿಗೂ, ತಿಕ್ಕನ-ಸೋಮಯಾಜಿ-ಶ್ರೀನಾಥಾದಿ ಆಂಧ್ರಮಹಾಕವಿಗಳಿಗೂ ವ್ಯತಿರೇಕವಾಗಿ ಈ ಕೆಳಗೆ ತೋರಿಸಿರುವ 14 ಕಾರಣಗಳ ಆಧಾರದಿಂದ ನನ್ನ ವಾದವನ್ನು ಸ್ಥಾಪಿಸುವ ಸಾಹಸಕ್ಕೆ ತೊಡಗಿದ್ದೇನೆ."

ಈ ವಾಕ್ಯ ಪ್ರತಿವಾದಿಗಳ ಘೋಷಣೆ. ಆದರೆ ಆ.ಮ.ಬಾ.ಚ. ಕಾರರ ಈ ಬರವಣಿಗೆ ಸಂಸ್ಕೃತಾಂಧ್ರಗ್ರಂಥಕರ್ತರಿಗೆ ವಿರುದ್ಧವೆಂದೂ, ಸಾಹಸವೆಂದೂ ಸ್ಪಷ್ಟೀಕರಿಸುತ್ತದೆ.

ಪ್ರತಿವಾದಿಗಳ ಪ್ರಸಂಗ

ಇವು ಅವರು ತೋರಿಸಿರುವ ಕಾರಣಗಳು :

೧. ಮಹಾಭಾರತಕಾಲದಲ್ಲಿ ಭಾರತೇತಿಹಾಸದಲ್ಲಿ ವ್ಯಾಸರನ್ನು ಬಾದರಾಯಣರೆಂಬ ಶಬ್ದದಿಂದ ಎಲ್ಲೂ ಹೇಳಿಲ್ಲ.

೨. ಎಲ್ಲೂ ನನ್ನಯ ಭಟ್ಟಾರಕರು ವ್ಯಾಸರನ್ನು "ಬಾದರಾಯಣ" ಎನ್ನಲಿಲ್ಲ.

೩. ಕ್ಷೇಮೇಂದ್ರಕವಿ ತನ್ನ ಭಾರತಗಳಲ್ಲಾಗಲೀ, ವ್ಯಾಸಾಷ್ಟಕದಲ್ಲಾಗಲೀ ವ್ಯಾಸರನ್ನು 'ಬಾದರಾಯಣ' ಎಂದು ಕರೆದಿಲ್ಲ.

೪. ಮಹಾಭಾರತದಲ್ಲಿ ವ್ಯಾಸರ ಉಪದೇಶ ಎಲ್ಲಿ ನೋಡಿದರೂ ಕರ್ಮಗಳನ್ನು, ಕರ್ಮಫಲಾನುಭವಗಳನ್ನು ಉಪದೇಶಿಸುವುದೇ ಹೊರತು ಬ್ರಹ್ಮಪದಬೋಧಕಗಳಲ್ಲ.

   ಆತನ ಮುಖ್ಯಶಿಷ್ಯನಾದ ಜೈಮಿನಿಮಹರ್ಷಿಯು ಗುರುಚರಣಾನುಯಾಯಿಯೋ ಎಂಬಂತೆ ಕರ್ಮಪ್ರಬೋಧಕರವಾದ ಪೂರ್ವಮೀಮಾಂಸಾಕರ್ತೃವಾಗಿದ್ದಾನೆ.

   ಭಗವದ್ಗೀತೆಯೂ ಕರ್ಮಯೋಗವನ್ನೇ ಹೇಳಿದೆಯೆಂದು ಬಾಲಗಂಗಾಧರತಿಲಕರಂತಹ ಮಹಾಮೇಧಾವಿಗಳ ಅಭಿಪ್ರಾಯ.

೫. ತಿಲಕರು ತಮ್ಮ ಗೀತಾರಹಸ್ಯದಲ್ಲಿ ವ್ಯಾಸ-ಬಾದರಾಯಣರು ಬೇರೆ ಬೇರೆ ವ್ಯಕ್ತಿಗಳೆಂದೂ ಬಾದರಾಯಣರನ್ನು ವ್ಯಾಸಶಬ್ದದಿಂದ ಇತ್ತೀಚೆಗೆ ಗ್ರಂಥಕರ್ತರು ಬರೆಯುತ್ತಿದ್ದಾರೆಂದೂ ಹೇಳಿದ್ದಾರೆ.

೬. ಪುರಾಣಪಂಡಮಲ್ಲಯ್ಯಶಾಸ್ತ್ರಿಗಳು ತಮ್ಮ ಆಂಧ್ರಬ್ರಹ್ಮಸೂತ್ರ ಪೀಠಿಕೆಯಲ್ಲಿ ವ್ಯಾಸ-ಬಾದರಾಯಣವ್ಯಕ್ತಿಗಳು ಭಿನ್ನರೆಂದು ಬರೆದರು.

೭. ಆಂಗ್ಲಭಾಷೆಯಲ್ಲಿ ಬಹಳ ಗ್ರಂಥಗಳನ್ನು ಬರೆದ ಪಂಡಿತ ಸೀತನಾಥ ತತ್ತ್ವಭೂಷಣರು ತಮ್ಮ ಆಂಗ್ಲಬ್ರಹ್ಮಸೂತ್ರಭಾಷ್ಯದ ಪೀಠಿಕೆಯಲ್ಲಿ ಬಾದರಾಯಣರು ವ್ಯಾಸರಲ್ಲವೆಂದು ನಿರೂಪಿಸಿ ಬರೆದಿದ್ದಾರೆ.

೮. ಶ್ರೀ ಶಂಕರಾಚರ್ಯರು ತಮ್ಮ ಬ್ರಹ್ಮಸೂತ್ರಭಾಷ್ಯದಲ್ಲಿ ಬಾದ ರಾಯಣಮತವನ್ನು ಸಮರ್ಥಿಸಲು ಭಾರತದಿಂದಲೂ, ಭಗವದ್ಗೀತೆ ಯಿಂದಲೂ ಉದಾಹರಣೆಗಳನ್ನು ಕೊಟ್ಟಿರುವುದರಿಂದ ಶಾಂಕರಮತ ದಲ್ಲಿಯೂ ವ್ಯಾಸ-ಬಾದರಾಯಣವ್ಯಕ್ತಿಗಳು ಭಿನ್ನರೆಂಬುದು ಸ್ಪಷ್ಟ.

೯. ಮಹಾಭಾರತದ ಮೀಮಾಂಸಕರ್ತೃವಾದ ಸಪ್ರೇಮಪಂಡಿತನು ಬಾದ ರಾಯಣರು ಕ್ರಿ. ಪೂ. 3ನೇ ಶತಮಾನದಲ್ಲಿದ್ದರೆಂದು ಬರೆದಿದ್ದಾನೆ.

೧೦. ಬಾದರಾಯಣಶಬ್ದಕ್ಕೆ 'ಬದರೀವನದಲ್ಲಿರುವವನು' ಎಂದು ರೂಪ ನಿಷ್ಪತ್ತಿಯನ್ನು ಹೇಳುವುದುಂಟು. ದ್ವೈಪಾಯನಶಬ್ದಕ್ಕೆ 'ದ್ವೀಪದಲ್ಲಿ ಇರುವವನೆಂದೂ' ವ್ಯುತ್ಪತ್ತಿಯನ್ನು ಹೇಳುತ್ತಾರೆ.

ಬದರೀವನವು ಗಂಗಾತೀರದಲ್ಲಿದೆ. ದ್ವೀಪವು ಯಮುನಾನದಿ ಯಲ್ಲಿದೆ. ಈ ಎರಡಕ್ಕೂ ಸಂಬಂಧವನ್ನು ಕಲ್ಪಿಸುವುದಾದರೂ ಹೇಗೆ?

೧೧. ಮೇಲಿನ ಅಂಶಗಳಿಗಿಂತ ನನ್ನಲ್ಲಿ ನಂಬಿಕೆಮೂಡಿಸಿದ್ದೆಂದರೆ–ಬಾದ ರಾಯಣರು, ವ್ಯಾಸಶಿಷ್ಯರಲ್ಲಿ ಪೂರ್ವಮೀಮಾಂಸಾಕರ್ತೃವಾದ ಜೈಮಿನಿಯ ಮತವನ್ನು 'ಧರ್ಮಂ ಜೈಮಿನಿರತ ಏವ' ಇತ್ಯಾದಿಗಳಲ್ಲಿ ಪೂರ್ವಾಚಾರಮತವಾಗಿ ಭಾವಿಸುವುದು.

ಬಾದರಾಯಣರು ವ್ಯಾಸರೇ ಆದರೆ ತಮ್ಮ ಶಿಷ್ಯನಾದ ಜೈಮಿನಿಯ ಮತವನ್ನು ಪೂರ್ವಾಚಾರಮತವಾಗಿ ಎಣಿಸುವುದು ಹೇಗೆ?

೧೨. ನಥಾದಿ ಗಣದಲ್ಲಿರುವ ಬದರಶಬ್ದದಿಂದ "ನಥಾದಿಭ್ಯಃ ಫಕ್" ಎಂಬ ಸೂತ್ರದಿಂದ ಬದರನ ಮೊಮ್ಮಗನೆಂದೋ ಅವನ ಮಗನೆಂದೋ ಎಂಬ ಅರ್ಥವುಳ್ಳ ಬಾದರಾಯಣಶಬ್ದವು ಏರ್ಪಡುತ್ತದೆ.

೧೩. ಬಾದರಾಯಣರು ಬ್ರಹ್ಮಸೂತ್ರದಲ್ಲಿ ತಮ್ಮ ತಂದೆಯೋ, ತಾತನೋ ಆದ 'ಬಾದರಿ' ಮತವನ್ನೂ ಅನೇಕಸೂತ್ರಗಳಲ್ಲಿ ಹೇಳಿದ್ದಾರೆ.

ಮೇಲಿನ ಕಾರಣಗಳ ಬಲದಿಂದ 'ಬದರಿ' ಎಂಬ ಋಷಿಗೆ 'ಬಾದರಿ' ಎಂಬ ಮಗನಿದ್ದಿರಬೇಕು. ಬಾದರಾಯಣರು ಮೊಮ್ಮಗನೋ, ಅವನ ಮಗನೋ ಆಗಿರಬೇಕು. ಇದು ಸ್ಪಷ್ಟವಾಗಿದೆ.

೧೪. ವ್ಯಾಸರ ತಂದೆ ಪರಾಶರರು ; ತಾತ ಶಕ್ತಿ ಮಹರ್ಷಿಗಳು ; ಮುತ್ತಜ್ಜ ವಸಿಷ್ಠಮಹರ್ಷಿಗಳು ಅಲ್ಲವೇ? ಮೇಲಿನ ಕಾರಣಗಳಿಂದ ವ್ಯಾಸ-ಬಾದರಾಯಣರು ಭಿನ್ನ-ಭಿನ್ನವ್ಯಕ್ತಿಗಳೆಂಬ ಮಾತು ನಿಜ.

(ಮೊದಲನೆಯ ಲೇಖನ)

ಎರಡನೆಯ ಲೇಖನ :

ಸಾಮವೇದದ ತಾಂಡ್ಯಬ್ರಾಹ್ಮಣದಲ್ಲಿನ ವಂಶಬ್ರಾಹ್ಮಣ : 'ಪ್ರಜಾಪತಿಯು ಬೃಹಸ್ಪತಿಗೂ, ಆತನು ನಾರದರಿಗೂ, ನಾರದರು ವಿಷ್ವಕ್ಸೇನನಿಗೂ ಆತನು ಪಾರಾಶರ್ಯವ್ಯಾಸರಿಗೂ, ಅವರು ಜೈಮಿನಿಗೂ, ಜೈಮಿನಿಯು ಪೌಷ್ಯಂಡನಿಗೂ, ಆತ ಪಾರಾಶರ್ಯಾಯಣನಿಗೂ, ಆತ ಬಾದರಾಯಣನಿಗೂ... ಈ ಸಾಮವೇದವನ್ನು ಹೇಳಿದರು'–ಎಂದಿದೆ. ಮೇಲಿನ ಬ್ರಾಹ್ಮಣವಾಕ್ಯಗಳನ್ನನುಸರಿಸಿ ವ್ಯಾಸರು ಬಾದರಾಯಣರಿಗೆ ಐದು ಪೀಳಿಗೆಗಳ ಪೂರ್ವಿಕರೂ, ಜೈಮಿನಿಯು ನಾಲ್ಕು ಪೀಳಿಗೆಗಳ ಪೂರ್ವಿಕನೂ ಆಗಿದ್ದಾರೆ.

ಮೇಲಿನ ಹದಿನಾಲ್ಕು ಕಾರಣಗಳ ಸಾಕ್ಷ್ಯದಿಂದ ವ್ಯಾಸ-ಬಾದರಾಯಣ ವ್ಯಕ್ತಿಗಳು ಭಿನ್ನರೆಂದು ದೃಢಪಟ್ಟಿದೆ.

ಇದು ಪರಿಶೀಲನಾಯುಗವೆನಿಸಿದೆ. ಗ್ರಂಥಗಳನ್ನು ಒನಕೆ ಪದದಂತೆ ಕುರುಡು-ಕುರುಡಾಗಿ ಕಂಠಪಾಠಮಾಡುವವರಿಗೆ ಸತ್ಯವು ಹೇಗೆ ತಿಳಿಯುವುದು? ಆದುದರಿಂದ ಪರಿಶೀಲಿಸಿದವರಿಗೆ ಅವು ವ್ಯಾಸ-ಬಾದರಾಯಣರು ಭಿನ್ನವ್ಯಕ್ತಿಗಳೆಂದು ಬೋಧಿಸುತ್ತವೆ.

ಪ್ರತಿವಾದಿಪ್ರಸಂಗನಿರಾಕರಣ

ಪ್ರತಿವಾದಿಗಳ 1, 2, 3ನೆಯ ಅಂಶಗಳು ಸಾಧಕಗಳಲ್ಲ. ಮಹಾಭಾರತಕರ್ತೃ ನನ್ನಯ, ಕ್ಷೇಮೇಂದ್ರಕವಿ ಇವರು ತಮ್ಮ ಗ್ರಂಥಗಳಲ್ಲಿ ವ್ಯಾಸರನ್ನು ಬಾದರಾಯಣರೆಂದು ಹೇಳಿರುವುದೇ ಅಲ್ಲದೇ ಬಾದರಾಯಣರಲ್ಲ ಎಂತಲೂ ಹೇಳಿಲ್ಲ. ಆದುದರಿಂದ ಪ್ರತಿವಾದಿಗಳು 1, 2, 3ನೆಯ ಕಾರಣಗಳು ಪರಾಸ್ತವಾದಂತಾಯಿತು. 4ನೆಯ ಅಂಶ ಅಯುಕ್ತ. ಮಹಾಭಾರತ ಪ್ರಣೇತ ವ್ಯಾಸಮಹರ್ಷಿಗಳು ಬ್ರಹ್ಮಸೂತ್ರರಚನಾಶಕ್ತಿ ಇಲ್ಲದವರೆಂತಲೂ,

ಅರ್ಥ-ಕಾಮಪ್ರಬೋಧಕವೇ ಎಂದೂ ಅದರ ಸಾರಾಂಶ. ಇದು ವಿದ್ಯಾ ಸಂಪ್ರದಾಯವೇನೆಂದು ತಿಳಿಯದವರ ಮಾತು. ಆದಕಾರಣ ಹೇಯ.

5-6ನೆಯ ಅಂಶಗಳು ಅಸತ್ಯ. ಶ್ರೀತಿಲಕರೂ ಶ್ರೀ ಪುರಾಣಪಂಡ ಮಲ್ಲಯ್ಯಶಾಸ್ತ್ರಿಗಳೂ ವ್ಯಾಸ-ಬಾದರಾಯಣರು ಭಿನ್ನವ್ಯಕ್ತಿಗಳೆಂದಲ್ಲದೇ ಪ್ರಮಾಣಗಳನ್ನನುಸರಿಸಿ ಏಕವ್ಯಕ್ತಿಯೆಂದೇ ಒಪ್ಪಿಕೊಳ್ಳಬೇಕೆಂದು ತಮ್ಮ ತಮ್ಮ ಮತಗಳನ್ನು ಪ್ರಕಟಿಸಿದ್ದಾರೆ. ಆ ವಿಷಯ ಹಿಂದೆಯೇ ಪ್ರದರ್ಶಿಸಲ್ಪಟ್ಟಿದೆ.

7ನೆಯ ಅಂಶ ಸರಿಯಾದುದಲ್ಲ. ಆ ಸೀತನಾಥತತ್ತ್ವಭೂಷಣರು ಹೇಗೆ ನಿರೂಪಿಸಿ ವ್ಯಾಸ-ಬಾದರಾಯಣಭೇದವನ್ನು ಸ್ಥಿರಪಡಿಸಿದರೋ ಪ್ರದರ್ಶಿಸಲಿಲ್ಲವಾದುದರಿಂದ, ಇದೂ 5-6ನೇ ಅಂಶಗಳೊಂದಿಗೆ ಸೇರಿ ದಂತಾಯಿತು ಎಂದು ಹೇಳಬೇಕು.

8ನೆಯ ಅಂಶವೂ ಯುಕ್ತವಲ್ಲ. ಶ್ರೀಶಂಕರಾಚಾರ್ಯರು ಬ್ರಹ್ಮ ಸೂತ್ರಭಾಷ್ಯದಲ್ಲಿ ಭಾರತ-ಭಗವದ್ಗೀತಾವಚನಗಳನ್ನು ಉದಾಹರಿಸಿರುವುದ ರಲ್ಲಿ ತಾತ್ಪರ್ಯವೇನೆಂದರೆ : ಸೂತ್ರಕಾರನ ಗೂಢಾಭಿಪ್ರಾಯ, ಆ ಸೂತ್ರ ಕಾರನ ಗ್ರಂಥಾಂತರವಚನಗಳಿಂದ ಸ್ಪಷ್ಟವಾಗುತ್ತದೆಂಬ ತಾತ್ಪರ್ಯವೇ. ಆದುದರಿಂದ ಭಾರತ-ಭಗವದ್ಗೀತಾ ಬ್ರಹ್ಮಸೂತ್ರಗಳಿಗೆ ಕರ್ತೃ ಒಬ್ಬನೇ ಎಂದೇ ಶ್ರೀಶಂಕರಮತ. ಭಿನ್ನರೆಂದಲ್ಲ.

9ನೆಯ ಅಂಶ ಅಯುಕ್ತ. ಮಹಾಭಾರತಮೀಮಾಂಸವನ್ನು ಬರೆದವ ರಾದ ಸಪ್ರೇಮಪಂಡಿತರು ಬಾದರಾಯಣರ ಸ್ಥಿತಿ-ಕಾಲವನ್ನು ಕುರಿತು ಬರೆ ದಂತಿಲ್ಲ. ವೇದಾಂತಸೂತ್ರಕಾಲವನ್ನು ಕುರಿತು ಹೀಗೆ ಬರೆದಿದ್ದಾರೆ–

"ವೇದಾಂತಸೂತ್ರಗಳೂ, ಯೋಗಸೂತ್ರಗಳೂ ಕ್ರಿಸ್ತಶಕಕ್ಕೆ ಪೂರ್ವ ಎರಡನೆಯ ಶತಮಾನಕ್ಕೆ ಸೇರಿದ್ದು. ವಾಲ್ಮೀಕಿರಾಮಾಯಣದ ಸಮಯ ಕ್ರಿ.ಶ.ಪೂರ್ವ ಒಂದನೆಯ ಶತಮಾನವೆಂದೂ ಮಹಾಭಾರತದ ಸಮಯ ಕ್ರಿ.ಶಕಕ್ಕೆ ಪೂರ್ವ ಮೂರನೆಯ ಶತಮಾನವೆಂದೂ ಮುಂಚೆ ಹೇಳಿದ್ದೇವೆ."

ಈ ಸಪ್ರೇಮಪಂಡಿತನ ಬರವಣಿಗೆ ಪ್ರತಿವಾದಿಗಳಿಗೆ ಹೇಗೆ ಸಾಧಕ

ವಾಗುತ್ತದೆ? ಪ್ರತಿವಾದಿಗಳು ಬರೆದಂತೆ ನೋಡಿದರೂ ವ್ಯಾಸ-ಬಾದರಾಯಣರಿಗೆ ಭೇದವೇನು ಹೇಳಲ್ಪಟ್ಟಿದೆ!

10ನೆಯ ಅಂಶ ಸರಿಯಲ್ಲ. ಬದರೀವನದಲ್ಲಿ ಇರುವುದರಿಂದ ಬಾದರಾಯಣರೆಂದೂ, ದ್ವೀಪದಲ್ಲಿರುವುದರಿಂದ ದ್ವೈಪಾಯನರೆಂದೂ ಹೇಳುವುದು ವಿರುದ್ಧವಲ್ಲ. ಯಮುನಾನದಿಯಲ್ಲಿನ ದ್ವೀಪಕ್ಕೂ ಬದರೀವನಕ್ಕೂ ಸಂಬಂಧಇಲ್ಲದೆ ಹೋಗದು. 'ಶ್ರುತಪ್ರಕಾಶಿಕೋ' ದಾಹೃತವಾದ ಈ ವಚನವನ್ನು ನೋಡಿ. **ದ್ವೀಪೇ ಬದರಿಕಾಮಿಶ್ರೇ ಬಾದರಾಯಣಮಚ್ಯುತಮ್ । ಪರಾಶರಾತ್ಸತ್ಯವತೀ ಪುತ್ರಂ ಲೇಭೇ ಪರನ್ತಪಮ್ ॥** ಈ ಶ್ಲೋಕದಿಂದ ದ್ವೀಪದಲ್ಲಿ ಬದರೀವೃಕ್ಷಗಳಿವೆಯೆಂದೇ ಅಲ್ಲದೇ ಪರಾಶರರಿಂದ ಸತ್ಯವತೀದೇವಿಯು ಅಂತಹ ದ್ವೀಪದಲ್ಲಿ ಬಾದರಾಯಣರನ್ನು ಹೆತ್ತಳು ಎಂದೂ ಹೇಳಲ್ಪಟ್ಟಿದೆ. ಬಾದರಾಯಣರೇ ದ್ವೈಪಾಯನರು. ಅವರೇ ಪಾರಾಶರ್ಯರು. ಅವರೇ ಸಾತ್ಯವತೀಯರು ಕೂಡ.

11ನೆಯ ಅಂಶ. ಇದು ಅನುಪಪನ್ನ, ಬಾದರಾಯಣರು ತಮ್ಮ ಬ್ರಹ್ಮಸೂತ್ರಗಳಲ್ಲಿ **'ಧರ್ಮಂ ಜೈಮಿನಿರತ ಏವ'** ಎನ್ನುತ್ತ ವ್ಯಾಸಶಿಷ್ಯನಾದ ಜೈಮಿನಿಯನ್ನು ಪೂರ್ವಾಚಾರ್ಯನನ್ನಾಗಿ ಸ್ಮರಿಸಿದ್ದಾರೆ ಎಂಬ ಮಾತು ಅಯುಕ್ತ. ಆ ಸೂತ್ರದಲ್ಲಿ ಜೈಮಿನಿಯು ಪೂರ್ವಾಚಾರ್ಯನೆಂದೇನಿದೆ? ಜೈಮಿನಿಯ ಸ್ಮರಣಮಾತ್ರದಿಂದಲೇ ಜೈಮಿನಿಯು ಪೂರ್ವಾಚಾರ್ಯನೆಂಬ ಪಕ್ಷದಲ್ಲಿ ಆ ಬಾದರಾಯಣರೇ ತಮ್ಮ ಸೂತ್ರಗಳಲ್ಲಿ–**'ಪೂರ್ವಾಸ್ತು ಬಾದರಾಯಣೋ ಹೇತುವ್ಯಪದೇಶಾತ್'** ಎಂದು–ಬಾದರಾಯಣರನ್ನು ಸ್ಮರಿಸಿರುವುದರಿಂದ ಸೂತ್ರದಲ್ಲಿ ಸ್ಮರಿಸಲ್ಪಟ್ಟಿರುವ ಆ ಬಾದರಾಯಣರು ಸೂತ್ರಕರ್ತರಾದ ಬಾದರಾಯಣರಿಗೆ ಪೂರ್ವಾಚಾರ್ಯರೆನ್ನಬೇಕಲ್ಲವೇ? ಇಬ್ಬರು ಬಾದರಾಯಣರನ್ನು ಪ್ರತಿವಾದಿಗಳು ಒಪ್ಪುತ್ತಾರೆಯೇ? ಆದುದರಿಂದ **'ಧರ್ಮಂ ಜೈಮಿನಿರತ ಏವ'**–ಎಂಬ ಸೂತ್ರದಿಂದ ಜೈಮಿನಿಮತ ಪ್ರದರ್ಶನ. **'ಪೂರ್ವಸ್ತು ಬಾದರಾಯಣಃ.....'** ಎಂಬ ಸೂತ್ರದಿಂದ ಸ್ವಮತ ಪ್ರದರ್ಶನವನ್ನು ಮಾಡಲಾಗಿದೆಯೆಂದೇ ತಿಳಿಯಬೇಕು.

12ನೆಯ ಅಂಶವನ್ನು ಕುರಿತು ನಮ್ಮ ಅಭಿಪ್ರಾಯ (ಶ್ರೀ ವಾರಣಾಸಿ

ಸುಬ್ರಹ್ಮಣ್ಯಶಾಸ್ತ್ರಿಗಳು) 'ನಡಾದಿಗಣದ ಬದರಶಬ್ದದಿಂದ ನಡಾದಿಭ್ಯಃ ಫಕ್' ಎಂಬ ಪಾಣಿನಿಯ ಸೂತ್ರದಿಂದ ಬದರನ ಮೊಮ್ಮಗನೆಂದೋ ಇಲ್ಲ ಈತನ ಮಗನೆಂದೋ ಅರ್ಥಕೊಡುವ ಬಾದರಾಯಣಶಬ್ದವು ಹುಟ್ಟುವುದು ಸಹಜವೇ. ಆದರೆ ಈ ಬದರಸಂತತಿಗೆ ಸೇರಿದ ಬಾದರಾಯಣನೇ ಸೂತ್ರ ಕಾರನೆಂಬುದು ನಿರಾಧಾರ. ಆ ಬಾದರಾಯಣಶಬ್ದನಿಷ್ಪತ್ತಿಯಂತೆ ಹೀಗೆನ್ನ ಬೇಕೆಂಬುದು ಸಾಧುವಲ್ಲ. ಆ ಶಬ್ದನಿಷ್ಪತ್ತಿ ಮತ್ತೊಂದು ರೀತಿಯಿಂದಲೂ ಸಿದ್ಧಿಸುತ್ತದೆ.

'ತದಸ್ಮಿನ್ನಸ್ತೀತಿ ದೇಶೇ ತನ್ನಮ್ನಿ' ಎಂಬ ಪಾಣಿನೀಸೂತ್ರದಿಂದ **'ಬದರ್ಯಃ ಸನ್ತ್ಯಸ್ಮಿನ್‌ದೇಶೇ'**–ಎಂಬ ನಿಷ್ಪತ್ತಿ ಉಂಟಾಗಿ ಬದರೀಶಬ್ದದಿಂದ ಬಾದರಶಬ್ದವು ರೂಪಗೊಳ್ಳುತ್ತದೆ. ಬದರಿವೃಕ್ಷಗಳಿರುವ ದೇಶ ಎಂದದರರ್ಥ. ಅದರ ಮೇಲೆ **'ಬಾದರ + ಆಯನ= ಬಾದರಾಯಣಃ** ಎಂಬ ಶಬ್ದ ಲಭಿಸುತ್ತದೆ. ಬದರಿವೃಕ್ಷಗಳುಳ್ಳ ದೇಶಸ್ಥನಾಗಿ ಉಳ್ಳವನು ಎಂದದರ ಅರ್ಥ.

ದ್ವೀಪೇ ಬದರಿಕಾಮಿಶ್ರೇ ಬಾದರಾಯಣಮಚ್ಯುತಂ । ಪರಾಶರಾತ್ಸತ್ಯವತೀ ಪುತ್ರಂ ಲೇಭೇ ಪರನ್ತಪಮ್ ॥ ಎಂದು ಹೇಳಿರುವ ಬಾದರಾಯಣರು ಇವರೇ. ಈತನೇ ಪರಾಶರಪುತ್ರ. ಸತ್ಯವತೀದೇವಿಯ ಮಗ. ಕೃಷ್ಣದ್ವೈಪಾಯನ. ಬೃಹತ್ಸೂತ್ರಕಾರರಾದ ಬಾದರಾಯಣರೂ ಇವರೇ. ಬಾದರವಂಶೀಯ ಬಾದರಾಯಣ ಬ್ರಹ್ಮಸೂತ್ರಕಾರರಲ್ಲ.

13-14ನೆಯ ಅಂಶಗಳು ಅಸಂಗತಗಳು. ಬಾದರಾಯಣರು ತಮ್ಮ ಬ್ರಹ್ಮಸೂತ್ರಗಳಲ್ಲಿ 'ಬಾದರಿ' ಮತವನ್ನು ಪ್ರಸ್ತಾಪಿಸಿರುವುದು ನಿಜವೇ. ಆದರೆ ಆ ಬಾದರಿ, ಆ ಬಾದರಾಯಣ ಬದರಸಂತತಿಗೆ ಸೇರಿದವರು ಎನ್ನುವುದು ಅಸಂಗತ.

ಬದರೀವಂಶೀಯ ಬಾದರಾಯಣನು ವಸಿಷ್ಠಸಂತತಿಗೆ ಸೇರಿದವನೇ ಆದರೆ ಬದರೀವನವಾಸಿ ಬಾದರಾಯಣರೂ ವಸಿಷ್ಠಸಂತತಿಗೆ ಸೇರಿದವರೇ. ಬ್ರಹ್ಮಸೂತ್ರಕರ್ತೃ ಬದರೀವನವಾಸಿ ಬಾದರಾಯಣರೂ ವೇದವ್ಯಾಸರೂ ಒಂದೇ. ಆದ ಕಾರಣ 'ವ್ಯಾಸ-ಬಾದರಾಯಣರು' ಭಿನ್ನವ್ಯಕ್ತಿಗಳು ಎನ್ನುವ ವಾದ ಅಸಂಗತ.

ಹೀಗೆ ಪರಿಶೀಲಿಸಿದರೆ ಪ್ರತಿವಾದಿಗಳು (ಶ್ರೀ ಪೆಂಡ್ಯಾಲ ವೆಂಕಟಸುಬ್ರಹ್ಮಣ್ಯಶಾಸ್ತ್ರಿಗಳು) ಪ್ರದರ್ಶಿಸುವ 14 ಕಾರಣಗಳು ಪ್ರತಿಹತವಾದುವು. ಬ್ರಹ್ಮಸೂತ್ರಕಾರ ಬಾದರಾಯಣರು ವೇದವ್ಯಾಸರೇ ಎಂಬ ಸಿದ್ಧಾಂತ ಅಪ್ರತಿಹತವಾಯಿತು.

ಪ್ರತಿವಾದಿಗಳ ವಂಶಬ್ರಾಹ್ಮಣೋದಾಹರಣವನ್ನು ಕುರಿತು ಹೇಳುತ್ತಿದ್ದೇವೆ.

ಆ ವಂಶಬ್ರಾಹ್ಮಣವನ್ನನುಸರಿಸಿ ಬ್ರಹ್ಮಸೂತ್ರಕಾರರಾದ, (ಅವರ) ಬಾದರಾಯಣರು ಪಾರಾಶರ್ಯವ್ಯಾಸರಿಗೆ ಕೆಳಗೆ ಐದನೆಯ ಪೀಳಿಗೆಯವರು. ವ್ಯಾಸಶಿಷ್ಯ ಜೈಮಿನಿಗೆ ನಾಲ್ಕನೆಯ ಪೀಳಿಗೆಯವರು. ಅಂತಹ ಬಾದರಾಯಣರು ತಮ್ಮ ಸೂತ್ರಗಳಲ್ಲಿ ತಮ್ಮ ಪೂರ್ವಿಕನಾದ ಜೈಮಿನಿಯನ್ನು ಸ್ಮರಿಸುವುದು ಉಪಪನ್ನವಾಗುವುದು. ಆದರೆ ಆ ಜೈಮಿನಿಯು ತನ್ನ ಸೂತ್ರಗಳಲ್ಲಿ **ತತ್ಪ್ರಮಾಣಂ ಬಾದರಾಯಣಸ್ಯಾನಪೇಕ್ಷತ್ವಾತ್** (1-16) ಎಂದು ಕೆಳಗೆ ಎಲ್ಲೋ ನಾಲ್ಕನೆಯ ಪೀಳಿಗೆಯವರಾದ ಬಾದರಾಯಣರನ್ನು ಸ್ಮರಿಸುವುದು ಹೇಗೆ ಉಪಪನ್ನವಾದೀತು? ಅದು ಉಪಪನ್ನವಾಗುವುದಕ್ಕೆ ಜೈಮಿನಿಯಿಂದ ಸ್ಮರಿಸಲ್ಪಟ್ಟ ಆ ಬಾದರಾಯಣರು ಆ ಜೈಮಿನಿಗೆ ಸನ್ನಿಹಿತ ಪೂರ್ವಕವಾಗಿ ವಂಶಬ್ರಾಹ್ಮಣದಲ್ಲಿ ನಿರ್ದೇಶಿಸಲ್ಪಟ್ಟ ಪಾರಾಶರ್ಯವ್ಯಾಸ ನಾಮಗಳಿಂದ ಹೇಳಲ್ಪಟ್ಟ ಆ ಬದರೀವನವಾಸಿ ಬಾದರಾಯಣರು ಎನ್ನುವುದಕ್ಕಿಂತ ಗತ್ಯಂತರವೇನಿದೆ? ಹೀಗೆ ಪ್ರತಿವಾದಿಗಳು ಎರಡು ಪ್ರಬಂಧಗಳಲ್ಲಿನ ವಿಷಯಗಳನ್ನು ಚರ್ಚಿಸಿದರೆ ಸಂಪ್ರದಾಯಸಿದ್ಧವಾದ ವಿದ್ವತ್ಸಿದ್ಧಾಂತವನ್ನು ಪ್ರತಿಭಟಿಸುವ ವಿಮರ್ಶಕರ ವಾದ ಸಾಧಕ-ಬಾಧಕ ಜ್ಞಾನರಹಿತವಲ್ಲದೆ ನಿಸ್ಸಾರವಾದುದುಯೆಂದು ಸ್ಪಷ್ಟಪಟ್ಟಂತಾಯಿತು.

ಬ್ರಹ್ಮಸೂತ್ರಕಾರರಾದ ಬಾದರಾಯಣರು
ವೇದವ್ಯಾಸರೇ ಎಂಬುದಕ್ಕೆ ಪ್ರಮಾಣಗಳು :

1. ಬ್ರಹ್ಮಪುರಾಣೋತ್ತರ ಖಂಡಃ –ಅ–72

“ಮಹಾಭಾರತನಿರ್ಮಾತಾ ಕವೀಂದ್ರೋ ಬಾದರಾಯಣಃ

ಕೃಷ್ಣದ್ವೈಪಾಯನಃ ಸರ್ವಪುರುಷಾರ್ಥೈಕಬೋಧಕಃ ।
ವೇದಾಂತಕರ್ತಾ ಬ್ರಹ್ಮೈಕವ್ಯಂಜಕಃ ಪುರುವಂಶಕೃತ್ ॥

2. ಆದಿಪುರಾಣಂ-ಅ- **1**

'ಕವೀಶ್ವರಂ ತಂ ಹಿ ವಂದೇ ಪ್ರವರಂ ವೈ ತಪಸ್ವಿನಾಮ್ ।
ತತ್ತ್ವಜ್ಞಾನವತಾಂ ಶ್ರೇಷ್ಠಂ ಕೃಷ್ಣದ್ವೈಪಾಯನಂ ಮುನಿಮ್ ॥

ವೇದವೃಕ್ಷಂ ಪ್ರವಿಭಜ್ಯ ಸ್ವಶಿಷ್ಯೇಭ್ಯಃ ಪ್ರದಾಯ ಚ ।
ಇತಿಹಾಸಂ ತದನ್ತಸ್ಥಂ ಸಮುದ್ಧೃತ್ಯ ಮನೀಷಯಾ ॥

ಪುರಾಣಸಂಹಿತಾಂ ಚಕ್ರೇ ಪುರಾಣಾರ್ಥವಿಶಾರದಃ ।
ತದರ್ಥಾನಾಂ ನಿರ್ಣಯಾಯ ಬ್ರಹ್ಮಸೂತ್ರಮಕಲ್ಪಯತ್ ।
ತದ್ಭಾಷ್ಯಭೂತಂ ಪುರಾಣಂ ಭಾಗವತಂ ವಿದುರ್ಬುಧಾಃ ॥

3. ಶ್ರೀಮದ್ಭಾಗವತಂ-ಸ **1** ಅ **5**

ಏವಂ ಸಂಭಾಷ್ಯ ಭಗವಾನ್ ನಾರದೋ ವಾಸವೀಸುತಮ್ ।
ಆಮನ್ತ್ರ್ಯ ವೀಣಾಂ ರಣಯನ್ ಯಯೌ ಯಾದೃಚ್ಛಿಕೋ
ಮುನಿಃ ॥

ನಿರ್ಗತೇ ನಾರದೇ ಸೂತ ಭಗವಾನ್‌ಬಾದರಾಯಣಃ ।
ಶ್ರುತವಾಂಸ್ತಮಭಿಪ್ರೇತಂ ತತಃ ಕಿಮಕರೋದ್ವಿಭುಃ ॥

ತಸ್ಮಿನ್ ಮುಖ್ಯಾಶ್ರಮೇ ವ್ಯಾಸೋ ಬದರೀಷಂಡಮಂಡಿತೇ।
ಆಸೀನೋಽಪ ಉಪಸ್ಪೃಶ್ಯ ಪ್ರಣಿದಧ್ಯೌ ಮನಸ್ಸ್ವಯಮ್ ॥

4. ಪಾಣಿನಿಸೂತ್ರಂ-

"ಪಾರಾಶರ್ಯಶಿಲಾಲಿಭ್ಯಾಂ ಭಿಕ್ಷುನಟಸೂತ್ರಯೋಃ"
"ಪಾರಾಶರ್ಯೇಣ ಪ್ರೋಕ್ತಂ ಭಿಕ್ಷುಸೂತ್ರಮಧೀಯತೇ
ಪಾರಾಶರಿಣೋ ಭಿಕ್ಷವಃ (ಕೌಮುದೀ)"

ಭಿಕ್ಷುಸೂತ್ರಂ-

ಭಿಕ್ಷುತ್ವಸಂಪಾದಕಂ ಸೂತ್ರಂ ಯಥಾ ನಟಸೂತ್ರಂ, ನಟ

ಸೂತ್ರಜ್ಞಾನೇನ ಹಿ ನಟತ್ವಸಂಪತ್ತಿಃ, ಏವಂ ತದ್‍ಜ್ಞಾನೇನ ಬ್ರಹ್ಮ ರೂಪತ್ವೇನ ಸರ್ವಜ್ಞಾನಾತ್ ಕರ್ಮಸ್ವನಾದರೇಣ ಭಿಕ್ಷುತ್ವ ಸಂಪತ್ತೇಃ 'ವೇದಾನ್ತಾನ್ ವಿಧಿವಚ್ಛ್ರುತ್ವಾ ಸಂನ್ಯಸೇದನೃಣೋ ದ್ವಿಜಃ' "ಇತಿ ಸೂಕ್ತೇಃ" ಭಿಕ್ಷವ ಇತಿ । ಭಿಕ್ಷುತ್ವಯೋಗ್ಯಾ ಇತ್ಯರ್ಥಃ "ಪಾರಾಶರ್ಯೋ ವ್ಯಾಸಃ" (ಶಬ್ದೇಂದುಶೇಖರಃ)

5. ಶಾಂಡಿಲ್ಯಸೂತ್ರಂ–ಆಹ್ನಿ 2 ಸೂ 4

ಆತ್ಮೈಕಪದಾಂ ಬಾದರಾಯಣಃ ಭಾಷ್ಯಂ–ಬಾದರಾಯಣ ಆಚಾರ್ಯೋ ಭಗವಾನ್ಮನುತೇ ವ್ಯಾಸಃ–'ಆತ್ಮೇತಿ ತೂಪಗಚ್ಛನ್ತಿ ಗ್ರಾಹಯನ್ತಿ ಚ' ಇತ್ಯಾದಿ ಸೂತ್ರೈರಿತ್ಯರ್ಥಃ.

6. ವಿದ್ಯಾರಣ್ಯಭಾಷ್ಯಂ : ಋಕ್ಸಂಹಿತಾ–

"ಜೈಮಿನಿಶ್ಚೋದನಾಸೂತ್ರೇ ವಿಧಿವಾಕ್ಯಂ ಧರ್ಮೇ ಪ್ರಮಾಣಮಿತಿ ಪ್ರತಿಜ್ಞಾಯ, ಔತ್ಪತ್ತಿಕಸೂತ್ರೇ ತತ್ಪ್ರಾಮಾಣ್ಯಂ ಸಮರ್ಥಯಾಮಾಸ । ವ್ಯಾಸೋಽಪಿ 'ಶಾಸ್ತ್ರಯೋನಿತ್ವಾತ್ ಇತಿ ಸೂತ್ರೇ ವೇದಾನ್ತಾನಾಂ ಬ್ರಹ್ಮಣಿ ಪ್ರಾಮಾಣ್ಯಂ ಪ್ರತಿಜ್ಞಾಯ 'ತತ್ತು ಸಮನ್ವಯೇತ್' ಇತಿ ಸೂತ್ರೈಃ ಸಮರ್ಥಯಾಮಾಸ"

ಶ್ರುತಪ್ರಕಾಶಿಕಾವ್ಯಾಖ್ಯಾ :

ಪಾರಾಶರ್ಯಶಬ್ದೇನ ಜನ್ಮೋತ್ಕರ್ಷಃ 'ಸ ಹೋವಾಚ ವ್ಯಾಸಃ ಪಾರಾಶರ್ಯ ಇತಿ ಶ್ರುತಿಪ್ರಸಿದ್ಧೇಃ ತಸ್ಯೈವ ಬಾದರಾಯಣ ಸಂಜ್ಞಿತ್ವಂ' ತಥೋಕ್ತಂ ಮಹರ್ಷಿಣೈವ–'ದ್ವೀಪೇ ಬದರಿಕಾಮಿಶ್ರೇ ಬಾದರಾಯಣ – ಮಚ್ಯುತಮ್ । ಪರಾಶರಾತ್ಸತ್ಯವತೀ ಪುತ್ರಂ ಲೇಭೇ ಪರನ್ತಪಮ್' ಇತಿ। ಯದ್ಯಪಿ ಋಷ್ಯನ್ತರೇ ಬಾದರಾಯಣಶಬ್ದಪ್ರಯೋಗಃ ತಥಾಪಿ ಸೂತ್ರಕೃದ್ವಿಷಯೋ ಬಾದರಾಯಣಃ ಪರಾಶರ್ಯಗೋಚರ ಏವ; ತಥಾ ಚ ಸ್ಕಾನ್ದೇ ವ್ಯಕ್ತಮುಕ್ತಮ್

ನಾರಾಯಣಾದ್ವಿನಿಷ್ಪನ್ನಂ ಜ್ಞಾನಂ ಕೃತಯುಗೇ ಸ್ಥಿತಮ್ ।
ಕಿಂಚಿತ್ತದನ್ಯಥಾಭೂತಂ ತ್ರೇತಾಯಾಂ ದ್ವಾಪರೇಽಖಿಲಮ್ ॥

ಗೌತಮಸ್ಯ ಋಷೇಶ್ಶಾಪಾತ್ ಜ್ಞಾನೇ ತ್ವಜ್ಞಾನತಾಂ ಗತೇ ।
ಸಂಕೀರ್ಣಬುದ್ಧಯೋ ದೇವಾ ಬ್ರಹ್ಮರುದ್ರಪುರಸ್ಸರಾಃ ॥

ಶರಣ್ಯಂ ಶರಣಂ ಜಗ್ಮುಃ ನಾರಾಯಣಮನಾಮಯಮ್ ।
ತೈರ್ವಿಜ್ಞಾಪಿತಕಾರ್ಯಂ ತು ಭಗವಾನ್ಪುರುಷೋತ್ತಮಃ ॥

ಅವತೀರ್ಣೋ ಮಹಾಯೋಗೀ ಸತ್ಯವತ್ಯಾಂ ಪರಾಶರಾತ್ ॥
ಉತ್ಸನ್ನಾನ್ ಭಗವಾನ್ ವೇದಾನುಜ್ಜಹಾರ ಹರಿಸ್ಸ್ವಯಮ್ ।

.... ತಸ್ಯಾರ್ಥವಿತ್ತಯೇ ।
ಚಕಾರ ಬ್ರಹ್ಮಸೂತ್ರಾಣಿ ಯೇಷಾಂ ಸೂತ್ರತ್ವಮಂಜಸಾ ॥

8. ಮಧ್ವಾಚಾರ್ಯ ಭಾಷ್ಯಂ :

ದ್ವಾಪರೇ ಸರ್ವತ್ರ ಜ್ಞಾನ ಆಕುಲೀಭೂತೇ ತನ್ನಿರ್ಣಯಾಯ ಬ್ರಹ್ಮೇಂದ್ರಾದಿಭಿರರ್ಥಿತೋ ಭಗವಾನ್ನಾರಾಯಣೋ ವ್ಯಾಸತ್ವೇನಾವತತಾರ।

ಅಥೇಷ್ಟಾನಿಷ್ಟಪ್ರಾಪ್ತಿ ಪರಿಹಾರೇಚ್ಛೂನಾಂ ತದ್ಯೋಗಮವಿಜಾನತಾಂ ತನ್ನಿರ್ಣಯಾಯ ಬ್ರಹ್ಮಸೂತ್ರಾಣಿ ಚಕಾರ।

9. ಶ್ರೀಕಂಠಾಚಾರ್ಯಕೃತ ಬ್ರಹ್ಮಸೂತ್ರಭಾಷ್ಯಂ :

ಶ್ರೀಮತಾಂ ವ್ಯಾಸಸೂತ್ರಾಣಾಂ ಶ್ರೀಕಂಠೀಯಃ ಪ್ರಕಾಶ್ಯತೇ
ಮಧುರೋ ಭಾಷ್ಯಸಂದರ್ಭೋ ಮಹಾರ್ಥೋ ನಾತಿ ವಿಸ್ತರಃ ।

10. ವೇದಾನ್ತವಾಚಸ್ಪತ್ಯಃ :

ಬ್ರಹ್ಮಸೂತ್ರಕೃತೇ ತಸ್ಮೈ ವೇದವ್ಯಾಸಾಯ ವೇಧಸೇ ।
ಜ್ಞಾನಶಕ್ತ್ಯಾವತಾರಾಯ ನಮೋ ಭಗವತೋ ಹರೇಃ ॥

11. ಸರ್ವಜ್ಞಮುನಿಕೃತ ಸಂಕ್ಷೇಪಶಾರೀರಕಮ್ :

"ವಾಗ್ವಿಸ್ತರಾ ಯಸ್ಯ ಬೃಹತ್ತರಂಗಾ ವೇಲಾತಟಂ ವಸ್ತುನಿ ತತ್ತ್ವಬೋಧಃ, ರತ್ನಾನಿ ತರ್ಕಪ್ರಸರಪ್ರಕಾರಾಃ ಪುನಾತ್ವಸೌ ವ್ಯಾಸಪಯೋನಿಧಿರ್ನಃ ।"

ಮಧುಸೂದನಸರಸ್ವತೀವ್ಯಾಖ್ಯಾ :

"ರತ್ನಾಕರರೂಪೇಣ ಭಗವನ್ತಂ ವ್ಯಾಸಂ ವಿಷ್ಣ್ವವತಾರಂ ಸೂತ್ರಕಾರಂ ಪ್ರಥಮ ಗುರುಂ ಸ್ತೌತಿ ।"

13. ವೇದಾಂತಾದ್ವೈತಸಿದ್ಧಾಂತದೀಪಿಕಾ :

"ಅಥ ನೈಯಾಯಿಕೇಷು ವಿವರ್ತವಾದಿನಸ್ತು ವ್ಯಾಸಸೂತ್ರಾಭಿಪ್ರಾಯಮಿತ್ಥಂ ಪ್ರತಿಪಾದಯನ್ತಿ"

14. ಶಾಂಕರ ಭಾಷ್ಯವ್ಯಾಖ್ಯಾ-ರತ್ನಪ್ರಭಾ :

ಶ್ರೀ ಶಂಕರಂ ಭಾಷ್ಯಕೃತಂ ಪ್ರಣಮ್ಯ ವ್ಯಾಸಂ ಹರಿಂ ಸೂತ್ರಕೃತಂ ಚ ।
ವಚ್ಮಿ ಶ್ರೀಭಾಷ್ಯತೀರ್ಥೇ ಪರಹಂಸತುಷ್ಟ್ಯೈ ವಾಗಂಜಲಿ
ಬನ್ಧಚ್ಛಿದಮಭ್ಯುಪಾಯಮ್ ॥

.....ತಂ ಜಿಜ್ಞಾಸುಮುಪಲಭ್ಯಮಾನೋ ಭಗವಾನ್ ಬಾದರಾಯಣಃ ತದನುಬನ್ಧಚತುಷ್ಟಯಂ ಶ್ರವಣಾತ್ಮಕಶಾಸ್ತ್ರಾರಂಭಪ್ರಯೋಜಕಂ ನ್ಯಾಯೇನ ನಿರ್ಣೇತುಮಿದಂ ಸೂತ್ರಂ ರಚಯಾಂ ಚಕಾರ. ಅಥಾತೋ ಬ್ರಹ್ಮಜಿಜ್ಞಾಸೇತಿ ।

ಪೂರ್ಣಾನಂದೀಯವ್ಯಾಖ್ಯಾ :

'ಬದರ್ಯಃ ಬದರೀವೃಕ್ಷಾಃ ಯಸ್ಮಿನ್ ದೇಶೇ ಸನ್ತಿ ಸ ದೇಶವಿಶೇಷೋ ಬಾದರಃ । ಸ ಏವಾಽಯನಂ ಸ್ಥಾನಂ ಯಸ್ಯ ಸ ಬಾದರಾಯಣಃ ಶ್ರೀವೇದವ್ಯಾಸಃ । ಅತ್ರ ಸಂಜ್ಞಾತ್ವಾಣ್ಣತ್ವ ಪ್ರಾಪ್ತ್ಯಾ ಕೀಟಾದಿವ್ಯಾವೃತ್ತಿರ್ಬೋಧ್ಯಾ"

14. ಶ್ರೀ ಅಪ್ಪಯ್ಯದೀಕ್ಷಿತಕೃತ ಭಾರತತಾತ್ಪರ್ಯಸಂಗ್ರಹಃ :

ಶ್ರೀಬಾದರಾಯಣಮುನಿಸ್ಸ್ವಯಮೇವ ವಿಷ್ಣುಃ
ಪಾರ್ಥಚ್ಛಲಾತ್ತಮಧಿಕೃತ್ಯ ಕೃತೇ ಪ್ರಬನ್ಧೇ ।
ತಸ್ಯಾಪಿ ನಿತ್ಯಮಹಿತಂ ಶಶಿಭೂಷಣತಾ ।
ಮಾಮ್ರೇಡಯನ್ ಗುರುರದರ್ಶಯದಾದಿತತ್ತ್ವಮ್ ॥

ಮೂಲಕಾರವ್ಯಾಖ್ಯಾ :

ಶ್ರೀಬಾದರಾಯಣನಾಮಾ ಪ್ರಸಿದ್ಧೋ ಮುನಿಃ ಸ್ವಯಮೇವ ವಿಷ್ಣುಃ–

ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಸ್ವಯಮ್ ।
ಕೋ ಹ್ಯನ್ಯಃ ಪುಂಡರೀಕಾಕ್ಷಾನ್ಮಹಾಭಾರತಕೃತ್ ಭವೇತ್ ॥

೧೫. **ಷಡ್ದರ್ಶನಕಾರಸಂಗ್ರಹಶ್ಲೋಕಃ :**

"ಕಪಿಲಸ್ಯ ಕಣಾದಸ್ಯ ಗೌತಮಸ್ಯ ಪತಂಜಲೇಃ
ವ್ಯಾಸಸ್ಯ ಜೈಮಿನೇಶ್ಚಾಪಿ ಶಾಸ್ತ್ರಾಣ್ಯಾಹುಃ ಷಡೇವ ಹಿ ॥

ಇತ್ಯಾದಿ ಹಲವಾರು ಪ್ರಮಾಣಗಳು–ವೇದವ್ಯಾಸರು ಬಾದ ರಾಯಣರೇ ಎಂದೂ, ಬ್ರಹ್ಮಸೂತ್ರಕರ್ತೃ ವೇದವ್ಯಾಸರೇ ಎಂದೂ ಉದ್ಘೋಷಿಸುತ್ತಿವೆ. ವಿದ್ಯಾಸಂಪ್ರದಾಯವು ಭ್ರಷ್ಟವಾಗಿ, ಅವೈದಿಕಸಂಸ್ಕಾರವು ಪ್ರಬಲಿಸಿರುವುದರಿಂದ ಕುವ್ಯಾಖ್ಯಾನಗಳು ಕಾಣಿಸಿಕೊಂಡು ಶ್ರೇಯಸ್ಕಾಮರ ಮನಸ್ಸಿಗೆ ಕಳವಳವನ್ನು ಉಂಟುಮಾಡುತ್ತಿವೆ.

ಶ್ರೀಮನ್ಮಹಾಭಾರತ 'ಜಯ' ಶಬ್ದಾರ್ಥ

ಪ್ರತಿಯೊಂದು ಪುರಾಣದ ಆದಿಯಲ್ಲಿ–'ನಾರಾಯಣಂ ನಮಸ್ಕೃತ್ಯ ....ತತೋ ಜಯಮುದೀರಯೇತ್'–ಎಂದಿರುತ್ತದೆ. ಶ್ರೀಮದ್ಭಾಗವತದ ದ್ವಿತೀಯಾಧ್ಯಾಯದಲ್ಲಿ ಕಥೆಯನ್ನು ಆರಂಭಿಸುವ ಮುನ್ನ ಸೂತರು ಗುರುನಮಸ್ಕಾರಾನಂತರ–**ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ । ದೇವೀಂ ಸರಸ್ವತೀಂ ವ್ಯಾಸಂ ತತೋ ಜಯ ಮುದೀರಯೇತ್ ॥**–ಎಂದು 'ಜಯವನ್ನು ಹೇಳುತ್ತೇನೆ' ಎಂದೇ ಹೇಳಿ ದ್ದಾರೆ. ಅಲ್ಲಿ ಶ್ರೀಧರೀಯದಲ್ಲಿ **ಜಯತ್ಯನೇನ ಸಂಸಾರಮಿತಿ ಜಯೋ ಗ್ರನ್ಥಃ** ಎಂದು ರೂಪನಿಷ್ಪತ್ತಿಯು ಹೇಳಲ್ಪಟ್ಟಿದೆ. ಹೀಗೆ ಸರ್ವಗ್ರಂಥಸಾಧಾರಣವಾಗಿ ಪ್ರಯೋಗಿಸಿರುವ ಜಯಶಬ್ದವನ್ನು ಹಿಡಿದುಕೊಂಡು ಮಹಾಭಾರತದಲ್ಲಿ ಸ್ವಲ್ಪಭಾಗಕ್ಕೆ 'ಜಯ'ವೆಂದು ಹೆಸರಿರುವುದಾಗಿ ಬರೆಯುವುದು ಯುಕ್ತವಲ್ಲ.

ಮಹಾಭಾರತದ ಆದಿಯಲ್ಲಿರುವ–ನಾರಾಯಣಂ ನಮಸ್ಕೃತ್ಯ .....ತತೋ ಜಯಮುದೀರಯೇತ್ ಎಂಬಲ್ಲಿ ನೀಲಕಂಠೀಯವ್ಯಾಖ್ಯಾನ ಹೀಗಿದೆ.

ಟೀಕೆ :–ಜಯೋನಾಮೇತಿಹಾಸೋಽಯಮಿತಿ ವಕ್ಷ್ಯಮಾಣತ್ವಾತ್ ಜಯಸಂಜ್ಞಂ ಭಾರತಾಖ್ಯಮಿತಿಹಾಸಂ ವಾ । ಅಷ್ಟಾದಶಪುರಾಣಾನಿ ರಾಮಸ್ಯ ಚರಿತಂ ತಥಾ । ಕಾರ್ಷ್ಣಂ ವೇದಂ ಪಂಚಮಂ ಚ ಯನ್ಮಹಾಭಾರತಂ ವಿದುಃ । ತಥೈವ ವಿಷ್ಣುಧರ್ಮಾಶ್ಚ ಶಿವಧರ್ಮಾಶ್ಚ ಶಾಶ್ವತಾಃ । ಜಯೇತಿ ನಾಮ ತೇಷಾಂ ಚ ಪ್ರವದಂತಿ ಮನೀಷಿಣಃ॥ ಇತಿ ಭವಿಷ್ಯವಚನಾತ್ಪುರಾಣಾದಿಕಂ ವಾ 'ಚತುರ್ಣಾಂ ಪುರುಷಾರ್ಥಾನಾಮಪಿ ಹೇತೌ ಜಯೋಽಸ್ತ್ರಿಯಾಮ್ । ಇತಿ ಕೋಶಾದನ್ಯಂ ವಾ ಸರ್ವಪುರುಷಾರ್ಥಪ್ರತಿಪಾದಕಂ ಗ್ರಂಥಂ ಶಾರೀರಿಕಸೂತ್ರಭಾಷ್ಯಾದಿರೂಪಮುದೀರಯೇತ್

ಎಂದರೆ ಅಷ್ಟಾದಶ ಪುರಾಣಗಳು, ರಾಮಚರಿತ್ರೆ, ಪಂಚಮವೇದವಾದ ವೇದವ್ಯಾಸರ ಮಹಾಭಾರತ, ವಿಷ್ಣುಧರ್ಮಗಳು, ಶಿವಧರ್ಮಗಳು– ಇವೆಲ್ಲಕ್ಕೂ 'ಜಯ' ವೆಂಬ ವ್ಯವಹಾರವಿದೆಯೆಂದು ಭವಿಷ್ಯಪುರಾಣವು ತಿಳಿಸುತ್ತದೆ. ಸರ್ವಪುರುಷಾರ್ಥಪ್ರತಿಪಾದಕವಾದ ಗ್ರಂಥ 'ಜಯ'ವೆಂದು ಕೋಶ ಸಾರುತ್ತಿದೆ. ಮಹಾಭಾರತದಲ್ಲಿ ಜಯೋ **ನಾಮೇತಿಹಾಸೋಽಯಂ** ಎಂದು ಹೇಳಿರುವುದರಿಂದ ಭಾರತೇತಿಹಾಸವು ಜಯವೆಂದು ಸಂಬೋಧಿಸಲ್ಪಟ್ಟಿದೆ ಎಂದು ಭಾವ.

ಇದರಿಂದ–ಗೀತಾರಹಸ್ಯ (ಪು.178ರಲ್ಲಿ) 'ಜಯ' ಶಬ್ದದಿಂದ ಭಾರತ ಯುದ್ಧದಲ್ಲಿ ಪ್ರಾಪ್ತವಾದ ಪಾಂಡವರ ಜಯವೆಂದು ವಿವಕ್ಷಿತವಾಗಿ ಕಾಣುತ್ತಿದೆ. ಅಲ್ಲದೇ ಹಾಗೆ ಅರ್ಥಮಾಡಿಕೊಂಡರೆ ಭಾರತಯುದ್ಧದ ವರ್ಣನೆ ಜಯವೆಂಬ ಹೆಸರುಳ್ಳ ಗ್ರಂಥದಲ್ಲಿ ವರ್ಣಿಸಲ್ಪಟ್ಟಿರುವುದೆಂದೂ ಅನಂತರ ಅದಕ್ಕೇ ಐತಿಹಾಸಿಕಗ್ರಂಥದಲ್ಲಿರುವ ಉಪಾಖ್ಯಾನಗಳು ಸೇರುವುದರಿಂದ ಇತಿಹಾಸ ಧರ್ಮಾಧರ್ಮವಿವೇಚನೆಗಳೆಂಬ ಎರಡನ್ನೂ ನಿರೂಪಿಸುವುದರಿಂದ ಮಹಾಭಾರತವೆಂಬ ಬೃಹದ್ಗ್ರಂಥವಾಯಿತೆಂದು ಕಾಣುತ್ತಿದೆ– ಎಂಬುದೂ,

ಮಹಾಭಾರತಮೀಮಾಂಸಾ (ಸಂಪುಟ 15 ಸಂಚಿಕೆ 3ರಲ್ಲಿ) ಆದಿಪರ್ವದಲ್ಲೂ ಅಂತ್ಯಪರ್ವದಲ್ಲೂ–**ಜಯೋ ನಾಮೇತಿಹಾಸೋಽಯಂ** ಎಂದಿದೆ. ಎಂದರೆ ಮೂಲಗ್ರಂಥ ಐತಿಹಾಸಿಕವಾಗಿದೆ. ಅದರ ಹೆಸರು 'ಜಯ'

ಸ್ವಲ್ಪಕಾಲವಾದ ಮೇಲೆ ಈ ಗ್ರಂಥಕ್ಕೆ ಭಾರತನಾಮವು ಪ್ರಾಪ್ತ ವಾಯಿತು. ಅದು ತುಂಬಾ ಹರಡಿಕೊಂಡಮೇಲೆ ಅದನ್ನು ಮಹಾಭಾರತ ವೆಂದು ಕರೆಯಲಾರಂಭಿಸಿದರು. ಈ ಮೂರು ಹೆಸರುಗಳು ಭಿನ್ನ-ಭಿನ್ನರಾದ ಮೂವರು ಕರ್ತೃಗಳ ಕೃತಿಗಳಿಗೆ ಚೆನ್ನಾಗಿ ಉಪಯೋಗವಾದುವು" ಎಂದು ಬರೆದದ್ದೂ ಪರಾಸ್ತವಾಯಿತು.

ಇತಿಹಾಸವೆಂದರೆ ಕೇವಲ ಚರಿತ್ರೆಯಷ್ಟೇ ಎಂದುಕೊಳ್ಳುವ ಪ್ರತಿವಾದಿ ಗಳಿಗೆ ಇತಿಹಾಸಪದದ ನಿರ್ವಚನ ಹೇಗಿದೆಯೋ ಪ್ರದರ್ಶಿಸೋಣ.

ಇತಿಹಾಸಶಬ್ದಾರ್ಥ

ಧರ್ಮಾರ್ಥಕಾಮಮೋಕ್ಷಾಣಾಮುಪದೇಶಸಮನ್ವಿತಮ್ ।
ಪೂರ್ವವೃತ್ತಕಥಾಯುಕ್ತಮಿತಿಹಾಸಂ ಪ್ರಚಕ್ಷತೇ ॥

(ಕಾವ್ಯಮೀಮಾಂಸವಿವೃತಿ)

ಈ ನಿರ್ವಚನದಂತೆ ಧರ್ಮಾರ್ಥ-ಕಾಮ-ಮೋಕ್ಷಗಳನ್ನು ಉಪ ದೇಶಿಸಿ ಪೂರ್ವಪ್ರವೃತ್ತಕಥೆಯನ್ನು ಬೋಧಿಸುವುದೇ ಇತಿಹಾಸ. ಆ ಇತಿಹಾಸವೇ 'ಜಯೋ ನಾಮೇತಿಹಾಸೋಽಯಂ'–ಎನ್ನುವುದರಿಂದ ಜಯ ವೆಂಬ ಹೆಸರುಳ್ಳದ್ದು. ಆ ಜಯವು–

ಕಾರ್ಷ್ಣಂ ವೇದಂ ಪಂಚಮಂ ಚ ಯನ್ಮಹಾಭಾರತಂ ವಿದುಃ ।
ಜಯೇತಿ ನಾಮ ತೇಷಾಂ ಚ ಪ್ರವದನ್ತಿ ಮನೀಷಿಣಃ ॥

ಎಂಬ ಪೂರ್ವೋಕ್ತ ಭವಿಷ್ಯಪುರಾಣದ ವಚನದಂತೆ ವೇದವ್ಯಾಸಭಾರ ತವೇ. ಅದೇ **ಭಾರತಂ ಪಂಚಮೋ ವೇದಃ** ಎಂದು ಕೀರ್ತಿಸಲ್ಪಟ್ಟಿದೆ. ಪುರುಷಾರ್ಥಪ್ರತಿಪಾದಕವಾದುದರಿಂದ ಇದನ್ನು ಪಂಚಮವೇದವೆನ್ನುತ್ತಾರೆ.

ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್ ಎಂದು

ವೇದೋಪಬೃಂಹಣಕ್ಕೆ ಇತಿಹಾಸವು ಸಾಧನವಂತೆ. ಆ ಇತಿಹಾಸವು ಪುರುಷಾರ್ಥಪ್ರತಿಪಾದಕವಾಗದಿದ್ದರೆ ಅಸಂಭವ.

ಆದುದರಿಂದ ಜಯ, ಇತಿಹಾಸ, ಭಾರತ ಈ ಶಬ್ದಗಳು ಏಕಾರ್ಥಗಳೇ. ಆದುದರಿಂದಲೇ ರಾಜಶೇಖರಕವಿಯು ಕಾವ್ಯಮೀಮಾಂಸೆಯಲ್ಲಿ ವೇದೋಪವೇದವಿವರಣೆಯ ಸಂದರ್ಭದಲ್ಲಿ– **'ಇತಿಹಾಸವೇದ– ಧನುರ್ವೇದೌ ಗಾಂದರ್ವಾಯುರ್ವೇದಾವಪ್ಯುಪವೇದಾಃ'**–ಎನ್ನುತ್ತ ಇತಿಹಾಸ ವೇದವೆಂದು ಹೊಗಳಿದೆ. ಆ ಮೇಲೆ ಇತಿಹಾಸಸ್ವರೂಪವನ್ನು

ಯದಾಹುಃ : ವರಶ್ರಿಯಾ ಪುರಾಕಲ್ಪ ಇತಿಹಾಸಗತಿರ್ದ್ವಿಧಾ ।
ಸ್ಯಾದೇಕನಾಯಕಾ ಪೂರ್ವಾ ದ್ವಿತೀಯಾ ಬಹು
ನಾಯಕಾ ॥

ತತ್ರ ರಾಮಾಯಣಂ ಭಾರತಂ ಚೋದಾಹರಣೇ ಎಂದು ಬೋಧಿಸಿದೆ. ತರುವಾಯ **'ಸ ತು ಮಹಾಮುನಿಃ ಪ್ರವೃತ್ತವಚನೋ ರಾಮಾಯಣಮಿತಿಹಾಸಂ ಸಮದೃಭತ್ । ದ್ವೈಪಾಯನಸ್ತು...... ಶತಸಾಹಸ್ರೀಂ ಸಂಹಿತಾಂ ಭಾರತಮ್'**

ಎಂದೇ ಪ್ರತಿಪಾದಿಸಿದ್ದಾನೆ. ಇಂದಿಗೆ ಸಾವಿರವರ್ಷಗಳು ಹಿಂದಿನವನಾದ ರಾಜಶೇಖರಕವಿಯು ಹೀಗೆ ಭಾರತವನ್ನು ಇತಿಹಾಸವೆಂದೂ, ಆ ಇತಿಹಾಸವು ಉಪದೇಶವೆಂದೂ ಆ ಭಾರತೇತಿಹಾಸವು ಲಕ್ಷಗ್ರಂಥಾತ್ಮಕವೆಂದೂ, ಅದರ ಕರ್ತೃ ವೇದವ್ಯಾಸಮಹರ್ಷಿಯೆಂದೂ ವಿಸ್ಪಷ್ಟವಾಗಿ ಉದ್ಘೋಷಿಸಿರುವುದರಿಂದ ಪ್ರತಿವಾದಿಗಳ ವಿರುದ್ಧ ಬರವಣಿಗೆ ನಿರಸ್ತವಾಯಿತು.

ಗಣೇಶ ಮಹಾಭಾರತದ ಲೇಖಕ ಹೌದೇ? ಅಲ್ಲವೇ?

ವ್ಯಾಸಮಹರ್ಷಿಗಳು ಭಾರತಗ್ರಂಥವನ್ನು ಬುದ್ಧಿಸ್ಥವಾಗಿಸಿ ಇದನ್ನು ಹೇಗೆ ಶಿಷ್ಯರಿಗೆ ಅಧ್ಯಾಪನಮಾಡುವುದು ಎಂದು ಆಲೋಚಿಸುತ್ತಿರುವಾಗ ಅದನ್ನು ಗ್ರಹಿಸಿ ಬ್ರಹ್ಮನು ಮಹರ್ಷಿಗೆ ಪ್ರತ್ಯಕ್ಷನಾಗಿ ಅವರಿಂದ ಪೂಜಿಸಲ್ಪಟ್ಟು ಸುಖಾಸೀನನಾಗಿರಲು ವ್ಯಾಸರು ತಾವು ಬುದ್ಧಿಯಲ್ಲಿ ಗ್ರಹಿಸಿದ ಭಾರತದಲ್ಲಿರುವ ವಿಷಯಗಳನ್ನು ಸಂಗ್ರಹವಾಗಿ ಆತನಿಗೆ ಅರುಹಿ–

ಪರಂ ನ ಲೇಖಕಃ ಕಶ್ಚಿತ್ ಏತಸ್ಯ ಭುವಿ ವಿದ್ಯತೇ ।

ಎಂದು ಈ ಗ್ರಂಥಕ್ಕೆ ಲೇಖಕರು ಯಾರೂ ಇಲ್ಲಿಲ್ಲ ಎಂದು ಹೇಳಲು, ಬ್ರಹ್ಮದೇವನು ಆ ಗ್ರಂಥಕರ್ತೃತ್ವವನ್ನೂ ಮಹರ್ಷಿಯ ಯೋಗ್ಯತೆಯನ್ನೂ ಪ್ರಶಂಸಿಸಿ, **ಕಾವ್ಯಸ್ಯ ಲೇಖನಾರ್ಥಾಯ ಗಣೇಶಃ ಸ್ಮರ್ಯತಾಂ ಮುನೇ** ಗ್ರಂಥಕ್ಕೆ ಲೇಖಕನಾಗಿ ಗಣಪತಿಯನ್ನು ಸ್ಮರಿಸುವಂತೆ ತಿಳಿಸಿ ಹೊರಟು ಹೋದನು.

ತತಃ ಸಸ್ಮಾರ ಹೇರಂಬಂ ವ್ಯಾಸಃ ಸತ್ಯವತೀಸುತಃ ।
ಸ್ಮೃತಮಾತ್ರೋ ಗಣೇಶಾನೋ ಭಕ್ತಚಿಂತಿತಪೂರಕಃ ॥

ತತ್ರಾಜಗಾಮ ವಿಘ್ನೇಶೋ ವೇದವ್ಯಾಸೋ ಯತಃ ಸ್ಥಿತಃ ।
ಪೂಜಿತಶ್ಚೋಪವಿಷ್ಟಶ್ಚ ವ್ಯಾಸೇನೋಕ್ತಸ್ತದಾನಘ ॥

ಲೇಖಕೋ ಭಾರತಸ್ಯಾಸ್ಯ ಭವ ತ್ವಂ ಗಣನಾಯಕ ।
ಮಯೈವ ಪ್ರೋಚ್ಯಮಾನಸ್ಯ ಮನಸಾ ಕಲ್ಪಿತಸ್ಯ ಚ ॥

ಶ್ರುತ್ವೈತತ್ಪ್ರಾಹ ವಿಘ್ನೇಶೋ ಯದಿ ಮೇ ಲೇಖನೀ ಕ್ಷಣಮ್ ।
ಲಿಖಿತೋ ನಾವತಿಷ್ಠೇತ ತದಾ ಸ್ಯಾಂ ಲೇಖಕೋ ಹ್ಯಹಮ್ ॥

ವ್ಯಾಸೋऽಪ್ಯುವಾಚ ತಂ ದೇವಮಬುದ್ಧ್ವಾ ಮಾ ಲಿಖ ಕ್ವಚಿತ್ ।
ಓಮಿತ್ಯುಕ್ತ್ವಾ ಗಣೇಶೋऽಪಿ ಬಭೂವ ಕಿಲ ಲೇಖಕಃ ॥

ಆಮೇಲೆ ಮಹರ್ಷಿಯು ಸ್ಮರಿಸಲು ಒಡನೆಯೇ ದರ್ಶನವಿತ್ತ ಗಣಪತಿಯನ್ನು ವ್ಯಾಸರು ಪೂಜಿಸಿ–"ಬುದ್ಧಿಸ್ಥವಾಗಿ ನನ್ನಿಂದ ಹೇಳಲ್ಪಡುವ ಭಾರತಕ್ಕೆ ನೀನು ಲೇಖಕನಾಗಬೇಕು"–ಎಂದು ಪ್ರಾರ್ಥಿಸಲು ಗಣಪತಿಯು ವ್ಯಾಸರೊಡನೆ–"ಬರೆಯುವಾಗ ನನ್ನ ಲೇಖಣಿ ಕ್ಷಣವಾದರೂ ನಿಲ್ಲದ ರೀತಿಯಲ್ಲಿ ನೀನು ಹೇಳುವಂತಿದ್ದರೆ ನಾನು ಬರೆಯುತ್ತೇನೆ"–ಎನಲು, ವ್ಯಾಸರು"–ನೀನು ಅರ್ಥಮಾಡಿಕೊಳ್ಳುತ್ತ ಬರೆಯಬಲ್ಲೆಯಾದರೆ ನಾನು ನೀನು ಬಯಸಿದಂತೆ ಹೇಳುತ್ತೇನೆ"–ಎಂದರು. ಈ ಪ್ರತಿಜ್ಞೆಗೆ ಒಪ್ಪಿ ಗಣ ಪತಿಯು ಬರೆಯಲು ಪ್ರಾರಂಭಿಸಿದನು.

ಇಲ್ಲಿಯ ತನಕ ಪ್ರತಿವಾದಿಗಳು ತೋರಿಸಿದುದು 'ಗ್ರಂಥಗ್ರಂಥಿಂ

ತದಾ ಚಕ್ರೇ' ಎಂಬ ಶ್ಲೋಕದ ಪೂರ್ವಗ್ರಂಥ. ಆಮೇಲೆ 80, 81, 82ನೇ ಶ್ಲೋಕಗಳು ಪ್ರತಿವಾದಿಗಳು ಉದಾಹರಿಸಿದ್ದೇ. ಅದರ ಅನಂತರ 83ನೇ ಶ್ಲೋಕ ಹೀಗಿದೆ.

"ಸರ್ವಜ್ಞೋऽಪಿ ಗಣೇಶೋ ಯತ್ ಕ್ಷಣಮಾಸ್ತೇ ವಿಚಾರಯನ್ I
ತಾವಚ್ಚಕಾರ ವ್ಯಾಸೋऽಪಿ ಶ್ಲೋಕಾನನ್ಯಾನ್ ಬಹೂನಪಿ II"

"ಗ್ರಂಥಗ್ರಂಥಿಂ" ಇಂತಹ ನಾಲ್ಕು ಶ್ಲೋಕಗಳ ತಾತ್ಪರ್ಯವೆಂದರೆ, ಗಣಪತಿಯು ಬರೆಯುವಾಗ ಮಹರ್ಷಿಗಳು ಕುತೂಹಲದಿಂದ ಗೂಢವಾಗಿ ಗ್ರಂಥಗ್ರಂಥಿಮಾಡಿದರು. ಆ ಗ್ರಂಥಿಗಳ ವಿಷಯವಾಗಿ ಹೇಳುತ್ತಾ–'8800 ಶ್ಲೋಕಗಳು ನನಗೆ, ಶುಕನಿಗೆ ಹೊರತು ಅನ್ಯರಿಗೆ ದುರವಗಾಹ ವೆಂದು'–ಪ್ರತಿಜ್ಞೆಮಾಡಿದರು. ಆ ಶ್ಲೋಕಕೂಟವು ಇಂದಿಗೂ ಅರ್ಥಗೂಢ ವಾಗಿರುವುದರಿಂದಲೂ, ಗೌಣ್ಯಾದಿ ವೃತ್ತಿಭೇದದಿಂದ ಶಬ್ದಗೂಢವಾಗಿರು ವುದರಿಂದಲೂ ಅಭೇದ್ಯವಾಗಿದೆ. ಸರ್ವಜ್ಞನಾದ ಗಣಪತಿಯೂ ಆ ಶ್ಲೋಕಗಳನ್ನು ಕೇಳಿದಾಗ ಬರೆಯುವುದನ್ನು ನಿಲ್ಲಿಸಿ ಅರ್ಥಗ್ರಹಣಕ್ಕಾಗಿ ಕ್ಷಣಕಾಲ ಆಲೋಚಿಸುತ್ತಿದ್ದನು. ಅಷ್ಟರಲ್ಲಿ ವ್ಯಾಸರು ಇತರ ಹಲವಾರು ಶ್ಲೋಕಗಳನ್ನು ಹೇಳುತ್ತಿದ್ದರು.

ಇದರಂತೆ ಗಣಪತಿಯ ಬರವಣಿಗೆಯ ವೇಗವನ್ನು ತಡೆಗಟ್ಟಲು ವ್ಯಾಸರು ಮಧ್ಯೆ ಮಧ್ಯೆ ಗೂಢಶ್ಲೋಕಗಳನ್ನು ಹೆಣೆದರೆಂದೂ, ಅಂತಹ ಗೂಢಶ್ಲೋಕಗಳೇ 8800 ಎಂದೂ, ಅವುಗಳಲ್ಲದೇ ಅಪಾರಗ್ರಂಥವಿದೆ ಯೆಂದೂ ಸ್ಪಷ್ಟವಾಗಿ ಹೇಳುವಾಗ, ಆ ವಿಷಯ ತಿಳಿಯಪಡಿಸಲು ಇಷ್ಟವಿಲ್ಲದೇ 74ರಿಂದ 79ರವರೆಗೆ ಇರುವ ಪೂರ್ವಶ್ಲೋಕಗಳನ್ನು ಪ್ರದರ್ಶಿ ಸದೇ ಪ್ರತಿವಾದಿಗಳು ಮಾಯಮಾಟದ ಆಟವಾಡಿದ್ದಾರೆ.

(ಶ್ರೀ ಪೆಂಡ್ಯಾಲ ವೆಂಕಟಸುಬ್ರಹ್ಮಣ್ಯಶಾಸ್ತ್ರಿಗಳು)

ಅಲ್ಲದೇ **"ಗ್ರಂಥಗ್ರಂಥಿಂ"** ಎನ್ನುವಾಗ ಶಬ್ದಜ್ಞಾನವಿರುವವರಿಗೆ ತತ್ಪುರುಷಸಮಾಸದಂತೆ ಗ್ರಂಥಿಗಿಂತ ಬೇರೆಯಾಗಿ ಗ್ರಂಥವಿದೆಯೆಂದು ತಿಳಿಯದಿರದು. ಮತ್ತೆ ಪ್ರತಿವಾದಿಗಳಲ್ಲಿ ಒಬ್ಬರಾದ ಮಹಾಭಾರತ ಮೀಮಾಂಸಾಕಾರರು 'ಮೇಕ್ಡೊನಾಲ್ಡ್, ಬೇಬರ್' ಮುಂತಾದ ಪಾಶ್ಚಾತ್ಯ

ವಿದ್ವಾಂಸರು ಆ ಶ್ಲೋಕಗಳ (ಜಯದಲ್ಲಿಯವು) ಸಂಖ್ಯೆ 8800 ಎಂದಿದ್ದಾರೆ. ಆದರೆ ಈ ಅಭಿಪ್ರಾಯವು ನಮಗೆ ಗ್ರಾಹ್ಯವಲ್ಲ....ಮಹಾಭಾರತದಲ್ಲಿ 8800 ಸಂಖ್ಯೆಯು ಉಚ್ಚಾರಣೆ ವ್ಯಾಸರ ಕೂಟಶ್ಲೋಕಗಳನ್ನುದ್ದೇಶಿಸಿ ಬಂದದ್ದು.' ಎನ್ನುತ್ತ ಈ ಮ. ಭಾ. ಚ. ಕಾರರ ವಾದವನ್ನು ತಳ್ಳಿಹಾಕಿದ್ದಾರೆ.

ಅಲ್ಲದೇ ಪ್ರತಿವಾದಿಗಳಲ್ಲೇ ಮತ್ತೊಬ್ಬರಾದ ಶ್ರೀಕೃಷ್ಣಚರಿತ್ರೆಕಾರರೂ ಏಕಾದಶಪರಿಚ್ಛೇದದಲ್ಲಿ ಹೀಗೆ ಬರೆದಿದ್ದಾರೆ.

"ಮಹಾಭಾರತವನ್ನು ಹಲವಾರು ಸಲ ಓದಿ.....ಜಿಜ್ಞಾಸೆಮಾಡಿ ಗ್ರಂಥದ ವಿಷಯವನ್ನು ಮೊದಲು ಬೇರೆ ಬೇರೆ ಅಂತರಗಳಾಗಿ ವಿಭಾಗಿಸ ಬಹುದೆಂದು ಯೋಚಿಸಿದೆವು. ಪ್ರಾರಂಭಕ್ಕೆ ಮೂಲಕಥೆ.... ಅದರಲ್ಲಿ ಪಾಂಡವರ ಜೀವಿತವೃತ್ತಾಂತವನ್ನೂ ತತ್ಸಂಬಂಧವಾದ ಕೃಷ್ಣಕಥೆಯನ್ನೂ ಬಿಟ್ಟರೆ ಬೇರಾವುದೂ ಇಲ್ಲ....ಇದೇ ಚತುರ್ವಿಂಶಸಹಸ್ರ (24 ಸಾವಿರ) ಶ್ಲೋಕಾತ್ಮಕವಾದ ಭಾರತಸಂಹಿತೆಯಾಗಿ ಕಾಣುತ್ತಿದೆ."

ಹೀಗೆ ಬರೆದ ಇವರೂ 8800 ಶ್ಲೋಕಗಳೇ ಮೊದಲ ಗ್ರಂಥವೆಂಬ ಮ.ಭಾ.ಚ.ಕಾರರ ವಾದವನ್ನು ಬದಿಗೊತ್ತಿದ್ದಾರೆ. ಹೀಗೆ ಪ್ರತಿವಾದಿಗಳಲ್ಲೂ ಕೆಲವರಿಂದ ಅಂಗೀಕೃತವಾಗದೇ ಪ್ರಕರಣವಿರುದ್ಧವಾಗಿರುವ ಈ ವಾದವು ಹೇಯವೇ ಸರಿ. ಇಲ್ಲಿ 24 ಸಾವಿರದ ಗ್ರಂಥವೇ ಮೊದಲನೆಯದು (ವ್ಯಾಸರದು) ಎಂಬ ವಾದ. ಆಮೇಲೆ ವಿಮರ್ಶಿಸಲ್ಪಟ್ಟ ಲಕ್ಷ ಗ್ರಂಥವು ಮೊದಲನೆಯದು : ಅದರ ಸಂಗ್ರಹವೇ 24 ಸಾವಿರವೆಂದು ನಿರೂಪಿತ ವಾಗಿರುವುದೆಂಬ ವಿಷಯವನ್ನು ಮರೆಯಬಾರದು.

ಗಣೇಶನ ಲೇಖಕತ್ವಸಮರ್ಥನೆ

ಹೀಗೆ ನಾವು ಮ. ಭಾ. ಚ. ಕಾರರ ವಾದವನ್ನು ಪರೀಕ್ಷಿಸುವುದರಲ್ಲಿ ಮಹಾಭಾರತಕ್ಕೆ ಲೇಖಕ ಗಣಪತಿಯೆಂಬ ವಿಷಯ ಸ್ಥಿರಪಟ್ಟಿತು. ಹೀಗಿರು ವಾಗ ಮ.ಭಾ.ಚ.ಕಾರರೇ 18-4-46 ಆಂಧ್ರಪತ್ರಿಕೆಯಲ್ಲಿ 'ವಿಘ್ನೇಶ್ವರ ಲೇಖಕನೇ?' ಎಂದೊಂದು ಲೇಖನವನ್ನು ಪ್ರಕಟಿಸಿ ಅದರಲ್ಲಿ ವಿಘ್ನೇಶ್ವರ ಲೇಖಕ ಎಂಬ ಕಥೆ ಇತ್ತೀಚೆಗೆ ಸಂಸ್ಕೃತಭಾರತದಲ್ಲಿ ಸೇರಿಸಲ್ಪಟ್ಟಿತು—ಎಂದು

ಬರೆದು ಕೆಲವು ಕಾರಣಗಳನ್ನು ತೋರಿಸಿದ್ದಾರೆ. ಅವುಗಳನ್ನು ಪರಿಶೀಲಿಸೋಣ.

(1) 'ವಿಘ್ನೇಶ್ವರನು ಭಾರತಸಂಹಿತೆಯನ್ನು ಬರೆದನೆಂಬ ಅಂಶ ದಾಕ್ಷಿಣಾತ್ಯಭಾರತದ ಪ್ರಾಚೀನಕೃತಿಗಳಲ್ಲಿ ಇಲ್ಲವೆಂತಲೂ, ಔತ್ತರೇಯಪ್ರತಿಪತ್ರಿಕೆಗಳಲ್ಲೇ ಇತ್ತೀಚೆಗೆ ಸೇರಿದೆಯೆಂದೂ ಮದರಾಸು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸಂಸ್ಕೃತ ಪಂಡಿತರಾದ ಶ್ರೀ ಪಿ. ಪಿ.ಶಾಸ್ತ್ರಿಗಳು ತಾವು ಪರಿಷ್ಕರಿಸಿದ ವಾವಿಳ್ಳ ಅವರ ನಾಗರಲಿಪಿ ಭಾರತಪೀಠಿಕೆಯಲ್ಲಿ ವಿಮರ್ಶಿಸಿ ಬರೆದಿದ್ದಾರೆ. ಇದು ಒಂದು ಕಾರಣ.

ನಾವೀಗ ಆ ಪೀಠಿಕೆಯಲ್ಲೇ ಪಿ.ಪಿ.ಶಾಸ್ತ್ರಿಗಳ ಕೆಲವು ಮಾತುಗಳನ್ನು ನೋಡೋಣ.

"1934 ಸಂ. ಮೊದಲು 1946 ಸಂ. ವರೆಗೆ ದೇವರನಾಗರಲಿಪಿ, ಆಂಧ್ರಲಿಪಿ, ಗ್ರಂಥಲಿಪಿಗಳಲ್ಲಿ ಆರು ಬಗೆಯಾದ ಮಹಾಭಾರತದ ಪ್ರತಿಗಳು ಮುದ್ರಿತವಾಗಿವೆ... ಆ ಮುದ್ರಿತವಾದ ಪ್ರತಿಗಳು ಆರರಲ್ಲೂ ಗಣೇಶ ವೃತ್ತಾಂತವಿದೆ. ನಾವು ಗ್ರಹಿಸಿದ ದಾಕ್ಷಿಣಾತ್ಯಶಾಖಾವಲಂಬಿಮಾತೃಕೆಗಳಲ್ಲಿ ಗಣೇಶವೃತ್ತಾಂತವಿಲ್ಲ."

"ಅಸ್ಮಾಭಿಶ್ಚ ಪರೀಕ್ಷಿತಾಸು ವಸ್ತುತೋ ದಾಕ್ಷಿಣಾತ್ಯಾಸು
ಬಹ್ವೀಷು ಮಾತೃಕಾಸು ಗಣೇಶೋಪಾಖ್ಯಾನಂ ನ ದೃಶ್ಯತೇ
ಇತಿ ಗಣೇಶವೃತ್ತಾಂತೋಪನ್ಯಾಸಾಭಾವ ಏವ ದಾಕ್ಷಿಣಾತ್ಯಾಯಾ
ಮಹಾಭಾರತಮಾತೃಕಾಶಾಖಾಯಾಶ್ಚಿಹ್ನಮಿತಿ ವಕ್ತುಂ
ಪ್ರಭವಾಮಃ"

ಈ ವಾಕ್ಯಗಳಿಂದ "ಪೂರ್ವದಲ್ಲಿ ಮುದ್ರಿತಗಳಾದ ಆರು ಪ್ರತಿಗಳಲ್ಲಿ ಗಣೇಶವೃತ್ತಾಂತವಿದೆ. ನಾವು ತೆಗೆದುಕೊಂಡ ಪ್ರತಿಯಲ್ಲಿ ಆ ವೃತ್ತಾಂತವಿಲ್ಲ. ನಾವು ಪರಿಷ್ಕರಿಸಿದ ದಾಕ್ಷಿಣಾತ್ಯ ಅನೇಕಕೋಶಗಳಲ್ಲಿ ಗಣೇಶ ವೃತ್ತಾಂತವಿಲ್ಲದಿರುವುದರಿಂದ ಗಣೇಶವೃತ್ತಾಂತವು 'ಇಲ್ಲದಿರುವುದೇ ದಾಕ್ಷಿಣಾತ್ಯ ಭಾರತಕೋಶಗಳಿಗೆ ಚಿಹ್ನೆಯೆಂದು ಹೇಳಬಲ್ಲೆವು" ಎಂದು ತಿಳಿಸಿದ್ದಾರೆ.

ಇನ್ನು ಪಿ. ಪಿ. ಶಾಸ್ತ್ರಿಗಳು ಹೇಳಿದ ಆರು ಪ್ರತಿಗಳಲ್ಲಿ ಕುಂಭಕೋಣದ ಪ್ರತಿಯಲ್ಲಿ ಮುದ್ರಾಪಕರು ಬರೆದಿರುವುದನ್ನು ನೋಡಿ.

"ಅನೇಕೇಷಾಂ ವಿದುಷಾಂ ಸಾಹಾಯ್ಯೇನ ದಾಕ್ಷಿಣಾತ್ಯಬಹು ಕೋಶಾನುಸಾರೇಣ ಸಂಶೋಧ್ಯ....... ಪ್ರಕಾಶಿತಮ್"

ಇದನ್ನು ನೋಡಿದರೆ ಕುಂಭಕೋಣದ ಪ್ರತಿ ದಾಕ್ಷಿಣಾತ್ಯಬಹುಕೋಶ ಗಳನ್ನು ಆಧಾರಮಾಡಿಕೊಂಡೇ ಪರಿಷ್ಕರಿಸಿದಂತೆ, ಅವುಗಳಲ್ಲಿ ಗಣೇಶ ವೃತ್ತಾಂತವಿದ್ದಂತೆ ಸ್ಪಷ್ಟಪಟ್ಟಿರುವಾಗ–ದಾಕ್ಷಿಣಾತ್ಯಕೋಶಗಳಲ್ಲಿ ಗಣೇಶ ವೃತ್ತಾಂತವು ಇಲ್ಲವೇ ಇಲ್ಲವೆಂಬ ಪಿ. ಪಿ. ಶಾಸ್ತ್ರಿಗಳ ಮಾತನ್ನು ವಿಶ್ವಸಿಸು ವುದಾದರೂ ಹೇಗೆ?

ಮತ್ತೆ ಗಣೇಶವೃತ್ತಾಂತವಿಲ್ಲದಿದ್ದು ಪಿ. ಪಿ. ಶಾಸ್ತ್ರಿಗಳಿಂದ ಪರಿಶೋಧಿ ಸಲ್ಪಟ್ಟ ಗ್ರಂಥದಲ್ಲಿನ ಪಾಠಕ್ರಮದಲ್ಲಿ ಔಚಿತ್ಯ ಕಾಣದು ; ನೋಡಿ.

"ಅನುಕ್ರಮಣಿಕಾಧ್ಯಾಯಂ ವೃತ್ತಾನ್ತಂ ಸರ್ವಪರ್ವಣಾಮ್
ತಸ್ಯಾಖ್ಯಾನವರಿಷ್ಠಸ್ಯ ಕೃತ್ವಾ ದ್ವೈಪಾಯನಃ ಪ್ರಭುಃ
ಕಥಮಧ್ಯಾಪಯಾಮೀಹ ಶಿಷ್ಯಾನಿತ್ಯನ್ವಚಿನ್ತಯತ್
ತಸ್ಯ ಚಿಂತಯಮಾನಸ್ಯ ಋಷೇರ್ದ್ವೈಪಾಯನಸ್ಯ ಚ

ಸ್ಮೃತ್ವಾಽಽಜಗಾಮ ಭಗವಾನ್ ಬ್ರಹ್ಮಾ ಲೋಕಗುರುಃ ಸ್ವಯಂ
ಪ್ರಿಯಾರ್ಥಂ ಮಹರ್ಷೇಶ್ಚಾಪಿ ಲೋಕಾನಾಂ ಹಿತಕಾಮ್ಯಯಾ"

ಮಹಾಭಾರತೇತಿಹಾಸಕ್ಕೆ ಸರ್ವಪರ್ವವೃತ್ತಾಂತರೂಪವಾದ ಅನು ಕ್ರಮಣಿಕಾಧ್ಯಾಯವನ್ನು ಮಾಡಿ ವ್ಯಾಸಮಹರ್ಷಿಗಳು ಶಿಷ್ಯರಿಗೆ ಉಪದೇ ಶಿಸುವುದು ಹೇಗೆ?–ಎಂದು ಆಲೋಚಿಸಿದರು. ಆಗ ಬ್ರಹ್ಮದೇವನು ಮಹರ್ಷಿಯ ಪ್ರೀತಿಗಾಗಿ, ಲೋಕಜನರ ಹಿತಕ್ಕಾಗಿ ದರ್ಶನವಿತ್ತನು ಎಂದಿದೆ.

ಆ ಮೇಲೆ ಬ್ರಹ್ಮರ್ಷಿಗಳು ಬ್ರಹ್ಮದೇವನನ್ನು ಪೂಜಿಸುವುದು, ಭಾರತ ವೃತ್ತಾಂತವನ್ನು ಹೇಳುವುದು ಇದೆ. ಆದರೆ ಮಿಕ್ಕ ಪ್ರತಿಗಳಲ್ಲಿದ್ದಂತೆ–

"ಪರಂ ನ ಲೇಖಕಃ ಕಶ್ಚಿದೇತಸ್ಯ ಭುವಿ ವಿದ್ಯತೇ" ಎಂದು

ಹೇಳಿದಂತಿಲ್ಲ. ಬ್ರಹ್ಮನು ಮಹರ್ಷಿಯನ್ನೂ ಭಾರತವನ್ನೂ ಶ್ಲಾಘಿಸಿ ಹೊರಟುಹೋದನೆಂದಿದೆ. ಉಳಿದ ಪ್ರತಿಗಳಲ್ಲಿದ್ದಂತೆ **"ಕಾವ್ಯಸ್ಯ ಲೇಖನಾರ್ಥಾಯ ಗಣೇಶಃ ಸ್ಮರ್ಯತಾಂ ಮುನೇ"** ಎಂದು ಹೇಳಿ ಹೋದಂತಿಲ್ಲ. ಈ ಪಾಠಕ್ರಮದಲ್ಲಿ ತಾವು ಅನುಗೊಳಿಸಿದ ಗ್ರಂಥವನ್ನು ಶಿಷ್ಯರಿಗೆ ಹೇಳುವುದರಲ್ಲಿ ಇರುವ ಲೋಪವೇನೆಂದು ವ್ಯಾಸರು ಹೇಗೆ ಬಗೆದರೋ ತಿಳಿಯದು. ಆ ಮಹರ್ಷಿಗಳು ಚಿಂತಿಸುತ್ತಿರುವುದನ್ನು ತಿಳಿದು ಬಂದ ಬ್ರಹ್ಮನು ಆ ಚಿಂತೆಯನ್ನು ಹೇಗೆ ಪರಿಹರಿಸಿದನೋ ತಿಳಿಯದು. ಆ ಮಹರ್ಷಿಯು ಏಕೋ ಚಿಂತಿಸುತ್ತಿರಲು ಆ ಚಿಂತೆ ತೀರದೆಯೇ ಬ್ರಹ್ಮನ ದರ್ಶನದಿಂದ ಮಹರ್ಷಿಗೆ ಪ್ರೀತಿ, ಲೋಕರಿಗೆ ಹಿತ ಎಂತು ಉಂಟಾ ಯಿತೋ ಅರ್ಥವಾಗದು.

ಗಣೇಶವೃತ್ತಾಂತಘಟಿತಪಾಠದಲ್ಲಿ ಇಂತಹ ಲೋಪಗಳಿಲ್ಲ. ಎಂದರೆ ಶಿಷ್ಯರಿಗೆ ತಿಳಿಸುವುದು ಹೇಗೆಂದು ಮಹರ್ಷಿಗೆ ಉಂಟಾದ ಚಿಂತೆ ಲೇಖಕನಿಗಾಗಿಯೇ ಎಂದು ನಿಶ್ಚಯವಾಯಿತು. ಆ ಚಿಂತೆಯನ್ನು ಗ್ರಹಿಸಿಯೇ ದರ್ಶನ ನೀಡಿದ ಪಿತಾಮಹನು ಗಣಪತಿಯನ್ನು ಪ್ರಾರ್ಥಿಸಿ ಲೇಖಕನಾಗಿಸಿಕೊಳ್ಳುವುದೆಂದು ಉಪಾಯ ಹೇಳಿ, ಆ ಚಿಂತೆಯನ್ನು ತೀರಿಸಿದನೆಂದು ಏರ್ಪಟ್ಟಿತು. ಹಾಗೆ ಲೇಖಕನ ಮಾತು ಹೇಳಿದುದರಿಂದಲೇ ಮಹರ್ಷಿಗೆ ಪ್ರೀತಿ, ಅದರ ಮೂಲಕ ಗ್ರಂಥವು ಉದ್ಭೂತವಾದುದರಿಂದ ಜನರಿಗೆ ಹಿತವೆನಿಸಿತೆಂದು ಸ್ಪಷ್ಟವಾಯಿತು.

ಆದುದರಿಂದ ಪಿ.ಪಿ.ಶಾಸ್ತ್ರಿಗಳ ಪರಿಷ್ಕರಣದಲ್ಲಿ ಗ್ರಂಥವು ಲುಪ್ತವಾದಂತೆ ಸ್ಪಷ್ಟವಾಗಿ ಕಂಡುಬರುತ್ತಿರುವುದರಿಂದಲೂ, ಗಣೇಶವೃತ್ತಾಂತವು ಪ್ರಕ್ಷಿಪ್ತವಲ್ಲ.

ಒಂದು ವೇಳೆ ಪಿ. ಪಿ. ಶಾಸ್ತ್ರಿಗಳ ಪಾಠವೇ ಪ್ರಮಾಣವೆಂದು ಮ. ಭಾ. ಚ. ಕಾರರೆಂದರೆ–"ವ್ಯಾಸರ ಗ್ರಂಥ 8800ಮಾತ್ರವೇ"–ಎಂದು ತಮ್ಮವಾದಕ್ಕೆ ಪ್ರಮಾಣವಾಗಿ ಇತ್ತಿರುವ–**"ಗ್ರಂಥಗ್ರಂಥಿಂ" "ಅಷ್ಟೌ ಶ್ಲೋಕಸಹಸ್ರಾಣಿ"** ಎಂಬ ಶ್ಲೋಕಗಳ ಗಣೇಶವೃತ್ತಾಂತಘಟಕಗಳೂ, ಪಿ. ಪಿ. ಶಾಸ್ತ್ರಿಗಳ ಪಾಠದಲ್ಲಿ ಇಲ್ಲದಿರುವುದೂ ಆದುದರಿಂದ ತಮ್ಮ ವಾದಕ್ಕೆ ಆಘಾತವೇ. ಆ ವಾದವನ್ನು ಊರ್ಜಿತಗೊಳಿಸುವುದಕ್ಕೆ ಗಣೇಶವೃತ್ತಾಂತವನ್ನು ಅಂಗೀಕರಿಸುವರೇ? ಆಗ ಪಿ. ಪಿ. ಶಾಸ್ತ್ರಿಗಳ ಪರಿಷ್ಕರಣದಂತೆ ಗಣೇಶ

ವೃತ್ತಾಂತವು ಪ್ರಕ್ಷಿಪ್ತವೆಂಬ ತಮ್ಮ ವಾದಕ್ಕೆ ಇದು ಪ್ರತಿವಾದಿಗಳಿಗೆ 'ಉಭಯತ ಸ್ಪಾಶಾರಜ್ಜುಃ' ಎಂದು ಹೇಳಿದಂತಾಯಿತು. ಹೀಗೆ 'ವಿಘ್ನೇಶ್ವರನು ಲೇಖಕನೇ' ಎಂಬ ಪ್ರಬಂಧದಲ್ಲಿ ಒಂದು ಕಾರಣ ಜಾರಿ ಬಿತ್ತು. ಇನ್ನೊಂದು ಕಾರಣವನ್ನು ಪರಿಶೀಲಿಸೋಣ.

ಪ್ರಾಚೀನಯುಗಗಳಲ್ಲಿ ಲಿಪಿ ಇಲ್ಲವೆಂಬ ಪ್ರಸಂಗ–ತನ್ನಿರಾಕರಣ :

(2) ಲಿಪಿಶಾಸ್ತ್ರಜ್ಞರು ಪ್ರಾಚೀನಯುಗಗಳಲ್ಲಿ ಭರತಖಂಡದಲ್ಲಿ ಲಿಪಿ ಇರಲಿಲ್ಲವೆಂದೂ, ಆಗಿನವರು–ಗುರುವು ಹೇಳಬೇಕು, ಶಿಷ್ಯರು ಕೇಳಿ ಕಂಠಸ್ಥ ಮಾಡಬೇಕು–ಎಂದೂ, ಆದುದರಿಂದಲೇ ಭಾರತೀಯರ ಪ್ರಾಚೀನಗ್ರಂಥ ಗಳಾದ ವೇದಗಳಿಗೆ ಶ್ರುತಿಗಳು ಎಂಬ ಹೆಸರು ಬಂತೆಂದೂ–ಹೇಳುತ್ತಿರ ಬೇಕು. ಇದಕ್ಕೆ ಆಂಧ್ರವಿಜ್ಞಾನಸರ್ವಸ್ವದಲ್ಲಿನ 'ಅಕ್ಷರ' ಲೇಖನ ಓದಬೇಕು. ಇದರಿಂದ ವಿಘ್ನೇಶ್ವರನು ಭಾರತಸಂಹಿತೆಯನ್ನು ಬರೆಯಲಿಲ್ಲವೆಂದು ಹೇಳಬೇಕಾಗಿದೆ.

ಈ ಪ್ರತಿವಾದಿಗಳಿಗೆ ಪ್ರಾಚೀನಯುಗದಲ್ಲಿ ಲಿಪಿಯು ಇತ್ತೋ ಇಲ್ಲವೋ ತೋರಿಸಿಕೊಡೋಣ.

"ವಾನರೋಽಹಂ ಮಹಾಭಾಗೇ ದೂತೋ ರಾಮಸ್ಯ ಧೀಮತಃ
ರಾಮನಾಮಾಂಕಿತಂ ಚೇದಂ ಪಶ್ಯ ದೇವ್ಯಂಗುಳೀಯಕಮ್"

(ರಾಮಾಯಣ–ಸುಂ. ಕಾ. ಸ. 36)

ರಥಮಾರ್ಗಪ್ರಮಾಣಂ ತು ಕೌಂತೇಯೋ ನಿಶಿತೈಃ ಶರೈಃ
ಚಕಾರ ತತ್ರ ಪಂಥಾನಂ ಯಯೌ ಯೇನ ಜನಾರ್ದನಃ ॥

ತೇ ತು ನಾಮಾಂಕಿತಾ ಪೀತಾಃ ಕಾಲಜ್ವಲನಸನ್ನಿಭಾಃ
ಸ್ನಾಯುನದ್ಧಾಃ ಸುಪರ್ವಾಣಃ ಪೃಥವೋ ದೀರ್ಘಗಾಮಿನಃ

(ಮಹಾಭಾರತ ದ್ರೋಣಪರ್ವ ಅ. ೯೯)

ಶಾಸನಂ ತತ್ರ ರಾಮಸ್ಯ ರಾಘವಸ್ಯ ಚ ನಾಮತಃ ।
ಶೃಣು ತಾಮ್ರಾಶ್ರಯಂ ತತ್ರ ಲಿಖಿತಂ ಧರ್ಮಶಾಸ್ತ್ರತಃ ॥

(ಸ್ಕಾಂದ ಧರ್ಮಾರಣ್ಯಕಾಂಡ ಅ. ೩೪)

ಬಬನ್ಧ ಭಾಸ್ವರಂ ಪತ್ರಂ ತಪ್ತಹಾಟಕನಿರ್ಮಿತಮ್ ।
ತತ್ರಾಲಿಖದ್ದಾಶರಥೇಃ ಪ್ರತಾಪಬಲಮೂರ್ಜಿತಮ್ ॥

(ಪದ್ಮಪುರಾಣ ರಾಮಾಶ್ವಮೇಧ ಅ. ೧೦)

ಇತ್ಯಾದಿ ವಚನಗಳೆಷ್ಟೋ ಲಿಪಿಯು ಅನಾದಿಯಾಗಿತ್ತೆಂದು ಉದ್ಘೋಷಿಸುತ್ತವೆ.

ಇನ್ನು ಪ್ರತಿವಾದಿಗಳು ನೋಡಬೇಕಾದುದೆಂದು ಹೇಳಿದ ಆಂಧ್ರ ವಿಜ್ಞಾನಸರ್ವಸ್ವ–ಇಗೋ ನೋಡಿ.

".......ಹೀಗೆ ನಿಶ್ಚಿತವಾದ ಸಾರಾಂಶವೇನೆಂದರೆ ಋಗ್ವೇದಕಾಲದಿಂದಲೂ....ಹಿಂದುಗಳು ಲಿಪಿಯನ್ನು ಬಲ್ಲರು. ಇಷ್ಟು ಪುರಾತನಕಾಲದ ಹಿಂದೆ ಪೂರ್ಣವಾದ ಅಕ್ಷರಾತ್ಮ ಬೆರೆತು ತಿಳಿದ ಜಾತಿ ಮತ್ತೊಂದಿಲ್ಲ. ಹೀಗೆ ವೈದಿಕಕಾಲದಿಂದಲೂ ಲಿಪಿಯ ಬಳಕೆ ಇದ್ದರೆ ವೇದಗಳನ್ನು ಜನರು ಮುಖತಃ ಕಲಿಯುವ ಅಭ್ಯಾಸವೂ ಅದಕ್ಕೆ ಶ್ರುತಿಯೆಂಬ ಹೆಸರೂ ಏಕೆ ಬಂತು? ಎಂದೂ ಪ್ರತಿಪಕ್ಷದವರು ಪ್ರಶ್ನೆ ಕೇಳಬಹುದು....ಶ್ರುತಿ ಶಬ್ದಕ್ಕೆ ಕೇಳಿದ್ದು ಎಂಬ ಅರ್ಥ ಹೇಳುವುದಾದರೆ - ಪರಮೇಶ್ವರನಿಂದ ಋಷಿಗಳು ಕೇಳಿದ್ದು ಎಂದೇಕೆ ಅರ್ಥಕೊಡಬಾರದು? ಋಷಿಗಳು ಕೇವಲ ಮಂತ್ರದ್ರಷ್ಟರು, ಮಂತ್ರಕರ್ತರು ಅಲ್ಲವೆಂಬುದಲ್ಲವೇ ನಮ್ಮವರ ಅಭಿಪ್ರಾಯ... ಪುಸ್ತಕವನ್ನು ನೋಡಿ ವೇದಕಲಿಯುವುದು ಒಳ್ಳೆಯದಲ್ಲವೆಂಬ ಊಹೆ ಈ ದೇಶದಲ್ಲಿ ಹುಟ್ಟಿತೇ ಹೊರತು ಅಕ್ಷರಲೋಪದಿಂದಲ್ಲ."

ವಾಚಕರೇ! ಮ. ಭಾ. ಚಕಾರರು ಎಷ್ಟು ಮೋಸಮಾಡಿರುವರೋ ನೋಡಿ. ಪೂರ್ವದಲ್ಲಿ ಲಿಪಿಯೇ ಇಲ್ಲ ಎಂದವರು ಹೇಳಿದ್ದು. ಅದಕ್ಕೆ ಬಲವಾಗಿ ಅಕ್ಷರವ್ಯಾಸ (ಪ್ರಬಂಧ) ಓದಿಯೆಂದು ಹೇಳಿದರು. ನಾವು ಆ ಪ್ರಬಂಧವನ್ನು ಓದಿದಾಗ ಲಿಪಿಯು ಅನಾದಿಸಿದ್ಧವೆಂದು ನಿರೂಪಿಸಲ್ಪಟ್ಟಿದೆ. ಇದರಿಂದ ಮ.ಚಕಾರರು ಅಪಾರ್ಥಗಳನ್ನು ಕಲ್ಪಿಸಿ ಹೇಳುವುದಕ್ಕೆ ಅಸತ್ಯವನ್ನು ನುಡಿಯುವುದಕ್ಕೆ ಹಿಂಜರಿಯರೆಂದು ತಿಳಿದಂತಾಯಿತು. ಇವರ ಎರಡನೆಯ ಕಾರಣವೂ ಕುಸಿದುಬಿತ್ತು.

(3). ಇನ್ನು ನನ್ನಯಭಟ್ಟಾರಕನ ಪಾಠದಲ್ಲಿ ಈ ವೃತ್ತಾಂತವು ಇಲ್ಲದಿರುವ ಕಾರಣ ಗಣೇಶವೃತ್ತಾಂತವು ಪ್ರಕ್ಷಿಪ್ತವೆಂಬುದು ಮತ್ತೊಂದು.

ಈ ವಿಷಯವಾಗಿ ಮಹಾಭಾರತದಲ್ಲಿ ಅವರು ಬರೆದುದೇ ಅವರಿಗೆ ಉತ್ತರ. "ಅನುಕ್ರಮಣಿಕಾಧ್ಯಾಯದಲ್ಲಿ ಮೂಲಭಾರತದಲ್ಲಿ ಪಾಂಡವರನ್ನು ಕುಂತಿಯು ವನದಿಂದ ಕರೆತಂದಾಗ ಪೌರರಲ್ಲಿ ಕೆಲವರು ಅನುಮಾನಿಸಿದರು...... ಆ ಭಾಗವನ್ನು ತೆಲುಗಿಗೆ ಅನುವಾದ ಮಾಡಲಿಲ್ಲ. ಲಾಕ್ಷಾಗೃಹದಹನಾನಂತರ ಪಾಂಡವರು ಭೀತರಾಗಿ ಪಲಾಯನಮಾಡಿದರೆಂದು ಸಂಸ್ಕೃತಭಾರತದಲ್ಲಿದೆ. ಆದರೆ ಆಂಧ್ರಾನುವಾದದಲ್ಲಿಲ್ಲ ಎಂದು ಮ. ಚ. ಕಾರರೇ ನನ್ನಯ ಬಿಟ್ಟ ಭಾಗಗಳನ್ನು ತೋರಿಸಿ ನಿರ್ಣಯಿಸಿರುವಾಗ, ಗಣೇಶ ವೃತ್ತಾಂತ ಹಾಗೇ ಬಿಡಲ್ಪಟ್ಟಿತೆಂದು ನಾವು ಹೇಳುವುದು ಸುಲಭವೇ. ಹೀಗೆ ಅವರು ಹೇಳಿದ ಕಾರಣಗಳೆಲ್ಲವೂ ಜಾರಿಬಿದ್ದುವು. ವಿಘ್ನೇಶ್ವರನು ಲೇಖಕನೇ ಎಂದು ಸ್ಥಿರಪಟ್ಟಿತು. ಆ ವೃತ್ತಾಂತವು ಇತ್ತೀಚೆಗೆ ಕಲ್ಪಿತವಾದುದಲ್ಲವೆಂಬುದಕ್ಕೆ ಮತ್ತೊಂದು ನಿದರ್ಶನವಿದೆ.

ಮಹಾಭಾರತಕ್ಕೆ ಗಣಪತಿಯು ಲೇಖಕನೆಂಬ ವಿಷಯದಲ್ಲಿ ರಾಜಶೇಖರಕವಿಯ ಸಾಕ್ಷ್ಯ

ಅತಿಪ್ರಾಚೀನನಾದ ರಾಜಶೇಖರ ಕವಿಯು "ಬಾಲಭಾರತ"ವೆಂಬ ತನ್ನ ಗ್ರಂಥದಲ್ಲಿ ಭಾರತಸಂಹಿತೆಗೆ ಗಣೇಶನು ಲೇಖಕನೆಂದು ವ್ಯಾಸ- ವಾಲ್ಮೀಕಿ ಸಂವಾದದಲ್ಲಿ ವ್ಯಾಸರು ಹೇಳಿದಂತೆ ಬರೆದಿದ್ದಾನೆ ನೋಡಿ.

ವಾಲ್ಮೀಕಿಃ–ವತ್ಸ! ಕೃಷ್ಣದ್ವೈಪಾಯನ! ಕಸ್ಯ ಪುನಃ ಕವೇರ್ವಾಚಃ ಭಾರತಸ್ಯ ಷೋಡಶೀಮಪಿ ಕಲಾಂ ಕಲಯನ್ತಿ। 'ಯತಃ ಧರ್ಮೇ ಚಾರ್ಥೇ ಚ ಕಾಮೇ ಚ ಮೋಕ್ಷೇ ಚ ಭರತರ್ಷಭ । ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ತತ್ ಕ್ವಚಿತ್ ॥

......ಕಿನ್ತು ಶ್ರುತಿಮಸ್ಮಾಭಿ......

ವ್ಯಾಸಃ–ಇದಮುಪಾಧ್ಯಾಯ ಪಾದೇಭ್ಯೋ ವಿಜ್ಞಾಪ್ಯತೇ–

ವಿನಾಯಕೋ ಯಶ್ಶಿವಯೋರಪತ್ಯ
ಮರ್ಥಂ ಪುಮಾನರ್ಥಮಿಭಶ್ಚ ದೇವಃ ।
ನ ವರ್ತತೇ ಭಾರತಸಂಹಿತಾಯಾಂ
ವೃತಸ್ತಪೋಭಿರ್ಮಮ ಲೇಖಕೋಽತ್ರ ॥

ತೇನ ಚ ಛಲಯಿತುಮಹಮುಪಕ್ರಾನ್ತಃ ಯದುತ ಬಾಢಮಹಂ ತೇ ಲಿಪಿಕಾರಃ ಕಿಂ ಪುನರ್ಯೇನ ರಂಹಸಾ ಲಿಖೇಯಂ ತೇನ ಯದಿ ನ ಸಂದೃಭಸೇ ತತ್ತೇ ವಿಘ್ನಃ ಸ್ಯಾತ್ । ತತೋ ಮಯಾಪಿ ಪ್ರತಿಚ್ಛಲಿತಃ ಓಮಿತ್ಯಸ್ತು ಕಿಂಪುನರ್ಭವತಾ ಭಾವಯತಾ ಲಿಖಿತವ್ಯಮಿತಿ ಅತಃ ಕಾವ್ಯಕಷ್ಟೇಽಭಿನಿವಿಷ್ಟೋಽಸ್ಮಿ''

ಹೀಗೆ ವ್ಯಾಸಮಹರ್ಷಿಗಳು ಕಠಿನಶೈಲಿಯಲ್ಲಿ ಶ್ಲೋಕಗಳನ್ನು ಹೇಳುವುದಕ್ಕೆ ಕಾರಣ ಗಣಪತಿಯು ಅರ್ಥಮಾಡಿಕೊಳ್ಳಲು ಬರವಣಿಗೆಯಲ್ಲಿ ವೇಗ ಕಡಿಮೆಮಾಡಿಕೊಳ್ಳುವುದಕ್ಕೆ ಎಂದು ಹೇಳಿದರು.

ಹೀಗೆ ಮಹಾಭಾರತದಲ್ಲಿರುವ ಗಣೇಶವೃತ್ತಾಂತವನ್ನೇ ಭಂಗ್ಯಂತರದಿಂದ ತನ್ನ ಗ್ರಂಥದಲ್ಲಿ ಪ್ರತಿಪಾದಿಸಿದ ಈ ರಾಜಶೇಖರಕವಿಯ ಕಾಲವು ಆ ಬಾಲಭಾರತೋಪೋದ್ಘಾತದಲ್ಲಿ ಹೀಗೆ ಹೇಳಲ್ಪಟ್ಟಿದೆ. **''ಅಥ ಚ ೮೮೧ ಮಿತೇ ಶಕೇ ೯೫೯ ಮಿತೇ ವಾ ಕ್ರಿಸ್ತಾಬ್ದೇ ಜೈನಸೋಮ ದೇವೇನ ಯಶಸ್ತಿಲಕ ಚಂಪೂಃ ಪ್ರಣೀತಾ । ತತ್ರ ತೃತೀಯಾಶ್ವಾಸೇ ಮಾಘಾದಿ ಕವಿನಾಮಸು ರಾಜಶೇಖರಸ್ಯಾಪಿ ನಾಮ ವರ್ತತೇ ತಸ್ಮಾತ್ತತ್ಕಾಲಾತ್ಪ್ರಾಚೀನೋ ರಾಜಶೇಖರಃ''**

ಎಂದರೆ ಕ್ರಿ. ಶ. 959ನೇ ಸಂವತ್ಸರದಲ್ಲಿ ಜೈನಸೋಮದೇವನು ರಚಿಸಿದ 'ಯಶಸ್ತಿಲಕ' ಚಂಪುವಿನಲ್ಲಿ ಮಾಘಾದಿಕವಿಗಳ ಹೆಸರುಗಳಲ್ಲಿ ರಾಜಶೇಖರಕವಿಯ ಹೆಸರೂ ತೃತೀಯಾಶ್ವಾಸದಲ್ಲಿ ಕಂಡುಬರುವುದರಿಂದ ಅದಕ್ಕೆ ಹಿಂದಿನಕಾಲ ರಾಜಶೇಖರನದು ಎಂದು ತಾತ್ಪರ್ಯ. ಈ ನಿರ್ಣಯದಂತೆ ಇಂದಿಗೆ ಸಾವಿರ ವರ್ಷಗಳ ಹಿಂದಿನವನು ರಾಜಶೇಖರಕವಿ. ಆತನು ಗಣೇಶವೃತ್ತಾಂತವನ್ನು ಪ್ರಸ್ತಾಪಿಸಿದ್ದಾನೆ. ಆದುದರಿಂದ ವಿಘ್ನೇಶ್ವರನೇ ಲೇಖಕನೆಂಬುದು ನಿಶ್ಚಯ.

ಹೀಗೆ ಅನೇಕಕರ್ತೃತ್ವನಿರಾಕರಣಪ್ರಸ್ತಾವನೆಯಲ್ಲಿ ಪ್ರಸಕ್ತಾನುಪ್ರಸಕ್ತವಾಗಿ ಲಭಿಸಿದ ಗಣೇಶಲೇಖಕತ್ವದ ವಿಷಯದಲ್ಲಿನ ವಿಷಯಗಳ ಆಕ್ಷೇಪಗಳು ಪರಿಹಾರವಾದಂತಾದುವು.

“ದ್ರೌಪದೀವಸ್ತ್ರಾಪಹರಣವು ಜರುಗಲಿಲ್ಲ, ಕೃಷ್ಣನು ಅಕ್ಷಯ ವಸ್ತ್ರಗಳನ್ನು ಕೊಡಲೂ ಇಲ್ಲ” ಎಂಬ ಪ್ರಸಂಗ...ತನ್ನಿರಾಕರಣ

ಮಹಾಭಾರತಚರಿತ್ರೆಕಾರರ ಬರವಣಿಗೆ ಹೀಗಿದೆ–“ದುಶ್ಶಾಸನನು ದ್ರೌಪದಿಯ ಉಟ್ಟಬಟ್ಟೆಯನ್ನು ಸೆಳೆದು ಮಾನಭಂಗಮಾಡಲು ಆಕೆ ಶ್ರೀಕೃಷ್ಣನನ್ನು ಧ್ಯಾನಮಾಡಿದಳೆಂತಲೂ, ಆಕೆಯ ವಸ್ತ್ರಗಳು ಅಕ್ಷಯವಾದು ವೆಂದೂ, ಸೆಳೆದ ವಸ್ತ್ರಗಳು ಸಭೆಯಲ್ಲಿ ರಾಶಿಯಾಗಿ ಬಿದ್ದಿದ್ದುವೆಂದೂ ಸಭಾಪರ್ವದ ಇಪ್ಪತ್ತೇಳನೆಯ ಅಧ್ಯಾಯದಲ್ಲಿ ವರ್ಣಿತವಾಗಿದೆ. ದ್ರೌಪದೀ ವಸ್ತ್ರಾಪಹರಣಸಮಯದಲ್ಲಿ ಶ್ರೀಕೃಷ್ಣನು ವಸ್ತ್ರಗಳು ಅಕ್ಷಯವಾಗುವಂತೆ ಮಾಡಿದನೆಂಬುದು ಲೋಕದಲ್ಲಿ ತುಂಬ ಪ್ರಸಿದ್ಧಿಹೊಂದಿದೆ. ಆದುದರಿಂದ ದ್ರೌಪದೀಮಾನರಕ್ಷಕನೆಂಬ ಅಪೂರ್ವವಾದ ಬಿರುದು ಶ್ರೀಕೃಷ್ಣನಿಗೆ ಉಂಟಾ ಯಿತು. ಇದನ್ನನುಸರಿಸಿ ಕಥೆಗಳಲ್ಲಿ ಬಗೆ-ಬಗೆಯ ಕಲ್ಪನೆಗಳು ತಲೆದೋರಿ ದುವು. ಈ ಕೆಳಕಂಡ ಕಾರಣಗಳಿಂದ ದ್ರೌಪದೀವಸ್ತ್ರಾಪಹರಣವೇ ಆಗಲಿಲ್ಲ ವೆಂದು ಊಹಿಸಬಹುದಾಗಿದೆ. ನನಗೆ ತಿಳಿದಂತೆ ಮಹಾಭಾರತದಲ್ಲಿ ದ್ರೌಪದೀ ಪರಿಭವಪ್ರಶಂಸೆ ಹದಿಮೂರು ಸ್ಥಳಗಳಲ್ಲಿ ಕಂಡುಬರುತ್ತಿದೆ.... ಈ ಹದಿಮೂರರಲ್ಲಿ 1. ದುಶ್ಶಾಸನನು ದ್ಯೂತಕಾಲದಲ್ಲಿ ದ್ರೌಪದಿಯ ಕೂದಲು ಹಿಡಿದೆಳೆದು ಉಡಿಗೆ ಸುಲಿಯುವಾಗ 10. ದುಶ್ಶಾಸನನ ವಧೆಯ ಸಂದರ್ಭದಲ್ಲಿ 11. ದುರ್ಯೋಧನನ ವಧೆಯ ಸಮಯದಲ್ಲಿ ಮಾತ್ರವೇ ವಸ್ತ್ರಾಪಹರಣ ಪ್ರಶಂಸೆ ಹೇಳಲ್ಪಟ್ಟಿದೆ. ದ್ರೌಪದಿಯು ಶ್ರೀಕೃಷ್ಣನೊಡನೆ ತನ್ನ ವಸ್ತ್ರಾಪಹರಣವು ಆಯಿತೆಂದೂ, ಆ ಸಮಯದಲ್ಲಿ ನಿನ್ನನ್ನು ನೆನೆಯಲು ಅಕ್ಷಯವಸ್ತ್ರಗಳನ್ನಿತ್ತು ಸಂರಕ್ಷಿಸಿದೆಯೆಂದೂ ಹೇಳಲಿಲ್ಲ. ಸೂಚನೆಯೂ ಕೊಡಲಿಲ್ಲ. ದ್ರೌಪದಿ ಮಾತ್ರವೇ ಅಲ್ಲ. ಪಾಂಡವರು ಯಾರೂ ಯಾವ ಸಂದರ್ಭದಲ್ಲೂ ದ್ರೌಪದಿಯ ಪರಿಭವವನ್ನು ಹೇಳುವಾಗ ವಸ್ತ್ರಾಪಹರಣದ ಪ್ರಸಂಗವನ್ನು ಹೇಳಲಿಲ್ಲ. ಎಲ್ಲ ಬಗೆಯ ಅಪರಾಧಗಳಿಗಿಂತ ವಸ್ತ್ರಾಪಹರಣಾ ಪರಾಧವು ಹೆಚ್ಚಿನದು. ಅದನ್ನು ಅಷ್ಟಾಗಿ ಹೇಳದಿರುವುದರಿಂದಲೂ, ಅನು ಕ್ರಮಣಿಕೆಯಲ್ಲಿ ಹೇಳದಿರುವುದರಿಂದಲೂ, ದ್ರೌಪದೀವಸ್ತ್ರಾಪಹರಣವು ಜರುಗಲಿಲ್ಲವೆಂದೂ ಶ್ರೀಕೃಷ್ಣನಿಗೆ ದ್ರೌಪದೀಮಾನರಕ್ಷಕನೆಂಬ ಬಿರುದು ಆಕೆಗೆ

ವಸ್ತ್ರಗಳನ್ನು ಅನುಗ್ರಹಿಸಿದುದರಿಂದ ಬರಲಿಲ್ಲವೆಂದೂ ಬರೆಯಲು ಸಾಹಸ ಪಟ್ಟಿದ್ದೇನೆ. ಪ್ರಾಚೀನಮಹಾಕವಿಗಳಾದ ಭಾಸ, ಭಾರವಿ, ಕ್ಷೇಮೇಂದ್ರರೂ ಭಾರತಗಾಥಾಪ್ರತಿಪಾದಕಗಳಾದ ತಮ್ಮ ಗ್ರಂಥಗಳಲ್ಲಿ ಸಭಾಪ್ರವೇಶ, ಕಚ ಗ್ರಹಣಗಳನ್ನು ಮಾತ್ರ ಹೇಳಿದರೆ ಹೊರತು ವಸ್ತ್ರಾಪಹರಣವೃತ್ತಾಂತವನ್ನು ಸೂಚಿಸಲಿಲ್ಲ. ಆಕೆ ಏಕವಸ್ತ್ರೆಯಾಗಿ ರಜಸ್ವಲೆಯಾಗಿ ಇದ್ದಳೆಂಬುದೂ ಸತ್ಯವಲ್ಲ." (ಪುಟ. 85-90)

ಈ ಬರವಣಿಗೆಯಲ್ಲಿ 'ಸಾಹಸಪಟ್ಟಿದ್ದೇನೆ' ಎಂದು ಹೇಳುವ ಪ್ರತಿ ವಾದಿಗಳಿಗೆ (ಅವರ ಆ ಸಾಹಸದ) ನಿಷಿದ್ಧತ್ವವನ್ನು ಕುರಿತು ಕೊಂಚ ನೋಡೋಣ. ಮನೋವ್ಯಾಪಾರದ, ವಾಗ್ವ್ಯಾದಪಾರದ, ಶರೀರ ವ್ಯಾಪಾರದ, ಅನಾಲೋಚಿತ ಅನರ್ಥಕ ದುಡುಕು ಸಾಹಸವೆನಿಸುತ್ತದೆ. ಈ ತೆರನಾದ ದುಡುಕಿನಲ್ಲಿ, ವೇಗಗಳಲ್ಲಿ ಕೆಲವನ್ನು ತಡೆದಿಡಬೇಕು. ಕೆಲವನ್ನು ತಡೆಹಿಡಿದಿಡಲಾಗುವುದಿಲ್ಲ. ಮೂತ್ರ-ಪುರೀಷಗಳ ವೇಗವನ್ನು ತಡೆಯಲಾಗದು. ಸಾಹಸಗಳು ಎನ್ನಲಾಗುವ ಮನೋವಾಕ್ಕಾಯವ್ಯಾಪಾರ ವೇಗಗಳು ತಡೆಹಿಡಿದಿಡಬೇಕಾದ ವರ್ಗಕ್ಕೆ ಸೇರುತ್ತವೆ.

ಈ ವಿಷಯವು ಆಯುರ್ವೇದಗ್ರಂಥವಾದ ಚರಕಸಂಹಿತೆಯಲ್ಲಿ ಉಕ್ತವಾಗಿದೆ.

ನ ವೇಗಾನ್ ಧಾರಯೇದ್ಧೀಮಾನ್ ಜಾತಾನ್ಮೂತ್ರಪುರೀಷಯೋಃ ।
ಇಮಾಂಸ್ತು ಧಾರಯೇದ್ವೇಗಾನ್ ಹಿತಾರ್ಥೀ ಪ್ರೇತ್ಯ ಚೇಹ ಚ ॥
ಸಾಹಸಾನಾಂ ಅಶಸ್ತಾನಾಂ ಮನೋವಾಕ್ಕಾಯಕರ್ಮಣಾಮ್ ॥

ಹೀಗೆ ನಿಷೇಧಿಸಲ್ಪಟ್ಟಿರುವ ಸಾಹಸವನ್ನು ಪ್ರತಿವಾದಿಗಳು ತಳೆದು ಪ್ರಸಿದ್ಧಿಹೊಂದಿದ್ದಾರೆಂದಾಯಿತು. ಇನ್ನು ವಸ್ತ್ರಾಪಹರಣವಿಷಯವು ಹೀಗಿದೆ :

ದುಶ್ಶಾಸನನು ದ್ರೌಪದಿಯನ್ನು ಜುಟ್ಟು ಹಿಡಿದು ಸಭೆಗೆಳೆದು ತರು ವಾಗ ಕಂಪಿಸುತ್ತ–ಆಕೆ "**ಶನೈರುವಾಚಾಥ ರಜಸ್ವಲಾಸ್ಮಿ, ಏಕಂ ಚ ವಾಸೋ ಮಮ ಮಂದಬುದ್ಧೇ ಸಭಾಂ ನೇತುಂ ನಾರ್ಹಸಿ ಮಾಮನಾರ್ಯ**" 'ನಾನು ರಜಸ್ವಲೆ ; ಏಕವಸ್ತ್ರಳಾಗಿದ್ದೇನೆ. ಸಭೆಗೆ ಬರ ಬಾರದು ಎಂದು ಹೇಳುತ್ತಿರಲು', ದುಶ್ಶಾಸನನು–"**ರಜಸ್ವಲಾ ವಾ ಭವ**

ಯಾಜ್ಞಸೇನಿ ಏಕಾಂಬರಾ ವಾಪ್ಯಥವಾ ವಿವಸ್ತ್ರಾ, ದ್ಯೂತೇ ಜಿತಾ ಚಾಸಿ, ಕೃತಾ ಚ ದಾಸೀ ದಾಸೀಷು ವಾಸಶ್ಚ ಯಥೋಪಜೋಷಮ್'', 'ನೀನು ರಜಸ್ವಲೆಯಾದರೇನು, ಏಕವಸ್ತ್ರೆಯಾದರೇನು, ಕೊನೆಗೆ ವಿವಸ್ತ್ರೆಯೇ ಆದರೇನಂತೆ, ದ್ಯೂತದಲ್ಲಿ ಗೆಲ್ಲಲ್ಪಟ್ಟಿರುವ ನೀನು ದಾಸಿಯೇ ಸರಿ. ದಾಸೀಜನರಲ್ಲಿ ವಸ್ತ್ರಪರಿಸ್ಥಿತಿಯು ಅಭಿರುಚಿಯನ್ನು ಅನುಸರಿಸುತ್ತದೆ–ಎಂದು ಕರ್ಣ ಕಠೋರವಾಗಿ ನುಡಿದಾಗ ದ್ರೌಪದಿಯು–**"ಧಿಗಸ್ತು ನಷ್ಟಃ ಖಲು ಭಾರತಾನಾಂ ಧರ್ಮಸ್ತಥಾ ಕ್ಷತ್ರವಿದಾಂ ಚ ವೃತ್ತಂ, ಯತ್ರ ಹ್ಯತೀತಾಂ ಕುರುಧರ್ಮವೇಲಾಂ ಪ್ರೇಕ್ಷನ್ತಿ ಸರ್ವೇ ಕುರವಸ್ಸಭಾಯಾಂ''**–'ಛೀ! ದುರುಳನೇ! ಭಾರತಧರ್ಮವು ನಶಿಸಿತು. ಅಧರ್ಮನಿರ್ಮೂಲನಕ್ಷಮವಾದ ಕ್ಷಾತ್ರವು ನಶಿಸಿತು. ಕುರುವಂಶದ ಧರ್ಮಸೇತುವೆ ಭಗ್ನವಾಗುತ್ತಿರುವಾಗ ಕುರುವಂಶದ ರಾಜರೆಲ್ಲ ಸಭೆಯಲ್ಲಿ ಸುಮ್ಮನೆ ನೋಡುತ್ತಿದ್ದಾರೆ– ಎಂಬುದಾಗಿ ಆರ್ತನಾದಗೈಯುತ್ತಿರುವಾಗ ಸಭಿಕರು ಮರುಗುತ್ತಿದ್ದರು. ಪಾಂಡವರು ಅಪಾರಕ್ಷಮಾಭಾರದಿಂದ, ತಲೆತಗ್ಗಿಸಿ ಕೂತಿದ್ದರು. ದುಶ್ಶಾಸನನು ಆ ಹದಿಬದೆಯನ್ನು ದಾಸಿಯೆಂದು ಹೀಯಾಳಿಸಿದ. ಧೃತರಾಷ್ಟ್ರಪುತ್ರನಾದ ವಿಕರ್ಣನು ದುಶ್ಶಾಸನನ ದುರ್ನಯವನ್ನು ಸಹಿಸಿಕೊಳ್ಳಲಾರದೆ ಇದರಲ್ಲಿ ನ್ಯಾಯವು ಯಾವುದಿದೆಯೋ ಅದನ್ನು ತಾನು ಹೇಳುತ್ತೇನೆ– ಎಂದು ಮುಂದೆ ಬಂದು–ಧರ್ಮಜನು ದ್ಯೂತವ್ಯಸನಿಯಾಗಿರುವುದು, ಜಿತನಾಗಿರುವುದು, ಪರಪ್ರವರ್ತಿತನಾಗಿರುವುದು, ದ್ರೌಪದಿಯು ಧರ್ಮರಾಜನಿಗೆ ಒಬ್ಬನಿಗೇ ಅಲ್ಲದೆ ಎಲ್ಲರಿಗೂ ಪತ್ನಿಯಾಗಿರುವುದು–ಎಂಬೀ ನಾಲ್ಕು ಕಾರಣಗಳಿಂದ ಸಾಧ್ವೀಮಣಿಯಾದ ದ್ರೌಪದಿಯು ಗೆಲ್ಲಲ್ಪಡಲಿಲ್ಲ ಎಂದು ಉದ್ಘೋಷಿಸಿದ, ಆಗ ಕರ್ಣನು ದುಶ್ಶಾಸನನಿಗಿಂತೆಂದ–.

'ದುಶ್ಶಾಸನ! ಸುಬಾಲೋಽಯಂ ವಿಕರ್ಣಃ ಪ್ರಾಜ್ಞವಾದಿಕಃ ಪಾಂಡವಾನಾಂ ಚ ವಾಸಾಂಸಿ ದ್ರೌಪದ್ಯಾಶ್ಚಾಪ್ಯುಪಾಹರ' 'ದುಶ್ಶಾಸನನೇ! ಈ ವಿಕರ್ಣನು ಏನೂ ತಿಳಿಯದವನು. ಪಾಂಡವರ, ದ್ರೌಪದಿಯ ವಸ್ತ್ರಗಳನ್ನು ತೆಗೆದುಕೊ.'

ತಚ್ಛ್ರುತ್ವಾ ಪಾಂಡವಾಸ್ಸರ್ವೇ ಸ್ವಾನಿ ವಾಸಾಂಸಿ ಭಾರತ ।
ಅವಕೀರ್ಯೋತ್ತರೀಯಾಣಿ ಸಭಾಯಾಂ ಸಮುಪಾವಿಶನ್ ॥

ಪಾಂಡವರು ಆ ಮಾತನ್ನು ಕೇಳಿ ಉತ್ತರೀಯಗಳನ್ನು ತಾವೇ ತೆಗೆದಿಟ್ಟು ಕುಳಿತುಕೊಂಡರು. ದುಶ್ಶಾಸನನು ದ್ರೌಪದಿಯ ಸೀರೆಯನ್ನು ಸೆಳೆಯಲಾರಂಭಿಸಿದ.

ಆಕೃಷ್ಯಮಾಣೇ ವಸನೇ ದ್ರೌಪದ್ಯಾ ಚಿಂತಿತೋ ಹರಿಃ ।
ಗೋವಿಂದ ದ್ವಾರಕಾವಾಸಿನ್! ಕೃಷ್ಣ ಗೋಪೀಜನಪ್ರಿಯ ॥
ಕೌರವೈಃ ಪರಿಭೂತಾಂ ಮಾಂ ಕಿಂ ನ ಜಾನಾಸಿ ಕೇಶವ ।
ಕೌರವಾರ್ಣವಮಗ್ನಾಂ ಮಾಮುದ್ಧರಸ್ವ ಜನಾರ್ದನ ॥
ಕೃಷ್ಣ ಕೃಷ್ಣ ಮಹಾಯೋಗಿನ್, ವಿಶ್ವಾತ್ಮನ್ ವಿಶ್ವಭಾವನ ।

ಟೀಕೆ : ವಿಶ್ವಾತ್ಮನ್ ವಿಶ್ವಾಂತರ್ಯಾಮಿನ್ನಿತ್ಯರ್ಥಃ । ವಿಶ್ವಭಾವನ ವಿಶ್ವಕರ್ತಃ । ಅನ್ತರ್ಯಾಮಿತ್ವೇನ ಶತ್ರುಂ ವಾಽಸ್ಮಿನ್ನರ್ಥೇ ಉದಾಸೀನಂ ಕುರು । ಅಥವಾ ವಿಶ್ವಕರ್ತೃತ್ವೇನ ವಸ್ತ್ರಾಣಿ ಬಹೂನಿ ಸಮರ್ಪಯೇತಿ ಭಾವಃ''

ಪ್ರಪನ್ನಾಂ ಪಾಹಿ ಗೋವಿಂದ ಕುರುಮಧ್ಯೇಽವಸೀದತೀಮ್ ।
ಇತ್ಯನುಸ್ಮೃತ್ಯ ಕೃಷ್ಣಂ ಸಾ ಹರಿಂ ತ್ರಿಭುವನೇಶ್ವರಮ್ ॥

ಪ್ರಾರುದದ್ದುಃಖಿತಾ ರಾಜನ್, ಮುಖಮಾಚ್ಛಾದ್ಯ ಭಾಮಿನೀ ।
ತ್ಯಕ್ತ್ವಾ ಶಯ್ಯಾಸನಂ ಪದ್ಭ್ಯಾಂ ಕೃಪಾಲುಃ ಕೃಪಯಾಽಭ್ಯಗಾತ್ ॥

ಟೀಕೆ : ಗಹ್ವರಿತಃ ಕರುಣಾತಿಶಯಾದ್ಗದ್ಗದಕಂಠಃ
'ಕೃಷ್ಣಂ ಚ ವಿಷ್ಣುಂ ಚ ಹರಿಂ ನರಂ ಚ
ತ್ರಾಣಾಯಾ ವಿಕ್ರೋಶತಿ ಯಾಜ್ಞಸೇನೀ ।
ತತಸ್ತು ಧರ್ಮೋಽಂತರಿತೋ ಮಹಾತ್ಮಾ
ಸಮಾವೃಣೋದ್ವೈ ವಿವಿಧೈಃ ಸುವಸ್ತ್ರೈಃ ॥

ಟೀಕೆ : ಧರ್ಮಾಽನ್ತರಿತಃ ಧರ್ಮಮೇವ ಅನ್ತರಂ ವಸ್ತ್ರಂ ತದ್ಭಾವಂ ಗತವಾನ್ ಗತ್ವಾ ಚ ತಾಂ ವಸ್ತ್ರಪೂಗೈಃ ಸಮಾವೃಣೋತ್ ।
ಆಕೃಷ್ಯಮಾಣೇ ವಸನೇ ದ್ರೌಪದ್ಯಾಸ್ತು ವಿಶಾಂಪತೇ ।
ತದ್ರೂಪಮಪರಂ ವಸ್ತ್ರಂ ಪ್ರಾದುರಾಸೀದನೇಕಶಃ ॥

ನಾನಾರಾಗವಿರಾಗಾಣಿ ವಸನಾನ್ಯಥ ವೈ ಪ್ರಭೋ ।
ಪ್ರಾದುರ್ಭವಂತಿ ಶತಶೋ ಧರ್ಮಸ್ಯ ಪರಿಪಾಲನಾತ್ ॥

ತದದ್ಭುತತಮಂ ಲೋಕೇ ವೀಕ್ಷ್ಯ ಸರ್ವೇ ಮಹೀಭೃತಃ ।
ಶಶಂಸುರ್ದ್ರೌಪದೀಂ ತತ್ರ ಕುತ್ಸನ್ತೋ ಧೃತರಾಷ್ಟ್ರಜಮ್ ॥

ಯದಾಂ ತು ವಾಸಸಾಂ ರಾಶಿಸ್ಸಭಾಮಧ್ಯೇ ಸಮಾಚಿತಃ ।
ತತೋ ದುಶ್ಶ್ಯಾಸನಶ್ಶ್ರಾನ್ತೋ ವ್ರೀಡಿತಃ ಸಮುಪಾವಿಶತ್ ॥

(ಸಭಾಪರ್ವ ಅ. 68)

'ದುಶ್ಶ್ಯಾಸನನು ತನ್ನ ವಸ್ತ್ರವನ್ನು ಹಿಡಿದು ಸೆಳೆಯಲು ತೊಡಗಿದಾಗ ದ್ರೌಪದಿಯು ಕೃಷ್ಣಭಗವಾನನನ್ನು ಪ್ರಾರ್ಥಿಸಿದಳು. "ಈ ಕೌರವಾರ್ಣವದಲ್ಲಿ ಮುಳುಗಿಹೋಗುತ್ತಿರುವ ನನ್ನನ್ನು ಉದ್ಧರಿಸು–ಕೃಷ್ಣಾ! ನೀನು ಸರ್ವಾಂತರ್ಯಾಮಿಯಲ್ಲವೇ? ಆದುದರಿಂದ ಈ ಬಗೆಯ ದುಷ್ಕಾರ್ಯವನ್ನು ಮಾಡಬಾರದೆಂಬ ಸುಮತಿಯನ್ನು ಶತ್ರುವಿಗೆ ನೀಡು. ಇಲ್ಲವೆ ನೀನು ವಿಶ್ವಕರ್ತೃವಾದುದರಿಂದ ನನಗೆ ಅನಂತವಸ್ತ್ರಗಳನ್ನಿತ್ತು ಸಲಹು"–ಎಂಬೀ ಭಾವದಿಂದ ಶ್ರೀಕೃಷ್ಣನನ್ನು ಸ್ಮರಿಸಿ ದುಃಖಿಸಿದಳು. ಆ ಸಾಧ್ವೀಮಣಿಯ ಆರ್ತಾಲಾಪಗಳಿಗೆ ಕೃಷ್ಣಪರಮಾತ್ಮನ ಹೃದಯವು ಕರಗಲು ನಿಲ್ಲಲಾರದೆ ಎದ್ದು ದ್ವಾರಕೆಯಿಂದ ಓಡಿಬಂದನು. ಆರ್ತತ್ರಾಣಪರಾಯಣನಾದ ಧರ್ಮಮೂರ್ತಿಯಾದ ಕೃಷ್ಣಪರಮಾತ್ಮನ ಸಂಕಲ್ಪಮಾತ್ರದಿಂದಲೇ ದ್ರೌಪದೀದೇವಿಯ ಧರ್ಮವೇ ವಸ್ತ್ರಭಾವವನ್ನು ಹೊಂದಿ ಆಕೆಯನ್ನು ಆವರಿಸಿರಲು, ದುಶ್ಶ್ಯಾಸನನು ವಸ್ತ್ರಾಕರ್ಷಣಮಾಡುತ್ತಿರುವಂತೆ ಅಂತಹುದೇ ಮತ್ತೊಂದು ಉದ್ಭವಿಸಿ ಬಗೆಬಗೆಯ ಬಣ್ಣಗಳಿಂದ ಅಗಣಿತಸಂಖ್ಯೆಯಲ್ಲಿ ವಸ್ತ್ರಗಳು ಧರ್ಮವು ರಕ್ಷಕವಾಗಿರುವುದರಿಂದ ಹುಟ್ಟಿದುವು. ಆ ಅದ್ಭುತವನ್ನು ಕಂಡು ಸಭಾಸದರು ದ್ರೌಪದಿಯನ್ನು ಹೊಗಳಿ ಧಾರ್ತರಾಷ್ಟ್ರನನ್ನು ತೆಗಳಿದರು. ಸೆಳೆದ ವಸ್ತ್ರಗಳು ಸಭಾಮಧ್ಯದಲ್ಲಿ ರಾಶಿರಾಶಿಯಾಗಿ ಬಿದ್ದುವಲ್ಲದೇ ಮತ್ತೆ ಮತ್ತೆ ಹುಟ್ಟುತ್ತಿರಲು ದುಶ್ಶ್ಯಾಸನನು ಬಸವಳಿದು ನಾಚಿಕೆಯಿಂದ ಕುಳಿತುಬಿಟ್ಟನು.'

ಸಭಾಪರ್ವದಲ್ಲಿನ ದ್ರೌಪದೀವಸ್ತ್ರಾಪಹರಣದ ವೃತ್ತಾಂತವಿದು. ಮಹಾಭಾರತಚರಿತ್ರೆಕಾರರು ಇದನ್ನು ಒಪ್ಪಿಕೊಂಡಿದ್ದಾರೆ. ಇನ್ನು ಈ

ವಿಷಯವನ್ನು ಅನುಕ್ರಮಣಿಕೆಯಲ್ಲಿ ಹೇಳಿಲ್ಲವೆಂದಿದ್ದಾರೆ. ಆದರೆ ಅದು ಅಲ್ಲಿ ಹೇಳಲ್ಪಟ್ಟಿದೆ.

ಮಹಾಭಾರತದಲ್ಲಿ ಪ್ರಥಮಾಧ್ಯಾಯಕ್ಕೆ ಅನುಕ್ರಮಣಿಕಾಧ್ಯಾಯವೆಂದು ಹೆಸರು. ಅದರಲ್ಲಿ ಪಾಂಡವರ ವಿಜಯಕ್ಕೆ ಕಾರಣಗಳನ್ನು ಕೌರವರ ಅಪಜಯಕ್ಕೆ ಕಾರಣಗಳನ್ನೂ ಮೊದಲಿನಿಂದಲೂ ತಾನು ಗ್ರಹಿಸುತ್ತಲೇ ಬಂದಿರುವುದಾಗಿ ಅವುಗಳೆಲ್ಲವನ್ನೂ ಧೃತರಾಷ್ಟ್ರನು ಸಂಜಯನಿಗೆ ತಿಳಿಸುವ ಸಂದರ್ಭದಲ್ಲಿ ಭಾರತಾರ್ಥಸಂಗ್ರಹವು ಅರವತ್ತೇಳು ಶ್ಲೋಕಗಳಲ್ಲಿ ಹೇಳಲ್ಪಟ್ಟಿದೆ. ಆ ಪ್ರಸ್ತಾಪದಲ್ಲಿ ಧೃತರಾಷ್ಟ್ರನೇ ವಸ್ತ್ರಾಪಹರಣವನ್ನೂ ಅನಂತರ ವಸ್ತ್ರಾವಿರ್ಭಾವವನ್ನೂ ರಜಸ್ವಲಾವಸ್ಥೆಯನ್ನೂ ಹೀಗೆ ಹೇಳಿದ್ದಾನೆ.

"ಯದಾಶ್ರೌಷಂ ದ್ರೌಪದೀಮಶ್ರುಕಂಠೀಂ
ಸಭಾಂ ನೀತಾಂ ದುಃಖಿತಾಮೇಕವಸ್ತ್ರಾಮ್ ।
ರಜಸ್ವಲಾಂ ನಾಥವತೀಮನಾಥವತ್ತದಾ
ನಾಶಂಸೇ ವಿಜಯಾಯ ಸಂಜಯ ॥

ಯದಾ ಶ್ರೌಷಂ ವಾಸಸಾಂ ತತ್ರ ರಾಶಿಂ
ಸಮಾಕ್ಷಿಪತ್ಕಿತವೋ ಮಂದಬುದ್ಧಿಃ ।
ದುಶ್ಶ್ಯಾಸನೋ ಗತವಾನ್ನೈವ ಚಾನ್ತಂ
ತದಾ ನಾಶಂಸೇ ವಿಜಯಾಯ ಸಂಜಯ ॥

ಟೀಕೆ : ಯದಾಶ್ರೌಷಂ ದ್ರೌಪದೀಮಿತಿ ಪತಿವ್ರತಾಕೋಪಾತ್ ಪಾಂಡವಾನಾಂ ಕ್ಷೋಭಾಚ್ಚ ನಷ್ಟಾ ಜಯಾಶೇತ್ಯರ್ಥಃ । ಇದರಿಂದ ಅನುಕ್ರಮಣಿಕೆಯಲ್ಲಿ ಹೇಳಲಿಲ್ಲವೆಂಬ ಮಾತು ನಾಟಕವೆಂದಾಯಿತು.

ಇನ್ನು ದ್ರೌಪದಿಯ ಪರಿಭವಪ್ರಶಂಸೆ ಉಕ್ತವಾಗಿರುವ ಹದಿಮೂರು ಸ್ಥಳಗಳಲ್ಲಿ ಮೂರು ಕಡೆ ಬಿಟ್ಟರೆ ಮಿಕ್ಕ ಸ್ಥಳಗಳಲ್ಲಿ ಹೇಳದಿರುವುದರಿಂದ ದ್ರೌಪದಿಯ ವಸ್ತ್ರಾಪಹರಣವು ಜರುಗಲಿಲ್ಲವೆಂಬ ಮಾತನ್ನು ಕುರಿತು ಹೇಳಬೇಕಾಗಿದೆ.

ಕೆಲವು ಕಡೆ ಕಂಠೋಕ್ತವಾಗಿ ಹೇಳಲ್ಪಟ್ಟ ವಿಷಯ ಮತ್ತೆ ಕೆಲವೆಡೆಗಳಲ್ಲಿ ಹೇಳದಿರುವುದರಿಂದ ಅದು ಅಸತ್ಯವಾದೀತೇ? ಈ ವಿಷಯವನ್ನು **"ನ ಹಿ ಕ್ವಚಿದಶ್ರವಣಮನ್ಯತ್ರ ಶ್ರುತಂ ವಾರಯತಿ"** ಎಂಬ ನ್ಯಾಯವು

ಹೇಳಿರುವುದರಿಂದ ಪ್ರತಿವಾದಿಗಳು ಹಾಗೆ ಬರೆಯುವುದು ಕೇವಲ ಅಜ್ಞಾನವೇ ಸರಿ. ಮತ್ತೊಂದು ಅವರು ಹೇಳಲಿಲ್ಲವೆಂದಿರುವ ಕಡೆಗಳಲ್ಲಿಯೂ ಹೇಳಿರುವಂತೆ ಸ್ವಲ್ಪ ಮಟ್ಟಿಗೆ ತೋರಿಸುತ್ತಿದ್ದೇವೆ :– "ದ್ರುಪದ ಪುರೋಹಿತನು ಕೌರವಸಭೆಯಲ್ಲಿ ಮಾತಾಡುವಾಗ ವಸ್ತ್ರಾಪಹರಣದ ಬಗೆಗೆ ಹೇಳಲಿಲ್ಲವಂತೆ ನೋಡಿ, ಹೇಳಿದ್ದಾನೆ.

ಪುನಶ್ಚ ವರ್ಧಿತಂ ರಾಜ್ಯಂ ಸ್ವಬಲೇನ ಮಹಾತ್ಮಭಿಃ ।
ಛದ್ಮನಾಪಹೃತಂ ಕ್ಷುದ್ರೈ ರ್ಧಾರ್ತರಾಷ್ಟ್ರೈ ಸ್ಸಸೌಬಲೈಃ ॥

ತದಪ್ಯನುಮತಂ ಕರ್ಮ ಯಥಾಯುಕ್ತಮನೇನ ವೈ ।
ವಾಸಿತಾಶ್ಚ ಮಹಾರಣ್ಯೇ ವರ್ಷಾಣೀಹ ತ್ರಯೋದಶ ॥

ಸಭಾಯಾಂಕ್ಲೇಶಿತೈರ್ವೀರೈಸ್ಸಹಭಾರ್ಯೈಸ್ತಥಾ ಭೃಶಂ ।
ಅರಣ್ಯೇ ವಿವಿಧಾಃ ಕ್ಲೇಶಾನ್ಸಂಪ್ರಾಪ್ತಾಸ್ತೈಸ್ಸುದಾರುಣಾಃ ॥

ಇಲ್ಲಿ ಮೂರನೆಯ ಶ್ಲೋಕದಲ್ಲಿ–ಸಹ ಭಾರ್ಯೈಃ ಸಭಾಯಾಂ ತಥಾ ಕ್ಲೇಶಿತೈಃ–ಎನ್ನುವಲ್ಲಿ ದ್ರೌಪದಿಯೊಡನೆ ಅಂದಿನ ಸಭೆಯಲ್ಲಿ ಪಾಂಡವರು ಆ ಪ್ರಕಾರವಾಗಿ ಪೀಡಿಸಲ್ಪಟ್ಟರು ಎಂದು 'ತಥಾ' ಶಬ್ದದಿಂದ ಅಂದಿನ ದ್ಯೂತಸಭೆಯಲ್ಲಿ ನಡೆದ ದುಷ್ಕಾರ್ಯಗಳನ್ನು ವಸ್ತ್ರಾಪಹರಣಾಂತವಾಗಿ ಹೇಳಿಯೇ ಇದ್ದಾನೆ. ದ್ಯೂತಸಭೆಯಲ್ಲಿ ವಸ್ತ್ರಾಪಹರಣವು ಆದಂತಿದೆಯೆಂದು ಪ್ರತಿವಾದಿಗಳು ಬರೆದಿದ್ದಾರೆ. ಆ ದ್ಯೂತಸಭಾವೃತ್ತಾಂತವನ್ನೇ 'ತಥಾ' (ಆ ಪ್ರಕಾರವಾಗಿ) ಎಂಬ ಮಾತಿಂದ ಉಲ್ಲೇಖಿಸಿದ್ದಾನೆ. ಈ ಶ್ಲೋಕಗಳಿಗೆ ಆಂಧ್ರಭಾರತವು ಅರ್ಥ ವಿವರಿಸಿದೆ.

ಉದ್ಯೋಗಪರ್ವ :– 1 ಆಶ್ವಾಸ

ತೇಟಗೀತಿ ಃ–ಬಾಹುಬಲಮೊಪ್ಪ ನಿಜರಾಜ್ಯಪದವಿಬೊಂದಿ
ಯುನ್ನವಂಚ ಮೆಯಿಮಹಿಗೊನ್ನತೆರಗು
ನೆರುಗುದರಕಾದೆ ದೀನಿಕಿ ನೆಲ್ಲನಿಯ್ಯ
ಕೊನಿಯನೀಪೆದ್ದರಾಜು ನೇಮನಗನೇರ್ತು

(ಶಾ॥ ನಾರೀರತ್ನಮು ನಟ್ಲುದೆಚ್ಚಿ ಸಭಲೋನನ್ ವಾರಲುಂ ಜುಂಡಗಾ ಜೀರಲ್ ಪ್ರೋವುಲುಗಾಗನೊಲ್ಚುಟಯು ಲಕ್ಷ್ಮೀಂ ಬುಚ್ಚಿ

ಕೋಲುನ್ ಮಹೋಗ್ರಾರಣ್ಯಸ್ಥಲಿನಿಲ್ವಬಂಚುಟಯು ದೈನ್ಯವ್ಯಕ್ತಿಮೈ ಪಲ್ಕು ಲುನ್ ಸೈರಿಂಪಂಜನು ಪಾಂಡವೇಯುಲಕು ನೀ ಸಂಧಿಕ್ರಮಂಬೊಪ್ಪದೇ)

ಇನ್ನು ಶ್ರೀಕೃಷ್ಣನು ಕೌರವಸಭೆಯಲ್ಲಿ ಕೌರವರ ದುಷ್ಟಕಾರ್ಯ ಹೇಳುವಾಗ ವಸ್ತ್ರಾಪಹರಣದ ಮಾತೆತ್ತಲಿಲ್ಲವಂತೆ–ಎತ್ತದೆಯೇನು? ಎತ್ತಿದ್ದಾನೆ, ನೋಡಿ.

ಕಶ್ಚಾನ್ಯೋ ಭ್ರಾತೃಭಾರ್ಯಾಂ ವೈ ವಿಪ್ರಕರ್ತುಂ ತಥಾರ್ಹತಿ ।
ಆನೀಯ ಚ ಸಭಾಂವ್ಯಕ್ತಂ ಯಥೋಕ್ತಾ ದ್ರೌಪದೀ ತ್ವಯಾ ॥

ಕುಲೀನಾ ಶೀಲಸಂಪನ್ನಾ ಪ್ರಾಣೇಭ್ಯೋಽಪಿ ಗರೀಯಸಿ ।
ಮಹಿಷೀ ಪಾಂಡುಪುತ್ರಾಣಾಂ ತಥಾ ವಿನಿಕೃತಾ ತ್ವಯಾ ॥

ಇಲ್ಲಿಯೂ ಸಹ **ತಥಾ** ವಿನಿಕೃತಾ ಎಂಬ ಮಾತಿನಲ್ಲಿ ವಸ್ತ್ರಾಪಹರಣ ಸನ್ನಿವೇಶವನ್ನು ಪ್ರಸ್ತಾಪಿಸಿಯೇ ಇದ್ದಾನೆ. ಇಲ್ಲಿ ಆಂಧ್ರಭಾರತವನ್ನು ನೋಡಿ.

ತೇಟಗೀತಿ :–ಅನ್ನದಮ್ಮುಲುನೆತಮ್ಮುಲಾಂಡಿ ಸತುಲ
ತಲುಲ ಪಟ್ಟಿಸಭಾಸ್ಥಲಂಬುಲುಕು ನೀಡ್ಚಿ
ಚೀರಲೋಲಿಂಪಿತುರೇಯಿಟ್ಟಿವಾರಿನೆಂದು
ದಡವುಮಾ ನೀವೊಕಂಡವುದಕ್ಕನಧಿಪ

ಇನ್ನು – ಸಂಜಯನ ರಾಯಭಾರಸನ್ನಿವೇಶದಲ್ಲಿ ವಸ್ತ್ರಾಪಹರಣದ ಮಾತು ಬರಲಿಲ್ಲವಂತೆ – ಮೂಲದಲ್ಲಿ ಹೀಗಿದೆ :

ದುಶಾಸನಃ ಪ್ರಾತಿಕಾಮ್ಯಾನ್ನಿನಾಯ
ಸಭಾಮಧ್ಯೇ ಶ್ವಶುರಾಣಾಂ ಚ ಕೃಷ್ಣಾಮ್ ।
ಕೃಷ್ಣಾತ್ವೇತತ್ಕರ್ಮ ಚಕಾರಂ ಶುದ್ಧಂ
ಸುದುಷ್ಕರಂ ತತ್ರ ಸಭಾಂ ಸಮೇತ್ಯ
ಯೇನ ಕೃಚ್ಛ್ರಾತ್ಪಾಂಡವಾನುಜ್ಜಹಾರ
ತಥಾತ್ಮಾನಂ ನೌರಿವ ಸೌಗತಾಘಾತ್ ॥

ಇಲ್ಲಿ ದುಃಶಾಸನನು ಅಕ್ರಮವಾಗಿ ದ್ರೌಪದಿಯನ್ನು ಸಭೆಗೆಳೆದುತಂದನೆಂದೂ ಅಂದಿನ ಆಪತ್ಸಾಗರದಿಂದ ತಾನೂ ಮತ್ತು ಪಾಂಡವರೂ ಉದ್ಧರಿಸಲ್ಪಡುವುದಕ್ಕಾಗಿ ದ್ರೌಪದಿಯೇ ಸಭೆಯಲ್ಲಿ ಉಜ್ಜ್ವಲವೂ, ದುಷ್ಕರವೂ ಆದ ಕೆಲಸವನ್ನು ಮಾಡಿದಳೆಂದೂ ಕೃಷ್ಣಭಗವಾನನು ಸಂಜಯನೊಡನೆ ಹೇಳಿದ.

ದುಷ್ಕರವಾದ ಕಾರ್ಯ–ಸಭಾಪರ್ವೋಕ್ತವಾಗಿರುವ ಅನಂತವಸ್ತ್ರೋತ್ಪತ್ತಿರೂಪವಾದ ಮಹಿಮೆಯನ್ನು ದ್ರೌಪದಿಯು ಹೊರಗೆಡವಿರುವುದೇ. ಅದು ವಸ್ತ್ರಾಪಹರಣಮೂಲವಾದದ್ದು. ಆದುದರಿಂದ ವಸ್ತ್ರಾಪಹರಣವನ್ನು ಹೇಳಿದಂತೆಯೇ. ಈ ಸಂದರ್ಭದಲ್ಲಿ ಆಂಧ್ರಭಾರತದಲ್ಲಿ ಹೀಗಿದೆ.

ಚ॥ 'ಆದಿ ಧಗದಂಚು ನಡ್ಡುಪಡುನಂತಕು ನೇರಕ ಸಭ್ಯುಲಂದರುನ್ ಮದಿ ಮದಿ ನುನ್ನಯಟ್ಟಿಯೆಡ ಮಾನಿನಿ ಕಿಂದನು ದಾನಕೌಚಿಕೋಲೊದವಿನ ದಾನಚೇಸಿ ಸಭನೋಚ್ಚಿಮುದಕ್ಕಿನ ಪಾಂಡುನಂದನುಗ ಬತಿಕಿರಿಗಾಕಯಯ್ಯೆಡರು ರಾಜಕುಮಾರುಲ ಕೋರ್ಚುನೆಟ್ಟಿದೇ?' ಈ ಪದ್ಯದಲ್ಲಿ ತಾನೇ ರಕ್ಷಿಸಿಕೊಳ್ಳಬೇಕಾಯಿತು ಎಂದಿರುವುದರಿಂದ ಅನಂತವಸ್ತ್ರೋತ್ಪತ್ತಿಯನ್ನು ಹೇಳಿದಂತಾಯಿತು.

ಇನ್ನು – ಸಂಧಿಗೆ ತೆರಳುವ ಶ್ರೀಕೃಷ್ಣನೊಡನೆ ದ್ರೌಪದಿಯು ತಾನು ಪಟ್ಟಕಷ್ಟಗಳನ್ನು ಹೇಳುವಾಗ ವಸ್ತ್ರಾಪಹರಣವನ್ನು ಕುರಿತು ಹೇಳಲಿಲ್ಲವಂತೆ–ಹೇಳಿರುವಳು ; ನೋಡಿ.

ಸಾಹಂ ಕೇಶಗ್ರಹಂ ಪ್ರಾಪ್ತಾಂ ಪರಿಕ್ಲಿಷ್ಟಾ ಸಭಾಂ ಗತಾ
ನಿರಮರ್ಷೇಷ್ವಚೇಷ್ಟೇಷು ಪ್ರೇಕ್ಷಮಾಣೇಷು ಪಾಂಡುಷು ॥

ಪಾಹಿ ಮಾಮಿತಿ ಗೋವಿನ್ದ ಮನಸಾ ಚಿನ್ತಿತೋಽಸಿ ಮೇ
ಯತ್ರ ಮಾಂ ಭಗವಾನ್ರಾಜಾ ಶ್ವಶುರೋ ವಾಕ್ಯಮಬ್ರವೀತ್
ವರಂ ವೃಣೀಷ್ವ ಪಾಂಚಾಲಿ ವರಾರ್ಹಾಸಿ ಮತಾ ಮಮ ॥

ಇಲ್ಲಿ '**ಕೇಶಗ್ರಹಂ ಪ್ರಾಪ್ತಾ**' ಎಂಬ ಮಾತಿನಲ್ಲಿ ಕೂದಲು ಹಿಡಿದದ್ದು '**ಸಭಾಂ ಗತಾ**' ಎಂಬ ಮಾತಿನಲ್ಲಿ ಸಭೆಗೆಳೆತಂದದ್ದು '**ಪರಿಕ್ಲಿಷ್ಟಾ**' ಎಂಬಲ್ಲಿ ವಸ್ತ್ರಾಪಹರಣಮಾಡಿದ್ದು ಹೇಳಲ್ಪಟ್ಟಿವೆ. 'ಪಾಂಡವರು ಮೌನ ಧರಿಸಿದಾಗ 'ಕೃಷ್ಣಾ! ರಕ್ಷಿಸು' ಎಂದು ನಿನ್ನನ್ನು ಧ್ಯಾನಿಸಿದೆ. ಆ ಧ್ಯಾನದಿಂದಲೇ ವಸ್ತ್ರಾಪಹರಣಾದಿ ಸಂದರ್ಭದಲ್ಲಿ ಮಕ್ಕಳಿಗೆ ಬುದ್ಧಿಹೇಳದ ಧೃತರಾಷ್ಟ್ರ "ಪಾಂಚಾಲಿ! ನೀನು ವರವನ್ನು ಬೇಡು ಎಂದು" ಗೌರವಿಸಿದ ಎಂದಿದೆ.

ಇಲ್ಲಿ ಹೇಳಿರುವ ಶ್ರೀಕೃಷ್ಣಚಿಂತನೆ – ಸಭಾಪರ್ವದಲ್ಲಿ – '**ಆಕೃಷ್ಯ**

ಮಾಣೇ ವಸನೇ ದ್ರೌಪದ್ಯಾ ಚಿಂತಿತೋ ಹರಿಃ'–ಎಂದು ಹೇಳಿದ ವಸ್ತ್ರಾಪಹರಣಸಂದರ್ಭದ ಶ್ರೀಕೃಷ್ಣಚಿಂತನವೇ. ಇದರಿಂದ ವಸ್ತ್ರಾಪ ಹರಣವನ್ನು ಹೇಳಿದಂತಾಯಿತು. ಆ ಶ್ರೀಕೃಷ್ಣಚಿಂತನದಿಂದಲೇ ಧೃತರಾಷ್ಟ್ರನು ಆದರಿಸಿ ವರಗಳನ್ನು ಕೊಟ್ಟನೆಂದು ಹೇಳಿದುದರಿಂದ ಅನಂತವಸ್ತ್ರೋತ್ಪತ್ತಿಯು ಆ ಚಿಂತನೆಯ ಫಲವೇ. ಅದರ ಮೂಲಕ ದುಶ್ಶಾಸನನ ದೌಷ್ಟ್ಯೋಪಶಾಂತಿ, ಧೃತರಾಷ್ಟ್ರವರಪ್ರೋತ್ಸಾಹ ಎಂಬ ಸಭಾಪರ್ವೋಕ್ತ ಕ್ರಮವು ಹೇಳಲ್ಪಟ್ಟಂತಾಯಿತು. ಮತ್ತೆ ವನವಾಸದಲ್ಲಿ ಶಿಷ್ಯಸಂಘದೊಂದಿಗೆ ದುರ್ವಾಸಮಹರ್ಷಿಯು ಅಕಾಲದಲ್ಲಿ ಭೋಜನಾಪೇಕ್ಷೆಯಿಂದ ಬಂದಾಗ, ಕೊಡುವುದಕ್ಕೆ ಏನೂ ಇಲ್ಲದೆ ದ್ರೌಪದಿಯು ಶ್ರೀಕೃಷ್ಣನನ್ನು ಧ್ಯಾನಿಸುವಾಗ, ಅಂದು ದ್ಯೂತಸಭೆಯಲ್ಲಿ ದುಶ್ಶಾಸನನಿಂದ ಹೇಗೆ ನನ್ನನ್ನು ಬಿಡಿಸಿದೆಯೋ ಹಾಗೆಯೇ ಈ ವಿಪತ್ತಿನಿಂದ ನನ್ನನ್ನು ಉದ್ಧರಿಸು–ಎಂದು ಬೇಡಿಕೊಂಡಳು.

ದುಶ್ಶಾಸನಾದಹಂ ಪೂರ್ವಂ ಸಭಾಯಾಂ ಮೋಚಿತಾ ಯಥಾ ।
ತಥೈವ ಸಂಕಟಾದಸ್ಮಾನ್ಮಾಮುದ್ಧರ್ತುಮಿಹಾರ್ಹಸಿ ॥

(ವನ. ಪ. ಅ. 263)

ಆಗ ದುಶ್ಶಾಸನನಿಂದ ದ್ರೌಪದಿಯನ್ನು ಕೃಷ್ಣನು ವಸ್ತ್ರಾಪಹರಣ ಸಮಯದಲ್ಲಿತ್ತ ಅಕ್ಷಯವಸ್ತ್ರಗಳಿಂದಲೇ ಬಿಡಿಸಿದನೆಂಬುದು ಸ್ಪಷ್ಟ.

ಇದನ್ನು ಪ್ರತಿವಾದಿಗಳು ಉದಾಹರಿಸಲಿಲ್ಲ. ಈ ಸನ್ನಿವೇಶವು ದುಶ್ಶಾಸನನಿಂದ ವಸ್ತ್ರಾಪಹರಣ, ಕೃಷ್ಣಭಗವಾನನಿಂದ ಅನಂತವಸ್ತ್ರದಾನ ಜರುಗಿದಂತೆ ನೆನೆಸಿಕೊಂಡ ಸನ್ನಿವೇಶ.

ಹೀಗೆ ಎರಡು ಕಡೆಗಳಲ್ಲಿಯೂ ದ್ರೌಪದೀಪ್ರಸಂಗವು ಹೀಗಿರುವಾಗ ಪ್ರತಿವಾದಿಗಳು "ತನಗೆ ವಸ್ತ್ರಾಪಹರಣವಾಯಿತೆಂದು ಹೇಳಲಿಲ್ಲ" ಎಂದಿದ್ದಾರೆ. ಮಾನಧನರು ಮರ್ಮಭೇದಕವಿಷಯಗಳನ್ನು ಸೂಚಿಸುವರೇ ಹೊರತು ಹೀನಮಾನವರಂತೆಯೂ, ಮಾನಹೀನರಂತೆಯೂ ಬಾಯಿಂದ ವಿವರವಾಗಿ ಹೇಳಲಾರರು. ಈ ವಿಷಯ ಮ. ಭಾ. ಚ. ಕಾರರಾದವರಿಗೆ ತಿಳಿಯದೇ? ವಸ್ತ್ರಾಪಹರಣವು ಜರುಗಿತೆಂದು ದ್ರೌಪದಿಯು ಹೇಳಲಿಲ್ಲವೆಂಬುದು ಅನಾಲೋಚಿತ. ಪೂರ್ವೋಕ್ತಪ್ರಕಾರವಾಗಿ ಸೂಚಿಸಿರುವಾಗ

'ಸೂಚನೆಯಾದರೂ ಕೊಡಲಿಲ್ಲ' ವೆನ್ನುವುದು ಸಾಹಸ. ರಾಯಭಾರದ ಸಂದರ್ಭದಲ್ಲಿ ಶ್ರೀಕೃಷ್ಣನೊಡನೆ ಅರ್ಜುನನು :

ಜಾನಾಸಿ ತ್ವಂ ಯಥೈತೇನ ದ್ರೌಪದೀ ಪಾಪಬುದ್ಧಿನಾ ।
ಪರಿಕ್ಲಿಷ್ಟಾ ಸಭಾಮಧ್ಯೇ ತಚ್ಚ ತಸ್ಯೋಪಮರ್ಷಿತಮ್ ॥

'ದ್ರೌಪದಿಯು ಸಭಾಮಧ್ಯದಲ್ಲಿ ಹೇಗೆ ಬನ್ನಂಬಟ್ಟಳೋ ನೀನರಿ ತಿರುವೆ' ಎಂದು ವಸ್ತ್ರಾಪಹರಣದ ಮಾತೆತ್ತಿದ್ದ.

ಸಹದೇವನೂ–

ಕಥಂ ನು ದೃಷ್ಟ್ವಾ ಪಾಂಚಾಲೀಂ ತಥಾ ಕೃಷ್ಣ ಸಭಾಗತಾಮ್ ।
ಅವಧೇನ ಪ್ರಶಾಮ್ಯೇತ ಮಮ ಮನ್ಯುಸ್ಸುಯೋಧನೇ ॥

ಕೃಷ್ಣಾ! ಸಭೆಯಲ್ಲಿ ಆ ಪರಿಸ್ಥಿತಿಯಲ್ಲಿ ದ್ರೌಪದಿಯನ್ನು ನೋಡಿದ ನನ್ನ ಕ್ರೋಧಾಗ್ನಿಯು ಸುಯೋಧನನನ್ನು ಸಂಹರಿಸದೆ ಹೇಗೆ ಶಮನವಾಗ ಬಲ್ಲುದು?'–ಎಂದು ವಸ್ತ್ರಾಪಹರಣವನ್ನು ಪ್ರಸ್ತಾಪಿಸಿದ. ಇಷ್ಟೇಕೆ? ದುರ್ಯೋಧನಪಕ್ಷಪಾತಿಗಳಾಗಿ ವಸ್ತ್ರಾಪಹರಣ ನಡೆಯಲಿಲ್ಲವೆನ್ನುತ್ತಿರುವ ಮ. ಭಾ. ಚ. ಕಾರರಿಗೆ ದುರ್ಯೋಧನನ ವಾಕ್ಯಗಳನ್ನೇ ಸಾಕ್ಷ್ಯವಾಗಿ ತೋರಿಸೋಣ.

ಕರ್ಣಸಂಹಾರದ ಸಂದರ್ಭದಲ್ಲಿ ದುಃಖಿಸುತ್ತಿದ್ದ ದುರ್ಯೋಧನ ನೊಡನೆ, ಕೃಪಾಚಾರ್ಯರು–'ಈಗಲಾದರೂ ಸಂಧಿಗೆ ಒಪ್ಪುವುದು ಒಳ್ಳೆ ಯದು'–ಎಂದು ಬೋಧಿಸಿದಾಗ ಅದಕ್ಕೆ ಪಾಂಡವರು ಒಪ್ಪುವುದಿಲ್ಲವೆಂದೂ ಅದಕ್ಕೆ ಕಾರಣವಿದು ಎಂದೂ ವಿವರಿಸಿದ.

ದುಶ್ಶಾಸನೇನ ಯತ್ಕೃಷ್ಣಾ ಏಕವಸ್ತ್ರಾ ರಜಸ್ವಲಾ
ಪರಿಕ್ಲಿಷ್ಟಾ ಸಭಾಮಧ್ಯೇ ಸರ್ವಲೋಕಸ್ಯ ಪಶ್ಯತಃ ।
ತಥಾ ವಿವಸನಾಂ ದೀನಾಂ ಸ್ಮರಂತ್ಯದ್ಯಾಪಿ ಪಾಂಡವಾಃ
ನ ನಿವಾರಯಿತುಂ ಶಕ್ಯಾಸ್ಸಂಗ್ರಾಮಾತ್ತೇ ಪರಂತಪಾಃ ॥

(ಶಲ್ಯ ಅ. 4)

'ರಜಸ್ವಲೆಯಾಗಿ ಏಕವಸ್ತ್ರಳಾಗಿದ್ದ ದ್ರೌಪದಿಯು ಸಭಾಮಧ್ಯದಲ್ಲಿ ಸರ್ವಜನಸಮಕ್ಷದಲ್ಲಿ ದುಶ್ಶಾಸನನಿಂದ ಕ್ಲೇಶಿತಳಾದಳು. ಹಾಗೆ ವಿವಸ್ತ್ರ ಳಾಗಿ ದೀನಳಾಗಿ ನಿಂತ ಆಕೆಯ ಸ್ವರೂಪವನ್ನು ಇಂದಿಗೂ ಮರೆತಿಲ್ಲ. ಆ ಶೂರರನ್ನು ಯುದ್ಧಭೂಮಿಯಿಂದ ಹಿಂದಿರುಗಿಸುವುದು ಸಾಧ್ಯವಿಲ್ಲ.' ಈ ಮಾತುಗಳಲ್ಲಿ ದುಶ್ಶಾಸನನು ವಸ್ತ್ರಾಪಹರಣಮಾಡಿದನೆಂದೂ, ಆಗ ಆಕೆ ರಜಸ್ವಲೆಯೆಂದೂ ದುರ್ಯೋಧನನೇ ಸ್ಪಷ್ಟವಾಗಿ ಹೇಳಿರುವುದರಿಂದ ಇದಕ್ಕೆ ವಿರುದ್ಧವಾದಿಗಳ ವಿವಾದವು ಪರಾಸ್ತವಾಯಿತು.

ಸುಯೋಜನವಿಜಯಗ್ರಂಥಕರ್ತೃವು–

'ಅಪ್ಪುಡಧೋನೀವಿ'ಯಾದ ಆ ಕಾಂತೆಯ ವಸ್ತ್ರವು ತನ್ನಷ್ಟಕ್ಕೆ ತಾನೇ ಕೆಳಗೆ ಬಿದ್ದಿತು. ಅಷ್ಟುಮಾತ್ರದಿಂದಲೇ ಆ ಸತಿಯನ್ನು ಪರಿಭವಿಸಿದೆವೆಂದು ಕೊರಲಸರವೆತ್ತಿ ನುಡಿದರು'–ಎಂದು ದುರ್ಯೋಧನನ ಬಾಯಿಂದ ಕವಿತ್ವ ಹೇಳಿಸಿದ್ದಾರೆ. ದ್ರೌಪದಿಯ ಉಡುಗೆ ಅದೇ ಬಿದ್ದುಹೋಯಿತಂತೆ. ಇವರೊಬ್ಬ ವಿಮರ್ಶಕರು. ಇವರ ಪರಿಜ್ಞಾನವು ಲೋಕಾತೀತವೇ ಸರಿ. ಯುಕ್ತಾಯುಕ್ತಪರಿಶೀಲನೆಯನ್ನು ಕಳೆದುಕೊಂಡ ಈ ಬರವಣಿಗೆ ಲೋಕ ವಿರುದ್ಧ. ಸುಯೋಜನವಿಜಯಗ್ರಂಥದ ನಾಯಕನಾದ ಸುಯೋಧನನ ಮಾತುಗಳಿಗೇ ಒಪ್ಪದಿರುವುದರಿಂದ ತಳ್ಳಿಹಾಕಿದ್ದೇವೆ.

ಇನ್ನು ಮ. ಚ. ಕಾರರು 'ಪ್ರಾಚೀನಮಹಾಕವಿಗಳಾದ ಭಾಸ, ಭಾರವಿ, ಕ್ಷೇಮೇಂದ್ರರೂ ತಮ್ಮ ಕೃತಿಗಳಲ್ಲಿ ವಸ್ತ್ರಾಪಹರಣದ ಸುದ್ದಿಯನ್ನು ಸೂಚಿಸಲಿಲ್ಲ' ಎಂದು ಬರೆದಿರುವರಲ್ಲವೇ? ಆ ಮಹಾಕವಿಗಳು ಸ್ಪಷ್ಟವಾಗಿ ಹೇಳಿಯೇ ಇದ್ದಾರೆ. ಅದನ್ನು ಯಥಾನುಕ್ರಮವಾಗಿ ತೋರಿಸುತ್ತಿದ್ದೇವೆ.
ಭಾಸಮಹಾಕವಿಯ ದೂತವಾಕ್ಯ ;

'ದುರ್ಯೋಧನಃ –" ಕೋ ನು ಖಲು ಮಮಾಪ್ರತ್ಯುತ್ಥಾನ ಸ್ಯೋಪಾಯಃ? ಹಂತ! ದೃಷ್ಟ ಉಪಾಯಃ ॥ಬಾದರಾಯಣ! ಆನೀಯತಾಂ ಸ ಚಿತ್ರಪಟೋ ನನು ಯತ್ರ ದ್ರೌಪದೀ ಕೇಶಾಂಬರಾಕರ್ಷಣಮಾ ಲಿಖಿತಂ। ತಸ್ಮಿನ್ ದೃಷ್ಟಿವಿನ್ಯಾಸಂ ಕುರ್ವನ್ನೋತ್ಥಾಸ್ಯಾಮಿ ಕೇಶವಸ್ಯ

ಈ ಸಂದರ್ಭವೇನೆಂದರೆ ಶ್ರೀಕೃಷ್ಣನು ರಾಯಭಾರಿಯಾಗಿ ಕೌರವ ಸಭೆಗೆ ಬರುತ್ತಿದ್ದ ಸಮಯದಲ್ಲಿ ದುರ್ಯೋಧನನು–'ಶ್ರೀಕೃಷ್ಣನನ್ನು ನೋಡಿ ಸಭೆಯಲ್ಲಿ ಯಾರೂ ಎದ್ದು ಎದುರುಗೊಳ್ಳಬಾರದು' ಎಂದು ಸಭಾಸದರಿಗೆ ಆಜ್ಞೆಯನ್ನಿತ್ತ. ಶ್ರೀಕೃಷ್ಣನನ್ನು ನೋಡುತ್ತಲೇ ತನಗೆ ಪ್ರತ್ಯುತ್ಥಾನ ಮಾಡಬೇಕೆಂದು ಬುದ್ಧಿಹುಟ್ಟುವುದೇನೋ ಎಂದು ಅನುಚರನನ್ನು ಕರೆದು– 'ದ್ರೌಪದಿಯ ಕೇಶಕರ್ಷಣ-ವಸ್ತ್ರಾಪಹರಣಗಳು ಚಿತ್ರಿಸಿರುವ ಚಿತ್ರಪಟವನ್ನು ತೆಗೆದುಕೊಂಡು ಬಾ. ಅದನ್ನು ನೋಡುತ್ತಿದ್ದವನಂತೆ ಶ್ರೀಕೃಷ್ಣನಿಗೆ ಪ್ರತ್ಯುತ್ಥಾನ ಮಾಡುವುದಿಲ್ಲ'–ಎಂದ. ಈ ಗ್ರಂಥದಲ್ಲಿ ವಸ್ತ್ರಾಪಹರಣ ಸಂದರ್ಭವು ಸ್ಪಷ್ಟವಾಗಿ ಉಕ್ತವಾಗಿಯೇ ಇದೆ. ಈ ಭಾಸಮಹಾಕವಿ ಇಂದಿಗೆ ಎರಡುಸಾವಿರ ವರ್ಷಗಳ ಹಿಂದಿನವನು. ಇದನ್ನು ಹೇಳಿದವರೂ ಮ. ಭಾ. ಚ. ಕಾರರೇ

(ಪು. 314)

ಭಾರವಿಕಾವ್ಯ (ಸ. 3)

ಪ್ರಸಹ್ಯ ಯೋಽಸ್ಮಾಸು ಪರೈಃ ಪ್ರಯುಕ್ತಃ ಸ್ಮರ್ತುಂ ನ ಶಕ್ಯಃ ಕಿಮುತಾಧಿಕರ್ತುಮ್ । ನವೀಕರಿಷ್ಯತ್ಯುಪಶುಷ್ಯದಾರ್ದ್ರಃಸ್ತ್ವದ್ವಿನಾ ಮೇ ಹೃದಯಂ ನಿಕಾರಃ

ಮಲ್ಲಿನಾಥವ್ಯಾಖ್ಯೆ :

ಪರೈಃ ಶತ್ರುಭಿಃ ಅಸ್ಮಾಸು ಪ್ರಸಹ್ಯ ಪ್ರಯುಕ್ತಃ = ಆಚರಿತಃ ಯೋ ನಿಕಾರಃ ಪರಿಭವಃ, ಕೇಶಾಂಬರಾಕರ್ಷಣರೂಪಃ ಸ್ಮರ್ತುಂ ನ ಶಕ್ಯಃ ಅನುಭವಿತುಂ ಕಿಮುತ–ಇಲ್ಲಿ ಸೂಚಿತವಾಗಿದೆಯಲ್ಲವೇ?

ಕ್ಷೇಮೇಂದ್ರನ ಭಾರತಮಂಜರಿ (ಪು. 145)

ಹರ ದುಶ್ಯಾಸನಾಽಸ್ಯಾಸ್ತ್ವಂ ವಾಸಃ ಪಶ್ಯಂತು ಕೌರವಾಃ ।
ಏನಾಂ ಗಾಮಿವ ನಿರ್ಲಜ್ಜಾಂ ಕಿಂ ಸತೀ ಗೌರವೈರ್ವೃಥಾ ॥
ಇತ್ಯುಕ್ತೇ ಸೂತಪುತ್ರೇಣ ಕಾಲಪಾಶವಶೀಕೃತಃ ।
ಕೇಶಪಾಶಂ ವಿಕೃಷ್ಯಾಸ್ಯಾ ವಾಸೋ ಜಗ್ರಾಹಕೌರವಃ ॥
ಯಥಾ ಯಥಾ ಜಹಾರಾಶು ಸ ತಸ್ಯಾ ರುಚಿರಾಂಬರಮ್ ।
ತಥಾ ತಥಾ ನವವಸನಂ ಪ್ರಾದುರಾಸೀತ್ತತೌಸ್ತತಾ ॥

ವಸ್ತ್ರಾಪಹರಣಮಾಡೆಂದು ಕರ್ಣನು ಹೇಳಿದಾಗ ದುಶ್ಶಾಸನನು ಅದಕ್ಕೆ ಉಪಕ್ರಮಿಸಿದನೆಂದೂ, ಆತನು ಹಾಗೆ ಗೈಯುತ್ತಿರಲು ನೂತನವಸ್ತ್ರಗಳು ಆಕೆಯ ಶರೀರದ ಮೇಲೆ ಕಾಣುತ್ತಲೇ ಇದ್ದುವೆಂದೂ ಮಹಾಭಾರತದಲ್ಲಿ ಹೇಳಿದಂತೆಯೇ ಬರೆದಂತಿದೆಯಲ್ಲವೇ?

ಇಲ್ಲಿಯತನಕ ಪ್ರತಿವಾದಿಗಳು ಹೇಳಲಿಲ್ಲವೆಂದವುಗಳಿಂದ ಉದಾಹರಣೆಗಳನ್ನು ತೋರಿಸಿದೆವು. ಮತ್ತೊಂದು ನೋಡೋಣ.

ಭಟ್ಟನಾರಾಯಣಕವಿ ಕ್ಷೇಮೇಂದ್ರನಿಗಿಂತಲೂ ಪ್ರಾಚೀನ. ಆದುದರಿಂದಲೆ 'ಸುವೃತ್ತತಿಲಕ' ವೆಂಬ ಗ್ರಂಥದಲ್ಲಿ 'ಯಥಾ ಭಟ್ಟನಾರಾಯಣಸ್ಯ' ಎಂದು ಕ್ಷೇಮೇಂದ್ರನು ಹೇಳಿಕೊಂಡಿದ್ದಾನೆ.
ವೇಣೀಸಂಹಾರ ನಾಟಕದಲ್ಲಿ :

'ಯತ್ಸತ್ಯವ್ರತಭಂಗಭೀರುಮನಸಾ, ಯತ್ನೇನ ಮಂದೀಕೃತಂ
ಯದ್ವಿಸ್ಮರ್ತುಮಧೀಹಿತಂ ಶಮವತಾ ಶಾಂತಿಂ ಕುಲಸ್ಯೇಚ್ಛತಾ,
ತದ್ದ್ಯೂತಾರಣಿ ಸಂಭವಂ ನೃಪವಧೂಕೇಶಾಂಬರಾಕರ್ಷಣೈಃ
ಕ್ರೋಧಜ್ಯೋತಿರಿದಂ ಮಹತ್ಕುರುವನೇ ಯೌಧಿಷ್ಠಿರಂ ಜೃಂಭತೇ ॥

ದ್ಯೂತವೆಂಬ ಅರಣಿಯಿಂದ ದ್ರೌಪದೀಕೇಶಾಕರ್ಷಣ–ವಸ್ತ್ರಾಕರ್ಷಣಗಳೆಂಬ ಮಥನದಿಂದ ಉದ್ಭವಿಸಿ, ಯುಧಿಷ್ಠಿರನ ಸತ್ಯವ್ರತಭಂಗಭೀತಿಯಿಂದ ಪ್ರಯತ್ನದಿಂದ ನಿವಾರಿಸಲ್ಪಟ್ಟು, ಶಾಂತವಾಗಿ, ಕುರುವಂಶಶಾಂತಿ ಕಾಮನಾಗಿದ್ದ ಧರ್ಮನಂದನನಿಂದ ವಿಸ್ಮರಣಾವಸ್ಥೆಗೂ ತರಲ್ಪಟ್ಟ ಯುಧಿಷ್ಠಿರನ ಮಹಾಕ್ರೋಧಾಗ್ನಿಯು ಕೌರವಾರಣ್ಯದಲ್ಲೀಗ ಧಡಾಳಿಸುತ್ತಿದೆ.

ಈ ಶ್ಲೋಕದಲ್ಲಿ ವಸ್ತ್ರಾಪಹರಣವು ತಿಳಿಸಲ್ಪಟ್ಟಿದೆ. ಹೀಗೆ ಹಲವರು ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ.

ಇಷ್ಟೇ ಅಲ್ಲ. ಈ ಮ. ಚ. ಕಾರರು ವೇದವ್ಯಾಸಭಗವಾನರ ವಾಕ್ಯಗಳಿಗಿಂತ ವೇಮನನ ಪದ್ಯಗಳನ್ನು ಪ್ರಮಾಣವನ್ನಾಗಿ ಭಾವಿಸುತ್ತಾರೆ. ಒಂದು ಕಡೆ 'ಪ್ರಖ್ಯಾತಕವಿ ವೇಮನ' (ಪು. 294) ಎಂದು ಕೀರ್ತಿಸಿದ್ದಾರೆ. ಆದುದರಿಂದ "ಯಕ್ಷಾನುರಾಪೋ ಬಲಿಃ" ಎಂಬ ನ್ಯಾಯದಂತೆ ಶ್ರೀಕೃಷ್ಣನು

ದ್ರೌಪದಿಗೆ ವರಗಳನ್ನು ಕೊಟ್ಟದ್ದನ್ನು ತಿಳಿಸುವ ವೇಮನ ಮಹಾಕವಿಯ ಪದ್ಯವನ್ನೇ ನೋಡೋಣ.

ಆಟವೆಲದಿ : ಗೋಗಣಂಬವೆಲ್ಲ ಗೊಲ್ಲಡೈಪೋಷಿಂಚಿ
ಕೃಷ್ಣಡನಗ ನೆಗಡೆ ಕೃತಮು ಖುಂಡು ;
ಕೃಷ್ಣಕೊಸಗೆ ಮುವ ಕೀಲ್ಗೋನಪದಿವೇಲು
ವಿಶ್ವದಾಭಿರಾಮ, ವಿನುರವೇಮ" (ಭಾ. 32.)

ಇದರಿಂದಲೂ ವಸ್ತ್ರಾಪಹರಣವಾಯಿತೆಂದೂ, ಆಗ ಶ್ರೀಕೃಷ್ಣನು ದ್ರೌಪದಿಗೆ ಅಕ್ಷಯವಸ್ತ್ರಗಳನ್ನು ಕೊಟ್ಟನೆಂದೂ, ಆದುದರಿಂದಲೇ ದ್ರೌಪದೀ ಮಾನರಕ್ಷಕನಾದನೆಂತಲೂ, ಆದಕಾರಣ ಅದು ಲೋಕಪ್ರಸಿದ್ಧವಾಯಿತೆಂದೂ ಸ್ಥಿರಪಟ್ಟಿತು. ಮ.ಚ.ಕಾರರು ಬರೆದದ್ದು ಪರಮಸಾಹಸದ ಮಾತು.

ಕೃಷ್ಣನು ಅಕ್ಷಯವಸನಗಳನ್ನು ಕೊಟ್ಟನೆಂಬುದು ಸೌಭವಧೆಯ ಕಥೆಗೆ ವಿರುದ್ಧವೆಂಬ ಪ್ರಸಂಗ–ಅದನ್ನು ಅಲ್ಲಗಳೆಯುವಿಕೆ :

ಮ. ಚ. ಕಾರರ ಬರವಣಿಗೆ ಹೀಗಿದೆ : "ಕೃಷ್ಣನು ಸಾಳ್ವನೊಡನೆ ತೆರವಿಲ್ಲದೆ ಹೋರಾಡುತ್ತಿದ್ದಾಗಲೇ ಪಾಂಡವರು ಜೂಜಿನಲ್ಲಿ ಸೋತು ಅರಣ್ಯವಾಸಕ್ಕೆ ತೆರಳಿದರು. ದ್ಯೂತಕಾಲದಲ್ಲಿ ಕೃಷ್ಣನು ದ್ವಾರಕೆಯಲ್ಲಿದ್ದುದಾಗಿಯೂ, ವಸ್ತ್ರಾಪಹರಣಕಾಲದಲ್ಲಿ ಆಕೆ, "ಹಾ ಕೃಷ್ಣ ದ್ವಾರಕಾವಾಸಿನ್" ಎಂದಾಕ್ಷಣ ಅಶರೀರರೂಪದಲ್ಲಿ ಬಂದು ಆಕೆಗೆ ಅಕ್ಷಯವಸ್ತ್ರಗಳನ್ನಿತ್ತನೆಂದೂ ಹೇಳುವ ವಾಕ್ಯಕ್ಕೆ ಈ ಸೌಭವಧೆಯ ಕಥೆಯು ವಿರುದ್ಧವಾಗಿದೆ. "ನಾನು ದ್ವಾರಕೆಯಲ್ಲೇ ಇದ್ದಿದ್ದರೆ ದ್ಯೂತಕಾಲದಲ್ಲಿ ಅನಾಹೂತನಾಗಿ ಬಂದು ದ್ಯೂತವನ್ನು ನಿವಾರಿಸುತ್ತಿರಲಿಲ್ಲವೇ?" ಎಂದು ಶ್ರೀಕೃಷ್ಣನು ಹೇಳಿದುದು ಗಮನಿಸಬೇಕಾದ ಅಂಶ." (ಪು. 172)

ಇವರು–ಈ ಬರವಣಿಗೆಯಿಂದ ದ್ಯೂತಸಮಯದಲ್ಲಿ ಶ್ರೀಕೃಷ್ಣನು ಸಾಳ್ವಯುದ್ಧದಲ್ಲಿದ್ದ, ದ್ವಾರಕೆಯಲ್ಲಿರಲಿಲ್ಲ. ಆದ್ದರಿಂದಲೇ ಶ್ರೀಕೃಷ್ಣ ನಾನು ದ್ವಾರಕೆಯಲ್ಲಿದ್ದಿದ್ದರೆ ಕರೆಯದೆಯೇ ಬಂದು ದ್ಯೂತವನ್ನು ನಿವಾರಿಸುತ್ತಿರಲಿಲ್ಲವೇ? ಎಂದು ಹೇಳಿದುದಾಗಿಯೂ, ಇದರಿಂದ ದ್ರೌಪದಿಯು '**ಕೃಷ್ಣ ದ್ವಾರಕಾವಾಸಿನ್**' ಎಂದೊಡನೆಯೇ ಅಶರೀರರೂಪದಲ್ಲಿ ಬಂದು ಆಕೆಗೆ

ಅಕ್ಷಯವಸ್ತ್ರಗಳನ್ನು ಅನುಗ್ರಹಿಸಿದ್ದು ವಿರುದ್ಧವಾದದ್ದೆಂದೂ ತಿಳಿಸುತ್ತಿದ್ದಾರೆ. 'ದ್ವಾರಕೆಯಲ್ಲಿದ್ದಿದ್ದರೆ ಬಂದು ಕೊಡಬಹುದಾಗಿತ್ತು. ಸಾಳ್ವಯುದ್ಧದಲ್ಲಿದ್ದವನು ಬಂದು ಕೊಡುವುದು ಹೇಗೆ ಸಾಧ್ಯ?' ಇದು ಅವರ ವಿಮರ್ಶೆ. ಅವರು ಹೇಳಿದಂತೆ ದ್ವಾರಕೆಯಲ್ಲಿದ್ದರೂ ಅನಾಹೂತನಾದ ಕೃಷ್ಣನು ಹಸ್ತಿನಾವತಿಯಲ್ಲಿ ನಡೆದ ಜೂಜನ್ನು ಹೇಗೆ ತಿಳಿದುಕೊಂಡ? ಅದು ತಿಳಿಯದಿದ್ದಾಗ ಬರುವುದು ಅನಂತರ ವಸ್ತ್ರಗಳನ್ನು ಕೊಡುವುದು ಹೇಗೆ? ಎಂದು ಪ್ರತಿವಾದಿಗಳನ್ನು ಕೇಳಬೇಕಾಗಿದೆ. ಅಲ್ಲದೆ ಅವರು ತೋರಿಸಿದ ಶ್ರೀಕೃಷ್ಣನ ಮಾತಿನಲ್ಲಿ ದ್ಯೂತಕಾಲದಲ್ಲಿ ತಾನು ಇಲ್ಲದ ಕಾರಣ ಅಂತಹ ಕಷ್ಟ ಪ್ರಾಪ್ತವಾಯಿತು ಎಂದು ಹೇಳಿದಂತಿದೆ. ಅಲ್ಲದೆ ತನಗೆ ಆ ದ್ಯೂತವೃತ್ತಾಂತ ತಿಳಿಯದೆ ಇದ್ದುದರಿಂದ ಹಾಗೆ ಕಷ್ಟ ಒದಗಿತೆಂದು ಹೇಳಿದಂತಿಲ್ಲ.

ಆದುದರಿಂದ ದ್ಯೂತಸಂದರ್ಭ ಶ್ರೀಕೃಷ್ಣನಿಗೆ ತಿಳಿದೇ ಇತ್ತು. ಹಾಗೆ ತಿಳಿದಿರುವುದು ಪ್ರತಿವಾದಿಗಳು ಹೇಳಿದಂತೆ ಸಾಳ್ವಯುದ್ಧಸಮಯದಲ್ಲೇ. ಇಂತಹ ಪರಿಸ್ಥಿತಿಯಲ್ಲಿ ನಿಮ್ಮ ದ್ಯೂತಸಮಯ, ನನಗೆ ಸಾಳ್ವಯುದ್ಧ ಸಮಯ. ಆದುದರಿಂದ ನಿಮಗೆ ಈ ಕಷ್ಟ ಒದಗಿತು ಎಂದು ಹೇಳಿದ ತಾತ್ಪರ್ಯವಾದರೂ ಏನೆಂದು ನೀವು ಗ್ರಹಿಸಿದಿರೆಂದು—ಪ್ರತಿವಾದಿಗಳನ್ನು ಕೇಳುತ್ತಿದ್ದೇನೆ.

ಮತ್ತೆ—'ನಾನು ದ್ವಾರಕೆಯಲ್ಲೇ ಇದ್ದಿದ್ದರೆ ದ್ಯೂತಕಾಲದಲ್ಲಿ ಅನಾಹೂತನಾಗಿ ಬಂದು ಸಮಯಕ್ಕೊದಗಿ ದ್ಯೂತವನ್ನು ನಿವಾರಿಸುತ್ತಿರಲಿಲ್ಲವೇ?' ಅಂದಹಾಗೆ ನೀವು ತೋರಿಸಿರುವ ಕೃಷ್ಣವಾಕ್ಯವನ್ನು ದ್ರೌಪದಿಯು "**ಕೃಷ್ಣ ದ್ವಾರಕಾವಾಸಿನ್**" ಎಂದೊಡನೆ ಅಶರೀರರೂಪದಲ್ಲಿ ಬಂದು ಆಕೆಗೆ ಅಕ್ಷಯವಸ್ತ್ರಗಳನ್ನು ಕೊಟ್ಟನೆಂಬ ಮಾತು ವಿರುದ್ಧವೆಂದು ತೋರಿಸಿದರೆ, ಮುಂದೆ ಈ ಕೃಷ್ಣವಾಕ್ಯವು ವಿರುದ್ಧವೆನಿಸಿತೇ? ಅವಿರುದ್ಧವೆನಿಸಿತೇ?

ದ್ಯೂತಸಂದರ್ಭವನ್ನು ತಿಳಿಯದ ಸ್ಥಿತಿಯಲ್ಲಿ, ಸಾಳ್ವಯುದ್ಧದಲ್ಲಿದ್ದರೇನು? ದ್ವಾರಕೆಯಲ್ಲಿದ್ದರೇನು? ಬದಲಾಗದಿರುವುದು ಸಹಜವೇ. ಕೃಷ್ಣವಾಕ್ಯವು ವಿರುದ್ಧವಾದ ಪಕ್ಷದಲ್ಲಿ ದ್ರೌಪದೀಮಾನಸಂರಕ್ಷಣವೃತ್ತಾಂತ ಅದಕ್ಕೆ ಅವಿರುದ್ಧವೇ? ಯಾವುದಕ್ಕೆ ಏನರ್ಥವೋ ತಿಳಿಯಲಾರದವರು ವಿದ್ವನ್ಮಾರ್ಗಕ್ಕೆ ಅಡ್ಡಬರುವುದು ಕಾಲಮಹಿಮೆಯಾಗಿರಬಹುದು.

ನೀಲಕಂಠೀಯಂ :

ಸಂಪ್ರತಿ ಭಗವತ್ಸ್ಮರಣಮೇವ ತತ್ಸಾನ್ನಿಧ್ಯಹೇತುಃ, ಸಾನ್ನಿಧ್ಯಂ ಚ ಸರ್ವಾಪತ್ತರಣಕೃದಿತಿ ಭಂಗ್ಯಂತರೇಣ ಪ್ರತಿಪಾದ್ಯತೇ, ನೈತದಿತ್ಯಾದಿನಾಽಧ್ಯಾಯೇನ, ಯದಹಂ ದ್ವಾರಕಾಯಾಂ, ನವದ್ವಾರವತ್ಯಾಂ, ದೇಹನಗರ್ಯಾಂ ತವ ಮಾಂ ಚಿಂತಯತಃ ಸನ್ನಿಹಿತಸ್ಸ್ಯಾಂ ತರ್ಹಿ ಏತತ್ಕೃಚ್ಛ್ರಂ ವನವಾಸಸಂಕಟಂ ಭವಾನ್ ನಾನುಪ್ರಾಪ್ತಸ್ಸ್ಯಾತ್, ಯಥಾ ದ್ರೌಪದೀಕೃಛ್ರಕಾಲೇ ಮಾಂ ಸ್ಮೃತವತೀ ವಸ್ತ್ರರಾಶಿಪ್ರದಾನೇನ ಮಯಾ ಸಭಾಯಾಂ ಕೃಛ್ರಾನ್ಮೋಚಿತಾ ತಥಾ ತ್ವಮಪಿ ಅಕ್ಷಪಾತನಕಾಲೇ ಮಾಂ ಯದಿ ಸ್ಮರೇಸ್ತರ್ಹಿ ನೈತತ್ಕೃಛ್ರಂ ಪ್ರಾಪ್ನುಯಾಃ ಪ್ರತ್ಯುತ ತವೈವ ಜಯಸ್ಸ್ಯಾದಿತಿ ಭಾವಃ. ಅನಾಹೂತೋಽಪಿ ಸ್ವಕ್ಷೇಮಾರ್ಥಮಪ್ರಾರ್ಥಿತೋಽಪಿ ವಾರಯೇಯಂ ದ್ಯೂತಮಂತರ್ಯಾಮಿತ್ವೇನ. ಕಥಾಪಕ್ಷೇತ್ವೃಜುರೇವಾರ್ಥಂ ಅನಂತರೇಷು ಅಸಮನ್ತಾನ್ನರ್ತಯಂತಿ ತೇಷು ಧೀವಿಲಾಸೇಷು ಪಕ್ಷೇ ದೇಶವಿಶೇಷೇಷು ಕಥಾಂತರಮವತಾರಯಿತುಂ ಕಥಾ ಪಕ್ಷಮೇವಾನುಸರತಿ–ಸೋಽಹಮಿತ್ಯಾದಿನಾ.

ಎಂದರೆ–'ಯುಧಿಷ್ಠಿರ! ನಾನಾಗ ದ್ವಾರಕೆಯಲ್ಲಿ ಸನ್ನಿಹಿತನಾಗಿದ್ದಿದ್ದರೆ ನಿನಗೆ ಈ ವನವಾಸಕ್ಲೇಶವು ಒದಗುತ್ತಿರಲಿಲ್ಲ. ಕೌರವರಿಂದ, ಧೃತರಾಷ್ಟ್ರ-ದುರ್ಯೋಧನರಿಂದ ದ್ಯೂತಕ್ಕೆ ಆಹ್ವಾನಿತನಾಗದಿದ್ದರೂ, (ನಿಮ್ಮ ಕ್ಷೇಮಕ್ಕಾಗಿ ಪ್ರಾರ್ಥಿಸದಿದ್ದರೂ) ಬರುತ್ತಿದ್ದೆ. ದೋಷಗಳನ್ನು ಪ್ರದರ್ಶಿಸಿ ದ್ಯೂತವನ್ನು ನಿವಾರಿಸುತ್ತಿದ್ದೆ. ಆಗ ಆನರ್ತಗಳಲ್ಲಿ (ಆನರ್ತದೇಶಗಳಲ್ಲಿ) ಇದ್ದೆ. ಆದುದರಿಂದ ನಿಮಗೆ ಕಷ್ಟ. ಆಮೇಲೆ ನಾನು ದ್ವಾರಕೆಗೆ ಬಂದು ಸಾತ್ಯಕಿಯ ಮೂಲಕ ನಿಮ್ಮ ಕಷ್ಟಗಳನ್ನು ಕೇಳಿ ಹೊರಟು ಬಂದೆ.' ಇದು ಕಥಾಪಕ್ಷದಲ್ಲಿನ ಅರ್ಥ.

ನೀಲಕಂಠಾಚಾರ್ಯರು ವರ್ಣಿಸಿದ ಅಂತರಾರ್ಥ :

ಮೇಲಿನ ಮೊದಲನೆಯ ಶ್ಲೋಕದಲ್ಲಿ–ದ್ವಾರಕಾ ಎಂದರೆ ನವದ್ವಾರಗಳುಳ್ಳ ದೇಹನಗರಿ. ಅದು ಯುಧಿಷ್ಠಿರನದು. ದೇಹನಗರಿಯಲ್ಲಿ ಭಗವಂತನ ಸಾನ್ನಿಧ್ಯ, ಆಗ ಯುಧಿಷ್ಠಿರನು ಭಗವಚ್ಚಿಂತನೆಮಾಡಿದ್ದರೆ ಸಂಭವಿಸುತ್ತಿತ್ತು. ಆಗ

ಆತ ಹಾಗೆ ಧ್ಯಾನಿಸಲಿಲ್ಲ. ಆದುದರಿಂದ ಶ್ರೀಕೃಷ್ಣನು "ಯುಧಿಷ್ಠಿರ! ನಾನಾಗ ದ್ವಾರಕೆಯಲ್ಲಿ ಅಂದರೆ ನಿನ್ನ ದೇಹನಗರಿಯಲ್ಲಿ ಸನ್ನಿಹಿತನಾಗಿದ್ದರೆ ಅಂದರೆ ನನ್ನನ್ನು ಸ್ಮರಿಸುವುದರಿಂದ ಈ ಕಷ್ಟ ನಿನಗೆ ಬರುತ್ತಿರಲಿಲ್ಲ."

ಶ್ರೀಕೃಷ್ಣನು ಮೊದಲು ದ್ರೌಪದಿಯೊಡನೆ ಹೇಳಿದ ಮಾತಿನಲ್ಲಿ– 'ನೀನು ನನ್ನನ್ನು ನೆನೆದು ಕಷ್ಟದಿಂದ ಪಾರಾದೆ. ಹಾಗೆ ಧರ್ಮರಾಜನೂ ಸ್ಮರಿಸಿದ್ದರೆ ಆತನಿಗೂ ಸಾನ್ನಿಧ್ಯ ಕೊಡುತ್ತಿದ್ದೆ.'

'ಆನರ್ತಗಳು' ಎಂದರೆ 'ಆಸಮನ್ತಾತ್ ನರ್ತಯಂತೀ ತ್ಯಾನರ್ತಾಃ' **ಚಿತ್ತವೃತ್ತಿಗಳಲ್ಲಿ ಆಗ ನಾನಿರಲಿಲ್ಲ.**

ಹೀಗೆ ಅನೇಕಪ್ರಮಾಣಗಳಿಂದಲೂ, ಹಲವಾರು ಮಹಾಕವಿಗಳ ನಿಬಂಧನೆಗಳಿಂದಲೂ, ಲೋಕಪ್ರಸಿದ್ಧಿಯಿಂದಲೂ 'ಕೃಷ್ಣಭಗವಾನನು ದ್ರೌಪದೀಮಾನಸಂರಕ್ಷಕ' ಎಂದು ನಿಗೂಢವಾಗಿರುವ ವಿದ್ವತ್ಸಿದ್ಧಾಂತವು ಅಪ್ರತಿಹತವೆಂಬುದು ಸಾರಾಂಶ.

ವಸ್ತ್ರಾಪಹರಣಪ್ರಯತ್ನವೇ ಹೊರತು ವಸ್ತ್ರಾಪಹರಣವು ಜರುಗಲಿಲ್ಲ ಎಂಬ ಮ. ಚ. ಕಾರರ ಪ್ರಸಂಗ–ತನ್ನಿರಾಕರಣ

1. ಮ. ಚ. ಕಾರರ ಮಾತು ತಪ್ಪು.

2. ಎಲ್ಲ ರೀತಿಗಳಿಂದಲೂ ಕೌರವಸಭೆಯಲ್ಲಿ ವಸ್ತ್ರಾಪಹರಣ ಪ್ರಯತ್ನವು ಜರುಗಿತೇ ಹೊರತು ಅದು ಸಾಕ್ಷಾತ್ತಾಗಿ ಜರುಗಲಿಲ್ಲ. ಇದು ನನ್ನ ನಿಶ್ಚಯವಾದ ಅಭಿಪ್ರಾಯ. (ಪು. 358)

3. ವಸ್ತ್ರಾಪಹರಣಸಮಯದಲ್ಲಿ ಭೀಷ್ಮ-ದ್ರೋಣರು ಸುಮ್ಮನೆ ನೋಡುತ್ತ ಕುಳಿತಿದ್ದರು. ಹೀಗೆನ್ನುವುದಕ್ಕಿಂತ ವಸ್ತ್ರಾಪಹರಣವು ಜರುಗಲೇ ಇಲ್ಲವೆಂಬುದು ಲೇಸು. ಇಲ್ಲದಿದ್ದರೆ ಭೀಷ್ಮ-ದ್ರೋಣರಿಗೆ ಅಪಕೀರ್ತಿ ಬರುವುದು.

4. ಲೌಕಿಕಜ್ಞಾನವಿಲ್ಲದ ಪಂಡಿತರು ಕೇವಲ ಭಕ್ತಿಮಾಹಾತ್ಮ್ಯಾನುಕೂಲಗಳಾದ ಕಥೆಗಳನ್ನು ತಮಗೆ ಅನುಕೂಲವಾಗಿ ಎಲ್ಲೆಂದರಲ್ಲಿ ಸೇರಿಸಿದರು. (ಪು. 355).

5. ಶ್ರೀಕೃಷ್ಣನು ಅಕ್ಷಯವಸ್ತ್ರಗಳನ್ನು ಕೊಟ್ಟಿದ್ದರೆ, ಅದನ್ನು ಕೌರವರು ನೋಡಿದ್ದರೆ ತಪ್ಪದೆ ಕೃಷ್ಣನಿಗೆ ದಾಸರಾಗುತ್ತಿರಲಿಲ್ಲವೆ?

6. ವಿಶ್ವರೂಪವನ್ನು ದುರ್ಯೋಧನನು ಇಂದ್ರಜಾಲವೆಂದೆಣಿಸಿದ. ಇಲ್ಲದಿದ್ದರೆ ಅವನ ಆ ರೂಪಕ್ಕೆ ಕೈಮುಗಿದು ಕಿಂಕರನಾಗುತ್ತಿರಲಿಲ್ಲವೇ?

7. ವಸ್ತ್ರಾಪಹರಣಸಂದರ್ಭದಲ್ಲಿ ದ್ರೌಪದಿಯು ಭಯಭ್ರಾಂತಳಾಗಿ ಚೀರಿದಳು. ಅದರಿಂದ ದುಶ್ಶಾಸನನು ವಿಕಲನಾಗಿ ವಿರಮಿಸಿರಬಹುದು ಅಥವಾ ಧೃತರಾಷ್ಟ್ರನು ನಿವಾರಿಸಿರಬಹುದು.

8. ಇನ್ನು ತನಗೆ ರಕ್ಷಣೆಯಿಲ್ಲವೆಂದು ಗ್ರಹಿಸಿ ಕೃಷ್ಣನನ್ನು ನೆನೆದು ಆಕ್ರೋಶಿಸಿ ವಿಪತ್ಸಮುದ್ರವನ್ನು ದಾಟಿದಳು. ಇದರಿಂದ ಶ್ರೀಕೃಷ್ಣನು ದ್ರೌಪದೀಮಾನರಕ್ಷಕನಾದ.

ದ್ರೌಪದಿಗೆ ವಸ್ತ್ರದಾನಮಾಡಿದುದರಿಂದ 'ದ್ರೌಪದೀಮಾನಸಂರಕ್ಷಕ' ನೆಂಬ ಹೆಸರು ಬರಲಿಲ್ಲ ಎಂದು ಮ. ಚ. ಕಾರರು ಹೇಳಿದ್ದಾರೆ. ಆದರೆ ಹೇಗೆ ಬಂತು? ಎಂದು ಹೇಳಲಿಲ್ಲ.

ಎಂಟನೆಯ ಅಂಶದಲ್ಲಿರುವುದು ಬರಿ ತೊಡಕು. ಆಕ್ರೋಶಿಸಿ ವಿಪತ್ಸಮುದ್ರವನ್ನು ದಾಟಿದಳು. ಏನಿದರರ್ಥ? ವ್ಯಾಮಿಶ್ರೇಣೈವ ವಾಕ್ಯೇನ–ಎಂದಂತಿದೆ.

ಸಭೆಯಲ್ಲಿ ಅಷ್ಟೊಂದು ಗಜಿಬಿಜಿ ಆದಮೇಲೆ ಧೃತರಾಷ್ಟ್ರನು ದ್ರೌಪದಿಯನ್ನು ಕರೆದು ವರಬೇಡುವಂತೆ ಹೇಳಿದ. ದ್ರೌಪದಿಯು ತನ್ನೊಡನೆ ಪಾಂಡವರಿಗೂ ವಿಮುಕ್ತಿನೀಡುವುದು, ಅವರಿಗೆ ಮತ್ತೆ ಅವರ ಆಯುಧ ಗಳನ್ನು ಕೊಡುವುದೆಂಬ ಎರಡು ವರಗಳನ್ನು ಕೇಳಿದಳು. ಮೂರನೆಯ ವರಬೇಡೆಂದಾಗ ಕ್ಷತ್ರಿಯಸ್ತ್ರೀ ಎರಡಕ್ಕಿಂತ ಹೆಚ್ಚು ಬೇಡಬಾರದೆಂದಳು.

ಆಮೇಲೆ ಭೀಮನ ವಾಕ್ಯ, ಅರ್ಜುನನ ವಾಕ್ಯ, ಭೀಮಸೇನನನ್ನು ಧರ್ಮಜನು ಶಾಂತಗೊಳಿಸುವುದು, ಆಮೇಲೆ ಯುಧಿಷ್ಠಿರನು ಧೃತರಾಷ್ಟ್ರ ನೊಡನೆ–

"ಮಹಾರಾಜ! ನಮಗೆ ನೀನು ಪ್ರಭು, ಎಂದೆಂದಿಗೂ ನಾವು ನಿನ್ನ

ಆಜ್ಞಾವರ್ತಿಗಳು. ಏನು ಮಾಡಬೇಕೆಂದು ಈಗ ನಮಗೆ ನಿನ್ನಾಜ್ಞೆ? 'ಎಂದು ಕೇಳುವುದು.

ಧೃತರಾಷ್ಟ್ರನು–" ಓ! ಅಜಾತಶತ್ರೋ ನಿಮಗೆ ಶುಭವಾಗಲಿ. ನಿರ್ವಿಘ್ನವಾಗಿ ಪ್ರಯಾಣಮಾಡಿ ನಿಮ್ಮ ರಾಜ್ಯವನ್ನಾಳಿ. ನಾನು ಆಣತಿ ಇತ್ತಿದ್ದೇನೆ" ಎನ್ನುವುದು. ಇವು ಜರುಗಿದ ವಿಷಯಗಳು.

ಆದರೆ ಸಭೆಗೆ ಎಳೆತಂದ ಕೂಡಲೇ ಧೃತರಾಷ್ಟ್ರನು ದ್ರೌಪದಿಯನ್ನು ಆದರಿಸಿದನೆಂಬುದು, ಯಾವತ್ಸಾಮ್ರಾಜ್ಯವನ್ನೂ ಆಕೆಗೆ ಒಪ್ಪಿಸಿದನೆಂಬುದು ಈ ಎರಡೂ ಸುಳ್ಳು.

ವಸ್ತ್ರಾಪಹರಣವು ಜರುಗಿದ್ದರೆ ಭೀಷ್ಮ-ದ್ರೋಣಾದಿಗಳು ತಪ್ಪಿಸು ತ್ತಿದ್ದರೆಂಬ ಮಾತು ಸುಳ್ಳು.

ದ್ರೌಪದಿಯ ಸೀರೆಯನ್ನು ಸೆಳೆದು ಬಾಧಿಸುತ್ತಿದ್ದರೂ ಸುಮ್ಮನಿದ್ದ ಧೃತರಾಷ್ಟ್ರನು ಆಕೆಯನ್ನು ಒಡನೆಯೇ ಕರೆದಾದರಿಸಿದನೆಂಬ ಮಾತೂ ಅಸಂಗತ.

ದುಶ್ಶಾಸನನು ವಸ್ತ್ರಾಪಹರಣವನ್ನು ನಿಲ್ಲಿಸಿ ತಾನೇ ವಿರಮಿಸಿದನೆಂಬ ಮಾತೂ ಅಸಂಗತ. ಏಕೆಂದರೆ ಅವನಿಗೆ ತಡೆ ಏನಿತ್ತು?

ದ್ರೌಪದಿಗೆ ಅಕ್ಷಯವಸ್ತ್ರಗಳನ್ನು ಕೊಟ್ಟುದನ್ನು ದುರ್ಯೋಧನಾದಿಗಳು ನೋಡಿದ್ದರೆ ಕೃಷ್ಣನಿಗೆ ದಾಸರಾಗುತ್ತಿದ್ದರು ಎಂಬ ಮಾತು, ವಿಶ್ವರೂಪವನ್ನು ನೋಡಿ ಇಂದ್ರಜಾಲವೆಂದು ಭಾವಿಸದೆ ಇದ್ದಿದ್ದರೆ ದಾಸರಾಗುತ್ತಿದ್ದರು ಎಂಬ ಮಾತು. ಇವೂ ಅಸಂಗತ.

ಮ. ಭಾ. ಚ. ಕಾರರು–"ಮಾನವಸಹಜವಾದ ಲಜ್ಜೆಯನ್ನು ತ್ಯಜಿಸಿ ದುಶ್ಶಾಸನನು ದ್ರೌಪದೀಮಾನಭಂಗಕ್ಕೆ ಮುಂಬರಿದು" ಎಂದು ಸ್ಪಷ್ಟವಾಗಿ ಒಪ್ಪಿದ್ದಾರೆ. ಆದರೆ ವಸ್ತ್ರಾಪಹರಣ ಜರುಗಲಿಲ್ಲ ಎನ್ನುತ್ತಾರೆ. ಏನು ವಿರುದ್ಧ ಭಾವಗಳು!

ವಿಶ್ವರೂಪವನ್ನು ಇಂದ್ರಜಾಲವೆಂದು ಅಲ್ಲಗಳೆದು ತಳ್ಳಿಹಾಕುವುದು ಅಸಹಜಪ್ರವೃತ್ತಿ. ವಿಶ್ವರೂಪದ ಮಹಿಮೆ ದುರ್ಯೋಧನನಿಗೆ ಗೊತ್ತು. ಆದರೂ ಪಾದಾಕ್ರಾಂತನಾಗಲಿಲ್ಲ. ಆಗದ ಮಾತ್ರಕ್ಕೆ ವಸ್ತ್ರಾಪಹರಣಪ್ರಸಂಗವೇ ಹೇಗೆ ಸುಳ್ಳಾದೀತು? ಇದೊಂದು ವಿಚಿತ್ರತರ್ಕ.

ಈ ಪ್ರತಿವಾದಿಗಳು ದ್ರೌಪದಿಯು ಶ್ರೀಕೃಷ್ಣನನ್ನು ಸ್ಮರಿಸಿ ಆಕ್ರೋಶಿಸಿದಳೆಂದು ಒಪ್ಪಿಕೊಂಡಿದ್ದಾರೆ. ಮತ್ತೊಂದು ಕಡೆ 'ವಸುದೇವನಿಗೆ ಸಾಕ್ಷಾತ್ಪರಮೇಶ್ವರನಾದ ಶ್ರೀಕೃಷ್ಣ ಜನಿಸಿದ' (ಪು. 311) ಎನ್ನುತ್ತಾರೆ.

ಅಂತಹ ಕೃಷ್ಣನು ಅಕ್ಷಯವಸ್ತ್ರಗಳನ್ನು ಕೊಡಲಾರದವನಲ್ಲ ; ಅಲ್ಲದೆ ದ್ರೌಪದಿಗೆ ಶ್ರೀಕೃಷ್ಣನ ಅನುಗ್ರಹ ಉಂಟಾಗದೆ ಹೋಗಲಿಲ್ಲ. ಆಗ ರಕ್ಷಿಸೆಂದು ಆಕ್ರೋಶಿಸದಿರಲಿಲ್ಲ. ಆದರೆ ಪ್ರತಿವಾದಿಗಳ ಬುದ್ಧಿಗೆ ವಸ್ತ್ರಾಪಹರಣ ಜರುಗಲಿಲ್ಲವೆಂದು ಹೇಳೋಣವೆನ್ನಿಸಿತು. ಆದುದರಿಂದ ಕೃಷ್ಣನಿಗೆ ಕೆಲಸವಿಲ್ಲದೆ ಹೋಯಿತು. ಆದುದರಿಂದ ಇವರ ವಾದ ವಕ್ರಮಾರ್ಗ ಹಿಡಿಯಿತು.

ವಾಸ್ತವವಾಗಿ ಅಂದು ಆಕೆ ಶ್ರೀಕೃಷ್ಣನನ್ನು ತನ್ನ ರಕ್ಷಣೆಗಾಗಿ ಬೇಡಿದುದರಿಂದ, ಆದುದರಿಂದಲೇ ಆಕೆಗೆ ಆ ವಿಪತ್ತು ತೊಲಗಿದುದರಿಂದ, ಶ್ರೀಕೃಷ್ಣನು ದ್ರೌಪದೀಮಾನರಕ್ಷಕನೆಂಬ ಲೋಕಪ್ರಸಿದ್ಧಿಯು ರೂಢವಾಗಿರುವುದರಿಂದಲೂ ದುಶ್ಯಾಸನನು ವಸ್ತ್ರಾಪಹರಣಮಾಡಿದಂತೆ, ಶ್ರೀಕೃಷ್ಣನು ಅನಂತವಸ್ತ್ರಗಳನ್ನಿತ್ತಂತೆ ಹಲವಾರು ಪ್ರಮಾಣಗಳು ಸಾರುತ್ತಿರುವುದರಿಂದ ಮೇಲೆ ತಿಳಿಸಿದ ಎರಡು ಸಾರಾಂಶಗಳೂ ನೆಲಕ್ಕೆ ಬಿದ್ದಂತೆ.

ಇನ್ನು–'ಲೌಕ್ಯಜ್ಞಾನವಿಲ್ಲದ ಪಂಡಿತರು ಕೇವಲ ಭಕ್ತಿಮಹತ್ವಾನುಕೂಲಗಳಾದ ಕಥೆಗಳನ್ನು ತಮಗೆ ಅನುಕೂಲವಾಗಿ ಎಲ್ಲೆಂದರಲ್ಲಿ ಸೇರಿಸಿದ್ದಾರೆ'–ಇದು ನಾಲ್ಕನೆಯ ಅಂಶ. ಸೇರಿಸಿದ ಕಥೆಗಳು ಭಕ್ತಿಗೆ ಅನುಕೂಲವಾದುವುಗಳಂತೆ. ಸೇರಿಸಿದುವುಗಳೂ ತಮಗೆ ಅನುಕೂಲವಾದ ಕಡೆಗಳಲ್ಲಿವೆಯಂತೆ. ಅವು ಸೇರಿಸಿದ್ದು ಹೇಗಾದುವು? ಸೇರಿಸಿದವರು ಲೋಕಜ್ಞಾನವಿಲ್ಲದ ಪಂಡಿತರಂತೆ. ಅಂದರೆ ಪಂಡಿತರಿಗೆ ಲೋಕಜ್ಞಾನ ಇಲ್ಲವೆಂತಲೇ? ತಮಗೆ ಆ ಜ್ಞಾನವಿದೆ. ಪಂಡಿತರಿಗಿಲ್ಲವೆಂದು ಹೇಳುವ ಇವರ ಲೌಕ್ಯಜ್ಞಾನ ಜ್ಞಾನವೆನಿಸೀತೇ? ಇದು ಅಜ್ಞಾನವಲ್ಲವೇ?

ಮ. ಚ. ಕಾ. ವಿದ್ವಾಂಸರ ಮಾರ್ಗವನ್ನು ನಿರಾಕರಿಸಿದರು. ನೂತನ ಮಾರ್ಗವನ್ನು ನಿರೂಪಿಸಲು ಪ್ರಯತ್ನಿಸಿದರು. ಆದರೆ ವಿಫಲರಾದರು. ಆದುದರಿಂದ ಈ ಪ್ರತಿವಾದಿಗಳ ವಾಗಾಡಂಬರ "ನಿಮಿತ್ತಾದಪರಾದ್ಧೇಷೋರ್ಮಾನುಷೇಷ್ವೇವ ವಲ್ಗಿತಂ" ಅಂದಂತೆ ಗುರಿತಪ್ಪುವಂತೆ ಬಾಣಗಳನ್ನು

ಸುರಿಸುವ ಧಾನುಷನ ನಿಲುಗಡೆಯಲ್ಲಿನ ಆಡಂಬರದಂತೆ ವ್ಯರ್ಥವಾಗಿ ಹೋಯಿತು. ಲೌಕ್ಯಜ್ಞಾನವಿಲ್ಲವೆಂದು ನಿಷ್ಕಾರಣವಾಗಿ ಪಂಡಿತರನ್ನು ಆಕ್ಷೇಪಿಸಿದ ಈ ಪ್ರತಿವಾದಿಗಳ ಲೌಕ್ಯಜ್ಞಾನಕ್ಕೆ ನಮಸ್ಕಾರ.

'ಪತಿವ್ರತೆ ಎಂಬ ಮಾತು ದ್ರೌಪದಿಗೆ ಸಲ್ಲದು'
ಈ ಆಕ್ಷೇಪಣೆಯ ನಿರಾಕರಣ

"ಇಹಲೋಕಸೌಖ್ಯವನ್ನು ಆ ನಾರಿ ಬಿಡಲಾರದೆ ಮೂರು ಜನ್ಮಗಳನ್ನೂ ಮುಗುದೆ ಧರಿಸಿದಳು. ಇಂದ್ರಿಯಂಗಳ ಗೆಲ್ಲಲಾರದ ಈ ಕಾಂತೆ ನಿರ್ಮೊಹದನೆ ಬಾಳಬಲ್ಲಳೆ? ಇವಳು ಕಾಮಪೀಡಿತೆ. ಆದುದರಿಂದ ತನ್ನ ಎಲ್ಲೆಯನ್ನರಿಯಳು. ಇವಳ ಬಾಳು ನಿಂದ್ಯ. ಇಷ್ಟು ಕಾಮಾರ್ತೆಯಾದುದರಿಂದ ಇವಳ ಮನಸ್ಸು ವ್ಯಭಿಚರಿಸದಿರಲಾರದು. ಇರುವುದು ಅಸಾಧ್ಯ. ಇವಳನ್ನು ಪತಿವ್ರತೆ ಎನಲಾಗದು, ಈ ಕೋಮಲಾಂಗಿ ಕುಲಸತಿಯಲ್ಲ."

ಇಲ್ಲಿ ದ್ರೌಪದಿಯು ಇಹಲೋಕಸೌಖ್ಯವನ್ನು ತೊರೆಯಲಾರದೆ ಮೂರು ಜನ್ಮಗಳನ್ನೆತ್ತಿದಳು ಎಂಬ ಒಂದು ಆಕ್ಷೇಪಣೆ. ಇವರಿಗೆ ಸ್ವಲ್ಪ ತಿಳಿಸೋಣ.

ಪರಮಾರ್ಥಕ್ಕೆ ಬಾಧಕವಾದ ಇಹಲೋಕಸೌಖ್ಯ ತ್ಯಾಜ್ಯವೆಂದೂ, ಪರಮಾರ್ಥಕ್ಕೆ ಬಾಧಕವಾಗದ ಇಹಲೋಕಸೌಖ್ಯವು ಪೂಜ್ಯವೆಂಬುದು ಶಾಸ್ತ್ರಮರ್ಯಾದೆ.

ಭರ್ತಾ ನಾಥೋ ಗುರುರ್ಭರ್ತಾ ದೇವತಾ ದೈವತೈಸ್ಸಹ ।
ಭರ್ತಾ ತೀರ್ಥಶ್ಚ ಪುಣ್ಯಂ ಚ ನಾರೀಣಾಂ ನೃಪನಂದನ ॥

ಎಂಬ ವಚನಾನುಸಾರ ಸ್ತ್ರೀಗೆ ಭರ್ತೃಸೇವೆಯೇ ಪರಮಾರ್ಥಸಾಧಕ. ಭರ್ತೃಸೇವಾಮೂಲಕವಾದ ಐಹಿಕಸುಖ ಪೂಜ್ಯವೇ. ಆದುದರಿಂದ ಪತಿಗೆ ಅಧೀನಳಾಗಿದ್ದು ಪೂಜ್ಯವಾದ ಐಹಿಕಸುಖವನ್ನು ಬಯಸುವ ಸಾಧ್ವಿಯನ್ನು ಇಹಲೋಕಸೌಖ್ಯವನ್ನು ಬಿಡಲಾರದವಳೆಂದು ಆಕ್ಷೇಪಿಸುವುದು ತಿಳಿಗೇಡಿತನ.

"ಮೂರು ಜನ್ಮಗಳನ್ನೆತ್ತಿದಳು ಮುಗುದೆ" ಅಂದಿದ್ದಾರೆ ವಿಮರ್ಶಕರು. ಇದು ಇಹಲೋಕಸೌಖ್ಯವನ್ನು ಬಿಡಲಾರದ ದೌರ್ಬಲ್ಯವಂತೆ. ಆ ಮೂರು

ಜನ್ಮಗ್ಗಳು ಭಾರತಾನುಸಾರವಾಗಿ ಮೌದ್ಗಲ್ಯಮುನಿಪತ್ನಿ, ರಾಜರ್ಷಿಪತ್ನಿ, ಪಾಂಡವಪತ್ನಿ ಎಂಬುವು. ಅದರಲ್ಲಿ ಮೊದಲನೆಯದು :– ಇದು ಪೂರ್ವ ದಲ್ಲಿ ನಾಳಾಯನಿಯಾದ ಇಂದ್ರಸೇನೆಯೆನಿಸಿದ ಪರಮಪತಿವ್ರತೆ, ಮೌದ್ಗಲ್ಯ ನೆಂಬ ಮಹಾಮುನಿಗೆ ಮಡದಿಯಾಗಿ, ಕುಷ್ಠವ್ಯಾಧಿತನೂ, ತ್ವಗಸ್ಥಿಭೂತ ಶರೀರನೂ, ವಯೋವೃದ್ಧನೂ, ದುರ್ಗಂಧವದನನೂ, ದುಃಖಜೀವಿಯೂ, ಅತಿಕೋಪಿಷ್ಠನೂ, ವಿಶೀರ್ಯಮಾಣನಖತ್ವಚನೂ ಆದವನನ್ನು ಆರಾಧಿಸಿ ಅವನ ಎಂಜಲನ್ನು ತಿನ್ನುತ್ತ ಕಾಲಕಳೆದ ಪರಮಪತಿವ್ರತಾಜನ್ಮ.

ಎರಡನೆಯದು :– ಕಾಶಿರಾಜನೆಂಬ ರಾಜರ್ಷಿಗೆ ಮಗಳಾಗಿ ಹುಟ್ಟಿ ಬೆಳೆದು, ಬಹಳ ಕಾಲ ಕನ್ಯೆಯಾಗಿದ್ದು ಪತಿಯನ್ನು ಬಯಸಿ, ಪಶುಪತಿಯನ್ನು ಉದ್ದೇಶಿಸಿ ಉಗ್ರತಪವನ್ನಾಚರಿಸುತ್ತ ಕಾಲಕಳೆದ ಉತ್ತಮೆ.”

ಮೂರನೆಯದು :– ದ್ರುಪದನ ಯಜ್ಞವೇದಿಕೆಯಿಂದ ಆವಿರ್ಭವಿಸಿ ಪಾಂಡವಪತ್ನಿಯಾಗಿ ವಿರಾಜಿಸಿದ ದ್ರೌಪದಿಯ ಜನ್ಮ. ಅಸ್ವತಂತ್ರಳಾಗಿ, ಪತಿಯ ಆಜ್ಞೆಗೆ ಒಳಪಟ್ಟು ಪತಿಗಾಗಿ ಬಾಳನ್ನು ಧಾರೆಯೆರೆದು ಪರಮೇಶ್ವರನ ಅನುಗ್ರಹಕ್ಕೆ ಪಾತ್ರಳಾದ ಸಾಧ್ವಿಯನ್ನು–ಇಹಲೋಕ ಬಿಡಲಾರದೆ ಹೋದ ಳೆನ್ನುವುದು ಅಜ್ಞಾನ. ಆಕೆ ಇಂದ್ರಿಯಗಳನ್ನು ಗೆಲ್ಲಲಾರಳೆಂಬ ಮಾತೂ ಇಂತಹುದೇ.

ಕುಷ್ಠವ್ಯಾಧಿ-ದುರ್ಗಂಧಾದಿಯುಕ್ತನಾದ ಪತಿಯನ್ನು ಎಂಜಲನ್ನ ತಿಂದು ಭಕ್ತಿಯಿಂದ ಅನನ್ಯಸಾಧಾರಣವಾಗಿ ಆರಾಧಿಸಿದವಳು ಇಂದ್ರಿಯಗಳನ್ನು ಜಯಿಸಲಾರದವಳೇ? ನೀರು-ಗಾಳಿಗಳೇ ಆಹಾರವಾಗಿ, ಆಹಾರವೇ ಇಲ್ಲದೆ, ಒಂದು ಕಾಲಮೇಲೆ ನಿಂತು ಪಂಚಾಗ್ನಿಮಧ್ಯದಲ್ಲಿದ್ದು ಪಶುಪತಿಯನ್ನು ಕುರಿತು ಉಗ್ರತಪವಾಚರಿಸಿದವಳಿಗೆ ಇಂದ್ರಿಯಗಳನ್ನು ಜಯಿಸುವುದು ತಿಳಿಯದೇ?

ಇಂದ್ರಿಯಗಳ ಆಕರ್ಷಣೆಗಳಿಗೆ ಸೋಲದೆ, ಪರಮೇಶ್ವರವರರೂಪ ವಾದ ವಿಧಿಬಲದಿಂದ ಪಂಚಪತಿತ್ವವನ್ನು ಧರ್ಮಾನುಬದ್ಧವಾಗಿ ವಹಿಸಿ ಸಕಲ ಮುನಿಗಳ ಹೊಗಳಿಕೆಗೆ ಪಾತ್ರಳಾಗಿ, ಪೂರ್ವಜನ್ಮಶುಭವಾಸನಾವಾಸಿತಾಂತಃ ಕರಣೆಯಾಗಿ, ಅಯೋನಿಜೆಯಾಗಿ, ಲೋಕೋತ್ತರಮಹಿಮಾನ್ವಿತೆಯಾಗಿ

ವಿರಾಜಿಸಿದ ಪಾಂಡವಧರ್ಮಪತ್ನಿಗೆ ಇಂದ್ರಿಯಗಳನ್ನು ಗೆಲ್ಲುವ ಸಾಮರ್ಥ್ಯ ವಿಲ್ಲವೇ? ಅದು ಆಕೆಗೆ ತಿಳಿಯದೇ?

'ಈ ವನಿತೆ ಕಾಮಪೀಡಿತೆ. ಅವಳಿಗೆ ತನ್ನ ಎಲ್ಲೆ ತಿಳಿಯದು. ಅವಳ ಬಾಳು ನಿಂದ್ಯ'–ಇದು ವಿಮರ್ಶಕರ ಆಲಾಪ. ವಿಶ್ವನಿಂದ್ಯವಾದ 'ಬಾಳು' ಎಂದರೇನು? ದ್ರೌಪದಿಗೆ ಪಂಚಪತಿತ್ವ ನಿಂದ್ಯವೆಂದೇ? ಆಕೆ–'ನನಗೆ ಆ ಬಗೆಯ ಸಂಕಲ್ಪವಿಲ್ಲ. ಅದು ಧರ್ಮವಿರುದ್ಧ' ಎಂದು ಹೇಳಿಕೊಳ್ಳುತ್ತಿರುವಾಗ 'ನಿನಗೆ ನಾನು ಕೊಡುವ ಪಂಚಪತಿತ್ವ ಧರ್ಮ್ಯ. ನಿನಗೆ ಪ್ರತ್ಯೇಕ ಪತಿಸಾಂಗತ್ಯದಿಂದ ಕನ್ಯಾತ್ವವನ್ನು ಅನುಗ್ರಹಿಸಿದ್ದೇನೆ'–ಎಂದು ವರಗಳನ್ನಿತ್ತ ಪರಮೇಶ್ವರನನ್ನೇ ವಿಶ್ವನಿಂದ್ಯನೆಂದಂತಾಗುತ್ತದೆ. ಆದುದರಿಂದ ಪರಮೇಶ್ವರ ಪ್ರಸಾದಿತವಾದ ಆಕೆಯ ಪಂಚಪತಿತ್ವವು ವಿಶ್ವವಂದ್ಯವೇ ಹೊರತು ವಿಶ್ವ ನಿಂದ್ಯವಲ್ಲ.

ಇಂತಹ ಸ್ಥಿತಿಯಲ್ಲಿ–'ಆಕೆ ಕಾಮಪೀಡಿತೆ. ಆಕೆಯ ಮನಸ್ಸು ವ್ಯಭಿ ಚರಿಸದಿರುವುದೆಂತು? ದ್ರೌಪದಿಯನ್ನು ಪತಿವ್ರತೆಯೆನ್ನಲಾಗದು. ಆಕೆ ಕುಲಸತಿಯಲ್ಲ'–ಎಂಬೀ ಪ್ರತಿವಾದಿಗಳ ದುರುಕ್ತಿಗಳು ನಿಂದ್ಯವೇ ಸರಿ.

ಈ ಪ್ರತಿವಾದಿ ಧೋರಣೆ–

ಯಥಾ :

ಸ್ತ್ರೀಣಾಂ ತಥಾ ವಾಚಾಂ ಸಾಧುತ್ವೇ ದುರ್ಜನೋ ಜನಃ ।
ದೇವ್ಯಾ ಅಪಿ ಹಿ ವೈದೇಹ್ಯಾ ಸ್ಯಾಪವಾದೋ ಯತೋ ಜನಃ ।
ರಕ್ಷೋಗೃಹಸ್ಥಿತಿರ್ಮೂಲಂ ವಹ್ನಿಶುದ್ಧೌ ತ್ವನಿಶ್ಚಯಃ ॥

ಎಂದು ಉತ್ತರರಾಮಚರಿತ್ರೆಯಲ್ಲಿ ಭವಭೂತಿಮಹಾಕವಿ ಹೇಳಿ ದಂತಿದೆ. ಪಾತಿವ್ರತ್ಯಕ್ಕೆ ಆದರ್ಶಳಾಗಿ ಪರಮಪತಿವ್ರತೆಯಾದ ಸೀತೆಯ ಬಗ್ಗೆ ಜನ ದೋಷದೃಷ್ಟಿ ತೋರಿತೆಂದರೆ ಸ್ತ್ರೀಯರ ಪಾತಿವ್ರತ್ಯದ ಬಗ್ಗೆ ದೌರ್ಜನ್ಯ ತೋರುವುದರಲ್ಲಿ ಅಭ್ಯಂತರವೇನು?

ಅಂದು ಸೀತಾಮಹಾದೇವಿಗೆ ಸಂಭವಿಸಿದ ರಾಕ್ಷಸಗೃಹವಾಸಸ್ಥಿತಿ, ಆ ದೋಷದೃಷ್ಟಿ ಇವುಗಳಿಗೆ ಆಧಾರವಾಗಿ ಅಂದು ಆಕೆ ಪ್ರದರ್ಶಿಸಿದ ಅಗ್ನಿಶುದ್ಧಿ ಗಣ್ಯತೆ ಕಾಣದಾಯಿತು. ಇದೇ ದೌರ್ಜನ್ಯದ ಲಕ್ಷಣ.

ಲೋಕದಲ್ಲಿ ವ್ಯಕ್ತಿ ತಾನು ಯಾವ ವಿಷಯವನ್ನು ಊಹಿಸತೊಡಗಿ

ದರೂ ಅದಕ್ಕೆ ಅಸಾಧಾರಣಕಾರಣವಿರಬೇಕು. ಅದಕ್ಕೆ ಬಾಧಕಪ್ರಮಾಣ ವಿಲ್ಲದಿರಬೇಕು. ಇಂತಹ ಸ್ಥಿತಿಯಲ್ಲಿ ಪರಸ್ತ್ರೀಯನ್ನು ಬಲಾತ್ಕರಿಸಿದರೆ ಸಾಯುವೆಯೆಂದು ರಾವಣಾಸುರನಿಗಿದ್ದ ಶಾಪಗಳಿಂದ ಸೀತಾಮಹಾದೇವಿಗೆ ಸಂಪ್ರಾಪ್ತವಾದ ರಾಕ್ಷಸಗೃಹಸ್ಥಿತಿ ಆಕೆಯ ಬಗ್ಗೆ ಊಹಿಸುವ ಪಾತಿವ್ರತ್ಯಹಾನಿಗೆ ಅಸಾಧಾರಣಕಾರಣವಾಗಲಾರದು. ಅದಕ್ಕೆ ಅಗ್ನಿಶುದ್ಧರೂಪವಾದ ಬಾಧಕಪ್ರಮಾಣವು ಇಲ್ಲದಿಲ್ಲ.

ಇಲ್ಲ-ಸಲ್ಲದ ದೋಷವನ್ನು ಉದ್ಘೋಷಿಸುವುದು ದುರ್ಜನಕೃತ್ಯ. ವ್ಯಕ್ತಿಯ ಪ್ರಭಾವವನ್ನವಗಣಿಸಿ ಇಲ್ಲದ ದೋಷವನ್ನು ಆರೋಪಿಸುವುದು ಅದಕ್ಕಿಂತ ದುರ್ಜನಕೃತ್ಯ. ಅಸಾಧಾರಣಕಾರಣವನ್ನು ಗ್ರಹಿಸದೆ ವ್ಯಕ್ತಿಯ ಪ್ರಭಾವವನ್ನು ಪರಿಗಣಿಸದೆ ಇಲ್ಲದ ದೋಷವನ್ನು ಆರೋಪಿಸುವುದು ಅದಕ್ಕಿಂತ ದುರ್ಜನಕೃತ್ಯ. ಬಾಧಕಪ್ರಮಾಣವನ್ನು ವಿಶ್ವಸಿಸದೆ ಅಸಾಧಾರಣ ಕಾರಣವನ್ನು ಗ್ರಹಿಸದೆ ವ್ಯಕ್ತಿಪ್ರಭಾವವನ್ನು ತಿಳಿಸದೆ ಇಲ್ಲದ ದೋಷವನ್ನು ಹೊರಿಸುವುದು ಎಲ್ಲಕ್ಕಿಂತಲೂ ದುರ್ಜನಕೃತ್ಯ.

ದ್ರೌಪದಿಗೆ ಪಂಚಪತಿತ್ವವು ಧರ್ಮವಿರುದ್ಧವೆಂದು ಭಾವಿಸಿದ ದ್ರುಪದ ಮಹಾರಾಜನೊಡನೆ

“ನನು ವಕ್ಷ್ಯಾಮಿ ಸರ್ವೇಷಾಂ ಪಾಂಚಾಲ ಶೃಣು ಮೇ ಸ್ವಯಂ
ಯಥಾಽಯಂ ವಿಹಿತೋ ಧರ್ಮೋ ಯತಶ್ಚಾಽಯಂ ಸನಾತನಃ”

ಎಂದುಪಕ್ರಮಿಸಿ ನುಡಿದ ವೇದವ್ಯಾಸರು–ಇದು ಧರ್ಮವಿರುದ್ಧವಲ್ಲ; ಧರ್ಮವೇ–ಎಂದು ಪೂರ್ವವೃತ್ತಾಂತಗಳ ನೆರವಿನಿಂದ ನಿರೂಪಿಸಿ ದ್ರುಪದ ನಿಗೆ ದಿವ್ಯದೃಷ್ಟಿಯನ್ನು ಪ್ರಸಾದಿಸಿ, ದ್ರೌಪದೀ-ಪಾಂಡವರ ಪೂರ್ವರೂಪ ಸಂದರ್ಶನ ಭಾಗ್ಯವನ್ನಾತನಿಗಿತ್ತು ಆ ಪಂಚಪತಿತ್ವವು ಆಕೆಗೆ ಧರ್ಮವಿರುದ್ಧ ವಲ್ಲವೆಂದು ನಿರೂಢಿಯನ್ನು ಪ್ರತ್ಯಕ್ಷಸಿದ್ಧವನ್ನಾಗಿಸಿದುದರಿಂದಲೂ, ಅದು ಪರ ಮೇಶ್ವರನ ವರಪ್ರಸಾದವಾದುದರಿಂದಲೂ ಧರ್ಮ್ಯವಾದ ಪಂಚಪತಿತ್ವವು ದ್ರೌಪದಿಯು ಪತಿವ್ರತೆಯಲ್ಲವೆಂಬ ಪ್ರತಿವಾದಿಗಳ ಊಹೆಗೆ ಅಸಾಧಾರಣವಲ್ಲ.

ಪಂಚಪತಿತ್ವವರವನ್ನು ಕೊಡುವಾಗ–

“ಅನ್ಯದೇಹಾಂತರೇ ಚೈವ ರೂಪಭಾಗ್ಯಗುಣಾನ್ವಿತಾ
ಪಂಚಭಿಃ ಪ್ರಾಪ್ಯ ಕೌಮಾರ್ಯಂ ಮಹಾಭಾಗಾ ಭವಿಷ್ಯಸಿ”

"ನೀನು ಪ್ರತ್ಯೇಕಪತಿಸಾಂಗತ್ಯದಿಂದ ಕನ್ಯಾತ್ವವನ್ನು ಧರಿಸಿ, ಪೂಜ್ಯಳಾಗುವೆಯೆಂದು ಪರಮೇಶ್ವರನು ಪ್ರತಿಪಾದಿಸಿರುವುದರಿಂದ, ಅಂತಹ ಪರಮೇಶ್ವರನ ಅಮೋಘವಚನವು "ಆಕೆ ಪತಿವ್ರತೆ ಅಲ್ಲ"ವೆಂಬ ಪ್ರತಿವಾದಿಗಳ ಊಹೆಗೆ ಬಾಧಕಪ್ರಮಾಣವಾಗಿದೆ.

ಕೌರವಸಭೆಯಲ್ಲಿ ದುಶ್ಶಾಸನನು ಮಾಡುವ ವಸ್ತ್ರಾಪಹರಣ ದುಷ್ಕಾರ್ಯದಲ್ಲಿ ದ್ರೌಪದಿಯ ಮಹಿಮೆಯೇ ಅವನ ದುಷ್ಕೃತ್ಯವನ್ನು ಅಡಗಿಸುವುದೆಂದು ಭೀಷ್ಮಾದಿಗಳು ಉಪೇಕ್ಷಿಸಿರಲು, ಅನಂತವಸ್ತ್ರಾವಿರ್ಭಾವದಿಂದ ತನ್ನನ್ನು ತಾನೇ ರಕ್ಷಿಸಿಕೊಂಡ ದ್ರೌಪದಿಯ ಪಾತಿವ್ರತ್ಯಭಾವವು ವಿಶ್ವವಿಖ್ಯಾತವಾದದ್ದು.

ಇಂತಿರಲು, ತಮ್ಮ ಊಹೆಗೆ ಅಸಾಧಾರಣಕಾರಣವನ್ನರಿತುಕೊಳ್ಳದೆ, ಬಾಧಕಪ್ರಮಾಣವನ್ನು ನಂಬದೆ, ದ್ರೌಪದಿಯ ಪ್ರಭಾವವನ್ನು ಲೆಕ್ಕಿಸದೆ, 'ಪತಿವ್ರತೆಯಲ್ಲವೀ ಪಾಂಚಾಲಿ' ಎಂದು ಪ್ರತಿವಾದಿಸುವ ಪ್ರಸಂಗ ಸೀತಾ ಮಹಾದೇವಿಯನ್ನು ಕುರಿತು ಅಂದು ಅಗಸನಾಡಿದ ಮಾತನ್ನು ಹೋಲುವುದು. ಅದುದರಿಂದ ಇದು ಪ್ರಾಜ್ಞರಾದವರಿಗೆ ತ್ಯಾಜ್ಯ.

"ಮತ್ಸ್ಯಯಂತ್ರವನ್ನು ಭೇದಿಸಿದವನನ್ನು ವರಿಸಬೇಕಾದ ದ್ರೌಪದಿಯು ಸೂತಪುತ್ರನನ್ನು ನಾನು ವರಿಸುವುದಿಲ್ಲ" ಎಂಬ ಪ್ರಕರಣ–ತನ್ನಿರಾಕರಣ :

ಮಹಾಭಾರತಚರಿತ್ರೆಕಾರರ ಬರವಣಿಗೆ ಹೀಗಿದೆ :

1. ದ್ರೌಪದಿಯ ಸ್ವಯಂವರಕ್ಕಿಂತ ಮುಂಚೆಯೇ ದ್ರೌಪದಿಯು ಪಾಂಡವರೈವರನ್ನು ಮದುವೆಯಾಗುವುದಕ್ಕೂ, ಅವರೂ ಅವಳನ್ನು ಮದುವೆ ಆಗುವುದಕ್ಕೂ ವ್ಯಾಸ-ಯಾಜೋಪಯಾಜರಿಂದ ನಿಶ್ಚಯಿಸಲ್ಪಟ್ಟ ಒಪ್ಪಿಗೆ ಆಗಿರಬಹುದು.

2. ದ್ರುಪದನೂ ಮೊದಲು ಈ ವೃತ್ತಾಂತವನ್ನು ಕೇಳಿ ತಿಳಿಯದೆ ಬಲಶಾಲಿಯಾದ ಅರ್ಜುನನು ತನಗೆ ಅಳಿಯನಾಗಬೇಕೆಂದು ಪ್ರಚ್ಛನ್ನರಾದ ಪಾಂಡವರನ್ನು ಹುಡುಕಿಸಿದ. ಅವರು ಕಂಡುಬರಲಿಲ್ಲವಾದ ಕಾರಣ

ವೀರ್ಯಶುಲ್ಕ ಸ್ವಯಂವರವನ್ನು ಪ್ರಕಟಿಸಿದ. ಆ ಸ್ವಯಂವರವನ್ನು ಸಾರುವುದರಲ್ಲಿ 'ಯಾರಾದರೂ ಬಾಣಗಳಿಂದ ಈ ಮತ್ಸ್ಯಯಂತ್ರವನ್ನು ಭೇದಿಸಿದರೆ ಆತ ನನ್ನ ಮಗಳನ್ನು ಪರಿಗ್ರಹಿಸಬಹುದು'–ಎಂದ.

ಈ ಪ್ರಕಟಣೆಯ ಪ್ರಕಾರ ಮತ್ಸ್ಯಯಂತ್ರವನ್ನು ಭೇದಿಸಿದವನನ್ನೇ ದ್ರೌಪದಿಯು ವರಿಸಬೇಕು. ಆದರೆ ಮತ್ಸ್ಯಯಂತ್ರವನ್ನು ಹೊಡೆಯಲು ಕರ್ಣನು ಬಿಲ್ಲನ್ನು ಅಣಿಮಾಡುತ್ತಿರುವಾಗ ದ್ರೌಪದಿಯು–"ಸೂತಪುತ್ರನನ್ನು ನಾನು ವರಿಸಲಾರೆ–"ಎಂದದ್ದರಿಂದ ಅದಕ್ಕೆ ಮೊದಲೇ ಪಾಂಚಾಲಿಯು ಪಾಂಡವರಿಗೆ ವ್ಯಾಸಾದಿಗಳಿಂದ ಕೊಡಲ್ಪಟ್ಟಿದ್ದಳೆಂದು ದೃಢವಾಗಿ ಹೇಳಬೇಕಾಗಿದೆ. (ಪು. 255)

ಆಹಾ! ಮದುವೆ ಆಗಲು ದ್ರೌಪದಿಯನ್ನೂ ಪಾಂಡವರನ್ನೂ ವ್ಯಾಸ-ಯಾಜೋಪಯಾಜರು ಸ್ವಯಂವರಕ್ಕೆ ಪೂರ್ವವೇ ಒಪ್ಪಿಸಿದ್ದರಂತೆ. ಅದು ತಿಳಿಯದೆ ಅರ್ಜುನನು ತನಗೆ ಅಳಿಯನಾಗಬೇಕೆಂಬ ಸಂಕಲ್ಪದಿಂದ ವೀರ್ಯಶುಲ್ಕವಾದ ಸ್ವಯಂವರವನ್ನು ಸಾರಿದ ದ್ರುಪದನು ಮತ್ಸ್ಯಯಂತ್ರ ವನ್ನು ಕೆಡವಿದವನಿಗೆ ನನ್ನ ಮಗಳು ಕೊಡುಗೆ ಆಗಲಿದ್ದಾಳೆ'–ಎಂದನಂತೆ. ಕರ್ಣನು ಆ ಕೆಲಸಕ್ಕೆ ಸಿದ್ಧನಾದಾಗ ಸೂತಪುತ್ರನನ್ನು ನಾನು ಕೈಹಿಡಿಯಲಾರೆ ಎಂದ ದ್ರೌಪದಿಯ ನುಡಿಯನ್ನು ಕೇಳಿ ಕರ್ಣನು ಹಿಮ್ಮೆಟ್ಟಿದನಂತೆ. ದ್ರೌಪದಿಯ ಸೂತಪುತ್ರನನ್ನು ವರಿಸೆನು ಎಂಬ ಮಾತಿನಿಂದ ಆಕೆ ಮೊದಲೇ ಪಾಂಡವರಿಗೆ ವ್ಯಾಸಾದಿಗಳಿಂದ ಕೊಡಲ್ಪಟ್ಟಳೆಂದು ದೃಢವಾಗಿ ಹೇಳಬೇಕಾಯಿತಂತೆ. ಇಲ್ಲಿ ಪ್ರತಿವಾದಿಗಳನ್ನು ಕೇಳಬೇಕಾಗಿದೆ.

ಅರ್ಜುನನು ಅಳಿಯನಾಗುವುದೇ ಸಂಕಲ್ಪವಾಗಿರುವಾಗ, ವಿವಾಹ ವಿಷಯದಲ್ಲಿ ವ್ಯಾಸಾದಿಗಳು ಸ್ವಯಂವರಕ್ಕೆ ಮೊದಲೇ ದ್ರೌಪದೀ–ಪಾಂಡವ ರನ್ನು ಒಪ್ಪಿಸಿರುವಾಗ–ದ್ರುಪದನು ಅದನ್ನರಿಯದಿರುವುದಕ್ಕೆ ಕಾರಣವೇನು? ದ್ರುಪದನ, ದ್ರೌಪದಿಯ, ವ್ಯಾಸಾದಿಗಳ ಸಂಕಲ್ಪವೇ ಅದಲ್ಲವೇ?

ಅರ್ಜುನನಿಗಾಗಿಯೇ ವೀರ್ಯಶುಲ್ಕಸ್ವಯಂವರವನ್ನು ಕಲ್ಪಿಸಿದ ದ್ರುಪದನು ಮತ್ಸ್ಯಯಂತ್ರವನ್ನು ಯಾರು ಭೇದಿಸಿದರೂ ನನ್ನ ಮಗಳನ್ನು

ಪಡೆಯಬಹುದೆಂದು ಸಾರಿದಾಗ ಕರ್ಣನಿಗೂ ಅವಕಾಶವಿತ್ತು. ಸಂಕಲ್ಪ ವಿರುದ್ಧವಾಗಿ ಸಾರುವುದಾದರೂ ಹೇಗೆ? ಹಾಗೆ ಸಾರಿದಾಗಲೂ ಈ ಸಂಕಲ್ಪವು ಸಿದ್ಧಿಸಿಯೇ ಇದೆ. ಈ ಸ್ವಯಂವರದ ಪ್ರಯತ್ನವು ಅನಗತ್ಯ. ನೀನು ಸಾರುವ ಪದ್ಧತಿಯು ಕರ್ಣನಿಂದ ವಿರುದ್ಧವಾಗಿ ಪರಿಣಮಿಸುವುದೆಂದು ವ್ಯಾಸಾದಿಗಳೋ ದ್ರೌಪದಿಯೋ ಏಕೆ ಹೇಳಲಿಲ್ಲ? ನೀವು ಹೇಳಿದಂತೆ, ಆ ಪ್ರಕಟಣೆಯಂತೆ ಯಾರು ಮತ್ಸ್ಯಯಂತ್ರವನ್ನು ಕೆಡವಿದರೂ ಅವನನ್ನೇ ವರಿಸಬೇಕಾದ ದ್ರೌಪದಿಯು ಸೂತಪುತ್ರನನ್ನು ವರಿಸೆನೆಂದು ಆ ರಂಗಸ್ಥಲದಲ್ಲಿ ಹೇಗೆ ನುಡಿಯಲು ಸಾಧ್ಯ? ಸರಿ. ಆಕೆ ಹಾಗೆಂದರೂ ಪ್ರಕಟಣೆಗೆ ಅದು ವಿರುದ್ಧವೆಂದು ಎದುರಿಸಬೇಕಾದ ಕರ್ಣನು ಮೌನಮುದ್ರೆಧರಿಸಿ ಹೇಗೆ ಏಕೆ ಸುಮ್ಮನಿದ್ದ? ಆತ ಸುಮ್ಮನಿದ್ದುದನ್ನು ನೋಡಿದರೆ ಪ್ರಕಟಣೆಯಲ್ಲಿ ಕುಲೀನತೆಯೂ ಸೇರಿರುವುದಾಗಿ ಕರ್ಣನು ಗ್ರಹಿಸಿದ್ದಂತೆ ತಿಳಿಯಬೇಕಾಗಿದೆ. ಆ ವಿಷಯ ರಂಗಸ್ಥಳದಲ್ಲಿ ಮೊದಲು '**ಕುಲೇನ, ರೂಪೇಣ, ಬಲೇನ ಯುಕ್ತಃ**' ಎಂಬ ಧೃಷ್ಟದ್ಯುಮ್ನನ ಮಾತಿನಿಂದ ಸ್ಪಷ್ಟವಾಗಿತ್ತೆಂದು ನಾವು ತಿಳಿದುಕೊಳ್ಳಬೇಕು. ಆದುದರಿಂದಲೇ ಸೂತಪುತ್ರನನ್ನು ವರಿಸೆನೆಂದು ದ್ರೌಪದಿಯು ಹೇಳಿದಳೆಂದು ತಿಳಿಯಬೇಕು. ತನ್ನ ಕುಲಹೀನತೆಯ ಕಾರಣ ದಿಂದ ಕರ್ಣನು ಸುಮ್ಮನಾದನೆಂದು ತಾತ್ಪರ್ಯ.

ಕರ್ಣನ ಹೃದಯದಲ್ಲಿ ಮೊಟ್ಟಮೊದಲೇ ಕುಲದ ಪ್ರಸಕ್ತಿ ಇದ್ದಿದ್ದರೆ, ಸ್ವಯಂವರಕ್ಕೆ ಬರಲು ಹೇಗೆ ಸಾಧ್ಯ? ಬಂದರೂ ಧನುಸ್ಸನ್ನು ಸಜ್ಜುಗೊಳಿಸಲು ಹೇಗೆ ಮುಂದಾದ? ತನಗೆ ಪ್ರಾಣಾಧಿಕನಾದ ದುರ್ಯೋಧನನು ಬಂದದ್ದರಿಂದ ಆತನೊಡನೆ ಬಂದ. ಕ್ಷತ್ರಿಯರಾರೂ ಬಿಲ್ಲನ್ನೆತ್ತಲಾರದೆ ಭಂಗಪಟ್ಟಿದ್ದನ್ನು ನೋಡಿ ತಾನು ಆ ಕೆಲಸಕ್ಕೆ ಸಮರ್ಥನಾದುದರಿಂದ ಆ ಸಾಮರ್ಥ್ಯವನ್ನು ಪ್ರಕಟಿಸಬೇಕೆಂದು ಎದ್ದು ದ್ರೌಪದಿಯಿಂದ ಕುಲದ ಪ್ರಸಕ್ತಿಯನ್ನು ಕೇಳಿ ಮರುಮಾತಾಡದೆ ಹಿಂದಾದನೆಂದು ತಿಳಿಯಬೇಕು.

ಇದರಿಂದ ಮೇಲಿನ ಪ್ರಕಟಣೆಯಂತೆ–ಮತ್ಸ್ಯಯಂತ್ರವನ್ನು 'ಭೇದಿಸಿ ದವನಿಗೆ ದ್ರೌಪದಿಯು ಕೊಡುಗೆ' ಎಂಬ ಪ್ರತಿವಾದಿಯ ಮಾತು ನಂದಿತು.

"ಸ್ವಯಂವರಕ್ಕೆ ಮೊದಲೇ ವ್ಯಾಸಾದಿಗಳಿಂದ ಪಾಂಚಾಲಿಯು

ಪಾಂಡವರಿಗೆ ಪ್ರದಾನವಾಗಿದ್ದಳು ಎಂದು ಗಟ್ಟಿಯಾಗಿ ಹೇಳಬೇಕಾಗಿದೆ" ಎಂಬ ಪ್ರತಿವಾದಿಗಳಿಗೆ ಒಂದಿಷ್ಟು ವಿಷಯ ತಿಳಿಸೋಣ.

ಹಾಗೆ ಪ್ರದಾನಮಾಡಲ್ಪಟ್ಟಿದ್ದು ಸ್ವಯಂವರಕ್ಕೆ ಮೊದಲು ಮಾತ್ರವೇ ಅಲ್ಲ ; ದ್ರೌಪದಿಯ ಜನ್ಮಕ್ಕೆ ಮುಂಚೆಯೇ ಅದು ಜರುಗಿತು. ಅದೂ ವ್ಯಾಸಾದಿಗಳಿಂದಲ್ಲ ; ತಪಃಫಲವಾಗಿ ವರವಿತ್ತ ಪರಮೇಶ್ವರನಿಂದ ಮಾಡಲ್ಪಟ್ಟಿತು. ಪರಮೇಶ್ವರನಿಂದ ನಿರ್ದಿಷ್ಟವಾಗಿ ಭೂಭಾರಹರಣಾರ್ಥವಾಗಿ ಆವಿರ್ಭವಿಸಲಿದ್ದ ದ್ರೌಪದಿಯ ನೆಲೆಯನ್ನು ಕಂಡುಹಿಡಿದವರು ಯಾಜೋಪಯಾಜರು. ಅದೂ ದಿವ್ಯದೃಷ್ಟಿಯಿಂದ, ದ್ರೌಪದೀ–ಪಾಂಡವರ ಪೂರ್ವಜನ್ಮ ವೃತ್ತಾಂತಗಳನ್ನೂ, ಅವರಿಗೆ ಭಾರ್ಯಾಭರ್ತೃಭಾವವನ್ನು ಉಂಟುಮಾಡಿದ ಪರಮೇಶ್ವರನ ವರವನ್ನೂ ದಿವ್ಯದೃಷ್ಟಿಯಿಂದ ಗ್ರಹಿಸಿ, ಪ್ರಕಟಿಸಿದವರು ವೇದವ್ಯಾಸರು. ಆದುದರಿಂದ ಪ್ರತಿವಾದಿಯದು ಅಸಂಗತಪ್ರಸಂಗ.

ಇನ್ನು ಇದನ್ನು ಬಿಟ್ಟು ಮೇಲಿನ ಕಥೆಯನ್ನು ಅನುಸರಿಸೋಣ :

ಕರ್ಣನು ಹಿಂದಿರುಗಿದ ಮೇಲೆ, ಬ್ರಾಹ್ಮಣವೇಷಧಾರಿಯಾಗಿ ಬ್ರಾಹ್ಮಣ ಸಮೂಹದಲ್ಲಿ ಕುಳಿತಿದ್ದ ಅರ್ಜುನನೆದ್ದು ಮುಂದಾಗಿ ಮತ್ಸ್ಯಯಂತ್ರವನ್ನು ಭೇದಿಸಿದ. ದ್ರುಪದನಿಗೆ ಸಂತೋಷವಾಯಿತು. ದ್ರೌಪದಿಯು ವರಣಮಾಲೆಯನ್ನು ಹಿಡಿದು ಬಂದು ಯಥೋಚಿತವಾಗಿ ಅರ್ಜುನನ ಪಕ್ಕದಲ್ಲಿ ನಿಂತಿದ್ದಳು. ಅನಂತರ ಆಕೆಯ ಜೊತೆಯಲ್ಲಿ ಬರುತ್ತಿರಲು ರಂಗಸ್ಥಳದಿಂದ ಪಾರ್ಥನು ನಿರ್ಗಮಿಸುತ್ತಿದ್ದ. ಆಗ ಕ್ಷತ್ರಿಯವೀರರು ಮಾತಾಡಿಕೊಳ್ಳುವುದರಲ್ಲಿ "ದ್ರುಪದನು ಈ ಸ್ತ್ರೀರತ್ನವನ್ನು ನಮ್ಮೆಲ್ಲರನ್ನೂ ಕಡೆಗಣಿಸಿ ವಿಪ್ರನಿಗೆ ಕೊಡುತ್ತಿದ್ದಾನೆ. ನಮ್ಮನ್ನು ಆಹ್ವಾನಿಸಿ ಹೀಗೆ ಅವಮಾನಪಡಿಸಿದ ಈತನನ್ನೂ ವಧಿಸೋಣ.

"ಸ್ವಯಂವರಃ ಕ್ಷತ್ರಿಯಾಣಾಮಿತ್ಯೇಷಾ ಪ್ರಥಿತಾ ಶ್ರುತಿಃ ।
ನ ಚ ವಿಪ್ರೇಷ್ವಧೀಕಾರೋ ವಿದ್ಯತೇ ವರಣಂ ಪ್ರತಿ ॥

ಸ್ವಯಂವರಕ್ಕೆ ಅಧಿಕಾರವು ಕ್ಷತ್ರಿಯರಿಗಲ್ಲದೇ ವಿಪ್ರರಿಗಲ್ಲ. ಈ ಬ್ರಾಹ್ಮಣ ತಿಳಿದೋ ತಿಳಿಯದೆಯೋ ಈ ಕೆಲಸಮಾಡಿದರೂ ಈತ ವಧ್ಯ ನಲ್ಲ. ಮತ್ತೆ ಇನ್ನೆಂದೂ ಹೀಗೆ ಸ್ವಯಂವರವು ಜರುಗದಂತೆ ದ್ರುಪದನನ್ನು

ವಧಿಸೋಣ"–ಎಂದು ಮಾತಾಡಿಕೊಂಡು ಆಯುಧಗಳನ್ನು ಹಿಡಿದು ದ್ರುಪದನ ಮೇಲೆರಗಲು ಸನ್ನದ್ಧರಾದರು. ಆಗ ಅವರೆಲ್ಲರನ್ನೂ ಭೀಮಾರ್ಜುನರು ಎದುರಿಸಿದರು. ಆಗ ಶಲ್ಯ-ಭೀಮಸೇನರಿಗೂ, ಕರ್ಣಾರ್ಜುನರಿಗೂ ದ್ವಂದ್ವಯುದ್ಧವು ಜರುಗಿತು. ತನ್ನೊಡನೆ ಕಾದುತ್ತಿದ್ದ ಬ್ರಾಹ್ಮಣನ ಪರಾಕ್ರಮಾತಿಶಯಕ್ಕೆ ಸೋಜಿಗಪಟ್ಟು ಕರ್ಣನು–

ತುಷ್ಯಾಮಿ ತೇ ವಿಪ್ರಮುಖ್ಯ ಭುಜವೀರ್ಯಸ್ಯ ಸಂಯುಗೇ ।
ಅವಿಷಾದಸ್ಯ ಚೈವಾಸ್ಯ ಶಸ್ತ್ರಾಸ್ತ್ರವಿಜಯಸ್ಯ ಚ ॥
ಕಿಂ ತ್ವಂ ಸಾಕ್ಷಾದ್ಧನುರ್ವೇದೋ ರಾಮೋ ವಾ ವಿಪ್ರಸತ್ತಮ ।
ಅಥ ಸಾಕ್ಷಾದ್ಧರಿಹಯಃ ಸಾಕ್ಷಾದ್ವಾ ವಿಷ್ಣುರಚ್ಯುತಃ ॥

ಆತ್ಮಪ್ರಚ್ಛಾದನಾರ್ಥಂ ವೈ ಬಾಹುವೀರ್ಯಮುಪಾಶ್ರಿತಃ ।
ವಿಪ್ರರೂಪಂ ವಿಧಾಯೇದಂ ಮನ್ಯೇ ಮಾಂ ಪ್ರತಿಯುಧ್ಯಸೇ ॥

ನ ಹಿ ಮಾಮಾಹವೇ ಕ್ರುದ್ಧಮನ್ಯಃ ಸಾಕ್ಷಾಚ್ಛಚೀಪತೇಃ ।
ಪುಮಾನ್ ಯೋಧಯಿತುಂ ಶಕ್ತಃ ಪಾಂಡವಾದ್ವಾ ಕಿರೀಟಿನಃ ॥

"ವಿಪ್ರವರ್ಯನೇ! ನಿನ್ನ ಪರಾಕ್ರಮಕ್ಕೆ ಮೆಚ್ಚಿದೆನು. ನೀನು ಮೈವೆತ್ತ ಧನುರ್ವೇದವೇ? ಪರಶುರಾಮನೇ? ಇಂದ್ರನೇ? ಉಪೇಂದ್ರನೇ ಯುದ್ಧಭೂಮಿಯಲ್ಲಿ ಕ್ರುದ್ಧನಾದ ನನ್ನನ್ನು ಎದುರಿಸುವುದು ಇಂದ್ರನ ಹೊರತಾಗಿ ಪಾರ್ಥನ ಹೊರತಾಗಿ ಬೇರೊಬ್ಬನಿಗೆ ಅಸದಳ. ಹೀಗೆಂದು "**ಯುದ್ಧಾತ್ಕರ್ಣೋ**ಽ**ವ್ಯವರ್ತತ ಬ್ರಾಹ್ಮಸ್ತೇಜಸ್ತದಾ ಜಯ್ಯಂ ಮನ್ಯಮಾನೋ ಮಹಾರಥಃ**' ಎಂದುಕೊಂಡು ಕರ್ಣನು ವಿರಮಿಸಿದ. ಶಲ್ಯನನ್ನು ಭೀಮಸೇನನು ಸೋಲಿಸಿದ.

ದ್ರೌಪದೀಪಾಣಿಗ್ರಹಣದ ಚರ್ಚೆ

ಆ ಮಾರನೆಯ ದಿನ ದ್ರುಪದನ ಆಹ್ವಾನದ ಮೇರೆಗೆ ಪಾಂಡವರು ತಾಯಿಯೊಡನೆ ದ್ರೌಪದಿಯೊಡನೆ ದ್ರುಪದನ ಮನೆಗೆ ಹೋಗಿ ಊಟ ಮುಗಿದ ಮೇಲೆ ಅವರು ಬ್ರಾಹ್ಮಣವೇಷಧಾರಿಗಳಾಗಿದ್ದುದರಿಂದ ಪಾಂಡವರೇ ಅಲ್ಲವೇ?–ಎಂಬ ಸಂದೇಹವನ್ನು ಪರಿಹರಿಸಿಕೊಳ್ಳುವ ಸಲುವಾಗಿ ಪರೀಕ್ಷಿಸುತ್ತಿದ್ದ ದ್ರುಪದನು ಕೊನೆಗೆ ಧರ್ಮನಂದನನನ್ನು ಹೀಗೆ ಪ್ರಶ್ನಿಸಿದನು.

ಕಥಂ ಜಾನೀಮ ಭವತಃ ಕ್ಷತ್ರಿಯಾನ್ ಬ್ರಾಹ್ಮಣಾನುತ ।
ಬ್ರವೀತು ನೋ ಭವಾನ್ ಸತ್ಯಂ ಸಂದೇಹೋ ಹ್ಯತ್ರ ನೋ ಮಹಾನ್ ॥

"ಮಹಾಶಯನೇ! ನಾವು ನಿಮ್ಮನ್ನು ಕ್ಷತ್ರಿಯರೆಂದು ಭಾವಿಸಬೇಕೇ? ಬ್ರಾಹ್ಮಣರೆಂದು ಭಾವಿಸಬೇಕೇ? ಎಂದು. ಅದಕ್ಕೆ ಧರ್ಮರಾಜನ ಉತ್ತರ :

ಮಾ ರಾಜನ್ ವಿಮನಾಭೂಸ್ತ್ವಂ ಪಾಂಚಾಲ್ಯ ಪ್ರೀತಿರಸ್ತು ತೇ ।
ವಯಂ ಹಿ ಕ್ಷತ್ರಿಯಾ ರಾಜನ್ ಪಾಂಡೋಃ ಪುತ್ರಾ ಮಹಾತ್ಮನಃ ॥
ಜ್ಯೇಷ್ಠಂ ಮಾಂ ವಿದ್ಧಿ ಕೌನ್ತೇಯಂ ಭೀಮಸೇನಾರ್ಜುನಾವಿಮೌ ।
ಆಭ್ಯಾಂ ತವ ಸುತಾ ರಾಜನ್ನಿರ್ಜಿತಾ ರಾಜಸಂಸದಿ ।
ಯಮೌ ಚ ತತ್ರ ಕುನ್ತೀ ಚ ಯತ್ರ ಕೃಷ್ಣಾ ವ್ಯವಸ್ಥಿತಾ ।
ವ್ಯೇತು ತೇ ಮಾನಸಂ ದುಃಖಂ ಕ್ಷತ್ರಿಯಾ ಸ್ಮೋನರರ್ಷಭ ॥

ಮಹಾರಾಜ! ನಿನಗೆ ವೈಮನಸ್ಯವು ಬೇಡ. ನಾವು ಕ್ಷತ್ರಿಯರು. ಪಾಂಡುರಾಜನ ಮಕ್ಕಳು. ನಾನು ಅವರಲ್ಲಿ ಜ್ಯೇಷ್ಠ. ರಾಜಸಭೆಯಲ್ಲಿ ನಿನ್ನ ಮಗಳನ್ನು ಸ್ವಾಧೀನಮಾಡಿಕೊಂಡ ಇವರೇ ಭೀಮಾರ್ಜುನರು. ಇವರು ನಕುಲ-ಸಹದೇವರು. ನಿಮ್ಮ ಮಗಳಿರುವ ಕಡೆ ಇರುವ ಆಕೆಯೇ ಕುಂತೀ ದೇವಿ. ನೀನು ಪರಿತಾಪಪಡಬೇಕಾದ ಆವಶ್ಯಕತೆ ಇಲ್ಲ.

ಪುತ್ರಾಶ್ವಸ್ತಸ್ತತೋ ರಾಜಾ ಸಹ ಪುತ್ರೈರುವಾಚ ತಮ್ ।
ಗೃಹ್ಣಾತು ವಿಧಿವತ್ಪಾಣಿಮದ್ಯಾಯಂ ಕುರುನಂದನಃ ॥
ಪುಣ್ಯೇಽಹನಿ ಮಹಾಬಾಹುರರ್ಜುನಃ ಕುರುತಾಂ ಕ್ಷಣಮ್ ।
ಟೀಕೆ : ಕ್ಷಣಾದೇವ ಪೂಜಾದಿಸರ್ವೋತ್ಸವಂ ವಿವಾಹಾತ್ಪ್ರಾಕ್ಕಾ-ಲೀನಕುಲಧರ್ಮಂ

ಆಗ ಪುತ್ರರೊಂದಿಗಿದ್ದ ದ್ರುಪದರಾಜನು ಸಂತಸಗೊಂಡು–'ಈ ಅರ್ಜುನನು ವಿಧ್ಯುಕ್ತವಾಗಿ ಪಾಣಿಗ್ರಹಣ ಮಾಡಬೇಕಾಗಿದೆ. ಆದುದರಿಂದ ವಿವಾಹಕ್ಕೆ ಪೂರ್ವಾಂಗವಾಗಿ ಜರುಗಬೇಕಾದ ದೇವತಾಪೂಜಾದಿ ಕುಲ ಧರ್ಮವನ್ನು ಈತ ನೆರವೇರಿಸಲಿ'–ಎಂದು ಹೇಳಿದ.

ತಮಬ್ರವೀತ್ತತೋ ರಾಜಾ ಧರ್ಮಾತ್ಮಾ ಚ ಯುಧಿಷ್ಠಿರಃ ।
ಮಮಾಪಿ ದಾರಸಂಬನ್ಧಃ ಕಾರ್ಯಸ್ತಾವದ್ವಿಶಾಮ್ಪತೇ ॥

ಧರ್ಮಾತ್ಮನಾದ ಯುಧಿಷ್ಠಿರನು ಆ ದ್ರುಪದನಿಗಿಂತೆಂದನು : "ನನಗೂ ಈಗ ಮದುವೆಯು ಆಗಬೇಕಾಗಿದೆ" ಎಂದು.

ಭವಾನ್ವಾ ವಿಧಿವತ್ಪಾಣಿಂ ಗೃಹ್ಣಾತು ದುಹಿತರ್ಮಮ ।
ಯಸ್ಯ ವಾ ಮನ್ಯಸೇ ವೀರ ತಸ್ಯ ಕೃಷ್ಣಾಮುಪಾದಿಶ ॥

ಆಗ ದ್ರುಪದನು–"ನೀನಾದರೂ ಸರಿ. ದ್ರೌಪದಿಯ ಪಾಣಿಗ್ರಹಣವು ಯಾರಿಗೆ ಯುಕ್ತವೆಂದು ಭಾವಿಸುವೆಯೋ ಆತನ ವಿಷಯ ಹೇಳು"–ಎಂದ.

ಸರ್ವೇಷಾಂ ಮಹಿಷೀ ರಾಜನ್ ದ್ರೌಪದೀ ನೋ ಭವಿಷ್ಯತಿ ।
ಏವಂ ಪ್ರವ್ಯಾಹೃತಂ ಪೂರ್ವಂ ಮಮ ಮಾತ್ರಾ ವಿಶಾಮ್ಪತೇ ॥

ಅಹಂ ಚಾಪ್ಯನಿವಿಷ್ಟೋ ವೈ ಭೀಮಸೇನಶ್ಚ ಪಾಂಡವಃ ।
ಪಾರ್ಥೇನ ವಿಜಿತಾ ಚೈಷಾ ರತ್ನಭೂತಾ ಸುತಾ ತವ ॥

ಸರ್ವೇಷಾಂ ಧರ್ಮತಃ ಕೃಷ್ಣಾ ಮಹಿಷೀ ನೋ ಭವಿಷ್ಯತಿ ।
ಆನುಪೂರ್ವ್ಯೇಣ ಸರ್ವೇಷಾಂ ಗೃಹ್ಣಾತು ಜ್ವಲನೇ ಕರಾನ್ ॥

ಟೀ : ಜ್ವಲನೇ = ಜ್ವಲನಸಮೀಪೇ, ಕರಾನ್ ಗೃಹ್ಣಾತು = **ಪಂಚಪಾಣಿಗ್ರಹಣಾನಿ ಕರೋತು**

ಆಗ ಧರ್ಮಜನಿಂತೆಂದ–"ಮಹಾರಾಜ! ನಮ್ಮೆಲ್ಲರಿಗೂ ಈಕೆ ಪತ್ನಿ ಆಗಬೇಕು. ನಮ್ಮಮ್ಮ ಹೀಗೆ ಹೇಳಿರುವಳು. ನಾನು ಅವಿವಾಹಿತ. ಭೀಮಸೇನನೂ ನನ್ನಂತೆಯೇ. ಅರ್ಜುನನು ನಿನ್ನ ಪುತ್ರಿಕಾರತ್ನವನ್ನು ಗೆದ್ದ. ಈ ಸಂದರ್ಭಾನುಗುಣವಾಗಿ ನಮ್ಮೆಲ್ಲರಿಗೂ ನಿನ್ನ ಕುವರಿಯು ಪತ್ನಿಯಾಗಬೇಕು. ಅಗ್ನಿಸಮೀಪದಲ್ಲಿ ಯಥಾಕ್ರಮವಾಗಿ ಮದುವೆಗಳು ನೆರವೇರಲಿ."

ಅದನ್ನು ಕೇಳಿ ದ್ರುಪದನು–

ಏಕಸ್ಯ ಬಹ್ವ್ಯೋ ವಿಹಿತಾ ಮಹಿಷ್ಯಃ ಕುರುನನ್ದನ
ನೈಕಸ್ಯಾ ಬಹವಃ ಪುಂಸಃ ಶ್ರೂಯನ್ತೇ ಪತಯಃ ಕ್ವಚಿತ್ ॥
ಲೋಕವೇದವಿರುದ್ಧಂ ತ್ವಂ ನಾಧರ್ಮಂ ಧರ್ಮವಿಚ್ಛುಚಿಃ ।
ಕರ್ತುಮರ್ಹಸಿ ಕೌನ್ತೇಯ ಕಸ್ಮಾತ್ತೇ ಬುದ್ಧಿರೀದೃಶೀ ॥

ಟೀ : **ಪುಂಸಃ = ಪುಮಾಂಸಃ, ಯದ್ವಾ ವೇದಕರ್ತುಃ ಪರಮಾತ್ಮ**

ಸಕಾಶಾನ್ನ ಶ್ರೂಯನ್ತೇ 'ತಸ್ಮಾನ್ನೈಕಾ ದ್ವೌ ಪತೀ ವಿನ್ದತೇ' ಇತಿ ವೇದವಿರುದ್ಧಂ ಚ, ಅವಿಹಿತಂ ನಿಷಿದ್ಧಂ ಚೈತದಿತ್ಯರ್ಥಃ

"ಧರ್ಮಜ! ಒಬ್ಬನಿಗೆ ಬಹುಮಂದಿ ಪತ್ನಿಯರು ಇರಬಹುದು. ಆದರೆ ಒಬ್ಬಳಿಗೆ ಬಹುಪತಿಗಳ ವಿಧಿವಿಧಾನವಿಲ್ಲ. ಇದು ಅಹಿತ. ಅಲ್ಲದೆ ಒಬ್ಬಳು ಬಹುಮಂದಿ ಪತಿಯರನ್ನು ಹೊಂದಿರಬಾರದು. ಇದು ವೇದವಾಕ್ಯನಿಷಿದ್ಧ. ನೀನು ಪರಿಶುದ್ಧನು. ಧರ್ಮಜ್ಞನಾದ ನೀನು ಲೋಕವಿರುದ್ಧವಾದ ಇಂತಹ ಅಧರ್ಮವನ್ನಾಚರಿಸಬಾರದು. ನಿನಗೆ ಈ ಬುದ್ಧಿಯು ಏಕೆ ಉಂಟಾಯಿತು?

ದ್ರುಪದನ ಮಾತಿಗೆ ಧರ್ಮಜನ ಉತ್ತರ :–

ಸೂಕ್ಷ್ಮೋ ಧರ್ಮೋ ಮಹಾರಾಜ! ನಾಸ್ಯ ವಿದ್ಮೋ ವಯಂ ಗತಿಮ್ ।
ಪೂರ್ವೇಷಾಮಾನುಪೂರ್ವ್ಯೇಣ ಯಾತಂ ವರ್ತ್ಮಾನುಯಾಮಹೇ ॥

ನ ಮೇ ವಾಗನೃತಂ ಪ್ರಾಹ ನಾಧರ್ಮೇ ಧೀಯತೇ ಮತಿಃ ।
ಏವಂ ಚೈವ ವದತ್ಯಂಬಾ ಮಮ ಚೈತನ್ಮನೋಗತಮ್ ॥

ಟೀ : ಸೂಕ್ಷ್ಮಃ= 'ನೈಕಸ್ಯೈ ಬಹವಸ್ಸಹಪತಯಃ' ಇತಿ ಶ್ರುತ್ಯಾ ಸಹೇತಿ ಯುಗಪದ್ಬಹುಪತಿತ್ವನಿಷೇಧೋ ವಿಹಿತೋ ನ ತು ಸಮಯಭೇದೇನ ತತಶ್ಚಾನಿಷಿದ್ಧಂ ಮಾತ್ರಾ ಸಮೇತ್ಯ ಭುಙ್ಕ್ತೇತ್ಯಾಜ್ಞಪ್ತಂ ಚ ನ ಲಂಘನೀಯಂ ಪಿತ್ರೋರಾಜ್ಞಯಾ ನಿಷಿದ್ಧಮಪಿ ಕರ್ತವ್ಯಂ ಪರಶುರಾಮಕೃತಮಾತೃವಧವತ್ ಮುತಾನಿಷಿದ್ಧಮಿತಿ ಭಾವಃ ಪೂರ್ವೇಷಾಂ ಪ್ರಚೇತಃಪ್ರಭೃತೀನಾಂ ತೈರ್ಯಾತಂ ವರ್ತ್ಮ ಬಹೂನಾಮೇಕಪತ್ನೀತ್ವಮನುಯಾಮಹೇತ್ಯೈಚ್ಛಾನುಪೂರ್ವ್ಯೇಣೈವ ನತ್ವಕ್ರಮೇಣ"

"ಮಹಾರಾಜ! ಇದು ಸ್ಥೂಲದೃಷ್ಟಿಗೆ ಗೋಚರಿಸದ ಸೂಕ್ಷ್ಮಧರ್ಮ. ಇದರ ಗತಿಯನ್ನು ನಾವು ಗ್ರಹಿಸಲಾರೆವು. 'ನೈಕಸ್ಯೈ ಬಹವಸ್ಸಹಪತಯಃ ತಸ್ಮಾನ್ನೈಕಾ ದ್ವೌ ಪತೀ ವಿನ್ದತೇ' ಎನ್ನುವಾಗ 'ಸಹಪತಯಃ' ಎಂಬ ಸಹಶಬ್ದದಿಂದ ಏಕಕಾಲದಲ್ಲಿ ಅನೇಕಪತಿತ್ವನಿಷೇಧವು ಸರಿಯೆ. ಆದರೆ ಸಮಯಭೇದದ ವಿಷಯದಲ್ಲಿ ನಿಷೇಧವಾಗಲಾರದು. ಆದುದರಿಂದ

ನಿಷಿದ್ಧವೆನಿಸುವುದಿಲ್ಲ. ಕಲೆತು ಅನುಭವಿಸುವಾಗ ಎಂಬ ನಮ್ಮ ತಾಯಿಯ ಮಾತನ್ನು ಮೀರಲಾಗದು. ನನ್ನದು ಅನೃತೋಕ್ತಿಯಲ್ಲ. ನನ್ನದು ಅಧರ್ಮ ಬುದ್ಧಿಯೂ ಅಲ್ಲ. ಬಹುಮಂದಿಗೆ ಏಕಪತ್ನೀತ್ವವೆಂಬ ಪದ್ಧತಿಯು ಪೂರ್ವಜರಾದ ಪ್ರಚೇತಃಪ್ರಭೃತಿಗಳಲ್ಲಿರುವುದೇ ಆಗಿದೆ.

ಏಷ ಧರ್ಮೋ ಧ್ರುವೋ ರಾಜಂಶ್ಚರೈನಮವಿಚಾರಯನ್ ।
ಮಾ ಚ ಶಂಕಾ ತತ್ರ ತೇ ಸ್ಯಾತ್ಕಥಂಚಿದಪಿ ಪಾರ್ಥಿವ ॥

ಮಹಾರಾಜ! ಇದು ಧ್ರುವವಾಗಿ ಧರ್ಮವೇ. ಇದರ ಆಚರಣೆಯಲ್ಲಿ ನಿನಗೆ ಸಂದೇಹಬೇಡ."

ಆಗ ದ್ರುಪದನೆಂದ :–

ತ್ವಂ ಚ ಕುಂತೀ ಚ ಕೌನ್ತೇಯ ಧೃಷ್ಟದ್ಯುಮ್ನಶ್ಚ ಮೇ ಸುತಃ ।
ಕಥಯನ್ತ್ವಿತಿಕರ್ತವ್ಯಂ ಶ್ವಃ ಕಾಲೇ ಕರವಾಮಹೇ ॥

"ಯುಧಿಷ್ಠಿರ! ನೀನು, ಕುಂತೀದೇವಿ, ನಮ್ಮ ದೃಷ್ಟದ್ಯುಮ್ನ ಆಲೋಚಿಸಿ ಹೇಳಿ. ನಾಳೆ ಯುಕ್ತಕಾಲದಲ್ಲಿ ಕಾರ್ಯವನ್ನು ಮುಗಿಸೋಣ" ಎಂದು.

ತೇ ಸಮೇತ್ಯ ತತಸ್ಸರ್ವೇ ಕಥಯನ್ತಿಸ್ಮ ಭಾರತ ।
ಅಥ ದ್ವೈಪಾಯನೋ ರಾಜನ್ನಭ್ಯಾಗಚ್ಛದ್ಯದೃಚ್ಛಯಾ ॥

ಆಮೇಲೆ ಅವರೆಲ್ಲರೂ ಕೂಡಿ ಪ್ರಸಂಗಿಸುತ್ತಿರುವಾಗ ವ್ಯಾಸಭಗವಾನ ರಲ್ಲಿಗೈತಂದರು. ಆಗ ಅವರೆಲ್ಲರೂ ಎದ್ದು ಪ್ರತ್ಯುತ್ಥಾನಾಭಿವಾದನಗಳಿಂದ ಪೂಜಿಸಿದರು. ವ್ಯಾಸರು ಅವರನ್ನು ಹರಸಿ ಕುಶಲಪ್ರಶ್ನೆಮಾಡಿ ದ್ರುಪದ ನಿರ್ದಿಷ್ಟವಾದ ಸುವರ್ಣಾಸನದಲ್ಲಿ ಆಸೀನರಾಗಲು ಆ ಮಹನೀಯರ ಅಪ್ಪಣೆ ಬೇಡಿ ಎಲ್ಲರೂ ಉಚಿತಾಸನಗಳಲ್ಲಿ ಕುಳಿತರು.

ಪಪ್ರಚ್ಛ ತಂ ಮಹಾತ್ಮಾನಂ ದ್ರೌಪದ್ಯರ್ಥಂ ವಿಶಾಮ್ಪತೇ ।
ಕಥಮೇಕಾ ಬಹೂನಾಂ ಸ್ಯಾದ್ಧರ್ಮಪತ್ನೀ ನ ಸಂಕರಃ ।
ಏತನ್ಮೇ ಭಗವಾನ್ಸರ್ವಂ ಪ್ರಬ್ರವೀತು ಯಥಾ ತಥಮ್ ॥

"ಪೂಜ್ಯರೇ! ಅನೇಕಪುರುಷರಿಗೆ ಒಬ್ಬ ಸ್ತ್ರೀಯು ಧರ್ಮಪತ್ನಿ ಯಾಗುವುದು ಹೇಗೆ? ಅದು ದೋಷವಲ್ಲವೇ? ಈ ವಿಷಯವಾಗಿ ತ್ರಿಕಾಲ ಜ್ಞಾನಸಂಪನ್ನರಾದ ನೀವು ನಮಗೆ ಯಥಾರ್ಥವನ್ನು ತಿಳಿಯಪಡಿಸಬೇಕು."

ಆಗ ವ್ಯಾಸರು ಹೀಗೆಂದರು :

ಅಸ್ಮಿನ್ ಧರ್ಮೇ ವಿಪ್ರಲಬ್ಧೇ ಲೋಕವೇದವಿರೋಧಕೇ ।
ಯಸ್ಯ ಯಸ್ಯ ಮತಂ ಯದ್ಯಚ್ಛ್ರೋತುಮಿಚ್ಛಾಮಿ ತಸ್ಯ ತತ್ ॥

ಟೀ :– ವಿಪ್ರಲಬ್ಧೇ =ಅತಿ ಗಹನತಯಾ ಶಾಸ್ತ್ರೀಯೇಣ ಕಾಪಟ್ಯೇನ ಹತೇ ಅತ ಏವ ಲೋಕೇ ವೇದವಿರೋಧಕೇ

"ಬೇಗ (ಸುಲಭವಾಗಿ) ತಿಳಿಯದ, ಬೇಗ (ಸುಲಭವಾಗಿ) ಅರ್ಥವಾಗದ ಶಾಸ್ತ್ರನಿರ್ಣಯದಿಂದ ಕೂಡಿರುವುದರಿಂದ ಲೋಕವಿರುದ್ಧವಾಗಿ ಕಾಣುವ ಈ ಧರ್ಮವನ್ನು ಕುರಿತು ಯಾರ ಅಭಿಪ್ರಾಯವು ಹೇಗಿದೆಯೋ ತಿಳಿಸಬೇಕು."

ಆಗ ದ್ರುಪದನೀಪರಿ ಪೇಳಿದ :

ಅಧರ್ಮೋಽಯಂ ಮಮ ಮತೋ ವಿರುದ್ಧೋ ಲೋಕವೇದಯೋಃ ।
ನ ಹ್ಯೇಕಾ ವಿದ್ಯತೇ ಪತ್ನೀ ಬಹೂನಾಂ ದ್ವಿಜಸತ್ತಮ ॥
ನ ಚಾಪ್ಯಾಚರಿತಃ ಪೂರ್ವೈಃ ಅಯಂ ಧರ್ಮೋ ಮಹಾತ್ಮಭಿಃ ।
ನ ಚಾಪ್ಯಧರ್ಮೋ ವಿದ್ವದ್ಭಿಶ್ಚರಿತವ್ಯಃ ಕಥಂಚನ ॥
ತತೋಽಹಂ ನ ಕರೋಮ್ಯೇನಂ ವ್ಯವಸಾಯಂ ಕ್ರಿಯಾಂ ಪ್ರತಿ ।
ಧರ್ಮಸ್ಸದೈವ ಸಂದಿಗ್ಧಃ ಪ್ರತಿಭಾತಿ ಹಿ ಮೇ ತ್ವಯಮ್ ॥

ಟೀ :– ಕ್ರಿಯಾಂ ಪ್ರತಿ=ವ್ಯವಸಾಯನಿಶ್ಚಯಾಂ

"ಮಹರ್ಷಿಗಳೇ! ಲೋಕವಿರುದ್ಧವಾದ ಇದನ್ನು ಎಲ್ಲಿಯೂ ಕಾಣೆವು. ಇದು ಅಧರ್ಮವೇ ಎಂದು ನನ್ನ ಮತ. ಹಲವರಿಗೊಬ್ಬಳು ಪತ್ನಿಯು ಇರುವುದೆಲ್ಲಿ? ಹಿಂದೆ ಯಾರೂ ಹೀಗೆ ಆಚರಿಸಿದ್ದಿಲ್ಲ. ಅಧರ್ಮಾಚರಣೆಯು ತಿಳಿದವರಿಗೆ ಲಕ್ಷಣವಲ್ಲ. ಈ ವಿವಾಹದ ಬಗೆಗೆ ನಾನು ಯಾವ ನಿಶ್ಚಯಕ್ಕೂ ಬರಲಾರೆ. ಇದು ನನಗೆ ಸಂದಿಗ್ಧವಾಗಿ ಕಾಣುತ್ತಿದೆ."

ಧೃಷ್ಟದ್ಯುಮ್ನನ ವಾಕ್ಯ :

ಯವೀಯಸಃ ಕಥಂ ಭಾರ್ಯಾಂ ಜ್ಯೇಷ್ಠೋ ಭ್ರಾತಾ ದ್ವಿಜರ್ಷಭ ।
ಬ್ರಹ್ಮನ್ ಸಮಭಿವರ್ತೇತ ಸವೃತ್ತಸ್ಸಂಸ್ತಪೋಧನ ॥

ನ ತು ಧರ್ಮಸ್ಯ ಸೂಕ್ಷ್ಮತ್ವಾದ್ಗತಿಂ ವಿದ್ಮಃ ಕಥಂಚನ ।
ಅಧರ್ಮೋ ಧರ್ಮ ಇತಿ ವಾ ವ್ಯವಸಾಯೋ ನ ಶಕ್ಯತೇ ॥

ಕರ್ತುಮಸ್ಮದ್ವಿಧೈಃ ಬ್ರಹ್ಮಂಸ್ತತೋಽಯಂ ನ ವ್ಯವಸ್ಯತೇ ।
ಪಂಚಾನಾಂ ಮಹಿಷೀ ಕೃಷ್ಣಾ ಭವತ್ವಿತಿ ಕಥಂಚನ ॥

"ಪೂಜ್ಯರೇ! ತಮ್ಮನ ಪತ್ನಿಯನ್ನು ಸಚ್ಚರಿತ್ರವಿರುವ ಜ್ಯೇಷ್ಠನು ಪತ್ನಿಯನ್ನಾಗಿ ಪರಿಗ್ರಹಿಸುವುದು ಹೇಗೆ? ಧರ್ಮವು ಸೂಕ್ಷ್ಮವಾದುದರಿಂದ ಅದನ್ನು ನಾವು ತಿಳಿಯಲಾರೆವು. ಧರ್ಮಾಧರ್ಮವಿಚಕ್ಷಣೆಯು ನಮ್ಮಂಥವರ ಶಕ್ತಿಗೆ ಮೀರಿದ್ದು. ಆದುದರಿಂದ ಪಾಂಡವರೈವರಿಗೆ ಈಗ ಪತ್ನಿಯಾಗುವುದು ನಮಗೆ ಸಮ್ಮತವಲ್ಲ."

ಅದಕ್ಕೆ ಯುಧಿಷ್ಠಿರನ ಉತ್ತರ :–

ನ ಮೇ ವಾಗನೃತಂ ಪ್ರಾಹ ನಾಽಧರ್ಮೇ ಧೀಯತೇ ಮತಿಃ ।
ವರ್ತತೇ ಹಿ ಮನೋ ಮೇಽತ್ರ ನೈಷೋಽಧರ್ಮಃ ಕಥಂಚನ ॥

ಟೀ : ನ ಮೇ ಇತಿ ವಕ್ತೃತ್ವಂ ವಾಚ ಏವ ಧರ್ಮೋ ನ ಪುರುಷಸ್ಯ ನಿರ್ವಿಶೇಷಸ್ಯ, ಅತ ಉಕ್ತಂ ನ ಮೇ ವಾಗಿತಿ. ಏವಂ ಮತಿಮನಸೋರಪಿ ಜ್ಞೇಯಂ ವಾಗಾದೀನಾಂ ವಕ್ತೃತ್ವಾದಿಧರ್ಮವತಾಮಸಂಗೇನ ಪುಂಸಾ ಸಂಬನ್ಧಸ್ತು ನ ವಾಸ್ತವಿಕಸ್ಸಂಭವತಿ ಅತ ಏವೋಕ್ತಮ್

ನಿಸ್ಸಂಗಸ್ಯ ಸಸಂಗೇನ ಕೂಟಸ್ಥಸ್ಯ ವಿಕಾರಿಣಾ ।
ಆತ್ಮನೋಽನಾತ್ಮನಾ ಯೋಗೋ ವಾಸ್ತವೋ ನೋಪಪದ್ಯತೇ ಇತಿ
ಅತ್ರ ಪಂಚಾನಾಮೇಕಪತ್ನೀತ್ವೇ
ಶ್ರೂಯತೇ ಹಿ ಪುರಾಣೇಽಪಿ ಜಟಿಲಾ ನಾಮ ಗೌತಮಮ್
ಋಷೀನಧ್ಯಾಸಿತವತೀ ಸಪ್ತ ಧರ್ಮಭೃತಾಂ ವರಾನ್
ತಥೈವ ಮುನಿಜಾ ವಾರ್ಕ್ಷೀ ತಪೋಭಿರ್ಭಾವಿತಾತ್ಮನಃ
ಸಂಗತಾಭೂದ್ದಶಭ್ರಾತೄನೇಕನಾಮ್ನಃ ಪ್ರಚೇತಸಃ
ಗುರೋರ್ಹಿ ವಚನಂ ಮಾತುರ್ಧರ್ಮ್ಯಂ ಧರ್ಮಜ್ಞಸತ್ತಮ
ಗುರೂಣಾಂ ಚೈವ ಸರ್ವೇಷಾಂ ಮಾತಾ ಪರಮಶೋ ಗುರುಃ–

ವಾಚಾಪ್ಯುಕ್ತವತೀ ವಾಚಂ ಭೈಕ್ಷ್ಯವದ್ಭುಜ್ಯತಾಮಿತಿ
ತಸ್ಮಾದೇತದಹಂ ಮನ್ಯೇ ಪರಂ ಧರ್ಮ್ಯಂ ದ್ವಿಜೋತ್ತಮ"

"ಮಹರ್ಷೇ! ನನ್ನ ವಾಕ್ಕು ಅನೃತವನ್ನಾಡಲರಿಯದು. ನನ್ನ ಬುದ್ಧಿಯು ಅಧರ್ಮದತ್ತ ಹೋಗದು. ಪಂಚಕಕ್ಕೆ ಏಕಪತ್ನೀತ್ವದ ಬಗೆಗೆ ನನ್ನ ಮನಸ್ಸು ಪ್ರವರ್ತಿಸುತ್ತಿದೆ. ಆದುದರಿಂದ ಇದು ಯಾವ ವಿಧದಲ್ಲೂ ಅಧರ್ಮವೆನಿಸದು.

ಇದು ಎಲ್ಲೂ ಇಲ್ಲದ ಆಚರಣೆಯೇನಲ್ಲ. ಮಹಾಧರ್ಮಾತ್ಮಳಾದ ಜಟಿಲೆ ಎಂಬ ಸ್ತ್ರೀ ಋಷಿಸಪ್ತಕಕ್ಕೆ ಪತ್ನಿಯಾದಳೆಂತಲೂ, ತಪಸ್ಸಂಪನ್ನರೂ, ಸೋದರರೂ, ಒಂದೇ ಹೆಸರಿನವರೂ ಆದ ಹತ್ತು ಮಂದಿ ಪ್ರಚೇತಸರಿಗೆ ಮುನಿಕನ್ಯೆಯಾದ ವಾರ್ಷ್ಣಿಯು ಪತ್ನಿಯಾದಳೆಂದು ಪುರಾಣಗಳು ಸಾರು ತ್ತಿವೆ.

ಗುರುಗಳಲ್ಲಿ ಪರಮಗುರು ಮಾತೆ. ಆಕೆಯ ವಾಕ್ಯ ಧರ್ಮಬದ್ಧ ವಾದದ್ದು. ಆಕೆಯೂ–'ನೀವು ಎಲ್ಲರೂ ಕಲೆತು ಅನುಭವಿಸಿ' ಎಂದಳು. ಈ ಎಲ್ಲ ಬಗೆಗಳಿಂದಲೂ ಇದು ಧರ್ಮವೆಂದೇ ನನ್ನ ಭಾವನೆ."

ಆಗ ಕುಂತಿಯು ಹೀಗೆ ಹೇಳಿದಳು :

ಏವಮೇತದ್ಯಥಾ ಪ್ರಾಹ ಧರ್ಮಚಾರೀ ಯುಧಿಷ್ಠಿರಃ ।
ಅನೃತಾನ್ಮೇ ಭಯಂ ತೀವ್ರಂ ಮುಚ್ಯೇಹಮನೃತಾತ್ಕಥಮ್ ॥

"ಮಹರ್ಷಿಗಳೇ! ಯುಧಿಷ್ಠಿರನು ಹೇಳಿದಂತೆ ನನ್ನ ಬಾಯಿಂದ ಈ ಮಾತು ಹೊರಟದ್ದು ನಿಜವೇ. ನನಗೆ ಅನೃತವನ್ನಾಡಿದ ಭಯವು ಅಧಿಕ ವಾಗಿದೆ. ಅನೃತದಿಂದ ನಾನು ಹೇಗೆ ವಿಮುಕ್ತಳಾಗುವೆನೋ?"

ವ್ಯಾಸಭಗವಾನರಿಂತೆಂದರು :

"ಅನೃತಾನ್ಮೋಕ್ಷ್ಯಸೇ ಭದ್ರೇ ಧರ್ಮಶ್ಚೈಷಸ್ಸನಾತನಃ
ನನು ವಕ್ಷ್ಯಾಮಿ ಸರ್ವೇಷಾಂ, ಪಾಂಚಾಲಿ ಶೃಣು ಮೇ ಸ್ವಯಂ,
ಯಥಾಽಯಂ ವಿಹಿತೋ ಧರ್ಮೋ ಯತಶ್ಚಾಯಂ ಸನಾತನಃ
ಯಥಾ ಚ ಪ್ರಾಹ ಕೌನ್ತೇಯಸ್ತಥಾ ಧರ್ಮೋ ನ ಸಂಶಯಃ"

"ಕುಂತೀದೇವಿಯೇ! ನಿನಗೆ ಅನೃತದ ಭಯಬೇಡ. ಇದು ಸನಾತನ ಧರ್ಮ. ದ್ರುಪದಮಹಾರಾಜನೇ! ಧರ್ಮಜನು ಹೇಳಿದಂತೆ ಇದು ಧರ್ಮವೇ. ಸಂಶಯವಿಲ್ಲ. ಈ ಧರ್ಮವು ಹೇಗೆ ವಿಹಿತವಾದುದ್ದೋ, ಹೇಗೆ ಸನಾತನವಾದದ್ದೋ ಎಲ್ಲರಿಗೂ ಹೇಳುತ್ತೇನೆ ಕೇಳಿರಿ.

"ತತ ಉತ್ಥಾಯ ಭಗವಾನ್ ವ್ಯಾಸೋ ದ್ವೈಪಾಯನಃ ಪ್ರಭುಃ
ಕರೇ ಗೃಹೀತ್ವಾ ರಾಜಾನಂ ರಾಜವೇಶ್ಮ ಸಮಾವಿಶತ್
ಪಾಂಡವಾಶ್ಚಾಪಿ ಕುಂತೀ ಚ ಧೃಷ್ಟದ್ಯುಮ್ನಶ್ಚ ಪಾರ್ಷತಃ
ವಿವಿಶುರ್ಯತ್ರ ತತ್ರೈವ ಪ್ರತೀಕ್ಷನ್ತೇ ಸ್ಮ ತಾ ಉಭೌ"

ಟೀ : ರಾಜಾನಂ ದ್ರುಪದಂ, ಉಭೌ ವ್ಯಾಸದ್ರುಪದೌ, ತತೋ ದ್ವೈಪಾಯನಸ್ತಸ್ಮೈ ನರೇಂದ್ರಾಯ ಮಹಾತ್ಮನೇ ।
ಆಚಖ್ಯೌ ತದ್ಯಥಾ ಧರ್ಮೋ ಬಹೂನಾಮೇಕಪತ್ನಿತಾ ॥

ಟೀ : ಅತ್ರ "ಯತ್ತದ್ದೇವಾ ದದುರಿತ್ಯಾದಿನಾ ತ್ರಿಪಥಗಾಂ ನದೀಂ" ಇತ್ಯನ್ತೋ ನಾರಾಯಣ್ಯುಪಾಖ್ಯಾನಗ್ರಂಥೋಽಧ್ಯಾಯದ್ವಯಾತ್ಮಕಃ ಕ್ವಚಿತ್ಪುಸ್ತಕೇ ಪಠ್ಯತೇ.

ಹೀಗೆ ಹೇಳಿ ವೇದವ್ಯಾಸಭಗವಾನರು ಎದ್ದು ದ್ರುಪದನ ಕೈಹಿಡಿದು ಮನೆಯೊಳಕ್ಕೆ ಕರೆದೊಯ್ದರು. ಪಾಂಡವರು, ಕುಂತೀ, ಧೃಷ್ಟದ್ಯುಮ್ನರು ವ್ಯಾಸ-ದ್ರುಪದರ ಅಭಿಪ್ರಾಯವನ್ನು ನಿರೀಕ್ಷಿಸುತ್ತಿದ್ದರು. ಅನಂತರ ವ್ಯಾಸರು ಪಾಂಡವರಿಗೆ ಏಕಪತ್ನೀತ್ವವು ಧರ್ಮವೆಂಬ ಅಂಶವನ್ನು ಕುರಿತು ದ್ರುಪದನಿಗೆ ಹೀಗೆ ಹೇಳಲಾರಂಭಿಸಿದರು.

ನಾವು ಹಿಂದೆ ಹೇಳಿದ ನಾಳಾಯಣಿಯ ಕಥೆ ಬರುವುದು ಇಲ್ಲಿಯೇ.

ಅನಂತರ ದ್ರುಪದನಿಗೆ ವೇದವ್ಯಾಸರು ಪಂಚೇಂದ್ರೋಪಾಖ್ಯಾನವನ್ನು ವಿವರಿಸಿ ಆತನನ್ನು ಒಪ್ಪಿಸಿದರು.

ಇನ್ನು ದ್ರೌಪದಿಯ ವಿವಾಹವನ್ನು ಕುರಿತ ಪ್ರತಿವಾದಿಗಳ ಪ್ರಸಂಗವನ್ನು ಪರಾಮರ್ಶಿಸೋಣ.

–ದ್ರೌಪದಿಯ ವಿವಾಹವು "ಧರ್ಮಶಾಸ್ತ್ರಾನುಮತವಲ್ಲ"–ಎಂಬ ಸುಯೋಧನವಿಜಯಕರ್ತೃಪ್ರಸಂಗ, ತನ್ನಿರಾಕರಣ :

"ಯಾವ ಧರ್ಮಶಾಸ್ತ್ರಗಳೂ ಈ ತರುಣಿಯ ವಿವಾಹಕ್ಕೆ ಅನುಮತಿ ಸಲಾರವು. ಈ ಮಾತು ನಿಜ. ಯಾವ ದೇಶದಲ್ಲೇ ಆಗಲಿ ಇಂತಹ ಆಚಾರ ವಿದೆಯೆಂದು ಯಾರೂ ಹೇಳಲಾರರು. ಇದು ಶಾಸ್ತ್ರದೂಷ್ಯವಾದುದರಿಂದ ಇದನ್ನು ಕುರಿತು ಸ್ಮೃತಿ-ಶ್ರುತಿಗಳು ಹೇಳಲಿಲ್ಲ."

ಇಲ್ಲಿ ಸ್ವಲ್ಪ ವಿವರಣೆ ಅಗತ್ಯ. ದ್ರೌಪದೀ–ಪಾಂಡವರಿಗೆ ಮಾತ್ರವೇ ಪ್ರತ್ಯೇಕವಿಧಾನವಾಗಿ ಈ ವಿವಾಹವು ಈಶ್ವರನಿರ್ದಿಷ್ಟವಾಯಿತು. ಸರ್ವ ಸಾಧಾರಣವಿಧಿಯನ್ನು ಜನಸಾಮಾನ್ಯರಿಗೆ ಧರ್ಮಶಾಸ್ತ್ರಗಳು ಬೋಧಿಸುತ್ತವೆ. ಅಂತಹ ಧರ್ಮಶಾಸ್ತ್ರಗಳು ಸರ್ವಸಾಧಾರಣಹೇತುವಲ್ಲದ ಕಾರಣ ಅಂತಹ ವಿವಾಹವನ್ನು ಒಪ್ಪದಿರಬಹುದು. ಅಷ್ಟುಮಾತ್ರಕ್ಕೆ ಈಶ್ವರನಿರ್ದಿಷ್ಟ ವಿವಾಹವು ದೂಷ್ಯವೆನ್ನುವುದು ಅಯುಕ್ತ.

ಇನ್ನೊಂದು : ಪೂರ್ವೋಕ್ತಪ್ರಕಾರ–"**ಅಧರ್ಮೋಽಯಂ ಮಮ ಮತೋ ವಿರುದ್ಧೋ ಲೋಕವೇದಯೋಃ**" ಎಂದು ದ್ರುಪದನು ಮೊದಲು ಹೇಳಿದ ಮಾತನ್ನೇ ಈ ಪ್ರತಿವಾದಿಗಳು ಹೇಳಿದ್ದಾರೆ. ಆಮೇಲೆ ಬಂದ ಚರ್ಚೆಯ ಆಧಾರದ ಮೇಲೆ ದ್ರುಪದನೇ ಸಂಶಯರಹಿತನಾಗಿ ಈ ವಿವಾಹ ವನ್ನು ನಡೆಸಿಕೊಟ್ಟಿರುವಾಗ ಯಾವ ಸಂಬಂಧವೂ ಇಲ್ಲದ ಈ ಪ್ರತಿವಾದಿ ಗಳು ಅದನ್ನು ಅಧರ್ಮವೆಂದು ಟೀಕಿಸುವುದು ಅಸಂಗತ.

ಧರ್ಮಶಾಸ್ತ್ರಗಳು ಒಪ್ಪವೆಂಬುದು ಪ್ರತಿವಾದಿಗಳ ಮತ್ತೊಂದು ವಾದ. ಇದರಂತೆ ಧರ್ಮಶಾಸ್ತ್ರಗಳಲ್ಲಿ ಪ್ರಾಮಾಣ್ಯವನ್ನು ಪ್ರತಿವಾದಿಗಳು ಅಂಗೀಕರಿಸಿ ದಂತೆಯೇ ಧರ್ಮಶಾಸ್ತ್ರಗಳಿಗೆ ಅಂತಹ ಪ್ರಾಮಾಣ್ಯವು ಧರ್ಮಶಾಸ್ತ್ರಕರ್ತರ ಪ್ರಾಮಾಣ್ಯವನ್ನು ಅನುಸರಿಸಿ ಬಂದದ್ದೇ. ಅಂತಹ ಧರ್ಮಶಾಸ್ತ್ರಕರ್ತರು ಹೀಗೆ ಹೊಗಳಲ್ಪಟ್ಟಿದ್ದಾರೆ.

"ಮನ್ವತ್ರಿವಿಷ್ಣುಹಾರೀತಯಾಜ್ಞವಲ್ಕ್ಯೋಶನೋಽಂಗಿರಾಃ
ಯಮಾಪಸ್ತಂಬಸಂವರ್ತಾಃ ಕಾತ್ಯಾಯನಬೃಹಸ್ಪತೀ,

ಪರಾಶರವ್ಯಾಸಶಂಖಲಿಖಿತಾ ದಕ್ಷಗೌತಮೌ
ಶಾತಾತಪೋ ವಸಿಷ್ಠಶ್ಚ ಧರ್ಮಶಾಸ್ತ್ರಪ್ರಯೋಜಕಾಃ

ಈ ಧರ್ಮಶಾಸ್ತ್ರಕಾರರಲ್ಲಿ ಹೊಗಳಲ್ಪಟ್ಟವರಲ್ಲಿ ವ್ಯಾಸರೂ ಸೇರಿದ್ದಾರೆ. ಆ ಮಹರ್ಷಿಗಳು ದ್ರುಪದನಿಗೆ ಬೋಧಿಸುವಾಗ

"ತತೋ ದ್ವೈಪಾಯನಸ್ತಸ್ಮೈ ನರೇಂದ್ರಾಯ ಮಹಾತ್ಮನೇ,
ಆಚಖ್ಯೌ ತದ್ಯಥಾ ಧರ್ಮೋ ಬಹೂನಾಮೇಕಪತ್ನಿತಾ"

ಎಂದಂತೆ ಅನೇಕನಿದರ್ಶನಗಳಿಂದ ಅದು ಧರ್ಮವೇ ಎಂದು ನಿರೂಪಿಸಿ ಆ ವಿವಾಹಕ್ಕೆ ಅನುಮತಿಕೊಟ್ಟಿರುವುದರಿಂದ ಧರ್ಮಶಾಸ್ತ್ರಕಾರರಿಗೆ ಒಪ್ಪಿಗೆಯಾದ ಈ ವಿವಾಹವು ಧರ್ಮಶಾಸ್ತ್ರಾನುಮತವೇಕಾಗದು? ಧರ್ಮಶಾಸ್ತ್ರಕಾರರ ಮಾತುಗಳೇ ಧರ್ಮಶಾಸ್ತ್ರಗಳಲ್ಲವೇ?

ಮತ್ತೆ–ಧರ್ಮದಲ್ಲಿ ಸ್ಥೂಲ, ಸೂಕ್ಷ್ಮ ಎಂದು ಎರಡು ಬಗೆಗಳುಂಟು. ಅದರಲ್ಲಿ ಸ್ಥೂಲಧರ್ಮವು ಲೋಕಸಾಮಾನ್ಯರಿಗೆ ಗ್ರಾಹ್ಯವಾಗಬಹುದು. ಆದರೆ ಸೂಕ್ಷ್ಮಧರ್ಮವು ಹಾಗಲ್ಲ. ಅಂತಹ ಸೂಕ್ಷ್ಮಧರ್ಮಗಳಲ್ಲಿ ದ್ರೌಪದೀ ವಿವಾಹವೂ ಒಂದು. ನೋಡಿ.

ಪರಾಶರಮಾಧವೀಯ :

"ಚತುರ್ಣಾಮಪಿ ವರ್ಣಾನಾಂ ಕರ್ತವ್ಯಂ ಧರ್ಮಕೋವಿದೈಃ
ಬ್ರೂಹಿ ಧರ್ಮಸ್ವರೂಪಜ್ಞ ಸೂಕ್ಷ್ಮಂ ಸ್ಥೂಲಂ ಚ ವಿಸ್ತರಾತ್"

ವ್ಯಾಖ್ಯಾ :

ಚತುರ್ಣಾಂ ವರ್ಣಾನಾಂ ಮಧ್ಯೇ ಧರ್ಮಕೋವಿದೈರಸಾಧಾರಣಧರ್ಮಾಭಿಜ್ಞೈಃ ಕರ್ತವ್ಯಂ ವಿಸ್ತರಾತ್ ಬ್ರೂಹಿ. ಸ ಚ ಕರ್ತವ್ಯೋ ಧರ್ಮೋ ದ್ವಿವಿಧಃ ಸ್ಥೂಲಃ, ಸೂಕ್ಷ್ಮಶ್ಚ, ಮಂದಮತಿಭಿರಪಿ ಸುಖೇನ ಬುಧ್ಯಮಾನಶೌಚಾಽಽಚಮನಸಂಧ್ಯಾವಂದನಾದಿಃ ಸ್ಥೂಲೋ ಧರ್ಮಃ. ಶಾಸ್ತ್ರಪಾರಂಗತೈಃ ಪಂಡಿತೈರೇವ ಬೋದ್ಧುಂ ಯೋಗ್ಯಃ. ಇತರೇಷಾಮಧರ್ಮತ್ವಭ್ರಾಂತಿವಿಷಯಃ ದ್ರೌಪದೀ ವಿವಾಹಾದಿಸ್ಸೂಕ್ಷ್ಮೋ ಧರ್ಮಃ ತಥಾ ಚ ಭಾರತೇ"

ದ್ರುಪದ ಏಕಸ್ಯಾ ಯೋಷಿತೋ ಬಹುಪತಿತ್ವಂ ಲೋಕವೇದ ವಿರುದ್ಧಂ ಮನ್ವಾನ ಆಚಚಕ್ಷೇ. ತತ್ರ ಲೋಕವಿರೋಧಸ್ಸ್ಫುಟ ಏವ. ತಿರ್ಯಕ್ಷ್ವಪ್ಯೇಕಸ್ಯಾಂ ಗವಿ ವೃಷಭದ್ವಯಯುದ್ಧದರ್ಶನಾತ್. ವೇದೇಽ

ಪ್ಯೇವಂ ಶ್ರೂಯತೇ "ಏಕಸ್ಯ ಬಹ್ವ್ಯೋ ಜಾಯಾ ಭವನ್ತಿ ನೈಕಸ್ಯಾ ಬಹವಸ್ಸಹಪತಯಃ ಇತಿ, ಯದೇಕಸ್ಮಿನ್ ಯೂಪೇ ದ್ವೇ ರಶನೇ ಪರಿವ್ಯಯತಿ ತಸ್ಮಾದೇಕೋ ದ್ವೇ ಭಾರ್ಯೇ ವಿನ್ದತೇ ಯನ್ನೈಕಾಗ್ಂ ರಶನಾಂ ದ್ವಯೋರ್ಯೂಪಯೋಃ ಪರ್ಯವಯತಿ ತಸ್ಮಾನ್ನೈಕಾ ದ್ವೌ ಪತೀ ವಿಂದತೇ" ಇತಿ. ತತ್ರ ದ್ರುಪದಭ್ರಾನ್ತಿನಿವೃತ್ತಯೇ ಯುಧಿಷ್ಠಿರ ಆಹ:

"ಲೋಕವಿರುದ್ಧೋಽಯಂ ಧರ್ಮೋ ಧರ್ಮವತಾಂ ವರ
ಸೂಕ್ಷ್ಮೋ ಧರ್ಮೋ ಮಹಾರಾಜ ನಾಸ್ಯ ವಿದ್ಮೋ ಗತಿಂ ವಯಂ"
ಇತಿ ಧರ್ಮತ್ವಂ ಚ ಬಹುಪತಿತ್ವಸ್ಯ ತತ್ರೈವ ಬಹುಧಾ ಪ್ರಪಂಚಿತಂ.

"ಏವಂ ಧರ್ಮವ್ಯಾಧೋಪಾಖ್ಯಾನೇ ವಿದ್ಯಾಭ್ಯಾಸಾದ್ಗರೀಯಸೀ ಮಾತಾಪಿತೃಶುಶ್ರೂಷಾ ವಿನಾಪ್ಯಭ್ಯಾಸಂ ತಚ್ಛುಶ್ರೂಷಯೈವ ತಸ್ಯ ಜ್ಞಾನೋತ್ಪತ್ತೇಃ ಇತಿ ಪ್ರತಿಪಾದ್ಯ "ಸೂಕ್ಷ್ಮ ಏವ ದ್ವಿಜೋತ್ತಮ" ಇತಿ.

ಇದರ ತಾತ್ಪರ್ಯ : ಮಂದಮತಿಗಳಿಗೂ ಸುಲಭವಾಗಿ ತಿಳಿಯು ವುದು ಸ್ಥೂಲಧರ್ಮ. ಶಾಸ್ತ್ರಪಾರಂಗತರಾದ ಪಂಡಿತರಿಗೆ ಮಾತ್ರವೇ ತಿಳಿಯುವುದು, ಅನ್ಯರಿಗೆ ಅಧರ್ಮಭ್ರಾಂತಿಯನ್ನು ಕಲ್ಪಿಸುವ ದ್ರೌಪದೀ ವಿವಾಹ ಇತ್ಯಾದಿ ಸೂಕ್ಷ್ಮಧರ್ಮ. ಆದುದರಿಂದಲೇ ಮೊದಲು ದ್ರುಪದನಿಗೆ ಆ ವಿವಾಹವು ಅಧರ್ಮವಾಗಿ ತೋರಿತು. ಅದು ಧರ್ಮವೇ ಎಂದು ಭಾರತದಲ್ಲಿ ಹಲವು ರೀತಿಗಳಲ್ಲಿ ಪ್ರತಿಪಾದಿತವಾಗಿದೆ. ಆದುದರಿಂದ ಅದು ಸೂಕ್ಷ್ಮಧರ್ಮವಾಯಿತು. ಇಂತಹ ಸಮಸ್ಯೆಗಳನ್ನೇ ಧರ್ಮಸೂಕ್ಷ್ಮವೆನ್ನುತ್ತಾರೆ.

ಧರ್ಮವ್ಯಾಧೋಪಾಖ್ಯಾನದಲ್ಲಿಯೂ ವಿದ್ಯಾಭ್ಯಾಸವನ್ನರಿಯದ ಧರ್ಮವ್ಯಾಧನಿಗೆ ಮಾತಾ-ಪಿತೃಶುಶ್ರೂಷೆಯಿಂದಲೇ ಜ್ಞಾನೋತ್ಪತ್ತಿ ಯುಂಟಾಯಿತು. ಆದುದರಿಂದ ವಿದ್ಯಾಭ್ಯಾಸಕ್ಕಿಂತಲೂ ಮಾತಾ-ಪಿತೃ ಶುಶ್ರೂಷೆಯೇ ಜ್ಞಾನೋತ್ಪತ್ತಿಗೆ ಪ್ರಬಲಸಾಧನವೆಂದು ಪ್ರತಿಪಾದಿಸಿ ಅದು ಸೂಕ್ಷ್ಮಧರ್ಮವೆಂದರು.

ಈಗ ನೋಡಿ : ವಿದ್ಯಾಭ್ಯಾಸವೇ ಜ್ಞಾನೋತ್ಪತ್ತಿಗೆ ಸಾಧನವೆಂದು ಜನಸಾಮಾನ್ಯಕ್ಕೆ ತಿಳಿದಿರುತ್ತೆ. ಲೋಗರಿಗೆ ತಿಳಿಯದ ಕೇವಲ ಮಾತಾ-ಪಿತೃಶುಶ್ರೂಷೆಯೇ ಧರ್ಮವ್ಯಾಧನಿಗೆ ಜ್ಞಾನೋತ್ಪಾದಕವಾದುದರಿಂದ ಅದು ಸೂಕ್ಷ್ಮಧರ್ಮವಾದಂತೆ ಸ್ತ್ರೀಯರಿಗೆ ಏಕಪತಿತ್ವವೇ ಧರ್ಮವೆಂದು ಜನಸಾಮಾನ್ಯಕ್ಕೆ ತಿಳಿದಿರುವಾಗ ದ್ರೌಪದಿಗೆ ಲೋಕಸಾಮಾನ್ಯರಿಗೆ ತಿಳಿಯದ ಪಂಚಪತಿತ್ವಧರ್ಮವನ್ನು ವ್ಯಾಸಭಗವಾನರು ನಿರೂಪಿಸಿದುದರಿಂದ ಅದು ಸೂಕ್ಷ್ಮಧರ್ಮವಾಯಿತು.

ಪರ್ಯವಸಾನವೇನೆಂದರೆ :

ವೇದವ್ಯಾಸಾದಿಗಳಿಂದ ಧರ್ಮವಾಗಿ ನಿರ್ಣಯಿಸಲ್ಪಟ್ಟ ದ್ರೌಪದೀ ಪಂಚಪತಿತ್ವವನ್ನು ಪ್ರತಿವಾದಿಗಳು ಅಧರ್ಮ ಅಧರ್ಮ ಎಂದು ಸಾರುವುದು ಆ ದ್ರೌಪದೀಪಂಚಪತಿತ್ವವು ಸೂಕ್ಷ್ಮಧರ್ಮವೆಂದು ನಿರ್ಣಯಿಸುವುದಕ್ಕೇ ಪ್ರೋದ್ಬಲವಾಗಿ ಪರಿಣಮಿಸಿತು. ಆದುದರಿಂದ ಪ್ರತಿವಾದಿಗಳ ವಿರುದ್ಧ ಪ್ರಸಂಗಗಳು ಪರಾಸ್ತವಾದುವು.

ಕೌರವಸಭೆಯಲ್ಲಿ ಕರ್ಣನ ಪಾತ್ರ

ಪಾಂಚಾಲೀಪರಿಭವವು ಅಧರ್ಮವೆಂದು ಧೈರ್ಯವಾಗಿ ವಿಮರ್ಶಿಸಿದ ವಿಕರ್ಣನ ಮಾತುಗಳನ್ನು ಕೇಳಿ ಕರ್ಣನು ಮಾಡಿದ ಪ್ರತಿವಿಮರ್ಶೆ ಇದು.

"ಓ ವಿಕರ್ಣ! ನಿನ್ನ ಧೋರಣೆ ಹಿತವಲ್ಲ. ಅರಣಿಯಲ್ಲಿ ಹುಟ್ಟಿದ ಬೆಂಕಿಯಂತೆ ನೀನು ಹುಟ್ಟಿದ ಸ್ಥಳವನ್ನು ನಾಶಪಡಿಸುವವನೇ ಆಗಿದ್ದೀಯೆ. ದ್ರೌಪದಿಯ ಪ್ರಶ್ನೆಗಳಿಗೆ ಇವರಾರಾದರೂ ಪ್ರತ್ಯುತ್ತರ ಹೇಳಿದರೇನು? ಈಕೆ ಧರ್ಮಾತ್ಮಳೆಂದೇ ಇವರೆಲ್ಲರೂ ತಿಳಿದಿದ್ದಾರೆ. ಏನೂ ಅರಿಯದ ನೀನು ದೊಡ್ಡ ದೊಡ್ಡ ಮಾತುಗಳನ್ನಾಡುತ್ತಿರುವೆ. ದುರ್ಯೋಧನನ ಸೋದರನೇ! ನೀನು ಧರ್ಮವನ್ನರಿಯೆ. ಇಲ್ಲವಾದರೆ ಜಿತಳಾದ ದ್ರೌಪದಿಯನ್ನು ಜಿತಳಲ್ಲ ವೆಂದು, ಮಂದಮತಿಯೇ! ನೀನು ಹೇಗೆ ನುಡಿಯಬಲ್ಲೆ? ಧೃತರಾಷ್ಟ್ರ ಪುತ್ರನೇ! ದ್ರೌಪದಿಯು ಜಿತಳಲ್ಲವೆಂದು ನೀನು ಹೇಗೆ ತಿಳಿದುಕೊಂಡೆ? ಸಭೆಯಲ್ಲಿ ಧರ್ಮನಂದನನು ಎಲ್ಲವನ್ನೂ, ತನ್ನ ಸರ್ವಸ್ವವನ್ನೂ ಪಣ

ವಾಗಿಟ್ಟನು. ಅದರಲ್ಲಿ ದ್ರೌಪದಿಯೂ ಸೇರಲಿಲ್ಲವೇ? ಹೀಗೆ ಧರ್ಮಜಿತಳಾದ ದ್ರೌಪದಿಯನ್ನು ದಾಸಿಯಲ್ಲವೆಂದು ನೀನು ಹೇಗೆ ನಿಶ್ಚಯಿಸಿದೆ?

ಸಭೆಗೆ ಏಕವಸ್ತ್ರಳನ್ನು ಎಳೆತರುವುದು, ಅಧರ್ಮವೆಂದು ಭಾವಿಸಿದೆಯಾ? ಆ ವಿಷಯವನ್ನು ವಿವರವಾಗಿ ಹೇಳುತ್ತೇನೆ, ಕೇಳು. ಹೆಣ್ಣಿಗೆ ಒಬ್ಬನೇ ಪತಿಯೆಂದು ದೇವತೆಗಳು ನಿಯಮವನ್ನು ವಿಧಿಸಿದರು. ಈಕೆ ಅನೇಕರ ವಶಳಾದಳು. ಆದುದರಿಂದ ಇವಳು ಬಂಧಕೀ ಎಂಬ ಮಾತು ಸತ್ಯ. ಇಂಥವಳನ್ನು ಸಭೆಗೆಳೆತರುವುದು, ಏಕವಸ್ತ್ರಳಾದರೂ–ಕೊನೆಗೆ ವಿವಸ್ತ್ರಳಾದರೂ ಸರಿಯೆ. ಅದು ವಿಚಿತ್ರವಲ್ಲ; ಇದು ನನ್ನ ನಿಶ್ಚಯ. ಪಾಂಡವರ ಸೊತ್ತಲ್ಲವೇ ದ್ರೌಪದಿ? ಶಕುನಿಯು ಅವಳನ್ನು ಗೆದ್ದ–ಎಂದು ಕರ್ಣನು ಉಪನ್ಯಾಸಮಾಡಿ ವಿಕರ್ಣನನ್ನು ಹೀಯಾಳಿಸಿ ದುಶ್ಶಾಸನನನ್ನು ಕುರಿತು ಹೀಗೆಂದನು.

ದುಶ್ಶಾಸನ ಸುಬಾಲೋಽಯಂ ವಿಕರ್ಣಃ ಪ್ರಾಜ್ಞವಾದಿಕಃ ।
ಪಾಂಡವಾನಾಂ ಚ ವಾಸಾಂಸಿ ದ್ರೌಪದ್ಯಾಶ್ಚಾಪ್ಯುಪಾಹರ ॥

"ಎಲೈ ದುಶ್ಶಾಸನ! ಪ್ರಾಜ್ಞತ್ವಾಭಿಮಾನವುಳ್ಳ ಈ ವಿಕರ್ಣನು ತಿಳಿ ಗೇಡಿ. ನೀನು ಪಾಂಡವರ ಮತ್ತು ದ್ರೌಪದಿಯ ವಸ್ತ್ರಾಪಹರಣವನ್ನು ಮಾಡು." ಹೀಗೆ ಪ್ರಲಾಪಿಸಿ ವಸ್ತ್ರಾಪಹರಣಕ್ಕೆ ಪ್ರೋತ್ಸಾಹ ನೀಡಿದ ಕರ್ಣನ ಅವಿನೀತಿಯನ್ನು ಕರ್ಣಸ್ತುತಿಪರಾಯಣರಾದ ಪ್ರತಿವಾದಿಗಳೆಲ್ಲರೂ ನೆನಪಿಡ ಬೇಕು.

ದ್ರೌಪದಿಯ ಉಟ್ಟಬಟ್ಟೆಯನ್ನು ಸೆಳೆಯಲು ದುಶ್ಶಾಸನನನ್ನು ನಿಯೋಜಿಸಿದವನು ಕರ್ಣ. ಆದರೆ ಕರ್ಣಾಭಿಮಾನಿಗಳಾದ ಕರ್ಣಚರಿತ್ರಕಾರರು– "ದುರ್ಯೋಧನನು ಆಕೆ ಉಟ್ಟಬಟ್ಟೆಯನ್ನು ಎಳೆಯಲು ದುಶ್ಶಾಸನನಿಗೆ ಆಜ್ಞೆ ನೀಡಿ" (ಪು.43) ಎಂದು ಬರೆಯುವುದು ಹೇಯವಲ್ಲವೇ?

ವಿಕರ್ಣನ ಮಾತುಗಳಿಗೆ ಒರಟಾಗಿ ಉತ್ತರ ಹೇಳಿದ ಕರ್ಣನ ಮಾತುಗಳನ್ನು ಅಭಿನಂದಿಸುತ್ತಾ ಬರೆದ ಪ್ರತಿವಾದಿಗಳ ಪ್ರಸಂಗ–ತನ್ನಿರಾಕರಣ.

ಸುಯೋಧನವಿಜಯ : ಮೊದಲ ಮಾತು–"ಕರ್ಣನು ಹೀಗೆ

ಉತ್ತರ ಕೊಟ್ಟ. ಧರ್ಮಜನು ತನ್ನ ಸರ್ವಸ್ವವನ್ನೂ ಪಣವಾಗಿ ಒಡ್ಡಿ ಸೋತನೆಂದರೆ ಇವಳು ಅದಕ್ಕೆ ಹೊರತಲ್ಲ. ಆದುದರಿಂದ ಅವಳು ಧರ್ಮಮಾರ್ಗದಲ್ಲಿ ಗೆಲ್ಲಲ್ಪಟ್ಟವಳು. ಹಾಗಲ್ಲದಿದ್ದರೆ ಪಾಂಡವರೆಲ್ಲರೂ ಅವಳು ತಮ್ಮಿಂದ ಸೋಲಲ್ಪಟ್ಟವಳು ಎಂದು ಒಪ್ಪಿದುದು ಹೇಗೆ? ಆ ವಿಕರ್ಣನ ಧರ್ಮನಿರ್ಣಯಕ್ಕೂ ಈ ಕರ್ಣನ ಮಾತುಗಳಿಗೂ ಯಾವ ಬಗೆಯಲ್ಲೂ ಸಂಬಂಧವಿಲ್ಲ. ವಿಕರ್ಣನ ನಿರ್ಣಯ ಹೀಗಿದೆ : "ಜೂಜಿಗೆ ಆಹ್ವಾನಿಸಲ್ಪಟ್ಟು ವ್ಯಸನವರ್ತಿಯಾಗಿ ಪರಾಜಿತನಾದ ಪಾಂಡವಾಗ್ರಜನು ಪಾಂಡವರೆಲ್ಲರಿಗೂ ಅನ್ವಯಿಸುವಂತೆ ಪಾಂಚಾಲಿಯನ್ನು ಜೂಜಿನಲ್ಲಿ ಪಣವಾಗಿ ಒಡ್ಡಿದ. ಆದುದರಿಂದ ದ್ರೌಪದಿಯು ಅಧರ್ಮದಿಂದ ವಿಜಿತೆ. ಆ ಕೋಮಲೆಯನ್ನು ಅದರಲ್ಲೂ ಏಕವಸ್ತ್ರಳನ್ನು ಇಲ್ಲಿಗೆ ಕರೆತಂದುದು ಅನ್ಯಾಯ" (ಆಂಧ್ರ ಭಾರತ)

ದ್ರೌಪದಿಯನ್ನು ಪಣವನ್ನಾಗಿಟ್ಟ ಧರ್ಮಜನು ವ್ಯಸನವರ್ತಿಯು, ಪರಪ್ರೇರಿತನಾದವನು : ಪರಾಜಿತನಾದವನು. ದ್ರೌಪದಿಯು ಎಲ್ಲ ಪಾಂಡವರ ಸೊತ್ತು. ಈ ಕಾರಣಗಳಿಂದ ಆ ಪಂದ್ಯ ಸಲ್ಲದು. ಅದು ವಿಕರ್ಣನ ನಿರ್ಣಯ. ಈ ಕಾರಣಗಳು ಗ್ರಾಹ್ಯವಲ್ಲವೆಂದು ನಿರೂಪಿಸಬೇಕಾಗಿದ್ದ ಕರ್ಣನು ಆ ಕೆಲಸವನ್ನು ಮಾಡಲಾರದೇ ಹೋದ. ಅವನು ಮಾಡಿದು ದೇನು? "ಧರ್ಮರಾಯ ತನ್ನ ಸರ್ವಸ್ವವನ್ನೂ ಸೋತಾಗ ದ್ರೌಪದಿಯು ಅದರಲ್ಲಿ ಸೇರದಿರುವುದು ಹೇಗೆ?" ಎಂದ.

ಕರ್ಣನ ಮಾತು ವಿಕರ್ಣನೆಂದಂತೆ ಧರ್ಮಜನು ವ್ಯಸನವರ್ತಿ ಅಲ್ಲವೆಂಬುದಕ್ಕೆ ಉಪಯೋಗವಾಗುತ್ತದೆಯೇ? ಪರಪ್ರೇರಿತನಲ್ಲವೆಂದು ತೀರ್ಮಾನಿಸಲು ಬರುತ್ತದೆಯೇ? ಪರಾಜಿತವಾಗಲಿಲ್ಲವೆನ್ನಲು ನೆರವಾಗುವುದೇ? ದ್ರೌಪದಿಯು ಎಲ್ಲ ಪಾಂಡವರ ಸೊತ್ತಲ್ಲವೆಂದು ನಿರೂಪಿಸುವುದಕ್ಕೆ ಒದಗಿಬರುವುದೇ? ಇಲ್ಲ. ಅಂದಮೇಲೆ ಅರ್ಥವಿಲ್ಲದ ವ್ಯರ್ಥಪ್ರಲಾಪದಿಂದ ಪ್ರತಿವಾದಿಗಳಿಗೆ ಆಗುವ ಪ್ರಯೋಜನವಾದರೂ ಏನು?

ಇನ್ನು ' ಪಾಂಡವರೆಲ್ಲರೂ ಆಕೆ ವಿಜಿತಳೆಂದು ಹೇಗೆ ಒಪ್ಪಿದರು?' ಎಂಬ ವಾದ. ಇದೆಂತಹ ಕುವಾದ? ಪರಾಜಿತರು ಪರಪ್ರೇರಿತರು. ಆದುದರಿಂದ ಏನು ಹೇಳುವುದಕ್ಕೂ ಆಗದೇ ಮೌನಧರಿಸಿದರೇ? ಗೆಲ್ಲಲ್ಪಟ್ಟವಳೆಂದು ಸಮ್ಮತಿಸಿದರೇ? ಅಲ್ಲದೆ ಕರ್ಣನ ಮಾತಿನಂತೆ ತನ್ನ ಸರ್ವಸ್ವ

ವನ್ನೂ ಸೋತುದಲ್ಲದೇ ದ್ರೌಪದಿಯನ್ನೂ ಸೋತನೆಂಬ ಮಾತು ನಿಜ ವಾದರೆ ದ್ಯೂತದಲ್ಲಿ ಹುರಿಯಾಳಾದ ಶಕುನಿಯು ಮತ್ತೆ ದ್ರೌಪದಿಯನ್ನು ಪ್ರತ್ಯೇಕವಾಗಿ ಏಕೆ ಪಣವಾಗಿಡಿಸಿದ? ಆಕೆ ಜಿತಳಲ್ಲದುದರಿಂದಲೇ ಮತ್ತೆ ಇಡಿಸಿದನಲ್ಲವೇ? ಆಗ ಈ ಕರ್ಣನೆಲ್ಲಿದ್ದ? ಏನಾಗಿದ್ದ? ಆ ಮೊದಲೇ ಎಲ್ಲದರೊಡನೆ ಜಿತಳಾದ ದ್ರೌಪದಿಯನ್ನು ಮತ್ತೆ ಪಣವಾಗಿಡುವ ಅಗತ್ಯ ವಿಲ್ಲವೆಂದು ಶಕುನಿಗೆ ಏಕೆ ಹೇಳಲಿಲ್ಲ? ಆಕೆ ಜಿತಳಲ್ಲವೆಂದೇ ಶಕುನಿಯು ಮತ್ತೆ ಪಣವಾಗಿರಿಸಿದ. ಅದಕ್ಕೆ ಕರ್ಣಾದಿಗಳು ಸಮ್ಮತಿಸಿಯೇ ಬದಲು ಹೇಳ ಲಿಲ್ಲ. ಅಂತಹ ಕರ್ಣನ ವಾದ ತಮ್ಮಲ್ಲಿನ ಶಕುನಿಯ ಚರ್ಯೆಗೆ ವಿರುದ್ಧ. ವಿಕರ್ಣನ ಧರ್ಮನಿರ್ಣಯಕ್ಕೆ ವಿರುದ್ಧ. ಆದುದರಿಂದ ಆ ವಾದ ಅಸಂಬದ್ಧ. ಅಂತೆಯೇ ಪ್ರತಿವಾದಿಗಳ ವಾದವೂ ಅಸಂಬದ್ಧವೆಂದು ಬೇರೆ ಹೇಳಬೇಕೇ?

ಸಾರಾಂಶ :– ಸೋತ ಧರ್ಮಜನಿಂದ ದ್ರೌಪದಿಯನ್ನು ಮತ್ತೆ ಪಣ ವಾಗಿಡಿಸಿದ ಶಕುನಿಯ ಚರ್ಯೆಯಿಂದ ಅದಕ್ಕೆ ಮೊದಲೇ ಸೋಲಲ್ಪಟ್ಟವಳು ಎಂಬ ಕರ್ಣನ ವಾದ ಮುರಿದುಬಿತ್ತು. ಆಕೆ ಜಿತಳಲ್ಲವೆಂದು ಸಹೇತುಕವಾಗಿ ನಿರ್ಣಯಿಸಿದ ವಿಕರ್ಣನ ಸಿದ್ಧಾಂತ ಅಪ್ರತಿಹತವಾಗಿ ಸ್ಥಿರಪಟ್ಟಿತು.

ಏಕವಸ್ತ್ರಳನ್ನು ಸಭೆಗೆ ಎಳೆತರುವುದು ಅಧರ್ಮವಲ್ಲವೆಂದ ಕರ್ಣನ ಮಾತುಗಳನ್ನು ಅಭಿನಂದಿಸುವ ಪ್ರತಿವಾದಿಗಳ ಪ್ರಸಂಗ–ತನ್ನಿರಾಕರಣ

ಸುಯೋಧನವಿಜಯ :– ಮೊದಲ ಮಾತು. "ವಿಕರ್ಣ! ಇನ್ನು ಏಕವಸ್ತ್ರಳಾದ ಇವಳನ್ನು ಸಭೆಗೆ ತರುವುದು ಅಧರ್ಮವೆಂದೆ. ಪತ್ನಿಗೆ ದೈವಾ ಧಿಷ್ಠಿತನಾದ ಪತಿ ಒಬ್ಬನೇ. ಇವಳಿಗೆ ಹಲವರು ಪತಿಗಳು. ಆದುದರಿಂದ ಇವಳು ಬಂಧಕೀ. ಇಂಥವಳನ್ನು ವಿಗತವಸ್ತ್ರಳನ್ನಾಗಿ ಕರೆತಂದರೂ ಧರ್ಮಕ್ಕೆ ವಿರೋಧವಾಗಲಾರದು." ಹೀಗೆ ಕರ್ಣನು ವಿಕರ್ಣನ ವಚನಗಳನ್ನು ನಿರಾಕರಿಸಲು (ಆಂಧ್ರಭಾರತ) ಈ ಗ್ರಂಥದಲ್ಲಿ 'ಬಂಧಕೀ' ಎಂದಷ್ಟು ಮಾತ್ರ ಉಲ್ಲೇಖಿಸಿ ಮೇಲಿನ ಮಾತನ್ನು ಬಿಟ್ಟುಬಿಟ್ಟ ಪ್ರತಿವಾದಿಗಳ ಮಾತು :–

"ಕರ್ಣನು ನುಡಿದ ನುಡಿಗಳಲ್ಲಿ ಅಧರ್ಮವಾಗಲೀ ಅಸತ್ಯವಾಗಲೀ

ಇಲ್ಲ. ಇದ್ದಿದ್ದರೆ ಭೀಷ್ಮ-ದ್ರೋಣ-ವಿದುರರು ಪಂಚಪಾಂಡವರು ಸುಮ್ಮ ನಿರುತ್ತಿದ್ದರೇ? ಇದಕ್ಕೆ ಸರಿಯಾದ ಉತ್ತರ ಕೊಡದೆ ಇರುತ್ತಿರಲಿಲ್ಲ. ಆದರೆ ಕರ್ಣನ ಮಾತಿಗೆ ಒಬ್ಬರಾದರೂ ಬದಲುಮಾತು ಹೇಳಲಿಲ್ಲ.

ಆದರೆ 'ಧರ್ಮಶಾಸ್ತ್ರಜ್ಞಾನದಲ್ಲಿ ಧರ್ಮನಂದನನು ಹೆಚ್ಚೋ ದ್ರೌಪದಿಯು ಹೆಚ್ಚೋ? ಧರ್ಮರತರಿಗೆ ತಿಳಿಯದೇ?' ಎಂದು ಶ್ರೀ ರಘುಪತಿರಾಯರು ಹಾಕಿಸಿದ ಪ್ರಶ್ನೆ ಬಲು ಶ್ಲಾಘನೀಯವಾಗಿದೆ.

ಈ ಪ್ರತಿವಾದಿಗಳು ತೋರಿಸಿದ ಕರ್ಣನ ಮಾತು ವಿಕರ್ಣನ ಮಾತನ್ನು ನಿರಸನಗೈಯಲು ಹೇಳಿದ್ದಲ್ಲವೇ? ವಿಕರ್ಣನು ಅಂದದ್ದೇನು? ಏಕವಸ್ತ್ರಳಾಗಿ, ರಜಸ್ವಲೆಯಾಗಿರುವ ಇವಳನ್ನು ಸಭೆಗೆ ಎಳೆತರುವುದು ಧರ್ಮವಲ್ಲ'–ಎಂದು.

ಇದಕ್ಕೆ ಕರ್ಣನ ಪ್ರತ್ಯುತ್ತರವೇನು? 'ಇವಳಿಗೆ ಐವರು ಪತಿಗಳಾದು ದರಿಂದ ಬಂಧಕೀ ಎಂಬುದು, 'ಇಂಥವಳನ್ನು ವಿಗತವಸ್ತ್ರಳನ್ನಾಗಿ ತಂದರೂ ಧರ್ಮವಿರೋಧವಲ್ಲ' ಎಂಬುದು. ಇದರಲ್ಲಿ ಎರಡನೆಯ ಮಾತಿಗೆ ಪ್ರತಿವಾದಿಗಳು ನಾಚಿಕೆಗೊಂಡು ಇರಬಹುದು, ಪ್ರದರ್ಶಿಸದೇ ಬಿಟ್ಟರು. ಅವರು ತೆಗೆದುಕೊಂಡದ್ದು ಬಂಧಕೀ ಎಂಬ ಮಾತನ್ನೇ. ಈಗ ರಜಸ್ವಲೆ ಯನ್ನು ಸಭೆಗೆ ಹಿಡಿದು ತರುವುದು ಧರ್ಮವಲ್ಲವೆಂಬ ವಿಕರ್ಣನ ಮಾತಿಗೆ ಆಕ್ಷೇಪಣೆಗೆ 'ಇವಳು ಬಂಧಕೀ' ಎಂದ ಕರ್ಣನ ಮಾತು ಸದುತ್ತರ ವಾದೀತೇ? ಇದು ಅವಳು ರಜಸ್ವಲೆಯಲ್ಲ ಎಂದು ಹೇಳಲು ಉಪಯೋಗ ವಾಗುವುದೇ? ರಜಸ್ವಲೆಯಾದವಳನ್ನು ಸ್ಪರ್ಶಿಸಬಹುದು ಎನ್ನಲು ಉಪ ಯೋಗವಾಗುತ್ತದೆಯೇ? ಆಕೆಯನ್ನು ಜುಟ್ಟು ಹಿಡಿದು ಎಳೆದು ಆಡಬಾರದ ಮಾತುಗಳನ್ನಾಡಬಹುದು ಎಂಬುದಕ್ಕೆ ಉಪಯೋಗವೇ? ಇಂತಹ ಅಸಂಬದ್ಧಪ್ರಲಾಪದಿಂದೊದಗುವ ಪ್ರಯೋಜನವೇನು? ಪ್ರತಿವಾದಿಗಳು ಸಂಕೋಚವಿಲ್ಲದೇ ಕರ್ಣನನ್ನು ಶ್ಲಾಘಿಸುವುದು ಶೋಚನೀಯ. ಇನ್ನು ಕರ್ಣನ ಎರಡನೆಯ ಮಾತೇನು? 'ವಿಗತವಸ್ತ್ರಳನ್ನಾಗಿ ತಂದರೂ ಧರ್ಮಕ್ಕೆ ವಿರೋಧವಲ್ಲ.' ಇದು ಎಂತಹ ಅಸಭ್ಯವಾದ ಉತ್ತರ! 'ರಜಸ್ವಲೆಯನ್ನು ಸಭೆಗೆ ಎಳೆದುತರುವುದು ಧರ್ಮವಲ್ಲ' ಎಂದ ವಿಕರ್ಣನ ಆಕ್ಷೇಪಣೆ ಏನು?

'ಬಂಧಕಿಯನ್ನು ವಿಗತವಸ್ತ್ರಳಾಗಿ ತಂದರೂ ತಪ್ಪಾಗಲಾರದು' ಎಂದ ಕರ್ಣನ ಮಾರುತ್ತರವೇನು? ಇದೆಂತಹ ಅಪಪ್ರಲಾಪ? ಇದಕ್ಕಿಂತಲೂ ಒರಟು ಮಾತುಂಟೆ? ದ್ರೌಪದಿಯು ಬಂಧಕಿಯೇ? ಆ ಶಬ್ದಕ್ಕೆ ಅರ್ಥವೇನು? **ಬಧ್ನಾತಿ ಉದಾಸೀನಮಪಿ ಪುರುಷಂ ಸ್ವವಶಂ ಕರೋತೀತಿ ಬಂಧಕೀ** ಎಂಬ ವ್ಯುತ್ಪತ್ತಿಯಿಂದ ಜಾರಿಣೀ ಎಂದರ್ಥ. ಆಕೆ ಜಾರಿಣಿಯೇನು?

ಕರ್ಣನಂದದ್ದು–'ಪತ್ನಿಗೆ ದೈವವಿಹಿತನಾದ ಪತಿಯು ಒಬ್ಬನೇ' ಎಂದಲ್ಲವೇ? ಇದು ಭರ್ತೃನಿಯಮಕ್ಕೆ ದೈವವಿಧಾನವು ಮೂಲಾಧಾರವೆಂದು ಹೇಳಿದಂತಾಯಿತು. ಇಂತಹ ಸ್ಥಿತಿಯಲ್ಲಿ ಸ್ತ್ರೀಸಾಮಾನ್ಯಕ್ಕೆ ದೈವವಿಧಾನದಿಂದ ಏಕೈಕಪತಿಯಾದರೂ ದ್ರೌಪದಿಗೆ ಮಾತ್ರ ಪಂಚಪತಿತ್ವವು ಆ ದೈವವಿಧಾನದಂತೆಯೇ ನಿಯಮಿತವಾದಾಗ, ಅದು ವಾದೋಪವಾದಗಳಿಂದ ಪರಿಷ್ಕೃತವಾದಾಗ, ಅದು ಆರ್ಷದೃಷ್ಟಿಗೋಚರವಾದಾಗ, ಅದು ಎಲ್ಲ ರಾಜರಿಂದಲೂ ಒಪ್ಪಲ್ಪಟ್ಟಿದ್ದಾಗ, ಅದು ಸಕಲಮುನಿಜನಸಂಸ್ತುತವಾದಾಗ, ಅದು ಈಶ್ವರದತ್ತ ಪ್ರತಿದಿನಕನ್ಯಾತ್ವದ ವರದಿಂದ ಪವಿತ್ರವಾದಾಗ ಹೇಗೆ ನಿಂದ್ಯವಾದೀತು? ಆಕೆ ಜಾರಿಣಿಯು ಹೇಗಾದಾಳು? ಆದುದರಿಂದ ಬಂಧಕೀ ಎನ್ನುವುದು ಅಪರಾಧ.

ಅಲ್ಲದೇ ಕರ್ಣನು ಯಾವ ಸಾಧ್ವಿಯನ್ನು ಬಂಧಕೀ ಎಂದನೋ ಆಕೆಯು ಅರ್ಧಾಂಗಿಯಾಗಿ ಧರ್ಮಜನ ರಾಜಸೂಯದಲ್ಲಿ ಪಾಲ್ಗೊಂಡಳು. ಆ ಯಾಗಕ್ಕೆ ತೆರಳಿದ್ದ ಪ್ರಮುಖರು ಅನೇಕರು. ಅವರಲ್ಲಿ

ಧೃತರಾಷ್ಟ್ರಶ್ಚ ಭೀಷ್ಮಶ್ಚ ವಿದುರಶ್ಚ ಮಹಾಮತಿಃ ।
ದುರ್ಯೋಧನಪುರೋಗಾಶ್ಚ ಭ್ರಾತರಸ್ಸರ್ವ ಏವ ತೇ ॥
ಗಾಂಧಾರರಾಜಸ್ಸುಬಲಶ್ಶಕುನಿಶ್ಚ ಮಹಾಬಲಃ ।
ಅಚಲೋ ವೃಷಕಶ್ಚೈವ ಕರ್ಣಶ್ಚ ರಥಿನಾಂ ವರಃ ॥

(ಸಭಾ ಅ–34)

ಇವರೆಲ್ಲರೂ ಹೋಗಿದ್ದರು. ಹೀಗೆ ಆಗಮಿಸಿದ ಭೀಷ್ಮ-ಧೃತರಾಷ್ಟ್ರ-ವಿದುರ-ದ್ರೋಣ-ಕೃಪ-ಅಶ್ವತ್ಥಾಮ-ಸೋಮದತ್ತ-ಭೂರಿಶ್ರವ-ಶಲ್ಯ- ಶಕುನಿ ದುರ್ಯೋಧನ-ದುಶ್ಶಾಸನ-ಕರ್ಣಾದಿ ಸಮಸ್ತರನ್ನೂ ಸತ್ಕಾರಪುರಸ್ಸರವಾಗಿ ಪೂಜಿಸಿ ಅವರೊಡನೆ ಧರ್ಮರಾಜನಿಂತೆಂದ.' (ಆಂಧ್ರಭಾರತ)

ಇವರೆಲ್ಲರೂ ಅಲ್ಲಿ ಸತ್ಕೃತರಾದವರೇ. ಇಂದು ಬಂಧಕೀ ಎನ್ನಲ್ಪಟ್ಟ ಆಕೆಯೇ ಧರ್ಮಪತ್ನಿಯಾದ ಧರ್ಮರಾಜನ ರಾಜಸೂಯಕ್ಕೆ ಕರ್ಣ, ಶಕುನಿ ದುರ್ಯೋಧನ, ದುಶ್ಶಾಸನಾದಿಗಳು ನಾಚಿಕೆ–ಸಂಕೋಚ ಯಾವುದೂ ಇಲ್ಲದೇ ಹೋಗಿದ್ದಾದರೂ ಹೇಗೆ? ಅಂದು ದ್ರೌಪದಿಯು ಕುಲಕಾಂತೆಯಾಗಿ ಇಂದು ಬಂಧಕಿಯಾದಳೇ? ಛೀ! ಛೀ! ಇದು ಸಲ್ಲದ ಸಂಬೋಧನೆ.

ಪೂಜ್ಯಳಾದ ಸಾಧ್ವಿಯನ್ನು ಬಂಧಕೀ ಎಂದು ಕರೆಯುವುದೇ ಪಾಪ. ಇನ್ನು ವಿವಸ್ತ್ರಳನ್ನಾಗಿ ಕರೆದುತನ್ನಿ. ಇದರಲ್ಲಿ ತಪ್ಪಿಲ್ಲ ಎನ್ನುವುದು ಮಹಾಪಾಪ. ಯಾವ ಬಂಧಕಿಯೇ ಆಗಲಿ ಸಭೆಯಲ್ಲಿ ಅವಳನ್ನು ವಸ್ತ್ರಹೀನಳನ್ನಾಗಿ ಮಾಡು ಎಂದು ಹೇಳುವುದು ಧರ್ಮವಿರುದ್ಧವಲ್ಲವೆಂದು ಹೇಳುವುದು ಮಾನವಲಕ್ಷಣವೇ? ಮೈಮೇಲೆ ಪ್ರಜ್ಞೆಯಿಲ್ಲದೇ ಇಷ್ಟು ನಗ್ನನೃತ್ಯವನ್ನು ಮಹಾಸಭೆಯಲ್ಲಿ ಮಾಡಿದ ಕರ್ಣನನ್ನು ಮೆಚ್ಚಿದವರ ರೀತಿ ಹುಚ್ಚಾಟ ವಾಗದೇ?

ಕರ್ಣನಾಡಿದ ನುಡಿಗಳಲ್ಲಿ ಅಧರ್ಮವಾಗಲೀ ಅಸತ್ಯವಾಗಲೀ ಇಲ್ಲ ವಂತೆ. ಸಭೆಯಲ್ಲಿ ಯಾರೂ ನುಡಿಯದೆ ಮೌನದಿಂದಿದ್ದುದೇ ನಿದರ್ಶನ ವಂತೆ. ಪ್ರತಿವಾದಿಗಳ ಧೋರಣೆ ಹಾಸ್ಯಾಸ್ಪದವಲ್ಲವೇ? ಏನು ಹೇಳಿದರೂ ಪ್ರಯೋಜನವಿಲ್ಲ. ಏಕೆಂದರೆ ವಿಕರ್ಣನ ಮಾತಿನಿಂದಾದ ಲಾಭವೇನು? ಆದುದರಿಂದ ನುಡಿದು ಲಾಭವಿಲ್ಲ ಎಂದು ಭಾವಿಸಿ 'ದುರ್ಯೋಧನನ ಭಯದಿಂದ ಆ ಶಿಷ್ಟರಾರೂ ಮಾತಾಡದೇ ಮೌನದಿಂದಿದ್ದರು." ಎಂದು ಆಂಧ್ರಭಾರತದಲ್ಲಿ ಬರೆದಂತೆ ಸುಮ್ಮನಿದ್ದರು. ಇಂತಹ ಘೋರಕೃತ್ಯಕ್ಕೆ ಹಿಂಜರಿಯದೆ ಸಿದ್ಧರಾದ ಇವರಿಗೆ ತಕ್ಕ ಶಿಕ್ಷೆಯು ಜರುಗದಿರದು ಎಂದು ತನ್ನ ಮಹತ್ತ್ವದಿಂದ ದ್ರೌಪದಿಯು ತನ್ನನ್ನು ರಕ್ಷಿಸಿಕೊಂಡಳು. ದೈವಶೋಧನೆಗೆ ಇದಕ್ಕಿಂತಲೂ ಸದವಕಾಶ ಬೇರೆ ಇರಲಾರದೆಂದು ಆಸ್ತಿಕಶಿರೋಮಣಿಗಳಾದ ಸಭ್ಯರು ನಿರೀಕ್ಷಿಸುತ್ತಿದ್ದರೆಂಬುದನ್ನು ಪ್ರತಿವಾದಿಗಳು ಅರಿತುಕೊಳ್ಳಲಿ.

ಧರ್ಮಶಾಸ್ತ್ರದಲ್ಲಿ ಧರ್ಮಜನು ಹೆಚ್ಚೆ? ದ್ರೌಪದಿಯು ಹೆಚ್ಚೆ? ಎಂಬ ಶ್ರೀರಘುಪತಿರಾವ್ ಅವರ ಪ್ರಶ್ನೆ ತುಂಬ ಶ್ಲಾಘನೀಯವಂತೆ. ಅಂದರೆ

ಧರ್ಮಶಾಸ್ತ್ರವನ್ನು ಚೆನ್ನಾಗಿ ಬಲ್ಲವನು ಧರ್ಮನಂದನನೇ? ದ್ರೌಪದಿಯೇ? ಎಂಬುದು ಅವರ ಪ್ರಶ್ನೆ. ಎಂದರೆ ದ್ರೌಪದಿಯನ್ನು ಪಂದ್ಯದಲ್ಲಿ ಸೋತ ಧರ್ಮರಾಜನಿಗೆ ಧರ್ಮವೆಂದರೇನೋ ತಿಳಿಯದು. ಆದ್ದರಿಂದ ಆ ಪಣ ಸಲ್ಲದು' ಎಂದು ಪ್ರಶ್ನಿಸಿದ ದ್ರೌಪದಿಯು ಧರ್ಮವನ್ನರಿತವಳೇ ಎಂದು ಆಕ್ಷೇಪಣೆ. ಇಲ್ಲಿ ಸ್ವಲ್ಪ ತಿಳಿಸಬೇಕಾದ ವಿಷಯವಿದೆ. ತನ್ನನ್ನು ಸೋತು ಪರಾಧೀನನಾಗಿರುವ ಸ್ಥಿತಿಯಲ್ಲಿ ಇತರರ ಆಜ್ಞೆಯನ್ನನುಸರಿಸುವುದು ತನಗೆ ಧರ್ಮವೆಂದರಿತವನಾದುದರಿಂದ **ಪಣಸ್ವ ಕೃಷ್ಣಾಂ ಪಾಂಚಾಲೀಂ** ಎಂದು ಶಕುನಿಯು ಆಜ್ಞಾಪಿಸಿದಾಗ ಧರ್ಮಜನು ದ್ರೌಪದಿಯನ್ನು ಪಣವಾಗಿಟ್ಟ. ದ್ಯೂತವು ಆತ್ಮಪರಾಜಯಾಂತವೆಂದರಿತ ಪಾಂಚಾಲಿಯು ಆ ಪಣ ಸಲ್ಲದೆಂದು ಬಲ್ಲವಳಾದುದರಿಂದ ಹಾಗೆ ಪ್ರಶ್ನಿಸಿದಳು.

ಇಲ್ಲಿ–'ಜಿತನಾದ ಧರ್ಮಜನಿಂದ ಪಣವಿಡಿಸುವುದು ನ್ಯಾಯ ವಾದೀತೇ?' ಎಂದು ಕೇಳಿದಳು ಅಷ್ಟೆ. ಆದರೆ ಧರ್ಮಜನು ಪಣವಿರಿಸು ವುದೇ ಅನ್ಯಾಯವೆನ್ನಲಿಲ್ಲ. ಆದುದರಿಂದ ದ್ರೌಪದೀ–ಧರ್ಮಜರ ಧರ್ಮ ಪ್ರಜ್ಞೆ ಪರಸ್ಪರ ವಿರುದ್ಧವಲ್ಲ. ಇಂತಹ ಪರಿಸ್ಥಿತಿಯಲ್ಲಿ ಒಬ್ಬರು ಹೆಚ್ಚು ಒಬ್ಬರು ಕಡಿಮೆ ಆಗಬೇಕಾದ ಅವಶ್ಯಕತೆ ಏನಿದೆ?

ಧರ್ಮಜನದು ತಪ್ಪು ಎಂಬ ಭಾವನೆ ದ್ರೌಪದಿಗೆ ಇಲ್ಲವೇ ಇಲ್ಲ. ಆತನಿಂದ ಮತ್ತೆ ಜೂಜಾಡಿಸಿದವರದೇ ತಪ್ಪು ಎಂದಾಕೆಯ ಭಾವ. ಆಕೆಯ ಪ್ರಶ್ನೆಯನ್ನು ಅರ್ಥಮಾಡಿಕೊಳ್ಳಲಾರದೇ ಆಕೆ ಧರ್ಮಜನದೇ ತಪ್ಪು– ಎಂದಂತೆ ಭ್ರಾಂತಿಗೊಂಡು ಧರ್ಮಶಾಸ್ತ್ರದಲ್ಲಿ ದ್ರೌಪದೀ–ಧರ್ಮರಾಯ ಇವರಲ್ಲಿ ಯಾರು ಹೆಚ್ಚು ಎಂದು ಹುಚ್ಚುಪೆಚ್ಚು ಪ್ರಶ್ನೆ ಹಾಕಿಸಿದ ರಘುಪತಿ ರಾವ್ ಅವರದು ಅಸಂಬದ್ಧ ಬರವಣಿಗೆ. 'ಅದು ಶ್ಲಾಘನೀಯವೆಂದು ದ್ರೌಪದಿಯನ್ನು ಚಿತ್ರಿಸುವುದರಲ್ಲಿ ಕವಿ ತನ್ನ ಚಮತ್ಕಾರವನ್ನೆಲ್ಲ ತೋರಿಸಿದ್ದಾನೆ ಎಂದು ಆ ಕವಿಯನ್ನು ಕೊಂಡಾಡಿದ ಮೊದಲ ಮಾತು ಹೇಳಿದವರ ಧೋರಣೆ ಹೇಯವೇ ಸರಿ.

ಸಾರಾಂಶ :–ರಜಸ್ವಲೆಯನ್ನು ಸಭೆಗೆ ಎಳೆದುತರುವುದು ಅನೀತಿ ಯೆಂದು ವಿಕರ್ಣನು ಅದನ್ನು ನಿಂದಿಸಿದನು. ಅವಳು ಬಂಧಕೀ. ಅಂತಹ ವಳನ್ನು ವಸ್ತ್ರಹೀನಳನ್ನಾಗಿ ತಂದರೂ ತಪ್ಪಿಲ್ಲವೆಂದು ಕರ್ಣನು ಆತನಿಗೆ

ಉತ್ತರವಿತ್ತ. ಆಗ ಕರ್ಣನು–ಪಾಂಡವಾನಾಂ ಚ ವಾಸಾಂಸಿ ದ್ರೌಪದ್ಯಾಶ್ಚಾಪ್ಯುಪಾಹರ। ದುಶ್ಶಾಸನ! ವಿಕರ್ಣನ ಮಾತನ್ನು ಅವಗಣಿಸು. ದ್ರೌಪದಿಯ ಸೀರೆಯನ್ನು ಸೆಳೆ. ಪಾಂಡವರ ವಸ್ತ್ರಗಳನ್ನೂ ಸೆಳೆ–ಎಂದು ಅವನನ್ನು ಹುರಿದುಂಬಿಸಿದ.

ಇಷ್ಟೆಲ್ಲ ಪಾಂಡವರು ಲೋಕದಲ್ಲಿ ತಲೆಯೆತ್ತದಂತಿರುವುದಕ್ಕೂ ಅದರಿಂದ ದುರ್ಯೋಧನನನ್ನು ಸಂತೋಷಪಡಿಸುವುದಕ್ಕೂ ಮಾಡಿದ ಕೆಲಸ, ಆಡಿದ ಮಾತು. ಇಂತಹ ಕರ್ಣನನ್ನು ಮೆಚ್ಚಿಕೊಳ್ಳುವ ಪ್ರತಿವಾದಿಗಳಲ್ಲಿ ಎಂತಹ ಸದ್ಭಾವವಿದೆಯೋ ಗಮನಿಸಿ. ಧರ್ಮನಿರತರಾದ ಪಾಂಡವರ ಬಗೆಗೆ, ದ್ರೌಪದಿಯ ಬಗೆಗೆ ತಾನಂದು ದುರ್ಯೋಧನನ ಪ್ರೀತಿಗಾಗಿ ಆಡಬಾರದ ಮಾತಾಡಿದಂತೆಯೂ, ಈಗ ಆ ದುಷ್ಕಾರ್ಯಕ್ಕೆ ಪರಿತಾಪಪಡುವಂತೆಯೂ ಶ್ರೀಕೃಷ್ಣನು ರಾಯಭಾರಕ್ಕೆ ಬಂದು ಹಿಂದಿರುಗುವಾಗ ಆತನನ್ನು ಏಕಾಂತದಲ್ಲಿ ಸಂದರ್ಶಿಸಿದುದನ್ನು ಗಮನಿಸಬೇಕು. ಕರ್ಣನೇ ಹೇಳಿಕೊಂಡ.

ಹೀಗೆ ಕರ್ಣನೇ ಅವಿನಯವೆಂದು ತಾನೇ ಹೇಳಿರುವಾಗ ಆ ಅವಿನೀತಿಯನ್ನು ಸಮರ್ಥಿಸುವುದಕ್ಕೆ ಹೊರಟ ಪ್ರತಿವಾದಿಗಳ ಬಗೆಗೆ ಏನು ಹೇಳಬೇಕೋ ತಿಳಿಯದು. ದ್ರೌಪದೀ ಮತ್ತು ಪಾಂಡವರನ್ನು ನಿಂದಿಸಿದವರೆಲ್ಲರೂ ಕರ್ಣನಂತೆ ಎಂದಾದರೂ ಪರಿತಪಿಸಬೇಕಾದ ಪರಿಸ್ಥಿತಿಗೆ ಗುರಿಯಾಗಬೇಕಾದದ್ದೇ. ಇಂತಿಷ್ಟು ಮಾತ್ರ ಹೇಳಿ ಈ ಪ್ರಸಂಗವನ್ನು ಮುಗಿಸುತ್ತಿದ್ದೇವೆ.

ಕರ್ಣನು ದ್ರೌಪದಿಯನ್ನು ಬಂಧಕೀ ಎಂದುದನ್ನು ಸಮರ್ಥಿಸುವ ಮ. ಚ. ಕಾರರ ಪ್ರಸಂಗ; ತನ್ನಿರಾಕರಣ

'ದ್ರೌಪದಿಯನ್ನು ದ್ಯೂತಸಭೆಯಲ್ಲಿ ಬಂಧಕೀ ಎಂದದ್ದು ನಿಜಕ್ಕೂ ಕಟೂಕ್ತಿ. ನಿಘಂಟುಗಳಲ್ಲಿ ಬಂಧಕಿಯೆಂದರೆ ಜಾರಿಣಿಯೆಂದು ಅರ್ಥ ಹೇಳಿದ್ದಾರೆ. ಆದರೆ ಪಂಚಭರ್ತೃಕೆಯೇ ಬಂಧಕಿಯೆಂದು ಧರ್ಮಶಾಸ್ತ್ರದ ಕಾರಿಕೆಗಳಲ್ಲಿದೆ, ನೋಡಿ :

ಏಕೋ ಭರ್ತಾಹಿ ನಾರೀಣಾಂ ಕೌಮಾರ ಇತಿ ಲೌಕಿಕಃ ।
ಆಪತ್ಸು ಚ ನಿಯೋಗೇನ ಸಂತಾನಾರ್ಥೇ ಪರಸ್ಸ್ಮೃತಃ ॥

ಗಚ್ಛೇತ ಯಾ ತೃತೀಯಂ ತು ತಸ್ಯಾ ನಿಷ್ಕೃತಿರುಚ್ಯತೇ ।
ಚತುರ್ಥೇ ಪತಿತಾ ಧರ್ಮಾತ್ಪಂಚಮೇ ಬಂಧಕೀ ಭವೇತ್ ॥

(ಸ್ಮೃತಿಕಾರಿಕೆ)

ದ್ರೌಪದಿಯು ಇಂಥವಳು. ಆದುದರಿಂದ ಕರ್ಣನು ಆಕೆಯನ್ನು ಹಾಗೆ ವಿಮರ್ಶಿಸಿದ. (ಮ. ಭಾ. ಚ. ಪು. 284)

ಈ ಬರವಣಿಗೆಯಿಂದ ಪ್ರತಿವಾದಿಗಳು ನಿಘಂಟುಗಳಲ್ಲಿ ಬಂಧಕೀ ಶಬ್ದಕ್ಕೆ ಜಾರಿಣಿಯೆಂಬ ಅರ್ಥ ಬರೆದಿರುವುದಾಗಿಯೂ, ಸ್ಮೃತಿಕಾರಿಕೆಯಲ್ಲಿ ಜಾರಿಣಿ ಅಂತಲ್ಲದೆ ಪಂಚಭರ್ತೃಕೆ ಎಂದು ಅರ್ಥಹೇಳಿರುವಂತೆಯೂ ತಿಳಿಸುತ್ತಿದ್ದಾರೆ. ಇದರಿಂದ ದ್ರೌಪದಿಯು ಐವರ ಪತ್ನಿಯೇ. ಜಾರಿಣಿಯಲ್ಲ– ಎಂದು ಇವರು ಹೇಳಿದಂತಾಯಿತು. ಸಂತೋಷ. ವಿವಾಹಿತಪತಿಯ ಸಂಬಂಧವಲ್ಲದೇ ಅನ್ಯರೊಡನೆ ಸಂಬಂಧವುಳ್ಳವಳು ಜಾರಿಣಿ. ವಿವಾಹಿತ ಪತಿಸಂಬಂಧವಷ್ಟೆ ಇರುವವಳು ಪತಿವ್ರತೆ. ದ್ರೌಪದಿಗೆ ಐವರು ಪಾಂಡ ವರೂ ವಿವಾಹಿತಪತಿಗಳೇ, ಎಂಬುದನ್ನು ಗಮನಿಸಬೇಕು.

'ಮೊದಲು ಧರ್ಮಪುತ್ರನಿಗೆ ದ್ರುಪದರಾಜಪುತ್ರಿಯನ್ನು ಪಾಣಿಗ್ರಹಣ ಮಾಡಿಸಿ, ಅನಂತರ ಉಳಿದ ನಾಲ್ವರಿಗೆ ಮದುವೆಮಾಡಿಕೊಡುವಾಗ ಕನ್ಯಾತ್ವವು ದೂಷಿತವಾಗದಂತೆ ಈಶ್ವರನ ವರದಂತೆ ಕೌಮಾರ್ಯವನ್ನು ಹೊಂದಿದ ಆ ಕನ್ಯೆಯನ್ನು ಕ್ರಮವಾಗಿ ಭೀಮಾರ್ಜುನ-ನಕುಲ-ಸಹದೇವರಿಗೆ ಪಾಣಿಗ್ರಹಣಮಾಡಿಸಲಾಯಿತು.

ದ್ರೌಪದಿಯು ಐವರ ಸತಿಯಾದದ್ದು ಹೀಗೆ. ಇಂತಹ ಪಂಚಭರ್ತೃಕಾತ್ವವನ್ನು ಮನಸ್ಸಿನಲ್ಲಿಟ್ಟುಕೊಂಡೇ ಬಂಧಕೀಶಬ್ದವನ್ನು ಕರ್ಣನು ಮಾತಾಡಿದಂತೆ ಪ್ರತಿವಾದಿಗಳು ಹೇಳಬಲ್ಲರೇ? ಈ ಪ್ರತಿವಾದಿಗಳೇ ಬರೆದ ವಿಷಯವನ್ನು ನೋಡೋಣ.

"ಅಲ್ಲದೆ ಆತ ಹೀಗೆ ಪರಿಹಾಸಮಾಡುವುದು ಅಧರ್ಮವಾಗಿ ತೋರುತ್ತದೆ. ಸಭೆಯಲ್ಲಿ ಅವಮಾನಕ್ಕೊಳಗಾದ ದ್ರೌಪದಿಯನ್ನು ನೋಡಿ ಕರ್ಣನು ಹೀಗೆಂದ–

"ಐದು ಜನ ಪತಿಗಳಾಗುವುದಕ್ಕಿಂತ ಒಬ್ಬನು ಪತಿಯಾಗುವುದು

ಲೇಸು. ಆದುದರಿಂದ ಜೂಜಿನಲ್ಲಿ ಹೆಂಡತಿಯನ್ನು ಸೋಲದ, ತಕ್ಕ ಪತಿಯನ್ನು ಹೊಂದು."

ಈ ಮಾತಿನಲ್ಲಿ ಐವರು ಕೂಡದೆಂದೂ, ಹೆಂಡತಿಯನ್ನು ಸೋತವನು ಕೂಡದೆಂದೂ, ಪಾಂಡವರನ್ನು ಪರಿತ್ಯಜಿಸಿ ದುರ್ಯೋಧನನನ್ನು ಪತಿಯಾಗಿ ಸ್ವೀಕರಿಸು ಎಂದು ಸೂಚಿಸಿದ. ಹೀಗೆ ಸೂಚಿಸಿದವನು ಸ್ವಾಮಿಭಕ್ತಿಪರಾಯಣನೆಂದು (ಸ್ವಾಮಿಭಕ್ತ್ಯಾನಘೋಸ್ಮ್ಯಹಂ) ಹೆಸರುವಾಸಿಯಾದ ಕರ್ಣ. ಈತ ಪೂರ್ವಾಚಾರಪರಾಯಣನೆಂದು ಪ್ರತಿವಾದಿಗಳ ಪ್ರಶಂಸೆ ಪಡೆದ ತನ್ನ ಸ್ವಾಮಿಯಾದ ದುರ್ಯೋಧನನಿಗೆ ಭಕ್ತಿಸೂಚಕವಾಗಿ ಏರ್ಪಡಿಸುವ ಸಂಬಂಧವೆಂದರೆ ಬಂಧಕಿಯ ಸಂಬಂಧ! ಆಹಾ! ಕರ್ಣನ ಸ್ವಾಮಿಭಕ್ತಿಯು ಎಷ್ಟು ಘನವಾದದ್ದು! ದುರ್ಯೋಧನನದೋ ಎಂತಹ ಪೂರ್ವಾಚಾರ ಪರಾಯಣತ್ವ! ನಾಚಿಕೆಗೇಡಿನ ಯೋಜನೆಯಿದು.

ಕರ್ಣನ ಮಾತುಗಳಲ್ಲಿ ದ್ರೌಪದಿಗೆ ದುರ್ಯೋಧನನನ್ನು ಪತಿಯಾಗಿ ಮಾಡಲು ಬಯಸಿದ್ದು–ವಿವಾಹವಿಧಿಯನ್ನು ಅನುಸರಿಸಿದ್ದಲ್ಲ. ವಿವಾಹಿತಪತಿಗಳಿಗಿಂತ ಅನ್ಯನೊಡನೆ ಸಂಬಂಧಕಲ್ಪಿಸುವ ಭಾವನೆಯೆಂದೂ, ಅದೇ ಜಾರಿಣಿಯ ಲಕ್ಷಣವೆಂದೂ, ಅಂತಹ ಜಾರಿಣಿಯೇ ದ್ರೌಪದಿಯೆಂದೂ, ಆದುದರಿಂದಲೇ ಪಂಚಭರ್ತೃಕೆಯೆಂದೂ ಸ್ಪಷ್ಟೀಕರಿಸಿದಂತಾಯಿತು. ಅವಳು ಪಂಚಭರ್ತೃಕೆ ಆದದ್ದೂ ಜಾರಿಣಿಯಾದುದರಿಂದಲೇ ಎಂದು ಕರ್ಣನ ಊಹೆ. ಆದ್ದರಿಂದ ಇಂತಹ ಬಂಧಕಿಯನ್ನು ವಿಗತವಸ್ತ್ರಳನ್ನಾಗಿ ಮಾಡಿದರೂ ತಪ್ಪಿಲ್ಲವೆಂದೂ ಪ್ರಲಾಪಿಸಿದ. ಜಾರಿಣಿಯೆಂಬ ಭಾವದಿಂದಲೇ ಕರ್ಣನು ಬಂಧಕೀ ಎಂದ. ಆದ್ದರಿಂದ ಮ.ಚ.ಕಾರರ ಬರವಣಿಗೆ ಕರ್ಣನ ತಾತ್ಪರ್ಯಕ್ಕೆ ವಿರುದ್ಧ.

ಇನ್ನೊಂದು ಮಾತು : ನಿಘಂಟುಗಳಲ್ಲಿ ಬಂಧಕೀ ಎಂದರೆ ಜಾರಿಣಿಯೆಂದೇ ಬರೆದಿದ್ದಾರೆ. ಸ್ಮೃತಿಕಾರಿಕೆಗಳಲ್ಲಿ ಮಾತ್ರ ಪಂಚಭರ್ತೃಕೆಯೇ ಜಾರಿಣಿ ಅಲ್ಲ, ಎಂದು ಹೇಳಲಿಲ್ಲವಂತೆ. ಪ್ರತಿವಾದಿಗಳಿಗೆ ಇಲ್ಲಿ ಸ್ವಲ್ಪ ವಿವರಣೆ ಕೊಡಬೇಕಾಗಿದೆ. ಯಾವ ಪದಗಳಿಗೆ ಯಾವ ಅರ್ಥಗಳು ಶಾಸ್ತ್ರಸಿದ್ಧಗಳಾಗಿರುತ್ತವೋ, ಶಾಸ್ತ್ರಜ್ಞರಿಂದ ಬೋಧಿಸಲ್ಪಟ್ಟಿರುತ್ತವೋ–ಆ ಅರ್ಥಗಳನ್ನು

ಆ ಪದಗಳಿಗೆ ನಿಘಂಟುಗಳು ಪ್ರಕಟಿಸುತ್ತವೆ. ಆ ನಿಘಂಟುಗಳು ಬಂಧಕೀ ಶಬ್ದಕ್ಕೆ ಪಂಚಭರ್ತೃಕೆಯೆಂಬ ಬೇರೊಂದರ್ಥ ಇರುವುದಾದರೆ ಪ್ರಕಟಿಸಲೇ ಬೇಕು. ಪಂಚಭರ್ತೃಕೆಯೆಂದರೂ ಜಾರಿಣಿಯೆಂದರೂ ಒಂದೇ ಆದಾಗ ಪ್ರಕಟಿಸಬೇಕಾಗಿಲ್ಲ. ಆದುದರಿಂದ ಬಂಧಕೀ ಎಂದರೆ ಜಾರಿಣಿಯೆಂದೇ ಹೇಳಿದ ನಿಘಂಟುಗಳು ಪ್ರತಿವಾದಿಗಳು ಹೇಳಿದಂತೆ ಅದಕ್ಕೆ ಬೇರೊಂದರ್ಥ ಇಲ್ಲವೆಂದೇ ಸ್ಥಿರಪಡಿಸುತ್ತವೆ.

ಇನ್ನು ಸ್ಮೃತಿಕಾರಿಕೆಯಲ್ಲಿ ಇದೆ ಎಂದು ವಾದಿಸುವರೋ! ಅದರಲ್ಲಿದ್ದಿದ್ದರೆ ಶಬ್ದಕೋಶಗಳು ಹೇಳುತ್ತಿರಲಿಲ್ಲವೇ? ಆ ಕಾರಿಕೆಯಲ್ಲೂ ಅರ್ಥ ಜಾರಿಣಿಯೆಂದೇ.

"ಏಕೋ ಭರ್ತಾ ಹಿ ನಾರೀಣಾಂ" ಎನ್ನುವಾಗ ವಿವಾಹವಿಧಿಯಂತೆ ನಾರಿಗೆ ಒಬ್ಬನೇ ಪತಿ (ವಿವಾಹಿತ) ಎಂದು ಹೇಳಲ್ಪಟ್ಟಿದೆ. ಆ ಮೇಲೆ–

ಆಪತ್ಸು ಚ ನಿಯೋಗೇನ ಸಂತಾನಾರ್ಥೇ ಪರಸ್ಸ್ಮೃತಃ ।
ಆಪತ್ಸು ಚ ನಿಯೋಗೇನ ಭರ್ತುರ್ನಾರ್ಯಾಃ ಪರಸ್ಸ್ಮೃತಃ ॥

(ಪಾಠಾಂತರ)

ನಿಯೋಗವಿಧಿಗೆ ಅನುಸಾರವಾಗಿ ಆಪತ್ಕಾಲದಲ್ಲಿ ಸಂತಾನಪ್ರಾಪ್ತಿಗಾಗಿ ಪತಿಯಲ್ಲದೇ ಬೇರೊಬ್ಬನೆಂದು ವಿಧಿಸಲ್ಪಟ್ಟಿದೆ. ಇಲ್ಲಿ **'ಪರಃ ಸ್ಮೃತಃ'** ಅನ್ನುವಾಗ ಪತಿಗಿಂತ ಅನ್ಯನೆಂಬ ಅರ್ಥವಷ್ಟೆ. ಅಲ್ಲದೆ ಪ್ರತಿವಾದಿಗಳು ಭಾವಿಸಿದ ಹಾಗೆ (ಅನ್ಯಪತಿ ಮತ್ತೊಬ್ಬ ವಿವಾಹಪತಿ) ಎಂದರ್ಥವಲ್ಲ. ಈ ವಿಷಯವನ್ನು **ಭರ್ತುರ್ನಾರ್ಯಾಃ ಪರಃ ಸ್ಮೃತಃ** ಎಂಬ ಪಾಠಾಂತರ ವಿಶದ ಪಡಿಸುತ್ತಿದೆ. ನಿಯೋಗವಿಧಿಯು ವಿವಾಹಿತಪತಿಗೆ ಸಂಬಂಧಿಸಿದ್ದಲ್ಲವೆಂಬುದು ಸ್ಪಷ್ಟವೇ. ಆದುದರಿಂದ ಪರಪುರುಷನೆಂದೇ ಅದಕ್ಕೆ ಅರ್ಥ. ಆಮೇಲೆ **'ಗಚ್ಛೇತ ಯಾ ತೃತೀಯಸ್ತು ತಸ್ಯಾ ನಿಷ್ಕೃತಿರುಚ್ಯತೇ'** ವಿವಾಹವಿಧಿಗೆ ಸಂಬಂಧಿಸಿದ ಪತಿಯನ್ನು, ನಿಯೋಗವಿಧಿಗೆ ಸಂಬಂಧಿಸಿದ ಪರಪುರುಷನಲ್ಲದೇ ತೃತೀಯನನ್ನು ಎಂದರೆ ಮೂರನೆಯ ಪುರುಷನನ್ನು ಬೆರೆತಸತಿಗೆ ಪ್ರಾಯಶ್ಚಿತ್ತವು ವಿಧಿಸಲ್ಪಟ್ಟಿದೆ. ಆಮೇಲೆ **'ಚತುರ್ಥೇ ಪತಿತಾ ಪಂಚಮೇ ಬಂಧಕೀ'** ನಾಲ್ಕನೆಯ ಪರಪುರುಷನನ್ನು ಸೇರಿದರೆ ಪತಿತೆ

ಯಾಗುತ್ತಾಳೆ. ಐದನೆಯ ಪುರುಷನೊಡನೆ ಬೆರೆತರೆ ಬಂಧಕಿಯಾಗುತ್ತಾಳೆ ಎಂದು ಹೇಳಲ್ಪಟ್ಟಿದೆ.

ಇಲ್ಲಿ ವಿವಾಹವಿಧಿಗಾಗಲಿ, ನಿಯೋಗವಿಧಿಗಾಗಲಿ ಸಂಬಂಧಿಸದೇ ಪರಪುರುಷರೊಡನೆ ವರ್ತಿಸುವ ಸ್ತ್ರೀಯ ವಿಷಯವಾಗಿ ಹೇಳಲ್ಪಟ್ಟಿದೆ. ಆದುದರಿಂದ ಇಲ್ಲಿ ಬಂಧಕೀಶಬ್ದವೂ ಜಾರಿಣಿಯನ್ನೇ ಹೇಳುತ್ತಿದೆ.

ಮತ್ತೊಂದು ವಿಷಯ : ಮ. ಭಾ. ಚ. ಕಾರರು ಗ್ರಂಥವನ್ನು ಹೆಸರಿಸದೇ ಸ್ಮೃತಿಕಾರಿಕೆಗಳೆಂದು ವಿಚಿತ್ರವಾಗಿ ತೋರಿಸಿದ–ಆ ಕಾರಿಕೆಗಳೆಲ್ಲಿಯವೋ ಯಾವ ಪ್ರಸ್ತಾಪಕ್ಕೆ ಸೇರಿದ್ದೋ ಯಾರು ಅದನ್ನು ಹೇಳಿದರೋ ಹೇಳುತ್ತಿದ್ದೇನೆ.

ಆ ಕಾರಿಕೆಗಳು ಮಹಾಭಾರತದಲ್ಲಿನ ನಾಲಾಯನ್ಯುಪಾಖ್ಯಾನದಲ್ಲಿದೆ. ಆ ಪ್ರಸ್ತಾಪವು ಪರಮೇಶ್ವರನನ್ನು ಕುರಿತು ತಪಗೈದ ನಾಲಾಯನಿಗೆ ಸಾಕ್ಷಾತ್ಕೃತನಾದ ಪರಮೇಶ್ವರನು "ಪಂಚ ತೇ ಪತಯೋ ಭದ್ರೇ ಭವಿಷ್ಯನ್ತಿ" ಎಂದಾಗ ಅದಕ್ಕೊಪ್ಪದೆ ಅದು ದೋಷವೆಂದು ಹೇಳಿಕೊಳ್ಳುವ ಸಂದರ್ಭ. ಹಾಗೆ ಹೇಳಿಕೊಂಡದ್ದು ನಾಲಾಯನಿಯೇ. ಆಕೆ ಉದಾಹರಿಸಿದ ಕಾರಿಕೆಗಳೇ ಅವು. ಇದೆಲ್ಲವನ್ನು ಹಿಂದೆಯೇ ಹೇಳಲಾಗಿದೆ. ಅಕೆ–

"ಪಂಚಮೇ ಬಂಧಕೀ ಭವೇತ್" ಎಂದೂ ಅನಂತರ

ಏವಂ ಗತೇ ಧರ್ಮಪಥೇನ ವೃಣೇ ಬಹುಪುಂಸ್ಕತಾಮ್ ।
ಅಲೋಕಾಚರಿತಾತ್ತಸ್ಮಾತ್ಕಥಂ ಮುಚ್ಯೇತ ಸಂಕರಾತ್ ॥

'ಧರ್ಮವಲ್ಲದ ಬಹುಪುರುಷಸಂಬಂಧವನ್ನು ನಾನೊಲ್ಲೆ. ನನಗೆ ಈ ದೋಷದಿಂದ ಬಿಡುಗಡೆ ಹೇಗೆ? ಎಂದು ಪರಿತಪಿಸಿದಳು. ಆದರಿಂದ ತನಗೆ ಜಾರಿಣೀಸ್ಥಿತಿ ಸಂಭವಿಸೀತು ಎಂದೇ ಅವಳ ಅಳಲು (ಪಂಚಮೇ ಬಂಧಕೀ ಭವೇತ್). ಅಂದರೆ ಬಂಧಕೀಶಬ್ದಕ್ಕೆ ಅರ್ಥ ಜಾರಿಣಿಯೆಂದೇ. ಅಂದರೆ ಪ್ರತಿವಾದಿಗಳು ಮಾಡಿದ ಪಾಂಡಿತ್ಯಾಭಿನಯವು ಹೇಯ. ಕರ್ಣನು ಬಂಧಕೀ ಎಂದದ್ದು ಜಾರಿಣಿ ಎಂಬರ್ಥದಲ್ಲೇ. ನಾಲಾಯನಿಯ ಪ್ರಾರ್ಥನೆಯನ್ನಾಲಿಸಿ ಪರಮೇಶ್ವರನು ಹೀಗೆ ಅನುಗ್ರಹಿಸಿದ–

ಅನ್ಯದೇಹಾಂತರೇ ಚೈವ ರೂಪಭಾಗ್ಯಗುಣಾನ್ವಿತಾ ।
ಪಂಚಭಿಃ ಪ್ರಾಪ್ಯ ಕೌಮಾರಂ ಮಹಾಭಾಗಾ ಭವಿಷ್ಯಸಿ ॥

'ನಾಲಾಯನಿ! ನಿನಗೆ ದೋಷವಿಲ್ಲದಂತೆ ಹೇಳುತ್ತಿದ್ದೇನೆ. ನೀನು ಮುಂದಿನ ಜನ್ಮದಲ್ಲಿ ರೂಪಭಾಗ್ಯಗುಣಾನ್ವಿತೆಯಾಗಿ ಪಂಚಪತಿಗಳೊಡನೆ ನಿತ್ಯ ನೂತನಕನ್ಯಾತ್ವವನ್ನು ಹೊಂದಿ ನೀನು ಹೆದರುತ್ತಿರುವ ಬಂಧಕೀತ್ವವಿಲ್ಲದೇ ಪೂಜ್ಯಳಾಗಿ ಬಾಳುವೆ ನಡೆಸುವೆ'–ಎಂದು.

ಅಂತಹ ಅಸಾಧಾರಣವ್ರತವನ್ನು ಹೊಂದಿದ ನಾಲಾಯನಿಯ ಜನ್ಮಾಂತರಸ್ವರೂಪವೇ ದ್ರೌಪದೀದೇವಿಯು. ಆಕೆಯನ್ನು ಬಂಧಕೀ ಎಂದು ತುಂಬುಸಭೆಯಲ್ಲಿ ಒರಲಿದ ಕರ್ಣನ ಅವಿನೀತಿಯನ್ನು ಕರ್ಣಾಭಿಮಾನಿಗಳಾದ ಪ್ರತಿವಾದಿಗಳು ಮನಸ್ಸಿಗೆ ತಂದುಕೊಳ್ಳುವುದು ಒಳಿತು.

ಪ್ರಕೃತಮನುಸರಾಮಃ–ವಿಷಯಕ್ಕೆ ಬರೋಣ.

ದ್ರೌಪದಿಯ ಪ್ರಶ್ನೆಗೆ ವಿಕರ್ಣನು ಸುಸ್ಪಷ್ಟವಾಗಿ ಸದುತ್ತರಕೊಟ್ಟು ದುಶ್ಶಾಸನಾದಿಗಳು ಎಸಗುತ್ತಿರುವುದು ದೌರ್ಜನ್ಯವೆಂದು ಉದ್ಘೋಷಿಸುವಾಗ ಕರ್ಣನು ಮಧ್ಯೆ ಪ್ರವೇಶಿಸಿ, ಅಸಂಬದ್ಧಪ್ರಲಾಪಗಳಿಂದ ವಿಕರ್ಣನನ್ನು ಧಿಕ್ಕರಿಸಿ, ದ್ರೌಪದಿಯನ್ನು ವಿವಸ್ತ್ರಳನ್ನಾಗಿ ಮಾಡೆಂದು ದುಶ್ಶಾಸನನಿಗೆ ಹೇಳಲು ಅವನು ಆ ಕೆಲಸಕ್ಕೆ ನುಗ್ಗಿದ. **ಆಕೃಷ್ಯಮಾಣೇ ವಸನೇ ದ್ರೌಪದ್ಯಾ ಚಿಂತಿತೋ ಹರಿಃ**–ಸೆಳೆದ ಸೀರೆಯಲ್ಲಿ ದುಃಖಿಸುತ್ತಾ ಆ ಸಾಧ್ವೀಮಣಿಯು ಶ್ರೀಕೃಷ್ಣನನ್ನು ನೆನೆದು ಪ್ರಾರ್ಥಿಸಿದಳು. ಆಗ ಆ ಸ್ವಾಮಿಯ ಅನುಗ್ರಹದಿಂದ ಅಕ್ಷಯವಸನಗಳು ಆಕೆಯ ಮೈಮೇಲೆ ಆವಿರ್ಭವಿಸಿದುವು. ದುಃಶಾಸನನು ವಿಫಲಮನೋರಥನಾದನು. ದುಷ್ಟಚತುಷ್ಟಯಕ್ಕೆ ತೀರದ ಅವಮಾನವಾಯಿತು. ಸಭ್ಯರು ಆ ಅದ್ಭುತವನ್ನು ಕಂಡು **ಶಶಂಸುರ್ದ್ರೌಪದೀಂ ತತ್ರ ಕುತ್ಸಂತೋ ಧೃತರಾಷ್ಟ್ರಜಮ್ ।** ಆಗ ಭೀಮಸೇನನು ಉಗ್ರನಾಗಿ–

ಕುರುವೃದ್ಧರು, ಗುರು-ವೃದ್ಧಬಾಂಧವರು ಅನೇಕರು ನೋಡುತ್ತಿರುವಂತೆ ಮದೋನ್ಮತ್ತನಾಗಿ–ದ್ರೌಪದಿಯನ್ನು ಹೀಗೆ ಭಂಗಪಡಿಸಿದ ಖಳ ದುಃಶಾಸನನನ್ನು ಲೋಕಭೀಕರವಾಗಿ ವಧಿಸಿ ಅವನ ವಿಸ್ತಾರವಾದ ವಕ್ಷಃಸ್ಥಲ

ದಿಂದ ಉಕ್ಕುವ ರಕ್ತವನ್ನು ಉರ್ವೀಪತಿಯ ಎದುರಿನಲ್ಲೇ ಉಗ್ರಾಕೃತಿಯನ್ನು ತಾಳಿ ಪಾನಮಾಡುತ್ತೇನೆ ಎಂದು ಪ್ರತಿಜ್ಞೆಮಾಡಿದ.

ಈ ವಿಷಯದಲ್ಲಿ ಮ. ಭಾ. ಚ. ಕಾರರೂ ಮಹಾಭಾರತರಹಸ್ಯ ಕಾರರೂ 'ವಸ್ತ್ರಾಪಹರಣವು ಜರುಗಲಿಲ್ಲ. ಶ್ರೀಕೃಷ್ಣನು ಅಕ್ಷಯವಸ್ತ್ರಗಳನ್ನು ನೀಡಲಿಲ್ಲ' ಎಂದು ಮಾಡಿದ ಅಪ್ರಸ್ತುತಪ್ರಸಂಗಗಳನ್ನು ವಿಸ್ತಾರವಾಗಿ ಶ್ರೀಕೃಷ್ಣನಿಂದಾನಿರಾಕರಣೆ ಎಂಬ ತೃತೀಯಭಾಗದಲ್ಲಿ ಚರ್ಚಿಸಿ ಪ್ರಮಾಣೋಪತ್ತಿಗಳಿಂದ ನಿರಾಕರಿಸಿದ್ದೇನೆ. ಸುಯೋಧನವಿಜಯದ ಕೃತಿಕಾರರ ರೀತಿಯನ್ನು ನೋಡಿ.

ದುರ್ಯೋಧನನ ಮಾತು :

"ಜೂಜಿನಲ್ಲಿ ಸೋತ ಸತಿಯನ್ನು ನಮ್ಮವರು ಕರೆದಾಗ ಬರಲು ನಿರಾಕರಿಸಿದಳು. ಬಂಧು-ಬಾಂಧವರಿಂದ ತುಂಬಿದ್ದ ಸಭೆಯೊಳಕ್ಕೆ ಬರಲಿಲ್ಲ. ಹಾಗೆ ಕರೆದರೂ ಬಾರದಿದ್ದನ್ನು ಕಂಡು ನಮ್ಮವರು ಸಹಿಸದೇ ಆಕೆಯನ್ನು ಕರೆತಂದರು. ಆಗ ಅಧೋನೀವಿಯಾಗಿದ್ದ ಕಾಂತೆಯ ವಸ್ತ್ರವು ತನ್ನಷ್ಟಕ್ಕೆ ತಾನೇ ಕೆಳಕ್ಕೆ ಬಿತ್ತು. ಅಷ್ಟುಮಾತ್ರಕ್ಕೆ ತರುಣಿಯನ್ನು ಪರಿಭವಿಸಿದೆವೆಂದು ಚೀರಿ ಹಾರಿದರು. ನಿಜಕ್ಕೂ ಇದು ನಮ್ಮ ತಪ್ಪು ಎಂದು ನಾವು ಭಾವಿಸೆವು. ಇದಿಷ್ಟೂ ನಿಜ."

ಇದು ದುರ್ಯೋಧನನ ಬಾಯಿಂದ ಹೇಳಿಸಿರುವ ಮಾತು. ಇದಕ್ಕಿಂತ ಅಸಂಬದ್ಧಪ್ರಲಾಪವಿದ್ದೀತೆ? ನಾಚಿಕೆಗೇಡು. ದುಷ್ಟರ ದುಸ್ಸಂಕಲ್ಪ ಮಣ್ಣು ಪಾಲಾಯಿತು. ಆಗ ವಿದುರನು ಎದ್ದುನಿಂತು ಹೀಗೆ ನುಡಿದ.

"ಈ ವಿಕರ್ಣನು ಬಾಲಕನಾದರೂ ಯಥಾವಿಧಿಯಾಗಿ ಜಾಣತನದಿಂದ ಧರ್ಮವನ್ನು ಹಿಡಿದು ಮಾತಾಡಿದ್ದಾನೆ. ಇವನ ಧರ್ಮಪ್ರಬೋಧವು ಬೃಹಸ್ಪತಿಯನ್ನು ನೆನಪಿಗೆ ತರುತ್ತದೆ. ಈತನ ಬುದ್ಧಿವಾದವನ್ನು ಅವಗಣಿಸದೇ ಗ್ರಹಿಸಿ. 'ಇದು ಎಲ್ಲೂ ಎಂದೆಂದಿಗೂ ಸದ್ಭಾವ.' ಎಂದು ನೀವೂ ಇವರಿಗೆ ವಿವೇಕ ಹೇಳಿ" ಎಂದು ಸಭ್ಯರನ್ನು ಉತ್ತೇಜನಗೊಳಿಸಿದ.

ವಿದುರಸ್ಯ ವಚಶ್ಶ್ರುತ್ವಾ ನೋಚುಃ ಕಿಂಚನ ಪಾರ್ಥಿವಾಃ ।
ಕರ್ಣೋ ದುಶ್ಶಾಸನಂ ತ್ವಾಹ ಕೃಷ್ಣಾ ದಾಸೀಂ ಗೃಹಾನ್ನಯ ॥

ತಾಂ ವೇಪಮಾನಾಂ ಸವ್ರೀಡಾಂ ಪ್ರಲಪನ್ತೀಂ ಸ್ಮ ಪಾಂಡವಾನ್ ।
ದುಶ್ಶಾಸನಸ್ಸಭಾಮಧ್ಯೇ ವಿಚಕರ್ಷ ತಪಸ್ವಿನೀಮ್ ॥

(ಸಭಾ. ಅ. 68)

ಆಗ ದ್ರೌಪದಿಯು ಕಳವಳಗೊಂಡು "ಸಭಾಸದರೇ! ಈಗ ಮೊದಲು ನಾನು ಏನು ಮಾಡಬೇಕೋ ಹೇಳಿ. ಇಗೋ ನಿಮಗೆ ನಮಸ್ಕಾರ.

ತಾಮಿಮಾಂ ಧರ್ಮರಾಜಸ್ಯ ಭಾರ್ಯಾಂ ಸದೃಶವರ್ಣಜಾಮ್ ।
ಬ್ರೂತ ದಾಸೀಮದಾಸೀಂ ವಾ ತತ್ಕರಿಷ್ಯಾಮಿ ಕೌರವಾಃ ॥
ಅಯಂ ಮಾಂ ಸುದೃಢಂ ಕ್ಷುದ್ರಃ ಕೌರವಾಣಾಂ ಯಶೋಹರಃ ।
ಕ್ಲಿಶ್ನಾತಿ ನಾಹಂ ತತ್ಸೋಢುಂ ಚಿರಂ ಶಕ್ಷ್ಯಾಮಿ ಕೌರವಾಃ ॥
ಜಿತಾಂ ವಾಪ್ಯಜಿತಾಂ ವಾಪಿ ಮನ್ಯಧ್ವಂ ಮಾಂ ಯಥಾ ನೃಪಾಃ ।
ತಥಾ ಪ್ರತ್ಯುಕ್ತಮಿಚ್ಛಾಮಿ ತತ್ಕರಿಷ್ಯಾಮಿ ಕೌರವಾಃ ॥

"ಕುರುವಂಶೋದ್ಭವರೇ! ನನ್ನನ್ನು ದಾಸೀ ಎನ್ನುವಿರಾ, ಅಲ್ಲವೆಂದು ತಿಳಿಯುವಿರಾ? ನೀವು ಹೇಳಿದಂತೆ ನಡೆದುಕೊಳ್ಳುತ್ತೇನೆ.


ಈ ಕ್ಷುದ್ರನು ನನ್ನನ್ನು ತುಂಬ ಕ್ಲೇಶಪಡಿಸುತ್ತಿದ್ದಾನೆ. ನಾನಿದನ್ನು ಸಹಿಸಲಾರೆ. ನೀವು ನನ್ನನ್ನು ಜಿತಳೆಂದು ಭಾವಿಸುವಿರಾ? ಅಜಿತಳೆಂದು ಭಾವಿಸುವಿರಾ? ನಿಜ ಹೇಳಿ. ನೀವು ಹೇಳಿದಂತೆ ನಡೆದುಕೊಳ್ಳುತ್ತೇನೆ' ಎಂದು ಪ್ರಾರ್ಥಿಸಿದಳು.

ಮಹಾಭಾರತ ತತ್ತ್ವಕಥನ :

ಬರೆದವರು : ಬಾಲವ್ಯಾಸ, ತರ್ಕ, ವ್ಯಾಕರಣ, ವೇದಾಂತಕೇಸರಿ
ಶ್ರೀ ವಾರಣಾಸಿ ಸುಬ್ರಹ್ಮಣ್ಯಶಾಸ್ತ್ರಿಗಳು

ಆಕ್ಷೇಪಗಳನ್ನೂ ಸಂದೇಹಗಳನ್ನೂ ಎತ್ತಿ ತಮ್ಮದೇ ವಾದವನ್ನು
ನಿರೂಪಿಸಿದವರು :
ಶ್ರೀ ಪೆಂಡ್ಯಾಲ ವೆಂಕಟಸುಬ್ರಹ್ಮಣ್ಯಶಾಸ್ತ್ರಿಗಳು.

ಈ ಭಾಗಗಳ ಕನ್ನಡ ಅನುವಾದ :
ಚಾರುಪಲ್ಲಿ ಜಾನಕಿರಾಮಯ್ಯ
ಎಂಬ ಆಂಧ್ರೋಪನ್ಯಾಸಕರು, ಬೆಂಗಳೂರು.



ಕೃಷ್ಣಂ ವನ್ದೇ ಜಗದ್ಗುರುಮ್

ಸಮಗ್ರಮಹಾಭಾರತದ

32 ಸಂಪುಟಗಳ

ವಿಷಯಾನುಕ್ರಮಣಿಕೆ

ಶ್ರೀಃ

ಮಹಾಭಾರತ : ಆದಿಪರ್ವ – ಮೊದಲನೆಯ ಸಂಪುಟದ
ವಿಷಯಾನುಕ್ರಮಣಿಕೆ

ಅಧ್ಯಾಯ ವಿಷಯಗಳು ಪುಟಸಂಖ್ಯೆ

ಅಧ್ಯಾಯ ವಿಷಯಗಳು ಪುಟಸಂಖ್ಯೆ

❖

ಮಹಾಭಾರತ : ಆದಿಪರ್ವ - ಎರಡನೆಯ ಸಂಪುಟದ
ವಿಷಯಾನುಕ್ರಮಣಿಕೆ

❖

ಮಹಾಭಾರತ-ಆದಿಪರ್ವ ಮತ್ತು ಸಭಾಪರ್ವ-ಮೂರನೇ ಸಂಪುಟದ ವಿಷಯಾನುಕ್ರಮಣಿಕೆ

ಸಭಾಪರ್ವ

ಅಧ್ಯಾಯ	ವಿಷಯಗಳು		ಪುಟಸಂಖ್ಯೆ

❖

ಮಹಾಭಾರತ–ಸಭಾಪರ್ವ–ನಾಲ್ಕನೆಯ ಸಂಪುಟದ
ವಿಷಯಾನುಕ್ರಮಣಿಕೆ

ವನಪರ್ವ

ಅರಣ್ಯಪರ್ವ

❖

ಮಹಾಭಾರತ-ವನಪರ್ವ – ಐದನೆಯ ಸಂಪುಟದ
ವಿಷಯಾನುಕ್ರಮಣಿಕೆ

❖

ಮಹಾಭಾರತ-ವನಪರ್ವ-ಆರನೆಯ ಸಂಪುಟ
ವಿಷಯಾನುಕ್ರಮಣಿಕೆ

ತೀರ್ಥಯಾತ್ರಾಪರ್ವ

❖

ಮಹಾಭಾರತ–ವನಪರ್ವ–ಏಳನೆಯ ಸಂಪುಟದ ವಿಷಯಾನುಕ್ರಮಣಿಕೆ

❖

ಮಹಾಭಾರತ : ವನಪರ್ವ–ವಿರಾಟಪರ್ವಗಳು : ಎಂಟನೆಯ ಸಂಪುಟದ ವಿಷಯಾನುಕ್ರಮಣಿಕೆ

ಕುಂಡಲಾಹರಣಪರ್ವ

ವಿರಾಟಪರ್ವ

❖

ಮಹಾಭಾರತ-ಒಂಬತ್ತನೆಯ ಸಂಪುಟದ ವಿಷಯಾನುಕ್ರಮಣಿಕೆ

ವಿರಾಟಪರ್ವ

ಉದ್ಯೋಗಪರ್ವ

ಸೈನ್ಯೋದ್ಯೋಗಪರ್ವ

❖

ಮಹಾಭಾರತ-ಉದ್ಯೋಗಪರ್ವ : ಹತ್ತನೆಯ ಸಂಪುಟದ ವಿಷಯಾನುಕ್ರಮಣಿಕೆ

ಅಧ್ಯಾಯ ವಿಷಯಗಳು ಪುಟಸಂಖ್ಯೆ

❖

ಮಹಾಭಾರತ-ಉದ್ಯೋಗಪರ್ವ-೧೧ನೆಯ ಸಂಪುಟದ ವಿಷಯಾನುಕ್ರಮಣಿಕೆ

ಭಗವದ್ಯಾನಪರ್ವ

❖

ಮಹಾಭಾರತ-ಭೀಷ್ಮಪರ್ವ : ಹನ್ನೆರಡನೆಯ ಸಂಪುಟದ ವಿಷಯಾನುಕ್ರಮಣಿಕೆ

❖

ಮಹಾಭಾರತ–ಭೀಷ್ಮಪರ್ವ : ಹದಿಮೂರನೆಯ ಸಂಪುಟದ ವಿಷಯಾನುಕ್ರಮಣಿಕೆ

ಗೀತಾ : ಭೀ. ಪ.

❖

ಶ್ರೀಮನ್ಮಹಾಭಾರತ-ಭೀಷ್ಮಪರ್ವ-ಹದಿನಾಲ್ಕನೆಯ ಸಂಪುಟದ ವಿಷಯಾನುಕ್ರಮಣಿಕೆ

❖

ಮಹಾಭಾರತ-ಭೀಷ್ಮಪರ್ವ-ಹದಿನೈದನೆಯ ಸಂಪುಟದ
ವಿಷಯಾನುಕ್ರಮಣಿಕೆ

ಉಪ : ಭೀಷ್ಮವಧಪರ್ವ

ದ್ರೋಣಪರ್ವ

ಅಧ್ಯಾಯ ವಿಷಯಗಳು ಪುಟಸಂಖ್ಯೆ

ದ್ರೋಣಾಭಿಷೇಕಪರ್ವ

❖

ಮಹಾಭಾರತ-ದ್ರೋಣಪರ್ವ-ಹದಿನಾರನೆಯ ಸಂಪುಟದ ವಿಷಯಾನುಕ್ರಮಣಿಕೆ

❖

ಮಹಾಭಾರತ-ದ್ರೋಣಪರ್ವ ಹದಿನೇಳನೆಯ ಸಂಪುಟದ ವಿಷಯಾನುಕ್ರಮಣಿಕೆ

❖

ಮಹಾಭಾರತ-ದ್ರೋಣಪರ್ವ : ಹದಿನೆಂಟನೆಯ ಸಂಪುಟದ ವಿಷಯಾನುಕ್ರಮಣಿಕೆ

ಮಹಾಭಾರತ–ಕರ್ಣಪರ್ವ

❖

ಮಹಾಭಾರತ-ಕರ್ಣಪರ್ವ-ಹತ್ತೊಂಬತ್ತನೆಯ ಸಂಪುಟದ ವಿಷಯಾನುಕ್ರಮಣಿಕೆ

ಅಧ್ಯಾಯ ವಿಷಯಗಳು ಪುಟಸಂಖ್ಯೆ

ಶಲ್ಯಪರ್ವ

ಶಲ್ಯಪರ್ವ

ಇಪ್ಪತ್ತನೆಯ ಸಂಪುಟದ ವಿಷಯಾನುಕ್ರಮಣಿಕೆ
ಮಹಾಭಾರತ-ಶಲ್ಯಪರ್ವ

ಸೌಪ್ತಿಕಪರ್ವ

ಸೌಪ್ತಿಕಪರ್ವ

ಸ್ತ್ರೀಪರ್ವ

ಜಲಪ್ರದಾನಿಕಪರ್ವ

❖

ಮಹಾಭಾರತ–ಶಾಂತಿಪರ್ವ–ಇಪ್ಪತ್ತೊಂದನೆಯ ಸಂಪುಟದ ವಿಷಯಾನುಕ್ರಮಣಿಕೆ

❖

ಮಹಾಭಾರತ–ಶಾಂತಿಪರ್ವ–ಇಪ್ಪತ್ತೆರಡನೆಯ ಸಂಪುಟದ ವಿಷಯಾನುಕ್ರಮಣಿಕೆ

ರಾಜಧರ್ಮಾನುಶಾಸನಪರ್ವ

❖

ಮಹಾಭಾರತ-ಶಾಂತಿಪರ್ವ-ಇಪ್ಪತ್ತಮೂರನೆಯ ಸಂಪುಟದ ವಿಷಯಾನುಕ್ರಮಣಿಕೆ

❖

ಮಹಾಭಾರತ-ಶಾಂತಿಪರ್ವ-ಇಪ್ಪತ್ತನಾಲ್ಕನೆಯ ಸಂಪುಟದ ವಿಷಯಾನುಕ್ರಮಣಿಕೆ

ಮೋಕ್ಷಧರ್ಮಪರ್ವ

❖

ಮಹಾಭಾರತ-ಶಾಂತಿಪರ್ವ-ಇಪ್ಪತ್ತೈದನೆಯ ಸಂಪುಟದ ವಿಷಯಾನುಕ್ರಮಣಿಕೆ

ಮೋಕ್ಷಧರ್ಮಪರ್ವ

❖

ಮಹಾಭಾರತ-ಶಾಂತಿಪರ್ವ-ಇಪ್ಪತ್ತಾರನೆಯ ಸಂಪುಟದ ವಿಷಯಾನುಕ್ರಮಣಿಕೆ

ಮೋಕ್ಷಧರ್ಮಪರ್ವ

ಅನುಶಾಸನಪರ್ವ

ದಾನಧರ್ಮಪರ್ವ

❖

ಮಹಾಭಾರತ-ಅನುಶಾಸನಪರ್ವ-ಇಪ್ಪತ್ತೇಳನೆಯ ಸಂಪುಟದ ವಿಷಯಾನುಕ್ರಮಣಿಕೆ

ದಾನಧರ್ಮಪರ್ವ

ಮಹಾಭಾರತ-ಅನುಶಾಸನಪರ್ವ-ಇಪ್ಪತ್ತೆಂಟನೆಯ ಸಂಪುಟದ ವಿಷಯಾನುಕ್ರಮಣಿಕೆ

ಮಹಾಭಾರತ-ಅನುಶಾಸನಪರ್ವ-ಇಪ್ಪತ್ತೊಂಬತ್ತನೆಯ ಸಂಪುಟದ ವಿಷಯಾನುಕ್ರಮಣಿಕೆ

❖

ಮಹಾಭಾರತ-ಅನುಶಾಸನಪರ್ವ-ಮೂವತ್ತನೆಯ ಸಂಪುಟದ ವಿಷಯಾನುಕ್ರಮಣಿಕೆ

ದಾನಧರ್ಮಪರ್ವ

ಅಶ್ವಮೇಧಿಕಪರ್ವ

ಮಹಾಭಾರತ-ಮೂವತ್ತೊಂದನೆಯ ಸಂಪುಟದ ವಿಷಯಾನುಕ್ರಮಣಿಕೆ

ಅನುಗೀತಾಪರ್ವ

ಆಶ್ರಮವಾಸಿಕಪರ್ವ

ಅಧ್ಯಾಯ ವಿಷಯಗಳು ಪುಟಸಂಖ್ಯೆ

ಆಶ್ರಮವಾಸಪರ್ವ

❖

ಮಹಾಭಾರತ–ಮೌಸಲಪರ್ವ–ಮೂವತ್ತೆರಡನೆಯ ಸಂಪುಟದ ವಿಷಯಾನುಕ್ರಮಣಿಕೆ

ಮೌಸಲಪರ್ವ

ಮಹಾಪ್ರಸ್ಥಾನಿಕಪರ್ವ

ಸ್ವರ್ಗಾರೋಹಣಪರ್ವ

License No. WPP-13 Licensed to Post without pre-payment of postage
Posted at Thayagaraja Nagar Post Office

Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.